ದೇವನೂರ ಮಹಾದೇವರ ಸಮಗ್ರಕೃತಿಗಳು:
ಒಂದು ಭಾಷಾವೈಜ್ಞಾನಿಕ- ಕಾವ್ಯಮೀಮಾಂಸಾತ್ಮಕ ಅಧ್ಯಯನ

(ಭಾಷಾವಿಜ್ಞಾನದಲ್ಲಿ ಪಿಎಚ್. ಡಿ. ಪದವಿಗಾಗಿ ಮೈಸೂರು ವಿಶ್ವವಿದ್ಯಾನಿಲಯಕ್ಕೆ ಒಪ್ಪಿಸಿದ ಮಹಾಪ್ರಬಂಧ)

ಸಂಶೋಧಕ

ಎ. ಎಸ್. ಮಹದೇವ

ಸ್ನಾತಕೋತ್ತರ ಭಾಷಾವಿಜ್ಞಾನ ವಿಭಾಗ

ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ

ಮಾನಸಗಂಗೋತ್ರಿ

ಮೈಸೂರು-570006

ಮಾರ್ಗದರ್ಶಕರು

ಪಿ. ಪಿ. ಗಿರಿಧರ್, ಪಿಎಚ್.ಡಿ

ರೀಡರ್

ಭಾರತೀಯ ಭಾಷಾ ಸಂಸ್ಥೆ

ಮಾನಸಗಂಗೋತ್ರಿ

ಮೈಸೂರು-570006

ಮೈಸೂರು ವಿಶ್ವವಿದ್ಯಾನಿಲಯ

ಮೈಸೂರು-570005

2000

89

2000

89

ದೇವನೂರ ಮಹಾದೇವರ ಸಮಗ್ರಕೃತಿಗಳು:
ಒಂದು ಭಾಷಾವೈಜ್ಞಾನಿಕ- ಕಾವ್ಯಮೀಮಾಂಸಾತ್ಮಕ ಅಧ್ಯಯನ

(ಭಾಷಾವಿಜ್ಞಾನದಲ್ಲಿ ಪಿಎಚ್. ಡಿ. ಪದವಿಗಾಗಿ ಮೈಸೂರು ವಿಶ್ವವಿದ್ಯಾನಿಲಯಕ್ಕೆ ಒಪ್ಪಿಸಿದ ಮಹಾಪ್ರಬಂಧ)

ಸಂಶೋಧಕ

ಎ. ಎಸ್. ಮಹದೇವ
ಸ್ನಾತಕೋತ್ತರ ಭಾಷಾವಿಜ್ಞಾನ ವಿಭಾಗ
ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ
ಮಾನಸಗಂಗೋತ್ರಿ
ಮೈಸೂರು-570006

ಮಾರ್ಗದರ್ಶಕರು

ಪಿ. ಪಿ. ಗಿರಿಧರ್, ಪಿಎಚ್.ಡಿ
ರೀಡರ್
ಭಾರತೀಯ ಭಾಷಾ ಸಂಸ್ಥೆ
ಮಾನಸಗಂಗೋತ್ರಿ
ಮೈಸೂರು-570006

ಮೈಸೂರು ವಿಶ್ವವಿದ್ಯಾನಿಲಯ
ಮೈಸೂರು-570005

2000

ಮೈಸೂರು ವಿಶ್ವವಿದ್ಯಾನಿಲಯ

ಪಿ.ಪಿ.ಗಿರಿಧರ್, ಪಿಎಚ್.ಡಿ.
ರೀಡರ್

ಭಾರತೀಯ ಭಾಷಾ ಸಂಸ್ಥೆ
ಮಾನಸಗಂಗೋತ್ರಿ
ಮೈಸೂರು - 570 006

ಮಾರ್ಗದರ್ಶಕರ ಪ್ರಮಾಣಪತ್ರ

ಎ.ಎಸ್.ಮಹದೇವ ಅವರು ನನ್ನ ಮಾರ್ಗದರ್ಶನದಲ್ಲಿ ಸಂಶೋಧನೆ ನಡೆಸಿ "ದೇವನೂರ ಮಹಾದೇವರ ಸಮಗ್ರ ಕೃತಿಗಳು : ಒಂದು ಭಾಷಾವೈಜ್ಞಾನಿಕ – ಕಾವ್ಯಮೀಮಾಂಸಾತ್ಮಕ(Linguistic-poetic) ಅಧ್ಯಯನ" ಎಂಬ ಮಹಾಪ್ರಬಂಧವನ್ನು ಸಿದ್ಧಪಡಿಸಿ ಪಿಎಚ್.ಡಿ., ಪದವಿಗಾಗಿ ಮೈಸೂರು ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸುತ್ತಿದ್ದಾರೆ.

ಈ ಮಹಾಪ್ರಬಂಧವನ್ನು ಈ ಮೊದಲು ಯಾವುದೇ ಬಗೆಯ ಪದವಿ, ಡಿಪ್ಲೊಮಾ ಅಥವಾ ತತ್ಸಮಾನ ಪದವಿಗಾಗಿ ಯಾವ ವಿಶ್ವವಿದ್ಯಾನಿಲಯಕ್ಕೂ ಸಲ್ಲಿಸಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

Giridhar

ಮೈಸೂರು
ದಿನಾಂಕ: 30–10–2000

(ಪಿ.ಪಿ.ಗಿರಿಧರ್)
ಮಾರ್ಗದರ್ಶಕ.

ರೀಡರ್,
Central Institute of Indian Languages,
(Ministry of Human Resource Development,
Dept. of Education Govt. of India)
Manasagangothri, MYSORE-570006.

ಪ್ರಮಾಣಪತ್ರ

ಮೈಸೂರಿನ ಭಾರತೀಯ ಭಾಷಾ ಸಂಸ್ಥೆಯಲ್ಲಿ ರೀಡರ್ ಆಗಿರುವ ಡಾ॰ ಪಿ.ಪಿ.ಗಿರಿಧರ್ ಅವರ ಮಾರ್ಗದರ್ಶನದಲ್ಲಿ "ದೇವನೂರ ಮಹಾದೇವರ ಸಮಗ್ರ ಕೃತಿಗಳು : ಒಂದು ಭಾಷಾವೈಜ್ಞಾನಿಕ – ಕಾವ್ಯಮೀಮಾಂಸಾತ್ಮಕ (Linguistic-poetic) ಅಧ್ಯಯನ" ಎಂಬ ಮಹಾಪ್ರಬಂಧವನ್ನು ಭಾಷಾವಿಜ್ಞಾನ ಪಿಎಚ್.ಡಿ. ಪದವಿಗಾಗಿ ಸಿದ್ಧಪಡಿಸಿದ್ದೇನೆ.

ಈ ಮಹಾಪ್ರಬಂಧವನ್ನು ಈ ಮೊದಲು ಯಾವುದೇ ಬಗೆಯ ಪದವಿ, ಡಿಪ್ಲೊಮಾ ಅಥವಾ ತತ್ಸಮಾನ ಪದವಿಗಾಗಿ ಯಾವ ವಿಶ್ವವಿದ್ಯಾನಿಲಯಕ್ಕೂ ಸಲ್ಲಿಸಿಲ್ಲವೆಂದು ಈ ಮೂಲಕ ಪ್ರಮಾಣೀಕರಿಸುತ್ತೇನೆ.

ಮೈಸೂರು
ದಿನಾಂಕ : 30–10–2000

(ಎ.ಎಸ್.ಮಹದೇವ)
ಸಂಶೋಧಕ (ಭಾಷಾವಿಜ್ಞಾನ)
ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ
ಮಾನಸಗಂಗೋತ್ರಿ
ಮೈಸೂರು–570006

ಕೃತಜ್ಞತೆಗಳು

ನನ್ನ ಸಂಶೋಧನಾ ಕಾರ್ಯಕ್ಕೆ ವಿಷಯವನ್ನು ಸೂಚಿಸಿ, ಸೂಕ್ತ ಮಾರ್ಗದರ್ಶನ ನೀಡಿದ ಪೂಜ್ಯ ಗುರುಗಳಾದ ಡಾ. ಪಿ.ಪಿ.ಗಿರಿಧರ್, ರೀಡರ್, ಭಾರತೀಯ ಭಾಷಾ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು ಅವರಿಗೆ,

ನನ್ನ ಸಂಶೋಧನಾ ಕಾರ್ಯದುದ್ದಕ್ಕೂ ಪ್ರೋತ್ಸಾಹ ನೀಡಿದ ಡಾ. ಸಿ.ಪಿ.ಸಿದ್ಧಾಶ್ರಮ, ನಿರ್ದೇಶಕರು, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು ಅವರಿಗೆ,

ನನ್ನ ಎಂ.ಎ. ವಿದ್ಯಾರ್ಥಿಜೀವನ ಹಾಗೂ ಬರವಣಿಗೆಯ ವಿವಿಧ ಹಂತಗಳಲ್ಲಿ ಪ್ರೋತ್ಸಾಹ ನೀಡಿದ ಪೂಜ್ಯ ಗುರುಗಳಾದ ಡಾ. ಸೋಮಶೇಖರಗೌಡ, ಡಾ. ಆರ್.ರಾಮಕೃಷ್ಣ, ಡಾ. ಸಿ.ಎನ್.ರಾಮಚಂದ್ರ, ಡಾ. ಎಂ.ಮಣಿಯನ್ ಅವರಿಗೆ,

ನನ್ನ ಸಂಶೋಧನಾ ಕಾರ್ಯಚಟುವಟಿಕೆಯ ಉದ್ದಕ್ಕೂ ಉತ್ಸಾಹ ತುಂಬುತ್ತಾ, ನಾನು ಬೇಗ ಮಹಾಪ್ರಬಂಧವನ್ನು ಬರೆದು ಮುಗಿಸಲು ಕಾರಣಕರ್ತರಾದ ಮೈಸೂರಿನ ಭಾರತೀಯ ಭಾಷಾ ಸಂಸ್ಥೆಯಲ್ಲಿ ರೀಡರ್ ಆಗಿರುವ ಡಾ. ಆರ್.ಸುಬ್ಬುಕೃಷ್ಣರವರಿಗೆ,

ನಾನು ಸಂಶೋಧನಾ ಕಾರ್ಯ ನಡೆಸಲು ಸಂಶೋಧನಾ ವಿದ್ಯಾರ್ಥಿ ವೇತನ ನೀಡಿ ಪ್ರೋತ್ಸಾಹಿಸಿದ ಮೈಸೂರು ವಿಶ್ವವಿದ್ಯಾನಿಲಯದ ಪರಿಶಿಷ್ಟಜಾತಿ ಪರಿಶಿಷ್ಟವರ್ಗದ ವಿಶೇಷ ಘಟಕಕ್ಕೆ,

ಅಗತ್ಯ ಪುಸ್ತಕಗಳನ್ನು ಒದಗಿಸಿಕೊಟ್ಟ ಮೈಸೂರು ವಿಶ್ವವಿದ್ಯಾನಿಲಯದ ಗ್ರಂಥಾಲಯ ಹಾಗೂ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ಗ್ರಂಥಾಲಯದ ಸಿಬ್ಬಂದಿ ವರ್ಗದವರಿಗೆ,

ನನ್ನ ಸಂಶೋಧನಾಕಾರ್ಯ ಚಟುವಟಿಕೆಗಳನ್ನು ವಿಚಾರಿಸುತ್ತಾ ಕರಡುಪ್ರತಿ ತಿದ್ದುವಿಕೆಯಲ್ಲಿ ಸಹಕರಿಸಿದ ನನ್ನ ಸಹಧರ್ಮಿಣಿ ಆರ್.ಉಷಾರಾಣಿಗೆ,

ಈ ಮಹಾಪ್ರಬಂಧ ರೂಪುಗೊಳ್ಳುವಲ್ಲಿ ಸಹಕರಿಸಿದ ನನ್ನ ತಾಯಿತಂದೆ ಹಾಗೂ ಬಂಧುಮಿತ್ರರಿಗೆ, ಈ ಎಲ್ಲರಿಗೂ ನನ್ನ ಕೃತಜ್ಞತೆಗಳು.

ಮೈಸೂರು
ದಿನಾಂಕ: 30–10–2000

(ಎ.ಎಸ್.ಮಹದೇವ)
ಸಂಶೋಧಕ (ಭಾಷಾವಿಜ್ಞಾನ)
ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ
ಮಾನಸಗಂಗೋತ್ರಿ, ಮೈಸೂರು–6.

ವಿಷಯ ಸೂಚಿ

— 0 —

ಸಂಕೇತಸೂಚಿ

1) ಉ.ಪು. — ಉತ್ತಮ ಪುರುಷ
2) ಉದಾ. — ಉದಾಹರಣೆ
3) ಗ್ರಾ.ಕ. — ಗ್ರಾಮ್ಯಕನ್ನಡ
4) ಗ್ರಾ.ಕಾ.ಬಿ.ಕ — ಗ್ರಾಮಾಯಣ ಕಾದಂಬರಿಯ ಬಿಜಾಪುರ ಕನ್ನಡ
5) ದೇ.ಕೃ.ಕ. — ದೇವನೂರರ ಕೃತಿಗಳ ಕನ್ನಡ
6) ಪ್ರ.ಪು. — ಪ್ರಥಮ ಪುರುಷ
7) ಬಿ.ಕ. — ಬಿಜಾಪುರ ಕನ್ನಡ
8) ಮ.ಪು. — ಮಧ್ಯಮ ಪುರುಷ
9) ಮೂ.ಕೃ. — ಮೂಲಕೃತಿ
10) ಶಿ.ಕ. — ಶಿಷ್ಟ ಕನ್ನಡ
11) ಸಂ. — ಸಂಪಾದಕ(ರು)
12) ಎ — æ (ಅಗ್ರ ಅಗೋಳ ಉನ್ನತ ನಿಮ್ನಸ್ವರ)
13) ಒ — ɔ (ಪಶ್ಚಗೋಳ ನಿಮ್ನಮಧ್ಯಸ್ವರ)

—

ಪ್ರಸ್ತಾವನೆ

ಕನ್ನಡದಲ್ಲಿ ಹಲವಾರು ಸಾಹಿತಿಗಳಿದ್ದಾರೆ. ಅವರಲ್ಲಿ ಕೆಲವರು ತಮ್ಮ ಬರಹದಿಂದ ಪ್ರಸಿದ್ಧಿಯನ್ನು ಗಳಿಸಿದರೆ ಮತ್ತೆ ಕೆಲವರು ಅದಕ್ಕೆ ತಕ್ಕನಾದ ಪ್ರಶಸ್ತಿಗಳನ್ನು ಗಳಿಸಿದ್ದಾರೆ. ಆದರೆ ಇಂದು ಈ ಸಾಹಿತಿಗಳ ಸಂಖ್ಯೆಗೆ ಹೋಲಿಸಿದರೆ 'ಪ್ರಶಸ್ತಿ' ಹಾಗೂ 'ಪ್ರಸಿದ್ಧಿ' ಈ ಎರಡನ್ನು ಗಳಿಸಿದವರ ಸಂಖ್ಯೆ ತೀರ ಕಡಿಮೆ ಎಂದೇ ಹೇಳಬಹುದು. ಕೆಲವರು ದೊಡ್ಡ ದೊಡ್ಡ ಕೃತಿಗಳನ್ನು ರಚಿಸುವುದರ ಮೂಲಕ ಕನ್ನಡ ಸಾಹಿತ್ಯ ಲೋಕದಲ್ಲಿ ಗುರುತಿಸಿಕೊಂಡಿದ್ದರೆ, ಮತ್ತೆ ಕೆಲವರು ಬೆರಳೆಣಿಕೆಯಷ್ಟು ಸಣ್ಣ ಕೃತಿಗಳನ್ನು ಬರೆದು ಪ್ರಶಸ್ತಿ ಹಾಗೂ ಪ್ರಸಿದ್ಧಿಯನ್ನು ಗಳಿಸಿದ್ದಾರೆ. ಅಂತಹ ಪ್ರಮುಖರಲ್ಲಿ ದೇವನೂರ ಮಹಾದೇವ ಕೂಡ ಒಬ್ಬರು.

ದೇವನೂರ ಮಹಾದೇವ ಅವರು ದಲಿತ ಸಾಹಿತಿಗಳಲ್ಲಿ ಒಬ್ಬರು. ಇವರು ಗ್ರಾಮ್ಯ ಭಾಷೆಯನ್ನು ಬಳಸಿಕೊಂಡು ಉತ್ತಮವಾದ ಕೃತಿಗಳನ್ನು ರಚಿಸಿ ಪ್ರಸಿದ್ಧಿ ಹಾಗೂ ಪ್ರಶಸ್ತಿಯನ್ನು ಗಳಿಸಿದಂತಹ ಸಾಹಿತಿ. ದಲಿತರ ಜೀವನದ ಆಗುಹೋಗುಗಳನ್ನು, ಬದುಕಿನ ನೋವು ನಲಿವುಗಳನ್ನು ಸುಂದರವಾಗಿ ಓದುಗರ ಮನಮುಟ್ಟುವಂತೆ ತಮ್ಮ ಕೃತಿಗಳಲ್ಲಿ ಚಿತ್ರಿಸಿದ್ದಾರೆ. ಒಬ್ಬ ಸಾಹಿತಿಗೆ ಕೃತಿಯನ್ನು ರಚಿಸಲು ಶಿಷ್ಟಭಾಷೆಯೆ ಬೇಕಿಲ್ಲ. ಪ್ರಾದೇಶಿಕ ಉಪಭಾಷೆಯಲ್ಲೂ ಉತ್ತಮವಾದ ರೀತಿಯಲ್ಲಿ ರಚಿಸಲು ಸಾಧ್ಯವೆಂದು ತಮ್ಮ ಕೃತಿಗಳ ಮೂಲಕ ಬರೆದು ಕನ್ನಡ ಸಾಹಿತ್ಯಕ್ಕೆ ಒಂದು ಕೊಡುಗೆಯನ್ನು ನೀಡಿದ್ದಾರೆ.

ಇವರು ಬರೆದಿರುವುದು ಕೇವಲ 169 ಪುಟಗಳಷ್ಟು. ಇವರ ಸಮಗ್ರ ಕೃತಿಗಳೆಂದರೆ, ಏಳು ಕತೆ (ಮಾರಿಕೊಂಡವರು, ಗ್ರಸ್ತರು, ಒಂದು ದಹನದ ಕಥೆ, ದತ್ತ, ಡಾಂಬರು ಬಂದುದು, ಮೂಡಲ ಸೀಮೇಲಿ ಕೊಲೆಗಿಲೆ ಮುಂತಾಗಿ ಹಾಗೂ ಅಮಾಸ)ಗಳನ್ನು ಒಳಗೊಂಡ 'ದ್ಯಾವನೂರು', 'ಒಡಲಾಳ' ಮತ್ತು ಕಿರುಕಾದಂಬರಿಯಾದ 'ಕುಸುಮಬಾಲೆ'. ಇವರ 'ಒಡಲಾಳ' ಕೃತಿಯನ್ನು ಕಲ್ಕತ್ತಾದ ಭಾರತೀಯ

ಪರಿಷತ್ 1984ರ ಉತ್ತಮ ಸೃಜನಶೀಲ ಕೃತಿಯೆಂದು ಗೌರವಿಸಿತು. 1991ರಲ್ಲಿ ಇವರ 'ಕುಸುಮಬಾಲೆ' ಕೃತಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಬಂದಿತು. ಕರ್ನಾಟಕದ ರಾಜ್ಯೋತ್ಸವ ಪ್ರಶಸ್ತಿಯನ್ನು ಪಡೆದಿರುವ ದೇವನೂರ ಮಹಾದೇವರವರು 1989ರಲ್ಲಿ ಅಮೇರಿಕಾದಲ್ಲಿ ನಡೆದ 'ಇಂಟರ್‌ನ್ಯಾಷನಲ್ ರೈಟಿಂಗ್ ಪ್ರೋಗ್ರಾಂ'ನಲ್ಲಿ ಭಾಗವಹಿಸಿದ್ದರು.

ಇವರು ರಚಿಸಿರುವುದು ಕಡಿಮೆ ಕೃತಿಗಳಾದರೂ ತಮ್ಮದೇ ಆದ ಭಾಷಾಶೈಲಿಯನ್ನು ತಮ್ಮ ಕೃತಿಗಳಲ್ಲಿ ಬಳಸುವುದರ ಮೂಲಕ ಸಹೃದಯರ ಮತ್ತು ಪ್ರಾಜ್ಞ ವಿಮರ್ಶಕರ ಪ್ರಶಂಸೆಗೆ ಪಾತ್ರರಾಗಿದ್ದಾರೆ. ಇಷ್ಟೊಂದು ಜನಮನ್ನಣೆ ಗಳಿಸಲು ಇವರ ಬರವಣಿಗೆಯ ಭಾಷೆ ಹಾಗೂ ಅದರ ಶೈಲಿ ಯಾವ ರೀತಿ ಕಾರಣವಾಗಿದೆ? ಎಂಬ ಪ್ರಶ್ನೆ ನನ್ನಲ್ಲಿ ಉಂಟಾಯಿತು. ಹೀಗಾಗಿ ಇವರ ಕೃತಿಗಳನ್ನು ನನ್ನ ಸಂಶೋಧನಾ ವಿಷಯವಾಗಿ ತೆಗೆದುಕೊಂಡು ಭಾಷಾವೈಜ್ಞಾನಿಕ – ಕಾವ್ಯಮೀಮಾಂಸಾತ್ಮಕ ಅಧ್ಯಯನದ ದೃಷ್ಟಿಕೋನ-ದಿಂದ ಸಂಶೋಧನೆ ನಡೆಸಿದ್ದೇನೆ.

ಈ ಕ್ಷೇತ್ರದಲ್ಲಿ ಅಂದರೆ ಭಾಷಾವಿಜ್ಞಾನದ ಕನ್ನಡ ಮಾಧ್ಯಮದಲ್ಲಿ ಇಂತಹ ಕೆಲಸಗಳು ನಡೆದಿಲ್ಲದ ಕಾರಣ ಕೆಲವರು ನನ್ನ ಮಹಾಪ್ರಬಂಧದ ಶೀರ್ಷಿಕೆಯ ಒಳಗೆ 'ಕಾವ್ಯಮೀಮಾಂಸಾತ್ಮಕ' ಎಂದು ಇರುವುದನ್ನು ನೋಡಿ ಸಾಹಿತ್ಯದಲ್ಲಿನ ಕಾವ್ಯಮೀಮಾಂಸೆಗೆ ಸಂಬಂಧಿಸಿದ ಸಾಹಿತ್ಯಿಕ ಅಧ್ಯಯನ (Literary study)ವಿರಬೇಕೆಂದು ತಪ್ಪಾಗಿ ಊಹಿಸಿಕೊಳ್ಳಬಹುದು. ಆದರೆ ಇದು ಕಾವ್ಯಮೀಮಾಂಸೆಗೆ ಸಂಬಂಧಿಸಿದ ಸಾಹಿತ್ಯಿಕ ಅಧ್ಯಯನ (Literary study) ವಲ್ಲ. ಇದು ಭಾಷಾವೈಜ್ಞಾನಿಕ – ಕಾವ್ಯಮೀಮಾಂಸೆಗೆ ಸಂಬಂಧಿಸಿದ ವಿಷಯ. ಅಂದರೆ "ದೇವನೂರ ಮಹಾದೇವರ ಸಮಗ್ರ ಕೃತಿಗಳು : ಒಂದು ಭಾಷಾವೈಜ್ಞಾನಿಕ – ಕಾವ್ಯಮೀಮಾಂಸಾತ್ಮಕ ಅಧ್ಯಯನ" ಎಂಬ ಈ ಸಂಶೋಧನೆ ಭಾಷಾವೈಜ್ಞಾನಿಕ – ಕಾವ್ಯಮೀಮಾಂಸೆ(Linguistic - poetic) ಎಂಬ ಕ್ಷೇತ್ರದಲ್ಲಿ ಒಂದು ಅಧ್ಯಯನವಾಗಿದೆ. ಭಾಷಾವೈಜ್ಞಾನಿಕ ಕಾವ್ಯಮೀಮಾಂಸೆ ಸಾಹಿತ್ಯಿಕ ವಿದ್ಯಮಾನಗಳ ಆಗುಹೋಗುಗಳ (phenomena) ಭಾಷಿಕ ದೃಷ್ಟಿಯ ವಿಷದೀಕರಣ. ಈ ನಿಟ್ಟಿನಲ್ಲಿ ನನ್ನ ಮಹಾಪ್ರಬಂಧವನ್ನು ಸಿದ್ಧಗೊಳಿಸಿದ್ದೇನೆ. ಈ ಮಹಾಪ್ರಬಂಧ ಒಟ್ಟು ಮೂರು ಅಧ್ಯಾಯಗಳನ್ನು ಒಳಗೊಂಡಿದೆ.

ಅಧ್ಯಾಯ – 1 : ಪ್ರಸ್ತುತ ಅಧ್ಯಯನದ ತೋರ್ಕೆ ಮತ್ತು ವ್ಯಾಪ್ತಿ. ಇದರಲ್ಲಿ ನನ್ನ ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿಯನ್ನು ತಿಳಿಸುವುದರ ಜೊತೆಗೆ ಕನ್ನಡ ಭಾಷಾವೈಜ್ಞಾನಿಕ – ಕಾವ್ಯಮೀಮಾಂಸಾತ್ಮಕ ಕ್ಷೇತ್ರದ ಸಮೀಕ್ಷೆ ಮಾಡಲಾಗಿದೆ. ಈ ಕ್ಷೇತ್ರದಲ್ಲಿ ಆಳವಾದ ಒಳನೋಟಗಳಿಲ್ಲದ ಅಧ್ಯಯನಗಳೇ ಜಾಸ್ತಿ ಎಂದು ಸೋದಾಹರಣವಾಗಿ ತೋರಿಸಲಾಗಿದೆ. ಉದಾಹರಣೆಗೆ 12ನೇ ಶತಮಾನದ ಕನ್ನಡ ವಚನ ಸಾಹಿತ್ಯದ ವ್ಯಾಕರಣಕ್ಕೂ ಅಥವಾ ಯಾವುದೇ ಭಾಷಿಕ ಅಂಶಕ್ಕೂ ಯಾವುದೇ ಗುರುತರವಾದ ವ್ಯತ್ಯಾಸ ಇರಲು ಸಾಧ್ಯವಿಲ್ಲ. ಆದರೂ ಈ ತರಹದ ಅಧ್ಯಯನಗಳು ನಡೆದಿವೆ. ಇದಕ್ಕೆ ಉದಾಹರಣೆಯಾಗಿ 20ನೇ ಶತಮಾನದ ಗ್ರಾಮಾಯಣ ಕಾದಂಬರಿಯಲ್ಲಿನ ಬಿಜಾಪುರ ಕನ್ನಡದ ವ್ಯಾಕರಣ ಮತ್ತು ಇದೇ ಶತಮಾನದ ಬಿಜಾಪುರ ಜಿಲ್ಲೆಯ ಕನ್ನಡದ ವ್ಯಾಕರಣಗಳನ್ನು ಹೋಲಿಕೆ ಕೊಟ್ಟು ವಿಶ್ಲೇಷಿಸಿ ವಿಮಸಿ ತೋರಿಸಲಾಗಿದೆ.

ಅಧ್ಯಾಯ – 2: ವಸ್ತು – ಆಕೃತಿ ವೈರುಧ್ಯ ಮತ್ತು ದೇವನೂರರ ಕೃತಿಗಳು. ಇದರಲ್ಲಿ ದೇವನೂರರ ಕೃತಿಗಳಲ್ಲಿನ ವಸ್ತುವನ್ನು ಮತ್ತು ಅದರ ಜೊತೆ ಇರಬಹುದಾದ ಭಾಷೆಯ ಸಂಭಾವ್ಯ ಸಂಬಂಧವನ್ನು ವಿಶದೀಕರಿಸಲಾಗಿದೆ. ಅಲ್ಲದೆ ಕಿರುಕಾದಂಬರಿಯಾದ 'ಕುಸುಮಬಾಲೆ'ಯನ್ನು ಶಿಷ್ಟ ಕನ್ನಡಕ್ಕೆ ಪರಿವರ್ತಿಸಲಾಗಿದೆ.

ಅಧ್ಯಾಯ – 3: ವಾದಾನುವಾದ: ಈ ಅಧ್ಯಯನ ಕಂಡ ಕಾಣ್ಕೆಗಳು. ಇದರಲ್ಲಿ ಮೂಲ ಕಾದಂಬರಿ 'ಕುಸುಮಬಾಲೆ' ಹಾಗೂ ಶಿಷ್ಟ ಕನ್ನಡಕ್ಕೆ ಪರಿವರ್ತಿಸಿದ 'ಕುಸುಮಬಾಲೆ' ಇವೆರಡನ್ನು ಕೆಲವು ಓದುಗರಿಗೆ ನೀಡಿ, ಅವರಿಂದ ಬಂದಂತಹ ವಾದಾನುವಾದಗಳನ್ನು ಸ್ವೀಕರಿಸಿ, ಅವುಗಳ ಮೂಲಕ ಈ ಪ್ರಭೇದಾಂತರೀಕರಣದಿಂದ ಉಂಟಾದ ಪರಿಣಾಮಗಳನ್ನು ಚರ್ಚಿಸಲಾಗಿದೆ.

ಅಧ್ಯಾಯ ಮೂರರ ಅನಂತರ ಉಪಸಂಹಾರ ಭಾಗವಿದೆ. ಇದರಲ್ಲಿ ಸಂಪ್ರಬಂಧದ ಫಲಶ್ರುತಿಯನ್ನು ನಿರೂಪಿಸಲಾಗಿದೆ. ಅನುಬಂಧ – 1ರಲ್ಲಿ ಬಿಜಾಪುರ ಜಿಲ್ಲೆಯ ಕನ್ನಡದ ಬಗ್ಗೆ ನಾನು ಕ್ಷೇತ್ರಕಾರ್ಯ ನಡೆಸಿದಾಗ ಮಾಹಿತಿ ಕೊಟ್ಟವರ ಪಟ್ಟಿಯನ್ನು ಕೊಡಲಾಗಿದೆ.

ಅನುಬಂಧ –2ರಲ್ಲಿ ನವಯಾನೆ ಕತೆ 'ಕುಸುಮಬಾಲೆ'ಯ ಶಿಷ್ಟಕನ್ನಡೀಕರಣವನ್ನು ಓದಿದ ಪ್ರತಿಕ್ರಿಯೆಗಾರರು ಹಾಗೂ ಅವರ ಪ್ರತಿಕ್ರಿಯೆಗಳನ್ನು ಕೊಡಲಾಗಿದೆ. ಈ ಮಹಾಪ್ರಬಂಧದ ರಚನೆಯ ಸಂದರ್ಭದಲ್ಲಿ ಪರಾಮರ್ಶಿಸಿದ ಗ್ರಂಥಗಳನ್ನು, ಲೇಖನಗಳನ್ನು, ನಿಘಂಟುಗಳನ್ನು, ನಿಯತಕಾಲಿಕೆಗಳನ್ನು ಗ್ರಂಥಸೂಚಿ ಎಂಬ ಶೀರ್ಷಿಕೆಯಲ್ಲಿ ಅಕಾರಾದಿ ಪಟ್ಟಿ ಮಾಡಲಾಗಿದೆ.

— o —

ಅಧ್ಯಾಯ - ೧

ಪ್ರಸ್ತುತ ಅಧ್ಯಯನದ ತೋರ್ಕೆ ಮತ್ತು ವ್ಯಾಪ್ತಿ

ಅಧ್ಯಾಯ – 1

ಪ್ರಸ್ತುತ ಅಧ್ಯಯನದ ತರ್ಕ ಮತ್ತು ವ್ಯಾಪ್ತಿ

ಭಾಷಾವೈಜ್ಞಾನಿಕ ಕಾವ್ಯಮೀಮಾಂಸೆಯಲ್ಲಿ (Linguistic poetics) ಆಳವಾದ ಒಳನೋಟಗಳನ್ನೊಳಗೊಂಡ ಅಧ್ಯಯನ ಇಲ್ಲವೆನ್ನಲಾಗದಿದ್ದರೂ ವಿರಳ ಎಂಬುದು ಗಮನಾರ್ಹ. ಸಾಂಖ್ಯಿಕ ಶೈಲಿಶಾಸ್ತ್ರೀಯ ಅಧ್ಯಯನಗಳ ಇತಿಮಿತಿಗಳು ಅಪಾರ. ನಾಮಪದಗಳ ಪ್ರಯೋಗ ಹೆಚ್ಚಾದರೆ ನಾಮಪದೀಯ ಶೈಲಿ ಎಂದೂ, ಕ್ರಿಯಾಪದಗಳ ಪ್ರಯೋಗ ಕೃತಿಯಲ್ಲಿ ಬೇರೆ 'ವ್ಯಾಕರಣೀಯ ವರ್ಗಗಳ' ಪ್ರಯೋಗಕ್ಕಿಂತ ಜಾಸ್ತಿ. ಆದರೆ ಅದನ್ನು ಕ್ರಿಯಾಪದೀಯ ಶೈಲಿ ಎಂದೂ, ಅಥವಾ ನಾಮವಿಶೇಷಣ – ಭೂಯಿಷ್ಠ ಕೃತಿ ನಾಮವಿಶೇಷಣೀಯ ಶೈಲಿ ಒಳಗೊಂಡಿದೆಯೆಂದೂ ಹೇಳಿದರೆ ಹೆಚ್ಚೇನು ಹೇಳಿದಂತಾಗುವುದಿಲ್ಲ. ಈ ವ್ಯಾಕರಣೀಯ – ವರ್ಗೀಯ ಶೈಲಿಗೂ ಸಂವೇದನೆಗೂ ಸಂಬಂಧ ಕಲ್ಪಿಸಲು ಹೋಗಿ ಕೆಲವರು ಎಡವಿದ್ದಾರೆ. ಇನ್ನು ಕೆಲವರು ಸಾಹಿತ್ಯಿಕ ಕೃತಿಗಳ ವ್ಯಾಕರಣ ಬರೆಯಲು ಹೋಗಿ ಅರ್ಥವಿಲ್ಲದ ಸಂಶೋಧನೆ ಮಾಡಿದ್ದಾರೆ. ವಚನಗಳ ವ್ಯಾಕರಣ ಆ ಕಾಲದ ಕನ್ನಡ ವ್ಯಾಕರಣಕ್ಕಿಂತ ಭಿನ್ನವಾಗಿರಲು ಸಾಧ್ಯವೇ ಇಲ್ಲ. 'ಧರ್ಮಾಮೃತ'ದ ವ್ಯಾಕರಣ ಅಥವಾ ಯಾವುದೇ ಭಾಷಿಕ ಅಂಶ ಆ ಕಾಲದ ಕನ್ನಡಕ್ಕಿಂತ ಒಟ್ಟಂದದಲ್ಲಿ ಅಥವಾ ತಿರುಳಿನಲ್ಲಿ ಭಿನ್ನವಾಗಿರಲು ಸಾಧ್ಯವಿಲ್ಲ. ಆದರೆ ವಿಶ್ಲೇಷಿಸಲು ಲಭ್ಯವಿಲ್ಲದ ಕಾಲದ ಕನ್ನಡ ಹೇಗಿತ್ತೆಂದು ತಿಳಿದುಕೊಳ್ಳಲು ಆ ಕಾಲದಲ್ಲಿ ರಚಿತವಾದ ಕೃತಿಯನ್ನು ಅಭ್ಯಸಿಸಬಹುದು. ಅಂದರೆ ವಚನಗಳ ಭಾಷೆಯನ್ನೂ, 12ನೇ ಶತಮಾನದ ಕನ್ನಡ ಭಾಷೆಯ ಸ್ವರೂಪವನ್ನು ತಿಳಿಯಲು ಅಭ್ಯಸಿಸಬಹುದೇ ವಿನಹ, ವಚನಗಳದ್ದೇ ಒಂದು ಪ್ರತ್ಯೇಕ ವ್ಯಾಕರಣ ಇದೆ ಎಂದು ಅಲ್ಲ. ಆದ್ದರಿಂದ ಯಾವುದೇ ಕೃತಿಯ ಕನ್ನಡವನ್ನು ನಿಶ್ಚಿತವಾಗಿ ಇಂಥದ್ದೇ ಕಾಲಕ್ಕೆ ಸೇರಿದ ಆಡುಮಾತಿನ/ಗ್ರಂಥಸ್ಥ ಕನ್ನಡವೆಂದು ನಾವು ಪರಿಗಣಿಸಿಕೊಳ್ಳಬಹುದು. ಹೀಗಾಗಿ ಯಾವುದೇ ಸಾಹಿತ್ಯಿಕ ಕೃತಿಗಳ ಕನ್ನಡ ಆಯಾ ಕಾಲದ ಕನ್ನಡದ ಪ್ರತಿಬಿಂಬ. ಇವುಗಳ ಕನ್ನಡವನ್ನು ಅಭ್ಯಸಿಸಿದರೆ ಆಯಾ ಕಾಲದ ಆಡುಮಾತಿನ/ಗ್ರಂಥಸ್ಥ ಹಾಗು ಒಂದು ನಿಶ್ಚಿತ ಸ್ಥಳದ ಕನ್ನಡವನ್ನು ಅಭ್ಯಸಿಸಿದಂತೆ ಅಷ್ಟೆ. ಆದರೂ ಈ ಕಸರತ್ತುಗಳು ನಡೆದಿವೆ. ಒಂದು ಸಾಹಿತ್ಯಿಕ ಕೃತಿಯ ಮೂಲ ತಾತ್ವಿಕ ಇರುವಿಕೆ (Ontology)ಗೆ, ಅದರ ಮೂಲ ತಾತ್ವಿಕ ಘನತೆ (Ontological dignity)ಗೆ ಆ ಕೃತಿಯ ಭಾಷೆಯ ಕೊಡುಗೆ ಏನು? ಎಂಬ ಪ್ರಶ್ನೆಗೆ ಉತ್ತರದ

ಹುಡುಕಾಟ ಹೊಸ ದಿಕ್ಕುಗಳಲ್ಲಿ ನಡೆಯಬೇಕಾಗಿದೆ. ಈ ಮಹಾಪ್ರಬಂಧ ಅಂಥ ಹುಡುಕಾಟದ ಒಂದು ನಿದರ್ಶನ.

ವಸ್ತು ಮತ್ತು ಆಕೃತಿ ಭಾಷೆಯ ಮೂಲಭೂತ ವೈರುಧ್ಯ. ಶಾಸ್ತ್ರೀಯವಾಗಿ ನೋಡಿದರೆ ವಸ್ತು ಮತ್ತು ಆಕೃತಿಗಳ ನಡುವಣ ಸಂಬಂಧ ಅವೈಚಾರಿಕ(arbitrary). ಆದರೆ ಭಾಷಿಕನಿಗೆ ಅದು ಸ್ವಾಭಾವಿಕ,ಪ್ರಕೃತಿ – ಸಹಜವಾದದ್ದು. ಈ ಸ್ವಾಭಾವಿಕ ಸಂಬಂಧ ಸಾಹಿತ್ಯಿಕ ಕೃತಿಯ ಭಾಷೆಗೂ ಅನ್ವಯಿಸುತ್ತದೆ. ಅಲ್ಲದೆ ಇನ್ನೂ ಹೆಚ್ಚಿನ ಅರ್ಥದಲ್ಲಿ ಅದು ನಿಜ. ಒಂದು ಟಿಪಿಕಲ್ ಸಾಹಿತ್ಯಿಕ ಹೇಳಿಕೆಯ ಆಕೃತಿ ಅದರ ವಸ್ತುವನ್ನು ನಿರ್ಧರಿಸುತ್ತದೆ. ಅಂದರೆ ಆ ಸಾಹಿತ್ಯಿಕ ಹೇಳಿಕೆಯ ಆಕಾರವನ್ನು ಬದಲಾಯಿಸಿದರೆ ಅದು ಬಿಂಬಿಸುವ ವಸ್ತುವೂ ಬದಲಾಗುತ್ತದೆ.

ದೇವನೂರರ ಕೃತಿಗಳಲ್ಲಿನ (ನಿರೂಪಕನ) ಭಾಷೆ ವಿಶಿಷ್ಟವಾದದ್ದು. ಈ ಭಾಷೆಯ ಆಕೃತಿ ಬದಲಾಯಿಸಿದರೆ ವಸ್ತು ಬದಲಾಗುತ್ತದಾ? ವಸ್ತು ಬದಲಾಗದಿದ್ದರೆ ಆಕೃತಿ ಬದಲಾವಣೆಯಿಂದ ಬದಲಾಗುವುದು ಏನು?

ಈ ಪ್ರಶ್ನೆಗೆ ಉತ್ತರ ಈ ಅಧ್ಯಯನದ ಗುರಿ. ಈ ಅಧ್ಯಯನದ ಹರವು ದೇವನೂರರ ಎಲ್ಲ ಕೃತಿಗಳು. ಆದರೂ ಎಲ್ಲ ಒಟ್ಟಂದದ ಹೇಳಿಕೆಗಳು ದೇವನೂರರ ಕೃತಿಗಳನ್ನು ದಾಟಿ ಪ್ರಾಯಿಕ ಭಾಷಾವೈಜ್ಞಾನಿಕ – ಕಾವ್ಯಮೀಮಾಂಸೆಯ ಹೇಳಿಕೆಗಳಾಗುತ್ತವೆ.

1.1. ಸಾಹಿತ್ಯಿಕ ಕೃತಿಯ ವ್ಯಾಕರಣ ಹಾಗೂ ಆ ಕಾಲದ ಆಡುಮಾತಿನ ವ್ಯಾಕರಣ

ಒಂದು ಕಾಲದ ಕೃತಿಯ ಕನ್ನಡಕ್ಕೂ ಮತ್ತು ಆ ಕಾಲದ ಆಡುಮಾತಿನ/ಗ್ರಂಥಸ್ಥ ಕನ್ನಡಕ್ಕೂ ವ್ಯತ್ಯಾಸ ಇರಲು ಸಾಧ್ಯವಿಲ್ಲ. ಅಂದರೆ ಒಂದು ಕೃತಿಯು ಅದು ಯಾವ ಕಾಲಕ್ಕೆ ಸೇರಿದ ಭಾಷೆಯಲ್ಲಿ ಅಥವಾ ಯಾವ ಪ್ರದೇಶದ ಅಥವಾ ಯಾವ ಸಾಮಾಜಿಕ ವರ್ಗದ ಭಾಷೆಯಲ್ಲಿ ರಚನೆಯಾಯಿತೋ ಆ ಕಾಲದ, ಆ ಪ್ರದೇಶದ ಅಥವಾ ಆ ಸಾಮಾಜಿಕ ವರ್ಗದ ಭಾಷೆಯ ವ್ಯಾಕರಣಕ್ಕೂ ಆ ಗ್ರಂಥವು ಒಳಗೊಂಡಿರುವ ಭಾಷೆಯ ವ್ಯಾಕರಣಕ್ಕೂ

ಯಾವುದೇ ವ್ಯತ್ಯಾಸವಿರಲು ಸಾಧ್ಯವಿಲ್ಲ. ಅದು ಹಳಗನ್ನಡದ ಕೃತಿಯಾಗಿರಬಹುದು. ನಡುಗನ್ನಡದ ಕೃತಿಯಾಗಿರಬಹುದು ಅಥವಾ ಆಧುನಿಕ ಕನ್ನಡದ ಕೃತಿಯಾಗಿರಬಹುದು. ಹೀಗೆ ಯಾವುದೇ ಕಾಲದ ಕನ್ನಡ ಭಾಷೆಯಲ್ಲಿ ರಚನೆಗೊಂಡಿರುವ ಕೃತಿಯನ್ನು ಬೇಕಾದರೂ ಉದಾಹರಣೆಯಾಗಿ ತೆಗೆದುಕೊಂಡು ನೋಡಬಹುದು. ಇಲ್ಲಿ ಕೆಲವೊಂದು ರೀತಿಯ ಪ್ರಶ್ನೆಗಳು ಓದುಗರಲ್ಲಿ ಉದ್ಭವವಾಗಬಹುದು. ಅಂತಹ ಪ್ರಶ್ನೆಗಳೆಂದರೆ ಈಗ ಕುವೆಂಪುರವರು 20ನೇ ಶತಮಾನದಲ್ಲಿ ಹಳಗನ್ನಡದಲ್ಲಿ ಶ್ರೀರಾಮಾಯಣ ದರ್ಶನಂ ಗ್ರಂಥವನ್ನು ರಚಿಸಿದ್ದಾರೆ. ಇದರಲ್ಲಿ ಕೆಲವು ಹೊಸ ಶಬ್ದಗಳನ್ನು ಟಂಕಿಸಿಕೊಂಡಿದ್ದಾರೆ. ಇದಕ್ಕೆ ಈ ಮೇಲಿನ hypothesis ನಂತೆ ವ್ಯಾಕರಣದ ದೃಷ್ಟಿಯಿಂದ ನೋಡಿದಾಗ ಅದು ಹೇಗೆ ಅನ್ವಯವಾಗುತ್ತದೆ?

ಎರಡನೆಯದಾಗಿ ಒಬ್ಬ ವ್ಯಕ್ತಿ ಆಧುನಿಕ ಕನ್ನಡದಲ್ಲಿ ಗ್ರಂಥವನ್ನು ರಚಿಸುವಾಗ ಕೆಲವು ಅನ್ಯಭಾಷೆಯ ಶಬ್ದಗಳನ್ನು ಬಳಸಿಕೊಂಡಿರುತ್ತಾನೆ. ಅಂತಹ ಗ್ರಂಥವನ್ನು ವ್ಯಾಕರಣದ ದೃಷ್ಟಿಯಿಂದ ವಿಶ್ಲೇಷಿಸಿದಾಗ ಭಿನ್ನತೆ ಕಾಣುವುದಿಲ್ಲವೆ?

ಮೂರನೆಯದಾಗಿ ಕನ್ನಡ ಭಾಷೆಯನ್ನು ಪ್ರಾದೇಶಿಕ ದೃಷ್ಟಿಯಿಂದ ವಿಭಜಿಸಿ ನೋಡಿದಾಗ ಉತ್ತರ ಕನ್ನಡ, ಮಂಗಳೂರು ಕನ್ನಡ, ಬೆಳಗಾಂ ಕನ್ನಡ, ಮೈಸೂರು ಕನ್ನಡ, ಧಾರವಾಡ ಕನ್ನಡ, ಮಂಡ್ಯ ಕನ್ನಡ, ಹಾಸನ ಕನ್ನಡ, ಬೀದರ ಕನ್ನಡ, ತುಮಕೂರು ಕನ್ನಡ, ಬಿಜಾಪುರ ಕನ್ನಡವೆಂದು ಹಲವು ರೀತಿಯಲ್ಲಿ ವಿಭಾಗ ಮಾಡಿಕೊಳ್ಳಬಹುದು. ಅಂತಹದರಲ್ಲಿ ಒಬ್ಬ ವ್ಯಕ್ತಿ ಮಂಡ್ಯ ಕನ್ನಡದಲ್ಲಿ, ಮತ್ತೊಬ್ಬ ಬೆಳಗಾಂ ಕನ್ನಡದಲ್ಲಿ ಗ್ರಂಥಗಳನ್ನು ರಚಿಸಿದಾಗ, ಮಂಡ್ಯ ಕನ್ನಡದಲ್ಲಿ ಕೆಲವು ಧ್ವನಿಗಳು ಬಳಕೆಯಲ್ಲಿ ಇಲ್ಲದೆ ಇರಬಹುದು. ಹಾಗೆಯೆ ಮಹಾರಾಷ್ಟ್ರ ಹತ್ತಿರವಿರುವುದರಿಂದ ಬೆಳಗಾಂ ಕನ್ನಡದಲ್ಲಿ ಮರಾಠಿಭಾಷೆಯ ಪ್ರಭಾವದಿಂದ ಕೆಲವು ಹೊಸ ಧ್ವನಿಗಳು ಸೇರಿಕೊಂಡಿರಬಹುದು. ಇಂತಹ ಕಡೆ ಮೇಲಿನ ಹೇಳಿಕೆಯಂತೆ ವಿಶ್ಲೇಷಿಸಿದಾಗ ಭಿನ್ನತೆ ಕಾಣುವುದಿಲ್ಲವೆ?

ನಾಲ್ಕನೆಯದಾಗಿ, ಯಾವುದಾದರೊಂದು ಪ್ರದೇಶವನ್ನು ತೆಗೆದುಕೊಂಡು ಕನ್ನಡ ಭಾಷೆಯನ್ನು ಸಾಮಾಜಿಕ ದೃಷ್ಟಿಕೋನದಿಂದ ನೋಡಿದಾಗ ಹರಿಜನರ ಕನ್ನಡ,

ಲಿಂಗಾಯಿತರ ಕನ್ನಡ, ಹವ್ಯಕರ ಕನ್ನಡ, ಮುಸ್ಲಿಮರ ಕನ್ನಡ, ಲಂಬಾಣಿಗಳ ಕನ್ನಡ, ಚಮ್ಮಾರರ ಕನ್ನಡ, ಬ್ರಾಹ್ಮಣರ ಕನ್ನಡ, ಒಕ್ಕಲಿಗರ ಕನ್ನಡ, ಗೊಲ್ಲರ ಕನ್ನಡ, ಕೊರವರ ಕನ್ನಡ, ಕೊರಚರ ಕನ್ನಡ, ಗಾಣಿಗರ ಕನ್ನಡ, ಬೆಸ್ತರ ಕನ್ನಡ, ದರ್ಜಿಗಳ ಕನ್ನಡವೆಂದು ಅನೇಕ ರೀತಿಯಲ್ಲಿ ಅವರವರ ಜಾತಿಯ ಆಧಾರದ ಮೇಲೆ ಅವರು ಮಾತನಾಡುವ ಕನ್ನಡವನ್ನು ವರ್ಗೀಕರಿಸಿಕೊಳ್ಳಬಹುದು. ಆಗ ಒಬ್ಬ ದಲಿತ ಕನ್ನಡದಲ್ಲಿ, ಮತ್ತೊಬ್ಬ ಲಿಂಗಾಯಿತ ಕನ್ನಡದಲ್ಲಿ, ಮಗದೊಬ್ಬ ಮುಸ್ಲಿಮ ಕನ್ನಡದಲ್ಲಿ, ಹೀಗೆ ಒಂದೊಂದು ಜಾತಿಯ ಕನ್ನಡದಲ್ಲಿ ಗ್ರಂಥ ರಚಿಸಿದಾಗ ವ್ಯತ್ಯಾಸ ಕಾಣುವುದಿಲ್ಲವೆ? ಇಂತಹ ಹಲವು ರೀತಿಯ ಪ್ರಶ್ನೆಗಳು ಅನೇಕರ ಮನಸ್ಸಿನಲ್ಲಿ ಇದನ್ನು ಓದಿದಾಗ ಆರಂಭದಲ್ಲಿ ಮೂಡಬಹುದು.

ಮೊದಲಿಗೆ ಕುವೆಂಪುರವರ ಶ್ರೀರಾಮಾಯಣ ದರ್ಶನಂ ಗ್ರಂಥದ ಬಗ್ಗೆ ಹೇಳುವುದಾದರೆ ಇದರಲ್ಲಿ ಹಳಗನ್ನಡದ ಜೊತೆಗೆ ಕೆಲವು ಹೊಸ ಶಬ್ದಗಳನ್ನು ಟಂಕಿಸಿಕೊಂಡು ಬಳಸಿರುವುದರಿಂದ ಮೇಲಿನ ಹೇಳಿಕೆಯಂತೆ ಹಳಗನ್ನಡಕ್ಕೂ ಈ ಗ್ರಂಥವು ಹೊಂದಿರುವ ಹಳಗನ್ನಡಕ್ಕೂ ಹೋಲಿಕೆ ಮಾಡಿದಾಗ ಕೆಲವೊಂದು ವ್ಯತ್ಯಾಸ ಕಾಣಿಸುವುದು ಸಹಜ. ಆದರೆ ಇಡೀ ಕೃತಿಯ ವ್ಯಾಕರಣವೇ ಬದಲಾಗಿರಲು ಇಲ್ಲಿ ಸಾಧ್ಯವಿಲ್ಲ. ಏಕೆಂದರೆ ಅವರು ಕೇವಲ ಹೊಸ ಶಬ್ದಗಳನ್ನು ಟಂಕಿಸಿಕೊಂಡಿದ್ದಾರೆ ವಿನಃ ಹೊಸ ವ್ಯಾಕರಣವನ್ನೇನೂ ಅಲ್ಲ. ಇಲ್ಲಿ ಈ ಹೊಸ ಶಬ್ದಗಳನ್ನು ಪಟ್ಟಿಮಾಡಿಕೊಂಡು ಹೊಸದಾಗಿ ಅಧ್ಯಯನ ಮಾಡಬಹುದು. ಇಂತಹವು ಅಧ್ಯಯನಕ್ಕೆ ಅರ್ಹವಾದವು. ಇವುಗಳನ್ನು ಹೊರತುಪಡಿಸಿ ಉಳಿದಂತೆ ಈ ಕೃತಿಯಲ್ಲಿನ ವ್ಯಾಕರಣ ಹಾಗೂ ಹಳಗನ್ನಡದ ವ್ಯಾಕರಣ ಇವೆರಡನ್ನು ತುಲನೆ ಮಾಡಿದಾಗ ವ್ಯತ್ಯಾಸವಿರಲು ಸಾಧ್ಯವಿಲ್ಲ. ಇವನ್ನು ತುಲನೆ ಮಾಡಲು ಹಳಗನ್ನಡ ಮಾತನಾಡುವವರು ಇಲ್ಲದ್ದರಿಂದ ಆಡುಮಾತಿನ ಹಳಗನ್ನಡ ಸಿಗುವುದಿಲ್ಲ. ಆದರೂ ನಮ್ಮ hypothesis ಗೆ ಪೂರಕವಾದ ಒಂದು ಹೇಳಿಕೆಯನ್ನು ನೋಡಿ "Pampa Bharata (Vikramarjuna Vijayam) has been chosen as the most representative one of the 10th century literary Kannada for analytical study of the language of a definitely known place and period"[1] ಹೀಗೆಂದು ಡಾ. ಬಿ.ರಾಮಚಂದ್ರ

---

1. A descriptive Grammar of Pampa Bharatha - B.Ramachandra Rao, 1972, Pp. x.

ರಾವ್‌ರವರು 'A descriptive Grammar of Pampa Bharata' ಕೃತಿಯ ಪ್ರಸ್ತಾವನೆಯಲ್ಲಿ ಹೇಳಿದ್ದಾರೆ.

ಯಾವುದೇ ಕೃತಿಯಲ್ಲಿ ಕೃತಿಕಾರ ಹೊಸ ಶಬ್ದಗಳನ್ನಾದರೂ ಟಂಕಿಸಿಕೊಂಡಿರಲಿ ಅಥವಾ ಅನ್ಯಭಾಷೆಯ ಶಬ್ದಗಳನ್ನಾದರೂ ತನ್ನ ಕೃತಿಯಲ್ಲಿ ಬಳಸಿಕೊಂಡಿರಲಿ ಅಥವಾ ಯಾವುದೇ ಪ್ರಾದೇಶಿಕ ಇಲ್ಲ ಸಾಮಾಜಿಕ ಉಪಭಾಷೆಯಲ್ಲಾದರೂ ಬರೆದಿರಲಿ, ಇಲ್ಲ ಹಳೆಗನ್ನಡದಲ್ಲಾಗಲಿ, ನಡುಗನ್ನಡದಲ್ಲಾಗಲಿ ಅಥವಾ ಆಧುನಿಕ ಕನ್ನಡದಲ್ಲಾಗಲಿ ಬರೆದಿರಲಿ, ನಾವು ಹೋಲಿಕೆಗೆ ತೆಗೆದುಕೊಳ್ಳಬೇಕಾದುದು ಹಾಗೂ ಗಮನಿಸಬೇಕಾದುದು ಇಷ್ಟೆ. ಆ ಗ್ರಂಥವು ಅನ್ಯಭಾಷೆಯ ಶಬ್ದಗಳನ್ನು ಮತ್ತು ವಾಕ್ಯಗಳನ್ನು ಒಳಗೊಂಡಿದ್ದರೆ ಅಥವಾ ಹೊಸ ಶಬ್ದಗಳನ್ನು ಒಳಗೊಂಡಿದ್ದರೆ ಅವುಗಳನ್ನು ಪಟ್ಟಿಮಾಡಿಕೊಂಡು ಪ್ರತ್ಯೇಕವಾಗಿ ಅಭ್ಯಸಿಸಬೇಕು. ಅಂತಹವುಗಳು ಅಧ್ಯಯನಕ್ಕೆ ಅರ್ಹವಾದವು. ಹಾಗೆಯೆ ಪ್ರಾದೇಶಿಕ ಭಾಷೆಯಲ್ಲಿ ಅಂದರೆ ಧಾರವಾಡ ಕನ್ನಡದಲ್ಲಿ ಬರೆದಿದ್ದರೆ ಧಾರವಾಡ ಕನ್ನಡವನ್ನೇ, ಬೆಳಗಾಂ ಕನ್ನಡದಲ್ಲಿ ಬರೆದಿದ್ದರೆ ಬೆಳಗಾಂ ಕನ್ನಡವನ್ನೇ ಹೋಲಿಕೆಗೆ ತೆಗೆದುಕೊಳ್ಳಬೇಕು. ಅಂತೆಯೇ ಸಾಮಾಜಿಕ ಉಪಭಾಷೆಗಳಲ್ಲಿ ಅಂದರೆ ಹರಿಜನರ ಕನ್ನಡದಲ್ಲಿ ಗ್ರಂಥ ರಚಿಸಿದ್ದರೆ ಹರಿಜನರ ಕನ್ನಡವನ್ನೇ, ಲಿಂಗಾಯತ ಕನ್ನಡದ್ದಾದರೆ ಲಿಂಗಾಯತ ಕನ್ನಡವನ್ನೇ ತೆಗೆದುಕೊಳ್ಳಬೇಕು.

ಹೀಗೆ ಆ ಕೃತಿಯು ಯಾವ ಕಾಲದ, ಯಾವ ಪ್ರದೇಶದ ಅಥವಾ ಯಾವ ಸಾಮಾಜಿಕ ವರ್ಗಕ್ಕೆ ಸೇರಿದ ಭಾಷೆಯನ್ನು ಹೊಂದಿರುತ್ತದೊ ಅದೇ ಕಾಲದ, ಅದೇ ಪ್ರದೇಶದ ಅಥವಾ ಸಾಮಾಜಿಕ ವರ್ಗಕ್ಕೆ ಸೇರಿದ ಭಾಷೆಯನ್ನೇ ತೆಗೆದುಕೊಂಡು ಹೋಲಿಸಿ ನೋಡಬೇಕು. ಆಯಾಯ ಕಾಲದ ಭಾಷೆಗಳಲ್ಲಿ ಪ್ರಾದೇಶಿಕವಾಗಿ ಅಥವಾ ಸಾಮಾಜಿಕವಾಗಿ ಎಷ್ಟೆ ಪ್ರಭೇದಗಳಿರಲಿ, ಗ್ರಂಥಕರ್ತೃ ಆ ಪ್ರಭೇದಗಳಲ್ಲಿ ಯಾವುದಾದರೂ ಒಂದು ಪ್ರಭೇದವನ್ನು ಬಳಸಿಕೊಂಡು ಗ್ರಂಥ ರಚಿಸಿರುತ್ತಾನೆ ವಿನಃ ಎಲ್ಲ ಪ್ರಭೇದಗಳನ್ನು ಒಟ್ಟಿಗೆ ಬಳಸಿಕೊಂಡಿರಲಾರ. ಬೇಕಿದ್ದರೆ ಅನ್ಯಭಾಷೆಯ ಅಥವಾ ಅನ್ಯ ಪ್ರಭೇದದ ಕೆಲವು ಪದಗಳನ್ನೋ, ವಾಕ್ಯಗಳನ್ನೋ ಆ ಗ್ರಂಥದಲ್ಲಿ ಉದ್ಧರಿಸಿಕೊಂಡಿರಬಹುದು. ಆದರೆ ಬೇರೆ ಬೇರೆ ಕಾಲದ ಕನ್ನಡವನ್ನೋ ಅಥವಾ ಪ್ರಭೇದಗಳನ್ನೋ ಸಂಪೂರ್ಣವಾಗಿ ಒಟ್ಟಿಗೆ ಬಳಸಿಕೊಂಡಿರಲಾರ. ಆದ್ದರಿಂದ, ನಾವು ಆ ಕೃತಿಯ ಭಾಷೆಯು ಯಾವ ಕಾಲಕ್ಕೆ ಸೇರಿರುತ್ತದೋ ಹಾಗೂ ಯಾವ ಪ್ರದೇಶದ

ಅಥವಾ ಯಾವ ಸಾಮಾಜಿಕ ವರ್ಗದ ಪ್ರಭೇದಕ್ಕೆ ಸೇರಿರುತ್ತದೋ ಅಂತಹ ಪ್ರಭೇದದ ಜೊತೆ ತುಲನೆಮಾಡಿ ನೋಡಬೇಕು. ಆಗ ಅವುಗಳ ನಡುವೆ ವ್ಯತ್ಯಾಸ ಇಲ್ಲದೇ ಇರುವುದು ಸ್ಪಷ್ಟವಾಗಿ ತಿಳಿಯುತ್ತದೆ.

ಇದಕ್ಕೆ ಉದಾಹರಣೆಯಾಗಿ ರಾವಬಹದ್ದೂರ್‌ರವರ ಕಾದಂಬರಿಯಾದ ಆಧುನಿಕ ಕಾಲದ ಬಿಜಾಪುರ ಕನ್ನಡದಲ್ಲಿ ರಚನೆಗೊಂಡಿರುವ 'ಗ್ರಾಮಾಯಣ' ಗ್ರಂಥದ ಕನ್ನಡವನ್ನು ತೆಗೆದುಕೊಂಡು, ಬಿಜಾಪುರ ಜಿಲ್ಲೆಯಲ್ಲಿ ಬಳಕೆಯಲ್ಲಿರುವ ಕನ್ನಡದ ಜೊತೆ ಧ್ವನಿಮಾ ಮಟ್ಟದಲ್ಲಿ, ಆಕೃತಿಮಾ ಮಟ್ಟದಲ್ಲಿ, ವಾಕ್ಯರಚನಿಕ ಮಟ್ಟದಲ್ಲಿ ಮತ್ತು ಶಬ್ದಕೋಶೀಯ ಮಟ್ಟದಲ್ಲಿ ಹೋಲಿಕೆ ಮಾಡಿತೋರಿಸಲಾಗಿದೆ.

1.1.1. ಧ್ವನಿಮಾ ಮಟ್ಟದ ಹೋಲಿಕೆ

1.1.1.1. ಸ್ವರಧ್ವನಿಮಾಗಳ ಹೋಲಿಕೆ

ಬಿಜಾಪುರ ಜಿಲ್ಲೆಯಲ್ಲಿ ನಾನು ಕ್ಷೇತ್ರಕಾರ್ಯ ನಡೆಸಿ, ದತ್ತ ಸಂಗ್ರಹಿಸಿ, ಅದನ್ನು ವಿಶ್ಲೇಷಣೆ ಮಾಡಿದಾಗ ಬಿಜಾಪುರ ಕನ್ನಡದಲ್ಲಿ ಸ್ವರ ಧ್ವನಿಮಾಗಳು ಕೆಳಗಿನಂತೆ ಕಂಡುಬಂದವು.

ಇ	ಈ			ಉ	ಊ	(ಊ̃)
		ಅ	ಆ	(ಆ̃)		
		ə				
ಎ	ಏ			ಒ	ಓ	
ಐ			ಔ			

i) ಐ = ಇದು ಪೈಲ, ಬೈಲ ಇತ್ಯಾದಿಗಳಲ್ಲಿ

ii) ಔ = ಇದು ಕೌಪ, ಗೌಡಿ, ಕೌಣಾ ಇತ್ಯಾದಿಗಳಲ್ಲಿ ಕಂಡುಬರುತ್ತದೆ

ಇವೆರಡು ಕೂಡ ಇಲ್ಲಿ ಕಾಣಿಸಿಕೊಳ್ಳುವ ವಿಶಿಷ್ಟ ಸ್ವರಧ್ವನಿಮಾಗಳಾಗಿವೆ.

iii) 'ಅ' ಮತ್ತು 'ಊ' = ಇವೆರಡು ಧ್ವನಿಮಾಗಳು ಇಲ್ಲಿ ಅನುನಾಸಿಕತೆಯಿಂದಲೂ ಕೂಡಿವೆ. ಆದ್ದರಿಂದ ಅನುನಾಸಿಕ ಧ್ವನಿಮಾಗಳನ್ನು ಅ̃ ಮತ್ತು ಊ̃ ಚಿಹ್ನೆಗಳ ಮೂಲಕ ತೋರಿಸಲಾಗಿದೆ.

ಗ್ರಾಮಾಂತರ ಕೃತಿಯ ಬಿಜಾಪುರ ಕನ್ನಡದಲ್ಲಿ ಸ್ವರಧ್ವನಿಮಾಗಳು ಕೆಳಗಿನಂತಿವೆ.

ಇ ಈ ಉ ಊ (ಊ̃)

ಅ ಆ (ಆ̃)

ə

ಎ ಏ ಒ ಓ

ಐ ಔ

ಇವುಗಳಿಗೆ ವೈದೃಶ್ಯ ಯುಗ್ಮಗಳು(minimal pairs) ಕೆಳಕಂಡಂತೆ ಇವೆ.

1.1.1.1.1. ಹ್ರಸ್ವಸ್ವರ ಧ್ವನಿಮಾಗಳು

/ಇ/ ಮತ್ತು /ಎ/ ವೈದೃಶ್ಯಗಳು

ಇಲಿ = ili ಇಲ್ಲಿ = illi
ಎಲಿ = eli ಎಲ್ಲಿ = elli

/ಉ/ ಮತ್ತು /ಒ/ ವೈದೃಶ್ಯಗಳು

ಕುಡಿ = kuḍi
ಕೊಡಿ = koḍi

/ಎ/ ಮತ್ತು /ಅ/ ವೈದೃಶ್ಯಗಳು

ಕೆರಿ - keri ಹೆಣ = heṇa
ಕರಿ = kari ಹಣ = haṇa

/ಅ/ ಮತ್ತು /ಉ/ ವೈದೃಶ್ಯಗಳು

ದೂರ = du:ra ಕಾಲ = ka:la

ದೂರು = du:ru ಕಾಲು = ka:lu

/ಒ/ ಮತ್ತು /ಅ/ ವೈದೃಶ್ಯಗಳು

ಕೊಲಿ = koli ರೊಟ್ಟಿ = roṭṭi

ಕಲಿ = kali ರಟ್ಟಿ = raṭṭi

/ə/ ಮತ್ತು /ಅ/ ವೈದೃಶ್ಯಗಳು

ತಂದಿ = təndi ಕಡಿ = kəḍi

ತಂದಿ = tandi ಕಡಿ = kaḍi

/ಇ/ ಮತ್ತು /ಉ/ ವೈದೃಶ್ಯಗಳು

ಕಿಡಿ = kiḍi ಗಿಡ್ಡ = giḍḍa

ಕುಡಿ = kuḍi ಗುಡ್ಡ = guḍḍa

/ಎ/ ಮತ್ತು /ಒ/ ವೈದೃಶ್ಯಗಳು

ಎಲೀ = eli: ಎಲ್ಲೆ = elle

ಒಲೀ = Oli: ಒಲ್ಲೆ = olle

1.1.1.1.2 ದೀರ್ಘಸ್ವರ ಧ್ವನಿಮಾಗಳು

/ಈ/ ಮತ್ತು /ಏ/ ವೈದೃಶ್ಯಗಳು

ಕೀಳು = ki:ḷu ಬೀಡಿ = bi:ḍi

ಕೇಳು = ke:ḷu ಬೇಡಿ = be:ḍi

/ಊ/ ಮತ್ತು /ಓ/ ವೈದೃಶ್ಯಗಳು

ಊಟ =u:ṭa ನೂರು = nu:ru

ಓಟ = O:ṭa ನೋಡು = no:ḍu

/ಏ/ ಮತ್ತು /ಓ/ ವೈದೃಶ್ಯಗಳು

ಏಟು = e:ṭu ಏಣಿ = e:ṇi

ಓಟು = O:ṭu ಓಣಿ = O:ṇi

/ಈ/ ಮತ್ತು /ಊ/ ವೈದೃಶ್ಯಗಳು

ಕೀಳು = ki:ḷu ನೀರು = ni:ru

ಕೂಳು = ku:ḷu ನೂರು = nu:ru

/ಊ/ ಮತ್ತು /ಏ/ ವೈದೃಶ್ಯಗಳು

ಕೂಳು = ku:ḷu

ಕೇಳು = ke:ḷu

/ಆ/ ಮತ್ತು /ಏ/ ವೈದೃಶ್ಯಗಳು

ಕಾಳು = ka:ḷu ಹಾಳು = ha:ḷu

ಕೇಳು = ke:ḷu ಹೇಳು = he:ḷu

/ಆ/ ಮತ್ತು /ಓ/ ವ್ಯತ್ಯಾಸಗಳು

ಆಟು = a:ṭu ಆಣೀ = a:ṇi:

ಓಟು = o:ṭu ಓಣೀ = o:ṇi:

1.1.1.1.3. ಹ್ರಸ್ವ ಮತ್ತು ದೀರ್ಘಸ್ವರ ಧ್ವನಿಮಾಗಳು

/ಇ/ ಮತ್ತು /ಈ/ ವ್ಯತ್ಯಾಸಗಳು

ಬಿಸಿ = bisi

ಬೀಸಿ = biisi

/ಎ/ ಮತ್ತು /ಏ/ ವ್ಯತ್ಯಾಸಗಳು

ಬೆಲಿ = beli

ಬೇಲಿ = be:li

/ಉ/ ಮತ್ತು /ಊ/ ವ್ಯತ್ಯಾಸಗಳು

ಉರಿ = uri

ಊರು = u:ru

/ಅ/ ಮತ್ತು /ಆ/ ವ್ಯತ್ಯಾಸಗಳು

ಗಡಿ = gaḍi ಮರಿ = mari

ಗಾಡಿ = ga:ḍi ಮಾರಿ = ma:ri

/ಒ/ ಮತ್ತು /ಓ/ ವ್ಯತ್ಯಾಸಗಳು

ಒಡಿ = oḍi

ಓಡಿ = o:ḍi

ಇಲ್ಲಿನ ಕನ್ನಡದಲ್ಲಿ ಎ, ಒ, ಧ್ವನಿಮಾಗಳು ಉಪಧ್ವನಿಮಾಗಳನ್ನು ಹೊಂದಿವೆ. 'ಎ' ಅಥವಾ 'ಒ' ಅಕ್ಷರಗಳಿಂದ ಆರಂಭವಾಗುವ ಕೆಲವೊಂದು ಪದಗಳಲ್ಲಿ ಯ, ವ, ವ್ಯಂಜನಾಕ್ಷರಗಳು ಕಾಣಿಸಿಕೊಳ್ಳುವುದರ ಮೂಲಕ ಭಿನ್ನ ಉಚ್ಚಾರಣೆ ಕಂಡುಬರುತ್ತದೆ. ಅವುಗಳನ್ನು ಈ ಕೆಳಕಂಡಂತೆ ವಿವರಿಸಿ ತೋರಿಸಿದೇನೆ.

(ಎ) – ಎಲ್ಲ, ಎಮ್ಮೆ, ಎಣ್ಣೆ ಇತ್ಯಾದಿಗಳಲ್ಲಿ

/ಎ/

(ಯೆ) – ಯೆರಡು, ಯೇಳು ಇತ್ಯಾದಿಗಳಲ್ಲಿ ಕಂಡುಬರುತ್ತವೆ

(ಒ) – ಒನಕೆ, ಒಮ್ಮೆ ಇತ್ಯಾದಿಗಳಲ್ಲಿ

/ಒ/

(ವೊ) – ವೊಂದು, ವೊಬ್ಬ ಇತ್ಯಾದಿಗಳಲ್ಲಿ ಕಂಡುಬರುತ್ತವೆ.

1.1.1.1.4. ವಿಶಿಷ್ಟ ಸ್ವರಧ್ವನಿಮಾಗಳು

/ಏ/ ಮತ್ತು /ಎ್ಯ/ ವೈದೃಶ್ಯ

ಬೇಡಿ = be:ḍi

ಬ್ಯಾಡಿ = byaḍi

/ಆ/ ಮತ್ತು /ಒ್ವ/ ವೈದೃಶ್ಯ

ಗಾಡಿ = ga:di   ಹಾದಿ = ha:di

ಗ್ವಾಡಿ = gwadi   ಹ್ವಾದಿ = hwa:di

/ಅ/ ಮತ್ತು /ಒ್ವ/ ವೈದೃಶ್ಯ

ಜರಾ = jara

ಜ್ವರಾ = jwara

1.1.1.1.5. ಅನುನಾಸಿಕ ಸ್ವರಧ್ವನಿಮಾಗಳು

/ಅ/ ಮತ್ತು /ಅ̃/ ವೈದೃಶ್ಯಗಳು

ಹೌದಾ? = ಅ

ಏನು = ಅ̃

/ಊ/ ಮತ್ತು /ಊ̃/ ವೈದೃಶ್ಯಗಳು

ಹೂ = ಊ

ಹೂ̃ = ಊ̃

1.1.1.2. <u>ವ್ಯಂಜನ ಧ್ವನಿಮಾಗಳ ಹೋಲಿಕೆ</u>

ಬಿಜಾಪುರ ಕನ್ನಡದಲ್ಲಿ ವ್ಯಂಜನ ಧ್ವನಿಮಾಗಳು ಕೆಳಗಿನಂತಿವೆ.

ಪ್	ಬ್	ತ್	ದ್	ಟ್	ಡ್	ಚ್	ಜ್	ಕ್	ಗ್	
	ಮ್		ನ್		ಣ್					
			ಸ್							ಹ್
						ಲ್		ಳ್		
						ರ್				
			ವ್							ಯ್

i) 'ಚ್' ಧ್ವನಿಮಾವು ಚ̌, ಚ ಎಂಬವೆರಡು ಉಪಧ್ವನಿಮಾಗಳನ್ನು ಹೊಂದಿದೆ.

ii) 'ಜ್' ಧ್ವನಿಮಾವು ಕೂಡ ಜ̌, ಜ್ ಎಂಬ ಎರಡು ಉಪಧ್ವನಿಮಾಗಳನ್ನು ಹೊಂದಿದೆ.

iii) 'ಶ್, ಷ್ ಮತ್ತು ಸ್ ಗಳು ಒಂದೇ ಧ್ವನಿಮಾದ ಉಪಧ್ವನಿಮಾಗಳು.

iv) 'ಝ' ಈ ಜಿಲ್ಲೆಯಲ್ಲಿ ಅಷ್ಟಾಗಿ ಬಳಕೆಯಲ್ಲಿಲ್ಲ. ಆದರೆ ಅಂಕಿತನಾಮಗಳಲ್ಲಿ ಕಂಡುಬರುತ್ತದೆ.

v) ಈ ಜಿಲ್ಲೆಯಲ್ಲಿ ಅಲ್ಪಪ್ರಾಣ, ಮಹಾಪ್ರಾಣಗಳ ನಡುವೆ ಸ್ವಚ್ಛಂದ ಪರಿವರ್ತನೆಯು ವಿದ್ಯಾವಂತ ಮತ್ತು ಅವಿದ್ಯಾವಂತರ ಸಂಭಾಷಣೆಯಲ್ಲಿ ಸ್ಪಷ್ಟವಾಗಿ ಕಂಡುಬರುತ್ತದೆ.

ಗ್ರಾಮಾಯಣ ಕೃತಿಯ ಬಿಜಾಪುರ ಕನ್ನಡದಲ್ಲಿ ವ್ಯಂಜನಧ್ವನಿಮಾಗಳು ಕೆಳಗಿನಂತೆ ಕಂಡುಬರುತ್ತವೆ.

ಪ	ಬ	ತ	ದ	ಟ	ಡ	ಚ	ಜ	ಕ	ಗ	
	ಮ		ನ		ಣ					
			ಸ							ಹ
						ಲ		ಳ		
						ರ				
			ವ							ಯ

ಇವುಗಳಿಗೆ ವೈದೃಶ್ಯ ಯುಗ್ಮಗಳು ಈ ಕೆಳಕಂಡಂತೆ ಕಂಡುಬರುತ್ತವೆ.

1.1.1.2.1. ಸ್ಪರ್ಶ ವ್ಯಂಜನ ಧ್ವನಿಮಾಗಳು

/ಪ/ ಮತ್ತು /ಬ/ ವೈದೃಶ್ಯಗಳು

ಪಟ್ಟ = paṭṭa ಪಾಳು = pa:ḷu

ಬಟ್ಟ = baṭṭa ಬಾಳು = ba:ḷu

/ತ/ ಮತ್ತು /ದ/ ವೈದೃಶ್ಯಗಳು

ತಡಾ = taḍa: ತಮ್ಮ = tamma

ದಡಾ = daḍa: ದಮ್ಮ = damma

/ಟ/ ಮತ್ತು /ಡ/ ವೈದೃಶ್ಯಗಳು

ಗಂಟು = gaṇṭu

ಗಂಡು = gaṇḍu

/ಚ/ ಮತ್ತು /ಜ/ ವೈದೃಶ್ಯಗಳು

ವಚನ = vacana

ವಜನ = vajana

/ಕ/ ಮತ್ತು /ಗ/ ವೈದೃಶ್ಯಗಳು

ಕೆರಿ = keri   ಕತಿ = kati

ಗೆರಿ = geri   ಗತಿ = gati

1.1.1.2.2. ಅನುನಾಸಿಕ ವ್ಯಂಜನಗಳು

/ಮ/ ಮತ್ತು /ನ/ ವೈದೃಶ್ಯಗಳು

ಮಾಮ = ma:ma   ಮೂರು = mu:ru

ಮಾನ = ma:na   ನೂರು = nu:ru

/ನ/ ಮತ್ತು /ಣ/ ವೈದೃಶ್ಯಗಳು

ಆನೀ = a:ni: ಮನಿ = mani

ಆಣೀ = a:ni: ಮಣಿ = maṇi

/ಣ/ ಮತ್ತು /ಮ/ ವೈದೃಶ್ಯಗಳು

ಆಣೀ = a:ṇi

ಆಮೀ = a:ṃi

1.1.1.2.3. ಇತರೆ ವ್ಯಂಜನಗಳು

/ಸ/ ಮತ್ತು /ಹ/ ವೈದೃಶ್ಯಗಳು

ಸಾಲು = sa:lu

ಹಾಲು = ha:lu

/ಲ/ ಮತ್ತು /ಳ/ ವ್ಯತ್ಯಾಸಗಳು

ಕಾಲು = ka:lu ಹಾಲು = ha:lu

ಕಾಳು = ka:ḷu ಹಾಳು = ha:ḷu

/ಲ/ ಮತ್ತು /ಸ/ ವ್ಯತ್ಯಾಸಗಳು

ಕಾಲು = ka:lu

ಕಾಸು = ka:su

/ರ/ ಮತ್ತು /ಲ/ ವ್ಯತ್ಯಾಸಗಳು

ಸಾರೆ = sa:re ಎರಿ = eri

ಸಾಲೆ = sa:le ಎಲಿ = eli

/ಸ/ ಮತ್ತು /ರ/ ವ್ಯತ್ಯಾಸಗಳು

ಕಸಾ = kasa: ಮಸಿ = masi

ಕರಾ = kara: ಮರಿ = mari

/ವ/ ಮತ್ತು /ಯ/

ಮಾವ = ma:va ಕಾವಿ = ka:vi

ಮಾಯ = ma:ya ಕಾಯಿ = ka:yi

1·1·1·2·4· ಇಲ್ಲಿನ ಕನ್ನಡದಲ್ಲಿ ಚ ಮತ್ತು ಜ ಗಳಿಗೆ ಉಪಧ್ವನಿಮಾಗಳಿವೆ·

/ಚ/
→ ಚ̌ – ಇದು 'ಚಿಲ್ಲರೆ' ಇತ್ಯಾದಿಗಳಲ್ಲಿ ಬರುತ್ತದೆ·
→ ಚ – ಇದು ಚಲುವು, ಚತ್ತಿ ಇತ್ಯಾದಿಗಳಲ್ಲಿ ಬರುತ್ತದೆ·

/ಜ/
→ ಜ̌ – ಇದು ಜಾಕ್ಕಿ, ಜರಾ ಇತ್ಯಾದಿಗಳಲ್ಲಿ ಬರುತ್ತದೆ·
→ ಜ – ಇದು ಜುಲುಮಾ, ಜರಾ, ಜೋರಿ ಇತ್ಯಾದಿಗಳಲ್ಲಿ ಬರುತ್ತದೆ·

1.1.1.2.5. ಚ್, ಜ್ ಮತ್ತು ಸ್, ಧ್ವನಿಗಳು

ಒಂದೇ ಧ್ವನಿಮಾದ ಉಪಧ್ವನಿಮಾಗಳಾಗಿವೆ. ಅವುಗಳನ್ನು ಕೆಳಕಂಡಂತೆ ತೋರಿಸಲಾಗಿದೆ.

/ಸ/ → ಚ್ — ಇದು 'ಅಂಗಿ' ಇತ್ಯಾದಿಗಳಲ್ಲಿ
/ಸ/ → ಜ್ — ಇದು ಸಂಜ, ಗಂಜ ಇತ್ಯಾದಿಗಳಲ್ಲಿ
/ಸ/ → ಸ್ — ಇದು ಮನಿ, ಬಂತಿ ಇತ್ಯಾದಿಗಳಲ್ಲಿ ಕಂಡುಬರುತ್ತವೆ.

1.1.1.2.6. ಈ ಕೃತಿಯಲ್ಲಿ ಶ್ ಕಂಡುಬಂದರೂ ಅದರ ಬಳಕೆ ಕಡಿಮೆ. ಇದು ಹೆಚ್ಚಾಗಿ ಅಂಕಿತನಾಮದಲ್ಲಿ ಕಂಡುಬರುತ್ತದೆ.

ಉದಾ: ಶೇಷಪ್ಪ, ಶ್ಯಾಮರಾಯ, ಶಿವ, ಶಂಕರಪ್ಪಗೌಡ ಇತ್ಯಾದಿ

1.1.1.2.7. ಈ ಕೃತಿಗಳಲ್ಲಿ ಅಲ್ಪಪ್ರಾಣ, ಮಹಾಪ್ರಾಣಗಳ ನಡುವೆ ಸ್ವಚ್ಛಂದ ಪರಿವರ್ತನೆ ಕಂಡುಬರುತ್ತದೆ. ಇದು ಹೆಚ್ಚಾಗಿ ಸುಶಿಕ್ಷಿತರ ಸಂಭಾಷಣೆಯಲ್ಲಿ ಕಂಡುಬರುತ್ತದೆ.

ಉದಾ:

ಕಥೆ — ಕತೆ
ಧೊರಿ — ದೊರೆ
ಭಂಗಾರ — ಬಂಗಾರ
ಭಟ್ಟ — ಬಟ್ಟ
ಭಾವಿ — ಬಾವಿ
ಪುಢಾರಿ — ಪುಡಾರಿ
ಸುಕಾ — ಸುಖ

1.1.2. ಆಕೃತಿಮಾ ಮಟ್ಟದ ಹೋಲಿಕೆ

ಆಕೃತಿಮಾ ಎಂದರೆ ಭಾಷೆಯ ಅರ್ಥವತ್ತಾದ ಒಂದು ಘಟಕ. ಸ್ವತಂತ್ರವಾಗಿ ಬಳಕೆಗೆ ಬರಬಲ್ಲ ಹಾಗೂ ಅರ್ಥವತ್ತಾದ ಆಕೃತಿಮಾಗಳನ್ನು ಮುಕ್ತ ಆಕೃತಿಮಾ(Free morphemes)ಗಳೆಂದು, ಭಾಷೆಯಲ್ಲಿ ಸ್ವತಂತ್ರವಾಗಿ ಬಳಕೆಗೆ ಬಾರದ ಹಾಗೂ ಯಾವುದಾದರೊಂದು ಸ್ವತಂತ್ರ ರೂಪವನ್ನು ಆಶ್ರಯಿಸಿ ಬರುವ ಆಕೃತಿಮಾಗಳನ್ನು ಬದ್ಧ ಆಕೃತಿಮಾ(Bound morphemes)ಗಳೆಂದು ಎರಡು ವಿಭಾಗ ಮಾಡಿಕೊಳ್ಳಬಹುದು. ಈ ಎರಡು ತೆರನಾದ ಆಕೃತಿಮಾಗಳನ್ನು ಬಿಜಾಪುರ ಕನ್ನಡ ಹಾಗೂ ಗ್ರಾಮಾಯಣ ಕಾದಂಬರಿಯ ಬಿಜಾಪುರ ಕನ್ನಡಗಳಲ್ಲಿ ಪತ್ತೆ ಹಚ್ಚಿ ಪ್ರಮುಖವಾದವುಗಳನ್ನು ಹೋಲಿಕೆಮಾಡಿ ತೋರಿಸಲಾಗಿದೆ. ಇಲ್ಲಿ ಗಮನದಲ್ಲಿಡಬೇಕಾದ ಒಂದು ಪ್ರಮುಖ ವಿಚಾರವೆಂದರೆ ಬಿಜಾಪುರ ಕನ್ನಡದಲ್ಲಿ ಕೆಲವು ಪದಗಳನ್ನು ಉಚ್ಚಾರ ಮಾಡುವಾಗ ವ್ಯಂಜನಾಂತ್ಯ ಕಾಣಿಸಿಕೊಳ್ಳುತ್ತದೆ. ಆದರೆ ಗ್ರಾಮಾಯಣ ಕಾದಂಬರಿಯ ಬಿಜಾಪುರ ಕನ್ನಡದಲ್ಲಿ ಈ ರೀತಿ ವ್ಯಂಜನಾಂತ್ಯ ಕಾಣಿಸಿಕೊಳ್ಳುವುದಿಲ್ಲ. ಬಹುಶ: ಮುದ್ರಣದವರು ಅಕ್ಷರ ಜೋಡಣೆಯ ಅನುಕೂಲತೆಯ ದೃಷ್ಟಿಯಿಂದ ವ್ಯಂಜನಾಂತ್ಯ ಕಾಣಿಸಿಕೊಳ್ಳುವ ಕಡೆಯಲ್ಲೂ ಸ್ವರಾಂತ್ಯ ಬರುವಂತೆ ಅಕ್ಷರಗಳನ್ನು ಜೋಡಿಸಿರಬಹುದು. ಅಥವಾ ವ್ಯಂಜನಾಂತ್ಯವು ಓದುಗರಿಗೆ ಉಚ್ಚರಿಸಲು ತೊಡಕಾಗಬಹುದೆಂದು ಲೇಖಕರು ಸ್ವರಾಂತ್ಯಗೊಳಿಸಿರಬಹುದು. ಹೀಗಾಗಿ ಗ್ರಾಮಾಯಣ ಕಾದಂಬರಿಯ ಬಿಜಾಪುರ ಕನ್ನಡ ಮತ್ತು ಬಿಜಾಪುರ ಕನ್ನಡಗಳ ನಡುವೆ ಕಂಡುಬರುವ ಸ್ವರಾಂತ್ಯ ಮತ್ತು ವ್ಯಂಜನಾಂತ್ಯಗಳನ್ನು ಪ್ರಮುಖ ವ್ಯತ್ಯಾಸಗಳೆಂದು ಪರಿಗಣಿಸಿ-ಕೊಳ್ಳಬಾರದು.

1.1.2.1. ಲಿಂಗ

ಪುಲ್ಲಿಂಗ:

ಗ್ರಾ.ಕಾ.ಬಿ.ಕ:- ಬರ್ತಾನರಿ, ಹೋಗ್ತಾನ, ಹಾಕ್ಯಾನ, ಕೊಟ್ಟಾನಲೇ, ಮಾಡ್ಯಾನ, ಹೋಗ್ಯಾನ.

ಬಿ.ಕ:- ಬರ್ತಾನ್ರಿ, ಹೋಗ್ತಾನ್, ಹಾಕ್ಯಾನ್, ಕೊಟ್ಟಾನ್ಲೇ, ಮಾಡ್ಯಾನ್, ಹೋಗ್ಯಾನ್.

ಸ್ತ್ರೀಲಿಂಗ:

ಗ್ರಾ·ಕಾ·ಬ·ಕ:– ಬೀಳತಾಳು, ಒತ್ತಾಳ, ಹೇಳತಾಳ, ಬರತಾಳ, ಮಲಗಿಬಿಟ್ಟಾಳ್ರ·

ಬ·ಕ:– ಬೀಳ್ತಾಳು, ಒತ್ತಾಳ್, ಹೇಳ್ತಾಳ್, ಬರ್ತಾಳ್, ಮಲಗ್ಬಿಟ್ಟಾಳ್ರ·

ನಪುಂಸಕಲಿಂಗ:

ಗ್ರಾ·ಕಾ·ಬ·ಕ:– ಅದು ಹೋತು, ಕುಂತೈತಿ, ನಿಂತೈತಿ·

ಬ·ಕ:– ಅದ್ ಹೋತ್, ಕುಂತೈತಿ, ನಿಂತೈತಿ

1·1·2·2· ವಚನ

ಬಹುವಚನದಲ್ಲಿ –ಊರು, –ರ್, ಮತ್ತು –ಗೋಳು ಪ್ರತ್ಯಯಗಳು ಕಂಡುಬರುತ್ತವೆ·

ಗ್ರಾ·ಕಾ·ಬ·ಕ			ಬ·ಕ		
ಏಕವಚನ		ಬಹುವಚನ	ಏಕವಚನ		ಬಹುವಚನ
ಮನುಷ್ಯ	–	ಮನುಷ್ಯರು	ಮನುಷ್ಯ	–	ಮನುಷ್ಯರ್
ಸ್ವಾಮಿ	–	ಸ್ವಾಮಿಗೋಳು	ಮನಿ	–	ಮನಿಗೋಳ್
ನೀ	–	ನೀವು	ನೀ	–	ನೀವು
ನಾ	–	ನಾವು	ನಾ	–	ನಾವು
ತುಡಗ	–	ತುಡಗ್ರು	ಹುಡಗ	–	ಹುಡುಗೂರು

1.1.2.3. ವಿಭಕ್ತಿ ಪ್ರತ್ಯಯಗಳು:

(ಅ) ಪ್ರಥಮ ವಿಭಕ್ತಿ:

ಇದಕ್ಕೆ ಪ್ರತ್ಯಯವಿಲ್ಲ. ಸ್ವತಂತ್ರಪದ ಇದಂ ರೂಪದಲ್ಲಿಯೇ ಬಳಕೆಯಾಗುತ್ತವೆ. ಉದಾಹರಣೆಗೆ:-

ಗ್ರಾ.ಕಾ.ಬ.ಕ.	ಬ.ಕ.
ಅಣ್ಣಾ ಬರಲಿಲ್ಲ	ಯಪ್ಪಾ ಬರೂದುಲ್ಲ
ದಿಮಣಾ ನನ್ನ ತಂಗಿ	ನಿಂಗವ್ವ ನನ್ನ ತಂಗಿ
ದಾದಾ ಮಾಡಿದಂರಾಗ	ಸೋಮ್ಯ ಮಾಡಿದಂರಾಗ್ ತಪ್ಪಿಲ್ಲ

(ಆ) ದ್ವಿತೀಯ ವಿಭಕ್ತಿ:

ಇದಕ್ಕೆ ಪದದ ಅಂತ್ಯದಲ್ಲಿ ಸ್ವರ ದೀರ್ಘವಾಗುವುದು ಒಂದು ಪ್ರತ್ಯಯ, -ನ್ನ ಮತ್ತೊಂದು ಪ್ರತ್ಯಯ.

ಉದಾಹರಣೆಗೆ:

ಗ್ರಾ.ಕಾ.ಬ.ಕ.		ಬ.ಕ.
ತಲೀ ಒಡಿ	—	ಮನೀ ನೋಡ್
ಗೌಡಿಕೀ ಬಿಡತೀನಿ	—	ಕೆಲಸಾ ಬಿಡ್ತೀನಿ
ಆಕಿನ್ನ	—	ಆಕಿನ್ನ
ದಾದಾನ್ನ	—	ರಾಮ್ಯಾನ್ನ ಕರಿ
ಕೆಲಸಾ ಮಾಡ್ಯಾನ	—	ಊಟಾ ಮಾಡ್ಯಾನ್

(ಇ) ತೃತೀಯ ವಿಭಕ್ತಿ

ಈ ವಿಭಕ್ತಿಗೆ – ಇಂದ ಮತ್ತು -ಲೆ ಎಂಬ ಎರಡು ಪ್ರತ್ಯಯಗಳಿವೆ. ಉದಾಹರಣೆಗೆ:

ಗ್ರಾ.ಕಾ.ಬ.ಕ.		ಬ.ಕ.
ಕಡಿಂದ	—	ಊರಿಂದ
ವಾಡೆಯಿಂದ	—	ಮನಿಂದ
ಮುಂಜಾನಿಂದ	—	ಆಕಿಂದ
ಹಿಟ್ಟಿಲೇ ಮಾಡಿದ ರೊಟ್ಟೀ	—	ಪೆನ್ನೀಲ ಬರೀತಾನ್

(ಈ) ಚತುರ್ಥಿ ವಿಭಕ್ತಿ

ಇದಕ್ಕೆ –ಗ, –ಕ್ಕ, –ಅಕೆ, –ಇಗ, ಪ್ರತ್ಯಯಗಳು ಕಂಡುಬರುತ್ತವೆ. ಉದಾಹರಣೆಗೆ,

ಗ್ರಾ.ಕಾ.ಬಿ.ಕ		ಬಿ.ಕ
ಮುದುಕಗ	—	ಶಿವಗ
ಅವಗ	—	ಅವಗ
ಜನಕ್ಕ	—	ಗಿಡಕ್ಕೆ
ಜೀವಕ್ಕ	—	ಊಟಾಕ್ಕೆ
ಕೊಡಲಾಕ	—	ನೋಡಲಾಕ
ಹೇಳಾಕ	—	ಕೇಳಾಕೆ
ಕೇರಿಗ	—	ಬಾಯಿಗೆ
ಗೌಡರಿಗ	—	ಮನೀಗೆ

(ಉ) ಪಂಚಮಿ ವಿಭಕ್ತಿ:–

ಈ ವಿಭಕ್ತಿ ಪ್ರತ್ಯಯವು ತೃತೀಯಾಕ್ಕಿಂತ ಪ್ರತ್ಯೇಕವಾಗಿಲ್ಲ. ಹೀಗಾಗಿ ಇಲ್ಲಿ ಹೋಲಿಕೆ ಮಾಡಿ ತೋರಿಸಿಲ್ಲ.

(ಊ) ಷಷ್ಠಿ ವಿಭಕ್ತಿ:–

ಇದಕ್ಕೆ –ಅ ಮತ್ತು ಪದದ ಅಂತ್ಯ ಸ್ವರವು ದೀರ್ಘವಾಗುವುದು ಷಷ್ಠಿ ವಿಭಕ್ತಿ ಪ್ರತ್ಯಯಗಳಾಗಿವೆ. ಉದಾಹರಣೆಗೆ,

ಗ್ರಾ.ಕಾ.ಬಿ.ಕ		ಬಿ.ಕ.
ದಾದಾನ	—	ಶರಣಾನ
ಕೂಸಿನ	—	ಹಣ್ಣನ್ ಬ್ಯಾಗ್ ತಾ
ಬಾಪೂ ಸಾಹೇಬನ	—	ಕಾಕಾನ
ಎದೀ ಮ್ಯಾಲ	—	ತಲೀ ಮ್ಯಾಲ
ತಂಗೀ ಮಾನ	—	ನಾಯೀ ಮರಿ
ಮನೀ ದಾರಿ	—	ಮನೀ ಮ್ಯಾಲ

(ಋ) <u>ಸಪ್ತಮಿ ವಿಭಕ್ತಿ</u>:-

-ಆಗ, ಎಂಬುದು ಸಪ್ತಮಿ ವಿಭಕ್ತಿ ಪ್ರತ್ಯಯವಾಗಿ ಇಲ್ಲಿ ಕಂಡುಬರುತ್ತದೆ.

ಉದಾಹರಣೆಗೆ:

ಗ್ರಾ.ಕಾ.ಬಿ.ಕ.		ಬಿ.ಕ.
ಮನ್ಯಾಗ	—	ತಲ್ಯಾಗ್
ಹೊಟ್ಯಾಗ	—	ಬಾಯಾಗ್
ರಾತ್ರ್ಯಾಗ	—	ಮನ್ಯಾಗ್
ಊರಾಗ	—	ಊರಾಗ್
ಕೈಯಾಗ	—	ಕಾಡಾಗ್

(ೠ) <u>ಸಂಬೋಧನ ವಿಭಕ್ತಿ</u>

ಪದದ ಅಂತ್ಯ ಸ್ವರವು ದೀರ್ಘವಾಗುವುದು ಸಂಬೋಧನ ವಿಭಕ್ತಿ ಪ್ರತ್ಯಯವಾಗಿದೆ.

ಉದಾಹರಣೆಗೆ,

ಗ್ರಾ.ಕಾ.ಬಿ.ಕ.		ಬಿ.ಕ.
ದಾದಾ	—	ಮಲ್ಯಾ
ಜಮುನಾ	—	ರಾಮ್ಯಾ
ಕಲ್ಯಾ	—	ಸೋಮ್ಯಾ
ನಿಂಗ್ಯಾ	—	ನೀಗೀ
ರತುಂಕ್ಯಾ	—	ಶಂಕ್ರ್ಯಾ

1.1.2.4. <u>ಸರ್ವನಾಮಗಳು</u>

ಈ ಕೆಳಗಿನಂತೆ ಎರಡು ಕನ್ನಡಗಳಲ್ಲೂ ಕಂಡುಬರುತ್ತದೆ.

	ಗ್ರಾ.ಕಾ.ಬಿ.ಕ.		ಬಿ.ಕ.	
	ಏಕವಚನ	ಬಹುವಚನ	ಏಕವಚನ	ಬಹುವಚನ
ಉತ್ತಮಪುರುಷ:	ನಾ	— ನಾವು	ನಾ	— ನಾವ್

ಮಧ್ಯಮಪುರುಷ :	ನೀ	—	ನೀವು	ನೀ	—	ನೀವ
ಪ್ರಥಮಪುರುಷ :	ಅಂವಾ	—	ಅವ್ರು	ಅಂವಾ	—	ಅವ್ರು
	ಇಂವಾ	—		ಇಂವಾ		
	ಆಕಿ	—	ಇವ್ರು	ಆಕಿ	—	ಇವ್ರು
	ಇಕಿ	—		ಇಕಿ		
	ಅದು	—	ಅವು	ಅದ	—	ಅವ
	ಇದು	—	ಇವು	ಇದ	—	ಇವ

1.1.2.5. ಕಾಲಸೂಚಕ ಪ್ರತ್ಯಯಗಳು

ಕ್ರಿಯೆಯು ನಡೆಯುವ ಕಾಲವನ್ನು ಸೂಚಿಸಲು ಕ್ರಿಯಾ ಪ್ರಕೃತಿಗಳಿಗೆ ಸೇರುವ ಪ್ರತ್ಯಯಗಳೇ ಕಾಲಸೂಚಕ ಪ್ರತ್ಯಯಗಳು.

(ಅ) ವರ್ತಮಾನಕಾಲ:

ವರ್ತಮಾನಕಾಲ ಪ್ರತ್ಯಯವಾಗಿ – ತ – ಕಂಡುಬರುತ್ತದೆ. ಉದಾಹರಣೆಗೆ

ಗ್ರಾ.ಕಾ.ಬಿ.ಕ.				ಬಿ.ಕ.
ನೋಡತಾನ	=	ನೋಡ + ತ + ಅನ	=	ನೋಡ್ತಾನ
ಕೇಳತಾಳ	=	ಕೇಳ್ + ತ + ಆಳ	=	ಕೇಳ್ತಾಳ
ಕಾಂಯತಾನ	=	ಕಾಂಯ್ + ತ + ಅನ	=	ಕಾಂಯ್ತಾನ
ಹೋಗತಾರ	=	ಹೋಗು + ತ + ಅರ	=	ಹೋಗ್ತಾರ

(ಆ) ಭೂತಕಾಲ:

ಭೂತಕಾಲದ ಪ್ರತ್ಯಯಗಳಾಗಿ –ಇದ–, –ದ–, –ತ– ಗಳು ಕಂಡುಬರುತ್ತವೆ. ಉದಾಹರಣೆಗೆ,

ಗ್ರಾ.ಕಾ.ಬಿ.ಕ.				ಬಿ.ಕ.
ಮಾಡಿದೇವಿ	=	ಮಾಡ + ಇದ + ಏವಿ	=	ಮಾಡಿದೇವಿ
ಹಿಡಿದರು	=	ಹಿಡಿ + ದ + ಅರು	=	ಹಿಡಿದರು

ಹಾಕಿದಿದಿ	ಹಾಕಿ + ದ್ + ಇದಿ	ಹಾಕಿದಿದಿ
ಸತ್ತನು	ಸಾಯ್ + ತ್ + ಅನು	ಸತ್ತನು

(ಇ) ಭವಿಷ್ಯತ್ಕಾಲ:

ಕನ್ನಡಕ್ಕೆ ಸಾಮಾನ್ಯವಾಗಿರುವಂತೆ ಇಲ್ಲಿಯೂ ಭವಿಷ್ಯತ್ಕಾಲ ರೂಪ ಬಳಕೆಯಲ್ಲಿಲ್ಲ. ವರ್ತಮಾನ ಕಾಲದ ರೂಪಗಳಿಗೆ ಹಿಂದೆ ಭವಿಷ್ಯತ್ತಿನ ಅರ್ಥ ಕೊಡುವ ಪದಗಳು ಬಂದು ಭವಿಷ್ಯತ್ಕಾಲವನ್ನು ಸೂಚಿಸುತ್ತವೆ. ಈ ರೀತಿ ಗ್ರಾಮಾಯಣ ಕಾದಂಬರಿಯ ಬಿಜಾಪುರ ಕನ್ನಡ ಹಾಗೂ ಬಿಜಾಪುರ ಕನ್ನಡಗಳೆರಡರಲ್ಲೂ ಕಂಡುಬರುತ್ತವೆ.

1.1.2.6. ವಿಧ್ಯರ್ಥ:

-ಊನು, ವಿಧ್ಯರ್ಥ ಪ್ರತ್ಯಯವಾಗಿ ಕಂಡುಬರುತ್ತದೆ.

ಉದಾಹರಣೆಗೆ:

ಗ್ರಾ.ಕಾ.ಬಿ.ಕ.	ಬಿ.ಕ.
ತೊಗೊಳ್ಳೂನು	ಓದೂನು
ಹರಗಿಸಿಬಿಡೂನು	ಕೇಳೂನು
ಹೋಗೋಣು	ನೋಡೋಣು
ಮಾಡೂನು	ಮಾಡೂನು
ಬರೂನು	ಬರೂನು

1.1.2.7. ನಿಷೇಧ:

-ಉಲ್ಲ ಮತ್ತು -ಇಲ್ಲ ನಿಷೇಧಸೂಚಿಸುವ ಪ್ರತ್ಯಯಗಳು.

ಉದಾಹರಣೆಗೆ:

ಗ್ರಾ.ಕಾ.ಬಿ.ಕ.	ಬಿ.ಕ.
ಆಗೂದುಲ್ಲ	ಹೋಗೂದುಲ್ರಿ
ನೋಡೂದುಲ್ಲ	ಮಾಡೂದುಲ್ಲ
ಮಾಡೂದುಲ್ಲ	ಮಾಡಿಲ್ರಿ
ಹೇಳೂದುಲ್ಲ	ಕೇಳೂದುಲ್ಲ
ಬಂದಿಲ್ಲ	ಬಂದಿಲ್ಲ

1.1.3 ವಾಕ್ಯ ರಾಚನಿಕ ಮಟ್ಟದ ಹೋಲಿಕೆ

ವಾಕ್ಯ ಎಂದರೆ ಪೂರ್ಣ ಅರ್ಥಕೊಡುವ ಪದಗಳ ಒಂದು ಸಮೂಹವಾಗಿದೆ.

ಯಾವ ವಾಕ್ಯದಲ್ಲಿ ಕನಿಷ್ಠತಮವಾಗಿ ಒಂದು ಕ್ರಿಯಾಪದ (predicate) ಇರುತ್ತದೆಯೋ ಅಂತಹ ವಾಕ್ಯಗಳನ್ನು ಸರಳ ವಾಕ್ಯಗಳೆಂದು,

ಒಂದು ಸರಳ ಅಥವಾ ಪ್ರಧಾನ ವಾಕ್ಯವಿದ್ದು ಮತ್ತೆ ಕೆಲವು ಆಶ್ರಿತ ಉಪವಾಕ್ಯಗಳಿದ್ದರೆ ಅಂತಹ ವಾಕ್ಯವನ್ನು ಮಿಶ್ರವಾಕ್ಯವೆಂದು,

ಯಾವ ವಾಕ್ಯಗಳಲ್ಲಿ ಒಂದಕ್ಕಿಂತ ಹೆಚ್ಚು ಪ್ರಧಾನ ಅಥವಾ ಸರಳವಾಕ್ಯಗಳಿದ್ದು ಕೆಲವು ಆಶ್ರಿತ ಉಪವಾಕ್ಯಗಳಿರುತ್ತವೆಯೋ ಅಂತಹ ವಾಕ್ಯಗಳನ್ನು ಸಂಯುಕ್ತ ವಾಕ್ಯಗಳೆನ್ನುತ್ತಾರೆ. ಹೀಗೆ ವಾಕ್ಯಗಳನ್ನು ಮೂರು ಭಾಗ ಮಾಡಿಕೊಳ್ಳಬಹುದು.

ಇಲ್ಲಿ ಈ ಮೂರು ರೀತಿಯ ವಾಕ್ಯಗಳನ್ನು ಗ್ರಾಮಾಯಣ ಕಾದಂಬರಿಯ ಬಿಜಾಪುರ ಕನ್ನಡದಿಂದ ಆರಿಸಿಕೊಂಡು ಬಿಜಾಪುರ ಜಿಲ್ಲೆಯಲ್ಲಿ ಬಳಕೆಯಲ್ಲಿರುವ ಕನ್ನಡ ವಾಕ್ಯಗಳೊಡನೆ ಹೋಲಿಕೆ ಮಾಡಿ ತೋರಿಸಲಾಗಿದೆ. ಮೊದಲಿಗೆ,

1.1.3.1. ಸರಳ ವಾಕ್ಯಗಳು

ಗ್ರಾ.ಕಾ.ಬಿ.ಕ.ದಲ್ಲೂ ಒಂದು ಕರ್ತೃ, ಒಂದು ಕ್ರಿಯಾಪದವಿರುವ ಸರಳ ವಾಕ್ಯಗಳಿವೆ. ಇದೇ ರೀತಿ ಬಿಜಾಪುರ ಕನ್ನಡದಲ್ಲೂ ಇವೆ.

ಉದಾಹರಣೆಗೆ,

(1) ನಡಿ ತಂಗಿ (ಗ್ರಾ.ಕಾ.ಬಿ.ಕ.)
    ಬಾ ತಮ್ಮಾ (ಬಿ.ಕ.)

(2) ನೀ ಹೂಂ ಅನ್ನು (ಗ್ರಾ.ಕಾ.ಬಿ.ಕ.)
    ನೀ ಹೋಗನ್ನು (ಬಿ.ಕ)

(3) ಆಗಲಿ ಅಪ್ಪಾರೆಪ್ಪ (ಗ್ರಾ.ಕಾ.ಬಿ.ಕ.)
    ಬರ್ರೀ ಶೆಟ್ರ (ಬಿ.ಕ.)

(4) ಬಡವರೋ ಎಷ್ಟ ನಾವು (ಗ್ರಾ.ಕಾ.ಬಿ.ಕ)

ರೊಕ್ಕ ಇರೋವ್ರು ನಾವು

(5) ಗಾಡಿ ಎಲ್ಲೈತಿ?

ಮನಿ ಎಲ್ಲೈತಿ?

1.1.3.2. ಮಿಶ್ರ ವಾಕ್ಯಗಳು

ಗ್ರಾ.ಕಾ.ಬಿ.ಕ.ದಲ್ಲಿ ಒಂದು ಸರಳ ಅಥವಾ ಪ್ರಧಾನ ವಾಕ್ಯವಿದ್ದು ಮತ್ತೆ ಕೆಲವು ಆಶ್ರಿತ ಉಪವಾಕ್ಯಗಳಿದ್ದು ಮಿಶ್ರವಾಕ್ಯಗಳಾಗಿ ಕಾಣಿಸಿಕೊಳ್ಳುತ್ತವೆ. ಅದೇ ರೀತಿ ಬಿಜಾಪುರ ಕನ್ನಡದಲ್ಲೂ ಕಾಣಿಸಿಕೊಳ್ಳುತ್ತವೆ.

ಉದಾಹರಣೆಗೆ:

(1) ಅಕಿನ್ನ ಕರೆಸಿ ಕೇಳಬೇಕಂತ, ಅರಿ ಹೇಳತಾಳ (ಗ್ರಾ.ಕಾ.ಬಿ.ಕ)

ನಾಳೆ ಬಂದು ಸೋಮ್ಯಾನ ನೋಡ್ಬೇಕಂತೇಳಿ ಶಂಕ್ರ್ಯಾ ಹೇಳಿಂ (ಬಿ.ಕ.)

(2) ನೀ ಊರ ಬಿಡುವಾಗ ನಿಮ್ಮ ಕಾಕಾಗ ಏನರ ಜಡ್ಡ ಆಗಿತ್ತೇನು? (ಗ್ರಾ.ಕಾ.ಬಿ.ಕ.)

ಅಂವಾ ಸಿನಿಮಾ ನೋಡಾಕ ಹೋಗ್ಯಾನಂತೇಳಿ ಸಂಗ್ಯಾ ಹೇಳಿಂ (ಬಿ.ಕ.)

(3) ಪಾಟೀಲ್ರ ಭೂಮ್ಯಾಗ ಅದೀವಂತ ತಿಳಿದೀ ಏನಲೇ ಮಳ್ಳ? (ಗ್ರಾ.ಕಾ.ಬಿ.ಕ.)

ಲೋಕಪುರದಾಗ ನನ್ನ ಹೆಂಡ್ತಿ ಮನ್ಯಾಗ ಇದೀನಂತ ತಿಳಿದಿದೇನೆಲ್ಲ ಬಸ್ಯಾ (ಬಿ.ಕ.)

(4) ಆಉ ನಾನು ಹೋಗಿ ಇಸ್ಮೂನ್ನ ಕರದ ಬರ್ತೀನಿ (ಗ್ರಾ.ಕಾ.ಬಿ.ಕ)

ನೀನೋಗಿ ಇಸ್ಮೂನ್ನಂದನರೆ ಅವನ್ನ ಕರಂ ಬಾ (ಬಿ.ಕ.)

(5) ಅವರಿಬ್ಬರಿಗೂ ಬರಾಕ ಅಗೂದುಲ್ಲ ಅಂತ ಹೇಳಿ ಕಳಿಸ್ಯಾರ ಮಾಮಾ (ಗ್ರಾ.ಕಾ.ಬಿ.ಕ.)

ಅವರಿಬ್ಬರು ಜರೂರ್ ಬರ್ತೀವಂತ ಹೇಳಿ ಕಳಿಸ್ಯಾರವಾ (ಬಿ.ಕ.)

(6) ಒಟು ತಂಬಾಕ ಇದ್ದರ ಕೊಡರಿ (ಗ್ರಾ.ಕಾ.ಬಿ.ಕ.)

ತಟಕ ಅನ್ನಸಾರ ಇತ್ತಂದ್ರ ಕೊಡ್ರಲೇ (ಬಿ.ಕ.)

ಇಲ್ಲಿ ವಾಕ್ಯವನ್ನು ಬಿಡಿಸಿ ವಿವರಿಸುವುದಾದರೆ ಮೊದಲ ವಾಕ್ಯ ಗ್ರಾ·ಕಾ·ಬಿ·ಕ·ದಲ್ಲಿ

" ಅರಿನ್ನ ಕರೆಸಿ ಕೇಳಬೇಕು " ಎಂಬುದು ಹಾಗು ಬಿಜಾಪುರ ಕನ್ನಡದಲ್ಲಿ

" ನಾಳೆ ಬಂದು ಸೋಮ್ಯಾನ ನೋಡ್ಬೇಕು " ಎಂಬುದು ಸರಳ ಅಥವಾ ಪ್ರಧಾನ ವಾಕ್ಯಗಳಾದರೆ,

ಗ್ರಾ·ಕಾ·ಬಿ·ಕ·ದಲ್ಲಿ

" ಈಕಿ ಹೇಳತಾಳ " ಎಂಬುದು ಹಾಗೂ

ಬಿಜಾಪುರ ಕನ್ನಡದಲ್ಲಿ

" ಶಂಕ್ರ್ಯಾ ಹೇಳಿದ " ಎಂಬುದು ಆಶ್ರಿತ ಉಪವಾಕ್ಯಗಳಾಗಿವೆ·

1·1·3·3· ಸಂಯುಕ್ತ ವಾಕ್ಯಗಳು

ಗ್ರಾ·ಕಾ·ಬಿ·ಕ·ದಲ್ಲೂ ಒಂದಕ್ಕಿಂತ ಹೆಚ್ಚು ಪ್ರಧಾನ ಅಥವಾ ಸರಳ ವಾಕ್ಯಗಳಿದ್ದು ಕೆಲವು ಆಶ್ರಿತ ಉಪವಾಕ್ಯಗಳಿರುವ ಸಂಯುಕ್ತ ವಾಕ್ಯಗಳಿವೆ· ಇದೇ ರೀತಿ ಬಿಜಾಪುರ ಕನ್ನಡದಲ್ಲೂ ಇವೆ·

<u>ಉದಾಹರಣೆ:</u>

(1) ನಾ ಯಾಕ ಎಬ್ಬಿಸಲಿ? ಆದರ ಯಾವಾಗ ನಿಮ್ಮ ಮಕಾ ನೋಡಿದರ ಏನೋ ಚಿಂತಿ ಹಿಡದ್ಹಂಗ ಕಾಣತೇತಿ? (ಗ್ರಾ·ಕಾ·ಬಿ·ಕ·)

ನಾ ರಾಮಪ್ಪನ ಮನಿಗಿ ಹೋಗಿದ್ದಿ, ಆದರ ಅಂವ ಮನ್ಯಾಗ ಇರಲಿಲ್ಲ (ಬಿ·ಕ·)

(2) ಮುರಿಯಬಹುದು, ತುಂಡಾಗಬಹುದು, ಆದರೆ ಬಾಗಲಿಕ್ಕಿಲ್ಲ· (ಗ್ರಾ·ಕಾ·ಬಿ·ಕ·)

ಚಾ ಕುಡಿಯಾಕಂತೇಳಿ ಅಂಗಡಿಗೋಗಿದ್ದ, ಆದರ ಅಲ್ಲಿ ಚಾನೆ ಇರಲಿಲ್ಲ (ಬಿ·ಕ·)

1.1.4. ಶಬ್ದಕೋಶೀಯ ಮಟ್ಟದ ಹೋಲಿಕೆ

ಗ್ರಾಮಾಯಣ ಕಾದಂಬರಿಯಲ್ಲಿನ ಬಿಜಾಪುರ ಕನ್ನಡದ ಕೆಲವು ಪದಗಳ ಜೊತೆ ಬಿಜಾಪುರ ಜಿಲ್ಲೆಯಲ್ಲಿ ಬಳಕೆಯಲ್ಲಿರುವ ಕನ್ನಡದ ಕೆಲವು ಪದಗಳನ್ನು ಅರ್ಥದ ದೃಷ್ಟಿಕೋನದಿಂದ ಶಬ್ದಕೋಶೀಯ ಮಟ್ಟದಲ್ಲಿ ಹೋಲಿಕೆ ಮಾಡಿ ತೋರಿಸಲಾಗಿದೆ.

ಗ್ರಾ.ಕಾ.ಬಿ.ಕ.		ಅರ್ಥ		ಬಿ.ಕ.
ಅಂಗಾರ	—	ಹಾಗಾದರೆ	—	ಅಂಗಾರ
ಅಪೇಸಿ	—	ಮುರಾಝ	—	ಅಪೇಸಿ
ಇನಮು	—	ಅಳು	—	ಇನಮು
ಈರ್ಷೆ	—	ದ್ವೇಷ	—	ಈರ್ಷೆ
ಉದ್ರಿ	—	ಸಾಲ	—	ಉದ್ರಿ
ಎಜ್ಜಾ	—	ಅಜ್ಜ	—	ಎಜ್ಜಾ
ಐತಿ	—	ಇದೆ	—	ಐತಿ
ಒದರಿ	—	ಒದೆ	—	ಒದರಿ
ಓಟು	—	ಸ್ವಲ್ಪ	—	ಓಟು
ಕಾಕಾ	—	ಚಿಕ್ಕಪ್ಪ	—	ಕಾಕಾ
ಕಿಡಕಿ	—	ಕಿಟಕಿ	—	ಕಿಡಕಿ
ಕಿಮ್ಮತ್ತು	—	ಬೆಂಬಲ	—	ಕಿಮ್ಮತ್ತು
ಕಿಸೆ	—	ಜೇಬು	—	ಕಿಸೆ
ಕೀಲಿ	—	ಬೀಗ	—	ಕೀಲಿ
ಕುಳಬಾನ	—	ಕಟ್ಟಿಗೆ, ಸೌದೆ	—	ಕುಳಬಾನ
ಕಾಣ್ಣಾ	—	ಕೋಣ	—	ಕಾಣ್ಣಾ
ಖರೆ	—	ನಿಜ	—	ಖರೆ
ಖೂನಿ	—	ಕೊಲೆ	—	ಖೂನಿ

ಗ್ರಾ.ಕಾ.ಬ.ಕ.		ಅರ್ಥ		ಬ.ಕ.
ಗಡಾನ	—	ಬೇಗನೆ	—	ಗಡಾನ
ಗಾತ	—	ಅನಾಹುತ	—	ಗಾತ
ಗುನ್ನ	—	ಗುರಿ ಇಡುವುದು	—	ಗುನ್ನ
ಗೊಂಗಡೀ	—	ಕಂಬಳಿ	—	ಗೊಂಗಡೀ
ಗೋಣು	—	ಕುತ್ತಿಗೆ	—	ಗೋಣು
ಗ್ವಾಡಿ	—	ಗೋಡೆ	—	ಗ್ವಾಡಿ
ಚಲೋ	—	ಒಳ್ಳೆಯದು	—	ಚಲೋ
ಚಿಗಪ್ಪ	—	ಚಿಕ್ಕಪ್ಪ	—	ಚಿಗಪ್ಪ
ಚಿಗವ್ವ	—	ಚಿಕ್ಕಮ್ಮ	—	ಚಿಗವ್ವ
ಚಿಗರೀ	—	ಜಿಂಕೆ	—	ಚಿಗರೀ
ಚುಂಗು	—	ಅರಿವೆಯ ತುಣುಕು	-	ಚುಂಗು
ಜಡಾ	—	ತೊಂದರೆ	—	ಜಡಾ
ಜರಾ	—	ಸ್ವಲ್ಪ	—	ಜರಾ
ಜಳಕಾ	—	ಸ್ನಾನ	—	ಜಳಕಾ
ಜಡ್ಡ	—	ಜ್ವರ	—	ಜಡ್ಡ
ಜೋಡಿ	—	ಜೊತೆ	—	ಜೋಡಿ
ಜ್ವಾಕಿ	—	ಜೋಪಾನ	—	ಜ್ವಾಕಿ
ಜ್ವಾಳಾ	—	ಜೋಳ	—	ಜ್ವಾಳಾ
ಝಳಾ	—	ಬಿಸಿ	—	ಝಳಾ
ತಗಾಯಸಾಲ	—	ಬೆಳೆಸಾಲ	—	ತಗಾಯಸಾಲ
ತಲೀ	—	ತಲೆ	—	ತಲೀ
ತಲೆಶೂಲಿ	—	ತಲೆನೋವು	—	ತಲೆಶೂಲ
ತಾಬಡತೋಬ	—	ಬೇಗನೆ	—	ತಾಬಡತೋಬ

ಗ್ರಾ.ಕಾ.ಬ.ಕ.		ಅರ್ಥ		ಬ.ಕ.
ತಂಬಾಕ	—	ಹೊಗೆಸೊಪ್ಪು	—	ತಂಬಾಕ
ತ್ಯಾಬೇ	—	ಒಡೆತನ	—	ತ್ಯಾಬೇ
ತ್ರಾನ	—	ತೊಂದರೆ	—	ತ್ರಾನ
ದಗದ	—	ಕೆಲಸ	—	ದಗದ
ದೇಶನಿಕಾಳಿ	—	ಸನ್ಯಾಸಿ	—	ದೇಶನಿಕಾಳಿ
ಧೊರಿ	—	ರಾಜ	—	ಧೊರಿ
ನಡಕ	—	ಮಧ್ಯೆ	—	ನಡಕ
ನಶೀಬ	—	ಅದೃಷ್ಟ	—	ನಶೀಬ
ನೇಮಣೂಕಿ	—	ನೇಮಕಾತಿ	—	ನೇಮಣೂಕಿ
ಪದಾ	—	ಹಾಡು	—	ಪದಾ
ಪಾಡ	—	ಒಳ್ಳೆಯದು	—	ಪಾಡ
ಪಾಳೀ	—	ಸರದಿ	—	ಪಾಳೀ
ಪುಕಟ	—	ಪುಕ್ಕಟೆ	—	ಪುಕಟ
ಪೋತಿ	—	ಮರಿ	—	ಪೋತಿ
ಪಂಚನಾಮೆ	—	ಮಹಜರು	—	ಪಂಚನಾಮೆ
ಪಂಚರು	—	ಮುಖಂಡರು	—	ಪಂಚರು
ಪುಂಡಾ	—	ಗೂಂಡಾ	—	ಪುಂಡಾ
ಪ್ಯಾರಿ	—	ಮೂರ್ಖ	—	ಪ್ಯಾರಿ
ಬ್ಯಾನಿ	—	ನೋವು	—	ಬ್ಯಾನಿ
ಬ್ಯಾಸರ	—	ಬೇಸರ	—	ಬ್ಯಾಸರ
ಭಾಳಾ	—	ಬಹಳ	—	ಭಾಳಾ
ಭುಲಾಪಿ	—	ಆಸೆ	—	ಭುಲಾಪಿ

ಗ್ರಾ·ಕಾ·ಬ·ಕ·		ಅರ್ಥ		ದ·ಕ·
ಮಜಕೂರ	—	ಸುದ್ದಿ	—	ಮಜಕೂರ
ಮರ್ಜಿ	—	ಆಸಕ್ತಿ	—	ಮರ್ಜಿ
ಮನಿ	—	ಮನೆ	—	ಮನಿ
ಮರಿ	—	ಉತ್ತರಾಧಿಕಾರಿ	—	ಮರಿ
ಯಕ್ಕಾ	—	ಅಕ್ಕ	—	ಯಕ್ಕಾ
ಯಣ್ಣಾ	—	ಅಣ್ಣ	—	ಯಣ್ಣಾ
ಯಪ್ಪಾ	—	ಅಪ್ಪ	—	ಯಪ್ಪಾ
ಯವ್ವಾ	—	ಅವ್ವ, ತಾಯಿ	—	ಯವ್ವಾ
ಯಾಳೇ	—	ವೇಳೆ	—	ಯಾಳೇ
ರಟ್ಟ	—	ತೋಳು	—	ರಟ್ಟ
ರಾಸ್ತ	—	ಸರಿ	—	ರಾಸ್ತ
ರೊಕ್ಕ	—	ಹಣ	—	ರೊಕ್ಕ
ವಾಜಿಬಿ	—	ಒಳಿತು	—	ವಾಜಿಬಿ
ವಾಡೆ	—	ಬೀದಿ	—	ವಾಡೆ
ನಬೂಳಾ	—	ತೆಳ್ಳಗಿನ, ನುಣುಪಾದ	—	ನಬೂಳಾ
ಸರಬರಾಯಿ	—	ಸಾರಾಯಿ	—	ಸರಬರಾಯಿ
ಸವಡು	—	ಸಮಯ	—	ಸವಡು
ಸಾರೆ	—	ಒಂದು ಸಾರಿ	—	ಸಾರೆ
ಸೀರಿ	—	ಸೀರೆ	—	ಸೀರಿ
ಸಂಶೇ	—	ಸಂಶಯ	—	ಸಂಶೇ
ಸಾವ್ರಿ	—	ವ್ಯಕ್ತಿ	—	ಸಾವ್ರಿ
ಹಮ್ಮಿಣಿ	—	ಹಣದ ಗಂಟು	—	ಹಮ್ಮಿಣಿ

ಗ್ರಾ·ಕಾ·ಬಿ·ಕ·		ಅರ್ಥ		ಬಿ·ಕ·
ಹರ್ಗ	—	ಸುರಿಂ	—	ಹರ್ಗ
ಹೇಣತಿ	—	ಹೆಂಡತಿ	—	ಹೇಣತಿ
ಹೊಳಿ	—	ಹೊಳೆ, ನದಿ	—	ಹೊಳಿ

ಒಟ್ಟಾರೆ ಗ್ರಾಮಾಯಣ ಕಾದಂಬರಿಯ ಬಿಜಾಪುರ ಕನ್ನಡಕ್ಕೂ ಬಿಜಾಪುರ ಜಿಲ್ಲೆಯ ಕನ್ನಡಕ್ಕೂ ಧ್ವನಿಮಾಮಟ್ಟದಲ್ಲಾಗಲಿ, ಆಕೃತಿಮಾಮಟ್ಟದಲ್ಲಾಗಲಿ, ವಾಕ್ಯರಾಚನಿಕ ಮಟ್ಟದಲ್ಲಾಗಲಿ ಮತ್ತು ಶಬ್ದಕೋಶೀಯ ಮಟ್ಟದಲ್ಲಾಗಲಿ ವ್ಯತ್ಯಾಸವಿಲ್ಲ. ಆದ್ದರಿಂದ ಗ್ರಾಮಾಯಣ ಕಾದಂಬರಿಯ ಭಾಷೆಯ ವ್ಯಾಕರಣ ಬರೆಯುವ ಯತ್ನ ಅವಿವೇಕದಿಂದ ಕೂಡಿದ್ದು.

—

ಅಧ್ಯಾಯ - ೨

ವಸ್ತು-ಆಕೃತಿ ವೈರುಧ್ಯ
ಮತ್ತು
ದೇವನೂರರ ಕೃತಿಗಳು

ಅಧ್ಯಾಯ – 2

ವಸ್ತು – ಆಕೃತಿ ವೈರುಧ್ಯ ಮತ್ತು ದೇವನೂರರ ಕೃತಿಗಳು

ಅರ್ಥ/ವಸ್ತು (content) ಮತ್ತು ಆಕೃತಿ/ರೂಪ (Form) ಭಾಷೆಯ ಮೂಲಭೂತ ವೈರುಧ್ಯ. ಶಾಸ್ತ್ರೀಯವಾಗಿ ನೋಡಿದರೆ ವಸ್ತು ಮತ್ತು ಆಕೃತಿಗಳ ನಡುವಣ ಸಂಬಂಧ ಅವೈಚಾರಿಕ (arbitrary). ಆದರೆ ಭಾಷಿಕನಿಗೆ ಅದು ಸ್ವಾಭಾವಿಕ, ಪ್ರಕೃತಿ–ಸಹಜವಾದುದು. ಈ ಸ್ವಾಭಾವಿಕ ಸಂಬಂಧ ಸಾಹಿತ್ಯಿಕ ಕೃತಿಯ ಭಾಷೆಗೂ ಅನ್ವಯಿಸುತ್ತದೆ. ಅಲ್ಲದೆ ಇನ್ನೂ ಹೆಚ್ಚಿನ ಅರ್ಥದಲ್ಲಿ ಅದು ನಿಜ. ಒಂದು ಸಫಲ ಸಾಹಿತ್ಯಿಕ ಹೇಳಿಕೆಯ ಆಕೃತಿ ಅದರ ವಸ್ತುವನ್ನು ನಿರ್ಧರಿಸುತ್ತದೆ. ಅಂದರೆ ಆ ಸಾಹಿತ್ಯಿಕ ಹೇಳಿಕೆಯ ಆಕಾರವನ್ನು ಬದಲಾಯಿಸಿದರೆ ಅದು ಬಿಂಬಿಸುವ ವಸ್ತುವೂ ಬದಲಾಗುತ್ತದೆ. ದೇವನೂರರ ಕೃತಿಗಳಲ್ಲಿನ (ನಿರೂಪಕನ) ಭಾಷೆ ವಿಶಿಷ್ಟವಾದುದು. ಈ ಭಾಷೆಯ ಆಕೃತಿಯನ್ನು ಬದಲಾಯಿಸಿದರೆ ವಸ್ತು ಬದಲಾಗುತ್ತದಾ? ವಸ್ತು ಬದಲಾಗದಿದ್ದರೆ ಆಕೃತಿ ಬದಲಾವಣೆಯಿಂದ ಬದಲಾಗುವುದಾದರೂ ಏನು?

ಈ ಪ್ರಶ್ನೆಗೆ ಉತ್ತರ ಈ ಅಧ್ಯಯನದ ಗುರಿಯಾಗಿರುವುದರಿಂದ ಇಲ್ಲಿ ಅದನ್ನು ಮೂರು ದೃಷ್ಟಿಕೋನಗಳಿಂದ ನೋಡಲಾಗುತ್ತದೆ. ಅವುಗಳೆಂದರೆ ದೇವನೂರರ ಕೃತಿಗಳಲ್ಲಿ ಕಂಡುಬರುವ ವಸ್ತು, ದೇವನೂರರ ಕೃತಿಗಳಲ್ಲಿ ಭಾಷಿಕ ಆಕಾರ, ಕತೆಗಳ ಮೂಲಭೂತ 'ತೀವ್ರತೆ' ಹಾಗೂ ಗಾಂಭೀರ್ಯ, ಘನತೆ ಮತ್ತು ನಿರೂಪಕನ ಭಾಷೆ: ಪರಸ್ಪರ ಸಂಬಂಧ.

2.1. ದೇವನೂರರ ಕೃತಿಗಳಲ್ಲಿ ಕಂಡುಬರುವ ವಸ್ತು

ಯಾವುದೇ ಒಂದು ಕೃತಿಯು ಒಂದು ವಸ್ತುವನ್ನು ಒಳಗೊಂಡಿದ್ದು ಅದರ ಸುತ್ತ ಕಥೆ ಹೆಣೆಯಲ್ಪಟ್ಟಿರುತ್ತದೆ. ಇದೇ ರೀತಿ ದೇವನೂರರ ಕೃತಿಗಳು ಕೂಡ. ಇಲ್ಲಿ ಕಂಡುಬರುವ ವಸ್ತುವನ್ನು ಜೀವನದರ್ಶನ, ಪ್ರತಿಭಟನೆ ಮತ್ತು ಯಥಾಸ್ಥಿತಿ, ವಸ್ತುಸ್ಥಿತಿಯ ಸ್ವೀಕಾರ, ನೀತಿ ಮೀರಿದ ಜೀವನ ಗ್ರಹಿಕೆ, ಹಾಗೂ ದಲಿತ ಜೀವನ ಚಿತ್ರಣವೆಂದು ಐದು ವಿಭಾಗ ಮಾಡಿಕೊಂಡು ನೋಡಲಾಗಿದೆ.

ಅ) ಜೀವನ ದರ್ಶನ

ಜೀವನ ದರ್ಶನ ಎಂದರೆ ಕಥೆಗಾರನ ಜೀವನದರ್ಶನವಲ್ಲ. ಇಲ್ಲಿ ಕಥೆಗಾರ ತಾನು ಜೀವನವನ್ನು ನೋಡುವ ರೀತಿಯನ್ನು ಬಿಚ್ಚಿಕೊಡುವುದಿಲ್ಲ. ಇದ್ದುದನ್ನು ಇದ್ದಂತೆ ಚಿತ್ರಿಸಿಡುತ್ತಾನೆ. ಈ ಚಿತ್ರಣಗಳು, ಜೀವನ ನೋಟಗಳು ಕೆಳಕಂಡಂತಿವೆ.

'ಮಾರಿಕೊಂಡವರು' ಕಥೆಯಲ್ಲಿ ದುರ್ಬಲ ವರ್ಗದ ಬೀರ, ಲಕ್ಷ್ಮಿಯರನ್ನು ಆರ್ಥಿಕವಾಗಿ ಪ್ರಬಲವಾಗಿರುವ ಗೌಡರ ಆ ಮೂಲಕ ಮಗ ಶಿವಪ್ಪ ಪರೋಕ್ಷವಾಗಿ ಶೋಷಣೆ ನಡೆಸುತ್ತಿದ್ದು, ಕ್ರಮೇಣ ಲಕ್ಷ್ಮಿಯನ್ನು ಲೈಂಗಿಕವಾಗಿ ವಶಪಡಿಸಿಕೊಳ್ಳುವುದರ ಮೂಲಕ ನೇರ ಶೋಷಣೆ ಮಾಡುತ್ತಾನೆ. ಇಲ್ಲಿ ಆರ್ಥಿಕವಾಗಿ ದುರ್ಬಲರಾಗಿರುವ ಬೀರ, ಲಕ್ಷ್ಮಿಯರಿಗೆ ಸ್ಥಿರವಾದ ನೆಲೆಯಿರುವುದಿಲ್ಲ. ಆದಕಾರಣ ಆಶ್ರಯ ನೀಡಿದವರಿಂದ ಸಹಿಸಲಸಾಧ್ಯವಾದ ಅವಮಾನವಾದರೂ ಅದನ್ನು ಸಹಿಸಿಕೊಂಡು, ಹೀನ ಬದುಕಿನಲ್ಲೇ ಸುಖಕಾಣುತ್ತಾ ಜೀವನ ನಡೆಸುತ್ತಾರೆ.

'ಗ್ರಸ್ತರು' ಕಥೆಯ ನಾಯಕ ಒಂದು ಬಡಕುಟುಂಬಕ್ಕೆ ಸೇರಿದ ವಿದ್ಯಾವಂತ ಯುವಕ. ಒಂದು ಕಡೆ ಲಕ್ವ ಹೊಡೆದಿರುವ ರೋಗಗ್ರಸ್ತ ತಾಯಿ, ಮತ್ತೊಂದು ಕಡೆ ಗೌಡರ ಬಳಿ ಮಾಡಿರುವ ಸಾಲದ ಹೊರೆ, ಇವು ಅವನ ಮುಂದಿರುವ ಸಮಸ್ಯೆಗಳು. ಈತನಿಗೆ ಸಮಾಜದಲ್ಲಿನ ವ್ಯವಸ್ಥೆಯನ್ನು ಪ್ರತಿಭಟಿಸುವ ತುಡಿತ ಇದ್ದರೂ ಅದನ್ನು ಇತರರಿಗೆ ಮನವರಿಕೆ ಮಾಡುವ ಸಿದ್ಧತೆ ಇಲ್ಲ. ಇದರಿಂದ ಸ್ವಾವಲಂಬಿ ಜೀವನ ನಡೆಸಲು ಆಗದೇ ಶೋಷಣೆಯನ್ನು ಪ್ರತಿಭಟಿಸಲೂ ಆಗದೇ ಒಂದು ರೀತಿಯ ಜಂಜಾಟದಲ್ಲಿ ಸಿಕ್ಕಿ ಒದ್ದಾಡುತ್ತಾನೆ.

'ಒಂದು ದಹನದ ಕಥೆ'ಯಲ್ಲಿ ಕಥಾನಾಯಕ ಮೇಲುವರ್ಗದ ಹುಡುಗಿಯನ್ನು ಪ್ರೀತಿಸಿರುತ್ತಾನೆ. ತಾಯಿ ತಂದೆ ಇಲ್ಲ. ಅನಾಥನಾಗಿರುವ ಈತ ವಿದ್ಯಾವಂತ. ನೌಕರಿ ಸಿಕ್ಕ ಖುಷಿಯಲ್ಲಿ ಊರಿಗೆ ಬಂದಾಗ ಪ್ರೀತಿಸಿದಾಕೆ ಗರ್ಭಿಣಿಯಾಗಿರುವ ವಿಷಯ, ವಿವಾಹಪೂರ್ವ ಸಂಬಂಧವಾದ ಕಾರಣ ದೈತ್ಯ ಸಮಸ್ಯೆಯಾಗಿ ನಿಲ್ಲುತ್ತದೆ. ಇದರಿಂದ ಗ್ರಾಮೀಣ ಪರಿಸರದ ಜಾತಿ ವ್ಯವಸ್ಥೆಯನ್ನು ಎದುರಿಸಲಾರದೆ ಹಾಗೂ ತನ್ನ ಪ್ರಾಮಾಣಿಕ ನಿಲುವನ್ನು ಬದಲಿಸಿಕೊಳ್ಳಲಾರದೆ ಆಕೆಯನ್ನು ಪಟ್ಟಣಕ್ಕೆ ಕರೆದುಕೊಂಡು ಹೋಗಿ ವಿವಾಹವಾಗುತ್ತಾನೆ. ಈತ ವ್ಯವಸ್ಥೆಗೆ

ವಿರುದ್ಧವಾಗಿ ನಡೆದ ಕಾರಣ ಇವನ ಅಜ್ಜ ತೀರಿಕೊಂಡಾಗ ಶವಸಂಸ್ಕಾರಕ್ಕೆ ಹಳ್ಳಿಯ ಅನುಮತಿಯನ್ನು ನಿರಾಕರಿಸುತ್ತದೆ. ಇದರಿಂದ ಕಥಾನಾಯಕ ಅಜ್ಜಯ ಶವವನ್ನು ಹುಲ್ಲಿಯ ಗಳುಗಳಿಂದ ತಾನೊಬ್ಬನೇ ಸುಡುತ್ತಾನೆ. ಅಂದರೆ ವ್ಯವಸ್ಥೆಯ ವಿರುದ್ಧ ನಡೆದವರ ಮೇಲೆ ಗ್ರಾಮೀಣ ಸಮಾಜವು ಮಾನವೀಯತೆಯನ್ನು ಮರೆತು ಕ್ರೌರ್ಯದಿಂದ ನಡೆದುಕೊಳ್ಳುವ ಗ್ರಾಮೀಣ ಬದುಕಿನ ಜೀವನ ಚಿತ್ರಣ ಇಲ್ಲಿ ಕಂಡುಬರುತ್ತದೆ.

'ದತ್ತ' ಕತೆಯಲ್ಲಿ ದತ್ತುಹೋಗಿದ್ದಂತ ನಾಯಕ ದತ್ತು ಮನೆಯನ್ನು ತ್ಯಜಿಸಿ ಹೆತ್ತವರೊಡನೆ ಜೀವಿಸಲು ಹಳ್ಳಿಗೆ ವಾಪಸ ಬರುತ್ತಾನೆ. ಆದರೆ ಆತನ ತಂದೆತಾಯಿ ಅವನ ಆಸೆಆಕಾಂಕ್ಷೆಗಳಿಗೆ ಬೆಲೆಕೊಡದೇ ದತ್ತಕದ ಮೇಲೆ ದತ್ತಕ ಕೊಡಬಯಸುತ್ತಾರೆ. ಅಲ್ಲದೆ ಕುಟುಂಬದ ಇನ್ನಿತರ ಸದಸ್ಯರು ಇವನನ್ನು ಹೊರಗಿನವರಂತೆ ನೋಡುತ್ತಾರೆ. ಇದರಿಂದ ಮಾನಸಿಕ ವೇದನೆಗೆ ಒಳಗಾಗಿ ಕಥಾನಾಯಕ ಎಲ್ಲರಿಂದ ಬಹುದೂರ ಹೊರಟುಹೋಗುತ್ತಾನೆ. ಇಲ್ಲಿ ಕರುಳಿನ ಸಂಬಂಧಕ್ಕೆ ಯಾವ ಬೆಲೆಯನ್ನು ಕೊಡದೇ ಜೀವಿಸುವ ತಾಯಿತಂದೆಯರ ಜೀವನದರ್ಶನವಾಗುತ್ತದೆ. ಆದರೂ ಮಕ್ಕಳ ಸಂಖ್ಯೆಯನ್ನು ನೋಡಿದಾಗ ಬಡತನದಿಂದಾಗಿ ಆ ತಂದೆತಾಯಿಗಳು ಹೀಗೆ ನಡೆದುಕೊಳ್ಳಲು ಅನಿವಾರ್ಯವಾಯಿತು ಎಂದುಕೊಳ್ಳಬಹುದು. ಆದರೆ ಕಥೆಯ ಕೊನೆಯಲ್ಲಿ ಮಗ ಮನೆಬಿಟ್ಟು ಹೋಗಿರುವ ವಿಷಯ ಗೊತ್ತಾಗಿ ತಾಯಿ ಮಗನಿಗಾಗಿ ಪರಿತಪಿಸದೆ ಒಳಗೆ ಬಂದು ಪೆಟ್ಟಿಗೆ ತೆಗೆದುನೋಡಿ, "ಹಣ ಮುಟ್ಟಿಲ್ಲ" ಎಂದು ಜೋರಾಗಿ ಕೂಗಿಕೊಳ್ಳುವುದನ್ನು ನೋಡಿದರೆ ಇವರಿಗೆ ಮಗನಿಗಿಂತ ಹಣವೇ ಮುಖ್ಯವಾದುದು ಎಂಬ ವಿಷಯ ಸ್ಪಷ್ಟವಾಗುತ್ತದೆ.

'ಡಾಂಬರು ಬಂದುದು' ಕಥೆಯಲ್ಲಿ ಊರಿನ ಪಟೇಲ ಹೊಸೂರಿನ ರಸ್ತೆಗೆ ಡಾಂಬರು ಹಾಕಬೇಕೆಂಬ ಸರ್ಕಾರಿ ಆಜ್ಞೆಯನ್ನು ವಶಪಡಿಸಿಕೊಳ್ಳುತ್ತಾನೆ ಹಾಗೂ ತನ್ನ ಇಚ್ಛೆಗೆ ತಕ್ಕಂತೆ ರಸ್ತೆ ಕಾಮಗಾರಿಯಲ್ಲಿ ಹಣ ಉಳಿಸಿ, ಆ ಹಣದಿಂದ ದೇವಸ್ಥಾನ ಊರ್ಜಿತಗೊಳಿಸಲು ತೀರ್ಮಾನಿಸುತ್ತಾನೆ. ಆದರೆ ಅಕ್ಷರ ಜ್ಞಾನವುಳ್ಳ ಹಲವು ಪಡ್ಡೆಹುಡುಗರು ಪಾಳೆಗಾರಿಕೆಯಂತೆ ಕಾಣುವ, ಪಟೇಲರ ಈ ನಿಲುವನ್ನು ವಿರೋಧಿಸುತ್ತಾರೆ. ಅಲ್ಲದೆ ಪತ್ರಿಕೆಯ ವಾಚಕರವಾಣಿಗೆ

ಪತ್ರ ಬರೆದು ತಮ್ಮ ಅಸಮಾಧಾನವನ್ನು ವ್ಯಕ್ತಪಡಿಸುತ್ತಾರೆ. ಇದರಿಂದ ಗ್ರಾಮದ ಪರ ಮತ್ತು ವಿರೋಧ ಗುಂಪುಗಳ ನಡುವೆ ಘರ್ಷಣೆ ನಡೆದು, ಸಾರ್ವಜನಿಕ ಕೆಲಸಕಾರ್ಯ ಸ್ಥಗಿತ-ಗೊಳ್ಳುತ್ತದೆ. ಇಲ್ಲಿ ದುರ್ಬಲರ ಮೇಲೆ ದೌರ್ಜನ್ಯ ನಡೆಸಿಕೊಂಡು ಬದುಕುವ ಶ್ರೀಮಂತ ವರ್ಗದ ಜೀವನ ಹಾಗೂ ವಿದ್ಯಾವಂತರಾದರೂ ಆರ್ಥಿಕ ದೌರ್ಬಲ್ಯದಿಂದಾಗಿ ಶ್ರೀಮಂತರ ದೌರ್ಜನ್ಯಕ್ಕೆ ತುತ್ತಾಗುವ ಬಡಜನರ ಜೀವನ, ಈ ಎರಡು ತೆರನಾದುದು ಎಂದು ಇಲ್ಲಿ ವ್ಯಕ್ತವಾಗಿದೆ.

'ಮೂಡಲ ಸೀಮೇಲಿ ಕೊಲೆಗಿಲೆ ಮುಂತಾಗಿ' ಕಥೆಯಲ್ಲಿ ರಂಗಪ್ಪ ತನ್ನ ಹೆಂಡತಿ ಮತ್ತು ಒಬ್ಬ ಮಗನನ್ನು ಗೌಡರ ಹಟ್ಟಿಯಲ್ಲಿ ಕೂಲಿಮಾಡಿಯೇ ಸಾಕಬೇಕು. ಗೌಡರ ಹಟ್ಟಿಯಿಂದ ನರ್ಸಮ್ಮನಿಗೆ ಪುಕ್ಕಟೆ ತರಕಾರಿ,ಇತ್ಯಾದಿ ಸಿಗುತ್ತವೆ. ಆದರೆ ಶ್ರಮವಹಿಸಿ ದುಡಿಯುವ ರಂಗಪ್ಪ ಹಾಗೂ ಆತನ ಕುಟುಂಬದ ಬಗ್ಗೆ ಗೌಡರ ಹೆಂಡತಿ ಕಿಂಚಿತ್ತೂ ಕರುಣೆ ತೋರುವುದಿಲ್ಲ. ಗೌಡರ ಹಟ್ಟಿ ರಂಗಪ್ಪನ ಶ್ರಮದಿಂದಲೇ ನಿಂತಿದೆ ಎಂದು ಊರಿನವರು ಅಂದರೂ ಆ ಹಟ್ಟಿ ಜನ ಒಪ್ಪಿಕೊಂಡಿಲ್ಲ. ಹೀಗೆ ರಂಗಪ್ಪನ ಶ್ರಮ ಅಪಾರವಾಗಿದ್ದರೂ ಹೆಂಡತಿ, ಒಬ್ಬ ಮಗನನ್ನು ಸಾಕಲು ಆಗುತ್ತಿಲ್ಲ. ಒಮ್ಮೆ ಒಂದು ಹೊತ್ತಿನ ಗಂಜಿಗಾಗಿ ಊರೆಲ್ಲ ಅಲೆದರೂ ವರ್ಗಶೋಷಣೆಯಿಂದಾಗಿ ಯಾರೂ ಇವನ ಹಸಿವನ್ನು, ಮನದಾಳದ ನೋವನ್ನು ಅರ್ಥಮಾಡಿಕೊಳ್ಳುವುದೇ ಇಲ್ಲ. ಆತ ಕೊನೆಗೂ ಬರಿಗೈಯಲ್ಲೇ ಮನೆಗೆ ಹಿಂದಿರುಗುತ್ತ, ಭಾರವಾದ ಹೆಜ್ಜೆಯನ್ನಿಡುವಾಗ, ಎಂಥವರಿಗೂ ಕರುಳು ಕಿತ್ತುಬರುವಂತಾಗುತ್ತದೆ. ಅಲ್ಲದೆ ಹಸಿವಿನಿಂದ ಬಳಲುತ್ತಿರುವ ಇವನ ಹೆಂಡತಿ ಮತ್ತು ಮಗನ ಗತಿ ಏನು? ಅನ್ನಿಸುತ್ತದೆ. ಇಲ್ಲಿ ಒಂದು ವರ್ಗ ಶ್ರಮಪಡದೆ ಕೂಲಿಯವರನ್ನು ಶೋಷಣೆ ಮಾಡಿಯೇ ಸಂತೃಪ್ತಿ ಜೀವನ ನಡೆಸುತ್ತಿದ್ದರೆ, ಮತ್ತೊಂದು ಕುಟುಂಬವರ್ಗ ಜೀವನಪೂರ್ತಿ ದುಡಿದರೂ ಹೊತ್ತಿನ ಗಂಜಿಗೆ ಗತಿಯಿಲ್ಲದೆ ಹಸಿವಿನಿಂದ ನರಳುತ್ತಿದೆ.

ದ್ಯಾವನೂರು ಕೃತಿಯಲ್ಲಿನ ಕಥೆಗಳಲ್ಲಿ ಕೊನೆಯದಾದ 'ಅಮಾಸ'ದಲ್ಲಿ ಅಂದು ಬಾಲಕನಾಗಿದ್ದ ಕುರಿಯಯ್ಯ ಮಾರಿಹಬ್ಬದಂದು ಹುಲಿವೇಷ ಹಾಕಿಕೊಂಡು ಕುಣಿಯುವಾಗ, ಗೌಡರ ದೃಷ್ಟಿಗೆ ಬಿದ್ದು ಹಟ್ಟಿಯ ಜೀತಗಾರನಾಗಿ ಕುರಿಕಾಯಲು ಆರಂಭಿಸಿದನು. ಇಂದು

ಮುಪ್ಪಾಗಿ ಮಾರಿಗುಡಿಯ ಮೂಲೆ ಸೇರಿದ್ದಾನೆ. ತಬ್ಬಲಿಯಾದ ಅಮಾನ ಇವನ ಜೊತೆಗೆ ಇದ್ದು ಮಠದ ಅನ್ನದಿಂದ ಇಬ್ಬರ ಜೀವನ ಸಾಗುತ್ತಿದೆ. ಪ್ರತಿ ವರ್ಷದಂತೆ ಮಾರಿಹಬ್ಬ ಈ ವರ್ಷವೂ ಬಂದು, ಹಳ್ಳಿಯ ಸಾಂಸ್ಕೃತಿಕ ಜೀವನಕ್ಕೆ ಚಾಲನೆ ನೀಡಿದೆ. ಇಂದು ಬಾಲಕ ಅಮಾನ ಹುಲಿವೇಷ ಹಾಕಿಕೊಂಡು ಕುಣಿಯುವಾಗ ಎಲ್ಲರ ಕಣ್ಮನ ಸೆಳೆಯುತ್ತಾನೆ. ಅದು ಗೌಡರನ್ನು ಸಹ ಆಕರ್ಷಿಸುತ್ತದೆ. ಹಳ್ಳಿಯ ಸಾಂಸ್ಕೃತಿಕ ಸಿರಿಯನ್ನು ಬಿಚ್ಚುವ ಇದೇ ಹಬ್ಬದಂದು ಕುರಿಯನ್ನು ಕುಣಿಯುವಾಗ, ಗೌಡರ ಜೀತಗಾರನಾದದ್ದು ಕಣ್ಮುಂದೆ ಇರುವಾಗ, ಬೆಳೆಯುವ ಸಿರಿ ಅಮಾನ ಮೊಳಕೆಯಲ್ಲಿಯೇ ಪರರ ಪಾಲಾಗಬಹುದಾದ ಕರಾಳ ನೆನಪು ಇಲ್ಲಿ ಎಲ್ಲರನ್ನು ಕಾಡುತ್ತದೆ.

'ಒಡಲಾಳ' ಕಾದಂಬರಿಯಲ್ಲಿ ಸಾಕವ್ವನ ಅವಿಭಕ್ತ ಕುಟುಂಬ ಬಡತನದ ಬಲೆಯಲ್ಲಿ ಸಿಕ್ಕಿಕೊಂಡಿದೆ. ಯಾರಿಗೂ ಕೈಯಲ್ಲಿ ಸ್ಥಿರವಾದ ಉದ್ಯೋಗವಿಲ್ಲದೇ ಹಸಿವಿನ ಬಡಬಾಗ್ನಿ ಎಲ್ಲರನ್ನೂ ಸುಡುತ್ತದೆ. ಬಡತನದಿಂದಾಗಿ ಹಸಿವು ಎಂತಹ ಕೆಲಸವನ್ನಾದರೂ ಮಾಡಿಸುತ್ತದೆ ಎನ್ನುವುದಕ್ಕೆ ಇಲ್ಲಿ ಕಾಳಣ್ಣ ಎಣ್ಣೆವಿಲ್ಲನಿಂದ ಒಂದು ಚೀಲ ಕಡ್ಲೆಕಾಯಿ ಕದ್ದು ತರುವುದೇ ಸಾಕ್ಷಿ. ತಂದಂತಹ ಕಡ್ಲೆಕಾಯಿಯನ್ನು ಕುಟುಂಬದ ಎಲ್ಲಾ ಸದಸ್ಯರು ತಿನ್ನಲು ಅನ್ಯೋನ್ಯತೆಯಿಂದ ಸೇರುತ್ತಾರೆ. ಬೆಳಗ್ಗೆ ಸಾಕವ್ವನೊಂದಿಗೆ ಸಣ್ಣಯ್ಯ ಹಾಗೂ ಆತನ ಹೆಂಡತಿ ಚೆಲುವಮ್ಮ ಅತ್ಯವಿಚಾರವಾಗಿ ಜಗಳವಾಡುತ್ತಿದ್ದವರು, ಕಡ್ಲೆಕಾಯಿ ತಿನ್ನುವಾಗ ಎಲ್ಲವನ್ನೂ ಮರೆತು ಖುಷಿಯಾಗಿ ನಗುತ್ತ ಮಾತನಾಡುತ್ತಾರೆ. ಅಲ್ಲದೆ ಸ್ವಲ್ಪ ಹೊತ್ತಿನ ಹಿಂದೆ ಗೌರಮ್ಮನ ಮಗ ಶಿವುಗೆ, ಓದಿಕೊಳ್ಳಲು ದೀಪಕ್ಕೆ ಸೀಮೆಎಣ್ಣೆ ಕೊಡದೆ ಹೋದ ಚೆಲುವಮ್ಮ, ಈಗ ಬೆಳಕಾಗಲಿ ಎಂದು ಪೆಟ್ಟಿಗೆಯ ಮೇಲೆ ದೀಪ ತಂದಿಡುತ್ತಾಳೆ. ಅಂತೆಯೇ ಕಳೆದುಹೋದ ಕೋಳಿಗಾಗಿ ಊರೆಲ್ಲ ಅಲೆದು ಸಿಗದೇ ಜನಗಳನ್ನು ಶಾಪ ಹಾಕುತ್ತ ಅದೇ ಕೋಪದಲ್ಲಿ ಮನೆಗೆ ಬಂದು ಮಕ್ಕಳನ್ನು ಬಯ್ಯುತ್ತಿದ್ದ ಸಾಕವ್ವ, ಈಗ ಅವರೊಟ್ಟಿಗೆ ಕುಳಿತು ಸಂಭಾಷಣೆ ನಡೆಸುತ್ತಾ ಕಡ್ಲೆಕಾಯಿ ತಿನ್ನುತ್ತಿರುತ್ತಾಳೆ. ಇವರೆಲ್ಲರ ಜೀವನವೇ ಒಂದು ರೀತಿಯಾದರೆ ಸಾಕವ್ವನ ಕಿರಿಯ ಮಗನಾದ ಗುರುಸಿದ್ದನದೇ ಒಂದು ರೀತಿ. ಈತ ಊರೂರು ಸುತ್ತುತ್ತ, ಜೂಜಿನ ಆಟ ಆಡುತ್ತ, ಮೋಜಿನ ಜೀವನ ನಡೆಸುತ್ತಿರುತ್ತಾನೆ. ಹಾಗೆಯೇ ಈ ಕಾದಂಬರಿಯಲ್ಲಿನ

ಪೋಲೀಸ್ ಪಾತ್ರಧಾರಿಯಾದ ರೇವಣ್ಣನ ಜೀವನ ಒಂದು ರೀತಿ ನಗೆತರುವಂತದ್ದಾಗಿದೆ. ಅಲ್ಲದೆ ಇಲ್ಲಿನ ಇನ್ಸ್‌ಪೆಕ್ಟರ್ ಈಗಿನ ಪೋಲೀಸ್ ಇಲಾಖೆಯವರಂತೆ, ಬಡವರನ್ನು ಶೋಷಣೆ ಮಾಡಿ ಬದುಕುವವನಾಗಿದ್ದಾನೆ. ಈತ ಸಾಕವ್ವನ ಕುಟುಂಬದ ಮೇಲೆ ದೌರ್ಜನ್ಯ ನಡೆಸುವುದರ ಜೊತೆಗೆ, ಸಾಕವ್ವನ ಮತ್ತೊಂದು ಕೋಳಿಯನ್ನು ಪುಕ್ಕಟೆ ತೆಗೆದುಕೊಂಡು ಹೋಗುತ್ತಾನೆ. ಇಲ್ಲಿ ಅಧಿಕಾರಿಗಳಿಂದ ಶೋಷಣೆಗೆ ಒಳಗಾಗುವುದರ ಜೊತೆಗೆ ಅಂತಃಕಲಹ, ಹಸಿವು, ಬಡತನಗಳಿಂದ ನೊಂದುಬೆಂದರೂ, ಕೆಲವು ಸಂದರ್ಭಗಳಲ್ಲಿ ಅನ್ಯೋನ್ಯತೆಯ ಜೀವನ ಸಾಗಿಸುವ ಹಾಗೂ ಗ್ರಾಮೀಣ ಪರಿಸರ ಹೊಂದಿರುವ ಸಾಕವ್ವನ ಅವಿಭಕ್ತ ಕುಟುಂಬದ ಚಿತ್ರಣ ಕಂಡುಬರುತ್ತದೆ.

ದೇವನೂರರ ಕೃತಿಗಳಲ್ಲಿ ಅತ್ಯುತ್ತಮವಾದುದು 'ಕುಸುಮಬಾಲೆ' ಕಾದಂಬರಿ. ಇದರಲ್ಲಿ ಮೇಲ್ಜಾತಿಗೆ ಸೇರಿದ ಕುಸುಮಬಾಲೆ ಕೆಳಜಾತಿಯ ಚೆನ್ನನನ್ನು ಪ್ರೀತಿಸಿರುತ್ತಾಳೆ. ಆದರೆ ಇವಳಿಗೆ ತನ್ನದೇ ಜಾತಿಯ ವ್ಯಕ್ತಿಯೊಡನೆ ವಿವಾಹವಾಗಿರುವುದರಿಂದ, ಇವಳ ಪ್ರೇಮ ಭಗ್ನಗೊಂಡು, ಒಂದು ರೀತಿ ಯಾಂತ್ರಿಕ ಜೀವನ ಸಾಗಿಸುತ್ತಿರುತ್ತಾಳೆ. ಇವಳನ್ನು ಪ್ರೀತಿಸಿದ ಚೆನ್ನ ಕೊಲೆಯಾಗುತ್ತಾನೆ. ಇದನ್ನರಿಯದ ಚೆನ್ನನ ತಂದೆ, ತಾಯಿ ತಾವು ಕಾಣದಂತ ದೂರದ ಊರಲ್ಲೆಲ್ಲೋ ತಮ್ಮ ಮಗ ಬದುಕಿರುವನೆಂದೂ, ಇಂದಲ್ಲ ನಾಳೆ ನಮ್ಮನ್ನು ನೋಡಲು ಬರುವನೆಂದೂ ಭಾವಿಸಿ, ಅವನ ಬಗ್ಗೆ ಕನಸುಗಳನ್ನು ಕಟ್ಟಿಕೊಂಡು ಕಾಯುತ್ತಿರುತ್ತಾರೆ. ಇಲ್ಲಿನ ದಲಿತವರ್ಗದ ಅಮಾಸ ಜೀವನೋಪಾಯಕ್ಕಾಗಿ ಮೇಲ್ಜಾತಿ ಸ್ತ್ರೀಯರ ಮುಟ್ಟಿನ ಸೀರೆಗಳನ್ನು ಕದ್ದು ಮಾರುವುದನ್ನೇ ಜೀವನದ ವೃತ್ತಿಯಾಗಿಸಿ-ಕೊಂಡಿದ್ದರೆ, ಮತ್ತೊಬ್ಬ ವ್ಯಕ್ತಿಯಾದ ಗಾರೆಸಿದ್ದಮಾವ ಅನುಸರಿಸುವ ಮಾರ್ಗೋಪಾಯವೇ ಒಂದು ರೀತಿ ವಿಚಿತ್ರವಾದುದು. ಹಾಗೆಯೇ ಇಲ್ಲಿನ ಸ್ತ್ರೀಯರು ಸಾಮಾನ್ಯವಾಗಿ ಅನೈತಿಕ ಸಂಬಂಧ ಹೊಂದಿರುವುದೇ ಹೆಚ್ಚಾಗಿ ಕಂಡುಬರುತ್ತದೆ. ಅಂಥವರಲ್ಲಿ ಯಾಡನಿಗೆ ಗಂಡ ಸತ್ತ ಹನ್ನೆರಡು ತಿಂಗಳಿಗೆ ಜನ್ಮಕೊಟ್ಟ ಅಕ್ಕಮಹಾದೇವಮ್ಮ ಹಾಗು ಗಂಡನಿಂದ ಮಕ್ಕಳ ಫಲ ದೊರೆಯಲಿಲ್ಲವೆಂದು ಹಾದರ ನಡೆಸುವ ತೂರಮ್ಮನ ಮಗಳಾದ ಕೆಂಪಿ ಪ್ರಮುಖರೆನ್ನಬಹುದು. ಅಕ್ಕಮಹಾದೇವಮ್ಮ ಗಂಡ ಸತ್ತನಂತರ ಆಸ್ತಿಯ ಪಾಲಿಗಾಗಿ ಗಂಡನ ಮನೆಗೆ ಬಂದಾಗ, ಆಕೆಯ ಭಾವಂದಿರು ಅವಳನ್ನು ಮನೆಗೆ ಸೇರಿಸದೆ ಹಾಗೂ ಆಸ್ತಿಯಲ್ಲಿ ಪಾಲನ್ನು ಕೊಡದೇ ಊರಿಂದ

ಹೊರಗೆ ಅಟ್ಟುತ್ತಾರೆ. ಆದರೆ ಧೃತಿಗೆಡದೆ ಈಕೆ ಹೋರಾಟದ ಜೀವನ ನಡೆಸಿ, ತನ್ನ ಮಗನಾದ ಯಾಡೀಗೌಡನಿಗೆ ಮತ್ತು ತನಗೆ ಸಮಾಜದಲ್ಲಿ ಒಂದು ಭದ್ರವಾದ ಸ್ಥಾನ ಪಡೆಯುವುದರಲ್ಲಿ ಯಶಸ್ವಿಯಾಗುತ್ತಾಳೆ. ಅಲ್ಲದೇ ಹೆಸರಿಗೆ ಇವಳ ಮಗ ಯಾಡನಾದರೂ ಜನರಿಗೆ ಮೋಸ ಮಾಡುವುದರಲ್ಲಿ ವಿಸ್ಮಯವನ್ನೇ ಉಂಟುಮಾಡುತ್ತಾನೆ. ಹೀಗೆ ಒಬ್ಬೊಬ್ಬರು ಒಂದೊಂದು ರೀತಿಯ ಮಾರ್ಗಗಳನ್ನು ಅನುಸರಿಸಿಕೊಂಡು ಜೀವನ ಸಾಗಿಸುವ ಚಿತ್ರಣ ಇಲ್ಲಿ ಕಂಡುಬರುತ್ತದೆ.

ಆ) <u>ಪ್ರತಿಭಟನೆ ಮತ್ತು ಯಥಾಸ್ಥಿತಿ:</u>

ತಮ್ಮ ಮೇಲೆ ನಡೆಯುವ ಶೋಷಣೆಯ ಅಥವಾ ದೌರ್ಜನ್ಯದ ವಿರುದ್ಧ ಮನುಷ್ಯರು ತಮ್ಮ ವಿರೋಧವನ್ನು ರಕ್ತಪಾತ ಹರಿಸುವುದರ ಮೂಲಕ ಅಥವಾ ಮೌನವಾಗಿ ತಿರಸ್ಕರಿಸುವುದರ ಮೂಲಕ, ಇಲ್ಲಾ ನಿಷೇಧಿಸಿರುವುದನ್ನು ಬೇರೆಡೆ ಹೋಗಿ ಮಾಡುವುದರ ಮೂಲಕ, ಹೀಗೆ ಹಲವು ರೀತಿಯಲ್ಲಿ ಪ್ರತಿಕ್ರಿಯೆಗಳನ್ನು ತೋರಿಸುವುದಕ್ಕೆ ಪ್ರತಿಭಟನೆ ಎಂದು ಹೆಸರು.

ಯಥಾಸ್ಥಿತಿ ಎಂದರೆ ತಮ್ಮ ಮೇಲೆ ನಡೆಯುವ ಶೋಷಣೆಯ ಅಥವಾ ದೌರ್ಜನ್ಯದ ವಿರುದ್ಧ ಮೇಲೆ ಹೇಳಿದ ಯಾವುದೇ ರೀತಿಯ ಅಥವಾ ಯಾವುದೇ ವಿಧವಾದ ಪ್ರತಿಕ್ರಿಯೆ ತೋರದೇ, ಅದರ ಬಗ್ಗೆ ಕಿಂಚಿತ್ತು ಚಿಂತಿಸದೆ, ಮೌನವಾಗಿ ನೋಡಿಕೊಂಡು ಹೋಗುವುದಕ್ಕೆ ಯಥಾಸ್ಥಿತಿ (Statusquo) ಎಂದು ಕರೆಯಲಾಗಿದೆ. ಇದನ್ನು ವಸ್ತುಸ್ಥಿತಿಯ ಸ್ವೀಕಾರವೆಂದು ಕೂಡ ಕರೆಯಬಹುದಾಗಿದೆ.

ಪ್ರತಿಭಟನೆ ಬಗ್ಗೆ ಈ ಕೆಳಗೆ ಹೇಳಲಾಗಿದೆ.

ಮಾರಿಕೊಂಡವರು ಕತೆಯಲ್ಲಿ ಎರಡು ಸಂದರ್ಭಗಳಲ್ಲಿ ಪ್ರತಿಭಟನೆ ಕಂಡುಬರುತ್ತದೆ. ಮೊದಲನೆಯದು, ಕಿಟ್ಟಪ್ಪ ಲಕ್ಷ್ಮಿಯನ್ನು ದೈಹಿಕವಾಗಿ ತನ್ನವಳನ್ನಾಗಿ ಮಾಡಿಕೊಂಡಿರುವ ವಿಷಯ ತಿಳಿದಾಗ ಬೀರ ಆತನ ವಿರುದ್ಧ ನೇರವಾಗಿ ಪ್ರತಿಭಟಿಸದಿದ್ದರೂ, ಕಿಟ್ಟಪ್ಪನ ಗೈರುಹಾಜರಿಯಲ್ಲಿ ಹೆಂಡತಿಗೆ ಎಚ್ಚರಿಕೆ ಕೊಡುತ್ತಾನೆ. ಆದರೆ ತಾನು ಕುಡಿದ ಮತ್ತಿನಲ್ಲಿ ಅಪ್ರಜ್ಞಾವಸ್ಥೆಯಲ್ಲಿರುವಾಗ ತನ್ನ ವಿರೋಧವನ್ನು ವ್ಯಕ್ತಪಡಿಸುತ್ತಾನೆ. ಎರಡನೆಯದು, ಪಟೇಲರ ಮನೆಗೆ ಬಂದಿದ್ದ ನೆಂಟನೊಬ್ಬ ಲಕ್ಷ್ಮಿಯನ್ನು ಕೆಣಕಿದನೆಂಬ ವಿಷಯ ತಿಳಿದಾಗ ಆತನ ಕುತ್ತಿಗೆ ಪಟ್ಟು ಹಿಡಿದುಕೊಂಡು ಎಳೆದಾಡುವುದರ ಮೂಲಕ ಬೀರ ಪ್ರತಿಭಟಿಸುತ್ತಾನೆ.

ಇಲ್ಲಿ ಯಥಾಸ್ಥಿತಿ ಕಂಡುಬರುವ ಪ್ರಮುಖ ಸಂದರ್ಭಗಳೆಂದರೆ ಪಟೇಲರ ಮನೆಯ ನೆಂಟ ಕೆಣಕಿದಾಗ ಗಂಡನಿಗೆ ತಿಳಿಸುವ ಲಕ್ಷ್ಮಿ, ಅದೇ ಶಿವಪ್ಪ ಲೈಂಗಿಕ ಸುಖಕ್ಕಾಗಿ ಆಹ್ವಾನಿಸಿದಾಗ ಸಂಪೂರ್ಣವಾಗಿ ಆತನ ವಶವಾಗುತ್ತಾಳೆ. ಆದರೆ ಈಕೆ ಯಾವುದೇ ಪ್ರತಿಭಟನೆಯನ್ನಾಗಲೀ ಅಥವಾ ಗಂಡನಿಗೆ ತಿಳಿಸುವುದಾಗಲೀ ಮಾಡುವುದಿಲ್ಲ. ಹಾಗೆಯೇ ಪಟೇಲರ ಮನೆಯ ನೆಂಟ ಲಕ್ಷ್ಮಿಯನ್ನು ಕೆಣಕಿದಾಗ ತೀವ್ರವಾಗಿ ಪ್ರತಿಭಟಿಸಿದ ಬೀರ, ಶಿವಪ್ಪ – ಲಕ್ಷ್ಮಿಯರ ಅನೈತಿಕ ಸಂಬಂಧದ ವಿಷಯ ಗೊತ್ತಾದರೂ ಕೂಡ ಆತನ ವಿರುದ್ಧ ನೇರ ಪ್ರತಿಭಟನೆ ನಡೆಸುವುದಿಲ್ಲ. ಬದಲಾಗಿ ಶಿವಪ್ಪನನ್ನು ನಗು ನಗುತ್ತಾ ಸ್ವಾಗತಿಸುತ್ತಾನೆ. ಲಕ್ಷ್ಮಿ ಮತ್ತು ಬೀರ ಇವರ ಈ ವರ್ತನೆಗಳಿಗೆ ಪರಿಸ್ಥಿತಿಯ ಅನಿವಾರ್ಯತೆ ಅಥವಾ ಇನ್ನಾವುದೋ ಕಾರಣವಿರಬಹುದು.

ಗ್ರಸ್ತರು ಕತೆಯಲ್ಲಿ ಪ್ರತಿಭಟನೆ ನೇರವಾಗಿ ಎಲ್ಲೂ ಕಂಡುಬರದಿದ್ದರೂ ಅದು ಕತೆಯ ಉದ್ದಕ್ಕೂ ನಾಯಕನ ಮೌನದ ಒಳಗೆ ವ್ಯಕ್ತವಾಗುವುದನ್ನು ಕಾಣಬಹುದು. ಇಲ್ಲಿ ಸ್ವಾಮಿಗಳ ಕಾಲಿಗೆ ಬಿದ್ದು ಗೌಡರು ಕೆಲಸಕೊಡಿಸಿರುತ್ತಾರೆ. ಆದರೆ ಕಥಾನಾಯಕ ಅಲ್ಲಿನ ಶೋಷಣೆಯನ್ನು ಸಹಿಸಲಾರದೆ, ಆ ಕೆಲಸವನ್ನು ತ್ಯಜಿಸಿ ಬರುತ್ತಾನೆ. ಹಾಗೆ ಕೆಲಸಬಿಟ್ಟು ಬಂದದ್ದರಿಂದ ಹಾಗೂ ಸ್ವಾಮಿಗಳನ್ನು ಟೀಕೆ ಮಾಡಿದ್ದರಿಂದ ಗೌಡರಿಗೆ ಅವಮಾನ ಮಾಡಿದಂತಾಗಿದೆ. ಆದ್ದರಿಂದ ಹೋಗಿ ಅವರನ್ನು ಕ್ಷಮೆ ಕೇಳೆಂದು, ನಾಯಕನ ತಾಯಿ ಹೇಳುತ್ತಾಳೆ. ಆದರೆ ಕಥಾನಾಯಕ ತಾಯಿಗೆ ಪ್ರತಿಯುತ್ತರ ಕೊಟ್ಟು, ಮೌನವಾಗಿ ಮನೆಯಿಂದ ಹೊರಗೆ ಬಂದು ನಿಲ್ಲುತ್ತಾನೆ. ಇಲ್ಲಿ ಗೌಡರ ಪರೋಕ್ಷವಾದ ಶೋಷಣೆಯ ವಿರುದ್ಧ ನಾಯಕನ ಮೌನದೊಳಗೆ ಪ್ರತಿಭಟನೆ ವ್ಯಕ್ತವಾಗಿದೆ.

ಗೌಡರು ಸಾಲ ವಸೂಲಾತಿಗಾಗಿ ತಮ್ಮ ಮನೆಗೆ ಬಂದು ದಾರಮಾರವೆಂದು – ಎಂದು ಆತನ ತಾಯಿ ತಿಳಿಸಿದಾಗ ಹಾಗೂ ಗೌಡರ ಮನೆಗೆ ಸಾಲದ ವಿಷಯ ಚರ್ಚಿಸಲು ಹೋದಾಗ ಅಲ್ಲಿ ದೀರ್ಘ ಚರ್ಚೆ ನಡೆದು, ಗೌಡರು ಬಹಳ ದರ್ಪದಿಂದಲೆ ಸಾಲವನ್ನು ತಂದೊಪ್ಪಿಸು ಎಂದು ಹೇಳಿದಾಗ, ಈ ಎರಡು ಸಂದರ್ಭಗಳಲ್ಲೂ ಕಥಾನಾಯಕನಿಂದ ಯಾವುದೇ ಪ್ರತಿಭಟನೆ ನಡೆಯುವುದಿಲ್ಲ. ಶೋಷಣೆಯನ್ನು ಸಹಿಸಲಾರದೆ ಕೆಲಸವನ್ನೇ ತಿರಸ್ಕರಿಸಿ, ಸ್ವಾಮಿಗಳ ಬಗ್ಗೆ

ಟೀಕೆ ಮಾಡಿ ಬಂದ ಈತ, ಇಲ್ಲಿ ಗೌಡರ ವಿರುದ್ಧ ಪ್ರತಿಭಟನೆಯನ್ನಾಗಲೀ ಅಥವಾ ಟೀಕೆಯನ್ನಾಗಲೀ ಮಾಡುವುದಿಲ್ಲ.

'ಒಂದು ದಹನದ ಕಥೆ'ಯಲ್ಲಿ ತನ್ನ ಮೊಮ್ಮಗಳನ್ನು ಕೊಟ್ಟು ಮದುವೆ ಮಾಡುವ ಉದ್ದೇಶ ಕಥಾನಾಯಕನ ದೊಡ್ಡಪ್ಪನದು. ಅದಕ್ಕಾಗಿ ಕಥಾನಾಯಕನು ಪ್ರೀತಿಸಿರುವ ಮೇಲ್ಜಾತಿಯ ಕಮಲಳ ವಿರುದ್ಧ ಹಳ್ಳಿಯ ನ್ಯಾಯಸ್ಥಾನದಲ್ಲಿ ಸುಳ್ಳು ಸಾಕ್ಷಿ ಹೇಳಿಸುತ್ತಾನೆ. ಇದರಿಂದ ಕಮಲಳೊಂದಿಗಿನ ನಾಯಕನ ಸಂಬಂಧವನ್ನು ವ್ಯವಸ್ಥೆಯು ಬೇರ್ಪಡಿಸುತ್ತದೆ. ಆದರೆ ನಾಯಕನು ದೊಡ್ಡಪ್ಪನ ಈ ಮೋಸದ ವಿರುದ್ಧ ಹಾಗೂ ವ್ಯವಸ್ಥೆಯಲ್ಲಿನ ಅನ್ಯಾಯದ ವಿರುದ್ಧ ಸಿಡಿದು, ತಾನು ಪ್ರೀತಿಸಿದ ಹುಡುಗಿಯನ್ನು ಪಟ್ಟಣಕ್ಕೆ ಕರೆದುಕೊಂಡು ಹೋಗಿ ಮದುವೆಯಾಗುವುದರ ಮೂಲಕ ತನ್ನ ಪ್ರತಿಭಟನೆಯನ್ನು ವ್ಯಕ್ತಪಡಿಸುತ್ತಾನೆ.

ಮತ್ತೊಮ್ಮೆ, ಅಜ್ಜ ತೀರಿಕೊಂಡಾಗ ಶವಸಂಸ್ಕಾರಕ್ಕೆ ಹಳ್ಳಿಗೆ ಬರುತ್ತಾನೆ. ಆದರೆ ಈತನಿಂದ ತನಗಾದ ಸೋಲಿನಿಂದಾಗಿ ಹಳ್ಳಿಯು ಶವಸಂಸ್ಕಾರಕ್ಕೆ ಅನುಮತಿಯನ್ನು ನಿರಾಕರಿಸುತ್ತದೆ. ಇದರಿಂದ ಬೇಸತ್ತ ನಾಯಕ ತಾನೊಬ್ಬನೇ ಅಜ್ಜನ ಶವಕ್ಕೆ ಹುಲ್ಲಿನ ಗಳುಗಳಿಂದ ಬೆಂಕಿ ಇಟ್ಟು, ವ್ಯವಸ್ಥೆಯ ವಿರುದ್ಧ ತನ್ನ ಪ್ರತಿಭಟನೆಯನ್ನು ವ್ಯಕ್ತಪಡಿಸುತ್ತಾನೆ.

ನಾಯಕ ಮತ್ತು ಕಮಲಳ ನಡುವಿನ ಸಂಬಂಧವನ್ನು ಆತನ ದೊಡ್ಡಪ್ಪ ನ್ಯಾಯಸ್ಥಾನದಲ್ಲಿ ಸುಳ್ಳುಸಾಕ್ಷಿ ಹೇಳಿಸುವುದರ ಮೂಲಕ ಬೇರ್ಪಡಿಸಿರುವುದಾಗಿ ತಿಳಿಸುತ್ತಾನೆ. ಈ ಶೋಷಣೆಯ ಹಿನ್ನೆಲೆಯು ತನ್ನ ಮೊಮ್ಮಗಳನ್ನು ಕೊಟ್ಟು ಮದುವೆ ಮಾಡುವ ಉದ್ದೇಶ ದೊಡ್ಡಪ್ಪನದಾಗಿದೆ. ಮತ್ತೊಂದು ಸಂದರ್ಭದಲ್ಲಿ ನಾಯಕನ ಅಜ್ಜ ಸತ್ತಾಗ ಶವಸಂಸ್ಕಾರಕ್ಕೆ ಅನುಮತಿಯನ್ನು ಹಳ್ಳಿಯು ನಿರಾಕರಿಸುತ್ತದೆ. ಈ ಎರಡು ಸಂದರ್ಭದಲ್ಲೂ ಶೋಷಣೆ ನಡೆಯುತ್ತಿದ್ದರೂ ವಿದ್ಯಾವಂತನೂ, ಬುದ್ಧಿವಂತನೂ ಆದ ಈ ನಾಯಕ ದೊಡ್ಡಪ್ಪನ ವಿರುದ್ಧವಾಗಲಿ ಅಥವಾ ನ್ಯಾಯಸ್ಥಾನಕ್ಕೆ ಹೋಗಿ ಹಳ್ಳಿಯ ವಿರುದ್ಧವಾಗಲಿ ನೇರವಾಗಿ ಪ್ರತಿಭಟಿಸಬಹುದಿತ್ತು. ಆದರೂ ತನ್ನ ವಿರುದ್ಧ ಕಣ್ಣೆದುರೇ ಶೋಷಣೆ ನಡೆಯುತ್ತಿದ್ದರೂ ಸುಮ್ಮನಾಗಿಬಿಡುತ್ತಾನೆ.

'ದತ್ತ' ಕಥೆಯಲ್ಲಿ ಕಂಡುಬರುವ ಪ್ರತಿಭಟನೆ ಎಂದರೆ ಕಥಾನಾಯಕನಾದ ಆನಂದುಗೆ ದತ್ತು ಹೋಗಿದ್ದ ಮನೆಯಲ್ಲಿ ಸ್ವತಂತ್ರವಿಲ್ಲದೇ ಒಂದು ರೀತಿ ಹಿಂಸೆಯೆನಿಸುತ್ತದೆ. ಅಲ್ಲದೆ ತನ್ನೆಲ್ಲ ಆಸೆ ಆಕಾಂಕ್ಷೆಗಳನ್ನು ಬದಿಗೊತ್ತಿ ದತ್ತು ಮನೆಯವರ ಇಚ್ಛೆಯಂತೆ ನಡೆಯಬೇಕಾಗಿರುತ್ತದೆ. ಇದು ಒಂದು ರೀತಿ ಶೋಷಣೆಯಾದ್ದರಿಂದ ಈತ ದತ್ತು ಮನೆಯನ್ನು ತಿರಸ್ಕರಿಸಿ ಹೆತ್ತವರೊಡನೆ ಬದುಕಲು ಬರುತ್ತಾನೆ. ಇಲ್ಲಿ ದತ್ತು ಮನೆಯನ್ನು ತ್ಯಜಿಸಿ, ತನ್ನ ಇಚ್ಛೆಯಂತೆ ನಡೆದುಕೊಳ್ಳಲು ಬರುವುದರಲ್ಲಿ ಶೋಷಣೆಯ ವಿರುದ್ಧದ ಪ್ರತಿಭಟನೆ ವ್ಯಕ್ತವಾಗಿದೆ. ಹಾಗೆಯೆ ಹೆತ್ತವರೊಡನೆ ಜೀವಿಸಲು ಬಂದ ಆನಂದುವನ್ನು ದುರಾಶೆಯುಳ್ಳ ಅವನ ತಂದೆ, ತಾಯಿ ಪುನಃ ದತ್ತಕದ ಮೇಲೆ ದತ್ತಕ ಕೊಡಲು ಬಯಸುತ್ತಾರೆ. ಇಲ್ಲಿ ಹೆತ್ತಮಗನ ಆಸೆ ಆಕಾಂಕ್ಷೆಗೆ ಬೆಲೆಕೊಡದೆ ತಂದೆತಾಯಿಗಳಿಂದಲೇ ಶೋಷಣೆ ನಡೆಯುತ್ತದೆ. ಆದರೆ ಹೆತ್ತವರ ಬಯಕೆಯಂತೆ ಮತ್ತೊಂದು ಮನೆಗೆ ದತ್ತು ಹೋಗದೆ, ಇವರುಗಳ ಈ ಶೋಷಣೆಯ ವಿರುದ್ಧ ಸಿಡಿದು ಕಥಾನಾಯಕನಾದ ಆನಂದು, ಇಡೀ ಕುಟುಂಬ ವರ್ಗದವರನ್ನೆ ತೊರೆದು ಬಹುದೂರ ಹೊರಟುಹೋಗುತ್ತಾನೆ. ಇದರಿಂದ ಹೆತ್ತವರ ಇಚ್ಛೆಯಂತೆ ನಡೆಯದೇ ಬಹುದೂರ ಹೊರಟುಹೋಗುವುದರಲ್ಲಿ ಶೋಷಣೆಯ ವಿರುದ್ಧದ ಪ್ರತಿಭಟನೆ ಕಂಡುಬರುತ್ತದೆ.

ಆನಂದು ಹೆತ್ತವರು ತನ್ನನ್ನು ದತ್ತಕದ ಮೇಲೆ ದತ್ತಕ ಕೊಡಲು ಸಿದ್ಧತೆ ನಡೆಸುತ್ತಿರುವಾಗ ಅದನ್ನು ನೇರವಾಗಿ ಪ್ರತಿಭಟಿಸಿ, ನಾನು ದತ್ತು ಹೋಗುವುದಿಲ್ಲ. ಬದುಕುವುದಾದರೆ ನಿಮ್ಮ ಜೊತೆಯಲ್ಲಿಯೇ ಬದುಕುತ್ತೇನೆ ಎನ್ನಬಹುದಿತ್ತು. ಆದರೆ ಯಾವುದೇ ಪ್ರತಿಭಟನೆ ಮಾಡದೆ ಸುಮ್ಮನಾಗುತ್ತಾನೆ. ಹೀಗಾಗಿ ಶೋಷಣೆಯನ್ನು ಸಹಿಸಿಕೊಂಡು ಹೋಗುವ ಯಥಾಸ್ಥಿತಿ ಕಾಣಿಸುತ್ತದೆ.

'ಡಾಂಬರು ಬಂದುದು' ಕತೆಯಲ್ಲಿ ಹೊಸೂರಿನ ರಸ್ತೆಗೆ ಡಾಂಬರು ಹಾಕಬೇಕೆಂಬ ಸರ್ಕಾರಿ ಆಜ್ಞೆಯನ್ನು ಪಟೇಲರು ಪಡೆದುಕೊಂಡು, ಆ ಕಾಮಗಾರಿಯಿಂದ ಹಣ ಉಳಿಸಿ ದೇವಸ್ಥಾನ ಊರ್ಜಿತಗೊಳಿಸಲು ತೀರ್ಮಾನಿಸುತ್ತಾರೆ. ಇದರಿಂದ ಸರ್ಕಾರಿ ಹಣವನ್ನು ನಿಗದಿಗೊಳಿಸಿದ ಕೆಲಸಕ್ಕೆ ಸಂಪೂರ್ಣವಾಗಿ ಬಳಸದೆ, ಬೇರೊಂದು ಕೆಲಸಕ್ಕೆ ಬಳಸಲು ಪ್ರಯತ್ನಿಸಿದ ಪಟೇಲರ ವಿರುದ್ಧ, ವಾಚಕರವಾಣಿಗೆ ಓದುಬರಹ ಕಲಿತ ಊರಿನ ಕೆಲವು ಪಡ್ಡೆ ಹುಡುಗರು ಪತ್ರ ಬರೆದು ವಿರೋಧಿಸುತ್ತಾರೆ.

ಇಲ್ಲಿ ಪಟೇಲರು ಯಾರ ಸಲಹೆ, ಸೂಚನೆಗಳನ್ನು ಕೇಳದೆ ಸರ್ವಾಧಿಕಾರಿಯಂತೆ ನಡೆದು-ಕೊಳ್ಳುವುದರಿಂದ ಶೋಷಣೆ ಎನಿಸುತ್ತದೆ. ಆದ್ದರಿಂದ ಪಡ್ಡೆ ಹುಡುಗರು ಪಟೇಲರ ವಿರುದ್ಧ ವಾದಕರವಾಣಿಗೆ ಪತ್ರ ಬರೆಯುವುದರಲ್ಲಿ ಪ್ರತಿಭಟನೆ ವ್ಯಕ್ತವಾಗಿದೆ. ಹಾಗೆಯೇ ವಾದಕರವಾಣಿಗೆ ಪತ್ರ ಬರೆದಿರುವುದನ್ನು ಖಂಡಿಸಿ ಪಡ್ಡೆ ಹುಡುಗರಾದ ರಾಜಪ್ಪ, ಶಂಭು, ಲಕುಮ ಮತ್ತು ಮಾಧು ಇವರ ವಿರುದ್ಧ ಪಟೇಲರು ಮತ್ತು ಗ್ರಾಮಸ್ಥರು ನ್ಯಾಯಕ್ಕೆ ಸೇರುತ್ತಾರೆ. ಅಲ್ಲಿ ಈ ಹುಡುಗರು ಹಾಗೂ ಪಟೇಲರ ಬೆಂಬಲಿಗರ ನಡುವೆ ಘರ್ಷಣೆ ನಡೆಯುತ್ತದೆ. ಅಲ್ಲದೆ ಹಾಂಬರಿನ ಕ್ರಮಗಳನ್ನು ಬೆಲ್ಲಾಪಿಲ್ಲಿಗೊಳಿಸುವುದರ ಮೂಲಕ ತೀವ್ರತರವಾದ ಪ್ರತಿಭಟನೆಯನ್ನು ಈ ಹುಡುಗರು ಮಾಡುತ್ತಾರೆ.

ಪಟೇಲರು ಮತ್ತು ಗ್ರಾಮಸ್ಥರು ಈ ಪಡ್ಡೆ ಹುಡುಗರು ವಾದಕರವಾಣಿಗೆ ಪತ್ರ ಬರೆದಿರುವುದನ್ನು ಖಂಡಿಸಿ ಊರಿನಲ್ಲಿ ನ್ಯಾಯಕ್ಕೆ ಸೇರಿ ಈ ಹುಡುಗರ ವಿರುದ್ಧ ತಿರುಗಿ ಬೀಳುತ್ತಾರೆ. ಇಲ್ಲಿ ಪಟೇಲರ ಅವ್ಯವಹಾರಕ್ಕೆ ಮಾನ್ಯತೆ ಕೊಟ್ಟು ಗ್ರಾಮಸ್ಥರೆಲ್ಲರು ಪಟೇಲರ ಶೋಷಣೆಯ ಪರ ಒಂದುಗೂಡಿ ಹುಡುಗರ ವಿರುದ್ಧ ಹೋರಾಡುತ್ತಾರೆ. ಆದರೆ ಇದೇ ಗ್ರಾಮಸ್ಥರು ಪಟೇಲರ ಶೋಷಣೆ ಕಣ್ಣೆದುರೇ ನಡೆಯುತ್ತಿದ್ದರೂ, ಅದರ ವಿರುದ್ಧ ಹೋರಾಟ ನಡೆಸದೆ ಸುಮ್ಮನಾಗುವುದರಲ್ಲಿ ಯಥಾಸ್ಥಿತಿ ಮೂಡಿದೆ.

'ಮೂಡಲು ಸೀಮೇಲಿ ಕೊಲೆಗಿಲೆ ಮುಂತಾಗಿ' ಕತೆಯಲ್ಲಿ ಆರಂಭದಿಂದ ಅಂತ್ಯದವರೆಗೂ ಸರ್ವವ್ಯಾಪಿಯಾಗಿ ಶೋಷಣೆ ಆವರಿಸಿದೆ. ಮೊದಲನೆಯದಾಗಿ ಗೌಡರ ಹತ್ತಿರ ಒಮ್ಮೆ ರಂಗಪ್ಪ ಜೋಳ ಕೇಳುವಾಗ ಮೈಯನ್ನು ಕುಗ್ಗಿಸಿಕೊಂಡು ನಿಂತಿರುತ್ತಾನೆ. ಗೌರವ್ವ ನಾಲ್ಕು ಸೇರು ಜೋಳ ತಂದಿಟ್ಟು, ಮುಖ ತಿರುಗಿಸಿಕೊಂಡು ಹೋಗುತ್ತಾಳೆ. ಅಲ್ಲದೆ ಗೌಡರು ಇನ್ನು ಫಸಲು ಬರುವತನಕ ಕೇಳಬೇಡ ಅಂತ ಹೇಳುತ್ತಾರೆ. ಆದರೆ ಪ್ರತಿನಿತ್ಯ ಗೌಡರ ಹಟ್ಟಿಯಲ್ಲಿಯೆ ದುಡಿಯುವುದರಿಂದ, ಇಲ್ಲಿ ಊಟಕ್ಕಾಗಿ ಜೋಳ ಕೇಳುವುದು ರಂಗಪ್ಪನ ಹಕ್ಕು. ಆದರೂ ಸಹ ಗೌಡ, ಗೌಡತಿಯರ ಈ ಶೋಷಣೆಯ ವಿರುದ್ಧ ಯಾವುದೇ ಪ್ರತಿಭಟನೆ ತೋರದೆ ಎಲ್ಲದಕ್ಕೂ ತಲೆಯಾಡಿಸುತ್ತ ಸುಮ್ಮನಾಗುತ್ತಾನೆ. ಮತ್ತೊಂದು

ದಿನ ಹಸಿವಿನಿಂದ ಬಳಲುತ್ತಿರುವ ತನ್ನ ಕುಟುಂಬದ ಒಂದು ಹೊತ್ತಿನ ಗಂಜಿಗಾಗಿ, ಗೌಡರನ್ನು ನೋಡಿಬರಲು ಹೋಗುತ್ತಿರುತ್ತಾನೆ. ದಾರಿಯಲ್ಲಿ ಲೈಟುಕಂಬ ನೆಡುತ್ತಿದ್ದವರು ಬಾ ರಂಗಪ್ಪ ಸ್ವಲ್ಪ ಹೆಗಲು ಕೊಡು ಅಂತ ಕರೆಯುತ್ತಾರೆ. ಎಷ್ಟಾದರೂ ಊರೊಟ್ಟಿನ ಕೆಲಸವೆಂದು ಹೆಗಲುಕೊಟ್ಟು ಸಹಾಯ ಮಾಡುತ್ತಾನೆ. ಆದರೆ ಮೂರು ದಿನದಿಂದ ಹೊಟ್ಟೆಗಿಲ್ಲದೆ ಹಸಿವಿನಿಂದ ನರಳುತ್ತಿದ್ದರಿಂದ ತುಂಬಾ ಸುಸ್ತಾಗಿ ಪಕ್ಕದಲ್ಲೇ ಇದ್ದ ಶಾಸ್ತ್ರಿ ಮೇಸ್ಟ್ರು ಮನೆಗೆ ನೀರು ಕುಡಿಯಲು ಹೋಗುತ್ತಾನೆ. ರಂಗಪ್ಪನ ಜಾತಿಯವನೇ ಆದ ಹೊಸ ಮೇಸ್ಟ್ರಿಗೆ ತಮ್ಮದೆ ಲೋಟದಲ್ಲಿ ನೀರು ಕುಡಿಯಲು ಕೊಡುವ ಶಾಸ್ತ್ರಿ ಮೇಸ್ಟ್ರು, ಒಂದೇ ಊರಿನ ಈ ರಂಗಪ್ಪನಿಗೆ ಲೋಟದಲ್ಲಿ ಕೊಡದೆ, ಬೊಗಸೆಯೊಡ್ಡಿದ ಆತನ ಕೈಯೊಳಗೆ ಬಿಡುತ್ತಾರೆ. ಇಲ್ಲಿ ಜಾತಿಯ ಶೋಷಣೆಯಾದರೂ ಯಾವುದೇ ಪ್ರತಿಭಟನೆ ರಂಗಪ್ಪನಿಂದ ನಡೆಯುವುದಿಲ್ಲ.

ಆನಂತರ ಗೌಡರ ಮನೆಗೆ ಬಂದಾಗ ಗೌಡರು ಹಳ್ಳಿಕಡೆ ಹೋಗಿದ್ದರಿಂದ ಗೌರವ್ವನನ್ನ — ಮನೆಯಲ್ಲಿ ಊಟಕ್ಕೆ ತುಂಬಾ ತೊಂದರೆಯಾಗಿದೆ. ಸ್ವಲ್ಪ ಜೋಳ ಇದ್ದರೆ ಕೊಡಿ ಅಂಥ ಕೇಳುತ್ತಾನೆ. ಅದಕ್ಕೆ ಆಕೆ ವ್ಯಂಗ್ಯವಾಗಿ ನುಡಿಯುವುದರ ಮೂಲಕ ಜೋಳ ಇಲ್ಲವೆಂದು ತಿಳಿಸುತ್ತಾಳೆ. ಅಲ್ಲದೆ ಮನೆಯಲ್ಲಿ ಸೌದೆಯಿಲ್ಲ; ಒಂದು ಸೌದೆಯ ಕೊಂಟದೆ, ಅದನ್ನು ಹೊಡೆದುಕೊಡು ಎಂದು ಕೊಡುತ್ತಾಳೆ. ಆಗ ಮೌನವಾಗಿ ರಂಗಪ್ಪ ಸೌದೆ ಹೊಡೆಯಲು ಪ್ರಯತ್ನಿಸುತ್ತಾನೆ. ಇಲ್ಲಿ ರಂಗಪ್ಪನ ಶ್ರಮವನ್ನು ಅಪೇಕ್ಷಿಸುವ ಗೌರವ್ವ, ಆತನಿಗೆ ಯಾವುದೇ ರೀತಿಯ ಸಹಾಯ ಮಾಡುವುದಿಲ್ಲ. ಆದ್ದರಿಂದ ಇಲ್ಲಿ ಶ್ರೀಮಂತರು ಬಡವರನ್ನು ಶೋಷಿಸುವ ಒಂದು ರೀತಿಯ ವರ್ಗ ಶೋಷಣೆ ಕಂಡುಬರುತ್ತದೆ. ಇಷ್ಟಾದರೂ ಯಾವುದೇ ಪ್ರತಿಭಟನೆ ರಂಗಪ್ಪನಿಂದ ವ್ಯಕ್ತವಾಗುವುದಿಲ್ಲ.

ಪಿ.ಲಂಕೇಶರವರು "ಇಲ್ಲಿ ಎಲ್ಲಿದೆ ಪ್ರತಿಭಟನೆ, ಸಿಟ್ಟು? ಅದು ಆತ್ಮಗೌರವದಲ್ಲಿ ರಂಗಪ್ಪನ ಹಸಿವು ಮತ್ತು ಎಲ್ಲದಕ್ಕೆ ತಲೆಯಾಡಿಸುತ್ತ ನಡೆಯುವ ಸಜ್ಜನಿಕೆಯಲ್ಲಿ ಇದೆ"[1] ಎಂದು ಹೇಳುತ್ತಾರೆ. ಇದು ಪ್ರಶ್ನಾರ್ಹ. ಮೌನದಲ್ಲಿ ಪ್ರತಿಭಟನೆ ಅಡಗಿದೆ ಎಂದಾದರೆ ಎಲ್ಲೋ ಆಗಲಿ ಪ್ರತಿಭಟನೆ ಇಲ್ಲ ಎನ್ನುವುದೇ ತಪ್ಪಾಗುತ್ತದೆ.

---

1. ದೇವನೂರ ಮಹಾದೇವ ಅವರ ಕೃತಿಗಳು — ಸಂಪಾದಕ: ಪಿ.ಲಂಕೇಶ —1992, ಮುನ್ನುಡಿ, ಪುಟ. II.

'ಅಮಾಸ' ಕತೆಯಲ್ಲಿ ಕಂಡುಬರುವ ಪ್ರತಿಭಟನೆ ಎಂದರೆ ದಿನನಿತ್ಯದ ಜೀವನದಲ್ಲಿ ರಾಜಕಾರಣಿ, ಕಂಟ್ರಾಕ್ಟರ, ರೈಲ್ವೆಬಾಸ, ಸಾಲಕೊಡುವ ಮಾದಪ್ಪ, ಇನ್ನೂ ಮುಂತಾದವರಿಂದ ನಡೆಯುವ ಶೋಷಣೆಯ ವಿರುದ್ಧ ರೈಲ್ವೆಗ್ಯಾಂಗಮೆನ್ನ ಸಿದ್ದಪ್ಪ ಕುಡಿದ ಮತ್ತಿನಲ್ಲಿ ತನ್ನ ಪ್ರತಿಭಟನೆಯನ್ನು ವ್ಯಕ್ತಪಡಿಸುತ್ತಾನೆ.

ಗೌಡರಿಂದ ಹಿಂದೆ ಕುರಿಯಯ್ಯನಿಗೆ ಆದ ಶೋಷಣೆ, ವರ್ತಮಾನದಲ್ಲಿ ನಡೆಯುತ್ತಿರುವ ಶೋಷಣೆ ಹಾಗೂ ಭವಿಷ್ಯದಲ್ಲಿ ಅಮಾಸನಿಗೆ ಆಗಬಹುದಾದ ಶೋಷಣೆಯ ವಿರುದ್ಧ, ಕುರಿಯಯ್ಯನಿಂದಾಗಲೀ, ಅಮಾಸನಿಂದಾಗಲೀ ಪ್ರತಿಭಟನೆ ನಡೆಯುವುದಿಲ್ಲ. ಬದಲಾಗಿ ಇವರೆಲ್ಲರೂ ಶೋಷಣೆಯನ್ನು ಸಹಿಸಿಕೊಂಡು ಜೀವನ ನಡೆಸುವುದು ಕಂಡುಬರುತ್ತದೆ.

'ಒಡಲಾಳ' ಕೃತಿಯಲ್ಲಿ ಕಂಡುಬರುವ ಪ್ರತಿಭಟನೆ ಎಂದರೆ ಸಾಕವ್ವ ಕಡೆಗಾಲದಲ್ಲಿ ತನ್ನ ಆಸ್ತಿಯನ್ನೆಲ್ಲ ಮೊಮ್ಮಗನಿಗೆ ಅಂದರೆ ಮಗಳ ಕಿರಿಮಗನ ಹೆಸರಿಗೆ ಬರೆದು ಸಾಯುತ್ತೇನೆ ಎನ್ನುತ್ತಾಳೆ. ಇದರಿಂದ ಕುಪಿತನಾದ ಸಾಕವ್ವನ ಮಗ ಸಣ್ಣಯ್ಯ ಆಸ್ತಿ ಎಲ್ಲಿ ತನ್ನ ಕೈಗೆ ಸಿಗದೆ ಹೋಗುತ್ತದೋ ಎಂದು ತಿಳಿದು ತಾಯಿಗೆ ಎದುರಾಗಿ ಪ್ರತಿಭಟನೆ ಮಾಡುತ್ತಾನೆ. ಅದಕ್ಕೆ ಸಾಕವ್ವ ಸಣ್ಣಯ್ಯನ ಪ್ರತಿಭಟನೆಯನ್ನು ಲೆಕ್ಕಿಸದೆ, ಆಸ್ತಿಯನ್ನು ನಾನು ಸಂಪಾದಿಸಿದ್ದು, ಅದು ನನ್ನ ಸ್ವಯಾರ್ಜಿತವೆಂದು, ಕಾನೂನು ಬದ್ಧವಾಗಿ ಮಾತನಾಡುವುದರ ಮೂಲಕ ಮಗನ ಪ್ರತಿಭಟನೆಯನ್ನು ಅಡಗಿಸುತ್ತಾಳೆ. ಅತ್ತೆಯ ಈ ವರ್ತನೆಯಿಂದ ರೋಷಗೊಂಡು ಸಣ್ಣಯ್ಯನ ಹೆಂಡತಿ ಚೆಲುವಮ್ಮ ಸಾಕವ್ವನ ವಿರುದ್ಧ ತಿರುಗಿ ಬೀಳುತ್ತಾಳೆ. ಅಲ್ಲದೆ ಅತ್ತೆಯಾದ ಸಾಕವ್ವ ಒಂದು ವಿಧದಲ್ಲಿ ನಮ್ಮನ್ನೆಲ್ಲ ಶೋಷಣೆ ಮಾಡುತ್ತಿದ್ದಾಳೆಂದು ತಿಳಿದು, ಕಠಿಣವಾದ ವಾಗ್ವಾದ ನಡೆಸುವುದರ ಮೂಲಕ ಅತ್ತೆಯ ವಿರುದ್ಧ ತನ್ನ ಪ್ರತಿಭಟನೆ ವ್ಯಕ್ತಪಡಿಸುತ್ತಾಳೆ.

ಹಸಿವಿನಿಂದಾಗಿ ಕಾಳಣ್ಣ ಕಡ್ಲೆಕಾಯಿ ಕದ್ದು ತಂದಿದ್ದರಿಂದ ಪೋಲಿಸ ಇಲಾಖೆಯವರು ಸಾಕವ್ವನ ಮನೆ ಜಪ್ತಿಮಾಡುತ್ತಾರೆ. ಈ ಸಂದರ್ಭದಲ್ಲಿ ಮನೆಮಂದಿಯನ್ನು ಹಿಂಸಿಸುತ್ತ ಕಡ್ಲೆಕಾಯಿ ಮೂಟೆಗಾಗಿ ಶೋಧನೆ ನಡೆಸುತ್ತಾರೆ; ಆಸ್ತಿ ವಿಚಾರವಾಗಿ ತಾಯಿಯ ವಿರುದ್ಧ ಪ್ರತಿಭಟನೆ ನಡೆಸಿದ ಸಣ್ಣಯ್ಯನಾಗಲಿ, ಅತ್ತೆಯ ವಿರುದ್ಧ ವಾಗ್ವಾದ ನಡೆಸಿದ ಚೆಲುವಮ್ಮನಾಗಲಿ ಅಥವಾ ಕಾನೂನುಮಿಶ್ರಿತವಾಗಿ ಮಾತನಾಡುವುದರ ಮೂಲಕ ಸಣ್ಣಯ್ಯ, ಚೆಲುವಮ್ಮರ

ಪ್ರತಿಭಟನೆಯನ್ನು ಅಡಗಿಸಿದ ಸಾಕವ್ವನಿಂದಾಗಲೀ ಯಾವುದೇ ವಿಧವಾದ ಪ್ರತಿಭಟನೆ ಪೋಲೀಸಿನವರ ವಿರುದ್ಧ ನಡೆಯುವುದಿಲ್ಲ. ಈ ಎಲ್ಲರು ಪೋಲೀಸಿನವರ ದೌರ್ಜನ್ಯಕ್ಕೆ ಒಳಗಾಗಿ ಸುಮ್ಮನಾಗುತ್ತಾರೆ. ಆದರೂ ಪಿ.ಲಂಕೇಶರವರು "ಪ್ರತಿಭಟನೆಯ ಅರ್ಥಪೂರ್ಣ ರೂಪ ಒಡಲಾಳ"[1] ಎಂದು ಹೇಳಿರುವ ಮಾತು ಇಲ್ಲಿ ಸಮಂಜಸವಾಗಿ ಕಾಣುತ್ತದೆ. ಏಕೆಂದರೆ ಇಡೀ ಮೂಟೆ ಸಾಕವ್ವನ ಕುಟುಂಬದ ಹೊಟ್ಟೆ ಸೇರಿದ್ದು ಪೋಲೀಸಿನವರಿಗೆ ಸುಳಿವೆ ಸಿಗದೆ ಸವಾಲಾಗುತ್ತದೆ. ಇದು ಕೂಡ ಒಂದು ವಿಧದಲ್ಲಿ ಪ್ರತಿಭಟನೆಯಾಗಿದೆ. ಹಾಗೆಯೇ ಕಡ್ಲೆಕಾಯಿ ಮೂಟೆ ಬಗ್ಗೆ ವಿಚಾರಣೆ ಮಾಡುತ್ತಿದ್ದ ಇನ್ಸ್‌ಪೆಕ್ಟರ ರೂಲುದೊಣ್ಣೆಯಿಂದ ಪುಟಗೌರಿಯ ಗಲ್ಲವನ್ನು ಸವರುತ್ತಿರುತ್ತಾನೆ. ಇದನ್ನು ನೋಡಿ ಸಹಿಸಲಾರದ ಗುರುಸಿದ್ದ ಇನ್ಸ್‌ಪೆಕ್ಟರನನ್ನು ದುರುಗುಟ್ಟಿ ನೋಡುವುದರಲ್ಲಿ ತನ್ನ ಪ್ರತಿಭಟನೆಯನ್ನು ವ್ಯಕ್ತಪಡಿಸುತ್ತಾನೆ.

ಕೊನೆಯದಾಗಿ 'ಕುಸುಮಬಾಲೆ' ಕಾದಂಬರಿಯಲ್ಲಿ ಕಂಡುಬರುವ ಪ್ರತಿಭಟನೆ ಮತ್ತು ಯಥಾಸ್ಥಿತಿ ಎಂದರೆ ವಿಧವೆಯಾದ ಅಕ್ಕಮಾದೇವಮ್ಮ ಆರು ವರ್ಷದ ಬಳಿಕ ಅಪ್ಪ ಸತ್ತ ಹನ್ನೆರಡು ತಿಂಗಳಿಗೆ, ಹುಟ್ಟು ಜೀತಗಾರನಿಗೆ ಹುಟ್ಟಿದವನೆಂಬ ಅಪವಾದದ ತನ್ನ ಕೂಸು ಯಾಡನೊಡನೆ, ಗಂಡನ ಮನೆಗೆ ಆಸ್ತಿ ಪಾಲಿಗಾಗಿ ಬರುತ್ತಾಳೆ. ಆದರೆ ಆಕೆಯ ಭಾವನಾದ ಬಸಪ್ಪಸ್ವಾಮಿ ಇವಳನ್ನು ಕೆಟ್ಟ ನಡತೆಯುಳ್ಳವಳೆಂದು ಮನೆಗೆ ಸೇರಿಸುವುದಿಲ್ಲ. ಅಲ್ಲದೆ ಅವನ ತಮ್ಮನಾದ ಸಿದ್ದಾರನು ಇವಳನ್ನು ಚೆನ್ನಾಗಿ ಥಳಿಸಿ, ಒದ್ದು ಊರಿಂದ ಹೊರಗೆ ಹಾಕುತ್ತಾನೆ. ಇಲ್ಲಿ ಆಸ್ತಿ ವಿಚಾರವಾಗಿ ಹೆಣ್ಣಿನ ಶೋಷಣೆ ನಡೆಯುತ್ತದೆ. ಆದರೆ ಇಷ್ಟೊಂದು ಹಿಂಸಾತ್ಮಕ ಶೋಷಣೆಯಾದರೂ ಕೂಡ, ಆಕೆಯಿಂದ ಯಾವುದೇ ಪ್ರತಿಭಟನೆ ವ್ಯಕ್ತವಾಗುವುದಿಲ್ಲ.

ಈ ಕಾದಂಬರಿ ನಾಮಾಂಕಿತ ಹೆಣ್ಣಾದ ಕುಸುಮಬಾಲೆಯನ್ನು ಆಕೆ ಪ್ರೀತಿಸಿದ ಕೆಳಜಾತಿಯ ಚೆನ್ನನಿಂದ ಬೇರ್ಪಡಿಸಿ, ಅವಳ ಹೆತ್ತವರು ತಮ್ಮದೇ ಜಾತಿಯವನಿಗೆ ಕೊಟ್ಟು

---

1. ದೇವನೂರು ಮಹಾದೇವರ ಅವರ ಕೃತಿಗಳು, ಸಂ: ಪಿ.ಲಂಕೇಶ್ – 1992, ಪುಟ. ಮುನ್ನುಡಿ II.

ಮದುವೆ ಮಾಡಿರುತ್ತಾರೆ. ಅಲ್ಲದೆ ಆಕೆಗೆ ಏನೋ ಪೀಡೆ ಹಿಡಿದಿದೆ ಎಂದು ಮಾಂತ್ರಿಕರನ್ನು ಕರೆಸಿ ನಾಗಬೆತ್ತದಲ್ಲಿ ಹೊಡೆಸುತ್ತಾರೆ. ಇಲ್ಲೂ ಕೂಡ ಒಂದು ಹೆಣ್ಣಿನ ಶೋಷಣೆ ನಡೆಯುತ್ತದೆ. ಆದರೆ ಈ ಶೋಷಣೆಗೆ ಒಳಗಾದ ಕುಸುಮಬಾಲೆಯಿಂದ ಯಾವುದೇ ಪ್ರತಿಭಟನೆ ನಡೆಯುವುದಿಲ್ಲ. ದೇವನೂರರ ಎಲ್ಲಾ ಕತೆಗಳ ಪಾತ್ರಗಳಂತೆ ಈ ಕಾದಂಬರಿಯ ಪಾತ್ರಧಾರಿಯೂ ಸಹ ತನ್ನ ಮೇಲೆ ದೌರ್ಜನ್ಯ ನಡೆಯುತ್ತಿದ್ದರೂ ಅದನ್ನು ಸಹಿಸಿಕೊಂಡು ಹೋಗುತ್ತಾಳೆ.

ಮತ್ತೊಂದೆಡೆ ಜೀತ ವಿಮುಕ್ತತೆಗಾಗಿ ನಾಗರಾಜು, ಗಾರೆಸಿದ್ದಮಾವ, ಕೃಷ್ಣಪ್ಪ, ಬೆಳ್ಳಯ್ಯ, ರಾಕಪ್ಪ, ಅಮಾನ ಮುಂತಾದ ದಲಿತ ಸಂಘದ ಕಾರ್ಯಕರ್ತರು ಹಾಗೂ ದಲಿತ ಮುಖಂಡರು ಪ್ರತಿಭಟನಾ ಮೆರವಣಿಗೆ ನಡೆಸುತ್ತಿರುತ್ತಾರೆ. ಆಗ ಚೆನ್ನನ ಅಪ್ಪ ಬೀಡಿಗಾಗಿ ಶಿವಚಾರದವರ ಅಂಗಡಿ ಹತ್ತಿರ ಹೋಗಿ ನಿಲ್ಲುತ್ತಾನೆ. ಈ ಸಂದರ್ಭದಲ್ಲಿ ಶಿವಚಾರದ ಜನ ಚೆನ್ನನ ಅಪ್ಪನ ಜೊತೆ " ಜೀತ ಬುಟ್ಮಾಕ್ಲ ಹೊಲಾರ್ನೇನ ಮಾತಾಡ್ಸಕ ಅದಯ್ಯ " ಎಂದು ವ್ಯಂಗ್ಯವಾಗಿ ನುಡಿಯುವುದರ ಮೂಲಕ ದಲಿತ ವರ್ಗವನ್ನು ಹೀಯಾಳಿಸುತ್ತಾರೆ. ಇಲ್ಲಿ ಮೇಲ್ಜಾತಿಯವರಿಂದ ಜಾತಿನಿಂದನೆ ನಡೆಯುತ್ತದೆ. ಈ ಶೋಷಣೆಯ ವಿರುದ್ಧ ದಲಿತ ವರ್ಗದವನಾದ ಚೆನ್ನನ ಅಪ್ಪ ಪ್ರತಿಭಟನೆ ಮಾಡಬಹುದಿತ್ತು. ಅಥವಾ ದಲಿತ ಸಂಘಕ್ಕಾಗಲಿ ಇಲ್ಲಾ ದಲಿತ ಮುಖಂಡರಿಗಾಗಲಿ ತಿಳಿಸಿ ಮೇಲ್ವರ್ಗದವರ ವಿರುದ್ಧ ಪ್ರತಿಭಟಿಸಬಹುದಿತ್ತು. ಆದರೆ ಹಾಗೆ ಮಾಡದೆ ಗುಳ್ಳನರಿ ಕತೆಯನ್ನು ಉದಾಹರಣೆ ಕೊಡುವುದರ ಮೂಲಕ ಮೇಲ್ವರ್ಗದವರ ಪರವಾಗಿಯೇ ಮಾತನಾಡುತ್ತಾನೆ. ಆದ್ದರಿಂದ ಇಲ್ಲಿ ಯಥಾಸ್ಥಿತಿ ಕಂಡುಬರುತ್ತದೆ.

ಈ ಕಾದಂಬರಿಯಲ್ಲಿ ಪ್ರತಿಭಟನೆ ಕಂಡುಬರುವ ಸನ್ನಿವೇಶವೆಂದರೆ ಗಾರೆಸಿದ್ದಮಾವ ಮೇಲ್ವರ್ಗದವರ ತೋಟದಲ್ಲಿ ಎಳನೀರನ್ನು ಕದ್ದು ಸಿಕ್ಕಿಕೊಂಡಿರುತ್ತಾನೆ. ಅವರು ಗಾರೆಸಿದ್ದಮಾವನನ್ನು ಹೊಡೆದು ಹಿಂಸಿಸುತ್ತ, ನೂರವಂದು ರೂಪಾಯಿ ತಪ್ಪು ಕೊಡು ಅಂಥ ಕೇಳುತ್ತಾರೆ. ಆದರೆ ಗಾರೆಸಿದ್ದಮಾವ ಎಳನೀರನ್ನು ನಾನು ಕದ್ದಿಲ್ಲ, ಕೇವಲ ಕುಡಿಯುವುದಕ್ಕೆ ಕಿತ್ತುಕೊಂಡೆ ಎನ್ನುತ್ತಾನೆ. ಅಲ್ಲದೆ ತನ್ನ ಜೇಬಿನಿಂದ ತಪ್ಪು ಕಾಣಿಕೆಯ ಹಣ ಸಹ ಕೊಡದೆ ಮೇಲ್ವರ್ಗದವರ ಹಿಂಸೆಯ ವಿರುದ್ಧ ಪ್ರತಿಭಟಿಸುತ್ತಾನೆ.

ಇ) ವಸ್ತುಸ್ಥಿತಿಯ ಸ್ವೀಕಾರ:

ಯಾವ ರೀತಿಯ ಪ್ರತಿಭಟನೆಯಿಲ್ಲದೆ ವಿಷಯ ಹೇಗಿದೆಯೋ ಹಾಗೆಯೆ ಸ್ವೀಕಾರಗೊಂಡಿರುವುದಕ್ಕೆ ವಸ್ತುಸ್ಥಿತಿಯ ಸ್ವೀಕಾರ ಎನ್ನಬಹುದು. ಅಂದರೆ ನಿತ್ಯಜೀವನದಲ್ಲಿ ಎದುರಾಗುವ ಯಾವುದೇ ಸಮಸ್ಯೆಯ, ಶೋಷಣೆಯ ಅಥವಾ ದೌರ್ಜನ್ಯದ ವಿರುದ್ಧ ತಮ್ಮ ಪ್ರತಿಕ್ರಿಯೆಯನ್ನು ತೋರದೆ, ಅದರ ಚೌಕಟ್ಟಿನೊಳಗೆ ಸಿಲುಕಿಕೊಂಡು ನರಳುತ್ತ ಅಥವಾ ನೋಡುತ್ತಾ ಸುಮ್ಮನಾಗುವುದಾಗಿದೆ. ಇದರ ಬಗ್ಗೆ ಹಿಂದಿನ 'ಪ್ರತಿಭಟನೆ ಮತ್ತು ಯಥಾಸ್ಥಿತಿ ವಿಭಾಗದಲ್ಲಿನ 'ಯಥಾಸ್ಥಿತಿ ಭಾಗದಲ್ಲಿಯೇ ಹೇಳಿರುವುದರಿಂದ ಇದರ ಕುರಿತು ಇಲ್ಲಿ ಚರ್ಚಿಸಲಾಗಿಲ್ಲ.

ಈ) ನೀತಿಮೀರಿದ ಜೀವನ ಗ್ರಹಿಕೆ:

ಸಮಾಜದ ಸುವ್ಯವಸ್ಥೆಯನ್ನು ಕಾಪಾಡಲು ಹಾಗೂ ಜನರು ನೆಮ್ಮದಿಯ ಜೀವನ ಸಾಗಿಸಲು, ಜನರು ಸಮಾಜಬಾಹಿರ ಕೆಲಸಗಳನ್ನು ಮಾಡಬಾರದು ಎಂದು ವ್ಯವಸ್ಥೆಯು ಕೆಲವು ಕಟ್ಟುಪಾಡುಗಳನ್ನು ಮಾಡಿರುತ್ತದೆ. ಹೀಗಾಗಿ ಕೆಲವೊಂದು ಚಟುವಟಿಕೆಗಳನ್ನು ನೀತಿಬಾಹಿರವೆಂದು ವರ್ಗೀಕರಿಸಲಾಗಿದೆ. ಆದರೆ ಕೆಲವು ಜನರು ವ್ಯವಸ್ಥೆಯ ಕಟ್ಟುಪಾಡುಗಳನ್ನು ಮೀರಿ ಅದು ಕೆಟ್ಟದು ಎಂದು ಗೊತ್ತಿದ್ದರು ಕೂಡ, ಅದೇ ಕೆಲಸಗಳನ್ನು ಅಂದರೆ ಕಳ್ಳತನ, ವೇಶ್ಯಾವೃತ್ತಿ, ಮುಂತಾದ ಸಮಾಜಬಾಹಿರವಾದ ಅನೈತಿಕ ಚಟುವಟಿಕೆಗಳಲ್ಲಿ ತೊಡಗಿ, ಅದನ್ನೇ ವೃತ್ತಿಯನ್ನಾಗಿ ಮಾಡಿಕೊಂಡು ಬದುಕುತ್ತಾರೆ. ಅಲ್ಲದೆ ಅದರ ಬಗ್ಗೆ ಕೂಡ ಚಿಂತಿಸುವುದಿಲ್ಲ. ಇಂತಹ ಜೀವನದ ನೀತಿಮೀರಿದ ಮನಸ್ಥಿತಿಯನ್ನು ಇಲ್ಲಿ ನೀತಿ ಮೀರಿದ ಜೀವನಗ್ರಹಿಕೆ ಎನ್ನಲಾಗಿದೆ.

ಮಾರಿಕೊಂಡವರು ಕತೆಯಲ್ಲಿನ ಲಕ್ಷ್ಮಿ ತನ್ನ ಗಂಡ ಬೀರ ಇದ್ದರು ಕೂಡ, ತನ್ನ ಮೈಯನ್ನು ಪರಪುರುಷನಾದ ಕಿಟ್ಟಪ್ಪನಿಗೆ ಒಪ್ಪಿಸಿಕೊಳ್ಳುತ್ತಾಳೆ. ಇದಕ್ಕೆ ಕಾರಣ ಪರಿಸ್ಥಿತಿಯ ಅನಿವಾರ್ಯತೆ ಇರಬಹುದು. ಆದರೆ ಅವಳ ಅನುಮತಿ ಪಡೆದ ನಂತರವೇ ಕಿಟ್ಟಪ್ಪ ಅವಳನ್ನು ಅನುಭವಿಸುವುದು. ಆಕೆಗೆ ಈ ಕೆಲಸ ಕೆಟ್ಟದು ಎಂದು ಗೊತ್ತಿದ್ದರೂ ಕೂಡ ಅದರ ಬಗ್ಗೆ ಅವಳು ಚಿಂತಿಸುವುದೇ ಇಲ್ಲ. ಈ ವಿಚಾರ ಕಾಲಾನಂತರ ಆಕೆಯ ಗಂಡನಾದ ಬೀರನಿಗೆ

ಗೊತ್ತಿದ್ದರೂ ಕೂಡ, ಇದನ್ನು ನೇರವಾಗಿ ವಿರೋಧಿಸಲು ಯಾವುದೇ ಪ್ರಯತ್ನವನ್ನಾಗಲೀ ಅಥವಾ ಶಿವಪ್ಪನ ವಿರುದ್ಧ ಪ್ರತಿಭಟನೆಯನ್ನಾಗಲೀ ಮಾಡುವುದಿಲ್ಲ. ಅಲ್ಲದೇ ಪರೋಕ್ಷವಾಗಿ ತಲೆಹಿಡುಕತನ ಮಾಡುವುದರ ಮೂಲಕ ಅಪ್ರತ್ಯಕ್ಷವಾಗಿ ಶಿವಪ್ಪನಿಗೆ ಬೆಂಬಲಿಗನಾಗುತ್ತಾನೆ. ಇಲ್ಲೂ ಕೂಡ ಬೀರನಿಗೆ ಪರಿಸ್ಥಿತಿಯ ಅನಿವಾರ್ಯತೆ ಇರಬಹುದು. ಆದರೆ ಶಿವಪ್ಪನನ್ನು ಧಿಕ್ಕರಿಸಿ ಬೀರ ಮತ್ತು ಲಕ್ಷ್ಮಿ ಇಬ್ಬರೂ ಎಲ್ಲಾದರೂ ದೂರ ಹೊರಟುಹೋಗಬಹುದಿತ್ತು. ಏಕೆಂದರೆ ಇವರೇನು ಜೀತದಾಳುಗಳಾಗಿರಲಿಲ್ಲ.

'ಅಮಾಸ' ಕಥೆಯಲ್ಲಿ ಬಂಗಾರಿ ಎಂಬುವಳು ಮದುವೆಯಾಗಿ ಆರೇಳು ವರ್ಷವಾದರೂ ಗಂಡನಿಂದ ಮಕ್ಕಳಾಗಲಿಲ್ಲವೆಂದು ಹಾದರ ಮಾಡುತ್ತಾಳೆ. ಆಕೆಗೆ ಪರಪುರುಷನನ್ನು ಕೂಡುವುದು ಅನೈತಿಕವಾದುದು ಹಾಗೂ ನೀತಿಬಾಹಿರವೆಂದು ಗೊತ್ತಿದ್ದರೂ ಕೂಡ ಅದರ ಬಗ್ಗೆ ಆಕೆ ಚಿಂತಿಸಿದಂತೆ ಕಾಣುವುದಿಲ್ಲ. ಮಕ್ಕಳ ಫಲಕ್ಕಾಗಿ ಮಾಡಬಾರದನ್ನೆಲ್ಲ ಮಾಡಿ ನೋಡುತ್ತಾಳೆ.

'ಒಡಲಾಳ' ಕಾದಂಬರಿಯಲ್ಲಿ ಸಾಕವ್ವನ ಹಿರಿಯ ಮಗ ಕಾಳಣ್ಣ ಸಾಹುಕಾರ ಎತ್ತಪ್ಪನವರ ಎಸ್ಟೇಟಿನಿಂದ ಒಂದು ಚೀಲ ಕಡ್ಲೆಕಾಯಿ ಕದ್ದುತರುತ್ತಾನೆ. ಈ ಕದ್ದುತಂದ ಕಡ್ಲೆಕಾಯಿಯನ್ನು ಸಾಕವ್ವ, ಗೌರಮ್ಮ, ಪುಟಗೌರಿ, ಸಣ್ಣಯ್ಯ, ಚೆಲುವಮ್ಮ ಮುಂತಾದ ಮನೆಯಲ್ಲಿನ ಎಲ್ಲಾ ಸದಸ್ಯರೂ ಒಟ್ಟಿಗೆ ಸೇರಿ ತಿನ್ನುತ್ತಾರೆ. ಕಡ್ಲೆಕಾಯಿ ಕದ್ದುತಂದಿರುವುದು ಎಂದು ಮನೆಯಲ್ಲಿನ ಎಲ್ಲಾ ಸದಸ್ಯರಿಗೂ ಗೊತ್ತು. ಆದರೂ ಇದು ನೀತಿಬಾಹಿರ ಕೆಲಸವೆಂದು ಯಾರೂ ಕೂಡ ಯೋಚಿಸುವುದಿಲ್ಲ. ಅಲ್ಲದೆ ಈ ರೀತಿ ಕದ್ದು ತಂದಿರುವುದು ಸರಿಯಲ್ಲವೆಂದು ಯಾರೂ ಸಹ ಕಾಳಣ್ಣನಿಗೆ ಬುದ್ಧಿವಾದ ಹೇಳುವುದಿಲ್ಲ. ಇದರ ಬಗ್ಗೆ ಕಾಳಣ್ಣ ಕೂಡ ತಾನು ಮಾಡಿರುವುದು ಅಪರಾಧವೆಂದು ಭಾವಿಸುವುದೇ ಇಲ್ಲ.

ಹಾಗೆಯೇ ಕಡ್ಲೆಕಾಯಿ ಮೂಟೆಗಾಗಿ ತಪಾಸಣೆಗೆ ಬಂದ ಪೋಲೀಸ ಇಲಾಖೆಯವರು, ಸಾಕವ್ವನ ಮನೆ ಶೋಧನೆ ಮಾಡಿ ಹೋಗುವಾಗ, ಇನ್ಸಪೆಕ್ಟರ್ ಜೊತೆ ಸಾಕವ್ವ ನನ್ನದೊಂದು ಹುಂಜ ಕಳೆದುಹೋಗಿದೆ. ಹುಡುಕಿಕೊಡಿ ಸ್ವಾಮಿ ಎನ್ನುತ್ತಾಳೆ. ಅದಕ್ಕೆ ಇನ್ಸಪೆಕ್ಟರ್ ಆ ಕೋಳಿ ಹೇಗಿತ್ತೆಂದು ಕೇಳಿ, ಸಾಕವ್ವ ತೋರಿಸಿದ ಅದೇ ರೀತಿಯ ಮತ್ತೊಂದು ಹುಂಜವನ್ನು ಹಿಡಿಸಿಕೊಂಡು ಹೋಗುತ್ತಾನೆ. ಇಲ್ಲಿ ಯಾವ ವ್ಯಕ್ತಿ ಕಾನೂನಿನ ನಿಯಮಗಳನ್ನು

ಪಾಲಿಸಬೇಕಾದ ಅಂಥವರಿಂದಲೇ ಕಾನೂನುಬಾಹಿರ ಕೆಲಸ ನಡೆಯುತ್ತದೆ. ಇಲ್ಲಿ ಇನ್ಸ್‌ಪೆಕ್ಟರ್‌ಗೆ ತಾನು ಮಾಡುತ್ತಿರುವುದು ನೀತಿಬಾಹಿರ ಕೆಲಸವೆಂದು ಗೊತ್ತಿದ್ದರೂ ಕೂಡ ಅದರ ಬಗ್ಗೆ ಚಿಂತಿಸದೆ ಸಾಕವ್ವನ ಕೊಲೆಯನ್ನು ಹಿಡಿಸಿಕೊಂಡು ಹೋಗುವುದರ ಮೂಲಕ ಕಣ್ಣೆದುರೇ ಹಗಲು ದರೋಡೆ ಮಾಡುತ್ತಾನೆ.

'ಕುಸುಮಬಾಲೆ' ಕಾದಂಬರಿಯಲ್ಲಿ ತೂರಮ್ಮನ ಮಗಳಾದ ಕೆಂಚಿ ತನ್ನ ಗಂಡನಿಂದ ಮಕ್ಕಳಾಗಲಿಲ್ಲವೆಂದು ಹಾದರ ನಡೆಸುತ್ತಿರುತ್ತಾಳೆ. ಅವಳು ಹಾದರ ನಡೆಸುವುದಕ್ಕೆ ಮೂಲಕಾರಣ ತನಗೊಂದು ಮಗುವಾಗಲಿ ಎಂಬ ಹಂಬಲವಿರಬಹುದು. ಆದರೆ ಇದು ನೀತಿಬಾಹಿರ ಕೆಲಸ. ಅಲ್ಲದೇ ಆಕೆಯ ತಾಯಿಯಾದ ತೂರಮ್ಮನಿಗೆ ಈ ವಿಷಯ ಕೆಂಚಿಯಿಂದಲೇ ಗೊತ್ತಾದರೂ ಪ್ರತಿಭಟಿಸುವ ಮನಸ್ಸಿದ್ದರೂ ನಂತರ ಸುಮ್ಮನಾಗಿ ಬಿಡುತ್ತಾಳೆ. ಇದಕ್ಕೆ ಕಾರಣ ಮಕ್ಕಳಿಲ್ಲದ ಮಗಳಿಗೆ ಹೇಗಾದರೂ ಒಂದು ಮಗುವಾಗಲಿ ಎಂಬುದಿರಬಹುದು.

ಹಾಗೆಯೇ ಅಕ್ಕಮಾದೇವಮ್ಮನ ಮಗನಾದ ಯೂಡನು ಬೇರೆಯವರು ಕೂಡಾಗಿ ಬಿಟ್ಟಂತ ದನಕರು ಇತ್ಯಾದಿಗಳನ್ನು ಸಂತೆಗೆ ಕದ್ದು ಹೊಡೆದುಕೊಂಡು ಹೋಗಿ, ಅವುಗಳನ್ನು ಮಾರಿ ಮನೆಗೆ ಬರುತ್ತಾನೆ. ಕದ್ದು ಮಾರಿದ ವಿಷಯವನ್ನು ಯೂಡನು ತನ್ನ ತಾಯಿಗೆ ಹೇಳುತ್ತಾನೆ. ಆಕೆ ಈ ವಿಷಯ ಕೇಳಿ, ಇದು ನೀತಿಬಾಹಿರವೆಂದು ಗೊತ್ತಾದರೂ ಮಗನಿಗೆ ಯಾವುದೇ ತಿಳಿವಳಿಕೆ ನೀಡುವುದಿಲ್ಲ. ಬದಲಾಗಿ ಸಂತೋಷಪಡುತ್ತಾಳೆ. ಮತ್ತೊಂದು ದಿನ ಯೂಡನು ಒಬ್ಬ ತಮಿಳು ಮಾತನಾಡುವ, ಒಬ್ಬ ತೆಲುಗು ಮಾತನಾಡುವ ಹಾಗೂ ಒಬ್ಬ ಮಲಯಾಳಂ ಮಾತನಾಡುವಂತ ವ್ಯಕ್ತಿಗಳೊಡನೆ ಸೇರಿ ಖೋಟಾನೋಟಿನ ವ್ಯವಹಾರವನ್ನು ಮಾಡುತ್ತಿರುತ್ತಾನೆ. ಒಂದು ದಿನ ಯೂಡ ಹಾಗೂ ಆತನ ತಾಯಿಯಾದ ಅಕ್ಕಮಾದೇವಮ್ಮ ಇಬ್ಬರು ಸೇರಿ ಈ ಮೇಲಿನ ಖೋಟಾನೋಟಿನ ವ್ಯಕ್ತಿಗಳಿಗೆ ಮೋಸಮಾಡಿ ಹಣವನ್ನು ದೋಚಿಕೊಳ್ಳುತ್ತಾರೆ. ಇಲ್ಲೂ ಸಹ ತಾವು ಮಾಡುತ್ತಿರುವುದು ಅನ್ಯಾಯ ಹಾಗೂ ನೀತಿಬಾಹಿರವೆಂದು ಇವರು ಚಿಂತಿಸುವುದೇ ಇಲ್ಲ.

ಈ ಕಾದಂಬರಿಯಲ್ಲಿನ ದಲಿತವರ್ಗಕ್ಕೆ ಸೇರಿದ ವ್ಯಕ್ತಿಯಾದ ಅಮಾಸನು ಮೇಲ್ಜಾತಿಯ ಹೆಂಗಸರ ಮುಟ್ಟಿನ ಸೀರೆಯನ್ನು ಕದ್ದು ಮಾರುವುದನ್ನೇ ತನ್ನ ವೃತ್ತಿಯಾಗಿಸಿಕೊಂಡಿರುತ್ತಾನೆ. ಆತ ಮೇಲ್ಜಾತಿ ಸ್ತ್ರೀಯರು ಮುಟ್ಟಾಗುವುದನ್ನೇ

ಕಾದಿದ್ದು, ಅವರು ತಮ್ಮ ಮುಟ್ಟಿನ ಸೀರೆಯನ್ನು ಮನೆಯ ಹೊರಗಿನ ಸೂರಿಗೆ ಸಿಕ್ಕಿಸುವುದನ್ನೇ ಕಾದಿದ್ದು ನೋಡಿಕೊಂಡು ಕದಿಯುತ್ತಾನೆ. ಕದ್ದಂತ ಸೀರೆಗಳನ್ನು ನಂಜನಗೂಡಿನ ಹೊಳೆಗೆ ತಂದು ಹೊಗೆದು, ಶುದ್ಧಗೊಳಿಸಿ ಸಾಬರಿ(ಮುಸ್ಲೀಮ್)ಗೆ ಮಾರಿ, ಹಣ ಸಂಪಾದಿಸುವುದನ್ನು ತನ್ನ ದೈನಂದಿನ ವೃತ್ತಿಯನ್ನಾಗಿಸಿಕೊಂಡಿರುತ್ತಾನೆ. ಈ ರೀತಿ ಕೆಲಸ ಮಾಡುವುದು ತಪ್ಪೆಂದು ಈತ ಭಾವಿಸುವುದೇ ಇಲ್ಲ. ಅದರ ಬಗ್ಗೆ ಯಾವುದೇ ರೀತಿಯ ಯೋಚನೆ ಕೂಡ ಮಾಡದೆ ಅದನ್ನೇ ತನ್ನ ವೃತ್ತಿಯಾಗಿ ಮಾಡಿಕೊಂಡು ಜೀವನ ನಡೆಸುತ್ತಾನೆ. ಇದು ನೀತಿಮೀರಿದ ಮನಸ್ಥಿತಿ.

ಇಲ್ಲಿನ ಮತ್ತೊಬ್ಬ ದಲಿತ ವರ್ಗಕ್ಕೆ ಸೇರಿದ ವ್ಯಕ್ತಿಯಾದ ಗಾರೆಸಿದ್ದಮಾವ ಮೇಲ್ಜಾತಿಯವರ ತೋಟದಲ್ಲಿ ಎಳನೀರನ್ನು ಕದ್ದು ಸಿಕ್ಕಿಕೊಂಡಿರುತ್ತಾನೆ. ಈತನನ್ನು ಕಂಬಕ್ಕೆ ಕಟ್ಟಿಹಾಕಿ ಚೆನ್ನಾಗಿ ಥಳಿಸಿ, ನೂರೊಂದು ರೂಪಾಯಿ ತಪ್ಪುಕೊಡು ಎಂದು ಕೇಳುತ್ತಾರೆ. ಆದರೆ ಈತ ಕೊಡದೆ, ನಾನು ಕದಿಯಲೇ ಇಲ್ಲ, ಕೇವಲ ಕುಡಿಯುವುದಕ್ಕೆ ಕಿತ್ತುಕೊಂಡೆ. ಆದ್ದರಿಂದ ನಾನೇಕೆ ತಪ್ಪುಕಾಣಿಕೆ ಕೊಡಲು ಎಂದು ಅವರೊಡನೆ ವಾದಿಸುತ್ತಾನೆ. ಅಂದರೆ ಇಲ್ಲಿ ನೀತಿಬಾಹಿರ ಕೆಲಸ ಮಾಡುವ ಪ್ರತಿಯೊಬ್ಬ ಪಾತ್ರಕ್ಕೂ ಅದು ತಪ್ಪೆಂದು ಅನ್ನಿಸುವುದೇ ಇಲ್ಲ. ಬದಲಾಗಿ ಜೀವನ ನಡೆಸಲು ಅದು ಒಂದು ಮಾರ್ಗ ಎನಿಸುತ್ತದೆ. ಹೀಗಾಗಿ ದೇವನೂರರ ಕೃತಿಗಳಲ್ಲಿನ ಕೆಲವೊಂದು ಪಾತ್ರಗಳು ನೀತಿಮೀರಿದ ಜೀವನವನ್ನೇ ಒಳ್ಳೆಯದೆಂದು ಗ್ರಹಿಸಿ ಜೀವನ ಸಾಗಿಸುತ್ತಾರೆ.

ಉಳಿದಂತ ಕಥೆಗಳಲ್ಲಿ ನೀತಿಮೀರಿದ ಜೀವನ ಗ್ರಹಿಕೆ ಕಂಡುಬರುವುದಿಲ್ಲ.

ಉ) <u>ದಲಿತ ಜೀವನ ಚಿತ್ರಣ:</u>

ದಲಿತ ಜೀವನ ಚಿತ್ರಣವೆಂದರೆ ಮಾರಿಗಬ್ಬ ಆಚರಿಸುವ ದೇವಿಗೆ ಕೋಳಿ, ಮೇಕೆ ಇತ್ಯಾದಿಗಳನ್ನು ಅರ್ಪಿಸುವಂತ ವಿಶಿಷ್ಟವಾದ ಆಚಾರವಿಚಾರಗಳನ್ನು ಹೊಂದಿರುವ, ಹೆಂಡ, ಸಾರಾಯಿ, ಮಾಂಸಗಳನ್ನು ಸೇವಿಸುವ, ಬಡತನ, ಹಸಿವು ಹಾಗೂ ಅಜ್ಞಾನದಿಂದಾಗಿ ಮೇಲ್ವರ್ಗದವರ ಶೋಷಣೆಗೆ ಹಾಗೂ ದೌರ್ಜನ್ಯಕ್ಕೆ ಸಿಕ್ಕಿ ನರಳುತ್ತಿರುವ ದೀನ ಜನರ ದೈನಂದಿನ ಬದುಕಿನ ಒಂದು ಭಾಗವನ್ನು ಇಲ್ಲಿ ದಲಿತ ಜೀವನ ಚಿತ್ರಣ ಎನ್ನಲಾಗಿದೆ.

'ಮಾರಿಕೊಂಡವರು' ಕತೆಯಲ್ಲಿ ಬೀರ ಮತ್ತು ಲಕ್ಷ್ಮಿ ಒಂದು ಬಡಕುಟುಂಬದ ದಂಪತಿಗಳು. ಇವರಿಗೆ ಒಂದು ಸ್ಥಿರವಾದ ನೆಲೆಯಿಲ್ಲದ್ದರಿಂದ ದಿಕ್ಕೆಟ್ಟವರಂತೆ, ರೈಲಿನಲ್ಲಿ ಟಿಕೇಟ ಇಲ್ಲದೆ ಪ್ರಯಾಣಿಸುತ್ತಿದ್ದಾಗ ಗೌಡರಿಗೆ ಸಿಕ್ಕಿ ಅವರ ತೋಟದ ಕೆಲಸಕ್ಕೆ ಸೇರಿ ಆಶ್ರಯ ಪಡೆದಿರುತ್ತಾರೆ. ಒಮ್ಮೆ ಕಿಟ್ಟಪ್ಪ ನೀಡಿದ ಅಪಾರವಾದ ಮಾಂಸ, ಮದ್ಯಗಳನ್ನು ಸೇವಿಸಿ, ಅಮಲಿನಲ್ಲಿ ಗಂಡನಾದ ಬೀರ ಮಲಗಿರುವಾಗ, ಗೌಡರ ಮಗ ಕಿಟ್ಟಪ್ಪನ ಕಾಮದಾಹಕ್ಕೆ ಲಕ್ಷ್ಮಿಯು ತನ್ನ ದೇಹವನ್ನು ಅನ್ಯಮಾರ್ಗವಿಲ್ಲದೆ ಒಪ್ಪಿಸುತ್ತಾಳೆ. ಈ ವಿಷಯ ಬೀರನಿಗೆ ಗೊತ್ತಾದರೂ ಕೂಡ ಆರ್ಥಿಕವಾಗಿ ತಾನು ದುರ್ಬಲನಾಗಿರುವುದರಿಂದ ವಿರೋಧಿಸಲು ಅಶಕ್ತನಾಗಿದ್ದಾನೆ. ಇಲ್ಲಿ ಮೇಲ್ವರ್ಗದವರ ದಾಸ್ಯಕ್ಕೆ ಒಳಗಾಗಿ ಹಂಗಿನ ಜೀವನದಲ್ಲಿಯೆ ಸುಖಕಾಣುತ್ತ, ಹೀನ ಬದುಕನ್ನು ಸಾಗಿಸುವ ದಲಿತ ದಂಪತಿಗಳ ಜೀವನ ಚಿತ್ರಣ ಕಂಡುಬರುತ್ತದೆ.

'ಗ್ರಸ್ತರು' ಕತೆಯಲ್ಲಿನ ಕಥಾನಾಯಕ ಒಬ್ಬ ವಿದ್ಯಾವಂತ ದಲಿತ ಯುವಕ. ಸಾಮಾನ್ಯವಾಗಿ ದಲಿತರೆಂದರೆ ಎಲ್ಲಾ ರೀತಿಯಲ್ಲು ದುರ್ಬಲರು ಎಂದರೆ ತಪ್ಪಾಗಲಾರದು. ಹಾಗೆಯೆ ಈತ ಕೂಡ ಆರ್ಥಿಕವಾಗಿ ದುರ್ಬಲವಾಗಿರುವ ಒಂದು ಬಡಕುಟುಂಬದ ವ್ಯಕ್ತಿ. ಈತ ಗೌಡರು ಸ್ವಾಮಿಜಿ ಬಳಿ ಶಿಫಾರಸ್ಸು ಮಾಡಿ ಕೊಡಿಸಿದ್ದ ಕೆಲಸವನ್ನು, ತನ್ನದೆಯಾದ ವೈಚಾರಿಕತೆಯಿಂದಾಗಿ ತ್ಯಜಿಸಿ ಬರುತ್ತಾನೆ. ಇದು ತಮಗೆ ಪರೋಕ್ಷವಾಗಿ ಮಾಡಿದ ಅವಮಾನ-ವೆಂದು ಭಾವಿಸಿದ ಗೌಡರು, ಈತ ತಮ್ಮ ಬಳಿ ಮಾಡಿದ್ದ ಸಾಲವನ್ನು ಅಸಲು, ಬಡ್ಡಿ ಸಮೇತ ತಂದೊಪ್ಪಿಸುವಂತೆ ಆಜ್ಞಾಪಿಸುವುದರ ಮೂಲಕ ಪರೋಕ್ಷವಾಗಿ ಸೇಡು ತೀರಿಸಿಕೊಳ್ಳಲು ಪ್ರಯತ್ನಿಸುತ್ತಾರೆ. ಇದರಿಂದ ಗೌಡರ ವಿರೋಧವನ್ನು ಕಟ್ಟಿಕೊಳ್ಳಲಾರದ ಈತನ ರೋಗಗ್ರಸ್ಥ ತಾಯಿ, ಹೋಗಿ ಕ್ಷಮೆ ಕೇಳೆಂದು ಒತ್ತಾಯಿಸುತ್ತಾಳೆ. ಆದರೆ ಕ್ಷಮೆ ಕೇಳಲು ಸ್ವಾಭಿಮಾನ ಅಡ್ಡಿಯಾಗುತ್ತದೆ. ಮನೆಯಲ್ಲಿ ಗಂಜಿ, ನೀರು ಕಾಯಿಸಿಕೊಡಲು ಸಹಾಯಕ್ಕೆ ದೊಡ್ಡವ್ವನನ್ನು ಹೊರತುಪಡಿಸಿದರೆ, ಬೇರೆ ಯಾರಿಂದಲೂ ಯಾವುದೇ ಸಹಾಯವಿಲ್ಲ. ಹೀಗಾಗಿ ಸಾಲದ ಶೂಲಕ್ಕೆ ಸಿಕ್ಕಿದ ಇಲ್ಲಿನ ದಲಿತ ಕುಟುಂಬ ಅಸಹಾಯಕತೆ-ಯಿಂದ ನರಳುತ್ತಿರುವುದು ಕಾಣಿಸುತ್ತದೆ.

'ಒಂದು ದಹನದ ಕಥೆ'ಯಲ್ಲಿ ತಂದೆತಾಯಿಯಿಲ್ಲದ ನಾಯಕ ದೊಡ್ಡಪ್ಪನ ಆಶ್ರಯ ಪಡೆದಿರುತ್ತಾನೆ. ಈತ ವಿದ್ಯಾವಂತನಾದ್ದರಿಂದ ಕೆಲಸ ಸಿಕ್ಕಿದ ಖುಷಿಯಲ್ಲಿ ಪಟ್ಟಣದಿಂದ ಹಳ್ಳಿಗೆ

ಬರುತ್ತಾನೆ. ಅಲ್ಲಿ ಈತ ಪ್ರೀತಿಸಿದ ಮೇಲ್ಜಾತಿಯ ಹುಡುಗಿ ಗರ್ಭಿಣಿಯಾಗಿ, ಅದು
ಊರಲ್ಲೆಲ್ಲ ಪ್ರಚಾರವಾಗಿ ನ್ಯಾಯಸ್ಥಾನಕ್ಕೂ ಬಂದಿರುತ್ತದೆ. ಆದರೆ ಈತನ ದೊಡ್ಡಪ್ಪನಿಗೆ
ತನ್ನ ಮೊಮ್ಮಗಳನ್ನು ಈ ನಾಯಕನಿಗೆ ಕೊಟ್ಟು ಮದುವೆ ಮಾಡುವ ಉದ್ದೇಶವಿರುತ್ತದೆ.
ಇದಕ್ಕಾಗಿ ನಾಯಕ ಪ್ರೀತಿಸಿರುವ ಹುಡುಗಿಯ ವಿರುದ್ಧ ಸುಳ್ಳು ಸಾಕ್ಷಿ ಹೇಳಿಸಿ ನ್ಯಾಯವನ್ನು
ತನ್ನದಾಗಿಸಿಕೊಳ್ಳುತ್ತಾನೆ. ಆದರೆ ನಾಯಕ ತಾನು ಪ್ರೀತಿಸಿರುವಾಕೆಯನ್ನೇ ಮದುವೆ-
ಯಾಗಬೇಕೆಂಬ ತನ್ನ ನಿಲುವನ್ನು ಬದಲಿಸಿಕೊಳ್ಳಲಾರದೆ, ತನ್ನ ದೊಡ್ಡಪ್ಪ ಹಾಗೂ
ಊರಿನ ನ್ಯಾಯದ ತೀರ್ಪು ಇದೆಲ್ಲದರ ವಿರುದ್ಧವಾಗಿ ಪ್ರೀತಿಸಿದಾಕೆಯನ್ನು ಪಟ್ಟಣಕ್ಕೆ
ಕರೆದುಕೊಂಡು ಹೋಗಿ ಮದುವೆಯಾಗುತ್ತಾನೆ. ಇದರಿಂದ ಕೋಪಗೊಂಡ ಇಡೀ ಹಳ್ಳಿಯ
ವ್ಯವಸ್ಥೆ ಈತನ ಅಜ್ಜ ತೀರಿಕೊಂಡಾಗ, ಆಕೆಯ ಶವಸಂಸ್ಕಾರವನ್ನು ಮಾಡಲು ಅನುಮತಿಯನ್ನು
ನೀಡದೆ ನಿರಾಕರಿಸುತ್ತದೆ. ಪ್ರಮುಖವಾಗಿ ಶವಸಂಸ್ಕಾರಕ್ಕೆ ನಾಯಕನ ದೊಡ್ಡಪ್ಪನೆ
ವಿರೋಧಿಸುತ್ತಾನೆ. ಇಲ್ಲಿ ದಲಿತರಿಂದಲೆ ದಲಿತನ ಶೋಷಣೆ ನಡೆಯುತ್ತದೆ. ಇಂತಹ
ಶೋಷಣೆಗೆ ಒಳಗಾದ ನಾಯಕ ತಾನೊಬ್ಬನೇ ಹುಣ್ಣಿಯಾ ಗಳಿಗಳಿಂದ ಅಜ್ಜಿಯ ಶವವನ್ನು
ದಹನ ಮಾಡುತ್ತಾನೆ.

‘ದತ್ತ’ ಕತೆಯಲ್ಲಿ ನಾಯಕನ ತಂದೆತಾಯಿಗಳಿಗೆ ನಾಲ್ಕು ಜನ ಮಕ್ಕಳು; ಅದರಲ್ಲಿ
ಮೂರು ಗಂಡು, ಒಂದು ಹೆಣ್ಣು. ಈ ಮಕ್ಕಳಲ್ಲಿ ನಾಯಕನೇ ಹಿರಿಯ ಮಗ. ಈತನನ್ನು
ದತ್ತು ಕೊಟ್ಟಿರುತ್ತಾರೆ. ಈತನಿಗೆ ದತ್ತುಮನೆ ಸರಿಯಾಗಿ ಒಗ್ಗದ ಕಾರಣ ವಿದ್ಯಾವಂತನಾದರು
ಕೂಡ ಕುಡಿಯುವುದು, ಸೂಳೆ ಮನೆಗೆ ಹೋಗುವುದು, ಸಿಗರೇಟ್ ಸೇದುವುದು ಮುಂತಾದ
ದುಶ್ಚಟಗಳನ್ನು ಬೆಳೆಸಿಕೊಂಡಿರುತ್ತಾನೆ. ದತ್ತು ಮನೆಯ ತಂದೆ ತೀರಿಕೊಂಡ ನಂತರ
ಈತ ಹೆತ್ತವರೊಡನೆ ಬದುಕಲು ವಾಪಸ ಬರುತ್ತಾನೆ. ತುಂಬಾ ವರ್ಷಗಳ ನಂತರ ಬಂದ ಕಾರಣ
ಈತನನ್ನು ಸಾಂಪ್ರದಾಯಿಕವಾಗಿ ಎಣ್ಣೆಯಲ್ಲಿ ಮೊದಲು ಮುಖನೋಡಿ ಮನೆಗೆ
ಕರೆದುಕೊಳ್ಳುತ್ತಾರೆ. ಮನೆಯಲ್ಲಿ ನಾಯಕನ ತಂಗಿ ಮೈನೆರೆದು ಮದುವೆ ವಯಸ್ಸಿಗೆ
ಬಂದಿರುತ್ತಾಳೆ. ಮೊದಲ ತಮ್ಮನ ಹೆಂಡತಿ ಹೆರಿಗೆಗೆ ತವರಿಗೆ ಹೋಗಿರುತ್ತಾಳೆ. ಅಲ್ಲದೇ
ನಾಲ್ಕನೆ ತರಗತಿ ಓದುತ್ತಿರುವ ಚಿಕ್ಕ ತಮ್ಮ ಕೂಡ ಇದ್ದಾನೆ. ಈ ನಡುವೆ ಬಡತನ ಬೇರೆ.

ಆದರೂ ನಾಯಕನು ಕಷ್ಟವೋ, ಸುಖವೋ ಏನಾದರಾಗಲಿ ಎಂದು ಹೆತ್ತವರೊಡನೆ ಬದುಕಲು ಇಚ್ಛಿಸಿದರೆ, ಆತನ ತಂದೆ ತಾಯಿಗಳು ಇವನ ಇಂಗಿತವನ್ನು ಕಡೆಗಣಿಸಿ, ದತ್ತು ಮನೆಯಲ್ಲಿ ಸಿಗುವ ಹಣ, ಆಸ್ತಿಗಾಗಿ ಆಸೆಪಟ್ಟು ದುರಾಸೆಯಿಂದ ಇವನನ್ನು ಮತ್ತೊಂದು ಮನೆಗೆ ದತ್ತು ಕೊಡಲು ಮುಂದಾಗುತ್ತಾರೆ. ಅಲ್ಲದೇ ಮನೆಯಲ್ಲಿ ಇವನ ಸಹೋದರಿ, ಸಹೋದರರು ಇವನನ್ನು ಕಂಡರೆ ಒಂದು ರೀತಿ ಯಾಂತ್ರಿಕವಾಗಿ ವರ್ತಿಸುತ್ತಾರೆ. ಯಾರೂ ಸಹ ಭಾತೃತ್ವದ ಭಾವನೆಯಿಂದ ಆತ್ಮೀಯತೆಯನ್ನು ವ್ಯಕ್ತಪಡಿಸುವುದಿಲ್ಲ. ಇದರಿಂದಾಗಿ ಜುಗುಪ್ಸೆಗೊಂಡ ನಾಯಕ ಒಂದು ದಿನ ಎಲ್ಲರನ್ನು ತೊರೆದು, ಮನೆಬಿಟ್ಟು ಬಹುದೂರ ಹೊರಟುಹೋಗುತ್ತಾನೆ. ಇಷ್ಟಾದರೂ ಕೂಡ ನಾಯಕನ ತಾಯಿ ಮಗನ ಬಗ್ಗೆ ಒಲವು ತೋರುವುದೇ ಇಲ್ಲ. ಅಲ್ಲದೇ ಮಗ ಹೋದನಲ್ಲ ಎಂದು ದು:ಖಿಸದೆ ನಡುಮನೆಗೆ ಓಡಿಹೋಗಿ, ಪೆಟ್ಟಿಗೆ ತೆಗೆದು ಹಣ ಮುಟ್ಟಿಲ್ಲವೆಂದು ಸಮಾಧಾನಪಡುತ್ತಾಳೆ. ಆದರೆ ಇಲ್ಲಿನ ದರಿತ ಕುಟುಂಬವು ಮಗನ ಶ್ರೇಯೋಭಿವೃದ್ಧಿ ಬಯಸುವುದಕ್ಕಿಂತ, ದತ್ತು ಮನೆಯಲ್ಲಿ ಸಿಗುವ ಆಸ್ತಿಗಾಗಿ ಹೆಚ್ಚು ಮಹತ್ವಕೊಟ್ಟಿದೆ.

'ಡಾಂಬರು ಬಂದುದು' ಕತೆಯಲ್ಲಿ ಹೊಸೂರು ಎಂಬುದು ಎಂಬತ್ತು ಮನೆಗಳಿರುವ ಒಂದು ಚಿಕ್ಕಗ್ರಾಮ. ಇಲ್ಲಿ ಹೇಳಿಕೊಳ್ಳಲು ಒಂದು ಹೋಟೆಲ್ ಇಲ್ಲ. ಊರಿನ ಒಳಗಡೆ ಹೋಗಲು ಎತ್ತಿನಗಾಡಿ ಹೋಗುವಷ್ಟು ಕಿರಿದಾದ ದಾರಿ ಮಾತ್ರ. ಈ ಊರಿನಲ್ಲಿ ಪಟೇಲರದೆ ಮುಂದಾಳತ್ವ. ಹೀಗಿರುವಾಗ ಒಮ್ಮೆ ಊರಿಗೆ ಟಾರುರಸ್ತೆ ಮಾಡಿಸಲು ಸರ್ಕಾರದಿಂದ ಆರ್ಡರ ಬರುತ್ತದೆ. ಇದನ್ನು ಪಟೇಲರು ವಶಪಡಿಸಿಕೊಂಡು ರಸ್ತೆ ಮಾಡಿಸಲು ಮುಂದಾಗುತ್ತಾರೆ. ಅಲ್ಲದೇ ಈ ಕಾಮಗಾರಿಯಲ್ಲಿ ಹಣ ಉಳಿಸಿ ದೇವಸ್ಥಾನ ಊರ್ಜಿತಗೊಳಿಸಲು ತೀರ್ಮಾನಿಸುತ್ತಾರೆ. ಆದರೆ ಸರ್ಕಾರಿ ಹಣವನ್ನು ನಿಗದಿಗೊಳಿಸಿದ ಕೆಲಸಕ್ಕೆ ಪೂರ್ತಿಯಾಗಿ ಬಳಸದೆ ಬೇರೊಂದು ಕೆಲಸಕ್ಕೆ ಬಳಸುವುದನ್ನು ವಿರೋಧಿಸಿ ಎಸ್ಸೆಲ್ಸಿವರೆಗೆ ಓದಿದ ದರ್ಜಿ ಲಕುಮ, ಸರ್ವೇಯರ ರಾಜಪ್ಪ, ಮಾದು, ಶಂಭು ಈ ನಾಲ್ಕು ಹುಡುಗರು ಪತ್ರಿಕೆಯ ವಾಚಕರವಾಣಿಗೆ ಬರೆಯುತ್ತಾರೆ. ಇದರಿಂದಾಗಿ ಊರಿನಲ್ಲಿ ಈ ನಾಲ್ವರ ವಿರುದ್ಧ ನ್ಯಾಯಕ್ಕೆ ಸೇರಿಸಿ ಘರ್ಷಣೆ ನಡೆಯುತ್ತದೆ. ಇಲ್ಲಿ ಲಕುಮನನ್ನು ಹೊರತುಪಡಿಸಿದರೆ ಉಳಿದಂತೆ ಯಾವ

ದಲಿತರಿಂದಲೂ ವಿರೋಧದ ಕೂಗು ಕೇಳಿಬರುವುದಿಲ್ಲ. ಹಾಗಾಗಿ ಎಲ್ಲರೂ ಸವರ್ಣೀಯರ ದಾಸರಂತೆ ಮೌನವಾಗಿರುವುದು ಕಂಡುಬರುತ್ತದೆ.

'ಮುಡಲು ಸೀಮೇಲಿ ಕೂಲಿಗಿಲೆ ಮುಂದಾಗಿ'ಯಲ್ಲಿ ರಂಗಪ್ಪ ದಲಿತ ವರ್ಗದ ಒಬ್ಬ ಬಡ ಕೂಲಿ ಕಾರ್ಮಿಕ. ಇವನ ಆಸ್ತಿ ಎಂದರೆ ಅವನ ಹೆಂಡತಿ, ಆರೇಳು ವರ್ಷದ ಒಬ್ಬ ಮಗ ಹಾಗೂ ಒಂದು ಗುಡಿಸಲು. ಪ್ರತಿದಿನ ಊರಿನ ಗೌಡರ ಹೊಲದಲ್ಲಿ ದುಡಿಯುವುದೇ ಅವನ ವೃತ್ತಿ. ಗೌಡರ ಹಟ್ಟಿ ಇವನು ಮಾಡೋ ಉಳುಮೆಯಿಂದಲೆ ನಿಂತಿದೆ ಅಂತ ಊರಿನ ಜನ ಹೇಳುತ್ತಾರೆ. ಹಾಗೆಂದು ಇವನ ಹೆಂಡತಿ, ಮಗ, ಇವನ ಗುಡಿಸಲು ಇವುಗಳು ಇವನ ತೋಳಬಲದ ಮೇಲೆ ನಿಂತಿವೆ. ಆದರೆ ಇವನು ಹಾಗಂದುಕೊಂಡಿಲ್ಲ. ಗೌಡರು ಕಣ್ಬಿಟ್ಟರೆ ನಮ್ಮ ಹೊಟ್ಟೆ ಒಳಗೆ ಜೀವ ಆಡುತ್ತೆ ಅನ್ನುತ್ತಾನೆ. ಹೀಗಾಗಿ ಗೌಡರ ಹೊಲದಲ್ಲಿ ಪ್ರತಿದಿನ ದುಡಿಯುವುದರಿಂದ ಅವರು ಆಗಾಗ ನೀಡುವ ಒಂದಷ್ಟು ಜೋಳವನ್ನು ತೆಗೆದುಕೊಂಡು ಹೋಗುವನು. ಅದು ಹಗಲಿಗಾದರೆ ರಾತ್ರಿಗೆ ಸಾಲದು, ರಾತ್ರಿಗಾದರೆ ಹಗಲಿಗೆ ಸಾಲದು. ಅಲ್ಲದೆ ವಾಸಿಸಲು ಭದ್ರವಾದ ಒಳ್ಳೆ ಮನೆಯಿಲ್ಲ. ಇರುವಂಥ ಗುಡಿಸಲು ಮಳೆ ಬಂದರೆ ಸೋರುತ್ತದೆ. ಹೀಗಿರುವಾಗ ಒಂದು ದಿನ ಮನೆಯಲ್ಲಿ ಹೊತ್ತಿನ ಗಂಜಿಗೂ ಏನೂ ಇರುವುದಿಲ್ಲ. ಇದರಿಂದ ಗೌಡರನ್ನಾದರೂ ನೋಡಿಕೊಂಡು ಬರುತ್ತೇನೆಂದು ಹೋಗುತ್ತಾನೆ. ಈತ ವಾರದ ಹಿಂದೆ ಜೋಳ ಕೇಳಲು ಹೋಗಿದ್ದಾಗ, ನಾಲ್ಕು ಸೇರು ಜೋಳ ತಂದಿಟ್ಟು ಗೌಡರ ಹೆಂಡತಿ ಮುಖ ಸಿಂಡರಿಸಿಕೊಂಡು ಹೋಗಿರುತ್ತಾಳೆ. ಗೌಡರು ಮುಂದಿನ ಫಸಲು ಬರುವ ತನಕ ಕೇಳಬೇಡವೆಂದಿರುತ್ತಾರೆ. ಇದನ್ನು ನೆನಪಿಸಿಕೊಂಡು ಹೇಗೆ ಕೇಳುವುದು ಎಂಬ ಯೋಚನೆಯಲ್ಲಿ ಹೆಜ್ಜೆ ಹಾಕುತ್ತಿರುತ್ತಾನೆ.

ಗಂಡ ಹೋದ ನಂತರ ಮನೆಯಲ್ಲಿ ರಂಗಪ್ಪನ ಹೆಂಡತಿ ಹೊಟ್ಟೆ ಹಸಿವಿನಿಂದ ಮಲಗಿರುವ ಮಗನಿಗೆ, ಆತ ಶಾಲೆಯಲ್ಲಿ ಪಟೇಲರ ಮಗನೊಡನೆ ಆಡಿದ ಮಾತು ಹಾಗೂ ಶಾಸ್ತ್ರಿ ಮೇಸ್ಟ್ರು ಮನೆಯಲ್ಲಿ ತಮ್ಮದೇ ಜಾತಿಯ ಮೇಸ್ಟ್ರು ಅವರ ಲೋಟದಲ್ಲಿ ನೀರು ಕುಡಿಯುವುದನ್ನು ನೋಡಿದ್ದು, ಮುಂತಾದ ವಿಷಯಗಳ ಬಗ್ಗೆ ಆತ ಕೇಳುವ ಪ್ರಶ್ನೆಗಳಿಗೆ ಉತ್ತರಿಸುತ್ತ, ಅವನು ಹಸಿವಿನಿಂದ ಅಳದಂತೆ, ಸಮಾಧಾನಪಡಿಸುವ ರೀತಿ ಎಂಥವರಿಗೂ ಮನಕಲಕುವಂತಾಗುತ್ತದೆ.

ಇತ್ತ, ಗೌಡರ ಮನೆಗೆ ರಂಗಪ್ಪ ಹೋಗುತ್ತಿರುವಾಗ ದಾರಿಯಲ್ಲಿ ಲೈಟುಕಂಬ ನೆಡುವವರು ಇವನನ್ನು ಕೂಗಿ ಕರೆಯುತ್ತಾರೆ. ಮೂರು ಹೊತ್ತಿನಿಂದಲೂ ಊಟವಿಲ್ಲದೆ, ಸುಸ್ತಾಗುತ್ತಿದ್ದರೂ ಕೂಡ ಊರೊಟ್ಟಿನ ಕೆಲಸವೆಂದು ಹೋಗಿ ಸಹಾಯ ಮಾಡುತ್ತಾನೆ. ನಂತರ ದಣಿವಾರಿಸಿಕೊಳ್ಳಲು ಪಕ್ಕದಲ್ಲೇ ಇದ್ದ ಶಾಸ್ತ್ರಿ ಮೇಸ್ಟ್ರ ಮನೆಗೆ ನೀರು ಕುಡಿಯಲು ಹೋದಾಗ ರಂಗಪ್ಪನ ಜಾತಿಯ ಮೇಸ್ಟ್ರಿಗೆ ತಮ್ಮ ಲೋಟದಲ್ಲಿ ಕೊಡುವ ಶಾಸ್ತ್ರಿಗಳು, ಈ ರಂಗಪ್ಪನಿಗೆ ಲೋಟದಲ್ಲಿ ಕೊಡದೆ ಇವನ ಬೊಗಸೆಯೊಡ್ಡಿದ ಕೈಗಳಿಗೆ ನೀರನ್ನು ಬಿಡಿಸುತ್ತಾರೆ. ಅನಂತರ ಗೌಡರ ಮನೆಗೆ ಬಂದ ರಂಗಪ್ಪ ಗೌಡರಿಲ್ಲದ ಕಾರಣ ಗೌರವ್ವನಿಗೆ, ಬಂದ ವಿಷಯವನ್ನು ತಿಳಿಸುತ್ತಾನೆ. ಆಕೆ ಸಿಡುಕಿನಿಂದ ಮಾತನಾಡಿ ನಮಗೆ ಜೋಳವಿಲ್ಲ. ಇನ್ನು ನಿನಗೆಲ್ಲಿಂದ ಕೊಡೋಣ ಎನ್ನುತ್ತಾಳೆ. ಅಲ್ಲದೆ ಒಂದು ಸೌದೆ ಕೊಂಟದೆ ಹೊಡೆದು ಕೊಡು ಎಂದು ಹೇಳುತ್ತಾಳೆ. ಮೊದಲೆ ಹಸಿವಿನಿಂದಾಗಿ ಸುಸ್ತಾಗಿದ್ದ ರಂಗಪ್ಪ ಸೌದೆ ಹೊಡೆಯಲು ಆಗದೇ ಸುಸ್ತಾಗಿ ಗೌರವ್ವನ ಆಕ್ಷೇಪಣೆಗೆ ಒಳಗಾಗುತ್ತಾನೆ. ಜೋಳವೂ ಇಲ್ಲದೇ, ಹಸಿವಿನಿಂದ ಸುಸ್ತಾಗಿ ಭಾರವಾದ ಹೆಜ್ಜೆಗಳನ್ನಿಡುತ್ತ, ಮನೆ ಕಡೆ ವಾಪಸ್ಸಾಗುತ್ತಾನೆ. ಇಲ್ಲಿನ ಪ್ರತಿಯೊಬ್ಬ ಸವರ್ಣೀಯನು ದಲಿತನಾದ ರಂಗಪ್ಪನ ಶ್ರಮವನ್ನು, ಸಹಕಾರ, ಸಹಾಯವನ್ನು ಅಪೇಕ್ಷಿಸುತ್ತಾರೆ. ಆದರೆ ಹೊಟ್ಟೆಬಟ್ಟೆಗಿಲ್ಲದೇ ಸಾಯುತ್ತಿರುವ ಇವನ ಬಗ್ಗೆ, ಇವನ ಕುಟುಂಬದ ಬಗ್ಗೆ ಯಾರೂ ಕರುಣೆ ತೋರಿ ಸಹಾಯ ಹಸ್ತ ನೀಡುವುದಿಲ್ಲ. ಉಳ್ಳವರು ಶ್ರೀಮಂತರಾಗಿಯೇ ತಿಂದು ತೇಗುತ್ತಿದ್ದಾರೆ. ಆದರೆ ಈ ದಲಿತ ಕುಟುಂಬ ಎಷ್ಟೆ ಶ್ರಮದಿಂದ ದುಡಿದರೂ ತಕ್ಕ ಪ್ರತಿಫಲ ದೊರಕದೆ, ಒಂದು ಹೊತ್ತಿನ ಗಂಜಿಗಾಗಿ ದಿನನಿತ್ಯ ಸಾಯುತ್ತ, ಜೀವನ ಸಾಗಿಸುವ ಚಿತ್ರಣ ಇಲ್ಲಿ ಕಂಡುಬರುತ್ತದೆ.

'ಅಮಾಸ' ಕತೆಯಲ್ಲಿ ಅಪ್ಪ, ಅಮ್ಮ ಇಲ್ಲದ ಬಾಲಕ ಅಮಾಸ ಮಾರಿಗುಡಿಯಲ್ಲಿ ವಾಸವಾಗಿದ್ದಾನೆ. ಇವನ ಜೊತೆ ಹಳೆ ತಲೆಮಾರಿನ ವಯಸ್ಸಾದ ಕುರಿಯಯ್ಯ ಸಹ ಇದ್ದಾನೆ. ಪ್ರತಿದಿನ ಸಾಯಂಕಾಲ ಮಠದ ಬೆಲ್ಲು ಹೊಡೆದಾಕ್ಷಣ ಅಮಾಸ ತಟ್ಟೆ, ಲೋಟ ತೆಗೆದುಕೊಂಡು ಹೋಗಿ, ಹಿಟ್ಟು, ಸಾರು ಈಸ್ಕೊಂಡು ಬರುವನು. ಅದನ್ನು ಕತ್ತಲೆಯಲ್ಲಿಯೇ ಕುಳಿತು ಈ ಇಬ್ಬರು ಊಟಮಾಡುವರು. ಹೀಗೆ ಇವರ ದೈನಂದಿನ ಜೀವನ ಕಳೆಯುವುದು.

ಎಲ್ಲಾ ಊರಿನಲ್ಲೂ ಆಚರಿಸುವಂತೆ ಈ ಊರಿನಲ್ಲೂ ದಲಿತರು ಮಾರಿಹಬ್ಬ ಆಚರಿಸುವರು. ಆಗ ಮಾರಿಗುಡಿಗೆ ಸುಣ್ಣಬಣ್ಣ ತುಂಬಿ ಅಲಂಕಾರ ಮಾಡುವರು. ಹಿಂದೆ ಮಾರಿಹಬ್ಬ ಬಂತೆಂದರೆ ಹುಲಿವೇಷ. ಹುಲಿವೇಷ ಎಂದರೆ ಕುರಿಯಯ್ಯ ಅನ್ನುವವನು ಪ್ರಖ್ಯಾತನಾಗಿದ್ದ. ಈ ಕುರಿಯಯ್ಯ, ಚಿಕ್ಕಂದಿನಲ್ಲಿ ಒಂದು ಮಾರಿಹಬ್ಬದಂದು ಹುಲಿವೇಷ ಹಾಕಿಕೊಂಡು ಕುಣಿಯುವಾಗ, ಗೌಡರು ಇವನನ್ನು ನೋಡಿ ತಲೆದೂಗಿದ್ದರು. ಆಗ ಅಂಗಿಬಟ್ಟೆ, ಇನಾಮು ಕೊಟ್ಟು, ನೀನು ಉಂಡ ಊಟ, ಹಾಕಿಕೊಂಡ ಬಟ್ಟೆ, ನೀನು ಇರುವಷ್ಟು ದಿನ ನಮ್ಮ ಮನೆಯಲ್ಲಿಯೇ ಇದ್ದು ಒಂದಿಷ್ಟು ಕುರಿನೋಡಿಕೊ ಎಂದು ಹೇಳಿ ಇರಿಸಿಕೊಂಡರು. ಈ ರೀತಿಯಾಗಿ ವಯಸ್ಸಿನ ಕಾಲದಲ್ಲಿ ಗೌಡರ ಮನೆ ಕುರಿಗಳನ್ನು ಕಾಯುವ ಮುಖ್ಯಾಗಿ ಇದ್ದ ಕುರಿಯಯ್ಯ ಮೂಲೆ ಸೇರಿದ್ದಾನೆ.

ಪ್ರತಿವರ್ಷದಂತೆ ಈ ವರ್ಷವೂ ಮಾರಿಹಬ್ಬ ಬಂದಾಗ ಊರಿನವರು ಬಂದು ಮಾರಿಗುಡಿಗೆ ಸುಣ್ಣ, ಕೆಮ್ಮಣ್ಣು ತುಂಬಿ, ಸಗಣಿಯಿಂದ ನೆಲ ತಾರಿಸಿ ಶೃಂಗಾರ ಮಾಡುತ್ತಿದ್ದಾರೆ. ಅಲ್ಲದೆ ಕೆಂಪು, ಬಿಳಿಬಣ್ಣಗಳ ಛತ್ರಿ, ಚಾಮರಗಳನ್ನು ಹೊರತೆಗೆದು ಬಿಸಿಲಿಗೆ ನಿಲ್ಲಿಸಿದ್ದಾರೆ. ಹಾಗೆಯೆ ಪರಸ್ಥಳದಿಂದ ನೆಂಟರಿಷ್ಟರು ಊರಿಗೆ ಒಬ್ಬೊಬ್ಬರಾಗಿ ಬರುತ್ತಿದ್ದು, ಎಲ್ಲೆಲ್ಲೂ ಹಬ್ಬದ ಸಡಗರ ತುಂಬಿ ತುಳುಕುತ್ತಿದೆ. ದಲಿತನಾದ ಬಸಣ್ಣನು ಬೆಂಕಿಹಾಕಿ, ತಮಟೆ ಕಾಯಿಸುತ್ತ, ಬಡಿಯುತ್ತಿದ್ದಾನೆ. ಇದರ ಸದ್ದಿಗೆ ಅಲ್ಲಿ ಗುಂಪು ಕಟ್ಟಿಕೊಂಡು ಕೆಲವು ಹುಡುಗರು ಕುಣಿಯುತ್ತಿದ್ದಾಗ, ಅಮಾಸನು ಅಲ್ಲಿಗೆ ಬಂದು ಹೆಜ್ಜೆ ಹಾಕಿ ಕುಣಿಯಲು ಪ್ರಾರಂಭಿಸಿದನು. ಇವನ ಕುಣಿತದ ಚೆಂದಕ್ಕೆ ಸಿಳ್ಳೆ ಹೊಡೆದು, ಕೇಕೆ ಹಾಕಿ ಕೆಲವರು ಖುಷಿಪಡುತ್ತಿದ್ದಾರೆ. ಹೀಗಿರುವಾಗ ಇಬ್ಬರು ಯಜಮಾನರು ಕೊಬ್ಬಿದ ಎರಡು ಹೋತಗಳನ್ನು ಅಲ್ಲಿಗೆ ಎಳೆತಂದರು. ಸುತ್ತಲು ಜನರು ನೆರೆದಿದ್ದಾರೆ. ಎದುರಿಗೆ ಗುಡಿ ಬಾಗಿಲು ತೆರೆದಿದ್ದು ಬೆಳ್ಳಿದೇವರು ಹೊಳೆಯುತ್ತಿತ್ತು. ಒಳಗಿನಿಂದ ಪೂಜಾರಿ ಮಂಗಳಾರತಿ ಮಾಡಿ, ತೀರ್ಥ, ಹೂವ ತಂದು ಹೋತಗಳ ಮೇಲೆ ಹಾಕಿದ. ಒಬ್ಬಾತ ಏನಾದರು ತಪ್ಪಿದ್ದರೆ ಕ್ಷಮಿಸಿ, ಒಪ್ಪಿಗೆ ಕೊಡು ತಾಯೆಂದು ದೇವಿಗೆ ಕೈಮುಗಿದನು. ಸ್ವಲ್ಪ ಹೊತ್ತು ಕಳೆದ ನಂತರ ಹೋತಗಳು ತಲೆ ಮೈಗಳನ್ನು ಒದರಿದವು. ಅನಂತರ ಅವುಗಳನ್ನು ಕತ್ತರಿಸಿ ಮಾರಮ್ಮನಿಗೆ ಬಲಿಕೊಟ್ಟರು. ಹಬ್ಬದ ಸಂಭ್ರಮದಲ್ಲಿ ಅಂದು ರಾತ್ರಿ ರೆಡ್ಡಿ ಗ್ಯಾಂಗಮನ್ನು ಸಿದ್ದಪ್ಪನು ಚೆನ್ನಾಗಿ ಕುಡಿದು ರಾಜಕಾರಣಿಯನ್ನು, ಕಂಟ್ರಾಕ್ಟರ ಹಾಗೂ

ಸಾಲಕೊಡುವ ಮಾದಪ್ಪ, ಹೀಗೆ ಎಲ್ಲರನ್ನೂ ಬಾಯಿಗೆ ಬಂದಂತೆ ಬಯ್ಯುತ್ತ, ದಾರಿಯಲ್ಲಿ ತೂರಾಡುತ್ತ ಬಿದ್ದಿದ್ದನು.

ಮಾರನೆ ದಿನ ಮಾರಿಗುಡಿಯಲ್ಲಿ ಹುಲಿವೇಷ ಹಾಕಿದವರು, ದೇವರಿಗೆ ಕೈ ಮುಗಿದು ತೀರ್ಥ ತೆಗೆದುಕೊಂಡು ತಮಟೆಯ ಸದ್ದಿಗೆ ಹೆಜ್ಜೆಹಾಕುತ್ತ ಕುಣಿಯಲು ಆರಂಭಿಸಿದರು. ಈ ಹುಲಿಗಳ ನಡುವೆ ಒಂದು ಮರಿ ಹುಲಿಯೂ ಇತ್ತು. ಇದು ಎಲ್ಲರ ಕಣ್ಮನಗಳನ್ನೂ ತನ್ನತ್ತ ಸೆಳೆಯುತ್ತಿದ್ದು, ಮೇಲ್ಜಾತಿಯವರ ಬೀದಿಗೆ ಬರುತ್ತಿದ್ದಂತೆ ಗೌಡ, ಪಟೇಲ, ಶ್ಯಾನುಭೋಗ ಮುಂತಾದ ಮುಖಂಡರು ತಮ್ಮ ಸ್ಥಾನಮಾನಕ್ಕೆ ತಕ್ಕಂತೆ ಇನಾಮು ಕೊಡುತ್ತಿದ್ದರು. ಮರಿಹುಲಿ ನೋಡಿದ ಗೌಡರಿಗೆ ರಾತ್ರಿ ನಿದ್ದೆ ಬಾರದೆ ಅದು ಯಾರೆಂದು ಕೆಲಸದಾಳನ್ನು ಕೇಳುತ್ತಾರೆ. ಕೆಲಸದಾಳು ಕುರಿಯಯ್ಯನ ಜೊತೆ ಇರುವ ತಬ್ಬಲಿಯಾದ ಅಮಾಸನೆಂದು ತಿಳಿಸುತ್ತಾನೆ. ಪ್ರತಿದಿನ ಮಠದ ಬಾಗಿಲಲ್ಲಿ ನಿಂತು ಕಾಸು ಕೇಳುವ, ಆ ಎಳೆ ಹುಡುಗ ಇಷ್ಟೊಂದು ದೊಡ್ಡದಾಗಿ ಬೆಳೆದುಬಿಟ್ಟನೆ, ಎಂದು ಗೌಡರು ಆಶ್ಚರ್ಯಪಡುತ್ತಾರೆ. ಇದರಿಂದ ಹಿಂದೆ ಮಾರಿಹಬ್ಬದಂದು ಹುಲಿವೇಷ ಹಾಕಿ ಕುಣಿಯುತ್ತಿದ್ದ ಕುರಿಯಯ್ಯ ಗೌಡರ ಕಾಕದೃಷ್ಟಿಗೆ ಬಿದ್ದು ಅವರ ಜೀತದಾಳಾದ್ದು ಕಣ್ಮುಂದೆ ಇರುವಾಗ, ಎಳೆಯ ಸಿರಿಯಾದ ದಲಿತರ ಅಮಾಸ ಮುಂದೆ ಶ್ರೀಮಂತರ ದಾಸ್ಯಕ್ಕೆ ಒಳಗಾಗಬಹುದಾದ ಕಹಿನೆನಪು ನಮಗೆ ಮೂಡುತ್ತದೆ.

'ಒಡಲಾಳ' ಕಾದಂಬರಿಯಲ್ಲಿ ಸಾಕವ್ವನದು ಬಡತನದ ಬೇಗೆಯಲ್ಲಿ ಬೇಯುತ್ತಿರುವ ಒಂದು ಅವಿಭಕ್ತ ಕುಟುಂಬ. ಈಕೆಗೆ ಮೂರು ಜನ ಗಂಡುಮಕ್ಕಳು, ಇಬ್ಬರು ಹೆಣ್ಣುಮಕ್ಕಳು. ಗಂಡುಮಕ್ಕಳಲ್ಲಿ ಮೊದಲನೆಯವನು ಕಾಳಣ್ಣ. ಈತನಿಗೆ ಮದುವೆಯಾಗಿದ್ದರೂ ಮಕ್ಕಳಿಲ್ಲ. ಎರಡನೆಯವನು ಸಣ್ಣಯ್ಯ. ಇವನಿಗೆ ಮದುವೆಯಾಗಿ ನಾಲ್ಕು ಮಕ್ಕಳಿದ್ದಾರೆ. ಈತನ ಹೆಂಡತಿ ಚೆಲುವಮ್ಮನಿಗೆ ತೌರಿಂದ ಎಲ್ಲಾ ರೀತಿಯ ಸೌಲಭ್ಯವನ್ನೂ ಒದಗಿಸುತ್ತಿದ್ದರಿಂದ ಗಂಡನಿಗಿಂತ ಹೆಂಡತಿಯದೆ ಮುಂದಾಳತ್ವ. ಇನ್ನು ಮೂರನೆಯವನು ಗುರುಸಿದ್ದು. ಇವನಿನ್ನೂ ಅವಿವಾಹಿತ. ನಾಟಕ ಕಲಿಯುವ ಹುಚ್ಚಿನ ಜೊತೆಗೆ ಜೂಜಾಟ ಆಡಿಕೊಂಡು ಊರೂರು ತಿರುಗುತ್ತ, ಸರಿಯಾಗಿ ಮನೆಗೆ ಬಾರದೆ ಮಾರಿಗುಡಿಯನ್ನೇ ವಾಸಸ್ಥಳ ಮಾಡಿಕೊಂಡಿದ್ದಾನೆ. ಸಾಕವ್ವನ ದೊಡ್ಡಮಗಳಾದ ಗೌರಮ್ಮನಿಗೆ ಮದುವೆಯಾಗಿ ಇಬ್ಬರು

ಮಕ್ಕಳಿದ್ದಾರೆ. ಆದರೆ ಗಂಡ ಈಕೆಯನ್ನು ಕಡೆಗಣಿಸಿ ಊರೂರು ಅಲೆಯಲಾರಂಭಿಸಿದ್ದರಿಂದ ತೌರಿಗೆ ಬಂದು ನೆಲೆಗೊಂಡಿದ್ದಾಳೆ. ಇಲ್ಲಿ ಗೌರಮ್ಮ ಮೇಲ್ವರ್ಗದವರ ಬೀದಿಗಳಲ್ಲಿ ಕೂಲಿನಾಲಿಗೆ ಹದ್ದಿನಂತೆ ಕಾದಿದ್ದು, ಸಂಪಾದಿಸಿ ತನಗಿರುವ ಎರಡು ಮಕ್ಕಳನ್ನು ಸಾಕುತ್ತಿದ್ದಾಳೆ. ಇವಳ ತಂಗಿ ಪುಟಗೌರಿ ಕಿರಿಯವಳು, ಮದುವೆಗೆ ಬಂದು ಅಣಿಯಾಗಿ ನಿಂತಿದ್ದಾಳೆ. ಇವಳು ಸಹ ಮೇಲ್ಜಾತಿಯವರ ಬಳಿ ಕೂಲಿನಾಲಿ ಮಾಡಿ ತಾಯಿ ಸಾಕವ್ವನ ಜೀವನಕ್ಕೆ ಆಸರೆಯಾಗಿದ್ದಾಳೆ. ಕೂಲಿ ಸಿಗದೆ ಮನೆಯಲ್ಲಿದ್ದಾಗ ಗೌರಮ್ಮನ ಮಗನಾದ ಶಿವನ ಹರಿದ ಅಂಗಿ, ಚಡ್ಡಿ, ಬಾಕ್ಕಿಗುಗಳನ್ನು ಹೊಲಿಯುವುದು. ಆ ಬಟ್ಟೆಗಳನ್ನು ಒಗೆದು, ಮಡಿಸಿ ತಲೆಗಿಟ್ಟು ಇಸ್ತ್ರಿ ಮಾಡುವುದು. ಅಲ್ಲದೆ ಪ್ರತಿದಿನ ಶಿವನ ಮುಖ ತೊಳೆದು ತಲೆಬಾಚಿ, ಹಣೆಗೆ ಕಪ್ಪಿಟ್ಟು ಸ್ಕೂಲಿಗೆ ರೆಡಿಮಾಡುವುದು ಇವಳ ದೈನಂದಿನ ಕೆಲಸ.

ಹೀಗಿರುವಾಗ ಒಂದು ದಿನ ಸಾಕವ್ವನ ಖಾಸ ಹುಂಜ ಬೆಳಗ್ಗೆ ಮನೆಬಿಟ್ಟು ಹೋದದ್ದು ಮೂರನೆ ದಿನವಾದರೂ ಬಂದಿರಲಿಲ್ಲ. ಅದು ದೇವರಿಗೆ ಬಿಟ್ಟ ಹುಂಜವಾಗಿದ್ದರಿಂದ ಅದಕ್ಕಾಗಿ ಸಾಕವ್ವ ಊರೆಲ್ಲ ಹುಡುಕಿ ಸುತ್ತಾಡಿ ಸಾಕಾಗಿತ್ತು. ಅದನ್ನು ಯಾರಾದರೂ ಹಿಡಿದು ಸಾಂಬಾರ ಮಾಡಿ ತಿಂದು ರೆಕ್ಕೆಪುಕ್ಕಗಳನ್ನು ಕಸದ ತಿಪ್ಪೆಯಲ್ಲಿ ಹುದುಗಿಸಿರಬಹುದೆಂದು, ಊರಾಚೆಗಿನ ತಿಪ್ಪೆಗಳನ್ನು ಕೂಡ ಹುಡುಕಿ ನಿರಾಶಳಾಗಿ ಮನೆಗೆ ಬಂದಿರುತ್ತಾಳೆ. ಹೀಗೆ ಸಾಕವ್ವ ಕಳೆದುಹೋದ ಹುಂಜದ ಬಗ್ಗೆ ಚಿಂತೆಯಲ್ಲಿದ್ದಾಗ, ಮನೆಯಲ್ಲಿ ಹುಂಜದ ಬಗ್ಗೆ ಯಾರೂ ಏನೂ ವಿಚಾರಿಸದೆ ಸುಮ್ಮನೆ ತಮ್ಮ ತಮ್ಮ ಕೆಲಸದಲ್ಲಿ ನಿರತರಾಗಿದ್ದರಿಂದ, ಕುಪಿತಳಾದ ಈಕೆ ಮಕ್ಕಳನ್ನು ತರಾಟೆಗೆ ತೆಗೆದುಕೊಳ್ಳುತ್ತಾಳೆ. ಇದರಿಂದ ಅಸ್ತ್ರವಿಚಾರ ಮಧ್ಯೆ ಬಂದು ಮಗ ಸಣ್ಣಯ್ಯ, ಸೊಸೆ ಚೆಲುವಮ್ಮ ಇವರೊಡನೆ ವಾದವಿವಾದ ನಡೆಯುತ್ತದೆ. ಅವಿದ್ಯಾವಂತಳಾದರೂ ಸಾಕವ್ವನ ಕಾನೂನು ವಿಶಿಷ್ಟ ಮಾತುಗಳಿಂದಾಗಿ ಇವರು ಸೋಲುತ್ತಾರೆ. ಇದಾದನಂತರ ರಾತ್ರಿ ಮೊಮ್ಮಗನಾದ ಶಿವನ ಜೊತೆಗೂಡಿ ಹುಂಜದ ಹುಡುಕಾಟವನ್ನು ಮುಂದುವರೆಸಿ, ಈಕೆ ಸಾರು ಕೇಳುವ ನೆಪದಲ್ಲಿ ವಾಸನೆ ಹಿಡಿದು ಮನೆಮನೆಗೆ ಹೋಗಿ, ಗುಪ್ತ ತನಿಖೆ ನಡೆಸುವ ರೀತಿ ಎಂಥವರಿಗೂ ಆಶ್ಚರ್ಯವನ್ನುಂಟು ಮಾಡುತ್ತದೆ.

ಮನೆಯಲ್ಲಿ ಯಾರಿಗೂ ಕೈಯಲ್ಲಿ ಕೆಲಸವಿಲ್ಲ. ಇದರಿಂದ ಆರ್ಥಿಕ ತೊಂದರೆ ಉಂಟಾಗಿ ಬಡತನ ತಾಂಡವವಾಡುತ್ತಿದೆ. ಅಲ್ಲದೆ ಅವಿಭಕ್ತ ಕುಟುಂಬವಾದ್ದರಿಂದ ಆಹಾರದ ಕೊರತೆ ದೊಡ್ಡ ಸಮಸ್ಯೆಯಾಗಿದೆ. ಹೀಗಿರುವಾಗ ಒಂದು ದಿನ ರಾತ್ರಿ ಕಾಳಣ್ಣ ಎತ್ತಪ್ಪಗೌಡರ ಎಣೆಬಿಲ್ಲಿನಿಂದ ಒಂದು ಮೂಟೆ ಕಡ್ಲೆಕಾಯಿಯನ್ನು ಕದ್ದು ಮನೆಗೆ ತರುತ್ತಾನೆ. ಅದನ್ನು ಕುಟುಂಬದ ಎಲ್ಲಾ ಸದಸ್ಯರು ಬೆಂಕಿಯ ಮುಂದೆ ಕುಳಿತು, ಸಾಮರಸ್ಯದಿಂದ ಸಾಮೂಹಿಕವಾಗಿ ತಿನ್ನುತ್ತ, ಪುಟಗೌರಿಯ ಮದುವೆ ವಿಚಾರ ಹಾಗೂ ಎತ್ತಪ್ಪಗೌಡರ ಎಮ್ಮೆ, ದನಗಳ ಬಗ್ಗೆ ಸಂಭಾಷಣೆ ನಡೆಸುತ್ತ, ಎತ್ತಪ್ಪನವರ ಆನೆ ರೀತಿ ಇರುವ ಒಂದು ಎಮ್ಮೆಯಾದರು ಸತ್ತರೆ ನಮ್ಮ ಬೀದಿಯ ದಾರಿದ್ರ್ಯ ಸ್ವಲ್ಪವಾದರು ಹಿಂಗುತ್ತೆ ಎಂದು ಖುಷಿಪಡುತ್ತಾರೆ. ಹೀಗೆ ತಾವು ನೋಡಿದ, ಕೇಳಿದ ವಿಷಯಗಳ ಬಗ್ಗೆ ಒಬ್ಬರಿಗೊಬ್ಬರು ಚರ್ಚಿಸುತ್ತ, ಸಂತೋಷಪಡುವ ರೀತಿ, ಬಡತನವಿದ್ದರು ಒಂದೊಂದು ಸಮಯದಲ್ಲಿ ಅವಿಭಕ್ತ ಕುಟುಂಬದಲ್ಲಿ ಎಷ್ಟೊಂದು ಸಂತೋಷವಿರುತ್ತದೆ ಎಂಬುದನ್ನು ನೆನಪಿಸುತ್ತದೆ. ಆದರೆ ಮಾರನೆ ದಿನ ಕಳುವಾಗಿದ್ದ ಕಡ್ಲೆಕಾಯಿಯ ಶೋಧನೆಗಾಗಿ ಎತ್ತಪ್ಪಗೌಡ ಹಾಗೂ ಪೋಲಿಸ ಇಲಾಖೆಯವರು ಬಂದಾಗ ದೌರ್ಜನ್ಯಕ್ಕೆ ಒಳಗಾಗಿ ಸಾಕವ್ವನ ಇಡೀ ಕುಟುಂಬ ತತ್ತರಿಸಿ ಹೋಗುತ್ತದೆ. ಅಲ್ಲದೆ ಪೋಲಿಸಿನವರ ಶೋಷಣೆಯಿಂದಾಗಿ ಸಾಕವ್ವ ತನ್ನ ಮತ್ತೊಂದು ಹುಂಜವನ್ನು ಕಳೆದುಕೊಂಡು ತೆಪ್ಪಗಾಗುತ್ತಾಳೆ. ಹೀಗೆ ಅಧಿಕಾರಿಗಳ ಹಾಗೂ ಪ್ರಬಲವರ್ಗದವರ ಶೋಷಣೆಯಿಂದಾಗಿ ದಲಿತವರ್ಗದ ಈ ಕುಟುಂಬದಲ್ಲಿ ಜೀವನ ಅಸ್ತವ್ಯಸ್ತವಾಗುತ್ತದೆ.

'ಕುಸುಮಬಾಲೆ' ಕಾದಂಬರಿಯಲ್ಲಿ ದಲಿತ ವರ್ಗದ ಪುರುಷರು ತಮ್ಮ ತೋಳಲ್ಲಿ ಬಲವಿದ್ದರೂ ದುಡಿಯದ ಸೋಮಾರಿಗಳು. ಕೆಲವರು ಕಳ್ಳತನವನ್ನೇ ಪ್ರಮುಖ ವೃತ್ತಿ ಮಾಡಿಕೊಂಡು ಬದುಕುತ್ತಿರುತ್ತಾರೆ. ಅಂತಹವರಲ್ಲಿ ಅಮಾಸ ಎಂಬುವವನು ಪ್ರಮುಖನಾದವನು. ಈತ ಮೇಲ್ಜಾತಿ ಸ್ತ್ರೀಯರ ಮುಟ್ಟಿನ ಸೀರೆಗಳನ್ನು ಕದ್ದುಮಾರಿ, ಅದರಿಂದ ಬಂದ ಹಣವನ್ನು ತನ್ನ ದೈನಂದಿನ ಖರ್ಚಿಗೆ ಬಳಸಿಕೊಳ್ಳುತ್ತಾನೆ. ಅಲ್ಲದೇ ಅಲ್ಪಸ್ವಲ್ಪ ಹಣ ಉಳಿಸಿ ಅದನ್ನು ತನ್ನ ಹಾರ್ದೈಕೆಯೊಂದಿಗೆ ಮಾರಿಗುಡಿಯಲ್ಲಿ ಆಶ್ರಯ ಪಡೆಯುತ್ತಿರುವ ವಯಸ್ಸಾದ ಕುರಿಯಯ್ಯನಿಗೂ ಬೀಡಿಯ ಖರ್ಚಿಗೆ ಕೊಡುತ್ತಾನೆ. ಮತ್ತೊಬ್ಬ

ವ್ಯಕ್ತಿಯಾದ ಗಾರೆಸಿದ್ದಮಾವ ಈತ ಒಳ್ಳೆಯ ಬಲಶಾಲಿ ಹಾಗೂ ಚುರುಕು ಬುದ್ಧಿಯುಳ್ಳವನು. ಇವನ ಕಸುಬು ಗಾರೆಕೆಲಸವಾದರು, ಆ ಕೆಲಸದಲ್ಲಿ ತೊಡಗದೆ ಎಳನೀರು ಕದಿಯುವುದನ್ನು ಮೈಗೂಡಿಸಿಕೊಂಡಿರುತ್ತಾನೆ.

ಇಲ್ಲಿನ ಪ್ರಮುಖ ದಲಿತ ಪಾತ್ರನಾದ ಚೆನ್ನ ಒಬ್ಬ ವಿದ್ಯಾವಂತ. ಈತ ಸ್ವಾಭಿಮಾನದಿಂದ ಗೌರವಯುತವಾದ ಬಾಳ್ವೆ ನಡೆಸಲು ಬಯಸುತ್ತಾನೆ. ದುಡಿಯಲು ಸೋಮಾರಿಯಾದ ಈತ ತಮ್ಮಂದಿರ ಜೀತದ ಅನ್ನದಲ್ಲಿ ಪಾಲನ್ನು ಪಡೆಯುವುದರ ಮೂಲಕ ಚೆನ್ನರನ ಎಂಬ ಹೆಸರಿಗೆ ಪಾತ್ರನಾಗಿರುತ್ತಾನೆ. ಅಲ್ಲದೇ ಈತ ಮೇಲ್ಜಾತಿಯ ಕುಸುಮಬಾಲೆಯನ್ನು ಪ್ರೀತಿಸಿದ್ದರಿಂದ ಜಾತಿಯ ವೈಷಮ್ಯಕ್ಕೆ ಸಿಕ್ಕಿ ಕೊಲೆಯಾಗುತ್ತಾನೆ. ಇವನಿಗೆ ವಯಸ್ಸಾದ ತಂದೆತಾಯಿಗಳಿರುತ್ತಾರೆ. ಇವನ ಅಪ್ಪ ವಯಸ್ಸಾಗಿದ್ದರೂ ಬುದ್ಧಿಯಲ್ಲಿ ಚಾಣಾಕ್ಷ. ಈತ ತನ್ನ ಚಾಣಾಕ್ಷತನದಿಂದಲೇ ಅವರಿವರ ಹತ್ತಿರ ಪುಕ್ಕಟ್ಟೆ ಬೀಡಿಗಳನ್ನು ಸಂಪಾದಿಸುತ್ತಾನೆ. ಚೆನ್ನನ ಕೊಲೆಯಾಗಿರುವುದನ್ನು ತಿಳಿಯದ ತಂದೆತಾಯಿಗಳು, ತಮ್ಮ ಮಗ ಕಾಣದ ಊರಾದ ಬೊಂಬಾಯಿಯಲ್ಲಿ ವಾಸವಾಗಿರುವನೆಂದು ನಂಬಿರುತ್ತಾರೆ. ಮಗನನ್ನು ನೋಡಿಕೊಂಡು ಬರಲು ಪ್ರಯಾಣಕ್ಕೆ ತಗಲುವ ಖರ್ಚುವೆಚ್ಚದ ಬಗ್ಗೆ ಅವನ ತಾಯಿ ಮಾತನಾಡುತ್ತ, ಪ್ರಯಾಣಕ್ಕೆ ಅಪಾರ ಹಣ ಬೇಕಾಗಬಹುದೆಂದು, ಅದಕ್ಕಾಗಿ ಮತ್ತೊಬ್ಬ ಮಗನನ್ನು ಜೀತಕ್ಕೆ ಇರಿಸೋಣ, ಜೊತೆಗೆ ಹೊಲವನ್ನು ಭೋಗ್ಯಕ್ಕೆ ಹಾಕಿಬಿಡೋಣ ಎಂದಾಗ ಎಂಥಹವರಿಗೂ ಮನಕರಗುತ್ತದೆ. ಅಲ್ಲದೇ ಇಲ್ಲಿನ ದಲಿತರು ಎಷ್ಟೊಂದು ಕಡುಬಡವರು ಹಾಗು ಮುಗ್ಧರು ಎಂಬುದು ಕಣ್ಮುಂದೆ ಬರುತ್ತದೆ. ಸಾಮಾನ್ಯವಾಗಿ ಈ ಕಾದಂಬರಿಯಲ್ಲಿ ಕಂಡುಬರುವ ಎಲ್ಲಾ ದಲಿತರು ಆರ್ಥಿಕವಾಗಿ ದುರ್ಬಲರು. ಕೆಲವರನ್ನು ಬಿಟ್ಟರೆ ಉಳಿದಂತೆ ಎಲ್ಲರೂ ಅವಿದ್ಯಾವಂತರು. ಇಲ್ಲಿನ ತೂರಮ್ಮನ ಮಗಳಾದ ಕೆಂಪಿ ಮದುವೆಯಾಗಿದ್ದರೂ ಕೂಡ ಗಂಡನ ಮನೆಗೆ ಹೋಗದೇ ತೌರಿನಲ್ಲಿ ಉಳಿದು ಮಕ್ಕಳ ಫಲಕ್ಕಾಗಿ ಹಾದರ ನಡೆಸುತ್ತಾಳೆ. ಇದಕ್ಕೆ ಕಾರಣ ಗಂಡ ಊರೂರು ತಿರುಗುತ್ತ, ಇವಳನ್ನು ಕಡೆಗಣಿಸಿರುವುದು ಹಾಗೂ ಆತನಿಂದ ಮಕ್ಕಳ ಫಲ ದೊರಕದೆ ಇರುವುದು ಪ್ರಮುಖವಾಗಿದೆ.

ಮತ್ತೊಬ್ಬ ದಲಿತ ಸ್ತ್ರೀಯಾದ ಈರಿಯು ತನ್ನ ರೋಗಗ್ರಸ್ತ ಮಗುವಿನ ಪ್ರಾಣ ಉಳಿಸಿಕೊಳ್ಳಲು ಸಗಣಿಯಿಂದ ಮನೆಸಾರಿಸಿ, ಸ್ನಾನ, ಮಡಿ, ಮಾಡಿಕೊಂಡು, ಒಂದು ಕೋಳಿಯನ್ನು ದೇವರಿಗೆ ಒಪ್ಪಿಸಿ, ಧೂಪ ಹಾಕಿ ಪೂಜೆ ಸಲ್ಲಿಸುವ ರೀತಿ ದಲಿತರ ಧಾರ್ಮಿಕ ಸಂಪ್ರದಾಯವನ್ನು ಪ್ರತಿಬಿಂಬಿಸುತ್ತದೆ. ಆದರೆ ಅವಿದ್ಯಾವಂತಳಾದ ಈಕೆ ತನ್ನ ಅಜ್ಞಾನದಿಂದಾಗಿ ಕೊನೆಗೂ ಮಗುವನ್ನು ಉಳಿಸಿಕೊಳ್ಳಲು ಸಾಧ್ಯವಾಗುವದಿಲ್ಲ.

ಇಲ್ಲಿನ ವೃದ್ಧ ಮಹಿಳೆ ತಾರಮ್ಮ ಮೊಮ್ಮಗುವಿಗಾಗಿ ತನ್ನ ಪ್ರಾಣವನ್ನು ಇಟ್ಟುಕೊಂಡು ಬದುಕಿರುತ್ತಾಳೆ. ಈಕೆ ಮೂಢ ನಂಬಿಕೆಯಲ್ಲ ಬಲವಾದ ನಂಬಿಕೆಯುಳ್ಳವಳು. ತನ್ನ ಮಗಳಿಗೆ ಮಗುವಾಗಲಿ ಎಂದು ಹಲವಾರು ದೇವರ ಬಳಿ ಹೋಗಿ ಹರಕೆ ಕಟ್ಟಿರುತ್ತಾಳೆ. ಅಲ್ಲದೆ ಮಗಳಿಗೆ ಹೆರಿಗೆಯಾದಾಗ ನಾಗಬೆತ್ತ, ಮರುಜವಳಿ ಕಡ್ಡಿಗಳನ್ನು ಇಟ್ಟುಕೊಂಡು, ಮಗುವಿನ ಹತ್ತಿರಕ್ಕೆ ದೆವ್ವಭೂತ ಬರದಂತೆ ಕಾಯುಂ ಕುಳಿತಿರುತ್ತಾಳೆ. ಹೀಗೆ ಈ ಕಾದಂಬರಿಯಲ್ಲಿ ಒಬ್ಬೊಬ್ಬ ದಲಿತರ ಜೀವನ ಭಿನ್ನತೆಯಿಂದ ಕೂಡಿದ ಚಿತ್ರಣ ಕಂಡುಬರುತ್ತದೆ.

2.2. ದೇವನೂರರ ಕೃತಿಗಳಲ್ಲಿ ಭಾಷಿಕ ಆಕಾರ/ಆಕೃತಿ(Form)

ದೇವನೂರರ ಕೃತಿಗಳಲ್ಲಿನ (ನಿರೂಪಕನ) ಭಾಷೆ ವಿಶಿಷ್ಟವಾದದ್ದಾಗಿದೆ. ಈ ಮಾತು ವಿಶೇಷವಾಗಿ 'ಕುಸುಮಬಾಲೆ' ಕಾದಂಬರಿಗೆ ಅನ್ವಯಿಸುತ್ತದೆ. ಈ ಕಾರಣದಿಂದಲೇ ಒಂದು ಸಾರಿ ಓದಿದಾಗ ಅದು ಓದುಗರಿಗೆ ತಕ್ಷಣ ಅರ್ಥವಾಗುವದಿಲ್ಲ. ಅದನ್ನು ಹಲವು ಬಾರಿಯಾದರೂ ಓದಿ ಅರ್ಥೈಸಿಕೊಳ್ಳಬೇಕಾಗುತ್ತದೆ. ಹಾಗಾದರೆ ಈ ಕೃತಿಗಳ ಭಾಷಿಕ ಆಕಾರ ಯಾವ ರೀತಿ ಇದೆ ? ಇದು ಮತ್ತೊಂದು ಭಾಷಿಕ ಆಕಾರಕ್ಕಿಂತ (ಉದಾ:- ಶಿಷ್ಟಭಾಷೆಯ ಆಕಾರ) ಹೇಗೆ ಭಿನ್ನ ಎಂಬ ಪ್ರಶ್ನೆ ಉದ್ಭವಿಸುತ್ತದೆ. ಇದನ್ನು ತಿಳಿಯಲು ಮತ್ತೊಂದು ಭಾಷಿಕ ಆಕಾರದೊಡನೆ ಹೋಲಿಕೆ ಮಾಡಿ ನೋಡಬೇಕು. ಈ ದಿಕ್ಕಿನಲ್ಲಿ ಇಲ್ಲಿ ನಿರೂಪಕನ ಭಾಷೆಗೂ ಶಿಷ್ಟಭಾಷೆಗೂ ಇರುವ ಅಂತರವನ್ನು ನೋಡಲಾಗಿದೆ.

2.2.1. ನಿರೂಪಕನ ಭಾಷೆಗೂ ಶಿಷ್ಟ ಭಾಷೆಗೂ ಇರುವ ಅಂತರ

ನಿರೂಪಕನ ಭಾಷೆಗೂ ಶಿಷ್ಟ ಭಾಷೆಗೂ ನಡುವೆ ಇರುವ ಅಂತರವನ್ನು ಪ್ರಮುಖವಾಗಿ ಧ್ವನಿಮಟ್ಟದಲ್ಲಿ, ಧ್ವನಿಮಾನಮಟ್ಟದಲ್ಲಿ, ಆಕೃತಿಮಾ ಮಟ್ಟದಲ್ಲಿ, ಕೂಡು–ಪದ(ಸಮಾಸ)ಗಳಲ್ಲಿ, ವಾಕ್ಯ ರಚನಿಕ ಮಟ್ಟದಲ್ಲಿ, ಶಬ್ದಕೋಶೀಯ ಮಟ್ಟದಲ್ಲಿ, ಆಕೃತಿಮಾತ್ಮಕ ಮಟ್ಟದಲ್ಲಿ, ಪದಗಳಲ್ಲಿ ಧ್ವನಿ ಬದಲಾವಣೆಯಾಗುವುದರಲ್ಲಿ, ದ್ವಿರುಕ್ತಿ ಪ್ರಯೋಗದಲ್ಲಿ ಸಂಯುಕ್ತ ಅಕ್ಷರಗಳ ಸರಳೀಕರಣವಾಗುವುದರಲ್ಲಿ, ನುಡಿಗಟ್ಟುಗಳಲ್ಲಿ ಹಾಗೂ ವಿಶೇಷವಾಗಿ ಕಂಡುಬರುವ ವ್ಯತ್ಯಾಸಗಳಲ್ಲಿ ಗುರುತಿಸಿ ನೋಡಲಾಗಿದೆ.

ಅ) ಧ್ವನಿಮಟ್ಟದ ವ್ಯತ್ಯಾಸಗಳು

ಶಿಷ್ಟ ಕನ್ನಡದ ಪದಗಳು ಪ್ರಸ್ತುತ ಲೇಖಕನ ಕೃತಿಗಳಲ್ಲಿ ಸ್ವಲ್ಪ ಬದಲಾವಣೆ ಹೊಂದಿ ಮೂಲ ಅರ್ಥದಲ್ಲಿಯೇ ಬಳಕೆಯಲ್ಲಿವೆ. ಈ ರೀತಿ ಬದಲಾವಣೆ ಹೊಂದಿದ ಪದಗಳಲ್ಲಿ ಕೆಲವು ಹೊಸ ಧ್ವನಿಗಳು ಕಾಣಿಸಿಕೊಂಡು ಧ್ವನಿಮಟ್ಟದ ವ್ಯತ್ಯಾಸ ಉಂಟಾಗಿದೆ. (æ) ಅಗ್ರ ಅಗೋಳ ಉನ್ನತ ನಿಮ್ನ ಸ್ವರ ಹಾಗು (ɔ) ಪಶ್ಚಗೋಳ ನಿಮ್ನ ಮಧ್ಯಸ್ವರ ಇವು ಈ ಬದಲಾವಣೆ ಹೊಂದಿದ ಪದಗಳಲ್ಲಿ ಕಾಣಿಸಿಕೊಳ್ಳುತ್ತವೆ. 'æ' ಮತ್ತು 'ɔ' ಧ್ವನಿಗಳಿಗೆ ಸಮಾನವಾದ ರೀತಿಯಲ್ಲಿ ಕನ್ನಡದಲ್ಲಿ 'ಎ್ಯ' ಮತ್ತು 'ಒ್ವ' ವರ್ಣಗಳನ್ನು ಇಲ್ಲಿ ಕ್ರಮವಾಗಿ ರೂಪಿಸಿಕೊಳ್ಳಲಾಗಿದೆ.

ಅಗ್ರ ಅಗೋಳ ಉನ್ನತ ನಿಮ್ನ ಸ್ವರ ಧ್ವನಿ(æ = ಎ್ಯ) ಬಂದು ಧ್ವನಿವ್ಯತ್ಯಾಸ ಉಂಟಾಗಿರುವ ಪದಗಳಿಗೆ ಉದಾಹರಣೆ:–

ಶಿ.ಕ.	ದೇ.ಕೃ.ಕ.
1) ಅದೇಕೆ = ಅ + ದ್ + ಏ + ಕ್ + ಎ	ಅದ್ಯಾಕೆ = ಅ + ದ್ + ಎ್ಯ + ಕ್ + ಎ
2) ಇದೇಕೆ = ಇ + ದ್ + ಏ + ಕ್ + ಎ	ಇದ್ಯಾಕ = ಇ + ದ್ + ಎ್ಯ + ಕ್ + ಅ
3) ನೇರ = ನ್ + ಏ + ರ್ + ಅ	ನ್ಯಾರ = ನ್ + ಎ್ಯ + ರ್ + ಅ
4) ಪೇಟೆ = ಪ್ + ಏ + ಟ್ + ಎ	ಪ್ಯಾಟೆ = ಪ್ + ಎ್ಯ + ಟ್ + ಎ
5) ಬೇಡ = ಬ್ + ಏ + ಡ್ + ಅ	ಬ್ಯಾಡ = ಬ್ + ಎ್ಯ + ಡ್ + ಅ

ಈ ಅಭಿವ್ಯಕ್ತಿ, ಒಬ್ಬ ಗ್ರಾಮೀಣ ಕನ್ನಡಿಗನಿಗೆ ಗ್ರೀಕ್, ಲ್ಯಾಟಿನ್ ಇದ್ದಂತೆ ಈಗ ನಾವು ಉಪಯೋಗಿಸುತ್ತಿರುವ ಭಾಷಾಶಾಸ್ತ್ರ ಮತ್ತು ಧ್ವನಿಶಾಸ್ತ್ರದ ಶಾಸ್ತ್ರೀಯ ಪದಗಳು ಹಾಸ್ಯಾಸ್ಪದವಾದಂಥವು. ಆದರೆ ಇಲ್ಲಿ ಅದನ್ನು ಬದಲಾಯಿಸ ಹೊರಟಿಲ್ಲ.

ಪಶ್ಚಗೋಳ ನಿಮ್ನ ಮಧ್ಯಸ್ವರಧ್ವನಿ (ɔ = ಒ̌) ಬಂದು ಧ್ವನಿವ್ಯತ್ಯಾಸ ಉಂಟಾಗಿರುವ ಪದಕ್ಕೆ ಉದಾಹರಣೆ.

ಶಿ.ಕ.	ದೇ.ಕೃ.ಕ.
1) ಕೋಪ = ಕ್ + ಓ + ಪ್ + ಅ	ಕಾಪ = ಕ್ + ಒ̌ + ಪ್ + ಅ

ಅ) ಧ್ವನಿಮಾ ಮಟ್ಟದ ವ್ಯತ್ಯಾಸಗಳು

(ಎ್ಯ) ಅಗ್ರ ಅಗೋಳ ಉನ್ನತ ನಿಮ್ನ ಸ್ವರ ಧ್ವನಿ ಹಾಗೂ (ಒ̌) ಪಶ್ಚಗೋಳ ನಿಮ್ನ ಮಧ್ಯಸ್ವರ ಧ್ವನಿಗಳು ಶಿಷ್ಟ ಕನ್ನಡದಲ್ಲಿ ಬಳಕೆಯಲ್ಲಿಲ್ಲ. ಆದರೆ ದೇವನೂರರ ಕೃತಿಗಳ ಕನ್ನಡದಲ್ಲಿ ಬಳಕೆಯಲ್ಲಿವೆ. ಇವುಗಳಿಗೆ ಧ್ವನಿಮಾ ಸ್ಥಾನ ಕೊಡಬಹುದಾದರೂ ಕನಿಷ್ಠತಮ ಜೋಡಿ (minimal pair) ದೊರಕದ ಕಾರಣ ಶಿಷ್ಟ ಕನ್ನಡಕ್ಕೂ ಮತ್ತು ದೇವನೂರರ ಕೃತಿಗಳ ಕನ್ನಡಕ್ಕೂ ಧ್ವನಿಮಾ ಮಟ್ಟದ ವ್ಯತ್ಯಾಸ ತೋರಿಸಿಲ್ಲ.

ಆ) ಆಕೃತಿಮಾ ಮಟ್ಟದ ವ್ಯತ್ಯಾಸಗಳು

ಆಕೃತಿಮಾ ಎಂದರೆ ಭಾಷೆಯಲ್ಲಿನ ಅರ್ಥವತ್ತಾದ ಲಘುತಮ ಘಟಕವಾಗಿದೆ. ಈ ಲಘುತಮ ಘಟಕದ ಮಟ್ಟದಲ್ಲಿ ಅಂದರೆ ಆಕೃತಿಮಾ ಮಟ್ಟದಲ್ಲಿ ಕಂಡುಬರುವ ವ್ಯತ್ಯಾಸಗಳನ್ನು ಗುರುತಿಸಿ ಹೋಲಿಕೆ ಮಾಡಿ ನೋಡಲಾಗಿದೆ. ಅವುಗಳಲ್ಲಿ ಮೊದಲಿಗೆ,

1. ವಿಭಕ್ತಿ ಪ್ರತ್ಯಯಗಳು

ಆಖ್ಯಾತ ಪ್ರತ್ಯಯಗಳ ವರ್ಗಕ್ಕೆ ಸೇರಿದ ವಿಭಕ್ತಿ ಪ್ರತ್ಯಯಗಳನ್ನು ಮೊದಲಿಗೆ ಗಮನಿಸಿದಾಗ ದ್ವಿತೀಯ, ಚತುರ್ಥಿ ಮತ್ತು ಸಪ್ತಮಿ ವಿಭಕ್ತಿ ಪ್ರತ್ಯಯಗಳಲ್ಲಿ ಮಾತ್ರ ವ್ಯತ್ಯಾಸಗಳಾಗಿದ್ದು ಉಳಿದವುಗಳಲ್ಲಿ ಯಥಾಸ್ಥಿತಿಯಾಗಿಯೇ ಬಳಕೆಯಾಗಿವೆ.

1.1. ದ್ವಿತೀಯ ವಿಭಕ್ತಿ ಪ್ರತ್ಯಯ (Accusative Case Suffix)

ಇಲ್ಲಿ ಶಬ್ದಗಳ ಅಂತ್ಯದ ಅಕ್ಷರಕ್ಕೆ ಸಂಯುಕ್ತ ಅಕ್ಷರವಾಗಿ 'ವ' ಅಕ್ಷರವು ಬಂದು ಶಿಷ್ಟ ಕನ್ನಡದ 'ಅನ್ನು' ಪ್ರತ್ಯಯಕ್ಕೆ ಸಮಾನವಾಗಿ ದ್ವಿತೀಯ ವಿಭಕ್ತಿ ಪ್ರತ್ಯಯವಾಗಿದೆ. ಪರ್ಯಾಯವಾಗಿ 'ಅ' ದ್ವಿತೀಯ ವಿಭಕ್ತಿ ಪ್ರತ್ಯಯ ಎಂದೂ 'ವ'ದ ಆಗಮವಾಗಿದೆಯೆಂದೂ ಹೇಳಬಹುದು.

ಅನ್ನು > ಅ

ಶಿ.ಕ.	ದೇ.ಕ್ರೈ.ಕ.		
1) ಪಂಜೆಯನ್ನು	ಪಂಜ್ವ	=	ಪ್ + ಅ + ಞ + ಜ್ + ವ್ + ಅ
2) ಜನರನ್ನು	ಜನ್ವ	=	ಜ್ + ಅ + ನ್ + ವ್ + ಅ
3) ಬೀಗವನ್ನು	ಬೀಗ್ವ	=	ಬ್ + ಈ + ಗ್ + ವ್ + ಅ
4) ಲಂಗವನ್ನು	ಲಂಗ್ವ	=	ಲ್ + ಅ + ಙ್ + ಗ್ + ವ್ + ಅ
5) ಪೇಟವನ್ನು	ಪೇಟ್ವ	=	ಪ್ + ಏ + ಟ್ + ವ್ + ಅ
6) ಹೊಗೆಯನ್ನು	ಹೊಗ್ವ		ಹ್ + ಒ + ಗ್ + ವ್ + ಅ

1.2. ಚತುರ್ಥೀ ವಿಭಕ್ತಿ ಪ್ರತ್ಯಯ (Dative Case Suffix)

ಶಿಷ್ಟ ಕನ್ನಡದ 'ಅಕ್ಕೆ', 'ಕ್ಕೆ' ಪ್ರತ್ಯಯಗಳು ಇಲ್ಲೂ ಬಳಕೆಯಲ್ಲಿದ್ದರೂ 'ಕುಸುಮಬಾಲೆ' ಕಾದಂಬರಿಯ ಸಂಭಾಷಣೆ ಸಾಲುಗಳಲ್ಲಿ ಇವುಗಳಿಗೆ ಸಮಾನವಾಗಿ 'ಕ' ಎಂಬ ಒಂದೇ ಒಂದು ಪ್ರತ್ಯಯ ಟಿಪಿಕಲ್ ಆಗಿ ಕಾಣಿಸಿಕೊಳ್ಳುತ್ತದೆ. ಹಾಗೆಯೇ 'ಗೆ' ಮತ್ತು 'ಇಗೆ' ಎಂಬ ಪ್ರತ್ಯಯಗಳು ಬಳಕೆಯಲ್ಲಿದ್ದರೂ ಅವು 'ಎ' ಕಾರದಿಂದ ಅಂತ್ಯವಾಗದೇ 'ಅ' ಕಾರದಿಂದ ಅಂತ್ಯವಾಗುತ್ತವೆ. 'ಗೆ' ಮತ್ತು 'ಇಗೆ' ಪ್ರತ್ಯಯಗಳು ಬರುವ ಕಡೆ ಇವುಗಳಿಗೆ ಸಮಾನವಾಗಿ 'ಗ' ಎಂಬ ಒಂದೇ ಒಂದು ರೂಪ ಬಳಕೆಯಲ್ಲಿದೆ.

ಅಕ್ಕೆ, ಕ್ಕೆ > ಕ

ಶಿ.ಕ.	ದೇ.ಕ್ರ.ಕ
1) ಇದಕ್ಕೆ	ಇದ್ಕ = ಇದ್ + ಕ
2) ಅದಕ್ಕೆ	ಅದ್ಕ = ಅದ್ + ಕ
3) ಅವಕ್ಕೆ	ಅವ್ಕ = ಅವ್ + ಕ
4) ಮರಕ್ಕೆ	ಮರ್ಕ = ಮರ್ + ಕ
5) ವಾರಕ್ಕೆ	ವಾರಕ = ವಾರ + ಕ

ಗೆ, ಇಗೆ > ಗ

ಶಿ.ಕ	ದೇ.ಕ್ರ.ಕ
1) ಗೋಡೆಗೆ	ಗೋಡೆಗ = ಗೋಡೆ + ಗ
2) ಸೀರೆಗೆ	ಸೀರಗ = ಸೀರ + ಗ
3) ಹೊಟ್ಟೆಗೆ	ಗೊಟ್ಟೆಗ = ಹೊಟ್ಟ + ಗ
4) ನಾಗರಾಜನಿಗೆ	ನಾಗರಾಜುಗ = ನಾಗರಾಜು + ಗ
5) ತೂರಮ್ಮನಿಗೆ	ತೂರಮ್ಮಗ = ತೂರಮ್ಮ + ಗ
6) ಅಮಾಸನಿಗೆ	ಅಮಾಸಗ = ಅಮಾಸ + ಗ
7) ಅಲ್ಲಿಗೆ	ಅಲ್ಲುಗ = ಅಲ್ಲು + ಗ
8) ನಿಮಗೆ	ನಿಮ್ಗ = ನಿಮ + ಗ

1.3. **ಸಪ್ತಮಿ ವಿಭಕ್ತಿ ಪ್ರತ್ಯಯ**(Locative Case Suffix)

ಇಲ್ಲಿನ ಸಂಭಾಷಣೆಯ ಸಾಲುಗಳಲ್ಲಿ ಸಪ್ತಮಿ ವಿಭಕ್ತಿ ಪ್ರತ್ಯಯವಾದ 'ಅಲ್ಲಿ' ಎಂಬ ಪ್ರತ್ಯಯಕ್ಕೆ ಸಮಾನವಾಗಿ 'ಲಿ' 'ಅಲಿ' ಹಾಗೂ 'ಇಲಿ' ಎಂಬ ಮೂರು ಪ್ರತ್ಯಯಗಳು ಬಳಕೆಯಲ್ಲಿವೆ.

ಅಲ್ಲಿ > ಲಿ, ಅಲಿ, ಇಲಿ

ಶಿ.ಕ.	ದೇ.ಕೃ.ಕ.		
1) ಮನೆಯಲ್ಲಿ	ಮನಲಿ	=	ಮನ + ಲಿ
2) ತಲೆಯಲ್ಲಿ	ತಲಲಿ	=	ತಲ + ಲಿ
3) ಸಂತೆಯಲ್ಲಿ	ಸಂತಲಿ	=	ಸಂತ + ಲಿ
4) ಬಾಯಲ್ಲಿ	ಬಾಯಲಿ	=	ಬಾಯ್ + ಅಲಿ
5) ಕೂಸಿನಲ್ಲಿ	ಕೂಸ್ನಲಿ	=	ಕೂಸು + ಅಲಿ (ನ್)
6) ದೂರದಲ್ಲಿ	ದೂರಂಲಿ	=	ದೂರ + ಅಲಿ (ದ್)
7) ರಾತ್ರಿಯಲ್ಲಿ	ರಾತ್ರೀಲಿ	=	ರಾತ್ರಿ + ಇಲಿ
8) ಜಾತಿಯಲ್ಲಿ	ಜಾತೀಲಿ	=	ಜಾತಿ + ಇಲಿ
9) ತುಟಿಯಲ್ಲಿ	ತುಟೀಲಿ	=	ತುಟಿ + ಇಲಿ

2. ಪುರುಷವಾಚಕ ಪ್ರತ್ಯಯಗಳು (Personal Suffixes)

ಇಲ್ಲಿನ ಪುರುಷವಾಚಕ ಪ್ರತ್ಯಯಗಳನ್ನು ಶಿಷ್ಟ ಕನ್ನಡದ ಪ್ರತ್ಯಯಗಳೊಂದಿಗೆ ಹೋಲಿಕೆ ಮಾಡಿದಾಗ ಇವುಗಳಲ್ಲಿ ಉತ್ತಮಪುರುಷ ಏಕವಚನವಾದ 'ನಾನು' ಎಂಬುದು 'ನಾ' ಎಂದಾಗಿಯೂ, ಮಧ್ಯಮಪುರುಷ ಏಕವಚನವಾದ 'ನೀನು' ಎಂಬುದು 'ನೀ' ಎಂದಾಗಿಯೂ, ಪ್ರಥಮ ಪುರುಷ ಏಕವಚನ ಪುಲ್ಲಿಂಗವಾದ 'ಅವನು' ಎಂಬುದೂ 'ಅವ' ಎಂದಾಗಿಯೂ 'ಇವನು' ಎಂಬುದು 'ಇವ' ಎಂದಾಗಿಯೂ ಏಕವಚನ ಸ್ತ್ರೀಲಿಂಗವಾದ 'ಅವಳು' ಎಂಬುದು 'ಅವ್ಳು' ಎಂದಾಗಿಯು, ಮತ್ತು ಇದರಂತೆಯೇ ಬಹುವಚನವಾದ 'ಅವರು' ಎಂಬುದು 'ಅವ್ರು' ಎಂದಾಗಿಯೂ 'ಕುಸುಮಬಾಲೆ' ಕಾದಂಬರಿಯಲ್ಲಿ ಕಂಡುಬರುತ್ತವೆ. ಉಳಿದ ಪುರುಷವಾಚಕ ಪ್ರತ್ಯಯಗಳಲ್ಲಿ ಅಂತಹ ಬದಲಾವಣೆಗಳು ಕಂಡುಬರುವುದಿಲ್ಲ.

3· ಬಹುವಚನ ಪ್ರತ್ಯಯಗಳು (Plural Suffixes)

ಶಿಷ್ಟ ಕನ್ನಡದ ಬಹುವಚನ ಪ್ರತ್ಯಯಗಳಲ್ಲಿ 'ದಿರು' ಹಾಗು 'ಅಂದಿರು' ಎಂಬ ಪ್ರತ್ಯಯಗಳನ್ನು ಹೊರತುಪಡಿಸಿ ಉಳಿದವುಗಳು ಯಥಾವತ್ತಾಗಿ ಬಳಕೆಯಲ್ಲಿವೆ. ಈ 'ದಿರು' ಹಾಗು 'ಅಂದಿರು' ಎಂಬುವುಗಳಿಗೆ ಸಮಾನವಾಗಿ 'ದೀರು' ಎಂಬ ಒಂದೇ ಒಂದು ಪ್ರತ್ಯಯ 'ಕುಸುಮಬಾಲೆ' ಕಾದಂಬರಿಯಲ್ಲಿ ಬಳಕೆಯಲ್ಲಿದೆ.

ದಿರು, ಅಂದಿರು > ದೀರು

ಶಿ·ಕ·	ದೇ·ಕ್ರಿ·ಕ·		
1) ಅಣ್ಣಂದಿರು	ಅಣ್ಣದೀರು	=	ಅಣ್ಣ + ದೀರು
2) ತಾತಂದಿರು	ತಾತದೀರು	=	ತಾತ + ದೀರು
3) ತಮ್ಮಂದಿರು	ತಮ್ಮದೀರು	=	ತಮ್ಮ + ದೀರು
4) ಜೋತಮ್ಮಂದಿರು	ಜೋತಮ್ಮದೀರು	=	ಜೋತಮ್ಮ + ದೀರು
5) ತಾಯಿಯಂದಿರು	ತಾಯಿದೀರು	=	ತಾಯಿ + ದೀರು

4· ಕಾಲಸೂಚಕ ಪ್ರತ್ಯಯಗಳು (Tense Suffixes)

ವರ್ತಮಾನ ಕಾಲಸೂಚಕ ಪ್ರತ್ಯಯದಲ್ಲಿ ಮಧ್ಯಸ್ವರ ಲೋಪದ ಪ್ರಭಾವದಿಂದಾಗಿ 'ಉತ್ತ' ಪ್ರತ್ಯಯದಲ್ಲಿ 'ಉ' ಸ್ವರವು ಲೋಪವಾಗಿ 'ತ್ತ' ಪ್ರತ್ಯಯ ಮಾತ್ರವೇ ಬಳಕೆಯಲ್ಲಿದೆ. ಇದು ಆಡುಮಾತಿನ ಶಿಷ್ಟ ಕನ್ನಡದಲ್ಲೂ ನಿಜ.

ಉತ್ತ > ತ್ತ

ಶಿ·ಕ·	ದೇ·ಕ್ರಿ·ಕ
ನೋಡುತ್ತಾನೆ	ನೋಡ್ತಾನೆ = ನೋಡ್ + ತ್ತ + ಅನೆ
ಕೊಡುತ್ತಾನೆ	ಕೊಡ್ತಾನ = ಕೊಡ್ + ತ್ತ + ಅನ

ಭೂತಕಾಲದ ಪ್ರತ್ಯಯಗಳಲ್ಲಿ ವ್ಯತ್ಯಾಸಗಳಿಲ್ಲದೆ ಯಥಾವತ್ತಾಗಿ ಬಳಕೆಯಲ್ಲಿವೆ. ಭವಿಷ್ಯತ್ಕಾಲವು ವರ್ತಮಾನ ಕಾಲದ ರೂಪದಲ್ಲಿಯೇ ಬಳಕೆಯಲ್ಲಿದೆ.

5. <u>ಉದ್ದೇಶಾತ್ಮಕ ಕ್ರಿಯಾರ್ಥಕ ಪ್ರತ್ಯಯಗಳು</u>

(Perposive infinitive suffixes)

ಉದ್ದೇಶ ವ್ಯಕ್ತಪಡಿಸಲು ಕ್ರಿಯಾ ಪ್ರಕೃತಿಗೆ ಸೇರುವ ಪ್ರತ್ಯಯಗಳೇ ಕ್ರಿಯಾರ್ಥಕ ಪ್ರತ್ಯಯಗಳು. ಅ, ಅಲ್, ಅಲಿಕ್ಕೆ, ಎಂಬ ಮೂರು ರೂಪಗಳು ಶಿಷ್ಟಕನ್ನಡದಲ್ಲಿವೆ. ದೇವನೂರರ ಕೃತಿಗಳಲ್ಲಿ ಈ ಮೊದಲೆರಡು ರೂಪಗಳು ಯಥಾವತ್ತಾಗಿ ಬಳಕೆಯಲ್ಲಿದ್ದಂತೆ ಕೊನೆಯದಾದ 'ಅಲಿಕ್ಕೆ' ಎಂಬುದು ವ್ಯತ್ಯಾಸ ಹೊಂದಿ ಬಳಕೆಯಲ್ಲಿದೆ.

<u>ಅಲಿಕೆ > ಅಕ</u>

ಶಿ.ಕ.	ದೇ.ಕೃ.ಕ.		
1) ಕೇಳಲಿಕ್ಕೆ	ಕೇಳಕ	=	ಕೇಳ್ + ಅಕ
2) ನೋಡಲಿಕ್ಕೆ	ನೋಡಕ	=	ನೋಡ್ +ಅಕ
3) ಹೇಳಲಿಕ್ಕೆ	ಹೇಳಕ	=	ಹೇಳ್ +ಅಕ
4) ಮಾಡಲಿಕ್ಕೆ	ಮಾಡಕ	=	ಮಾಡ್ +ಅಕ

ಸಂಭಾವ್ಯ ಕ್ರಿಯಾರ್ಥಕ ಪ್ರತ್ಯಯ(Conditional suffix), ನಿಷೇಧಾತ್ಮಕ ಭೂತಕೃದಂತ(Negative Past Participle), ಭೂತಕೃದಂತ(Past Participle), ಭೂತೇತರ ಕೃದಂತ(Non-past participle). ಇವುಗಳಲ್ಲಿ ಯಾವುದೇ ವ್ಯತ್ಯಾಸಗಳು ಉಂಟಾಗದೆ ಯಥಾವತ್ತಾಗಿ ಬಳಕೆಯಲ್ಲಿವೆ.

6. <u>ನಿರ್ದೇಶಕ ಕ್ರಿಯಾರ್ಥಕ ಪ್ರತ್ಯಯಗಳು</u>(Indicative suffixes)

ತಟಸ್ಥ ಅನ್‌ಮಾರ್ಕ್‌ಡ್ ಮೂಡ್(Mood)ಅನ್ನು ಕ್ರಿಯಾಪದದಲ್ಲಿ ಸೂಚಿಸುವ ಪ್ರತ್ಯಯಗಳೇ ನಿರ್ದೇಶಕ ಕ್ರಿಯಾರ್ಥಕ ಪ್ರತ್ಯಯಗಳು. ಇವು ಲಿಂಗ, ವಚನ ಮತ್ತು ಪುರುಷವನ್ನು ಸೂಚಿಸುತ್ತವೆ. ಏಕವಚನದಲ್ಲಿ ಉತ್ತಮ ಪುರುಷ ವರ್ತಮಾನಕಾಲ, ಭೂತಕಾಲಗಳನ್ನು ಹೇಳುವಾಗ ಹಾಗೂ ಬಹುವಚನದಲ್ಲಿ ಉತ್ತಮ ಪುರುಷ ವರ್ತಮಾನಕಾಲ, ಭೂತಕಾಲ ಮತ್ತು ಭವಿಷ್ಯತ್ಕಾಲ ಹೇಳುವಾಗ ಹಾಗೆಯೆ ಬಹುವಚನದಲ್ಲಿ ಮಧ್ಯಮ ಪುರುಷ ಭೂತಕಾಲ, ಭವಿಷ್ಯತ್ಕಾಲಗಳನ್ನು ಹೇಳುವಾಗ ಇಲ್ಲಿ ಕೆಲವು ವ್ಯತ್ಯಾಸಗಳು ಕಂಡುಬರುತ್ತವೆ.

ಉದಾ:-

ಏಕವಚನ

ಶಿ.ಕ.					ದೇ.ಕ್ರಿ.ಕ.		
ಪುರುಷ	ವರ್ತಮಾನಕಾಲ	ಭೂತಕಾಲ	ಭವಿಷ್ಯತ್ಕಾಲ	x	ವರ್ತಮಾನಕಾಲ	ಭೂತಕಾಲ	ಭವಿಷ್ಯತ್ಕಾಲ
1) ಉ.ಪು	- ಏನೆ	- ಏನು	-ಎನು	x	-ಈನಿ	-ನಿ	-
	ಕೇಳುತ್ತೇನೆ	ಕೇಳಿದೆನು	ಕೇಳುವೆನು	x	ಕೇಳ್ತೇನಿ	ಕೇಳಿವಿ	-
	ಮಾಡುತ್ತೇನೆ	ಮಾಡಿದೆನು	ಮಾಡುವೆನು	x	ಮಾಡ್ತೇನಿ	ಮಾಡಿವಿ	-

ಬಹುವಚನ

ಶಿ.ಕ.					ದೇ.ಕ್ರಿ.ಕ.		
ಪುರುಷ	ವರ್ತಮಾನಕಾಲ	ಭೂತಕಾಲ	ಭವಿಷ್ಯತ್ಕಾಲ	x	ವರ್ತಮಾನ ಕಾಲ	ಭೂತಕಾಲ	ಭವಿಷ್ಯತ್ಕಾಲ
1) ಉ.ಪು.	- ಏವೆ	-ಎವು	-ಎವು	x	-ಈವಿ	-ವಿ	-ಅವು
2) ಮ.ಪು.	-ಈರಿ	-ಇರಿ	-ಇರಿ	x	-	-ರಿ	-ರಿ
1) ಉ.ಪು.	ಕೇಳುತ್ತೇವೆ	ಕೇಳಿದೆವು	ಕೇಳುವೆವು	x	ಕೇಳ್ತೇವಿ	ಕೇಳಿದ್ವಿ	ಕೇಳವು
2) ಮ.ಪು.	ಕೇಳುತ್ತೀರಿ	ಕೇಳಿದಿರಿ	ಕೇಳುವಿರಿ	x	-	ಕೇಳಿದ್ರಿ	ಕೇಳಿವ್ರಿ

ತದ್ಧಿತ ಪ್ರತ್ಯಯಗಳ ವರ್ಗದಲ್ಲಿ 'ಇಕೊ' ಪೂರ್ಣಾರ್ಥಕ ಕ್ರಿಯಾ ಪ್ರತ್ಯಯ (Completive suffix)ದಲ್ಲಿ ಮಾತ್ರ ಮಧ್ಯಸ್ವರ ಲೋಪದಿಂದಾಗಿ ವ್ಯತ್ಯಾಸ ಕಂಡುಬರುತ್ತದೆ.

ಉದಾ:-

ಶಿ.ಕ.	ದೇ.ಕ್ರಿ.ಕ.		ಇಕೊ > ಕೊ
ಕೇಳಿಕೊ	ಕೇಳ್ಕೊ	=	ಕೇಳ್ + ಕೊ
ನೋಡಿಕೊ	ನೋಡ್ಕೊ	=	ನೋಡ್ +ಕೊ

7. <u>ವಿಧ್ಯರ್ಥಕ ಪ್ರತ್ಯಯಗಳು:</u>

ಶಿಷ್ಟ ಕನ್ನಡದ ವಿಧ್ಯರ್ಥಕ ಪ್ರತ್ಯಯವಾದ 'ಓಣ' ಇಲ್ಲಿ 'ಅವ' ಎಂದಾಗುತ್ತದೆ.

<u>ಓಣ > ಅವ</u>

ಶಿ.ಕ.	ದೇ.ಕ್ರ.ಕ.		
1) ನೋಡೋಣ	ನೋಡವ	=	ನೋಡ + ಅವ
2) ಕೇಳೋಣ	ಕೇಳವ	=	ಕೇಳ + ಅವ
3) ಮಾಡೋಣ	ಮಾಡವ	=	ಮಾಡ + ಅವ
4) ಹೋಗೋಣ	ಹೋಗವ	=	ಹೋಗ + ಅವ

8. <u>ಬಂಧುವಾಚಕ</u>

ಇಲ್ಲಿನ ಕೆಲವು ಬಂಧುವಾಚಕಗಳ ಸಂಬೋಧನೆಯಲ್ಲಿ ರೂಪ ಬದಲಾಗುತ್ತದೆ.

ಉದಾ:-

ಶಿ.ಕ.	ದೇ.ಕ್ರ.ಕ
1) ಅಮ್ಮ	ಅವ್ವೆ
2) ಅಪ್ಪ	ಅಪ್ಪೆ
3) ಅಕ್ಕ	ಅಕ್ಕೆ

9. <u>ಆತ್ಮಾರ್ಥಕ ಪ್ರತ್ಯಯಗಳು</u> (Reflexive suffixes)

ಇಲ್ಲಿನ ಕೃತಿಗಳ ಪದಗಳ ನಡುವೆ ಶಿಷ್ಟಕನ್ನಡದ ಆತ್ಮಾರ್ಥಕ ಪ್ರತ್ಯಯದಲ್ಲಿನ 'ಒ' ಕಾರ 'ಅ' ಕಾರಗೊಂಡು ವ್ಯತ್ಯಾಸ ಉಂಟಾಗಿರುವುದು ಕಂಡುಬರುತ್ತದೆ.

ಉದಾ:-

		ಶಿ.ಕ.		ದೇ.ಕ್ರ.ಕ
1) ತುಂಬಿ + ಕೊಂಡರು	=	ತುಂಬಿಕೊಂಡರು	>	ತುಂಬ್ಕಂಡರು
2) ಸೇರಿ + ಕೊಂಡರು	=	ಸೇರಿಕೊಂಡರು	>	ಸೇರ್ಕಂಡರು

3) ಕಟ್ಟು + ಕೊಂಡು	=	ಕಟ್ಟಿಗೊಂಡು	>	ಕಟ್ಗಂಡು
4) ಅಂಟು + ಕೊಂಡು	=	ಅಂಟಿಗೊಂಡು	>	ಅಂಟ್ಗಂಡು
5) ಮಲಗಿ + ಕೊ	=	ಮಲಗಿಕೊ ಮಲಕೊಂ	>	ಮಲಕ

ಇ.1. <u>ಕೂಡು – ಪದ (ಸಮಾಸ)ಗಳಲ್ಲಿ ವ್ಯತ್ಯಾಸಗಳು</u>

ಶಿಷ್ಟಕನ್ನಡದ ಕೂಡು ಪದಗಳಿಗೂ ದೇವನೂರರ ಕೃತಿಗಳಲ್ಲಿ ಕಂಡುಬರುವ ಕೂಡು ಪದಗಳಿಗೂ ರಾಚನಿಕವಾಗಿ ವ್ಯತ್ಯಾಸಗಳು ಕಂಡುಬರುವುದಿಲ್ಲ.

ಈ) <u>ವಾಕ್ಯರಾಚನಿಕ ವ್ಯತ್ಯಾಸಗಳು</u>

ಶಿಷ್ಟ ಕನ್ನಡದ ವಾಕ್ಯಗಳಿಗೂ ದೇವನೂರರ ಕೃತಿಗಳಲ್ಲಿನ ಕನ್ನಡದ ವಾಕ್ಯಗಳಿಗೂ ರಾಚನಿಕವಾದ ವ್ಯತ್ಯಾಸಗಳಿಲ್ಲ. ಇಲ್ಲಿ ಶಿಷ್ಟಕನ್ನಡದ 'ಕುಸುಮಬಾಲೆ' ಓದುಗ ಅಬ್ದುಲ್ ಕರೀಮ್(MCA ಗಣಕವಿಜ್ಞಾನ) ಅವರ ಪ್ರತಿಕ್ರಿಯೆ ಅರ್ಹ. ಅದು ನಮ್ಮ ಮೇಲಿನ ಹೇಳಿಕೆಯನ್ನು ಪುಷ್ಟೀಕರಿಸುತ್ತದೆ. ಅಬ್ದುಲ್ ಕರೀಮ್ ಹೇಳುತ್ತಾರೆ "... (ಶಿಷ್ಟಕನ್ನಡದ) ವಾಕ್ಯರಚನೆ ಮೂಲಕೃತಿಯಲ್ಲಿ ಬರುವಂತೆಯೇ ಇದೆ"

ಉ) <u>ಶಬ್ದಕೋಶೀಯ ವ್ಯತ್ಯಾಸಗಳು</u>

ದೇವನೂರರ ಕೃತಿಗಳ ಕನ್ನಡಕ್ಕೂ, ಶಿಷ್ಟ ಕನ್ನಡಕ್ಕೂ ಶಬ್ದಕೋಶೀಯ ಪದಗಳು ಈ ಕೆಳಗಿನಂತೆ ಕಾಣಿಸಿಕೊಂಡು ವ್ಯತ್ಯಾಸ ಕಂಡುಬರುತ್ತದೆ.

<u>ಉದಾ:</u>

ದೇ.ಕೃ.ಕ.		ಶಿ.ಕ.	ದೇ.ಕೃ.ಕ		ಶಿ.ಕ
ಅಗುತು	=	ತುಂಬು, ಭರ್ತಿಮಾಡು	ಅದ್ಬರಿ	=	ಆಶ್ಚರ್ಯ
ಅಂಗಲ್ತು	=	ಸ್ವಲ್ಪ	ಅಡೆ	=	ಬಾ (ಶಿಶುವನ್ನು ಸಂಬೋಧಿಸಿ ಕರೆಯುವುದು)
ಅಂಗಿ	=	ಷರ್ಟ್	ಅಡಾ	=	ಗಿರವಿ
ಅಚಾನಕ್	=	ಆಕಸ್ಮಿಕ	ಅಣ	=	ಸಿದ್ಧ

ದೇ.ಕ್ರಿ.ಕ		ಶಿ.ಕ.
ಅತ್ತ	=	ಆ ಕಡೆ
ಅತೀತ	=	ಬಿಡುಗಡೆ
ಅದಂರು	=	ಹೆದರಿಸು
ಅನಕಿಸು	=	ಸಿಂಪಡಿಸು
ಅನಂಗ	=	ಮನ್ಮಥ
ಅನಾದ್ರಿ	=	ಅನಾಥ
ಅಂಬರ	=	ರಾಗಿಗಂಜಿ
ಅಬ್ಬೇಪಾರಿ	=	ಅನಾಥ
ಅಮರಿ	=	ಆವರಿಸಿ
ಅಮ್ಮಿ	=	ಲೇ (ಸ್ತ್ರೀಯನ್ನು ಸಂಭೋಧಿಸಿ ಕರೆಯುವ ಪದ)
ಅವಡವಿ	=	ಕೌಶಲ್ಯ
ಅವ್ವ	=	ಅಮ್ಮ
ಅವುಡು	=	ಕೆಳತುಟಿ
ಅರುವೆ	=	ಮಣ್ಣಿನ ಬಿಂದಿಗೆ
ಅಳಗ	=	ಮಣ್ಣಿನ ಅಂಡೆ
ಅಳಿ	=	ಗೌರವಸೂಚಕ ಪದ
ಅಚೆ	=	ಹೊರಗೆ
ಅಜುಬಾಜು	=	ಅಕ್ಕಪಕ್ಕ
ಅಡೇದಲ	=	ಅಕ್ಕಪಕ್ಕ
ಅತಹುಳ	=	ಜಿರಳೆ
ಅಹು	=	ಹಿಡಿ
ಅಂಹು	=	ಮೇಲಕ್ಕೆ

ದೇ.ಕ್ರಿ.ಕ.		ಶಿ.ಕ.
ಅಪಾಟಿ	=	ಅಷ್ಟು ದಪ್ಪ, ಅಷ್ಟೊಂದು
ಅಂತೊತ್ತೀರ	=	ಭಾನುವಾರ
ಅವತ್ತು	=	ಆ ದಿನ
ಇಕ್ಕು	=	ಬಡಿಸು
ಇಂಕ್ರ	=	ಚೂರು
ಇತ್ತ	=	ಈ ಕಡೆ
ಇನಾಮು	=	ಬಹುಮಾನ
ಈ ಪಾಟಿ	=	ಇಷ್ಟು ದಪ್ಪ, ಇಷ್ಟೊಂದು
ಈರ್ವರು	=	ಇಬ್ಬರು
ಈವತ್ತು	=	ಈ ದಿನ
ಉದ್ಕ	=	ಸಾಂಬಾರು
ಊರ್ಜಿತ	=	ಏಳಿಗೆ ಪಡೆದ
ಎಗರಿ	=	ನೆಗೆದು
ಎಟುಕು	=	ಸಿಕ್ಕಿಸು
ಎತ್ತ	=	ಯಾವ ಕಡೆ
ಎಟಾಕು	=	ಓಡಾಡು
ಏಡು	=	ಎರಡು
ಏಲು	=	ಮಲ
ಐತೆ	=	ಇದೆ
ಒಪ್ಪತ್ತು	=	ಮಧ್ಯಾಹ್ನ
ಒಂದೊಪ್ಪತ್ತು	=	ಮಧ್ಯಾಹ್ನದ ಉಪವಾಸ
ಒಬ್ಬೆ	=	ಒಂದು ಸಲದ ಅಳತೆ

ದೇ.ಕ್ರೈ.ಕ		ಶಿ.ಕ.	ದೇ.ಕ್ರೈ.ಕ.		ಶಿ.ಕ.
ಓಜ	=	ಬಡಗಿ	ಕೀಚುಬಾಲದ ಹಕ್ಕಿ	=	ಬಾವಲಿ
ಔಲು	=	ಜೋಳದಪುರಿ	ಕಿಚ್ಚುಹಾಯಿಸೋ ಹಬ್ಬ	=	ಸಂಕ್ರಾಂತಿ ಹಬ್ಬ
ಕಕ್ಕು	=	ಪಾಂತಿಮಾಡು	ಕಿತ್ತಲ್ಲ	=	ಜಾಡಿ
ಕಂಗೆಡು	=	ಸೊರಗು	ಕಿದಂಡೆ	=	ಸನಿಹ, ಹತ್ತಿರ
ಕಟಕಟ್ಳ	=	ಬೇಗಬೇಗನೆ	ಕಿಬ್ರ	=	ಕಡಿದಾದ ಇಳಿಜಾರು
ಕಟಬಾಯಿ	=	ಬಾಯಿಯ ಎರಡು ತುದಿ	ಕುಕ್ಕೆ	=	ಬಿದಿರು ಬುಟ್ಟಿ
ಕಡಾಂಬವ	=	ಮುಂಗೋಪಿ	ಕುಟ್ಟ	=	ಹುಳುಕು(ರೋಗ)
ಕಡುಬು	=	ಇಡ್ಲಿ	ಕುಂಡ	=	ಕುರುಡ
ಕಂದ	=	ಮಗು	ಕುರುಕು	=	ಗುನುಗುವುದು ?
ಕಂದಮ್ಮ	=	ಹೆಣ್ಣುಮಗು	ಕುಲುಗುಡು	=	ನಗಾಡು
ಕಪಾಲ	=	ಕೆನ್ನೆ	ಕುಳ	=	ಗೇಣಿದಾರ, ಕುಟುಂಬ
ಕಂಬಳ	=	ಕೂಲಿ ಕೆಲಸ	ಕೂಸು	=	ಮಗು
ಕರಗಟ್ಟ	=	ಒಣಗಿದ	ಕೆಕ್ಕ	=	ಕೆನ್ನೆ
ಕರೆ	=	ದಡ	ಕೆರ	=	ಚಪ್ಪಲಿ
ಕರಿ	=	ಕಪ್ಪುಬಣ್ಣ	ಕೇಪಮಾರಿ	=	ಅಪಕಾರಿ
ಕಲಕೆತ್ತ	=	ಕೆಟ್ಟನಡತೆಯ	ಕೇವಿಲು	=	ಕೆಲಸ
ಕವಳ	=	ಕತ್ತಲೆ	ಕೇರಿ	=	ಬೀದಿ
ಕವಕನೆ	=	ಬೇಗನೆ	ಕೊಂಟು	=	ಮರದ ತುಂಡು
ಕವರಿ	=	ಅವರಿಸಿ	ಕೊತ್ತಿ	=	ಬೆಕ್ಕು
ಕವುಚಿ	=	ಮುಚ್ಚಿಕೊಂಡ	ಕೊಂಪೆ	=	ಕುಗ್ರಾಮ
ಕಳ್ಳು	=	ಕರುಳು	ಕೊಳ್ಳಿ	=	ಕೊಡಲಿ
ಕಾಕಿಣಸಾರ	=	ಕೋಪ	ಖದರು	=	ಮಜಾ
ಕಾಯಕ	=	ಕೆಲಸ	ಖಾಸ	=	ಸ್ವಂತ
ಕಿಚ್ಚು	=	ಸಂಕಟ, ಬೆಂಕಿ	ಗಕ್ಕನೆ	=	ಒಮ್ಮೆಲೆ

ದೇ·ಕ್ರ·ಕ·		ಶಿ·ಕ·	ದೇ·ಕ್ರ·ಕ·		ಶಿ·ಕ·
ಗಕ್ಕಟು	=	ಬೆಚ್ಚಿಬಿದ್ದು	ಗೇಲಿ	=	ಅಪಹಾಸ್ಯ
ಗಂಟ	=	ತನಕ, ವರೆಗೆ	ಗೊಟ್ಟು	=	ಬರ
ಗಡಂಗು	=	ಸಾರಾಯಿ ಅಂಗಡಿ	ಗೊಡ್ಡಗಾಪಿ	=	ಹಾಲಿಲ್ಲದ ಕಾಫಿ
ಗಡುಗೆ	=	ಸಣ್ಣಮಡಕೆ	ಗೊಣ್ಣೆ	=	ಸಿಂಬಳ
ಗರ್ತಿ	=	ಪತಿವ್ರತೆ	ಗೋರಂಜ	=	ಎದೆಗಾರಿಕೆ
ಗಪ್ಪಗೆ	=	ಸುಮ್ಮನೆ	ಗೋರು	=	ತೆಗೆ, ಗುಡಿಸು
ಗಮಲು	=	ವಾಸನೆ	ಘಟ	=	ದೇಹ
ಗರ	=	ದೆವ್ವ	ಚಕಳ	=	ಚರ್ಮ
ಗಲಗು	=	ಗಲಾಟೆ	ಚಕ್ರ	=	ಸುದ್ದಿ ಸಾರುವವ
ಗವ್ವ	=	ಭಯ, ಕತ್ತಲು	ಚಡಾವು	=	ಚಪ್ಪಲಿ
ಗವ್ಗತ್ತಲ	=	ದಟ್ಟಕತ್ತಲು	ಚಣುಗ	=	ಗೋದಣಿಗೆ
ಗಳ	=	ಬಿದಿರುಕೋಲು	ಚಲ್ಲಣ	=	ಚಡ್ಡಿ
ಗ್ಯಾನ	=	ಜ್ಞಾನ	ಚಮ್ಮ	=	ಚರ್ಮ
ಗಾಳಿಗಿರ್ಕ	=	ಗಾಳಿರಾಟೆ	ಚಲುಗ	=	ಬಂದಿಗೆ
ಗುಡಕ್ಕನೆ	=	ತಕ್ಷಣ	ಚಾಕರಿ	=	ನೌಕರಿ
ಗುಂಡ್ಯಾಯು	=	ಕೋಳಿಯ ಹೃದಯದ ಮಾಂಸ	ಚಾಕ್ಣಬೋಟಿ	=	ಕರುಳಿನ ಮಾಂಸ
ಗುಲ್ಲು	=	ಹರಡು, ಪ್ರಸಾರ	ಚಾರಮಾರ	=	ಸಿಕ್ಕಾಬಟ್ಟೆ
ಗುಳುಲ್ಳ	=	ಗುಡಿಸಲು	ಚಾಲುಚಲಾಕು	=	ಚುರುಕು ನಡ್
ಗೆಣಕಾತಿ	=	ಗೆಳತಿ	ಚಾವಡಿ	=	ಕಲ್ಲುಮಂಟಪ
ಗೆಯ್ಮೆ	=	ಚಿತ್ರದ ಕೆಲಸ	ಚಿಕ್ಕಿ	=	ಚಿಕ್ಕಮ್ಮ
ಗೆರಸಿ	=	ಬಿದಿರು ತಟ್ಟೆ	ಚಿಗಿ	=	ನೆಗೆ
ಗೇದು	=	ಸಂಪಾದಿಸಿ	ಚುಂಗು	=	ಕೆಟ್ಟವಾಸನೆ
ಗೇಮೆ	=	ಕೆಲಸ	ಚುಟ್ಟು	=	ಚೂರು

ದೇ.ಕ್ರ.ಕ.		ಶಿ.ಕ.	ದೇ.ಕ್ರ.ಕ.		ಶಿ.ಕ.
ಜುಲಾಪ್ರಿ	=	ಕಳ್ಳ, ಪುಟಾಣಿ	ತಾಂಬಟ್ಟಲು	=	ದೊಡ್ಡದಾದ ಕಂಚಿನತಟ್ಟೆ
ಜಂದಗಾಣ	=	ಚೆನ್ನ, ಸುಂದರ	ತ್ರಾಣ	=	ಶಕ್ತಿ
ಜೆಂಗೂರಿ	=	ಪೋಲಿ, ನಡತೆಗೆಟ್ಟ	ತಾರಮಾರ	=	ಒಂದೇ ಸಮನೆ
ಜೊಟ್ಟು	=	ಹೊರಕಿವಿಯ ಭಾಗ	ತಾವು	=	ಸ್ಥಳ
ಜೋದ್ಯ	=	ಆಶ್ಚರ್ಯ	ತಿಳುಂ	=	ಸ್ಥಗಿತ
ಜೌಕ	=	ಕರವಸ್ತ್ರ	ತಿಪ್ಪೆ	=	ಕಸದಗುಡ್ಡೆ
ಜಮಾಧಾರಿ	=	ಹರಾಜು ಕೂಗುವವನು	ತುಡುಗು	=	ತುಂಟತನ
ಜೋಪಡಿ	=	ಗುಡಿಸಲು	ತೆಪ್ಪಗೆ	=	ಸುಮ್ಮನೆ
ಜೋಳಿಗೆ	=	ಭಿಕ್ಷೆಯ ಚೀಲ	ತೊಟ್ಟಿ	=	ಮನೆಯ ಮಧ್ಯದಲ್ಲಿರುವ ಅಂಗಳ
ತಂಗಳು	=	ಹಳಸಲು	ತೊಪ್ಪ	=	ಸಗಣಿ
ತತರಪಿತರ	=	ಆತುರಾತುರ	ತೊಂಬ	=	ಬಿದಿರು ಕಣಜ
ತತ್ತ	=	ಕೊಡು	ತೊರಾರು	=	ನಾಯಕ ಜನಾಂಗ
ತಟವಟ	=	ಗಡಿಬಿಡಿ	ಥರ	=	ರೀತಿ
ತಡವಿ	=	ಹುಡುಕಿ	ಥಳಕು	=	ನುಣನೆ
ತಪರ	=	ದಡ್ಡ	ದರಿ	=	ದಲ
ತಪರಾಸ್ಡು	=	ಭಯಪಡು; ಗೊಂದಲಗೊಳ್ಳು	ದಾರಂದ	=	ಬಾಗಿಲು
ತರಗು	=	ಒಣಗಿದ ಎಲೆ	ದಿಕ್ಕಾಪಾಲು	=	ಸಿಕ್ಕಿದ ಕಡೆ
ತವಕನೆ	=	ತಕ್ಷಣ	ದಿಗಿಲು	=	ಭಯ
ತವ್ಕ	=	ಆತುರ	ದಿಟ	=	ನಿಜ
ತರೆ	=	ಕೀಳು, ಕಿತ್ತುಕೊ	ದುಕಾ	=	ಮೋಸ
ತಳ	=	ಶಾಶ್ವತ, ಸ್ಥಳ	ದುಕ್ತಿ	=	ದು:ಖ
ತಾಟಪೋಟ	=	ಮಾತಿನ ಬಂಡವಾಳ	ದುಗುಡ	=	ಚಿಂತೆ

ದೇ.ಕ್ರೈ.ಕ.		ಶಿ.ಕ.
ದುಪ್ಪಟಿ	=	ಕಂಬಳಿ
ದೆಸ	=	ಅದೃಷ್ಟ
ಧಿರುಸು	=	ಬಟ್ಟೆ
ನಡೊತ್ತು	=	ಮಧ್ಯಾಹ್ನ
ಕೂರೆನತ್ತು	=	ಕೊಳಕು ಬಟ್ಟೆಗಳಲ್ಲಿನ ಕ್ರಿಮಿ
ನಂಜು	=	ನುಣುಪು
ನವಾರ	=	ಲಾಡಿ
ನಳ್ಳಿ	=	ಏಡಿ
ನಾಗಬೆತ್ತ	=	ಹಾವಿನ ತಲೆಯಂತೆ ಹಿಡಿಯುಳ್ಳ ಬಿದಿರುಕೋಲು
ನಾತ	=	ಕೆಟ್ಟವಾಸನೆ
ನಾಯ್ಕಸಾನಿ	=	ಸೂಳೆ
ನಿಗಾ	=	ಗಮನ, ಎಚ್ಚರ
ನಿಚ್ಚಳ	=	ಸ್ಪಷ್ಟ
ನಿಚ್ಚಾಲು	=	ಪ್ರತಿದಿನ
ನಿಸ್ತ್ರಪು	=	ನಿಸ್ಕ್ರಿಯ
ನಿಂಬಳ	=	ಸಮಾಧಾನ
ನಿರಾಳ	=	ನೆಮ್ಮದಿ
ನೆಚ್ಚ	=	ನಂಬಿ
ನೆಪ್ಪು	=	ಗುರುತು
ನೆರಕೆ	=	ಬಿದಿರಿನ ತಡಿಕೆ
ನೆಸೆ	=	ತೇಲು
ನೇಮ	=	ನಿಯಮ

ದೇ.ಕ್ರೈ.ಕ.		ಶಿ.ಕ.
ನೊಣೆ	=	ದೀಪು
ಪಡಶಾಲೆ	=	ಜಗುಲಿ
ಪತರುಗುಟ್ಟು	=	ನಡುಗುವಿಕೆ
'ಪದ	=	ಹಾಡು
ಪರಂತು	=	ಆದರೆ
ಪರಂಗಿ	=	ಪಾಶ್ಚಾತ್ಯ
ಪಳ್ಳಿ	=	ಶಾಲೆ
ಪಾಡು	=	ತೊಂದರೆ
ಪಾಲು	=	ಭಾಗ
ಪಿತಪಿತನೆ	=	ಮುದುಂಮುದೆಂ
ಪಿಲ್ಲ	=	ಕಾಲುಂಗರ
ಪಿಳ್ಳೆ	=	ಮಗು, ಮರಿ
ಪೆಕರು	=	ಪೆದುಂ
ಪೆದ್ದು	=	ದಡ್ಡತನ
ಪೆದ್ದ	=	ಮೂರ್ಖ
ಪೋಜು	=	ದಸರಾ ಮೆರವಣಿಗೆ
ಪೋಣಿ	=	ಗಲ್ಲ
ಫಕಾಳಿ	=	ಭಕಾರಿ
ಫಸಲು	=	ಬೆಳೆ
ಬಗಲು	=	ಕಂಕುಳು
ಬಗ್ಗರಿ	=	ಎದೆ
ಬಟವಾಡೆ	=	ವಾರದ ಸಂಬಳ
ಬಗಪೆಟ್ಟು	=	ತಕ್ಷಣ
ಬದುಕು	=	ವಸ್ತು

ದೇ.ಕ್ಷ.ಕ.		ಶಿ.ಕ.	ದೇ.ಕ್ಷ.ಕ.		ಶಿ.ಕ.
ಬಮ್ಮಿ	=	ಬಾರೆ (ಸ್ತ್ರೀಯನ್ನು ಸಂಬೋಧಿಸಿ ಕರೆಯುವ ಪದ	ಭಗ	=	ಯೋನಿ
			ಮಂಟಾಕು	=	ಸಾಧಿಸು
ಬಸುರಿ	=	ಗರ್ಭಿಣಿ	ಮಡಗು	=	ಕೆಳಗಿಡು
ಬಾಡು	=	ಮಾಂಸ	ಮಡು	=	ಹೊಳೆ
ಬಾವ್ಯ	=	ಆಸೆ	ಮಣೆ	=	ಮರದ ಹಲಗೆಯ ಪೀಠ
ಬಿಗೀ	=	ಥಳಿಸು	ಮಂದರಿಗೆ	=	ಚಾಪೆ
ಬಿಂಗ	=	ಮಿಂಚುವ ಕಾಗದ	ಮದ್ದು	=	ಔಷಧಿ
ಬಿತ್ತ	=	ಬೀಜ	ಮಳ್ಳು	=	ಮಡಿಲು
ಬಿಡುಗಾಸು	=	ನಯಾಪೈಸೆ	ಮುಗ್ಗಲು	=	ಕೊಳೆತ, ಕೆಟ್ಟ
ಬಿಮ್ಮಗೆ	=	ಬಿಗಿಯಾಗಿ	ಮುದ್ಬಲು	=	ಮಣ್ಣಿನ ತಟ್ಟೆ
ಬಿರುಸು	=	ವೇಗ	ಮುಂಟ	=	ಪಾಳುನೆಲ
ಬರ್ಕೆ	=	ಬೇಗನೆ	ಮುಂಡಿಗೆ	=	ಮರದ ಕಂಬ
ಬಿಸುಟ	=	ಎಸೆದ, ಬಿಸಾಕಿದ	ಮುಂಡೆ	=	ವಿಧವೆ
ಬಿಳುಚು	=	ಕಾಂತಿಹೀನ	ಮುರ್ಮಗ	=	ಮೊಮ್ಮಗ
ಬುದ್ದಿ	=	ಗೌರವಸೂಚಕ ಪದ (ನಿಮ್ನ ವರ್ಗದವರು ಮೇಲ್ವರ್ಗದವರನ್ನು ಕರೆಯಲು ಬಳಸುವ ಗೌರವಸೂಚಕ ಪದ)	ಮುಸುಡಿ	=	ಮುಖ
			ಮುಕ್ಷ	=	ಮುಂದೆ, ಮುಖ
			ಮೂಗಬಸಪ್ಪ	=	ಹಸು
ಬೆದುಕಿ	=	ಹರೆಯದ ಸ್ತ್ರೀ	ಮೂಡ್ಲು	=	ಪೂರ್ವ
ಬೆಬಗುಳ್ಳು	=	ತೊದಲು	ಮೂದೇವಿ	=	ಸೋಮಾರಿ
ಬೆಂಮನಿಪ್ಪ	=	ಗರ್ಭಿಣಿ	ಮೊಕ	=	ಮುಖ
ಬೆರಗು	=	ಆಶ್ಚರ್ಯ	ಮೊಕ್ಕಾಂ	=	ತಂಗುವ ಸ್ಥಳ, ಬೀಡು
ಬೇತಾರಿ	=	ಉಪಾಯಗಾತಿ	ಮೋಕಪ್ಪು	=	ಅದರ ಹಿಂದೆ
ಬೋಸಿ	=	ಅಗಲ ಬಾಯುಳ್ಳ ಪಾತ್ರೆ	ಮೊಗ್ಗಲು	=	ಪಕ್ಕದಲ್ಲಿ

ದೇ·ಕ್ರಿ·ಕ·		ಶಿ·ಕ·
ಮೊಬ್ಬು	=	ಮುಂಜಾನೆ
ಮೋಟು	=	ತುಂಡು
ಮೋಡಿ	=	ಕೈಚಳಕ
ಮೋರೆ	=	ಮುಖ
ಯತೆ	=	ಚಿಂತೆ
ಯಮ್ಯ	=	ಹೆಂಗಸರು
ಯಾಪ್ರ	=	ವ್ಯಾಪಾರ
ರಟ್ಟೆ	=	ತೋಳು
ರತನೀರು	=	ಕೆಂಪುನೀರು
ರಾಂಗಕೋರಿ	=	ನಡತೆಗೆಟ್ಟವಳು
ರಾಡು	=	ಹೊಡೆ, ಎರಡು
ರಾಸು	=	ಜಾನುವಾರು
ರುಸ್ಯಂತಿ	=	ಮೈನೆರೆದವಳು
ರೊಪ್ಪ	=	ಕೊಟ್ಟಿಗೆ
ರೋಸಿ	=	ಬೇಸತ್ತು
ಲುಕಾಸ್ನು	=	ನಷ್ಟ
ವಡೊಬ್ಬರಿ	=	ಒಂದು ಕಡೆ
ವರ್ಸುನ್ಸು	=	ತೂಕ, ಕ್ರಮಬದ್ಧ
ವಂದರಿ	=	ಜರಡಿ
ವಸಿ	=	ಸ್ವಲ್ಪ
ವ್ಯತಿರಿಕ್ತ	=	ಅಡ್ಡಿ
ವಾರ	=	ಗುತ್ತಿಗೆ
ವಾರಗಿತ್ತಿ	=	ಭಾವ ಅಥವಾ ಮೈದುನನ ಹೆಂಡತಿ

ದೇ·ಕ್ರಿ·ಕ		ಶಿ·ಕ·
ವಾಸಿ	=	ಪರವಾಗಿಲ್ಲ
ವಾಕ್ಷ	=	ಮಾತು
ವೈನು	=	ಅಚ್ಚುಕಟ್ಟು
ಶಾಣೆ	=	ತುಂಬಾ
ಶಿವಜಾರಿ	=	ರಂಗಾಯತ
ಸಮೇದ	=	ಅಪಾರ
ಸಟುಗ	=	ಸ್ವಲ್ಪ
ಸಟ್ಟುಗ	=	ಸೌಟು
ಸತು	=	ಶಕ್ತಿ
ಸದರ	=	ಸಂಗೆ
ಸಂದು	=	ಕಳೆದ, ಮುಗಿದ
ಸಮರಾತ್ರಿ	=	ಮಧ್ಯರಾತ್ರಿ
ಸರಕ್ಕನೆ	=	ತಕ್ಷಣ, ಬೇಗನೆ
ಸಾಡು	=	ಬದಿರಿನ ದೊಡ್ಡಮಕ್ಕರಿ
ಸಾಬ್ರು	=	ಮುಸಲ್ಮಾನ
ಸಾಯ್ಲ	=	ಸೀರೆ
ಸಿಂತೆ	=	ಜೊತೆಗೆ, ತಂಟೆಗೆ
ಸಿಬ್ರು	=	ಬೇಜಾರು
ಸುಂಡ	=	ಇಲಿಮರಿ
ಸುಂಡು	=	ಒಣಗು
ಸುಮಾನ	=	ಖುಷಿ
ಸುರ	=	ತೆಗೆ
ಸೂರು	=	ಮೇಲ್ಛಾವಣಿ

ದೇ.ಕೃ.ಕ.		ಶಿ.ಕ.
ಸೂಲು	=	ಜೀವ, ಉಸಿರು
ಸೆತ್ತ	=	ಕಸ
ಸೆಬ್ಬು	=	ನಾರು, ನಾರಿನಂತ ಸಣ್ಣ ಕಡ್ಡಿ
ಸೆರೆ	=	ಗುರುತು
ಸೆಳೆ	=	ಎಳೆ
ಸೆಳಕಿನ	=	ತೆಳ್ಳಗಿನ
ಸೂರಟ	=	ಮುಂದುಡಿ
ಸೂಳುಳ್ಳ	=	ದೀಪ
ಸೋಗು	=	ನೆಪ
ಸೈ	=	ಒಪ್ಪಿಗೆ, ಸರಿ
ಹಿಂಟು	=	ಉಂಡೆ
ಹಿಡಗಲು	=	ಪೊರಕೆ
ಹಿಂಡಕೂಳು	=	ಸತ್ತವರಿಗಾಕುವ ಪಿಂಡ
ಹಿಂಡು	=	ಗುಂಪು
ಹುಟ್ಟದ ನಿರ್ವಾಣ	=	ಬೆತ್ತಲೆ
ಹೈದ	=	ಮಗ
ಹೊಟ್ಟಕಳ್ತ	=	ಭೇದಿ

ಊ) <u>ಪದಗಳಲ್ಲಿ ಧ್ವನಿ ಬದಲಾವಣೆಗಳು</u>

ಇಲ್ಲಿನ ಕೃತಿಗಳ ಪದಗಳನ್ನು ಶಿಷ್ಟಭಾಷೆಯ ಪದಗಳಿಗೆ ಹೋಲಿಸಿ ವಿಶ್ಲೇಷಣೆ ಮಾಡಿ ನೋಡಿದಾಗ ಹಲವು ರೀತಿಯ ಧ್ವನಿ ಬದಲಾವಣೆಗಳಿರುವುದು ಸ್ಪಷ್ಟವಾಗಿ ಕಂಡುಬರುತ್ತದೆ. ಅವುಗಳನ್ನು ಪ್ರಮುಖವಾಗಿ ಲೋಪ, ಆಗಮ, ಅಕ್ಷರ ಪಲ್ಲಟ, ಸಮರೂಪಧಾರಣೆ, ತಾಲವ್ಯೀಕರಣ, ಧ್ವನಿಜಾರು, ಅಘೋಷೀಕರಣ, ಮಹಾಪ್ರಾಣೀಕರಣ, ಅಲ್ಪಪ್ರಾಣೀಕರಣ, ಪದ ಆದಿಯ

ಹ – ಲೋಪ, ಹಾಗು ವಿಶೇಷವಾಗಿ ಕಂಡುಬರುವ ಧ್ವನಿ ವ್ಯತ್ಯಾಸಗಳು ಎಂದು ವಿಭಾಗ ಮಾಡಿಕೊಳ್ಳಬಹುದು. ಮೊದಲಿಗೆ,

1. <u>ಲೋಪ:–</u> ಪದಗಳಲ್ಲಿ ಧ್ವನಿಗಳು ಲೋಪವಾಗುವುದನ್ನು ಆಧರಿಸಿ ಸ್ವರಲೋಪ, ವ್ಯಂಜನಲೋಪ, ಅಕ್ಷರಲೋಪ ಎಂದು ಉಪಗುಂಪುಗಳಾಗಿ ಮಾಡಿಕೊಳ್ಳಬಹುದು.

1.1. <u>ಸ್ವರಲೋಪ:–</u> ಇಲ್ಲಿ ಎರಡು ವಿಧದ ಸ್ವರಲೋಪ ಕಂಡುಬರುತ್ತದೆ. ಅವುಗಳು ಕೆಳಗಿನಂತಿವೆ.

(i) <u>ಮಧ್ಯಸ್ವರಲೋಪ</u> (Syncope):-

"ಮಾತನಾಡುವಾಗ ಉಚ್ಚಾರದಲ್ಲಿ ಶಬ್ದಗಳ ಮಧ್ಯದ ಸ್ವರಗಳು ಕೆಲವು ವೇಳೆ ಲೋಪವಾಗಿ ಹೋಗುವುದನ್ನು ಮಧ್ಯ ಸ್ವರಲೋಪ"[1] ಎನ್ನುವರು.

ಉದಾ:–

ಶಿ.ಕ.	ದೇ.ಕ್ರಿ.ಕ.		
1) ಅವರು	ಅವ್ರು	=	ಅ + ವ್ + ~~ಅ~~ + ರ್ + ಉ
2) ಅವಳು	ಅವ್ಳು	=	ಅ + ವ್ + ~~ಅ~~ + ಳ್ + ಉ
3) ನೆಗೆದು	ನೆಗ್ದು	=	ನ್ + ಎ + ಗ್ + ~~ಎ~~ + ದ್ + ಉ
4) ಸಾವಿರ	ಸಾವ್ರ	=	ಸ್ + ಆ + ವ್ + ~~ಇ~~ + ರ್ + ಅ

(ii) <u>ಅಂತ್ಯಸ್ವರ ಲೋಪ</u>

ಮಾತನಾಡುವಾಗ ಪದದ ಅಂತ್ಯದ ಸ್ವರಲೋಪವಾಗುವಿಕೆಯೇ ಅಂತ್ಯಸ್ವರ ಲೋಪ.

<u>ಉದಾ:–</u>

ಶಿ.ಕ.	ದೇ.ಕ್ರಿ.ಕ.		
1) ನೂರು	ನೂರ್	=	ನ್ + ಊ + ರ್ + ~~ಉ~~
2) ನೀವು	ನೀವ್	=	ನ್ + ಈ + ವ್ + ~~ಉ~~
3) ಮುಕ್ಕಾಲು	ಮುಕ್ಕಾಲ್	=	ಮ್ + ಉ + ಕ್ + ಕ್ + ಆ + ಲ್ + ~~ಉ~~

1. ಡಾ. ಕೆ.ಕೆಂಪೇಗೌಡ – ಸಾಮಾನ್ಯ ಭಾಷಾವಿಜ್ಞಾನ – 1993, ಪುಟ. 654.

4) ಒಳಗೆ	ಒಳಗ	=	ಒ + ಳ್ + ಅ + ಗ್ + ~~ಎ~~
5) ರೂಪಾಯಿ	ರೂಪಾಂಯ	=	ರ್ + ಊ + ಪ್ + ಅ + ಯ್ + ~~ಇ~~

1.2. <u>ವ್ಯಂಜನಲೋಪ:-</u> ಇಲ್ಲಿ ಎರಡು ವಿಧದ ವ್ಯಂಜನಲೋಪ ಕಂಡುಬರುತ್ತದೆ. ಅವುಗಳು ಕೆಳಗಿನಂತಿವೆ.

(i) <u>ಆದಿವ್ಯಂಜನ ಲೋಪ:-</u> ಪದಗಳ ಆದಿಯಲ್ಲಿನ ವ್ಯಂಜನವು ಲೋಪವಾಗುವುದೇ ಆದಿವ್ಯಂಜನ ಲೋಪ.

<u>ಉದಾ:-</u>

<u>ಶಿ.ಕ.</u>	<u>ದೇ.ಕ್ರಿ.ಕ.</u>		
1) ವಿಚಾರ	ಇಚಾರ	=	~~ವ್~~ + ಇ + ಚ್ + ಅ + ರ್ + ಅ
2) ವಿಭೂತಿ	ಇಭೂತಿ	=	~~ವ್~~ + ಇ + ಭೂ + ಊ + ತ್ + ಇ
3) ವ್ಯಥೆ	ಯತೆ	=	~~ವ್~~ + ಯ್ + ಅ + ತ್ + ಎ
4) ವ್ಯಾಪಾರ	ಯಾಪಾರ	=	~~ವ್~~ + ಯ್ + ಅ + ಪ್ + ಅ + ರ್ + ಅ
5) ವೈಭೋಗ	ಐಭೋಗ	=	~~ವ್~~ + ಐ + ಭ್ + ಓ + ಗ್ + ಅ

(ii) <u>ಮಧ್ಯವ್ಯಂಜನ ಲೋಪ:</u> ಪದಗಳ ಮಧ್ಯದಲ್ಲಿ ವ್ಯಂಜನ ಲೋಪವಾಗುವಿಕೆಯು ಮಧ್ಯವ್ಯಂಜನ ಲೋಪ.

<u>ಉದಾ:-</u>

<u>ಶಿ.ಕ.</u>	<u>ದೇ.ಕ್ರಿ.ಕ.</u>		
1) ಬೆಡ್ರುಂ	ಬೆಡುಂ	=	ಬ್ + ~~ರ್~~ + ಎ + ಡ್ + ಡ್ + ಉ
2) ಬಹಳ	ಬಾಳ	=	ಬ್ + ಅ + ~~ಹ್~~ + ಅ + ಳ್ + ಅ
3) ಮಹಾರಾಜ	ಮಾರಾಜ	=	ಮ್ + ಅ + ~~ಹ್~~ + ಅ + ರ್ + ಅ + ಜ್ + ಅ
4) ಮಹಾತ್ಮ	ಮಾತ್ಮ	=	ಮ್ + ಅ + ~~ಹ್~~ + ಅ + ತ್ + ಮ್ + ಅ
5) ಸಹವಾಸ	ಸಾವಾಸ	=	ಸ್ + ಅ + ~~ಹ್~~ + ಅ + ವ್ + ಅ + ಸ್ + ಅ

1·3. <u>ಅಕ್ಷರ ಲೋಪ</u>

ಇಲ್ಲಿ ಮೂರು ವಿಧದ ಅಕ್ಷರಲೋಪ ಕಂಡುಬರುತ್ತದೆ. ಅವುಗಳು ಕೆಳಗಿನಂತಿವೆ.

(i) <u>ಮಧ್ಯ ಅಕ್ಷರ ಲೋಪ:-</u> ಮಾತನಾಡುವಾಗ ಉಚ್ಚಾರದಲ್ಲಿ ಪದಗಳ ಮಧ್ಯದಲ್ಲಿ ಅಕ್ಷರ ಲೋಪವಾಗುವುದೇ ಮಧ್ಯ ಅಕ್ಷರ ಲೋಪ.

<u>ಉದಾ:-</u>

<u>ಶಿ·ಕ·</u>	<u>ದೇ·ಕ್ರಿ·ಕ·</u>
1) ಗ್ರಹಚಾರ	ಗ್ರಾಚಾರ
2) ಸಹವಾಸ	ಸಾವಾಸ
3) ಸಾಹುಕಾರ	ಸಾವ್ಕಾರ
4) ಮಹಾಜನ	ಮಾಜನ
5) ಬಹಳ	ಬಾಳ

(ii) <u>ಅಂತ್ಯ ಅಕ್ಷರ ಲೋಪ</u>(Apocope):- ಪದಗಳ ಅಂತ್ಯದಲ್ಲಿ ಅಕ್ಷರ ಲೋಪವಾಗುವುದೇ ಅಂತ್ಯ ಅಕ್ಷರ ಲೋಪ.

<u>ಉದಾ:</u>

<u>ಶಿ·ಕ·</u>	<u>ದೇ·ಕ್ರಿ·ಕ·</u>
1) ಅವನು	ಅವ
2) ನಾನು	ನಾ
3) ಅಂದನು	ಅಂದ
4) ಮಕ್ಕಳು	ಮಕ್ಕ
5) ತಿಂಗಳು	ತಿಂಗ

(iii) <u>ಸಮಾಕ್ಷರಲೋಪ</u> (Haplology) :- ಮಾತನಾಡುವಾಗ ಉಚ್ಚಾರದಲ್ಲಿ ಪದಗಳಲ್ಲಿನ ಪರಸ್ಪರ ಸಮಾನವಾದ ಅಕ್ಷರಗಳಲ್ಲಿ ಒಂದು ಅಕ್ಷರ ಲೋಪವಾಗುವುದೇ ಸಮಾಕ್ಷರ ಲೋಪ.

ಉದಾ:

ಶಿ.ಕ.	ದೇ.ಕ್ರಿ.ಕ.
1) ಬಸಸ್ಟ್ಯಾಂಡ	ಬಸ್ಟ್ಯಾಂಡ = ಬ + ಸ್ + ಸ್ಟ್ಯಾ + ಂ + ಡ
2) ನೂರುರೂಪಾಯಿ	ನೂರೂಪಾಯಿ = ನೂ + ರು + ರೂ + ಪಾ + ಯಿ

2. ಆಗಮ

ಪದಗಳಲ್ಲಿ ಧ್ವನಿಗಳು ಲೋಪವಾಗುವಂತೆ ಕೆಲವು ಪದಗಳಲ್ಲಿ ಬಂದು ಸೇರುತ್ತವೆ. ಇದನ್ನು ಆಗಮ ಎಂದು ಕರೆಯಲಾಗಿದೆ. ಪದಗಳಲ್ಲಿ ಧ್ವನಿಗಳು ಆಗಮವಾಗುವುದನ್ನು ಆಧರಿಸಿ ನೋಡಿದಾಗ ಇಲ್ಲಿ ಸ್ವರ ಆಗಮ, ಅಕ್ಷರಾಗಮ ಎಂದು ಎರಡು ಪ್ರಮುಖ ವಿಧಗಳು ಕಂಡುಬರುತ್ತವೆ.

2.1. ಸ್ವರ ಆಗಮ:- ಇದರಲ್ಲಿ ಮೂರು ಉಪಗುಂಪುಗಳಿವೆ. ಅವುಗಳು ಕೆಳಗಿನಂತಿವೆ.

(i) ಆದಿಸ್ವರಾಗಮ(Prothesis): ಕೆಲವು ಪದಗಳಿಗೆ ಆದಿಯಲ್ಲಿ ಮತ್ತೊಂದು ಸ್ವರ ಧ್ವನಿ ಬಂದು ಸೇರುವುದಾಗಿದೆ.

ಉದಾ:

ಶಿ.ಕ.		ದೇ.ಕ್ರಿ.ಕ.
1) ಸ್ಟೀಲ್	>	ಇಸ್ಟೀಲ್
2) ಸ್ಕೂಲಮನೆ	>	ಇಸ್ಕೂಲಮನೆ
3) ಸ್ಟಾರ್ಟ್	>	ಇಸ್ಟಾರ್ಟ್
4) ಸ್ಟಾರ್	>	ಇಸ್ಟಾರ್
5) ಸ್ಟೆಪ್	>	ಇಸ್ಟೆಪ್

(ii) ಮಧ್ಯಸ್ವರಾಗಮ(Anaptyxis):- ಕೆಲವು ಪದಗಳಿಗೆ ಮಧ್ಯದಲ್ಲಿ ಸ್ವರ ಬಂದು ಸೇರುವುದನ್ನು ಮಧ್ಯಸ್ವರಾಗಮ ಎನ್ನಲಾಗುತ್ತದೆ. ಇದು ಸಂಯುಕ್ತಾಕ್ಷರ ಸರಳೀಕರಣವೂ ಹೌದು.

ಉದಾ:-

ಶಿ.ಕ.	ದೇ.ಕೃ.ಕ.		
1) ಶಬ್ದ	ಶಬುದ	=	ಶ್ + ಅ + ಬ್ + ಉ + ದ್ + ಅ
2) ಪ್ರಾಣ	ಪರಾಣ	=	ಪ್ + ಅ + ರ್ + ಆ + ಣ್ + ಅ
3) ಪ್ರೀತಿ	ಪಿರೀತಿ	=	ಪ್ + ಇ + ರ್ + ಈ + ತ್ + ಇ
4) ಭಕ್ತಿ	ಭಕುತಿ	=	ಭ್ + ಅ + ಕ್ + ಉ + ತ್ + ಇ
5) ರಕ್ತ	ರಕುತ	=	ರ್ + ಅ + ಕ್ + ಉ + ತ್ + ಅ

(iii) ಸಮ ಸ್ವರಾಗಮ (Epenthesis) :- ಪದಗಳಲ್ಲಿ ಒಂದು ಸ್ವರಕ್ಕೆ ಬದಲಾಗಿ ಮತ್ತೊಂದು ಸ್ವರವು ಸಮಾನವಾಗಿ ಬರುವುದಕ್ಕೆ ಸಮಸ್ವರಾಗಮ ಎನ್ನುತ್ತೇವೆ. ಇದು ಇಲ್ಲಿನ ಕೃತಿಗಳಲ್ಲಿ ಹೆಚ್ಚಾಗಿ ಕಂಡುಬರುತ್ತದೆ.

ಉದಾ:

ಶಿ.ಕ.	ದೇ.ಕೃ.ಕ.		ಅ ಉ
1) ಬೆಳಕು	ಬೆಳುಕು	=	ಬ್ + ಎ + ಳ್ + ಉ + ಕ್ + ಉ
2) ಪಿಂಜಣಿ	ಪಿಂಜುಣಿ	=	ಪ್ + ಇ + ಞ್ + ಜ್ + ಉ + ಣ್ + ಇ
3) ಬೆವರು	ಬೆವುರು	=	ಬ್ + ಎ + ವ್ + ಉ + ರ್ + ಉ
4) ಅವಳು	ಅವುಳು	=	ಅ + ವ್ + ಉ + ಳ್ + ಉ
5) ಕೂದಲು	ಕೂದುಲು	=	ಕ್ + ಊ + ದ್ + ಉ + ಲ್ + ಉ

2.2. ಅಕ್ಷರಾಗಮ ಅಥವಾ ವರ್ಣಾಗಮ:

ಕೆಲವು ಪದಗಳಲ್ಲಿ ವರ್ಣ ಅಥವಾ ಅಕ್ಷರಗಳು ಹೊಸದಾಗಿ ಬಂದು ಸೇರುತ್ತವೆ. ಅದನ್ನು ಅಕ್ಷರಾಗಮ ಅಥವಾ ವರ್ಣಾಗಮ ಎನ್ನಲಾಗುತ್ತದೆ.

ಉದಾ:

ಶಿ.ಕ.	ದೇ.ಕ್ರೈ.ಕ.
1) ಕಣ್ಣು	ಕಣ್ಣೂವಿ
2) ನಾನು	ನಾನೂವಿ
3) ಮೂಗು	ಮೂಗೂವಿ
4) ಅದು	ಅದೂವಿ
5) ಇದು	ಇದೂವಿ

3. ಅಕ್ಷರ ಪಲ್ಲಟ (Metathesis):-

"ಮಾತನಾಡುವಾಗ ಉಚ್ಚಾರದಲ್ಲಿ ಶಬ್ದದ ಕೆಲವು ಅಕ್ಷರ ಅಥವಾ ವರ್ಣಗಳು ಪರಸ್ಪರ ಸ್ಥಾನಾಂತರವಾಗುವುದನ್ನು ಅಕ್ಷರ ಪಲ್ಲಟ ಎನ್ನುವರು."[1] ಇದರಲ್ಲಿ ಪ್ರಮುಖವಾಗಿ ಸ್ವರಪಲ್ಲಟ ಮಾತ್ರ ಇಲ್ಲಿ ಕಂಡುಬರುತ್ತದೆ.

(1) ಸ್ವರ ಪಲ್ಲಟ:- ಪದದಲ್ಲಿ ಸ್ವರವು ಸಮೀಪದಲ್ಲಿರಲೀ ಇಲ್ಲವೆ ದೂರದಲ್ಲಿರಲೀ ಅದು ಒಂದು ಸ್ಥಾನದಿಂದ ಇನ್ನೊಂದು ಸ್ಥಾನಕ್ಕೆ ಸ್ಥಾನಾಂತರವಾಗುವುದನ್ನು 'ಸ್ವರಪಲ್ಲಟ' ಎನ್ನುವರು.

ಉದಾ:-



ಶಿ.ಕ.	ದೇ.ಕ್ರೈ.ಕ.		
1) ಪ್ರಪಂಚ	ಪರ್ಪಂಚ	=	ಪ್ + ಅ + ರ್ + ಪ್ + ಅ + ಞ್ + ಚ್ + ಅ
2) ಪ್ರಸಾದ	ಪರ್ಸಾದ	=	ಪ್ + ಅ + ರ್ + ಸ್ + ಅ + ದ್ + ಅ

4. ಸಮರೂಪಧಾರಣೆ (Assimilation)

ಪದದಲ್ಲಿನ ಒಂದು ಧ್ವನಿಗೆ ಸಮಾನವಾಗಿ ಇನ್ನೊಂದು ಧ್ವನಿ ಬದಲಾಗುವುದನ್ನು 'ಸಮರೂಪಧಾರಣೆ' ಎನ್ನುವರು. ಇಲ್ಲಿ ಪ್ರಮುಖವಾಗಿ ಸ್ವರಸಮರೂಪಧಾರಣೆ ಹಾಗೂ ವ್ಯಂಜನ ಸಮರೂಪ ಧಾರಣೆ ಕಂಡುಬರುತ್ತವೆ.

1. ಡಾ. ಕೆ.ಕೆಂಪೇಗೌಡ, ಸಾಮಾನ್ಯ ಭಾಷಾವಿಜ್ಞಾನ -1993, ಭಾರತಿ ಪ್ರಕಾಶನ, ಮೈಸೂರು -9, ಪುಟ. 659.

(i) ಸ್ವರಸಮರೂಪಧಾರಣೆ:- ಪದದಲ್ಲಿನ ಒಂದು ಸ್ವರಕ್ಕೆ ಬದಲಾಗಿ ಸಮಾನವಾದ ಬೇರೆ ಸ್ವರ ಬರುವುದಕ್ಕೆ 'ಸ್ವರಸಮರೂಪಧಾರಣೆ' ಎಂದು ಹೆಸರು.

ಉದಾ:-

	ಶಿ.ಕ.	ದೇ.ಕೃ.ಕ.		ಅ = ಉ
1)	ಸವತಿ	ಸವುತಿ	=	ಸ್ + ಅ + ವ್ + ಉ + ತ್ + ಇ
2)	ಇವರು	ಇವುರು	=	ಇ + ವ್ + ಉ + ರ್ + ಉ
3)	ನವಿಲು	ನವುಲು	=	ನ್ + ಅ + ವ್ + ಉ + ಲ್ + ಉ
4)	ಹಸಿರು	ಹಸುರು	=	ಹ್ + ಅ + ಸ್ + ಉ + ರ್ + ಉ
5)	ನವಿರು	ನವುರು	=	ನ್ + ಅ + ವ್ + ಉ + ರ್ + ಉ

(ii) ವ್ಯಂಜನ ಸಮರೂಪಧಾರಣೆ:- ಕೆಲವು ಪದಗಳಲ್ಲಿ ವಿಜಾತೀಯ ವ್ಯಂಜನಗಳು ಸಜಾತೀಯ ವ್ಯಂಜನಗಳಾಗಿ ಬದಲಾಗುತ್ತವೆ. ಅದನ್ನು ವ್ಯಂಜನ ಸಮರೂಪಧಾರಣೆ ಎನ್ನಲಾಗುತ್ತದೆ.

ಉದಾ:-

	ಶಿ.ಕ.	ದೇ.ಕೃ.ಕ.		
1)	ಬ್ರಹ್ಮ	ಬ್ರಮ್ಮ	=	ಬ್ + ರ್ + ಅ + ಮ್ + ಮ್ + ಅ
2)	ಪಿಕ್ಚರ	ಪಿಚ್ಚರ	=	ಪ್ + ಇ + ಚ್ + ಚ್ + ಅ + ರ್
3)	ಅನ್ಯಾಯ	ಅನ್ನಾಯ	=	ಅ + ನ್ + ನ್ + ಅ + ಯ್ + ಅ
4)	ನಿಶ್ಚಯ	ನಿಚ್ಚಯ	=	ನ್ + ಇ + ಚ್ + ಚ್ + ಅ + ಯ್ + ಅ
5)	ಸಿಂಹಾಸನ	ಸಿಮ್ಮಾಸನ	=	ಸ್ + ಇ + ಮ್ + ಮ್ + ಅ + ಸ್ + ಅ + ನ್ + ಅ

5. **ತಾಲವ್ಯೀಕರಣ** (Palatalisation)

ಕೆಲವು ಪದಗಳಲ್ಲಿ ಆದಿಯ ವ್ಯಂಜನಾಕ್ಷರವು ತಾಲವ್ಯ ವ್ಯಂಜನವಾಗಿ ಬದಲಾಗಿರುವುದು ಕಂಡುಬರುತ್ತದೆ.

ಉದಾ:-

ಶಿ.ಕ.	ದೇ.ಕೃ.ಕ.
1) ಸೋಜಿಗ	ಜೋಜುಗ
2) ಸೂಜಿ	ಜೂಜಿ
3) ಸಿಂಪಡಿಸಿ	ಜಿಂಪಡಿಸಿ
4) ಸಂಚಾರ	ಜಂಚಾರ
5) ದಿನ	ಜಿನ

6. ಧ್ವನಿಜಾರು (Glide)

ಪದಗಳ ಉಚ್ಚಾರದಲ್ಲಿ ಕ್ಲಿಷ್ಟತೆಯನ್ನು ತಪ್ಪಿಸಲು ಅವುಗಳ ನಡುವೆ ಅಥವಾ ಆದಿಯಲ್ಲಿ ಒಂದು ಹೊಸ ಧ್ವನಿಯನ್ನು ತಂದು ಉಚ್ಚರಿಸುವುದಕ್ಕೆ ಧ್ವನಿಜಾರು ಎನ್ನಲಾಗುತ್ತದೆ. ಧ್ವನಿಜಾರುವಿನಲ್ಲಿ ಪ್ರಮುಖವಾಗಿ ಪೂರ್ವಶ್ರುತಿ ಅಥವಾ ಪರಶ್ರುತಿ(onglide) ಎಂದೂ ಮತ್ತು ಪಶ್ಚಶ್ರುತಿ(offglide) ಎಂದೂ, ಎರಡು ವಿಧ. ಈ ಎರಡು ವಿಧದ ಧ್ವನಿಜಾರುಗಳು ಕೂಡ ಇಲ್ಲಿ ಕಂಡುಬರುತ್ತವೆ. ಅವುಗಳು ಈ ಕೆಳಗಿನಂತಿವೆ.

(i) ಪೂರ್ವಶ್ರುತಿ ಅಥವಾ ಪರಶ್ರುತಿ(Onglide):- "ಕನ್ನಡ ಭಾಷೆಯಲ್ಲಿ 'i' ಮತ್ತು 'e' ಸ್ವರಗಳ ಪೂರ್ವದಲ್ಲಿ 'y' ಧ್ವನಿಯೂ, 'u' ಮತ್ತು 'o' ಸ್ವರಗಳ ಪೂರ್ವದಲ್ಲಿ 'w' ಧ್ವನಿಯು ಕಾಣಿಸಿಕೊಳ್ಳುವುದು ಸರ್ವೇಸಾಮಾನ್ಯ"[1] ಜೊತೆಗೆ e: > a: ಆಗುತ್ತದೆ. ಏಕೆ > ಯಾಕೆ. ಆದರೆ ಶಿಷ್ಟಕನ್ನಡದಲ್ಲಿ 'ಏನು' ಎಂಬ ಪದ 'ಯಾನು' ಎಂದಾಗುವುದಿಲ್ಲ. ಆದರೆ ದೇವನೂರರ ಕೃತಿಗಳ ಕನ್ನಡದಲ್ಲಿ ಆಗುತ್ತದೆ.

ಉದಾ:-

ಶಿ.ಕ.		ದೇ.ಕೃ.ಕ.		
ಏನು	>	ಯಾನ	=	ಯ್ + ಆ + ನ್ + ಅ

1. ಸಾಮಾನ್ಯ ಭಾಷಾವಿಜ್ಞಾನ, 1993, ಡಾ. ಕೆ.ಕೆಂಪೇಗೌಡ, ಪುಟ. 96.

(ii) <u>ಪಶ್ಚಶ್ರುತಿ</u> (Offglide):-ಪದಗಳ ಮಧ್ಯದಲ್ಲಿ ಉಚ್ಚಾರದ ಅನುಕೂಲತೆಗಾಗಿ ಒಂದು ಹೊಸ ಧ್ವನಿ ಬರುವುದನ್ನು ಪಶ್ಚಶ್ರುತಿ ಎನ್ನಲಾಗುತ್ತದೆ.

<u>ಉದಾ</u>:-

ಶಿ.ಕ.	ದೇ.ಕ್ರಿ.ಕ.		
1) ಕೋಪ	ಕ್ವಾಪ	=	ಕ್ + ವ್ + ಅ + ಪ್ + ಅ
2) ಮೇಲೆ	ಮ್ಯಾಲೆ	=	ಮ್ + ಯ್ + ಅ + ಲ್ + ಎ
3) ತೇವ	ತ್ಯಾವ	=	ತ್ + ಯ್ + ಅ + ವ್ + ಅ
4) ಪೇಟೆ	ಪ್ಯಾಟೆ	=	ಪ್ + ಯ್ + ಅ + ಟ್ + ಎ
5) ಬೇರೆ	ಬ್ಯಾರೆ	=	ಬ್ + ಯ್ + ಅ + ರ್ + ಎ

7. <u>ಅಘೋಷೀಕರಣ</u> (Devocalization)

ಕೆಲವೊಂದು ಶಬ್ದಗಳ ಘೋಷ ವ್ಯಂಜನಗಳು ಅಘೋಷ ವ್ಯಂಜನಗಳಾಗಿ ಬದಲಾಗಿರುವುದು ಕಂಡುಬರುತ್ತದೆ.

<u>ಉದಾ</u>:-

ಶಿ.ಕ.	ದೇ.ಕ್ರಿ.ಕ.
ಸಿಗರೇಟು	ಸಿಕರೋಟು

8. <u>ಮಹಾಪ್ರಾಣೀಕರಣ</u>:-

ಕೆಲವೊಂದು ಕಡೆ ಅಲ್ಪಪ್ರಾಣಕ್ಕೆ ಬದಲಾಗಿ ಮಹಾಪ್ರಾಣಾಕ್ಷರಗಳು ಬಳಕೆಯಾಗಿರುವುದು ಕಂಡುಬರುತ್ತದೆ.

<u>ಉದಾ</u>:-

ಶಿ.ಕ.	ದೇ.ಕ್ರಿ.ಕ.
1) ಪಾಲು	ಫಾಲು
2) ಕಡುಬು	ಖಡುಬು

9. <u>ಅಲ್ಪಪ್ರಾಣೀಕರಣ</u> (Deaspiration)

ಪದಗಳಲ್ಲಿ ಕೆಲವು ಕಡೆ ಮಹಾಪ್ರಾಣಾಕ್ಷರಕ್ಕೆ ಬದಲಾಗಿ ಅಲ್ಪಪ್ರಾಣಾಕ್ಷರಗಳು ಕಂಡುಬರುತ್ತವೆ.

<u>ಉದಾ</u>:-

ಶಿ.ಕ.	ದೇ.ಕೃ.ಕ.
1) ಭದ್ರಾವತಿ	ಬದ್ರಾವತಿ
2) ಸುಖ	ಸುಕ
3) ಭತ್ತ	ಬತ್ತ
4) ಗಾಂಧಿ	ಗಾಂದಿ
5) ಛತ್ರಿ	ಚತ್ರಿ

10. <u>ಪದಾದಿಯ ಹ- ಲೋಪ</u>

<u>ಉದಾ</u>:-

ಶಿ.ಕ.	ದೇ.ಕೃ.ಕ.		
ಹೋಗು	ವೋಗು	=	ವ್ + ಓ + ಗ್ + ಉ
ಹುಲಿ	ವುಲಿ	=	ವ್ + ಉ + ಲ್ + ಇ
ಹೊಸ್ತಿಲು	ವಸ್ತಿಲು	=	ವ್ + ಅ + ಸ್ + ತ್ + ಇ + ಲ್ + ಉ
ಹರಳು	ಅರಳು	=	ಅ + ರ್ + ಅ + ಳ್ + ಉ

11. <u>ವಿಶೇಷವಾಗಿ ಕಂಡುಬರುವ ಧ್ವನಿ ವ್ಯತ್ಯಾಸಗಳು</u>

(i) ಇಲ್ಲಿನ ಪಾತ್ರಗಳು ಕೆಲವು ವ್ಯಂಜನಗಳ ಬದಲಾಗಿ ಬೇರೆ ವ್ಯಂಜನಗಳನ್ನು ಉಚ್ಚರಿಸುತ್ತಾರೆ.

<u>ಉದಾ</u>:-

ಶಿ.ಕ.		ದೇ.ಕೃ.ಕ.		
ಜನ್ಮ	>	ಜಲ್ಮ	=	ಜ್ + ಅ + ಲ್ + ಮ್ + ಅ
ನೋಟು	>	ಲೋಟು	=	ಲ್ + ಓ + ಟ್ + ಉ

ಫೌಜು	>	ಪೋಜು	=	ಪ್ + ಓ + ಜ್ + ಉ
ದಿನ	>	ಜಿನ	=	ಜ್ + ಇ + ನ್ + ಅ

(ii) ಶ > ಸ ಬಳಕೆ

ತಾಲವ್ಯ ಅಘೋಷ ಸಂಘರ್ಷ ವ್ಯಂಜನ ಧ್ವನಿ 'ಶ' ಗೆ ಬದಲಾಗಿ ವರ್ತ್ಸ್ಯ ಅಘೋಷ ಸಂಘರ್ಷ ವ್ಯಂಜನ ಧ್ವನಿ 'ಸ' ಬಳಸಿ ಪದಗಳ ರಚನೆಯಾಗಿರುವುದರಿಂದ ವ್ಯತ್ಯಾಸ ಕಂಡುಬರುತ್ತದೆ.

ಉದಾ:

ಶಿ.ಕ.		ದೇ.ಕ್ರಿ.ಕ.		ಶ > ಸ
1) ಪಶು	>	ಪಸು	=	ಪ್ + ಅ + ಸ್ + ಉ
2) ಶಕ್ತಿ	>	ಸಕ್ತಿ	=	ಸ್ + ಅ + ಕ್ + ತ್ + ಇ
3) ಶರಣು	>	ಸರಣು	=	ಸ್ + ಅ + ರ್ + ಅ + ಣ್ + ಉ
4) ಆಕಾಶ	>	ಆಕಾಸ	=	ಆ + ಕ್ + ಆ + ಸ್ + ಅ
5) ಪಿಶಾಚಿ	>	ಪಿಸಾಚಿ	=	ಪ್ + ಇ + ಸ್ + ಆ + ಚ್ + ಇ
6) ಶಿವ	>	ಸಿವ	=	ಸ್ + ಇ + ವ್ + ಅ
7) ಶಾಶ್ವತ	>	ಸಾಸ್ವತ	=	ಸ್ + ಆ + ಸ್ + ವ್ + ಆ + ತ್ + ಅ
8) ದೇಶ	>	ದೇಸ	=	ದ್ + ಏ + ಸ್ + ಅ

(iii) ಸ > ಶ ಧ್ವನಿ ಬಳಕೆ

ಇದು ಅತಿಸರಿಮಾಡೋಣ(hypercorrection)ದ ಉದಾಹರಣೆ.

ವರ್ತ್ಸ್ಯ ಅಘೋಷ ಸಂಘರ್ಷ ವ್ಯಂಜನ ಧ್ವನಿ 'ಸ'ಗೆ ಬದಲಾಗಿ ತಾಲವ್ಯ ಅಘೋಷ ಸಂಘರ್ಷ ವ್ಯಂಜನ ಧ್ವನಿ 'ಶ' ಬಳಸಿ ಕೆಲವು ಪದಗಳ ರಚನೆಯಾಗಿರುವುದರಿಂದ ವ್ಯತ್ಯಾಸ ಕಂಡುಬರುತ್ತದೆ.

ಉದಾ :-

ಶಿ.ಕ.		ದೇ.ಕ್ರೈ.ಕ.		
1) ಸರಿ	>	ಶರಿ	=	ಶ್ + ಅ + ರ್ + ಇ
2) ಸರಿಂಯುಮ್ಮ	>	ಶರಿಂಯುಮ್ಮ	=	ಶ್ + ಅ + ರ್ + ಇ + ಂಯ್ + ಮ್ + ಮ್ + ಅ
3) ಅರಿಸಿನ	>	ಅರುಶಿನ	=	ಅ + ರ್ + ಉ + ಶ್ + ಇ + ನ್ + ಅ

(iv) ಷ > ಸ ಧ್ವನಿ ಬಳಕೆ

ಮೂರ್ಧನ್ಯ ಅಘೋಷ ಸಂಘರ್ಷ ವ್ಯಂಜನ ಧ್ವನಿ 'ಷ' ಗೆ ಬದಲಾಗಿ ವರ್ತ್ಸ್ಯ ಅಘೋಷ ಸಂಘರ್ಷ ವ್ಯಂಜನ ಧ್ವನಿ 'ಸ' ಬಳಸಿ ಕೆಲವು ಪದಗಳು ರಚನೆಗೊಂಡಿರುವುದರಿಂದ ಇಲ್ಲಿ ವ್ಯತ್ಯಾಸ ಕಂಡುಬರುತ್ತದೆ.

ಉದಾ :

ಶಿ.ಕ.		ದೇ.ಕ್ರೈ.ಕ.		
1) ಮನುಷ್ಯ	>	ಮನುಸ್ಯ	=	ಮ್ + ಅ + ನ್ + ಉ + ಸ್ + ಂಯ್ + ಅ
2) ಭಾಷೆ	>	ಭಾಸೆ	=	ಭ್ + ಆ + ಸ್ + ಎ
3) ದೇಷ್ಮೆ	>	ದೇಸ್ಮೆ	=	ದ್ + ಏ + ಸ್ + ಮ್ + ಎ
4) ಕಷ್ಟ	>	ಕಸ್ಟ	=	ಕ್ + ಅ + ಸ್ + ಟ್ + ಅ
5) ಎಷ್ಟು	>	ಎಸ್ಟು	=	ಎ + ಸ್ + ಟ್ + ಉ
6) ಜೋಡಿಷಿ	>	ಜೋಡಿಸಿ	=	ಜ್ + ಓ + ಡ್ + ಇ + ಸ್ + ಇ

(v) ಎ > ಅ ಬಳಕೆ

'ಕುಸುಮಬಾಲೆ' ಕಾದಂಬರಿಯಲ್ಲಿ 'ಎ' ಕಾರದಿಂದ ಕೊನೆಗೊಳ್ಳಬೇಕಾದ ಪದಗಳು 'ಅ' ಕಾರದಿಂದ ಕೊನೆಗೊಳ್ಳುತ್ತವೆ. ಇದರಿಂದ ಶಿಷ್ಟ ಕನ್ನಡ ಪದಗಳಿಗೂ ಇವುಗಳಿಗೂ ಧ್ವನಿವ್ಯತ್ಯಾಸ ಕಂಡುಬರುತ್ತದೆ.

ಉದಾ :-

ಶಿ.ಕ.		ದೇ.ಕೃ.ಕ.	ಎ > ಅ
1) ಆನೆ	>	ಆನ	ಅ + ನ್ + ಅ
2) ಬಟ್ಟೆ	>	ಬಟ್ಟ	ಬ್ + ಅ + ಟ್ + ಟ್ + ಅ
3) ಉಯ್ಯಾಲೆ	>	ಉಯ್ಯಾಲ	ಉ + ಯ್ + ಯ್ + ಅ + ಲ್ + ಅ
4) ಪಂಚೆ	>	ಪಂಚ	ಪ್ + ಅ + ಇ + ಚ್ + ಅ
5) ಮೂಳೆ	>	ಮೂಳ	ಮ್ + ಊ + ಳ್ + ಅ

(vi) ನ > ಲ ಧ್ವನಿ ಬಳಕೆ

ಪದದ ಮಧ್ಯದಲ್ಲಿ ದಂತ್ಯ ಅನುನಾಸಿಕ ವ್ಯಂಜನ ಧ್ವನಿಗೆ ಬದಲಾಗಿ ದಂತ್ಯ ಪಾರ್ಶ್ವಿಕ ವ್ಯಂಜನ ಧ್ವನಿ ಬಂದು ಇಲ್ಲಿ ವ್ಯತ್ಯಾಸ ಕಾಣಿಸುತ್ತದೆ.

ಉದಾ:

ಶಿ.ಕ.		ದೇ.ಕೃ.ಕ.		ನ > ಲ
1) ಹಿಂದಿನ	>	ಹಿಂದಲ	=	ಹ್ + ಇ + ನ್ + ದ್ + ಅ + ಲ್ + ಅ
2) ನಂಜನಗೂಡು	>	ನಂಜಲಗೂಡು	=	ನ್ + ಅ + ಞ್ + ಜ್ + ಅ + ಲ್ + ಅ + ಗ್ + ಊ + ಡ್ + ಉ
3) ಗೀಜಗನಗೂಡು	>	ಗೀಜಗಲಗೂಡು	=	ಗ್ + ಇ + ಜ್ + ಗ್ + ಅ + ಲ್ + ಅ + ಗ್ + ಊ + ಡ್ + ಉ

ಷು) ದ್ವಿರುಕ್ತಿ ಪ್ರಯೋಗದಲ್ಲಿ ವ್ಯತ್ಯಾಸಗಳು

"ಒಂದು ವಿಶೇಷವಾದ ಅರ್ಥವನ್ನು ಸೂಚಿಸುವುದಕ್ಕಾಗಿ ಪದವನ್ನು ಎರಡು ಬಾರಿ ಪ್ರಯೋಗಿಸುವುದಕ್ಕೆ ದ್ವಿರುಕ್ತಿ ಎಂದು ಹೆಸರು"[1] ಇಂತಹ ದ್ವಿರುಕ್ತಿ ಪ್ರಯೋಗದಲ್ಲಿ ಶಿಷ್ಟ ಕನ್ನಡಕ್ಕೂ ದೇವನೂರರ ಕೃತಿಗಳ ಕನ್ನಡಕ್ಕೂ ವ್ಯತ್ಯಾಸಗಳಿಲ್ಲ.

---

1. ತೀ.ನಂ.ಶ್ರೀಕಂಠಯ್ಯ, ಕನ್ನಡ ಮಧ್ಯಮ ವ್ಯಾಕರಣ – 1992, ಪುಟ. 186.

ಋ) ಸಂಯುಕ್ತ ಅಕ್ಷರಗಳ ಸರಳೀಕರಣ

ಶಿಷ್ಟ ಕನ್ನಡದ ಸಂಯುಕ್ತ ಅಕ್ಷರಗಳಿಂದ ಕೂಡಿದ ಕೆಲವು ಪದಗಳು ಇಲ್ಲಿನ ಕೃತಿಗಳಲ್ಲಿ ಸರಳೀಕರಣಗೊಂಡು ಬಳಕೆಯಾಗಿವೆ. ಈ ರೀತಿಯ ಸರಳೀಕರಣ ಶಿಷ್ಟ ಕನ್ನಡದಲ್ಲಿ ಕಂಡುಬರುವದಿಲ್ಲ.

ಉದಾ:-

	ಶಿ.ಕ.	ದೇ.ಕೃ.ಕ.
(1)	ಭಕ್ತಿ	ಭಕುತಿ
(2)	ಲಕ್ಷ್ಮಿ	ಲಡುಮಿ
(3)	ಶಬ್ದ	ಶಬುದ
(4)	ಸ್ವಾಮಿ	ಸೋಮಿ
(5)	ಪ್ಲ್ಯಾನ	ಪಿಲಾನು
(6)	ಪ್ರೀತಿ	ಪಿರೀತಿ
(7)	ಪ್ರಾಣ	ಪರಾಣ
(8)	ಪ್ರಕಾರ	ಪರಕಾರ
(9)	ತೀರ್ಥ	ತೀರುತ
(10)	ಧರ್ಮ	ಧರುಮ

ಎ) ಆಕೃತಿ ಧ್ವನಿಮಾತ್ರಕ ವ್ಯತ್ಯಾಸಗಳು

ಪ್ರಕೃತಿಯನ್ನು ಪ್ರತ್ಯಯಗಳು ಸೇರುವಾಗ ಅಥವಾ ಪ್ರಕೃತಿ ಪ್ರಕೃತಿ ಸೇರುವಾಗ ಮೊದಲು ಇದ್ದ ಧ್ವನಿ ಲೋಪವಾಗುವದು, ಹೊಸದೊಂದು ಧ್ವನಿ ಬಂದು ಸೇರುವದು ಅಥವಾ ವರ್ಣಗಳು ಕೂಡುವದು, ಮೊದಲಾದ ವ್ಯತ್ಯಾಸಗಳು ಉಂಟಾಗುತ್ತವೆ. ಇದಕ್ಕೆ ಆಕೃತಿ ಧ್ವನಿಮಾತ್ರಕ ವ್ಯತ್ಯಾಸಗಳೆಂದು ಹೆಸರು.

<u>ಅಲ್ಲಿ > ಲಿ</u>

ಸಪ್ತಮಿ ಆಕೃತಿಮಾತ್ರಕ ವ್ಯತ್ಯಾಸಗಳು

	ಶಿ.ಕ.		ದೇ.ಕ್ರಿ.ಕ.
1)	ಮನೆ + ಅಲ್ಲಿ = ಮನೆಯಲ್ಲಿ	>	ಮನಲಿ
2)	ಬಾಯಿ + ಅಲ್ಲಿ = ಬಾಯಿಯಲ್ಲಿ	>	ಬಾಂಯಲಿ
3)	ತಲೆ + ಅಲ್ಲಿ = ತಲೆಯಲ್ಲಿ	>	ತಲಲಿ
4)	ಸಂತೆ + ಅಲ್ಲಿ = ಸಂತೆಯಲ್ಲಿ	>	ಸಂತಲಿ
5)	ಕೂಸು + ಅಲ್ಲಿ = ಕೂಸಿನಲ್ಲಿ	>	ಕೂಸ್ನಲಿ
6)	ದೂರ + ಅಲ್ಲಿ = ದೂರದಲ್ಲಿ	>	ದೂರಂಲಿ
7)	ತುಟಿ + ಅಲ್ಲಿ = ತುಟಿಯಲ್ಲಿ	>	ತುಟೀಲಿ

<u>ಅನ್ನು > ವ ಅಥವಾ ಅ</u>

ದ್ವಿತೀಯಾ ವಿಭಕ್ತಿ ಆಕೃತಿಮಾತ್ರಕ ವ್ಯತ್ಯಾಸಗಳು

	ಶಿ.ಕ.		ದೇ.ಕ್ರಿ.ಕ.
1)	ಪಂಚೆ + ಅನ್ನು = ಪಂಚೆಯನ್ನು	>	ಪಂಚ್ವ
2)	ಬೀಗ + ಅನ್ನು = ಬೀಗವನ್ನು	>	ಬೀಗ್ವ
3)	ಲಂಗ + ಅನ್ನು = ಲಂಗವನ್ನು	>	ಲಂಗ್ವ
4)	ಪೇಟ + ಅನ್ನು = ಪೇಟವನ್ನು	>	ಪೇಟ್ವ
5)	ತಲೆ + ಅನ್ನು = ತಲೆಯನ್ನು	>	ತಲ್ವ

ಮೇಲಿನ ರೀತಿಯೇ ಶಿಷ್ಟ ಕನ್ನಡದ ಮತ್ತೊಂದು ಪ್ರತ್ಯಯವಾದ ಚತುರ್ಥಿ ವಿಭಕ್ತಿ ಪ್ರತ್ಯಯವು ಈ ರೀತಿ ಇದೆ.

ಅಕ್ಕೆ > ಕ

ಇಗೆ > ಗ

ಚತುರ್ಥಿ ವಿಭಕ್ತಿ ಆಕೃತಿಮಾತ್ರಕ ವ್ಯತ್ಯಾಸಗಳು

				ಶಿ.ಕ.	ದೇ.ಕೃ.ಕ.
1)	ಅವು +	ಅಕ್ಕೆ	=	ಅವಕ್ಕೆ	ಅವ್ಕ
2)	ಮರ +	ಅಕ್ಕೆ	=	ಮರಕ್ಕೆ	ಮರ್ಕ
3)	ನಾಗರಾಜು +	ಇಗೆ	=	ನಾಗರಾಜುವಿಗೆ	ನಾಗರಾಜಗ
4)	ತಲಾರಮ್ಮ +	ಇಗೆ	=	ತಲಾರಮ್ಮನಿಗೆ	ತಲಾರಮ್ಮಗ
5)	ಅಮಾಸ +	ಇಗೆ	=	ಅಮಾಸನಿಗೆ	ಅಮಾಸಗ

ಮೇಲಿನ ಎಲ್ಲಾ ಆಕೃತಿ ಧ್ವನಿಮಾತ್ರಕ ವ್ಯತ್ಯಾಸಗಳೆಲ್ಲ ಕುಸುಮಬಾಲೆ ಕಾದಂಬರಿಯ ಪದಗಳಲ್ಲಿ ಹೆಚ್ಚಾಗಿ ಕಂಡುಬರುತ್ತದೆ.

ಏ) <u>ನುಡಿಗಟ್ಟು, ಗಾದೆಗಳಲ್ಲಿ ವ್ಯತ್ಯಾಸಗಳು</u>

ಶಿಷ್ಟ ಕನ್ನಡದಲ್ಲಿ ಕಾಣಿಸದ 'ಅಡಗತಿ' ಎಂಬ ಕೂಡುಪದ ದೇವನೂರರ ಕೃತಿಯಲ್ಲಿ ಕಂಡುಬರುತ್ತದೆ. 'ಅಡಗತಿ' ಎಂದರೆ ಹದಗೆಟ್ಟವರ (ಅತಂತ್ರರಾದವರ) ಪರಿಸ್ಥಿತಿಯನ್ನು ನೋಡಿ ಬೇರೆಯವರು ಆಡಿಕೊಳ್ಳುವುದಾಗಿದೆ. ಈ 'ಅಡಗತಿ' ಎಂಬ ಕೂಡುಪದ ಶಿಷ್ಟ ಕನ್ನಡದಲ್ಲಿ ಇಲ್ಲ.

ಹಾಗೆಯೇ ಇಲ್ಲಿನ 'ಒಡಲಾಳ' ಕಾದಂಬರಿಯಲ್ಲಿ ಕಂಡುಬರುವ ಗಾದೆ ಮಾತಾದ "ಆದ್ಯಾಕ್ಗೂ ಒಬ್ಬಳು ಕುಟ್ಟೋಕೆ ಬತ್ತ, ಬುಟ್ಟು ಹುಟ್ಟೋಕೆ ಕಾಟ ನೋಡ್ಕತಿದ್ಲಂತೆ..." (ಪುಟ-84) ಎಂಬುದು ಶಿಷ್ಟ ಕನ್ನಡದಲ್ಲಿ ಕಂಡುಬರುವುದಿಲ್ಲ.

ಮೇಲಿನ ಕೂಡುಪದ ಹಾಗು ಗಾದೆಮಾತು, ಇವುಗಳು ಶಿಷ್ಟ ಕನ್ನಡಕ್ಕೂ ದೇವನೂರರ ಕೃತಿಗಳ ಕನ್ನಡಕ್ಕೂ ಇರುವ ವ್ಯತ್ಯಾಸಗಳಾಗಿವೆ.

2.3. ಕತೆಗಳ ಮೂಲಭೂತ 'ತೀವ್ರತೆ' ಹಾಗೂ ಗಾಂಭೀರ್ಯ, ಘನತೆ ಮತ್ತು ನಿರೂಪಕನ ಭಾಷೆ : ಪರಸ್ಪರ ಸಂಬಂಧ.

ಒಂದು ಸಾಹಿತ್ಯಿಕ ಕೃತಿಯ ಮೂಲ-ತಾತ್ವಿಕ ಇರುವಿಕೆ (Ontology)ಗೆ, ಅದರ ಮೂಲ-ತಾತ್ವಿಕ ಘನತೆ(Ontological dignity)ಗೆ, ಆ ಕೃತಿಯ ಭಾಷೆಯ ಕೊಡುಗೆ ಏನು ಎಂಬ ಪ್ರಶ್ನೆಗೆ ಉತ್ತರ ಹುಡುಕುವುದಕ್ಕಾಗಿ ಮತ್ತೆ ಇಲ್ಲಿ ಎರಡು ವಿಭಾಗ ಮಾಡಿ ಅಧ್ಯಯನ ನಡೆಸಲಾಗಿದೆ. ಮೊದಲನೆಯ ವಿಭಾಗ-ಕತೆಗಳ ಮೂಲ ತಾತ್ವಿಕ ಒಳಹುರಳು ಹಾಗೂ ಆಂತರಿಕ ರೆಟರಿಕ ಮತ್ತು ನಿರೂಪಕನ ಭಾಷೆ: ಜಿಜ್ಞಾಸೆ, ಎರಡನೆ ವಿಭಾಗ – ನಮೂನೆ ಕತೆ – ಕೃತಿಯಲ್ಲಿದ್ದಂ ಹಾಗೆ. ನಮೂನೆ ಕತೆ – ಶಿಷ್ಟಭಾಷೆಯಲ್ಲಿ.

2.3.1. ಕತೆಗಳ ಮೂಲ ತಾತ್ವಿಕ ಒಳಹುರುಳು ಹಾಗೂ ಆಂತರಿಕ ರೆಟರಿಕ ಮತ್ತು ನಿರೂಪಕನ ಭಾಷೆ : ಜಿಜ್ಞಾಸೆ

ಭಾಷೆ ವಸ್ತು-ರೂಪಗಳ ಒಂದು ಒಡಂಬಡಿಕೆ, ಅರ್ಥ ಮತ್ತು ಆಕೃತಿಗಳೆಂಬ ಎರಡು ಮುಖಗಳಿರುವ ನಾಣ್ಯ. ಒಂದಿಲ್ಲದೇ ಮತ್ತೊಂದಿಲ್ಲ. ಆದರೆ ಒಂದೇ ಅರ್ಥಕ್ಕೆ ಎರಡು ಅಥವಾ ಎರಡಕ್ಕಿಂತ ಹೆಚ್ಚು ರೂಪಗಳಿದ್ದಾಗ ಈ ಆಕೃತಿಗಳ, ರೂಪಗಳ ಕ್ರಿಯೆ(Function) ಏನು? ಕೆಲವು ಭಾಷಿಕ ರೂಪಗಳ ವಿಷಯದಲ್ಲಿ ಇದಕ್ಕೆ ಉತ್ತರ ಸ್ಪಷ್ಟ ಮತ್ತು ಸರಳ. ಉದಾಹರಣೆಗೆ, ಹೋಗುತ್ತೇನೆ/ಹೋಗ್ತೀನಿ / ಹೋಯ್ತೀನಿ, ಆಗುತ್ತದೆ / ಆಗ್ತದೆ / ಆಯ್ತದೆ / ಆಕೃತಿ, ಮನೆ / ಮನಿ, ಹಾಲು / ಆಲು, ಇಡು / ಬಡಿಸು / ಇಕ್ಕು, ಎಂಬ ರೂಪ ಬದಲಾವಣೆಗೆ ಕಾರಣ ಸ್ಪಷ್ಟ. ಕೊನೆಯ ಎರಡು ಉದಾಹರಣೆಗಳ ರೂಪ ವ್ಯತ್ಯಾಸ ಸಾಮಾಜಿಕ ಪ್ರಭೇದಾತ್ಮಕ ಕ್ರಿಯೆ(function)ಯಾದರೆ, ಉಳಿದ ಉದಾಹರಣೆಗಳಿಗೆ ಉತ್ತರ ಭೌಗೋಳಿಕ ಪ್ರಭೇದ. ಇವುಗಳಲ್ಲಿ ಅರ್ಥ ಅಥವಾ ವಸ್ತು ಒಂದೇ.

ಇದು ಕೃತಿ-ಆಕೃತಿಯ ಸಂಬಂಧಕ್ಕೆ ಅನ್ವಯಿಸುತ್ತದಾ ಎನ್ನುವುದನ್ನು ವಿವೇಚಿಸೋಣ. ನಂಬಬಹುದಾದ ಮೊದಲನೇ ಹೈಪೊಥಿಸಿಸ ಅಂದರೆ ಭಾಷಾ ಪ್ರಭೇದ ಬದಲಾದರೂ ವಸ್ತು ಬದಲಾಗದು ಎಂಬುದು. ಇದು ಶಬ್ದಕೋಶೀಯ ಮತ್ತು ಆಕೃತಿಮಾತ್ರಕ ಮಟ್ಟಗಳಲ್ಲಿ

ನಿಜವೇ. ಉದಾಹರಣೆಗೆ ಕೊತ್ತಿ/ಬೆಕ್ಕು, ವಸಿ/ಸ್ವಲ್ಪ, ಯಮ್ಮ/ಹೆಂಗಸರು, ಮನೆ/ಮನ, ಬದುಕು/ವಸ್ತು, ಬಾಡು/ಮಾಂಸ ಅಥವಾ ಅಕ್ಕೆ/ಕ(ಚತುರ್ಥಿ ವಿಭಕ್ತಿ ಪ್ರತ್ಯಯ)ಗಳ ವ್ಯತ್ಯಾಸ ಭಾಷಿಕ ರೂಪದ ಹೊರತು ವಸ್ತು ಅಥವಾ ಅರ್ಥ ಸೌಂದರ್ಯದಲ್ಲವೇ ಅಲ್ಲ. ಇವು ಒಂದೇ ಅರ್ಥದ ಪರ್ಯಾಯ ಅಭಿವ್ಯಕ್ತಿಗಳು. ಇಲ್ಲಿ ರೂಪವ್ಯತ್ಯಾಸ ಭಾಷಿಕರ ಬಿಡಿಬಳಕೆಯ ಪ್ರಶ್ನೆ. ಆದರೆ ಇಡೀ text/discourseನ ಇದು ನಿಜವಾಗಲೇ ಇರಬಹುದು. ಮೂಲ ಕೃತಿಯ ಆಂತರಿಕ ರಚನೆ ಅಥವಾ ಮೂಲ ತಾತ್ವಿಕ ಒಳಹುರುಳು text ನ ಭಾಷೆಯ ಕ್ರಿಯೆ ಇರಬಹುದು. ನಾವು text ಗಳನ್ನು boring ಎಂದೂ, 'ರಸವತ್ತಾದ' turgid ಎಂದೂ, ತೀವ್ರ ಎಂದೂ, ಮೇಲ್ಮೈಯದು (superficial) ಎಂದೂ, ಗಂಭೀರವಾದದ್ದೆಂದೂ, ಘನ ಅಥವಾ ಲಘುವಾದದ್ದೆಂದೂ ಹಲವು ಹತ್ತು ಪ್ರಕಾರ ವರ್ಗೀಕರಿಸಬಹುದು. ಈ ವರ್ಗೀಕರಣ ಭಾಷಿಕ ಆಕೃತಿಗೆ ಸಂಬಂಧಪಟ್ಟಿರಬಹುದು ಅಥವಾ ಆಕೃತಿ ಮತ್ತು ಅರ್ಥ ಎರಡಕ್ಕೂ ಸಂಬಂಧಪಟ್ಟಿರಬಹುದು. ತೀವ್ರತೆ, ಘನತೆ, ಗಾಂಭೀರ್ಯಗಳು, ಓಜಸ್ಸು, ರಸಾನುಭವ, ಅರ್ಥಸೌಂದರ್ಯಗಳು ಅರ್ಥ ಮತ್ತು ರೂಪ ಎರಡರಿಂದಲೂ ನಿರ್ಧರಿಸಲ್ಪಟ್ಟಿರಬಹುದು.

ಈ ವಿಚಾರಧಾರೆಯನ್ನು 'ಕುಸುಮಬಾಲೆ'ಯ ಭಾಷಿಕ ವಿಶಿಷ್ಟತೆ ಮತ್ತು 'ಕುಸುಮಬಾಲೆ'ಯ ಶಿಷ್ಟ ಕನ್ನಡದ ಅವತಾರಗಳ ನಡುವೆ ಇರುವ ಸಂಬಂಧಕ್ಕೆ ಅನ್ವಯಿಸಿ ಮೂರನೇ ಅಧ್ಯಾಯದ 'ವಾದಾನುವಾದ'ದಲ್ಲಿ ಚರ್ಚಿಸಲಾಗಿದೆ.

2.3.2. <u>ನಮೂನೆ ಕತೆ – ಮೂಲಕೃತಿಯಲ್ಲಿದ್ದಂ ಹಾಗೆ</u>

ಇಲ್ಲಿ ನಮೂನೆ ಕತೆಯಾಗಿ ದೇವನೂರರ ಕೃತಿಯಾದ 'ಕುಸುಮಬಾಲೆ' ಕಾದಂಬರಿಯನ್ನು ತೆಗೆದುಕೊಂಡಿದೆ.

ಕುಸುಮಬಾಲೆ

ಎತ್ತಣ ಮಾಮರ ಎತ್ತಣ ಕೋಗಿಲೆ? ಎತ್ತಣಿಂದೆತ್ತ ಸಂಬಂಧವಯ್ಯ?!
ಬೆಟ್ಟದ ನೆಲ್ಲಿಯಕಾಯಿ ಸಮುದ್ರದೊಳಗಣ ಉಪ್ಪು ಎತ್ತಣಿಂದೆತ್ತ ಸಂಬಂಧವಯ್ಯ?!
ಗುಹೇಶ್ವರ ಲಿಂಗಕ್ಕೆಯೂ ಎನಗೆಯೂ ಎತ್ತಣಿಂದೆತ್ತ ಸಂಬಂಧವಯ್ಯ?! — ಅಲ್ಲಮ

ಕಲ್ಲೂ ನೀರೂ ಕರಗುತಿತ್ತೂ, ಆಗ ಕ್ರಿಯಾ ಮುಗಿಸಿದ ಜೋತಮ್ಮಂದೀರು ಕಷ್ಟಸುಖ ಮಾತಾಡಿಕೊಳ್ಳಲು ಆ ಗವಿತ್ತಲ ಊರಮುಂದಲು ರೂಢಿಗತದಂತೆ ಕೂಡಿದರು. ಅವರು ಮಾತಾಡ್ಲಿ ಅಂತ ಇವರೂ, ಇವರು ಮಾತಾಡ್ಲಿ ಅಂತ ಅವರೂ — ಹೀಗಿದ್ದರು. ಆಗ ಅಲ್ಲಿಗೊಬ್ಬಳು ಹೊಸ ಜೋತಮ್ಮನು ಇಸ್ಕೂಲಮನೆ ದಿಕ್ಕಿಂದ ಬಂದವಳು ಬಸ್ಸಿನವರು ದಾನವಾಗಿ ಕಟ್ಟಿಸಿದ ಜಗುಲಿಕಲ್ಲಮ್ಯಾಲ ಉಸ್ಸೋ ಎಂದು ಕೂತು ನಿಟ್ಟುಸಿರಾದಳು. ಆಗಲು, ಊರಗ ದೊಡ್ಡೋರ ಹುಟ್ಟ ಜೋತಮ್ಮನು—

"ಯಾವೂರ ತಾಯಿ ನಿಂದು?" ಎಂದಳು.

"ಅಯ್ಯೋ ನಂಗೂ ಯಾವೂರು ಯಾವಕೇರಿ ಅಕ್ಕಯ್ಯ? ನಾನೊಬ್ಬ ಪಾಪಿ ಪರದೇಸಿ. ಇದ್ದರೆ ಈ ಊರೂ ಎದ್ದರೆ ಮುಂದ್ಲೂರು. ಈಗ ಊರಗ್ಗ ಬಂದಿರೋ ದೊಂಬ್ರ ಕಡೆಯೋಳು..."

"ಅವ್ವಾ! ನಿನ ಮಾತ್ಲೆ ಏನ ಬಿನ್ನಾಣ ಇಸ್ತೋಂದು. ಇನ್ನ ನಿನ್ನೊಳಗ ಇನ್ನೇಸೈತೋ! ಕೇಳ್ತಾ ಇದ್ದೋದೇ ಒಂದು ಐಭೋಗ. ಎಷ್ಟೇ ಅದ್ರೂ ನೀನು ಊರೂರು ತಿರಗ್ಯಾಳು. ಇಂದಗ್ಗ ಹನ್ನೆರಡು ವರ್ಷದ ಮಳೆಬೆಳೆದಲ್ಲಿ ಬಂದಿದ್ದೆಲ್ಲ ಅವ್ವಿಯಾ?"

"ಅವ್ವಯ್ಯಾಕಣ್ರೀ ಅಕ್ಕಯ್ಯ. ಇನ್ನೂ ನನ ನೆಪ್ಪು ತನಗ ಬಿಗುರಾಗಿದೆಯಲ್ಲ! ಇದಲ್ವ ನನ ಪುಣ್ಯ!"

ಎಂಬುದಾಗಿ ಹೊಸ ಜೋತಮ್ಮ ಹೋಜುಗದಲ್ಲಿರಲು, ಉಳಿದ ಜೋತಮ್ಮಂದಿರು ಹೊಸಬಳ ಮುಖತ್ತ ತಟ್ತ ಮಾತಾಡದ್ತ, ಅಲ್ಲಿ ಗಲುಗುಗದಲ ಎದ್ದೇಳಿತು. ಆಗ ಊರಗ ದೊಡ್ಡೋರ ಹುಚ್ಚೀ ಜೋತಮ್ಮನು —

"ಅದ್ಯಾಕ ಅಷ್ಟ ಮಾತಾಡೀರೀ ಕೇಳ್ರಿಮ್ಮ ಯಮ್ಮಗಳ.. ಇವತ್ತ ನಮ್ಮಪ್ಪ ಕುಸುಮನ ಗಂಡ ಬಂದಿದ್ದ. ಬಂದವ, ಕೂಸಿನ ಹೆಸ್ರೇನೂ ಹೊತ್ತು, ನೋಡದನೋ ನೋಡದೇ ಇದ್ದ! ನಿಲ್ದ ಹೊಂಟೇಬಿಡಾದ ಪುಣ್ಯಾತ್ಮ...!"

" ಅಯ್ಯಯ್ಯೊಕ್ಕ ಎಲ್ಲಾದ್ರು ಉಂಟವ್ವಾ! ಆ ಥರಾಗಿ ಯಾರಾರೂ ಮಾಡ್ಯಾರವ್ವ?"

" ನಾ ಯಾನ ಹೇಳಲವ್ವ ತಾಯಿ? ಕೂಸ ನೋಡ್ದ್ರ, ಕೆಂಪಗಿರೋ ಅವ್ನ ಮೊಕವ ಕಪ್ಪಗೋಯ್ತು. ಕುಸುಮೀನ ಯಾನ ಅನ್ಲಿಲ್ಲಾ... ಎತ್ರ ಅನ್ಲಿಲ್ಲ... ನಟುಗ ಕಣ್ಣೆತ್ತಲಾ ನೋಡ್ಲಿಲ್ಲಾ. ಕಡುಂ ಹೊಂಟೋಯ್ತದಂ..."

" ಅಯ್ಯಯ್ಯೊಕ್ಕೀ ಎಲ್ಲಾದ್ರು ಉಂಟವ್ವಾ? ಆ ಥರಾಗಿ ಯಾರಾರೂ ಮಾಡ್ಯಾರವ್ವ...?"

" ಅದ್ಕ ನಾನಾದ್ರು ಯಾನ್ನ ತಾನೇ ಹೇಳಲವ್ವ ತಾಯಿ?"

" ಆಕೆ ನಾ ಹೇಳ್ತೀನಿ ತಾಳಿ ಅದ..."

— ಎಂದು ಸೊಪ್ಪುನೊದ ಯಾಪಾರಸ್ಥ ತೊರಾರ ಹುಲ್ಲೀ ಜೋತಮ್ಮ ನುಡಿಯಲು, ಸಿಡುಕಾಗಿ ದೊಡ್ಡೋರ ಹುಲ್ಲೀ ಜೋತಮ್ಮ —

" ಅಂಯ... ನೀ ಎಲ್ಲಾಕು ಬಾಯಕಂದು ಬವ್ವ. ಆ ಹುಲ್ಲ ತಳಪಾಯಂ ದಿನವೇ ಹುಟ್ಟದೋ ನಂಗಿಯು ಗೊತ್ತಿಲ್ವಂತ... ಇನ್ನು ಯಾನ್ನ ನೀ ಹೇಳದೂ!"

ಎಂದಳು. ಈ ಸಿಡುಕಿಗೆ ಸೊಪ್ಪು ಹಾಕದ ಹೊಲಾರ ಮಾರಿಗುಡಿ ಜೋತಮ್ಮನು —

" ಅದಾಕ ಅವ್ಳ ಬಾಯ ವಯಿಜ್ಜರಿ ನೀವ? ಏನೇನ ಕಂಡಿದಂಳೋ ಅವಳು! ಹೇಳ್ಲಿ ಬುಡಿ, ಅದೂನ್ನ ಕೇಳವ..."

ಅಂದಳು. ಆಗ ದೊಡ್ಡೋರ ಹುಲ್ಲೀ ಜೋತಮ್ಮ ಮೊಕ ಬಿಕ್ಕಂಡು ತಾತ್ಸಾರವ ಉಸುರಾಡ್ತ, ಅಂದಳು —

" ಸ್ವಾ ಹೇಳವ್ವ. ಅದೇನ ನಿಂಗ ಕಂಡಿದಂದೋ ಅದೂನ್ನ ಕೇಳವ..."

ಆಗ ಒಂದ್ಸಲ ಸುತ್ತಾಲೂ ನೋಡಿ ತೊರಾರ ಹುಲ್ಲೀ ಜೋತಮ್ಮನು —

" ಅದಿಯೂ ಆತ್ಗಮ್ಮೋರ... ನಿಂ ಕುಸುಮುವ ಆ ಹೊಲಾರ ಜನ್ನನೂವಿ ಕೂಡೋ ತಳವ ನಮ ಜೋಪಡಿ ತಾನೀಯ? ಕೆಂಪಾಗಿರೋ ಗಂಡ ಹೆಂಡೀಗ ಹುಟ್ಟೀದೋ ಕೂಸು ಜನ್ನನ ಥರಾಗಿ ಕಪ್ಪಗಿ ಅದು ಹುಟ್ಟೀ... ಅದನೀಗ ಕುಸುಮಳ ಗಂಡ ಅರುತ್ಗಂಡು... ಅಂತೇನಾರು..."

ಅಂತ ಅಂದು ಮುಗಿಯುವುದರೊಳಗ, ಹಾರೂರ ಮನೆಯ ಜೋತಮ್ಮ —

"ಐ... ಎಲ್ಲಾ ಮಾಡ್ಕೋ ಯಥಾರ್ಥನ ಹೇಳ್ತೆ. ಏನ ವಿಚಾರ ಅದು?" ಎಂದು ದೊಡ್ಡೋರ ಹಟ್ಟೇ ಜೋತಮ್ಮನ ದಿಕ್ಕಿಗ ತಿರುಗಿ ಅಂದಳು-

" ಅವ್ಳ ಮಾತು ಅಂಗಿರ್ಲಿಕಣಾ, ಕೂಸುಬಾಣ್ತಿ ಚೆನಾಗಿದ್ದಾಳ? ಅದಾಗ್ರು ಕೇಳವ ಹೇಳ್ರಿ ಅಕ್ಕಂಗಮ್ಮ..."

" ಕೂಸಾಯ್ನ ಆರೋಗ್ಯವಾಗಿ ಚಂದಗಾಣಾಗಿ ಆಡ್ತಂದದ. ಅದ್ರ... ತಾಯಿ ಅಯ್ಯೋ ಆ ನಮ್ಮ ಕುಸುಮ್ನಂತು ಈ ಏಡ ನೇತ್ರಗಳಿಂದ ನೋಡಕಾಗಲ್ಲಕನವ್ವ. ಆ ಎಳೆ ನಗೂನುವಿ ಈ ಎಳೆ ಜೀವಾವ್ನಿವಿ ನೇರ್ಸಿ ಬಚ್ಚ ಇಳಿಪ ಮಾಡಂಗಿದವಳಾ... ಸಿವಸಿವಾ ಅವಳು ನಕ್ಕರೋ. ಅವಳ ಹಲ್ಲಿನ ಮುತ್ತುಗಳು ಆ ಒಂಡುಬ್ಬ ಸಿಂಗರ್ಸಿನಲ್ಲ ಈ ಲೋಕದ ಚಲುವನೆಲ್ಲ ಆ ಭಗವಂತನ್ನ ಇಟ್ಟಾಗ... ಆ ರತಿ ಅಂಬವಳಿಗಿಂಯಾ ಅದ್ನೀಗ ಹೆಂಗಾರಾ ಮಾಡಿ ಕಿತ್ಕಂಡು ತನ್ನ ಹಲ್ಲಿನ ಮುತ್ತಕ್ಕ ಇಟ್ಟಗಬೇಕೂ ಅನ್ನಂಗ ಇದ್ದವಳಾ! ಈಗ ಆ ನನ್ನ ಕಂದನೊಳಗ ಬಸ್ಕಂಡ್ರ ಒಂದು ಚೂಕು ರಕ್ತ ಇದ್ದುಂದೋ... ಇಲ್ಲೋ... ಅನ್ನಂಗವ್ಳೆ..."

ಈ ವಾಕ್ಯಕ ಯಾವ ಜೋತಮ್ಮದೀರ ಬಾಯಿಂದ್ಲೂ ಮಾತು ಹೊರಡಲಾರದೆ ಕೆಲವರೋ ರೋದಗುಡ್ತ, ಕೆಲವರೋ ಅಯ್ಯೋ ಅನ್ತ, ಉಳಿದವರು ದೀನವಾಗಿ ತಾವೇ ನಿಟ್ಟುಸಿರಾಗಿ ಕೂತು-

" ಯಾವ ದಿನ ನೇರ್ಲಿ ಇಂಥ ಕಸ್ಟದ ಮಾತ್ಗಳ ಕೇಳ್ಬೇಕೂ ನೋಡ್ಬೇಕಲ್ಲಾ! ನಮ್ಮ ಹಾಳಾದ ಹಣೇಲಿ ಆದೇನ ಬರಿಂದಾಂದು? ಆ ಭಗವಂತ ಯಾಕಾರು ನಮ ಹುಟ್ಟಿಸ್ದಾ? ನಮ್ಗ ಸಾವಾದ್ರೂ ಕೊಡ್ಬಾರ್ದ?"

ತಲಗೊಂದು ಎಂದು ಮಾತಾಡ್ತ, ಕೂತಿರಬೇಕಿರುವಾಗ,

ಆ ಕಡಾ ಐದ ಜನ, ಈ ಕಡಾ ಐದ ಜನಾ, ಹಿಂದ್ಬದ ಜನ, ನಡುಮಧ್ಯ ಕುಸುಮಾಳ ಅಪ್ಪಯ್ಯ ಮಾತಾಡ್ತ, ಉಳಿದವರು ಊಗುಟ್ತ, ಊರೊಳಕ್ಕ ಕಾಲಿಟ್ಟರು. ಈ ಕಲಿಗಾಲದ ಜನಕ್ಕೆಲ್ಲ ವೇಳೆ ಅವೇಳೆ ಅಂಬುದಿಲ್ಲದೆ, ಒಂದು ಘಳಿಗ್ಯಾದ್ರೂ ತಾವು ನಿಂಬಳವಾಗಿ ಕೂತು ಕಸ್ಟಸುಖ ಮಾತಾಡಿಕೊಳ್ಳಲಾಗದ ಜೋತಮ್ಮದೀರು ಬೇಜಾರು ತುಂಬ್ಕಂಡು ಎದ್ದು ತಂತಮ್ಮ ತಳ ಸೇರ್ಕಂಡರು.

ಕುಸುಮಾಳ ತಂದೆ ಸೋಮಪ್ಪರು ಹಟ್ಟಿ ಮುಂದಲು ನಿಂತ ನಿಲುವ ಬಿರುಸಿಗೆ ಬಾಗಿಲ ಕಾಲಿಂನೆಯಲ್ಲಿ ತಲೆ ಇಟ್ಟು ತೂಕಡಿಸುತ್ತಿದ್ದ ಆಳುಮಗಗ ಬೆಚ್ಚಿಬಿದ್ದಂತಾಗಿ ಎಳಲು, ಒಂದು ಆನ ಮಗೂಗವೂ ಇದ್ದ ಆ ದಾರಂದವು ಆ ಊರಾಗಿದ್ದ ಊರು ಒಂದ್ಸಲ ಆಳಿಸಿದಷ್ಟು ಸಬುರ ಮಾಡ್ತ ತಕ್ಕೊಂಡಿತು. ಆಗಲೇಗ ಹಟ್ಟಿಯೊಳು ಒಳಗಿದ್ದೂ ಇದ್ದೂ ಬೇಜಾರು ತುಂಬ್ಕೊಂಡಿದ್ದ ಕತ್ತಲು, ಬಾಗಲು ತಗೆಯುವುದನ್ನೇ ಕಾಯುತ್ತಿದ್ದು ಹೊರ ಬಂದುದೆ ಉಸುರು ಬಿಡಲು, ಹಾಗೆಯೇ ಹಟ್ಟಿ ಹೊರಗಿದ್ದ ಕತ್ತಲಾಗ ತಾನೂ ಒಂದ್ಸಲ ಹಟ್ಟಿಯೊಳು ಒಳಬಂದ್ಲೆ ನೋಡುವ ಆಸ್ಥೆ ಅದೋ ಒಳಬಂತು.

ಆಳುಮಗ ಓಡಾಡಿಕೊಂಡಾಗ ಲಾಂಟೀನು ಬತ್ತಿ ಎತ್ತರಿಸಿ ಮಿನುಗುಡೂ ಬೆಳಕ ದೊಡ್ಡದಾಗಿಸಿದನು. ಆ ಬೆಳಕುವು ತನ್ನ ಶಕ್ತಿಮೀರಿ ಹಟ್ಟಿಯೂ ಕಣ್ಣಗಳ ಓಡಿಸಿದಷ್ಟೂ ಇನ್ನೂ ಏವಿ ಕಂಡುಬರುತ್ತಿದ್ದ ಆ ಒಂದೂರದಷ್ಟಿದ್ದ ಹಟ್ಟಿಯೊಳು ಒಕ್ಕಡ ಮೂಲೆನಾರೂ ತಲುಪಲು ಅದಕ್ಕಾಗದೆ ಎದುಸುರಾಗಿ ನಿಂತಿತು.

ಆಳುಮಗ " ಅಪ್ಪರ ಏನಿನ್ನ ಆಳಿ " ಅಂದನು. "ಬ್ಯಾಡ, ನಂದು ನಂಜಲಗೂಡ್ಲೆ ಊಟಾಯ್ತುಕಣ, ನೀ ಮಲಕ ಇನ್ನು..." ಎಂದು ಸೋಮಪ್ಪರು, ಆಳುದುಂಡ ಹದನಾರು ದಪ್ಪಡಿ ಕಲ್ಲಿನ ತೊಟ್ಟಿಗ ಇಳಿದು ಕೈಕಾಲಮೊಕ್ಕ ತೊಳದು, ಅದಾದ ಮಾಕ್ಕಲ ಅರ್ಧ ಹಜಾರದ ಅವಸಿದ್ದ ಮಂಚದ ಮಾಕ್ಕಲ ದೇಹವಿರಿಸಿ ಒಂದು ಸಿಕರೋಟು ಹಚ್ಚಿ ಸೇದಿದರೂ ಮನಸ್ಸು ನಿಂತಲ್ಲಿ ನಿಲ್ಲದಿರಲು ಬಾಣಂತಿ ಮನೆಯೋ ಮಗಳು ಕುಸುಮಾಳ ಒಂದ್ಸಲ ನೋಡುವ ಆಸೆ ಎದ್ದಾಂಡಿತು.

ಗಾಳಿ ಬೆಳಕೂಗಳ ತಡೆಗಟ್ಟಿ ನಿಂತಿದ್ದ ಆ ಬಾಣಂತಿ ಮನೆಯು ಕುಸುಮಾಳ ಉಸುರಾಟದಿಂ ಬೆಚ್ಚಗಿತ್ತು. ಕೈಂಯಣ್ಣೆ ಸೊಳ್ಳಿನ ಬೆಳಕು ಬೆಳಗ್ತ, ತಂಪಾಗಿ ಜೆಲ್ಲತ ಉರಿಯುತ್ತ, ಅಲ್ಲಿ ಕುಸುಮಾಳ ತೋಳಮಾಕ್ಕಲ ಹಾಲೂಗಾತ್ರಿಯ ಪರಿವಿಲ್ಲದ ಅವಳ ಕಂದಮ್ಮನು ಕಣ್ಣಗಳ ಅರಳಿಸಿಕೊಂಡು ಕಾಕು ಹಾಕ್ತ, ಕಯ್ಯಕಾಲು ಕೆಳಗ್ಮೇಲಾಡುಸ್ತ, ಆಡುತ್ತಿದ್ದರೆ, ಅದರವ್ವ ತನ್ನ ಪರಿವಿಲ್ಲದ ನಿದ್ದೆಮಾಗಿದ್ದಳು. ಅವಳ ಹನಿಬೇರುಗಳು ಆ ಹೊತ್ತುಂಬಾ ಹಡಿ ಆಗಾಗ ಅವು ಒಡೆದು ಮೊಕದಿಂದ ಕೆಳಕ್ಕ ಇಳಿಯುತ್ತಿದ್ದವು. ಅವಳ ಕೂದಲೂ ಅವಳ ಮೊಕಕ್ಕೆಲ್ಲ ಜೆಲ್ಕೊಂಡು ಆ ಬೆವರ ತಾಕ್ವಕ್ಕ ಅಂಟ್ಕೊಂಡು ಅದೂನು ಅಲ್ಲಾಡದಿತ್ತು.

ಆ ಕೂಸು ಆಡುವ ಚೋದ್ಯವ ನೋಡ್ತಾ, ಕುಸುಮಾಳ ತಮ್ಮನಾಗಿದ್ದ ಹನ್ನೆರಡು ವರುಸಾದ ಪರ್ಸಾದನು ಎದುರಾಗ ಕೂತಿತ್ತು. ದೇವಮಾನವರಂತೆ ರೆಪ್ಪೆ ಮಿಟುಕಿಸದ ಆ ಬೆರಗು ಕಣ್ಗಳ ಒಳಕ್ಕ ಕಯ್ಯೆಣ್ಣಿ ಸೊಳ್ಳಿನ ತಂಪಾದ ಬೆಳಕು ಬಿದ್ದು ಅದು ಅಲ್ಲಿಂದ ಇಮ್ಮಡಿ ತಂಪಾಗಿ ನೆಲಕ ಚೆಲ್ಲುತ್ತಿತ್ತು. ಇನ್ನ ಅವನ ಬಾಯೊಳಗೆ ಮೀರಿ ಸುರಿಯುತ್ತಿದ್ದ ಹೆಪ್ಪವರಿ ಜೊಲ್ಲನ್ನ ಭೂಮತಾಯಿ ತನ್ನೆರಡು ಕೈಗಳಿಂದಲು ಆತುಗೊಳ್ಳುತ್ತಿದ್ದಳು.

ಇದಕಂಡು, ಮಗಳ ಕಣ್ಣಗ ತುಂಬಿಕೊಳ್ಳಲು ಬಂದ ಸೋಮಪ್ಪಗ ಬಾರದ ನಗೂ ಬಂದು "ಅಪ್ಪೆ ಪರ್ಸಾದ ಅದ್ಯಾಕನ ನೀನು? ಇಮ್ಮಡಿ ನಿನ ಕಣ್ಗ ನಿದ್ದಿ ಬಂದಿಲ್ಲ?" ಅಂದರು. ಪರ್ಸಾದ ಬಾಯ್ತುಂಬಿದ್ದ ಜೊಲ್ಲ ಭೂಮತಾಯಿಗ ಚೆಲ್ಲಿಬಿಟ್ಟು "ಅಪ್ಪೆ ಇಲ್ಲೊ ನೋಡು! ಕೂಸು ಆಡ್ತ ಅದ" ಅಂದನು. "ಇನ್ನೇನ ಬೆಳಕರೀತಾದ. ಹೋಗು ನೀ ಮಲಗ" ಅಂದರು. ಅಷ್ಟರಲ್ಲಿ ಬಾಯಿಗ ತುಂಬಿದ್ದ ಜೊಲ್ಲ ಪರ್ಸಾದ ಕಟಬಾಯಿಯಲ್ಲಿ ಉಕ್ಕಿಸ್ತ "ಅಪ್ಪೆ ಇಲ್ಲೊ ನೋಡು! ಕೂಸು ಆಡ್ತ ಅದ" ಅಂದನು.

ಒಂದ್ಸಲ ಸೋಮಪ್ಪರು ಆ ದೇಹದ ತುಂಬಾ ಉಸುರಾಡಿ, ಮಗಳ ಕಣ್ಣಗ ತುಂಬಿಕೊಂಡು ಮಂಚಕ್ಕ ಬಂದು ಆ ದೇಹವ ಚೆಲ್ಲಿದರು.

ಪರ್ಸಾದನು, ಏಳ್ಜನ ಗಂಡುಮಕ್ಕಳಮ್ಯಾಲ ಒಬ್ಬಳು ಮಗಳಾಗಿ ಕುಸುಮಾಳು ಹುಟ್ಟಿ ಇನ್ನ ಮಕ್ಕಮರಿ ಸಾಕು ಎಂದಿರುವಾಗ ಅರಿವಾಗ ಬಾರದೆ ಹುಟ್ಟಿಬುಟ್ಟಿದ್ದನು. ಹೂಜಿಮಡುಂಗೆಲ್ಲ ಜಗ್ಗದಿ ಗೆದ್ದು ಹುಟ್ಟಿಬಂದ ಪರ್ಸಾದನ ಬೆಪ್ಪು ಮತ್ತು ಅವನ ಜೊಲ್ಲು ಅವನು ಬೆಳೆದಂತೆಲ್ಲ ಅವಾ ಬೇಕಿತ್ತಾ ಯಾಕಾರ ಹುಟ್ಟಿದನೋ ಅನ್ನೋನ್ತ ಅವನೋ ಹುಟ್ಯಾಗಿತ್ತು.

ಈ ನನ್ನ ಕಂದ ಪರ್ಸಾದನು ಕೂತಲ್ಲೆ ಫಲದಲ್ಲ ಒಡೆಯನಾಗಿ ನಿಂತೋಯ್ತಲ್ಲಾ ಅಂತಂತ ಹಾಗೇ ಅಪ್ಪಳಿಸುವರ ಕಣ್ಣಗ ನಿದ್ದಿ ಕವರಿತು. ಆಗ ಆ ಅರಜೀವದ ಕತ್ಲಬೆಳಕಲ್ಲಿ ಸೋಮಪ್ಪರ ಕಣ್ಣಗಳ ಸುತ್ತಾ ಸುತ್ತುತ್ತಿದ್ದ ಕಪ್ಪು ಬಳವ ಇನ್ನೊಂದು ಗೆರೆ ಹೆಚ್ಚಿಸಿಕೊಂಡಿತು.

ಸೋಮಪ್ಪರ ಮೂಗಿನ ಮ್ಯಾಲ, ಹುಬ್ಬಿನ ಕೆಳಗ ಏಡು ಕಪ್ಪು ಪ್ಯಾಚು ಅಂತಿದ್ದು ಅದರಲ್ಲಿ ಸಾವಿನ ಗೀಜಗನ ಹಕ್ಕಿ ಗೂಡುಕಟ್ಟಿ, ಆ ಲಾಂಟೀನ ಕತ್ಲ ಬೆಳಕು ಅಲ್ಲಾಡ್ತ ತಳ್ಯಾಡ್ತ ಅಲ್ಲಿಗ ಬಂದು ಬಿದ್ದಾಂಗ ಆ ಕಣ್ಣಗುಡ್ಡೆಗಳ ಮ್ಯಾಲಿಂದ ಆ ಸಾವಿನ ಎದ್ದು ಬಂದು ನೆಗೆಯಾಡಿಸುವಂತಾಗುತ್ತಿತ್ತು.

ಅಂಯ್ತಾ ಸೋಮಪ್ಪಗ ನಿದ್ರಂ ತುಂಬಲು, ಅವರ ವಯ್ಸುನಾಗಿದ್ರಂ ದೇಹವ ಹೊರಲಾರದೆ ಹೊತಲ್ತ ಹೋಗುತ್ತಿದ್ರಂ ಅವರ ಜೀವಾತ್ಮನು 'ಉಸ್ಸೋ' ಎಂದು ಎದ್ದುಂಕೂತು ಸುಸ್ತಾರಿಸಿಕೊಳ್ಳತೊಡಗಿತು.

ಈ ರೀತಿಂಯಾಗಿ ಪಸುಪಕ್ಷಿಂಯಾದಿಂಯಾಗಿ ನರಮನುಸರನ್ನೆಲ್ಲ ನಿದ್ರಾಂವ ಆವರಿಸಿರಲು, ಆಗ ಸೋಮಪ್ಪರು ಮಲುಗಿದ್ರಂ ಮಂಚಾವ ವಂಯ್ತಾದ ಸಾಂಯ್ಯಸಾನಿ ಮಾಡುವೋಪಾದಿ ವಂಯ್ತಾಕರದಲ ತಲ್ಲ ಎತ್ತಿ ಒಂದ್ಸಲ ನೋಡಿತು. ಸುಸ್ತಾರಿಸ್ತಿರೋ ಜೀವಾತ್ಮನ ಕಂಡು, ಊಾ ಕಳಕ ಒಬ್ಬರು ಆದರು ಅಂದುಕೊಂಡು ಸಂತೋಸವಾಗಿ ಹೇಳತೊಡಗಿತು:

" ಒಂದ್ಸಲ ಂಯ್ತಾನಾಂವಯ್ತು... ನಂ ದೇಸಂ ಮಾರಾಜುರ್ರ ಹೀಗೆ ನೋಡಾಕ ಅಂತ ಪಕ್ಕದ ದೇಸಂ ರಾಜ್ಯಕ ಪೋಂಯ್ತಾರ. ಈ ರಾಜ್ಯದ ಅರ್ಮನ ಹೆಂಗಿದ್ದುಂದು ತಾಡೂ ಪಸಿ ನೋಡಾವ ಅಂದ್ಕಬುಟ್ಟು ನಂ ಮಾರಾಜುರ್ರ ಒಕ್ಕಡೆಯಿಂದ ನೋಡ್ಕಂಡ ನೋಡ್ಕಂಡು ಬತ್ತಾ ಇರಬೇಕಾರ, ಆ ಅಂತಾಪುರವಾಗಿದ್ರಂ ಅಂತಪುರಕ್ಕೆಲ್ಲಾ ಕಳಸದ ಥರಾಗಿ ಇದ್ರಂಥ ಒಂದು ಮಂಚಾವ ಅವರ ಕಣ್ಣುಗ ಬಿತ್ತು.

ಆ ಮಂಚ್ಕ ನೆಟ್ಟ ಕಣ್ಣ ಕೀಳಂನೆಂಯ್ತು, ನಮ್ಮ ದೇಸಂ ಮಾರಾಜುರ್ರ – ಎಲಾ ನಾ ನೋಡುದ್ರ ಇಲ್ಲುಗ ಹೆಣ್ಣುಗ ಬಂದಿರೋದು. ಈ ಅರ್ಮನ ಹೆಣ್ಣ ನಮ ಅರ್ಮನಾಗ ಬಂದ್ರ, ನಮ್ ಅರ್ಮನಲೂ ಇಂಥ ಒಂದು ಮಂಚ ಇರಿಂದ್ರ ಅಪ್ಪ ಮರಿಗಳಾ... ಅಂಬೋ ಚಿಂತವ ಅವರ ಎದ ಒಳಕ ನುಗ್ಗಿ ಒಕ್ಕಡಿಯಿಂದ ನುಡ್ತಾ ಬತ್ತಿರಬೇಕಾರ,

ಆಗ ನಮ್ ರಾಜುರ್ರ ಏನಾಕ್ಕಡಂರು... ತಮ್ಮ ರಾಜ್ಯಕ ಬಂದ್ರು. ಬಂದವರು, ದೇಸದಲ್ಲಿರೋ ಓಜಪ್ಪಗಳನ್ನೆಲ್ಲಾ ಕರಸ್ಕಂಡು ಪರೀಕ್ಷೆ ಏಳ್ಜನ ಇರ್ಪ್ಗಂಡು ಅವರ್ಗ ಆಳ್ಕ ಕೊಟ್ಟು "ನೋಡ್ರಯ್ಯಾ ಓಜಪ್ಪಗಳಾ... ನೀವ್ಗಳು ಈಗಾನೆ ಉತ್ತಮವಾದ ಮರ ಕಡ್ಕಂಡು, ಅದ್ರ ಕೆತ್ಬ ತಕ್ಕಂಡೂ ಆ ಕೆಚ್ಚಲ್ಲಿ ಆ ಪರರಾಜ್ಯದ ಮಂಚ ಇದ್ದೆಂಯ್ಲಾ... ಪಸಿ ಅದಕ್ಕಿಂತಾ ಪ್ಯನಾಗಿಂಯ್ತು ಒಂದು ಮಂಚ್ವ ಮಾಡ್ಕೊಡಿ ನಮ್ಗ" ಅಂತ ಅಪ್ಪಣಿಂಯ್ತು ಮಾಡಂರು.

ಆ ಉಬ್ಬುಬಟ್ಟೇಲಿ ಓಜಪ್ಪಗಳು ಗರುಗ್ಗ ಉಳಿ ಇಟ್ಕೊಂಡು ಹೊರಟು, ಮೂರು ತಿಂಗಾ ಮರಾ ಹುಡಿಕೀ, ಮೂರ ತಿಂಗಾ ಆ ಮರಂ ಕಡ ತಗೂಂ ನಯಸ್ತ್ಯಾಡೀ ಮೂರ ತಿಂಗಕಾಲ ಚಿತ್ತಾರಂ ಗೆಯುಂ ಗೆಯ್ಕ್ ಮಾಡೀ ಗೊಂಬ ಕಂಡಂಗ ಮಾಡಿ ಇರುಸುದ್ರು, ನಂಗ···" ಎಂದು ಮಂಚಾ ಮಾತು ನಿಲ್ಸಿ ತನ್ನ ಚಿಕ್ಕ ವಯಸ್ಸಿನ ಐಭೋಗವ ಕಣ್ಣುಂಗ ಕಟ್ಗಂಡು ಅದ ನೋಡ್ತಾ, ನೋಡ್ತಾ, ಅದೇ ಕಣ್ಣುಂಗ ಕಟ್ಗಂಡು ನೋಡ್ತಾ, ತನ್ನನೇ ಮರ್ತು, ಮರ್ತೇಹೋಯ್ತು.

ಮಂಚದ ಕಡೆಯಿಂದ ಮಾತು ನಿಂತೊಯ್ತಲೆ, ಆ ಮಾತಿನೊಳಗ ತನ್ನ ಮರೆಯೂತಿದಂ ಜೀವಾತ್ಮನಿಗ ಪಿಚ್ಚನಸಿ "ಈಗೂಲ್ಲನು ನಿಂಗ ಮದ್ದ ಮಾಡಿ ಕಳಿಸಂಗಿಯು ಇದಯೀಕಣಾ··· ಮುಂದ್ಕ ಯಾನಾಯ್ತು···?" ಅಂತು. ಆಗ ಮಂಚಕ ಎಚ್ಚರ ಆಗಿ ಅಯ್ಯೋಕೀ ಅಂತ ಆರಂಭಿಸಿತು:

"ಅಯ್ಯೋಕೀ··· ಯಾನ ಈಗ ಇರಾದು ನಾನು? ಅಯ್ಯೋಕೀ ನನ್ನಪ್ಪಾ··· ಆಗ ನೋಡಬೇಕಿತ್ತು ನನ್ನ. ನನ್ನ ನೋಡಾಕ ಅಂತಿಲ್ಲಿಯು ಎಸ್ಟೋ ದೇಸಂ ರಾಜ್ರು ಬರೋರು. ಬರೋರು ಎಸ್ಟ ಜನೋ, ಹೋಗವರು ಎಸ್ಟ ಜನೋ. ಆಗ ಈ ನನ್ನ ಮಯ್ಮೇಲ ಒಂದು ಕೊಳೆ ಅನ್ನೋದು ಇತ್ತ? ಒಂದು ಗಲೀಜು ಅನ್ನೋದು ಇತ್ತ? ವಜ್ರನ ವಸ ರೇಸ್ತ ಬಟ್ಟರಿಯು ನಂಗ ಒರುಸ್ತ ಇದ್ದೊಂದು. ಒಂದ್ಸಲ ಒರುಸಮ್ಯಾಕಿಲ ಅದ್ರಲ್ಲಿ ಇನ್ನೊಂದು ಸಲ ಒರುಸ್ತ ಇರ್ಲಿಲ್ಲನಂಗ. ಆ ಬಟ್ಟ ಎಸೆಂಬುಡರು ಅತ್ತಗ. ಅಮೇಕಾ, ದಿನಬುಟ ದಿನಾ ಪುನುಗು ಕಸ್ತೂರಕ ಲೇಪ್ಪರೂ···

ಬಾಳಾಟ್ದ ಹಿಂಗ ಮಾಡಯವಳಾಗ, ಗ್ರಾಚಾರ ಅನ್ನೋದು ಗುದಂಕ ಬಂದ್ರು, ನೋಡಿ ಎಲ್ಲಿಗ ತಂದಿಟ್ತದ. ಈಗ ನನ್ನ ತುಳ್ಕಂದು ಓಡಾಡವರು ಅದೆಷ್ಟು ಜನೋ! ಅದಿಲ್ಲ, ಬತ್ತಾ ಅನ್ನಂಗಿಲ್ಲ; ಜೋಳರಾಗೀ ಅನ್ನಂಗಿಲ್ಲ; ಹುಳಿ ಅನ್ನಂಗಿಲ್ಲಾ··· ಅದೂ ಇರ್ಲಿ, ಕೊನಾಗ ದನ ತಿನ್ನೋ ನೆತ್ತಸದ ಅನ್ನಂಗಿಲ್ಲಾ··· ಎಲ್ಲಾನುವಿ ನನ್ನೇಲ ಚೆಲ್ಲಾಡಿ ಚದುರಾಡಿ ಈ ರೂಪಗ ತಂದಿಟ್ರಲ್ಲಾ··· ಇಂಥಾ ಕಡ ನಾ ಇರ್ಬೇಕಲ್ಲಾ··· ನಾ ಇರಬೌದ? ಅದೇನ ಪಾಪ ಮಾಡಿರದು ನಾನು··· ?"

ಅನ್ನುವಷ್ಟರಕ್ಕ ಮಾತಗ ಮೊದ್ಲು ದುಕ್ಕವೇ ಉಕ್ಕಲು, ಅಲ್ಲಿಗ ನಿಲ್ತಿತು.

ಮುಂದಿನ ಕಥಾ ಅನುಸರಿಸಿದಂ ಆ ಜೀವಾತ್ಮನು, ಸೋಮಪ್ಪನ ಘಟವನ್ನು ಸೇರುವುದಕ್ಕೂ ಮೊದಲಾಗಿ, ಸೋಮಪ್ಪನ ತಂದೆ ಯಮಾಡನು. ಯಮಾಡನ ತಾಯಿ ಅಕ್ಕಮಾದೇವಮ್ಮನು. ಗಂಡನ ತಿಥಿಯಾದ ಮಾರನೆ ತೌರಿಗೆ ದೌಡಾಯಿಸಿದಂ ಅಕ್ಕಮಾದೇವಮ್ಮನು, ಅನುವಾರಾಮ ಬಳಿಕ ಅಪ್ಪ ಸತ್ತ ಹನ್ನೆರಡು ತಿಂಗಳಿಗೆ ಹುಟ್ಟಿ ಜೀತಗಾರನ ಹುಟ್ಟಿದವನೆಂಬ ಅಪವಾದದ ತನ್ನ ಕುಡಿ ಯಮಾಡನೊಡನೆ ಗಂಡನ ಮನೆಗೆ ಘಾಂಗಾಗಿ ಬಂದಾಗ ಏನಾಯಿತು,'

ಸೋಮಪ್ಪನ ತಂದೆಯಾದ ಈ ಯಮಾಡಕಂದನು, ಹೊಸ ಬಟ್ಟೆ ಹಾಕ್ಕೊಂಡಿದ್ದರೂ ಸಾಕ್ಷತ ಕೋತಿಮರಿಯಂತೆ ತಾಯಿ ಸೊಂಟಕ್ಕೆ ಬಿಕ್ಕೊಂಡಿದ್ದನು. ಆ ತಾಯಿ, ಆ ಅಕ್ಕಮಾದೇವಮ್ಮನ ಇನ್ನೊಂದು ಕೈಯಿ ಬಿದುರಬುಟ್ಟಿಯೊಂದು ಇದ್ದು ಬೆವರು ವರಿಸಿಕೊಳ್ಳಲೂ ಆಗದವಳಾಗಿ ಬಂದವಳು ಪುರಾಣ ಹೇಳೋ ಬಸಪ್ಪಸೋಮಿಯವರ ಹಟ್ಟೀ ಹಜಾರದಲ್ಲಿ ಭಾರಗಳ ಇಳಿಸಿ ಕುಂತವಳು ಮಯ್ಯಿ ಬೆವರು ಜಲವ ಬಳಿದು ಚೆಲ್ಲಿ ಉಸುರಾಡಿದಳು.

ಆ ಒಳಗಿದ್ದ ಬಸಪ್ಪಸೋಮಿಯವರ ಮೊಕಮೋರೆ ಕಯ್ಯಿಕಾಲು ಹೊಟ್ಟೆ ಹೀಗೆಯೇ ಎಲ್ಲಂದರಲ್ಲಿ ಅಲ್ಲಲ್ಲಿ ಮಲಾಡುತ್ತಿದ್ದ ಸುಕ್ಕುಗಳ ಮುಚ್ಚುತ ಈ ಭೂತಿಮಯವಾದ ಆ ದೇಹವು ಪುರಾಣ ಓದುತ್ತಿದ್ದುದು ಬಂದು ಕುಂತವಳ ಒಂದ್ಸಲ ಕಣ್ಣೆತ್ತಿ ನೋಡಲಾಗಿ ಸರ್ವಾ ಅನುವಾಯಿತು. ಮೊಕ್ಕ, ಕಣ್ಣು ಮೀಸೆಯಿಂದ ಮಾಡ್ಕೊಂಡಿದ್ದ ತಮ್ಮ ಸಿದ್ದಾರನು ಕಯ್ಯಿಕಾಲು ಎರಡಲ್ಲು ಹಾಗೆ ವನೆಯುತ್ತಿದ್ದವನು, ಈ ಬಂದು ಕುಂತವಳ ನೋಡಲು ಅವನ ತುಟಿ ಮೀಸೆಗಳು, ತಮ್ಮಟ ಮುಂದ ಐಕಳು ಕುಣೀವಂತೆ ಕುಣಿತೊಡಗಿದವು.

ಆಗ, ಆಗ್ಗ ಬಸಪ್ಪಸೋಮಿಯವರು ಸಮಾಧಾನದಿಂದ ನಡುಮನೆದಿಕ್ಕ ನೋಡಲು, ಆ ಬಂದು ಕುಂತವಳನ್ನು ಕಣ್ಣು ತಿಂತಿದ್ದ ಮಕ್ಕಳ ಫಲವಿಲ್ಲದ ಮುಪ್ಪಾದುತ್ತಿದ್ದ ಅವರ ಹೆಂಡ್ತಿಯು ನಡುಮನೆ ನುಗ್ಗಿ ದಾರಂದ್ಕ ಮರೆಯಿಕೊಂಡಳು. ಆಗ, ತಮ್ಮ ಸಿದ್ದಾರನು ಕಿರುಮನೆದಿಕ್ಕ ನೋಡಲು, ವಸ್ತ್ರಲಗಂಟದಂ ಅವನ ಹೆಂಡ್ತಿಯು ತನ್ನ ಕಾಲ್ಬಳಿ ಕಯ್ಯಬಳಿ ಇದ್ದಂಥ ಐಕಳನ್ನೆಲ್ಲವ ತವಕದೆ ಒಳನೆಳೆದುಕೊಂಡು ದಾರಂದ್ಕ ಮರೆಯ್ದಂತೆ ಮಾಡಿದಳು.

ಆ ಬರೋ ಅಕ್ಕಮಾದೇವಮ್ಮನ ಕಂಡೂ, ಇದಾರು ಇವಳು ಈ ಪ್ರಕಾರವಾಗಿ ಉರುಬಿನುಲಲ್ಲಿ ಬಿಳಿಸೀರೆ ಉಟ್ಕಂಡೂ, ಕುಂಕುಮ ಇಲ್ಲದ ಹಣೇಲೀ, ಬಳೆ ಇಲ್ಲದ ಕಯ್ಯಲೀ,

ಕಂಕುಳಲ್ಲಿ ಕಂದನ ತತ್ಗಂಡು ಊರ್ಗ ಬರುವಂತ ವಳಾದುಳು — ಎಂದವಳ ಅನುಸರಿಸಿ, ಗಂಡು ಹೆಣ್ಣಾದಿ ಆಬಾಲವೃದ್ಧರು ಬಸಪ್ಪಸ್ವಾಮಿಯವರ ದುಸಿಗೆ ಸಿಕ್ಕದಂತೆ ಆ ಬಾಗಲು ಒಂದು ಜಾಥಾ ಉಳಿದಲ್ಲಿ ಕರಿಮಣೀ ಸರವ ಪೋಣಿಸಿದಂತಾದರು.

ಬಸಪ್ಪಸ್ವಾಮಿಯವರು, ತಮ್ಮ ತನುಮನಧನವ ಪುರಾಣ ಪುಸ್ತಕದೊಳಗ ನೆಟ್ಟು ತಲ ಎತ್ತದೆ ಕುಂತವರು, ಗಳಿಗ ಕೂಡಿಬರಲು, ತಲೆ ಎತ್ತದೆ — "ಯಾರಮ್ಮ ತಾಯೀ ನೀನೂ? ಅಪರಿಚಿತಳಾದ ನೀನು ಬರಲು ಕಾರಣವೇನು?" ಎಂದರು. ಅಲ್ಲಿ ಉಸುರಾಡದೆ ಬಗಿಯುತ್ತಿದ್ದಂ ಗಾಳಿಯುಂದಾಗಿ ಅಕ್ಕಮಹಾದೇವಮ್ಮಗ ಅವರು ಅಷ್ಟು ಮಾತಾಡಿದ್ದೇ ಪುಣ್ಯವ ಅನಿಸಿ " ನಾನುಕನ್ನೀ ಭಾವಯ್ಯನೋರೇ... ನಿಮ್ಮ ಪಾದದ ಧೂಳು..." ಅಂದಳು. ಆ ಯಾವ ಒಂದು ಗೆರೆಯೂ ಏರುಪಾರಾಗದ ಬಸಪ್ಪಸ್ವಾಮಿಯವರ ದನಿಯು "ಭಾವಯ್ಯ ಅನ್ನುವ ಆ ಒಂದು ವಾಕ್ಯ ಬಿಟ್ಟು ಬೇರೆ ಏನಾರೂ ಇದ್ದಲ್ಲಿ ಹೇಳು..." ಅಂದಿತು.

ಅದೊಂದು ಬಿಟ್ಟು ಅಕ್ಕಮಹಾದೇವಮ್ಮ ತಾನು ಏನುತಾನೇ ಹೇಳ್ಯಾಳು. ರೋಧನಾರಾಗದಲ್ಲಿ— "ಅಪ್ಪ ಅವ್ವ ಇರಗಂಟಾ ನೋಡ್ಕೊಂಡಂಥಾ ಬಳಗ ಅಂಬೋದು, ಅಪ್ಪ ಅವ್ವ ಸತ್ತಮ್ಯಾಕ ಬೀದೀಗ ತಳ್ಳಿಂದಾ..." ಹಾಡಿದಳು. ನಾಕಾ ಕಡೆಗೂ ಯಾಡನು ಪೆಕರಾಗಿ ನೋಡತೊಡಗಿತು.

ಅಕ್ಕಮಹಾದೇವಮ್ಮನು ಹಾಡೀಪಾಡಿ ಅವಳಾಗಿದ್ದಂ ಅವಳು ನಿಲ್ಲುವವರೆಗೂ ತಾಳ್ಮೆಲಿ ಬಸಪ್ಪಸ್ವಾಮಿಯವರು ಕಾದು " ಶರಿಯಮ್ಮ. ಅವರು ಮಾಡಿದ್ದಂ ಶರಿ; ನೀ ಇನ್ನು ಹೊರಡಬಹುದು..." ಅಂದರು. ಅದಕ್ಕೆ ಅಕ್ಕಮಹಾದೇವಮ್ಮ "ಆಯ್ತೋಕೀ ಇನ ನಾನೆಲ್ಲಿಗ ವಾಗ್ಲಿ ಬಾವಯ್ಯೋರೇ... ಇನ್ನು ನಿಂ ಪಾದ ತೊಳೆಂ ನೀರ್ನ ಕುಡ್ಕೊಂಡೂ... ನನ ಗಂಡನ್ನ ಯಾನು ಹೇಳ್ಕೊಂಡೂ..." ಅಂತಿರಲು, ನಿಲ್ಲುವದಿಲ್ಲವೆಂದರಿತ ಬಸಪ್ಪಸ್ವಾಮಿಯವರು ತಡೆದು " ನಿಲ್ಲಮ್ಮ, ಗಂಡ ಅನ್ನುವಂತ ಶಬುದವ ಉಚ್ಚಾರವ ಮಾಡಬಾರದವಳು ನೀನು. ತಿಥಿ ಆದಾಗಲೇ ಅದು ಅಲ್ಲಿಗೆ ತೀರಿತು. ತೀರಿದಂಥದು ಇನ್ನು ಕೂಡದು. ಇನ್ನು ನೀನು ಹೊರಡಬಹುದು" ಎಂದು ಕಡಾಂಗಿ ನುಡಿದರು. ಹಾಗೂ ಅಕ್ಕಮಹಾದೇವಮ್ಮ ಬಾಯಿಂಗೆಯಲು ತಲ ಎತ್ತಾ ನೋಡದಂಥ ಆ ಬಸಪ್ಪಸ್ವಾಮಿ ದನಿಯು ಒಂದು ಗೇಡ ಹೆಚ್ಚಿಸಿಕೊಂಡು " ಇನ್ನು ನೀನು ಮಾತಾಡಕೂಡದು. ನಮ್ಮ ಕಣ್ಣುಗಳ ಮುಂದೆ ಇರಕೂಡದು" ಎಂದಿತು.

ಅಕ್ಕಮಾದೇವಮ್ಮಗ ಬಾಯಿ ನಿಂತಿತು. ಕಿರುಮನಲಿ ಐಕಳ ಬಾಯಿಗ ಬೆಲ್ಲ ಚೀಪುಸ್ತ ಹಜಾರದಲ್ಲಾಗುವುದ ಮುಚ್ಚಿದ ದಾರಂದದಲ್ಲೂ ಕಾಣ್ತ ಸಿದ್ರಾಂಗನ ಹೆತ್ತ ಇದ್ದಳು. ಸಿದ್ರಾಂಗನ ತಲೆ ವಿಲೀನದಂತೆ ಅವನ ಕಾಲುಕಯೊಕ್ಕಡೆ ಹಿಡುದಿದ್ದ ಹಗ್ಗದುರಿಯೂ ಈಗ ತಂತಾನೆ ಕುಣಿಯುತ್ತಿತ್ತು. ಕಾದು ಅಕ್ಕಮಾದೇವಮ್ಮನು ತನ್ನೆಡೂ ಕಯ್ಯ ಜೋಡಿಸ್ಕೊಂಡು ಭಾವನವರ ಪಾದ್ದ ಹಿಡಿಯಲು ಎದ್ದಳು. ಕಣ್ಣಿದ್ದಯೂ ಕಾಣುವುದ ಸಿದ್ದಿಸಿಕೊಂಡಿದ್ದ ಬಸಪ್ಪಸೋಮಿಯವರಿಗೆ ಅದು ಅರಿವಾಗಿ, ತಮ್ಮ ಪಾದಗಳ ಒಳಕ್ಕೆಳೆದು ಸಿಗದಂತೆ ಅನುಸರಿಸಿ ಕೂತು "ನಮ್ಮ ಕಣ್ಣುಗಳ ಮುಂದೆ ನೀನು ಇನ್ನು ಇರಕೂಡದು" ಅಂದರು.

ಎದ್ದಂಥ ಮಾದೇವಮ್ಮನು ಆಗ ಕೂತಲಾ, " ಅಯ್ಯೋ ಸಿವ್ನೇ" ಅಂದು, "ನಾ ಯಾನಪ್ಪ ಮಾಡಿಲ್ಲೀ" ಅಂದು, " ಸಿವ್ನಗ ಸಮಾನರಾದ ನಂ ಭಾವಯ್ಯರ ಕಣ್ಣಿಂದ ಇರಬಾರದಂಥ ಕೆಲಸ್ವ ನಾ ಯಾನಪ್ಪ ಮಾಡೀವ್ನಿ ದೇವ್ರೇ...?" ಅಂದು, " ಇಂಥಾದ್ದು ಅಂತ ಯಾರಾರು ಒಂದ ಜಾಜಿ ಮೊನದಷ್ಟು ತೋರಿಸುದ್ರೂ ನೆತ್ತ ಕೆರಬಾವಿ ನೋಡ್ತೀನಿ" ಅಂದು ಅಂದೂ ಆಗ ಅದಕ ಬಸಪ್ಪಸೋಮಿಯವರ ದನಿಯು ಇನ್ನೂ ಒಂದು ಗೆರವ ಹೆಚ್ಚಿ " ನಮ್ಮ ಬಾಯಿಂದ ಕೆಟ್ಟ ಮಾತುಗಳನ್ನ ನೀನು ಆಡಿಸಬಾರದಮ್ಮ. ಗಂಡ ಸತ್ತ ಹನ್ನೆರಡನೆ ತಿಂಗಳಿಗೆ ಯಾರಿಗಾದರೂ ಎಲ್ಲಾದರೂ ಈ ನರಲೋಕದ ರೂಢಾವಳಿಯಲ್ಲಿ ಮಕ್ಕಳಾಗಿರುವಂಥ ಪ್ರಸಂಗ ಏನಾರು ಇದ್ರಲ್ಲಿ ಅದನ್ನ ನಮಗೆ ತೋರಿಸಿ ನೀನು ಬರುವಂತವಳಾಗು. ಈಗ ನಡೆಯಾಚೆ" ಎಂದಿತು.

ಮಾತುಗಳು ಬಾಣವಾಗಿ ಬಂದು ಇರಿಯುತ್ತಿರಲಾಗ ಅಕ್ಕಮಾದೇವಮ್ಮನು ನೆಲದ ಮ್ಯಾಕಲ ಕುಸುಬಿದ್ದು ಆ ಇದ್ದಷ್ಟು ಜಾಗದಲ್ಲೇ ಒದ್ದಾಡಿ ಹೊರಳಾಡ್ತ " ಸಿವಸಿವಾ... ಈ ನನ ಕಿವಿಯಾರ ಕೇಳಬೇಕಾಯ್ತಲ್ಲಪ್ಪ ಸಿವಾ ಇದಾ. ಅಯ್ಯೋ ಸಿವಾ... ಎಲ್ಲಾದ್ರೂ ನಾ ಅಂಥನ್ಲ ಭಾವಯ್ಯನೋರೇ...? ನನ ಕಣ್ಣಾಣು.. ನಿಮ್ ಪಾದದಾಣು... ನನೊಳಗ ಸತ್ಯ ಅನ್ನೋದು ಇಲ್ಲದಿದ್ರ ನನ ಸತ್ತಿರೋ ಗಂಡ ಬಂದು ಈಗ ನನ್ನ ಮುರ್ಕ್ಲಿ ಬೇಕಾ.

ಎಲಬೇಕಾರ ಬೆಂಕಿಕೆಂಡಂ ಅಂಗೈಯ ಇಟ್ಗೊಂಡು ಆಣಬಾಸ ಮಾಡ್ತೇನಿ. ಇಂಥ ದೇವ್ರಂಥ
ನಿಮ್ಮ ಬಾಯಿಂದ್ಲೂನು ಕೇಳ್ಬೇಕಾರ ಹೋದ ಜಲ್ಮದಲ್ಲಿ ನಾನು ಎಂಥಾ ಘೋರಪಾಪಂ
ಮಾಡಿದ್ನೋ. ಅಯ್ಯೋ ಸಿವ್ನೇ... ನಿನ ಹೆಡ್ತಿ ಮುಂಡ್ಯಾಗ, ನೋಡ್ತಾ, ನೀನೂ
ಸುಮ್ಕಂತ ಇದೀಯಲ್ಲಪ್ಪಾ... ಬೇಕಾರ ಈಗ್ಲೇ..." ರಾಗಕ್ಕೆ ತಾಳಲಾರದೆ
ಬಸಪ್ಪಸ್ವಾಮಿಯವರು "ಮುಚಬಾಯಿ" ಅಂದರು.

ತಲೆ ಎತ್ತದ ಬಸಪ್ಪಸ್ವಾಮಿಯವರ ಕಣ್ಣಿಂದಿದಂ ಪುರಾಣಪುಸ್ತಕದೊಳಗ ಈ ಮಾಯಾವಿನಿಯು
ಮೂಡುತ ಸೃಷ್ಟಿಕರ್ತನಿಂದಲೂ ಅಸಾಧ್ಯವಾದ ಕಾಲವನ್ನು ಹಿಂದೂಮುಂದೂ ಮಾಡ್ತ, ಆಡುತ
ಗೋಚರಿಸುತ್ತಲಿದ್ದಳು. ದೃಷ್ಟಿಸಿ ಸುಟ್ಟುಬಿಡಬೇಕೆನ್ನಿಸುತ್ತಿರುವಾಗ, ನಡುಮನೆಯಿಂದ
ಅವರ ಹೆಡ್ತಿ ದನಿಯು "ಐ, ಆದ್ಯಾಕ ನೀವು, ಅವ್ಳ ನೋಡ್ತ ಪುರಾಣ ಮಾಡ್ತೇರದು ಇನ್ನೇನಿ
ನೀವಾ..." ಅಂದಿತು. ಹೆಡ್ತಿ ಮಾತಿಗೆ ಬಸಪ್ಪಸ್ವಾಮಿಯವರು " ನನಗೆ ಹೇಳಲು ಬರಲು
ಮೂರು ಕಾಶಿನ ಹೆಣ್ಣಾದ ನೀನು ಎಷ್ಟು ಮಾತ್ರದವಳು!" ಎಂದರು. ಆ ದನಿ ಆ ಕಡ ನಿಂತಿತು.
ಕಿರುಮನೆಯು ಕಿವಿಯಾಗಿತ್ತು.

ಈ ಕಡ ಅಕ್ಕಮಾದೇವಮ್ಮನು, ತನ್ನ ಬಾಯಿಯಿಂದಿದ್ದಂದೂ ಹಸೆಯ ದಾಟ್ತ, ನೆಲವ ತನ್ನೇಡೂ
ಬೋಳುಕೈಲು ತಾರುಸ್ತ, ಆ ಸದುಂಪದಿಂದಲೇ ಮಾತು ಮಾಡಲು ತೊಡಗಿದಳು.

ತಾಳದ ಬಸಪ್ಪಸ್ವಾಮಿಯವರಾಗ "ತಮ್ಮಾ" ಎಂದರು. ಈಗ ದೇಹವಿದ್ದೀ ಕುಣಿಸುತಲಿದ್ದ
ಸಿದ್ದಾಂರನು "ಅಣ್ಣಾ" ಅಂದನು. ಬಸಪ್ಪಸ್ವಾಮಿಯವರು " ಏನು ಮಾಡುವುದಪ್ಪ?"
ಎಂದರು. ಸಿದ್ದಾಂದನು ಕುಂತಲ್ಲೇ ಕುಣೀತಿದ್ದವನು ರೌದ್ರಾವೇಶ ತಾಳಿ ಎದ್ದು " ನೀನು
ಪುರಾಣ ಓತ್ತಿರು" ಎಂದವನೆ, ಅಕ್ಕಮಾದೇವಮ್ಮನಲ್ಲಿಗ ನೆಗೆದು ಬಂದು, ಆ ಅವಳ ಹೊಟ್ಟೆಕಳ್ಳುವ
ಕಲ್ಪಿಕೊಳ್ಳಂತೆ ಒಂದ್ಸಲ ಜಾಡಿಸ್ಸಿದವನು. ಆಗ ನೆಲಕ ಅಪ್ಪಳಿಸಿದಂತಾದ ಅವಳ ಜಿಲ್ಲದಂ ಮುಂದಲೆ
ಕೂದಲ ತನ್ನ ಕೈಮುಷ್ಟಿಗ ಸೇರಿಸಿ ಗಟ್ಟಿಕೊಳ್ಳುವಷ್ಟರಲ್ಲಿ ಆ ಅವಳ ಆ ದೇಹದಲ್ಲಿದ್ದ
ಆ ಜೀವವು ತನ್ನ ಸ್ವಾಧೀನ ಕಳಕೊಂಡಿತು. ಕಿತ್ತರೂ ಬಾರದನು ಹೊಟ್ಟೆಗಿದ್ದಂತೆ
ಅವ್ಳಗ ಆಯಿತು. ಆಗಲೇಗ ಬಸಪ್ಪಸ್ವಾಮಿಯವರು ತಲೆ ಎತ್ತಿ ಕಣ್ಣುಗಳ ಬಿಟ್ಟರು.

ಆ ಸಿದ್ದೋಂಗನು ಮುಷ್ಟಿ ಎಳೆದಾಗ, ಆ ಮುಷ್ಟಿಗೆ ಗಂಟಾಕಿಕೊಂಡಿದ್ದ ಅಕ್ಕಮಾದೇವಮ್ಮನೂ ಅವಳಿಗಂಟಿದ್ದ ಯೋಧನೂ ಒಟ್ಟಿಗೇನೆ ಮಾಯದೂರ ಜಿಗಿಯುತ್ತಿದ್ದರು. ಅವಳ ಗಂಟುಮುಖಕ್ಕೆ ಒದ್ದರೆ ಅದು ಹತ್ತಾಳು ದೂರ ನೆಗೆದು ಬೀಳುತ್ತಿತ್ತು. ಸುತ್ತಿದ್ದ ಜನವು ಅದಾವ ಮಾಯದಲ್ಲೋ ಮಾಯವಾಗಿ ಹೋಗಿತ್ತು.

ಆಗ ಬೇದೀಯು ತನ್ನನ್ನು ಕುಗ್ಗಿಸಿಕೊಂಡಿತು. ಆಗ ಗೋಮಾಳವು ಬಂತು. ಆಗ ಅಲ್ಲಿ ಸಿದ್ದೋಂಗನು ತನ್ನ ಮುಷ್ಟಿಯು ಬಲವಾಗಿ ಮೇಲೆತ್ತಿ ಒಂದ್ಸಲಕ ಆ ಬಲಬುಟ್ಟ ಕೆಳಕ ಕುಕ್ಕರಿಸಿದನು. ಆಗ ಕೆಳಗ ನೋಡಿದನು. ಆಗ ಅವನ ಕಣ್ಣುಮುಂದಾರ ಇರುಂದೆಲ್ಲವು ಅರಜೀವವಾಗಿ ಬಿದ್ದಿತ್ತು.

ಹಾಗೂ ಹೋಗ್ತಾ ಬತ್ತಾ ಜೀವವಾಡುತ್ತಿದ್ದ ಅಕ್ಕಮಾದೇವಮ್ಮನ ಮೈಯ್ಗಂಟಿದ್ದ ಬೆಳ್ಳಕರಡಿಗವು ಬೆಳಕು ಹೀರ್ತ ಹೊಳೆಯುತ್ತಿರಲು, ಸಿದ್ದೋಂಗನ ಕೈಯು ಅದ ಕಿತ್ಗಂಡು, ಅಲ್ಲಿಂದ ತಿರುಗೂ ನೋಡದ ನಡೆದ, ಸಿದ್ದೋಂಗನು ಬಂದು ಅಣ್ಣನ ಪಾದಕ್ಕೆರಿಸಿದನು.

ಇತ್ತ ಕಿತ್ತೂ ಬಿದ್ದಿದ್ದ ಆ ಬಟ್ಟಬರಿಯಂತೆ ಬಿದ್ದಿದ್ದ ಆ ಅರಜೀವಾದೊ ಅಕ್ಕಮಾದೇವಮ್ಮ ಯೋಧರನ್ನು ಎಚ್ಚರವು ಎಸ್ಕೋ ಹೊತ್ತು ಕಳೆದ ತರ್ಲ್ತು. ಆಗ ಅಕ್ಕಮಾದೇವಮ್ಮನ ದೇಹದ ಬೆವರ ಜಲವು ಉಕ್ಕುತ್ತಿರಲು ಅವಳ ಸೊಂಟ ಬಿಗಿಹಿಡಿದ ಯೋಧನ ಕಯ್ಗಳೂ ಬೆವಾತು ಜಾರುತ್ತಿದ್ದವು. ಯೋಧ ಒಂದ್ಸಲ ಕಣ್ಣ ಅರಳಗುದು ಸುತ್ತಲ ಜನ್ನ ನೋಡಿ ಕಣ್ಣ ಮುಚ್ಚಿ ಆ ಮಾಕ್ಕಿಲ ಅರಗಣ್ಣ ತೆಗೆದೂ ಬಟ್ಟ ಮುಚ್ಚೀ ಈ ಪ್ರಕಾರ ಮಾಡುತಲಿತ್ತು.

ಅಸ್ತ್ಯಯಾದ ಅಳುವ ಅಳಲೂ ತ್ರಾಣವಿಲ್ಲದವಳಾಗಿ ಅಕ್ಕಮಾದೇವಮ್ಮನು, ಕಿತ್ತು ತೂರಾಡುತ್ತಿದ್ದ ತನ್ನವು ಕೂದಲುಗಳ ತನ್ನೆರಡು ಕಯ್ಗಳಿಂದಲೂ ಬಾಚಿಕೊಳ್ತಾ ಅದ ನೋಡ್ತಾ. ಅದ ನೋಡ್ತ ಗಾಳಿಗೂ ಜಾಗ ಕೊಡದ ಜನಕೂ ತೋರುಸ್ತಾ.

ಬೆಳಗಾಯ್ತು. ಅಕ್ಕಮಾದೇವಮ್ಮನು ಹೋಗಲು ಬಂದವಳಲ್ಲವಾದ್ದರಿಂದ, ಸಿದ್ದೋಂಗನು ಬಿಸುಳ ನೆಲದಲಿ ಅಂಟಿಕೊಂಡಳು.

ಅಂಯಾಕ, ಅಲ್ಲ ಯಾಡನು ಅರುವರುಪದವನಾಗಿದ್ದ ಕಾಲದಂತೆಯೇ ಈ ಕಾಲದಲ್ಲೂ ಈಗ ಹೊಲಗೇರಿಯಲ್ಲಿ ರಾತ್ರಿಲೆ ಉಂಡವರಿಗ ಬೆಳಗಿನ ಉಪಹಾರದಂತಲಾ, ರಾತ್ರಿಲೆ ಹೊಟ್ಟಿಗ ತಣ್ಣೀರಬಟ್ಟೆ ಕಟ್ಟಿದಂವರಿಗ ದೊಡ್ಡೋರ ಮನಿಯ ಮದುವ ಅನ್ನದಂತಲ, ರಂಜನೆಯು ಹಸಿವ ಮೆಟ್ಟಿ ನಿಲ್ಲುತ್ತಿತ್ತು. ಅಲ್ಲಿ ಗಂಡ ಕಿಟ್ಟಯ್ಯನು, ಮಡದಿದ ಬರ್ಕಟವಲು ಹೆಗಲಿ ಧರಿಸಿದವನಾಗಿ ಉಟ್ಟಿದ್ದ ಪಂಚೆ ಮಂಡಿಯಿಂದ ಮೇಲೆತ್ತಿ ಕಟ್ಟಿದವಾಗಿ ಬಾಗಲಾಡೆ ನಿಂತಿದ್ದಂತೆ. ಒಳಗ ರವಿಕಗ ಗುಂಡಿಹಾಕಿ, ಹೆತ್ತಿಯಾದ ಕೆಂಪಿಯೂ ಅವರೀರ್ವರ ನಡುವ ವಸ್ತ್ರಲೂ ಇತ್ತು. ಅವನು ಕಣ್ಣು ಮೆಡರಿಸುವನು ಆದರೆ ಇವಳು ಕಣ್ಣೆತ್ತಿ ನೋಡದ ನಲುವಾಗಿ ಅವ ಕಣ್ಣು ಮೆಡರಿಸಿಯೂ ಬಡಾವಾಗುತ್ತಿದ್ದ ಪುಣ್ಯವಂತನಾಗಿದ್ದನು.

ಈ ಕೊಸರಾಡುವ ಇದು ಯಾವುದೂ ಮದುವ ಶಾಸ್ತ್ರ ಸಂಬಂಧದಾಟದಂತಿದ್ದು ಜನರನ್ನ ಹಿಡುಂ, ಆ ತೊಪ್ಪ ಹೊತ್ತವರು ತೊಪ್ಪ ಹೊತಗಂಡು, ಈ ದನಕರು ಹಿಡುಂ ನಿಂತವರು ದನಕರು ಹಿಡ್ಕಂಡೂ ನಿಂತವರು ನಿಂತಲ್ಲಿ ಕುಂತವರು ಕುಂತಲ್ಲಿ ನಡೆಯುವವರು ನಡೆಯುದಂತ ಸೆರೆಯಾಗಿದ್ದರು. ಕೊನಗ ನಿಂತಿದ್ದ ಗಂಡನಾದ ಕಿಟ್ಟಯ್ಯನು ಪಂಚ ಕೊಳ ಆಗದಂತೆ ಅನುಸರಿಸಿ ಅಲ್ಲೆ ಕುಕ್ಕರಗಾಲಲಿ ಕೂತು "ಅಮ್ಮ ಬಮ್ಮ ಹೆಣ್ಣು" ಎಂಬುದ ಇವ, " ಬತ್ತೀನಿಕನ ನಡಾ" ಅಂಬುದ ಅವಳು ಹಿಡ್ಕಂಡು ಎಳೆದಾಡಕೊಡಗಿದರು.

ತೂರಮ್ಮನು ಅಳುದೂ ಸುರುದೂ ತೂರಿ ನೋಡಿ ಕೊನಗ, ತನ್ನ ಕಣ್ಣುಕಿತ್ತು ಕೊಡುವಂತೆ ಮಗಳು ಕೆಂಪೀಯ ಅಣೆಯಾಗಿ ಅಜ್ಗಟ್ಟಿದ್ದ ಚೆಲುವನ್ನ ಒಳ್ಳೆ ಯಾಪಾರಸ್ಥಗಾರನಿಗೇ ಧಾರ ಎರದಿದ್ದಳು. ಕೆಂಪಿ ಗಂಡನಾದ ಸಂಭಾವಸ್ಥಗಾರ ಕಿಟ್ಟಯ್ಯನು ಸಾವಾರರು ಇಟ್ಟುಕೊಳ್ಳುವಂತ ಒಂದು ಸ್ಟೈಲನ್ನೂ ಅದಕ್ಕೂ ಒಂದು ಪಂಪನ್ನ ಇಟ್ಟುಗೊಂಡು, ಒಂದಲ್ಲಾ ಅಂತ ಏಡು ಜೊಗ ದಪ್ಪ ಬಸೀನೂ ಜೊತಗ ಪಂಚ ಟವಲೂ ಉಳ್ಳವನಾಗಿ ಹಾಗೂ ಕೇಳಂವರಿಗ ಬೀಡಿ ಜೋಬಿಂದ ತಗುಂ ಕೊಡುಪುಷ್ಟ ಆಗಿದ್ದನು. ಈ ದಕ್ಷತ್ತಗ ಕಾರಣವ ಅನ್ನ ಊರೂರು ಸುತ್ತುತ್ತಾ ಹುಣಸ ಬೇವಿನ ತ್ತಗಳ ಸೇರುಪಾವಿಲ್ಲ ಥಳಿಗಿ ತಕ್ಕಂಡು ಸಾಬರಿಗ ಮಾರುತ್ತಿದ್ದುಂದಾಗಿತ್ತು.

ಇಂತಿಂಥ ಮಣ್ಣಂತಗಾರನಗ ಆಗೂ ಆಡುವ ಕೆಂಪಿಯಾಟ್ಟ ಕಂಡು, ಕೆಂಪೀಯ ದೊಡ್ಡವ್ವನ ಮಗಳು ಒಬ್ಬಂಟ ಈರಿಗ ಕ್ವಾಪ ತಡೆಯೂ ನುಗುಗ್ತ ಬರ್ತ, ಆದ ಹಲ್ಲಿಲ್ಲ ತಡ್ಕಂಡು ಈರಿಯು ಮಾತಾಡಿ " ಅದ್ಯಾಕನತಾಯು ನೀ ಅಡು? ಬರಬರ್ಕ ಹೋಗದ ಬುಟ್ಟು" ಅಂದಳು. ತಿಂಬುವಂತೆ ಕೆಂಪಿಯು " ನಿನ್ಯಾಕರ ಗ್ವಾಸಿ, ಬಾಯಾಕಂದು ಬಾ ಅಂತ ಕರೆಂವ್ರ? ನಿಂಗ ಸುಮಾನ ಅದ್ರ ಹೋಗು ನೀನೀಯಾ..." ಎಂದು ಜಡಾಯುವದಾಗ ಈರೀಗ ಬಾಯ್ಕಟ್ಟತು.

ಅತ್ತ ಈರಿಯು ಸುಮ್ಮಾದಳು. ಗಂಡನು ಎಸೆಂಯಲು ಆ ಗಂಡನ ಫಲವು ಹನ್ನೇಡು ವರುಸದ ಮ್ಯಾಕಲ ಬೆಳವಣುಗ ನಿಂತು, ದಿನಾ ಸವೆಯುತ್ತಾ ಸುಂಡೋಗಿದಂ ತನ್ನ ಕರುಳಬಳ್ಳಿಯ ತನ್ನ ಹೊಟ್ಟೆಗ ಕಟ್ಕಂಡು, ಅದ್ಕ ಅಂಬಲಿ ನೀರೆರದು ಜಿಗುರಿಸೊ ಯತ್ನವ ಮಾಡ್ತ, ಆ ಅವಳ ಕರುಳಬಳ್ಳಿಂತೊ ಮೂಳ ಮಾತ್ರಕ್ಕ ನಾಮನುಷ ದೊಡ್ಡದಾದ ಕಿವಿಗಳು ದೊಡ್ಡದಾದ ಕಣ್ಣುಗಳ ಸಿಕ್ಕಿಸಿ ಇಟ್ಟಂತಿದ್ದಂ, ಇನ್ನು ಅವಳೋ, ತನ್ನ ಕರುಳ ಬಳ್ಳಿಗ ತನ್ನ ಬಗ್ಗರಿ ಮೂಳ್ಳ ತೇದೂತೇದೂ ಕುಡಿಸುತ್ತ, ತನ್ನ ಕೆದುರೀದ ಕೂದುಲುಗ ಎಣ್ಣೀರು ಕಾಣದ ಅವಳೋ ಆ ಕೆಂಡ್ಗ ಇರೋ ಆ ಕೂದ್ಲುಗುವ ಅದ್ಯಾವ ಅವಳೋ ಒಂದು ಕಡ್ಡಿ ತುದೀಗ ಬಟ್ಟಸುತ್ತಿ, ಎಣ್ಣಹಾಕಿ ಹಚ್ಚಿಟ್ಟ ಉರಿಂತೋ ಪಂಜಿನಂತಿದಂಳು.

ಇತ್ತ, ಹಟ್ಟೀಗ ದೊಡ್ಡಮನುಸಿ ತೂರಮ್ಮಗ ಇನ್ನು ಸುಮ್ಮನಾಗಿರುವುದು ಥರವಲ್ಲ ಅನ್ನಲು, ಅಳಿಮಂಯ್ಕಗ "ಅಪ್ಪ ಈಗ ನೀವೆ ದಂಯಮಾಡ್ವಿರಿ. ಹೆಂಗೂವ ಕೆಂಪಿ ಬೆಂಮನ್ವಿ. ಕೂಸೂ ಬಾಣ್ತೀನುವ ಜೊತಲೆ ಕರ್ಕಂದು ಹೋಗರೀ... ಈಗ ದೊಡ್ಡಮನ್ಸ ಮಾಡಿ ದಂಯಮಾಡ್ವ ಮತ್ತ..." ಎಂದು ಬಾಂಯ್ತುಂಬ ಅಂದು ಹೊಗಸೊಪ್ಪ ತಂಬ ಬಾಯ್ಗ ನೆಗೆಸಿದಳು. ಅಳಿಮಂಯ್ಕನು ದನೀಂಯ ಆಳಾಸ್ತ " ನೀವ್ಯಾಕನ ಹೇಳ್ತೀರಿಕನ. ಅಲ್ಲ ನಂಗ ಗಂಜಿ ನೀರ ಕಾಣ್ಸವರು ಯಾರ ಅಳಿ ಮತ್ತ..." ಅಂದನು. ಅದಕ್ಕ ತೂರಮ್ಮನ ಮಾತುಗಳು ತುಟಿಕಡೆದಿರಲು, ಆದ ಕೆಂಪಿಯು ಮಟ್ಟಹಾಕಿ ಗಂಡನ ದಿಕ್ ತಿರುಗಿ " ಊರೂರ ಬರ್ರಬರ್ರ ಅಂತ ಸುಂಟ್ರಗಾಳಿ ಸುತ್ತಂಗ ಕಾಲಲ್ಲಿ ಚಕ್ರ ಕಟ್ಕಂಡು ತಿರ್ಗ್ತಿಯಲ್ಲಾ... ಅಲ್ಲ ಉಂಡ್ಕಂದಿರು..." ಅಂದೂ ಸಾಲದೆ ಅವ್ವನ ದಿಕ್ಕೂ ತಿರುಗಿ— " ಅವ್ವ, ಇವ ಎಂಥಾ ಕೇಪಮಾರಿ ಅಂತ ಗೊತ್ತವ್ವ. ಅಸ್ಟ ಊರೂರು ತಿರ್ಗ್ತನಲ್ಲ... ಅಸ್ಟ ಒಟ್ಟ ರುಚಿ ಕಂಡಿದ್ದಾನಲ್ಲ! ಆ! ಒಂಜಿನಾರು

ನಂಗ ತಕ್ಕ ಬಂದು ' ಅಮ್ಮೀ ತಕ್ಕ... ಮನಾಲ್ಯೋನ ತಂದಿನಿಕನ ತಿಂದ್ಕ...' ಅಂದಿಲ್ಲ. ಹಡ್ದ್ಯಂತ ಹಡ್ತಿ..." ಎಂದೂ ಸಾಲದೆ, ಅವನ, ಗಂಡನ ಮೊಕ್ಕ ಕಂಯ್ಕ್ಯಟ್ಟ " ಥೂ ನಿನ ಯಾಸಗ ಬೆಂಕಿ ಹಾಕ" ಅಂದಳು. ಮಗಳಿಗ ತೂರಮ್ಮ ಗದುರಿಸಿಕೊಳ್ತ, ಹೊರಗ ಜನ ಗೂಳೂಳ್ಳೇ ಅಂತು.

ತೂರಮ್ಮನು, ಹುಟ್ಟೋಳೇ ಮೊಮ್ಮೂಗ್ಸಗ ತನ್ನ ಪ್ರಾಣಕೊಟ್ಟು ಹೋಗಲು ಜೀವ ಹಿಡುಕೊಂಡಿದ್ದಳಷ್ಟೆ. ಮಗಳು ಕೆಂಪೀಗ ಹುಟ್ಟೋಳೇ ಕುಡಿಗಳು ಮೂರು ತಿಂಗಾದ ಮ್ಯಾಲ ನಿಲ್ಲುತ್ತಿರಲಿಲ್ಲವಾಗಿ, ಹೀಗಿರಲು ಒಂಜಿನ, ಕೆಂಪೀಯು ಅಪ್ಪನ ಮನಿ ಇರುವುದು ಹೆಚ್ಚಾಗ್ತ ಆಗ ರಾತ್ರ್ಯಾಗ ಪೋಲೀಲಿ ಗಾಳಿ ಬಿಸುಗುಟ್ಟದಂತಾಗುವುದು ಆಮೇಕಾಮೇಕ ಅದು ಹುಟ್ಟ ಒಳಗೂ ಸದ್ದು ಸುಳುವಾಗುವುದೇ ಮುಂತಾದುವು ಮುಪ್ಪಾದರೂ ಕಣ್ಣುಕಿವಿ ಹಲ್ಲು ಗಟ್ಟಿಗಿದ್ದ ತೂರಮ್ಮನು ಒಂಜಿನ, ಆ ಕಡ ಭಾಗದಲ್ಲಿರೋ ವಾರಗಿತ್ತಿ ಮಗಳಾದ ಈರಿಯು ತನ್ನ ಹೈದನನ್ನು ದೇವರ ಸನ್ನಿಧಿಗ ಕರ್ಕೊಂಡು ಹೋಗಿರೂ ಆ ಸರಿಯಾದ ಟೈಮು ಸಿಕ್ಕಿಸಿಕೊಂಡು ತೂರಮ್ಮನು, ಎಡಗೈಲಿ ಮಗಳ ಮುಂದಲ್ಯ ಹಿಡ್ಕಂಡೂ ಬಲಗೈಲಿ ಈಚಲ ಇಡಗಲು ಹಿಡ್ಕಂಡು, ಬಗ್ಗಿದ್ದ ಬೆನ್ನ ಇನ್ನೂ ಬಗ್ಗಿಸಿ, ಕಪ್ಪ ಹಚ್ಚಿದ್ದ ಕಪ್ಪ ಹಲ್ಲೂಲ್ನ ಸೊರಗುತ್ತ "ಯಾನಮ್ಮ! ಯಾನ ಇದು ನಿನ ಮಾಯಾ ಮಂಗಾಟ? ಚಾಲು ಚಲಾಕು?" ಅಂತ ಗುದಿಂದಳು.

ಮಗಳು ಮೊಕ್ಕ ನೆಲಗಲ್ಲ ಮುಚ್ಕಂಡು ಅಳುದಳು. ಆ ಬಗಿ ಬಿಡದ ತೂರಮ್ಮನು ಎಡಮುಷ್ಟೀಲಿ ಹಿಡಿದಿದ್ದ ಮಗಳ ಮುಂದಲ್ಯ ಜಗ್ಗಿ ಮೇಲೆತ್ತಿ " ಯಾರ ಮುಂದ್ಕ ಅಡ್ತ ಇರೋದು ನೀನೂ? ಅದೇನ ನಿನ ಹೊಟ್ಟ ಒಳಗ ಮಡಿಕ್ಕಂಡಿದೀಯೋ ಅದ ಕಕ್ಕ ಅದಾ" ಅಂದಳು.

... ಹೀಗೆ ಮಗಳು ಮೊಕ್ಕ ಮುಚ್ಕಂಡು ಸೊರಗುತ್ತಾ, ಅವ್ವ ಹಿಡುತ ಬುಡದಿರಲು ಹೀಗೆ...

ಇದು ಹೀಗಾಗ್ತ, ಕೊನಗ ಕೆಂಪಿಯು ಸೋತು ಸಣ್ಣವಾಗಿ ಸೊರಗುತ್ತ –" ಅದ ಯಾನ ಅಂತ ನಾ ಹೇಳ್ಳವ್ವ? ಅದ ನಾ ಯಾಗ ಅಂತ ಹೇಳ್ಲಿ? ನಾ ತಂದಂಥ ಫಲ್ವ ನಾ ಯಾಗ ಹೇಳ್ಲಿ ಹೇಳು. ನಾ ಸತ್ತಾಗ ಸೊರಗಕ್ಕ ಸೇರ್ಕಳ್ಲಿ ನಂ ಅವ್ವ ಅಂತ ಹಿಂಡಕೂಳಾಕಾಕ ಒಂದು ಗಂಡೂಗ್ಸು ಆಗೋದು ಬ್ಯಾಡ ಬೇಕಾರ ನಂಗ. ಬೆನ್ನುಜ್ಜ ಕೊಡಾಕ ಅಂತ ಒಂದು

ಹೆಣ್ಣುಗೂಸು ಅಂತಾದ್ರೂ ಆಗದು ಬ್ಯಾಡವ್ವ ನಂಗಾ... ?" ಅಂದಳು. ಈ ಬಾಣವು ಬಂದು ತೂರಮ್ಮನ ಎದೆಗ್ಯಾಗ ನಾಟಲು ಮಗಳ ಮುಂದಲು ಜುಟ್ಟುಬಿಟ್ಟು, ಅಲ್ಲಿಂದ ಬಲಗಯ್ಯಾಗ ನಾಟಲು ಹಿಡಿ ಹಿಡುಗಲ ಬಿಟ್ಟು, ಅಲ್ಲಿಂದ ಜೀವಕ್ಕ ನಾಟಲು ತೂರಮ್ಮ ಕುಸಿದಳು.

ಅತ್ತ ಮೊಕ್ಕ ಎತ್ತದ ಮಗಳು ಸೊರಗುತ್ತಿರಲು; ಇತ್ತ ಬೆಲ್ಲಸದಂತೆ ಕೂತ ತೂರಮ್ಮನು ತನ್ನ ದೇಹಕ್ಕ ಸೂಲು ಕೂಡಿಸಿ, ನಡುಗೊ ಪ್ರಾಣಕ್ಕ ಮಾತಿಟ್ಟು " ಅದ್ಯಾಕ ಇರಾದು ವಿ ಬಿಡಿಸಿ ಹೇಳವ್ವ ತಾಯಿ" ಅಂದಳು. ಸೊರಗುಟ್ಟುವದಕ್ಕ ಕಂಪೀಯು ಮಾತು ಸೇರಿಸಿ " ನೀನು ಹೇಳೂ ಅಂತಂದ್ರ ಅದ ನಾ ಹೆಂಗೇಳಲವ್ವ? ಅದ ಯಾವ ಬಾಯಿಂದ ಹೇಳ್ಲಿ? ಕೋಳಿ ಕದ್ಯಂಗಾ ಕದ್ಯವನ್ನ ನನ ಕಟಬುಟ್ಯೋ... ಮಕ್ಕಳ ಫಲಂ ಊರ್ಜಿತಾ ನಾ ಹೆಂಗ ಕಾಣ್ಲಿ? ನಾ ಹೇಗೆ ಕಾಣ್ಲಿ?" ಅಂತ ಸೊರಗುಟ್ತೊಡಗಿದಳು.

ಆಹಾ! ಎಂಥ ಘೋರ ಅನ್ಯಾಯವು ತಾನು ಹೆತ್ತಂಥ ಕುಡಿಗ ತನ್ನ ಕಯ್ಯಾರ ಅಯ್ಯಲ್ಲ ಅಂತ ಆಗಲೀಗ ತೂರಮ್ಮನ ಕೇಳಿಸೊ ಕಿವಿಯು ಕೇಳಿಸದಂತಾಯ್ತು. ಕಾಣಿಸೊ ಕಣ್ಣು ಕಾಣಿಸದಂತಾಯ್ತು.

ಹೀಗಾಗೂ ಆಮೇಲೂ ಕಂಪಿಗ ಹುಟ್ಟದ ಮಕ್ಕಳ ಫಲವು ಮೂರು ತಿಂಗಾದ ಮ್ಯಾಲ ಊರ್ಜಿತ ಆಗದಿರಲು, ಚಿಂತಿ ಪಕ್ಕದಲಿ ಇಟ್ಟುಕೊಂಡವಳಾಗಿ ತೂರಮ್ಮನು,– ಎಲಾ... ಯಾವ ದ್ಯಾವ್ರುಕೇಳಕ ಅಂತ ಹೇಳದ್ರುನುವ, ಆ ದ್ಯಾವ್ರು ನಾ ಪೋದೇಟಿಗ್ಯು ಕುರುತುಗಳ್ಳದಕೂ ಮೊದ್ಲ ಕರುಂ, ಸಿನೇತಗಾರಳ ಕಂಡಂತೆ ಮಾತಾಡುನ್ತ..." ಹೌಹೌ ಬಾ, ಬಾ, ಮಗಳೇ ಬಾ ತೂರಮ್ಮ ನನ ಕಂದಾ. ಈ ಸಲ ಮಾತ್ರ ನೀನು ಸಟಗೂವಾ ಚಿಂತ ಮಾಡಬ್ಯಾಡ. ಹುಟ್ಟೋ ಮೊಮ್ಮಗನಿಗ ಗಟ್ಟಿ ಅಯುಸ್ಸ ಕೊಟ್ಟೇನಿ. ಹುಟ್ಟದರ ಮೇಟಿಯು ಇಂತಿಂಥ ಹೆಸರೀಡೂ ಹುಟ್ಟದರ ಪಾಲಯು ಇಂತಿಂಥ ಹೆಸರೀಡು..." ಎಂದು ತಲಸ್ಪರೀ ಕಾಣ ತಕ್ಕಂಡು ಕಳಿಸುತ್ತಿದಂಥಹ ಮಾರಮ್ಮದೀರ ನುಡಿಯು ಹುಸಿಯಾಗೊ ಮಾಯದ ಪತ್ತಗಾಗಿ ಆ ಚಿಂತ್ಯವ ಸೊಸಾದ್ಯ,

... ಪೋ ಪೊ ಆ ಥರಾಗಿಲ್ಲಾ ಅದೂ ಈ ಥರಾಗಿ ಅದ ಅದು. ಈ ತಾರಮ್ಮ ಅವ್ವಳ್ಲಾ ಅವ್ಳ ಮದ್ದುಮಾಟ ಬಲ್ಲೋಳು. ಕಟ್ಟುಪಾಡು ಮಾಡ್ತಾಳ. ಹಟ್ಟ ಆಡಿಗ ನಿಲ್ಲುಸ್ತಾಳ. ಸಿಕ್ಕಾಕಂಡ್ರ ಹಿಂದ್ಲಪಾದ ಮುಂದ್ಕ ಬರುಸ್ತಾಳ... ಈ ಥರಾಗಿ ಅವ್ಳೂ ಪಿಲಾನುಗಾರ ಗಾಳಿಗಿರಾಪೊ ದೇವಮಾನವ ಒಳಾಕಿಕೊಂಡು ನ್ನ ಕಂದನ್ನ ಹುಟ್ಟೋ ಕೂಸ ಮುರೀತಾ ಇರೋ ಅದು ಈ ಸಲ ಯಾನಾರೂ ಬಂದುದೇ ಉಂಟಾದ್ರೆ ನನ ಹಳ ದಡಾವ ತಕ್ಕಂಡೂ ಆದರಲ್ಲೆ ಆದ್ಲೀಗ ಇಸೂಂ ಪಾಲು ಮಾಡಿ ತಿಂತೀನಿ... ತಿಂತೀನಿ" ಅಂತ ಉಂಡು ಉಸುರಾಡಿದಳು.

ಅಲ್ಲಿ ನಿಂತಿರ ಜನ ನಿಂತದ. ಕುಂತಿರ ಜನ ಕುಂತದ. ಪಂಚ ಕೊಳ ಆಗದಂತೆ ಕುಕ್ಕರಗಾಲಲ್ಲಿ ಕೂತಿರೋ ಕಿಟ್ಟಯ್ಯ ಕೂತನ.

ಕೂತಿರೋ ಕಿಟ್ಟಯ್ಯ ಎದ್ದು ಕಯ್ಯಲ್ಲಿದ್ದ ಕಡ್ಡಿ ಮುರುದು " ಆಗ ನೀ ಬಲ್ಲ ಅನ್ನಿಮ್ಮ" ಅಂದನು. ಕೆಂಪಯ್ಯ, ಇದ್ಯಾಕನ ಯಾವಾರ ದಾಸಯ್ಯ ಅನ್ನಲಿಲ್ಲ. ಹೆಗಲಲ್ಲಿ ಸರಿಯಾಗಿದ್ದ ಟವಲನ್ನು ಸರಿಮಾಡ್ಕಂಡೂ ಗಂಟ್ಲನೂ ಸರಿಮಾಡ್ಕಂಡೂ ಹಿಡ್ತಗ "ಇದಿಯ ಕೊನ ಸಲ ನೋಡ್ಕ" ಅಂದು ಅಮಾಕ್ಕಲ ಅತ್ಕಮ್ಮಗ" ಇದ್ಯಾಕ ಇವ ಹಿಂಗಂತನ ಅಂದ್ಕಬ್ಯಾಡಿ ಅತ್ತೆಮ್ಮೋರೇ... ನಿಮ್ ಮಗಳ ಇನ್ನು ನೀವೇ ಮಡಿಕಳ್ಳಿ" ಅಂದು, ಒಂದೀಟು ದೂರ ನಡುದು, ನಿಂತು, ಟವ್ಕಟವಲ ಇನ್ನಾ ಒಂದ್ಸಲ ಮಟ್ಟ ಸರಿಮಾಡ್ಕಂಡು, ತಿರುಗಿ ಒಂದ್ಸಲ ನೋಡಿಯೂ ಕಾಣದನಯ ಆದಂಥವನಾಗಿ ಆಮೇಲ ಎತ್ತಕಟ್ಟದ ಪಂಚ ಕೆಳಕ ಬುಟ್ಕಂಡು ಆ ಪಂಚ್ಕ ಬರಬರ ಸದ್ದು ಮಾಡುಸ್ತ ನಡದನು.

ಒಳಗ, ಅಂಬಲ ನೀರ ತನ್ನ ಹೈದಗ ನೊಣಸುತ್ತಿದ್ದ ಈರೀಗ ಇದು ದಿಗುಲಾಗಿ, ಕಾಯಕ್ಕ ಕೈಬುಟ್ಟು " ಅಪ್ಪೋ ಇದ್ಯಾಕನಪ್ಪ ನೀವ ಮಾಡ್ತ ಇರದು? ಅದ್ಯಾಕನ ನೀವಾ..." ಅಂತಂತ ಅವಳೂ ನಡುದೂ ಜನಗಳು ಕಡುದೂ ಬೇಲಗಳು ಸಿಕ್ಕಲಾಗಿ ಆಗ,

" ನೀವ ಬನ್ನಿಪ್ಪ..."

" ಅಲ್ಲಿ ನಂಗ ಯಾರಾವ್ರ ಅಂತ ಬಲ್ಲ ಹೇಳಿ..."

" ಇದೊಳ್ಳ ನೈ ಅನ್ನೋ ಮಾತಾಯ್ತಲ್ಲ ನೀವಾ ಆಡೋದು..."

“ಆಗಾರ ಇನ್ಯಾವದ ಹೇಳಿ ಮತ್ತ, ಸೈ ಅನ್ನ ಮಾತುರಾ…?”

“ ಜನ ಯಾರ್ನಿ ಅಡ್ಕಳದು ಆಗಾರ…”

“ ನ್ಯಾಕ ಅಡ್ಕಂದದು ಹೇಳೀ…”

“ ಅಪ್ಪೆ ! ಅವ್ಳ ಎಸ್ಟೇ ಆದ್ರೂ ಹೆಣ್ಣಂಗುಸ್ರು ಅನ್ನುಸ್ಕಳ್ತಳ… ನೀವ ದೊಡ್ಡನಸರಾವೀ ಹಂಗಿಯ ಅಡಂರ, ಮಾತು ನಿಂತ್ಕಳದು ಯಾರ್ಗ ಹೇಳಿ…”

ಆಗಲೇಗ ಸೋತ ಕಿಟ್ಟಯ್ಯ ಈರಿ ಹಿಂದ ಬವಲ ಸರಿಪಡಿಸ್ತ, ಈಗ ಬರುತ್ತಿರಲು, ಕಿಟ್ಟಯ್ಯ ಈರಿಗ “ ಇದ್ಯಾಕನ ಇಸ್ಟೊಂದು ಮುಂಪ್ಪು ಹಿಡ್ಕಂಡಿದೀರಲ್ಲಾ” ಅಂದನು. ಈರಿ “ ಅಯ್ಯೋ ಈಗಿಲ್ಯ ಎಸ್ಟೋ ವಾಸಿ ದಮ್ಮಯ್ಯ. ನೋಡಂಗಾರು ಅವ್ನೀ” ಅಂದು ಇನ್ನೂ ಮಸಿ ದೂರವು ಹೋಗಲು “ ಅಪ್ಪೆ ನಿಂ ಪಾದ, ನೀವ ಇನ್ನೊಂದ್ಸಲ ಬಂದಾಗ ಜೀತ ಮಾಡಾದ್ರೂ ತೀರಿಸ್ತೀನಿ. ನನ ಕೂಸ್ಗ ಯಾನ್ನೂ ಒಂದು, ಮಾಡ್ಸ-ಬೇಕಾಗದ. ಇಲ್ಲ ಅನಿಯ ಒಂದತ್ರೂಪಾಯ ಕೊಡಿ ಮತ್ತ…” ಅಂದು ಹೀಗೇಗ ಹೀಗೇಗ ಅಂದಳು. ಅದ್ಕ ಅವ– “ಇದೆಲ್ಲಾ ಇಸ್ಸಿಲ ಲೋಟಂರಿ ಕುಡುಂ ದಯ ಹಿಡ್ಕಂಡ ಥರ್ದ ಕಾಣ್ತ ಅದ. ಮೊದ್ಲಿಯ ಹೇಳಾಕ ಯಾನಗಿತ್ತು, ನಿಮ್ಗ? ಬರಾಗ ಡೆಸಿಂನಾರು ತರನು…” ಅಂದನು. ಈರಿ “ಅಯ್ಯಯ್ಯೋ ಅದು ಡೆಸಿಂದಲ್ಲಕ ಸೋಮಿ” ಎಂದು ತನ್ನ ದನೀಗ ಪರಾಣ ಬೆರ್ಸಿ ಇನ್ನೊಂದ್ಸಲ “ ಅಪ್ಟೋ ಹತ್ ರೂಪಾಯ್ರು…” ಅಂದಳು. ಅವ ಜೋಬ ತಡುಕಿದಂತೆ ಮಾಡಿ ತಗುಂ ಒಂದು ರೂಪಾಯ ನೋಟು ದಾಡಲು, ಈರಿಯು ಯಾರೂ ನೋಡ್ತ ಇಲ್ಲದಂ ದುಡಪಡಿಸಿಕೊಂಡು ತವಕನ ಈಸ್ಕಂಡು ಸ್ಯಾಲನಿಗ ಸೇರ್ಸಿ “ಅಪ್ಪೆ… ಇನ್ನೊಂದೇಡು ರೂಪಾಯ್ರುವ…” ಅಂದಳು.

ಆ ಜರುಗಿದ ಬೆಳಗಲ ಸಮುರದ ಸದುವ ನಾಕ ದಿಕ್ಕನ್ನೂ ಭೇದಿಸಿ ಮೊಳಗುತಲ ಬಂದು ಕಿವಿಗಿರಿಯುತ್ತಿದ್ದುದು ಅಂತಲಾ ನಿಂತು ಈಗ ಗಾಳಿಯಾಡುತ್ತಿರಲು, ದನ್ನನು ಹೊರಬಂದವನಾಗಿ ಜಗಲಿಮ್ಯಾಲ ಕೂತು, ಎಡಗಯ್ಯಲಿ ಕನ್ನಡಿ ಹಿಡುಂ ಬಲಗೈಲಿ ಕತ್ತರಿ ಹಿಡುಂ ಮೀಸ ಕತ್ತರಿಸಲಾರಂಭಿಸಿದನು. ಇಂಗ್ಲಿಷೊಡನೆ ಗುದಾಂಡಿ ಬೀಯು ಎಂಬ ಏಡಕ್ಷರ ಆಗದೆ ಎತ್ತರ್ತ ಇಲ್ಲದೆ ದೆನ್ನನಿದಂನು. ಹೊಟ್ಟಗ ಯಾನಾರೂ ಕಮ್ಮಿ ಬದುಂ ನಡುಗೇಗ ಗತ್ತು ಬಾರದಿದಂರೆ,

ನಡೆಯುವುದ ಬುಟ್ಟು ಕೂರುತಿದ್ದ ಚನ್ನನು, ತಮ್ಮದೀರ ಜೀತದ ತರಗಳಲ್ಲಿ ನಿಂತು ಚನ್ನರನ ಎಂದು ಹೆಸರ ಬದಲಿಸಿಕೊಂಡಿದ್ದ

ಚನ್ನಂಗೆ ಈಗ ತನ್ನ ಮೊಖಕೊಪ್ಪುವ ಹಾಲಿ ಮೀಸ ಯಾವುದೆಂದು ಬಗೆಹರಿಸಿಕೊಳ್ಳುವುದರಲ್ಲಿ ಕಸ್ಟ ಎದುರಾಗಿತ್ತು. ಅದರಕ್ಕನಾಕಾಯಿಯು ಮೇಲ್ಜಾತಿಗೆ ಕಮ್ಮಿ ಮಾಡಲು ಗಿರ್ಜಾ ಮೀಸ ಬುಡುವುದು ಅವನ ಗುರಿಯಾಗಿದ್ದರೂ ಅದರೆ ಚಗುರುಗೂದಲಾಗಿತ್ತು.

ಇವಾಗ ಸಮಸ್ಯೆ ಹೀಗಿರುವಾಗ, ಕೇರಿಗ ಕಾಲಿಡುತಿದ್ದ ಆ ಕಿಟ್ಟಯ್ಯ ಈರಿಯು ಕಂಡುಬಂದು, ಚನ್ನನ ಮೀಸನ ಕತ್ತರಿಸುವುದು ನಿಂತು, ಬದಲಾಗಿ ಅವನ ಮಯ್ಯ ಉರಿ ಎದ್ದು ನಿಂತು – " ಅದ್ಯಾವ ಸೀಮ ಜನಗಳ ನೀವು, ಅದ್ಯಾಕಾರೂ ಹುಟ್ಟಿದೀರಿ ನೀವು. ನಿಮ್ ಜಗಳ ನಿಮ್ ಹಟ್ಟಿ ಒಳಗ ಮಾಡ್ಕಳಕ ಅದ್ಯಾಕನ ರೋಗ ಆಗಿರದು ನಿಮಗ. ಮಾಕ್ಗಲ ಕೇರಿಯವ್ರು ನೋಡಿದ್ರ 'ಇರೋದು ಈ ಹೊಲಬಡ್ಡೆತ್ತವಗಳ ಬಾಳಾಟ' ಅನ್ನಂಗ ಅಡಗತಿ ಮಾಡೀಮಾಡಿ ಊರುಲ್ಲವ ಸಮಾಧಾನವಾಗಿ ಇರಗೊಡ್ಸಲ್ಲ ನಂಗಾ... ಥೂ ಬಡ್ಡೆತ್ತವ..." ಎಂದು ಉಗುಂ ಅಂದನು. ತುಟಿಪಿಟಕ್ಕನ್ನದ ಅವರು ದಾಟಿದರು.

ಚನ್ನನ ಅಪ್ಪ ದಳಿದುಪ್ಪಟಿ ಹೊದ್ದುಕೊಂಡು, ಪಕ್ಕದಲ್ಲಿ ಊರೋಲು ಇಟ್ಟುಕೊಂಡು ಇತ್ತಗ ಬೀದಿಗೂ ಸೇರದಂಗ ಅತ್ತಗ ಹಟ್ಟಿಗೂ ಸೇರದಂಗ ಇರೋ ತಾವಿನಲ್ಲಿ ಕೂತವನು ದುಪ್ಪಟಿ ಒಳಗಿಂದ ಕಯ್ಯ ತಗುದು " ಓಹೋ... ನಮ್ ತೂರಮ್ಮನ ಅಳಿಮಯ್ಯರು! ನಮಗ ನಿಮಗವ ಹತ್ರದ ಸಂಬಂಜಕನ, ಒಂದ ಬೀಡಿ ಎಸುಂಬುಟ್ಟು ಹೋಗ್ರಪ್ಪ..." ಎಂದು ಕಯ್ಯ ನೀಡಿದನು.

ಈ ವಾಕ್ಯದಲ್ಲಿ ಮುಂಬರೋ ಶಿಷ್ಯ ಹಾಂಯುಸೊ ಹಬ್ಬದ ಸಡಗರವ ಮಾಕ್ಕಳ ಕೇರಿರ
ನಡದಾಡಿ
ಊರಾಗ ದೊಡ್ಡೋರ ಹುಬ್ಬೇರಿ ಕುಣುಂ ಕುಪ್ಪಳಿಸುತ್ತಿದ್ದಾಂಗ.

ಆ ಕಾಲದಲ್ಲಿ
ಸಿದ್ದಾಂತನು ಅಡೀವ ಮಾಡಿ ಎಸುಂ ಹೋಗಿದಂ ಅಕ್ಕಮಾದೇವಮ್ಮ ಯಮಾಡರ ದೇಹಕ
ಸಂಜ ಆಗುತಾಗುತ ಸೂಲು ಎಂಬುದು ಕೂಡಿಕೊಳ್ಳುತ
ಗಕ್ಕಬ್ಬಳಾಗಿ ಕೂತಿದಂ ಅಕ್ಕಮಾದೇವಮ್ಮನ ಕಣ್ಣುಗಳ ನೀರ್ಕ ಕೋಡಿಯು ಹರಾಂ
ಕೆರೆಯು ಸೇರುತ್ತಿರಲು
ತಾಯು ಹೊಟ್ಟಗ ತಲಹಾಕಿ ಯಮಾಡನು ಕಣ್ಣರೆಪ್ಪ ಮುಚ್ಚೋದು ತಗಿಯೋದು
ಸುಕ್ತಾ ಕಣ್ಣಡಿಸೋದು ಮಾಡುತ್ತಿರಲು
ಅವನ ಒಳಗಲ ದ್ರವವೆಲ್ಲ ಹಿಂಗಿದುದಾಗಿ ಅವನ ಬತ್ತಿದಂ ನೇತ್ರಗಳಿಂದ ನೀರು
ಅಂಬುದು
ತಾನೇ ಬರಲು ಎಲ್ಲತ್ತು ಎಂಬುವಂತಿರಲು.

ಯಮಾಡನ ತಲ್ಲ ಭೂಮಿ ಮಾಕ್ಕಲ ಇಟ್ಟವಳಾಗಿ
ಎದ್ದು ಅಕ್ಕಮಾದೇವಮ್ಮ ನಡೆದವಳಾಗಿ ಬಂದಳು
ಆ ಕಣ್ಣೀರು ತುಂಬಿದಂ ಕೆರೆಯು ಕರೆಗ. ನರಾು
ಆ ಕೆರೆಗ ಮೂರು ಸಲ ಸೂಗಿದಳು. ಕಣ್ಣುಗ
ಆ ಕೆರೆಯು ನೀರ ಮೂರು ಸಲ ಒತ್ತಿಕೊಂಡಳು. ಪ್ರಾರ್ಥಿಸುತ
ಆ ಮೂರು ಬೊಗಸ ನೀರ ಕುಡಾಂಳು. ಆ
ನೆರಗೀನ ತುದಿಯಾ ನೀರಿಗದಿಂದಳಾ

ಆ ನೀರೂ ಕುಡುದಾ ನೆರುಗಾ ತುದಿಯಾ ತನ್ನೇಡಾ ಕೈಯಾ ಹಿಡದಾ ತಂದಾ
ಆ ಯಮಾಡನಾ ಬಾಯಾ ಆ ಹಕ್ಕಿಯಾ ಬಾಯಾ ಬಿಡಿಸೂತ ಕುಂತಾ
ಆ ನೀರು ಕುಡುದಾ ತುದೀ ನೆರುಗಾ ನೀರ ತೊಟ್ಟಿಕ್ಕಿಸುತ್ತಿರಲಾ
ಆ ಆಗ ಆ ಯಮಾಡನಾ ದೇಹದಲ್ಲಾ ದ್ರವವಾದೀ ಬಂತಾ
ಆ ಆಗ ಆ ಯಮಾಡನಾ ಕಣ್ಣುಗಳಲ್ಲಾ ನೀರಾದೀ ಬಂತಾ

ಅಲ್ಲಗ ಭೂಮತಾಯು ತನ್ನೇಡು ರೆಕ್ಕೆಗಳಾ
ತೆಂಗಿನ ಗರಿಯು ರೂಪದಂ ಬರುವಾತಾಗಲೂ
ಅಕ್ಕಮಾದೇವಮ್ಮ ಯಮಾಡರು ಕೂತ ಜಾಗವಾ
ಅಲ್ಲಗ ನೆರಳಾಯ್ತು.

ಉಂಟಾದಂಥ ನೆರಳಲ್ಲಿ ಅಕ್ಕಮಾದೇವಮ್ಮ ಯಾಡರು ರಾತ್ರಿನಾಗ ಮಲುಗ್ತಾ, ಬೆಳಕರೀಕ್ಲೆ ಅದ್ಯಂಯ ಹೋಟ್ಲಾಗ ತಿರುಗ್ಯಾಡೂ ನಿದ್ದ್ಯೆಲ್ಲೂ ಟೀ ಕಡುಬು, ಅಂಬ್ರೋಣನಾಗ ದೋಸೆವಡೆ, ಜೊತಗ ಬೀಡಿಬೆಂಕಿಪೊಟ್ಣ ಇಟ್ಗಂಡು ಯಾಪ್ಪ ಮಾಡ್ತಾ, ಯಾಡನು ದಿನದಿನ್ಕ ಬೇಳ್ತಾ ಯಾಡನು ಇಂದ್ಗ ಚಿಕ್ಕವನು ನಾಳ್ಗ ದೊಡ್ಡವನಾದನು. ದೊಡ್ಡವನಾದ ಯಾಡನು, ಎಡ ಮೂಗಿನ ಪೊಳ್ಳಿಂ ಬರೋ ಗೊಣ್ಣಿನ ಬಲ ಮುಂಗೈಲಿ ವರಸ್ಕಳ್ತಾ, ಬಲಮೂಗಿನ ಪೊಳ್ಳಿಂ ಬರೋ ಗೊಣ್ಣಿನ ಎಡ ಮುಂಗೈಲಿ ವರಸ್ಕಳ್ತ, ಗೊಣ್ಣಾದ ಕೈಗ ಕಟ್ಟ ಗಳಾನ ತೊಳಕೊಳ್ಳೋನು. ಯಾವುದಾರು ದಿಕ ತಪ್ಪಿದ ಇರುವೆ ಏನಾರ ಸಕ್ಕರ ಅರಿಶ ಕಡುಂ ಹೋಯ್ತಾ ಬತ್ತಾ ಸಿಕ್ಕಿದರೆ "ಬಡು ಬಡ್ತೈತದ, ಈ ಗೊಟ್ಟಿನ ಕಾಲಿಂದ್ಲಿ ಒಂದು ಸಕ್ರಿ ಅರಿಗ ಮಾರಾಸು ಅಂತ್ಯದಕ್ಕನ" ಅಂತ ಬುಡಸ್ಕಳನು ಅತ್ತ್ಗ. ಇತ್ತ್ಯಾಗ ಒಂದಿನ ಆ ಹೋಟ್ಲತ್ತ ಬಸ್ಸು ಅಂಗಳಗ ಸುದಾರ್ಸಕಂಡು ಟೀ ಕುಡುಂ ಹೊಂಡುವಾಂತಾಗಿ ಇನ್ನೂ ಇತ್ತ್ಯಾಗ ಯಾಡನು ತೊಳದೂ ತೊಳುಂ ಬುಡುತ್ತಿದಂ ಗರೀಜ್ಕ ನೀರೂ ಕೆರ ಸೇರಗಾಯ್ತಾನೂ ಅಗಿ ಹಾಗೂ ಒಂದು ಬಸ್ಸು ಅಂಬೋದು ಬಂದು ಊರಲಿ ತಂಗುದಾಣ ಆದಾಗ.

ಅಕ್ಕಮಾದೇವಮ್ಮನ ಹೋಟ್ಲು ಬರ್ಕಾಂಯಸ್ತು. ಅಗ್ಗೆ ಹುಲಿಮಾಕ್ಕಲ ಕುತಾತ ಮಲ್ಲೈ ಮಾದೇಶ್ವರನ ಪೋಟ, ಕುದುರಮಾಕ್ಕಲ ಕುತಾತ ಬಸವಣ್ಣನ ಪೋಟ ನೆರುಕಗ ನೇತಾಡೀ, ದಿನಾ ಅವಕ ಹೂ ಹಣ್ಣು ಊದುಬತ್ತಿ ಬೀಳವು. ರಾತ್ರಿನಗ ಅನ್ಯ ವಾಣ್ಯಿ ಸಾರೂ ತಂಯಾರಾಗ್ತ, ಆ ವಾಣ್ಯಿ ಸಾರ್ಗ ಬಿದುಕೀರು ಬೆಂಮನಿಲ್ಲರಾಗಿ ಬಾವ್ಕ ಪಡುತಾ,

ಇರಲು, ಯಾಡಗ ಕೆಲ್ಸ ಹೆಚ್ಕಂಡು, ಹಗಲು ಲೋಟ ತೊಳೀತಾ ರಾತ್ರಿನಾಗ ತಾಕಡುಸ್ತ, ನಾಳ ಕಡುಬಿಗ ನಂಪ್ಲ ಅಡ್ಸ ಕೆಲ್ಸವಾಂಯ್ತು. ಅವಾವ್ಯ ನೀರ್ಗ ಅಂತ ಹೋದಾಗ, ಟೀಗ ಅಂತ ಬರೋ ಪೋಲಿ ಬಡ್ತೈತವ" ಅಣ್ಣೆ ಯಾಡ, ನಿಮ್ಮವ್ವ ಕೊಟ್ಟಂಯಂಡಾ" ಅನ್ನವು. ಇವ ಕೂಸ್ಯಲಿ ಕಣ್ಣು ರೆಪ್ಪೆ ಮಾಡ್ತಿದಂ ಆ ಥರಾಗಿ ಮಾಡ್ತಾ "ತಿರುಗಾ ವಾಪ್ಸು ಕೊಡುದಾದ್ರ ಕೊಡ್ತೀನೀ... ಬೇಕಾರ" ಅನ್ನನು. ಅದ್ಕ ಅವ ನಗವು. ಆ ದೂರಂಲಿ ನೀರು ಸೇದೋ ಆ ಅಕ್ಕಮಾದೇವಮ್ಮನು ಯಾಡನ ಹುಟ್ಟುಹೆಸುರ ಹಿಡುಂ "ಕೂಸೂ ರಾಜಶೇಕರ ಮಾರ್ಯಾ... ತೊಳಮಾಕ್ಕಲ ವಡ್ಡ್ಯನ ಹೊಸ ಟೀ ಸೊಪ್ಪು ಮಡುಗಿದೀ. ಅದ್ರಲ್ಲಿ ಕಾಯ್ಸಕೊಡು ನನಕಂದಾ..." ಅಂತ ಹ್ಯಕಿಂದ್ಲೆ ದನೀ ಕಡಿಸ್ತ, ನಾಕ

ಕೇರ್ಯಾಗ ಕೇಳಿನ್ರಿ, ಕಾಗ್ರಿ, ಇದಂರ ಇಲ್ಲಿ ಹೋಲಿ ಬರ್ತೈತ್ವೆ" ಅಕ್ಕಿ ಯಾಡ, ನಿಮ್ಮವ್ವ ಕೊಟ್ಟಯುದಾ" ಅಂತಾ, ಯಾಡ ಬೇಳೀತಾ ಇಂದ್ಗ ಚಿಕ್ಕವನು ನಾಳ್ಗ ದೊಡ್ಡವನಾದನು.

ಆತ್ಗ ದೊಡ್ಡವನಾದ ಯಾಡನು ಒಂಜಿನ ಅವ್ವಗ" ಅವ್ವಾ ಅವ್ವ ಅದ್ಯಾಕಕನ ಈ ಕೆಲ್ಸ ಬ್ಯಾಸರಿಕ" ಅಂದನು. ಅಕ್ಕಮಾದೇವಮ್ಮ ಬೋಜುಗಮ್ಮಕೊಂಡು" ಇದ್ಯಾಕಪ್ಪ ಕಂದಾ ಇಂದು ಹೊಸ ಮಾತ ಅಡ್ತಾ ಇದಿ. ಇನ್ನು ಬ್ಯಾರೆ ಕೆಲಸ ಯಾನ ಮಾಡೀಯುಪ್ಪ..." ಅಂದಳು. ಹೀಗೀಗೆ ಒಂದು ಆಡು, ಒಂದು ಕುರಿ, ಒಂದು ಮಾಗಬನಪ್ಪ ತಕೊಂಡ್ಬರ ಅವ ಮೇಯುಸ್ತ, ಅದರಲ್ಲೆ ಹೆಚ್ಚಾಕಲ್ಲ ಆಯುತ್ತಿನಿ ಅಂದನು. ಮಗ ಕೇಳಿದಂತೆ, ಅವ್ವ ನೆರೆಗೂಡಿ ಪಾರಕ ಅಂತ ಬೇಡಿ ತರಲು ಆಗೊಂದು ರೂಪ್ಪವಾಗಿ ಯಾಡ ಮೇಯುಸ್ತಾ, ಇರಬೇಕಾರ ಎಲ್ಲರಿಗಿಂತಲ್ಲ ಮೊದ್ಲನೆ ಏಳನು. ಆತ್ಲಗ ಜೀತಕಾರ ಐಕಳು ಬರೋಕು ಮೊದ್ಲುವ ಇದಂಬದಂ ಹಸುರ ತಾನೇ ಮೇಯುಸ್ಬುಡೋನು. ಹಾಗೇನಾಂಯುತ್ರಾ, ಇವ ಮೇಯುಸ್ದ ದಂದಕ ಎಲ್ರಾ ಮಾತ್ಯಲಬಿದ್ದುಂ ನಂ ದನ ಮೇಯುಸ್ಸ ನಂ ಆಡುಕುರಿ ಮೇಯುಸ್ಸ ಅಂತ ರಾಸುಗಳು ಬಂದು ಬೀಳ್ತಾ, ಯಾಡನ ರೂಪ್ಪವು ಹೆಗ್ಗಿತು.

ಆ ದಿನಾ ಯಾಡನು ಮುತ್ತುಗದ ಮರದ ಮಾತ್ಯಲ ಕೂತಲಾ ಬುತ್ತಿಬಿಚ್ಚಿ ತಿಂದೂ ಕಣರೆಪ್ಪ ಚಿಕ್ಕದು ದೊಡ್ಡದು ಮಾಡ್ತಾ, ಸುತ್ತಲೂ ನೋಡ್ತಾ, ದನಕುರಿ ಆಡ ಮೇಯುಸ್ತಾ, ಇರಬೇಕಾರ ಆ ಜೀತಕಾರ ಐಕಳೆಲ್ಲ ಪಿಚ್ಚಿ ಆಡ್ತ ಇದ್ದ. ಅಲ್ಲಿ ಕಾಸಕಟ್ಟಿ ಆಡವರು ನಾಕ್ಜನ ಆದ್ರ ಅಲ್ಲಿ ಮಾತ್ಯಲಬಿದುಂ ನೋಡವ ಹತ್ ಹೈಕ ಇದ್ದ. ಯಾಡ ಏನ್ಮಾಡಂ ಮರ ಇಳಂ ಬಂದು –" ನೋಡ್ರೋ ನೋಡ್ರೋ ನಾಳಕ ನಮ್ಮವ್ವ ಮಾಡಂ ವಡ ತಂದೊಡ್ತಿನಿಕನ. ಈಗ ನನ್ನ ದನಕುರಿ ಆಡ್ಡುವ ನೋಡ್ಕೊಳ್ಳಿ ವನ್ಕ. ನಂಗ್ಯಾಕೊ ವಸಿ ಹೊಟ್ಟಕಳ್ತ" ಅಂದುಬುಟ್ಟು ಹಳ್ಳಕ ಇಳಂ, ಕುವೈಕುವೈಟರ್ರ ಅಂದು ಆಡುಕುರಿಗಳನ್ನೆಲ್ಲಾ ಬರುಸ್ಕಂಡ, ಅಂಬಾ ಅಂದು ಹಸುದನಗಳನ್ನೆಲ್ಲಾ ಬರುಸ್ಕಂಡವ, ಅವ್ಗಳ ಓಡುಸ್ಕಂಡು ನಂಜನಗೂಡ್ಕ ಸುಕ್ರವಾರದ ಸಂತಗ ತಂದನು. ಸಿವಸಿವಾ ಆ ಸಂತಾ ಆ ಹೊಳ ಕಣ್ಣಗಗಾಣಗಲಾ ಇತ್ತಲ್ಲ ಅನ್ನುದಾಂ ಅಸ್ಗಲುಕುವಾ ಆ ಭೂಮತಾಯಿ ಎದ ಮಾತ್ಯಲ ಕುರುಚಲಗಿಡದ ಗುಡ್ಡದ ಥರವಾಗಿ ಒಂದ್ಕಡೆಗೆಲ್ಲ ಜೋಳಂ ರಾಶಿ. ಇನ್ನೊಂದ್ಕಡೆಗೆಲ್ಲ ಬೆಲ್ಲದ ರಾಶಿ. ಮತ್ತೊಂದು ಕಡೆಗೆಲ್ಲ

ದನ ಕೋಳಿಕುರಿ ಕೊಡ್ತೀನು ಸೈತ ಇರೋದು. ಅಲ್ಲಿಂದ ಏಳೋ ನದುಂಗದಿಂಲ ಆಕಾಸಕ
ಗುದುಂತಾ... ಆ ಜನೊ ಥರಾವರಿ ಧಿರುಸು ಹಾಕಂಡೂ ಆ ಕಡ್ಗ ಈ ಕಡ್ಗ ಸುಮ್ಕ ಸುತ್ರುಯ.
ಆಗ ಯಾಡ, ಪೇಟ ತಲ್ಗ ಸುತ್ಗಂಡೂ ಯಾನ ತಾಳ್ಕಂಡೂ ದನ ಇರಕಡ ದನ ನಿಲ್ಸಿ, ಕುರಿ
ಇರಕಡ ಕುರಿ ನಿಲ್ಸಿ, ಆಡು ಇರಕಡ ಆಡ ನಿಲ್ಸಿ, ನಡುಮಧ್ಯ ತಾನು ಮೋಜಿನಾಂರನಂಗ ನಿಂತ್ಕಳ್ಳೆ,
ಯಾವದೋ ದೊರಮಕ್ಕ ಮೂರಜನ, ದನದ ಯಾಪಾರ್‍ಕ ಅಂತ ಒಬ್ಬ, ಕುರಿ ಯಾಪಾರ್‍ಕ
ಅಂತ ಒಬ್ಬ, ಆಡ್ಕ ಯಾಪಾರ್‍ಕ ಅಂತ ಒಬ್ಬ ಬಂದ್ರು. ಆ ಮೂರ್‍ಜನಕ್ಕೂವ ಯಾಡ್ಕ
ರಾಸುಗಳ ಮ್ಯಾಕ್ಲ ಮನಸಾಗಿ ಹೋಗಲ್ಲೊಲ್ಲರು. " ಏನಯ್ಯಾ ಹುಡ್ಗ ಏನ ಎಸ್ರು ನಿನದು?"
ಅಂತ ಅವ್ರು ಕೇಳ್ತಾರೆ. ಅವರವ್ನ ನೀರು ತರ್‍ಗ ಕೂಗೋ 'ರಾಜಸೇಕರಮೂರ್ತಿ' ಹೇಳ್ತೆ
ಒಹೋ ಇವನ್ಯಾರೋ ದೊಡಮನ್ಸರ ಮನೆಯವನೇ ಇರ್‍ಬೇಕು ಅಂದ್ಕಂಡು "ಯಾಪಾರಕ್ಕೇನೀ
ಈ ರಾಸ್ಗಳು ಇರಾದು?" ಅಂತ್ಲ ಯಾಡ " ಊಕನ್ರಿ. ನಮ ಅಪ್ಪಾಜಿಯವರು ಇಲ್ಲ
ತಾಲ್ಲೂಕ ಆಫೀಸ್ಗಿರಿ ಮೋಜಿನದಾರ ನೋಡ್ಕ ಬತ್ತಿನಿ ಇರು ಅಂದ್ಬುಟು ಹೋಗಿರ್‍ಕನ.
ಇನ್ನೊಂದು ಜಹೊತ್ಗ ಬಂದ್ಬುಡ್ತಾರ್‍ಕನ. ವಸಿ ತಡ್ಕಳ್ರೀ" ಅಂದನು.

ಆಗ ಆ ದೊರಮಕ್ಕ ಆ ಆಡುಕುರಿ ದನ್ನ ಹೋಡ್ತ ಆ ಸುಳಿಸುದಿಂ ನೋಡ್ತಾ ಆನಂದುಸ್ತ
ಅದೂಸುವ ಬ್ಯಾನರುಕ ಆಗಲು ಆ ಗಂ ಆನ್ಸೋ ಹೋಟುಲ್ಗ ಸುಗ್ಗಿ ಟೀ ಬೋಂಡ ತಿಂಕಂಡು,
ಬೀಡಿಸಿಕೊರೊಟ ಸೇದ್ಕಂಡು ಬರಲು ಆಸ್ತೊತ್ತಗ ಹೊತ್ತು ನಡುಮಧ್ಯ ಇದುಂದು ವಾಲ್ತು.
ಆಗಲಂತು ದೊರಮಕ್ಕಗ ತಡೆಯಾಕಾಗಲಿಲ್ಲ. " ಅಲ್ಲಪ್ಪಾ ಹುಡ್ಗ, ನಾವ ನೋಡುಂರ ನಿನ
ರಾಸ್ಗಳ ನೆಡಗಂಡು ಬೇರೆಕಡಾ ಮನಸ್ಸು ಮಾಡಿಲ್ಲ. ಆ ಕಡ ಪರೂರಲ್ಲ ಕಣುಂಗ
ಬೇಕಬೇಕಾದವ್ಕಲ್ಲ ಬ್ಯಾರೆಯವರ ಹತ್ರ ಆಯ್ಕಂಡು ಹೊರಟೂಹೋದ್ರು. ಈ ಕಡ
ನಿಮ ಅಪ್ಪಾಜಿಯವರೂ ಬರ್‍ಲಿಲ್ಲ. ಇನ್ಕ ನಿಮ ಅಪ್ಪಾಜಿಯವರು ಬಂದೂ ನಾವ ಯಾಪಾರ
ಕುದುರ್‍ಸೀ ಇನ್ಕ ನಾವ ನಮನಂ ಊರು ಸೇರ್‍ಕಳದು ಯಾವಾಗಪ್ಪಾ?" ಅಂದರು. ಯಾಡನು
" ಅಯ್ಕಯ್ಯೋ ನಂ ಅಪ್ಪಾಜಿಯವರು ಆದಲೋ ಮೋಜಿನದಾರ ಜೊತ ವಡೀ ಕುಡೀತಾ
ಸಿಕರೋಟು ಸೇದ್ಕತ್ತ ಮರ್‍ತುಬುಟ್ಟಿರಬಾದುಕನ. ನೀವ್ಗಳು ವಸಿ ನೋಡ್ಕತ ಇರಿ ಇತ್ತಗ.
ನಾನು ಈಬೋರಿಯಿಂದ ಹೋಗಿ ಆಬೋರಿಯಿಂದ ಜೊತರ ಬಂದ್ಬುಡ್ತೀನಿ ಅತ್ತಗ"

ಅಂದನು. ಆಗ ದೊರೆಮಕ್ಕ ನಗ್ತ, ತಮ್ಮ ಅಂದರು ಏನಂದರ — "ಎಲ್ಲಾದ್ರುನು ಉಂಟೇನಯ್ಯ ಪೆದ್ದ ಹುಡುಗ್ನ. ನಂತರ ಒಳ್ಳೇರೂ ಇಂಟೂ. ಕೆಟ್ಟೋರೂ ಉಂಟೂ ಯಾನಾರೂ ರೇಟು ಹೇಳವ್ರನೇಯ್ಯ...?"

"ಉಹ್ಣ ಸೋಮೀ... ಹೇಳವ್ರ. ಕೇಳಂವ್ಗ ಮೊದ್ಲ ಅವ್ರತವಿಯ ರೇಟ ಕೇಳು ಅಂದವ್ರ..."

"ಅಯ್ಯಯ್ಯೋ ಮಹಾದೇವೀ... ಆಗಾರ ಅದೆನ್ನ ರೇಟು ಹೇಳು ಮತ್ತ..."

"ನಿಮ್ಮ ರೇಟ ಮೊದ್ಲ ಹೇಳಿ ಮತ್ತ..."

ಆ ಮೂರ್ಖನ ದೊರೆಮಕ್ಕಳುವ ತಂತಮ್ಮಲ್ಲಿ ಮಾತಾಡ್ಕಂಡರು.

"ನಮ್ಮ ರೇಟು ಮೂರ ಸಾವಿರಕಣಯ್ಯ..."

"ನಾಕ ಸಾವಿರ ಬಂದ್ರ ಕೊಟ್ಟುಬುಡು. ಅದೂ ಮೊದ್ಲವ ಕೇಳಂವ್ಗ ಐಸಾವಿರ ಹೇಳು ಅಂದವ್ರ ಸೋಮೀ..."

ಆ ಯಾಡ್ನ ಮಾತ್ಗ ಆ ದೊರೆಮಕ್ಕ ನಕ್ಕಂತ ನಗ್ತ, ಆ ರೇಟೀನ ಒಂದಾಸು ಹೆಚ್ಚಾ ಅನ್ನಂಗಿದ್ರೂನೂ ಮಾಲುವಾವ ಆ ಮುಟ್ಟಕ್ಕೇನೆ ಐತೆ ಅಂದ್ಕಂಡು ನೂರನೂರ ರೂಪಾಯಿ ರವರವ ನೋಟ ಎಣಿಸಿ ರಾಸಗ್ಳ ಹಿಡಂದ್ರು.

ಆ ಹಣವೇ ಯಾಡನು ಆ ಗಂಮಂತ ಕರಿಯಾತಿದಂ ಒಟ್ಲಗ ತಾನೂವ ನುಗ್ಗಿ ಬೋಂಡ ಬಿಟ್ ಕುಡ್ಕಂಡವನು, ಅಲ್ಲ ರೊಟ್ಟಿ ತರಾಳಿಯ ಗಂಡು ಐದು ಗಳಾಸ್ನವ ಐದು ಬೆರಳಿಲ್ಲ ಸಿಕ್ಸಕೊಂಡು ಆ ಗಲೀಜ್ನ ನೀರ್ಗ ಆ ಐದು ರೊಟ್ಟಿನುವ ಜಳಕ್ಕನ ಒಳಕ್ಕಟ್ಟ ಒಳ್ಗ ಲಳಲಳ ಮಾಡ್ಬುಟ್ಟ ಮೇಲ್ಕ ಥಳಥಳ್ನ ಲೋಟ್ಟಂ ಎತ್ತ್ಕಂತಾ ಇದ್ನಲ್ಲಾ ಅದೂನ್ವ ನೋಡ್ಕಂಡು ಇವ ಯಾನಾದ್ಬುಬುಟ್ಟ ಬರ್ರೋ ಅಂತ ಬನ್ನರಿ ಬಂದು, ಬುತ್ತ ಅವಸಿದ್ರ ಇದ್ನಲ್ಲಾ ಆ ಮುತ್ತುಗದ ಮರ್ದ ಹತ್ತಿ, ನೋಡ್ತಾನೇ — ಆ ಜೀತಗಾರ ಐಕಳು ಇನ್ನೂವ ತಿದ್ದ ಅಷ್ಟಲೆ ಅವೆ. ಇವ ಇಳಂ ಆ ಮರದ ಕೆಳಗ ಮಲುಗಿ ಕಟಬಾಯಿರ ಆ ಕಡಗ ಒಂದು ಗೇಣು ಈ ಕಡಗ ಒಂದು ಗೇಣು ಜೊಲ್ಲು ಸುರುಸ್ತಾ ಒಬ್ಬರ ಮೋರೊಬ್ಬರು ಆ ಜೀತಗಾರ

ಐಕ ಕವುಚ್ಕೊಂಡು ಬಿದ್ದಂ ಪಿಡ್ಚ ಆಡ್ತಾ, ಇದ್ದಂವ ಬುಟ್ಟ ಪಿಡ್ಚ ಕಾಣಿಸದಾದಾಗ, ಪೋಳೋ ಕತ್ತಲ್ಲ ಆಯ್ತು, ಅಂದ್ಕಬುಟ್ಟು ಎದ್ದಂ ತಂತಮ್ಮ ದನಕರಿಗಾಗಿ ಕಾಣ್ದ ಆಸ್ಟೂ ದೂರಕ್ಕ್ಯವ ನೋಡ್ತ್ರವ. ಒಂದು ರವಷ್ಟೂ ಕಂಡುಬರಲಿಲ್ಲ. ಆ ಹತ್ತೂ ಜನವೂ ಆ ಹತ್ತೂ ದಿಕ್ಕಲೂ ನೋಡ್ಕೊಂಡು ತಿರುಗಾ ಮುತ್ತುಗದ ಮರದ ತವಕ ಬಂದ್ರವೆ. ಅಲ್ಲ ಯಾಡ ಯಾನ ಹಾಕಿ ಜೊಲ್ಲ ಕರಗಿಸಿಕೊಂಡು ಮಲಗವನೆ. ಆಗ ಜೀತಗಾರ ಐಕಳು ಯಾನಂತ ಮಾತಾಡಿಕೊಂಡ್ರು: ನಂ ನಂ ಗೌಡಗಳು ಇನ್ನು ನಂ ಬುಡಾಕಿಲ್ಲ. ಎದ್ದಂರ ಯಾಡನೂ ಬುಡಾಕಿಲ್ಲ... ಅಂದ್ಕಂಡು ಕಾಫಿ ತೋಟಕ್ಕ ಸೇರ್ಕಂಡರು.

ಕತ್ತಲು, ಭೂಮಗ ತನ್ನ ದಾರದ ಎಳೆಗಳನು ಇಳಿಬುಡ್ತಾ, ಹಾಗೂ ಪಸುಪ್ರಾಣಾದಿಗಳು ಬಾರದಿರಲು ದಿಗಲುಳ್ಳವರಾಗಿ ಗೌಡಗಳೂ ಗೌಡತೀರೂ ಗಂಡಸ್ತ್ರ ಮುಂಡರಾದಿಯಾಗಿ ಜಮಾಯಿಸಿ ಧುಳು ಕಾಣಲು ತವಕವಾಗಿರಲು

ಆ ರಸ್ತಾ ಮಣ್ಣುಮಡ್ಡೆಗಳು ಒಂದುಗೂಡಿ ಅದು ಯಾಡನಾಗಿ ಆ ಕಲ್ಲುಮುಳ್ಳು ರಸ್ತಾರಿ ಯಾಡನು ಉರುಳುಸ್ತ್ಯವ ಮಾಡ್ತ, ಹತ್ತಾರದನ ಎಬ್ಬುಸೋ ಧೂಳ ಅವ ಒಬ್ಬನೆ ಎಬ್ಬಿಸ್ತ ಉರುಳ್ತ ಬರುತಾ ಇದ್ದಾನ ಎಂಬುದರ ಅರುತಮಾನ ಅದಾರಿಗೂ ಉಂಟಾಗದಿರಲು, ಎಲ್ಲರೂಗ ಒಂದ್ಸಲಕ ಬೆರಗು ಹಿಡುಂ, ಬಲು ಕಸ್ಟದವರಾರೋ ಮಕ್ಕ ಹರುಕೆ ಹೊತ್ತಮಿಂದ ಈ ಸ್ಯಾವ ನಡೆಯುತಿರಬೇಕೆಂದು ಅಂದಾಜುಸ್ತ, ಇರುವಲ್ಲಿಗ ಯಾಡನು ಉರುಳು ಬಂದು ಅಲ್ಲಿಗ, ಅಲ್ಲಿ ನಾನಾ ಥರಾವರಿ ಉರುಳ್ತಾ, ಇದ್ದಾನಪ್ಪ ಸಿವ ಇದು ಅನುಸ್ತ, ಆ ಮಾನುಭವ ಯಾಡನ ಜೊಗ ಜಿಡ್ಡಾದಿಗಳು ಅವಾವೂ ಇತ್ತೋ ಅವ, ಅವಕ ಮಣ್ಣುಧೂಳುವಿಲ್ಲುಉಡಾಕ್ತೊಪ್ಪಾದಿಗಳು ಬಿಡುಸಲಾಗದಂತಂಟಿ, ಅದಾವುದಾರೂ ಅದಿರಲಿ, ಅದರೊಳಗಿದ್ದಂ ಆ ದೇಹವೂ ರಗುತವಾಡುತ ನೂರಾ ಎಂಟು ಬಣ್ಣವಾದ ಅದು ನಿಂತಕಡ ನಿಲ್ಲಂಯ ಉರುಳ್ತ, ಆ ನಿಂತವರ ಪಾದಗಳ ಹಿಡಿಯುತಾತ

ಬೆವಾತ ಆ ಜನವೂ ದಿಂಕಿಕಡ್ಡಿಗೀರಿ ಬೆಳಕಾಕ ಮಾಡಿ ನೋಡಲೂ ಅರುತವ ಸಿಗದಿರಲು ಆಗ ಬಲುಕಸ್ಟದಲಿ ಯಾರೂ ಒಬ್ಬ ಬುದ್ದಿವಂತುಗ ಮೊದಲು ತಿಳಿದುಬಂದು ಅದು ಯಾಡ ಅಂಬುದು ಅರುವಾಯ್ತು. ಆಗ ಆ ಎಲ್ಲರೂ ಯಾಡನ ಎತ್ತಿಕೂರಿಸಿದರು. ಓಡಾಡ್ತ,

ಒಬ್ಬ ನೀರು ತಂದನು. ಇನ್ನೊಬ್ಬ ಯಾಡನ ಬಾಯಿ ಬಿಡಿಸಿದನು. ಆ ಬಿಡಿಸಿದ ಬಾಯಿಗೆ ಮತ್ತೊಬ್ಬ ನೀರು ಅನಕಿಸಿದನು. ಮಗದೊಬ್ಬ ಬವಲ್ಲಿಂದ ಗಾಳಿಸಾಕ್ವವ ಆಗ.

ಅವ್ವ ಅಕ್ಕಮಾದೇವಮ್ಮನು ಲಬೋಲಬೋ ಬಾಯಿ ಬಡಿಯುತ ಬಂದು ಆ ಉರುಳಾಡುತ ಇರೋ ಯಾಡನ ಮುಂದ ಕೂತು ವಾಲಾಡಿದಳು. ಎಲ್ಲಕ್ಕೂ ಯಾಡ 'ಲಪೋ ಲಪೋ ಲಪೋ ಲಪೋ' ಅಂತ. ಆಗ ತಿಳಿವರೊಬ್ಬರು " ಯಾನ್ನ ಕಂಡು ಬೆದರಿದಿರದು ಇದುಕನ. ಮಸಿಹೊತ್ತು ಸುಮ್ಮಗ ಮಲುಗ್ಸರಿ" ಅಂದರು. ಬಿಳಿ ಮೀಸ್ಸೆವ ಒಬ್ಬನು, ಬೇವಿನ ಸೊಪ್ಪು ತಂದು ಇಳಗುದು ತಗೀತಾ ಯಾಡನ ಶಿರೀಲದ ಮ್ಯಾಲ ಸವರಾಗಿ ಸೊಪ್ಪು ಸವರುತ ಸವರ್ತ " ಬಿಡು, ಅನ್ನ, ಬಿಡು, ಅನ್ನ" ಅಂತ ಸವರುತ ಬಿಡುಸ್ತಿದಂನು. ಬಿಡಿಸಾಗಿ ಅಮ್ಯಾಲೂ 'ಅದ್ಯಾಕನ ಕಂಡ್ಯಪ್ಪ' ಅಂದ್ರ ಅದ್ಯಾವ ಯಾಡ 'ಲಪೋ ಲಪೋ ಲಪೋ ಲಪೋ' ವಡರ್ತ ಊರುಗಾದಿ ಊರು ನೋಡ್ತ ನಿಂತಿತ್ತು. ಅಕ್ಕಮಾದೇವಮ್ಮ ದುಕ್ಕದ ಮಡುವಾಗಿ, ಒಂದು ದಿಕ್ಕಗ ಕಣ್ಣು ತೋರುಸ್ತ " ನಮ್ಮ ಏಳಿಗ ನೋಡಕ್ಕಾಗದವರ ಮಾಟ್ಮಕಪ್ಪ ಇದೂ... ಇದು ಅಂತಿಂತದಲ್ಲಾ..." ಅಂತ ನೆಲವ ತಾರುಸ್ತ ವಾಲಾಡುತ. ಈ ದಂದವ ನಿದಂಬಂದು ಆ ಜನಕ ಗುದೂಂವರೂಗ ನಡುಂ, ಅಲ್ಲಿ ನಿಂತೋರು ತಲಗ ಒಂದ್ಸಲವಾದರೂ 'ಅದ್ಯಾಕನುಡ ಯಾಡ' ಅಂತ ಕೇಳೀ ಆ ಕೇಳಿಂವರ್ಗ ಸುಸ್ತಾಗಿಸಿ ಕೊನೆಗ ಯಾಡನು 'ನಂ ಅಡಕುರಿ ದನುವಿ' ಅಂತ ಉಸುರ ಬಿಟ್ಟನು. ಅಕ್ಕಮಾದೇವಮ್ಮಗಾಗ ದೊಡ್ಡಜೀವ ಎತ್ತಿಟ್ಟಂತಾಗಿ ತಾರ್ಸದು ಕುಟೊಳ್ಳದು ನಿಲ್ಪ ಕೂತು ಬೆಪ್ಪಾದಳು. ಸುತ್ತಾಲೂ ಜನವಾಗಿ ಗಾಳಿಯಾಡಲು ಕಷ್ಟವಾಗಿ, ಅಲ್ಲಾಡುತ್ತಿದಂ ಗಾಳಿಗ ಉಸುರು ಸಿಕ್ಕಿಕೊಂಡಿರಲು ಯಾಡ ಅಂದನು:

> " ನಂಗ ಹೊಟ್ಟಕಳ್ತ ಬಂತು. ಜೀತಗಾರ ಏಕಳಗ ನೋಡಕ್ಕಿ ಅಂದಿ. ನಾನು ಹಳ್ಳಕ ಪೋದಿ. ಅದ್ಯಾಕಕಕನಿ ಸುಸ್ತಾದಂಗಾಯ್ತು. ಬಂದವ ಮುತ್ತುಗದ ಮರಂ ನೆರುಳಲ ಮಲಕಂದಿ. ಅದ್ಯಾಕಕನಿ ನಂಗಾ ಮಾಂಯುಂ ನಿದಾಂವ ಬಂದು ಆಗುತಗೇತ್ತು. ನಿದಂ ತಿಳುಂ ಕಣ್‌ಬುಟ್ಟೀ... ನನ ಸುತ್ತಾ ಬಕೋ ಅಂತಿತ್ತು..."

ಆ ನಿಂತ ಕುಂಡ್ ರಾಸುದಾರರು ಕುಸುಂಕೂರಲು, ಆಗ ಅಕ್ಕಮಾದೇವಮ್ಮನು ಆ ಒಂದು ಉಸುರಗ ಎದುಂ ಈ ಉಸುರಗ ಬರಬರ್ನ ಬೇಲೀರಿ ಆಳುದಂದ ಲಿಕ್ಕ ಕಜ್ಜ ಕಿತ್ತಬಂದು ಆ ಎಲ್ಲಾ

ಉಸುರುಳ್ಳವ ನೇರ್ಪ ಯಾಡನಿಗ ರಪ್ಪರಪ್ಪ ಗಟ್ಟ್ಯಸ್ತ ತಡೆಯಾಲು ಬಂದವರಗೂ ಬಿದ್ದವ ಆತ್ತಗ. ಈ ರೋಷವ ನಿಧಾನಸ್ತಗಾಂರರೊಬ್ಬರು ತಡುಂ ಅಂದರು:

" ಅಂತೋಳೀ ಮರುಳೇ, ನಿನ್ನಗ ಬಡ್ಕಬಂದಿರೋದೇ ಒಂದು ಹೆಚ್ಚಾಗ್ರಕ
ಅಂದೊತ್ತ. ಆ ಜೀತಾಗ್ರರ ಏಕ ಯಾನಾದೂಂ. ಯತ್ತಾದೂಂ. ನೀ ಮಾಡಮುಬ್ಬರ
ಪುಣ್ಯ ಅವನೀಗ ಉಳಿಸದ. ಎಲ್ಲರೂಗ ಅದುಂ ನಿಂಗೂ ಅಯ್ತದ. ನಮಯ್ತು
ಅನೋದಿದು ಕಿತ್ತುಗಗ ಬಂದೂ ಗುಡಕಂಡು ಕೂತಾಗ ಆಗ ನನದು ಕೊಡು,
ತನದು ಕೊಡು ಅಂತ ಯಾರಾರು ಅಂದ್ರ, ಮೇಲಿದ್ದ ಮೆಚ್ಚೀನಾ ಅದ?
ಈಗ ಗಂಡು ಬಿಟ್ಟಂಡದ. ರತನೀರ ತಗುಂ ಒಳಕ್ಕ ಕರ್ಕ..."

ಅಂದವರ ಕಾಲಗ ಅಕ್ಕಮಾದೇವಮ್ಮನು ಬಿಗಿ ಹಿಡುಂ ಬಿದ್ದೂಂ—

"ಯಪ್ಪಾ ಸಿವನೇ... ನಾ ರುಸ್ಕಂತಿ ಅದ ತಾವಿಂದಲ್ಲಾ ಒಂದು ಸಣ್ಣ ಕೂಸ್ನ
ಕೈಲೂ ಬಿರುಳ ತೊರ್ಸ್ಕಂಡು ಬಾಳಾಟ ಮಾಡಿಲ್ಲಾ. ಹಬ್ಬ ಒಳಗ ಒಬ್ರ
ತರಾವರು ಇಲ್ಲಾ... ಒಬ್ರ ಬರಾವರು ಇಲ್ಲಾ... ಇಂಥ ಕಡ ನಾನು ಒಂದು
ದೂಪನಾರೂ ಆಕ್ಕಂಡೂ... ಒಂದು ದೀಪನಾರೂ ಅಸ್ಸಗಂಡೂ... ಅವರಾ
ಹೆಸ್ರ ಹೇಳ್ಕಂಡು ಹೆಂಗೋ ಜೀವ ಹಿಡ್ಕಂಡಿರೂ ನಾನೀಗ... ಈ ಮಗ್ನ ದೆಸಲೀ..."

ಆಗಾಗಲೇ ಅದೆಷ್ಟೋ ಜನಾ ಮಾತಾಡಿಯಾಗಿ ಈಗ ದ್ಯಾವಮ್ಮ ಅಂಬೋರು ತಾಕದೀಕೇನ ಜಯಿಸಿ ಹಸನ್ಮುಖವಾಗಿ ನಿಂತೂ ನೆನ್ನೆ ತಾನೇ ಗಂಡೊಂದು ಜಾತಿ ಹೆಣ್ಣೊಂದು ಜಾತೀದು ಮದ್ವೆ ಮಾಡ್ಸಗ ಆಡಿದಂ ಮಾತ್ಗಳ ಏನೆಂದರೆ — 'ಗಂಡ ಹೆಣ್ತಿಯರಾಗಿ ಏನ್ಬೇಕಾರೂ ಎಷ್ಟು ಬೇಕಾರೂ ಜಗಳವಾಡಿರಿ. ಆದರೆ ಇಂತಿಂಥ ಜಾತಿ ನೀನೂ ಅಂತಂತ ಹೇಳ್ತ ಮಾತ್ರ ಜಗಳ ಮಾಡಬೇಡಿರಿ ಅಂತ ನಾನಾದರೂ ನಿಮ್ಮಲ್ಲಿ ವಿನಂತಿಸುತ್ತೇನೆ' — ಅಂಬುದ ಇಲ್ಲಿ ಹೇಳಬ್ಬುಟ್ಟು,

ಅವ್ವ ಇದ ಇಲಾಕ್ಕಪ್ಪ ಹೇಳಿಂ ಅಂತ ತುಸುವೇ ಕಕ್ಕಾಬಿಕ್ಕಿಯಾದರೂ ಮುಂದಲ ಮಾತಿನ ಮೋಡಿ ಹಾಕಲು ಕಣ್ಗಳ ಅರಳಿಸಿಕೊಂಡಿರಲೂ,

ಅಷ್ಟಕ್ಕೇನಾಯ್ತು, ಕಲ್ಲೂ ನೀರೂ ಕರಗೂವ ಹೊತ್ತು, ಮೀರಿಯೂ ಹೊಲಾರ ಮಾರಿಗುಡಿ ಜೋತಮ್ಮನು ತಂ ಸಭಗ ಬಾರದಿರಲು ಸಿಟ್ಟಿಯಾಗಿ ತೊರಾರ ಜೋತಮ್ಮನು ಹೊಲಾರ ಮಾರಿಗುಡಿಗ ಬಂದೂ ಕಂಡು ಆ ತುಂಬಿದ ಜನ್ವ, ಅವಳೊಗ್ಗ ದಂಗಾಯ್ತು. ಆ ಉಸೂರ ಹಿಡ್ಕಂಡೂ ಮೆಲ್ಲಗ ಬಂದೂ ಈ ಜೋತಮ್ಮಗ 'ಅಕ್ಕ' ಅಂದಳು. ಅದ್ಕ ಮಾರಿಗುಡಿ ಜೋತಮ್ಮ:

" ನಾ ನಾನೇ ಯಾನ್ಕ ಮಾಡ್ಲವ್ವ? ಇವ್ರು ಈ ಥರವಾಗಿ ಗುಡುಗ್ಗ ಸಿಡ್ಲ ರಾಕ್ಷಸರ ಥರಾವ್ಗಿ ಕೂತಿರಾವ್ಗ...."

" ಅಕ್ಕ ಅದಿರ್ಲಿಕನ, ಇಲ್ಲಿ ಕುಂತಿರೋ ಹೈಕಳು ಯಾನೋ ಓದಿ ಬರಂ ಕೆರಾಂಕದವರು ತಾನೀಯಾ? ನಾನು ಯಾರಾರುಂ ಮಯುಂಬ ಸಾವಿರಾರ ವರ್ಸದ ತಲತಲಾಂತರದ ನನ್ನ ನುಡಿಸಿ ವಸಿ ದಟುಕುಮುಳ್ಳ ಆಡಿಸ್ಲಕ?"

" ಅವ್ವಾವ್ವ ನೀನೀಗ ಬೆಡಗುದುಲ್ಲಕವ್ವ... "

ಅಂತ ಹೊಲಾರ ಜೋತಮ್ಮನು ತೊರಾರ ಜೋತಮ್ಮನ ಕೆಕ್ಕಗ ತಿವಿಯುವುದರೊಳಗ ತೊರಾರ ಜೋತಮ್ಮ ನೆಗಾಡ್ತ ಕುರಿಯಯ್ಯಗ ಮೈದುಂಬಿಕೊಂಡಳು.

ಆಗಲೇಗ ಆ ಮೋಟು ಬೀಡಗಳ ಮಾಕ್ಕಲ ಮಲುಗಿದಂಥಹ ಕುರಿಯಯ್ಯನು ತನ್ನ ಬಿಳಿ ಗಡ್ಡ ಮೀಸ್ವ ರಾರಾಜಿಸ್ತ ನೇದೋಗಿದಂ ಕಯ್ಯ ಎತ್ತಿ ಸ್ವಯಲಾಗಿ ಅಡುಸ್ತಾ — " ನಿಲ್ಸ ಕೂಸೂ ನಿನ ಮಾತ. ಎಲ್ಲಿದಂದೂ ಜಾತಿ?" ಅನ್ನಲು ಎಲ್ಲರೂಗ್ಗ ಕಕ್ಕಾಬಿಕ್ಕಿ ತುಂಬ್ಕಂಡು ಹೆಲಾಡ್ತ ಆ ಕರಿ ದೂಂಧೂಂತಗಲ ದಾಕ್ಟರು 'ಇಲ್ಲೂ ಸಿಐಎ ಏಜೆಂಟಲ್ಲಾ' ಅಂದ್ಕತ್ತ

ಕುರಿಯಯ್ಯಗ ನೋಡಲು, ಆ ಕುರಿಯಯ್ಯನೂ 'ಆ ದಾಕ್ತರ ಆಕಾಸದುದ್ದ ಇದ್ದಂಥ ಜಲ್ಮಕ್ಕ ತನ್ನದೊಂದು ಬೀಗುವದಲು ಸಮಾನ· ಎಂಬಂತೆ ತಾನೂ ನೋಡಿ ಕಿರುನಕ್ಕ:

" ನೋಡ್ರಪ್ಪ ಕುಲಸ್ಥರ···· ಕೇಳ್ರಿ, ನಾನು ದಿಕ್ಕುದೆಸ ಇಲ್ಲದ ಬಡಿಯೋ ಅನಾದ್ರಿ··· ಹಿರೀಕ·

ಅಂಥಾ ನಾನೇ ಜಾತ್ಯ ಕಂಡಿಲ್ಲ ಅಂತೀನಿ· ನಂಗ ಆ ಜಾತ್ಯ ಅಪಮಾನ ಮಾಡ್ಸಿ ನೀವು ಮುಂದ್ಕ ಮಾತಾಡ್ರಿ···"

ಅಂತಂದು ಒಬ್ಬೊಬ್ಬರನ್ನಾಗಿ ನೋಡತೊಡಗಿದನು·

ಆ ಹುಸಿನಗೆಯ ಬುಡದವರಾಗಿ ಲಾಯರು ನೋಡುತ್ತಿರಲೂ ಅರೆಮನಸ್ಸಿನಿಂದ ಕಿನ್ನಪ್ಪರು ಕಷ್ಟದಲಿ ಎದ್ದುಗೊಂಡವರಾಗಿ ಸೆಟಕ ಗಾಳ್ಯ ಬೀಸ್ಕಳ್ತಾ ಗಾಳ್ಯ ಏನಂದರು:

" ನೋಡಿ ಕಾಕಯ್ಯ ನೀವು ಕಷ್ಟ ಉಂಡು ಬದುಕಿಬಾಳಿದಂಥವರು· ನಿಮ್ಮ ಬಗ್ಗೆ ಇರೋ ಕಥೇನ ಓದಿದೀನಿ· ಅಂಥ ನೀವಾ ಇಂಥ ಮಾತುಗಳ ಆಡಬಾರದು· ಹೊಲಮಾದುಗ ಅಂದ್ರ ಬೇರೆಯವರ ರಕ್ತ ಕುದಿಯೋದು ನಿಚ್ಚಳವಾಗಿ ಕಾಣ್ತದಲ್ಲಾ···· ಇದಕ್ಕ ಕಾರಣ ಏನು? ಇದಕ್ಕ···"

ಕುರಿಯಯ್ಯ ಮಾರಿಗುಡೀನ ಬೆಳಗೋ ಥರವಾಗಿ ಒಂದ್ಸಲ ನಗಾಡಿಬುಟ್ಟನು·

" ಏ ಅದಾ ಕುಲಸಾ? ತಾಳಾ··· ಗಿಲ್ಲಿಬಿಡಲ್ಲ ನನ ಮಾತು ತಿಳ್ಕ· ನೋಡು ಮಗ, ಯಾರಾರು ಈಗ ಬಂದು, ನನ ಹೆತ್ತಯ್ಯ ಹೊಸ್ಗಂಡು ಹೋಯ್ತೋದ್ರ ಹೇಳಾ ಹೆಂಗಾಗಬೇಕು ನಂಗ?"

ಅದು ಎಲ್ಲಾರಿಗೂ ಆಗುವದು ಅದೂ··· ಅದಾಕ ಕೇಳ್ತೀನು ಇವ ಆದ ಈಗಾ··· ಅದಾ ರಕ್ತಾವ ಕುದೀತಾ·

" ಅದ ತಾನಿಯಪ್ಪ ಆಗದು? ಯಾನ? ರಗ್ತ ಕುದೀತಾದ. ಬಾಕಿರೆ ಜಾಕ್ತಿಯವರಿಗೂ ಆಗದುವಿ ಅದೇ ಕಯ್ಯ· ನಮಗೊಂದು ನ್ಯಾಯಾ··· ತಾಳಾ, ಅವರೊಗ್ಗಂದು ನ್ಯಾಯ ಅಂತಿದ್ದಂದಯ್ಯ ನ್ಯಾಯ? ಯಾನಾರಾ ನಂ ಜಾತಿ ಬಟ್ಯಾತ್ತವಗಳು ನಿಯತ್ತಗಾರ್ರು ಅದ್ಕಂದಿದೀರಯ್ಯ ಯಾನಾರುವಿ? ನಂಬೀರಿ ಜೋಕೇ····
···· ಗೊತ್ತಯ್ಯಾ ನಿಮ್ಗ? ಸಾವಿರಾರು ಯುಗಮಾನಗಳ ಹಿಂದ್ಲ ನಡೆನುಡಿ ಗೊತ್ತಾನಿಮ್ಗ? ಗೊತ್ತಾ? ಆಗ ನಂ ಜಾತಿ ಬಟ್ಯಾತ್ತವ ಮಾತ್ರಂ ಕೇಮಿ ಯಾನ ಅಂತ ಗೊತ್ತಯ್ಯಾ··· ?"

ಈ ಸೋಡಿಗ ಮಾರಿಗುಡಿ ಮುಂದುಕ ಕಿವಿಯಾಗಿ ಅಂಸುತ:

> " ಗೊತ್ತಾಯಿತ್ಕ? ಕೇಳಿ··· ನಂ ಜಾತಿ ಬಡ್ತತ್ವ ಕಾಯ್ಕೊಡಿದುಂ ತಂ ಕಣ್ಣಿಗ
> ಬೇಕಬೇಕಾದ ಉತ್ತಮ ಜಾತ್ಕವರ ಹಿಡ್ರರ ಹೊತ್ತಂಡು ನಡುಂಬುಡೋರು
> ಎಲ್ಲಗ್ಕ? ಬೆಟ್ಟದ ಕಿಬ್ಬಿಗ· ಅಯ್ತಾ? ವಸಿ ದಿನಗಂಟ ಅಲ್ಲ ಇರಾರು·
> ಅಯ್ತಾ? ಅಮ್ಯಾಕ ಕೇಳಿ ಅ ಬಡ್ತತ್ವ ತಿರಾಗ ತಂ ಊರ್ಗಯ ಬರೋವು·
> ಯಾನೇ ಅಗ್ಲ ಉತ್ತಮಜಾತಿ ಜನ ಒಳ್ಳವರಾಗಿದ್ರುಕಯ್ಕ· ತಾಳ್ಕತ್ತ
> ಇದಂರು· ಅದ್ಕಯ ಅವ್ರಗ ಉತ್ತಮಜಾತಿ ಅಂತ ಹೆಸ್ರು ಬಂದು ನಿಂತಿರೋದು·
> ಸುಮ್ಮಗ ಬಂದದ ಅಂದ್ಕಂಡಿದ್ಕರ? ಕೇಳಿ, ಅ ಉತ್ತಮ ಜಾತ್ಕವರು
> ಬೆಟ್ಟದ ಕಿಬ್ರಯಿಂದ ಬಂದವರ್ಗ ಏನ ಅಂತಿದ್ರು ಅಂದ್ರ:··· '··· ನೋಡ್ರಯ್ಕ
> ಅದುಂ ತಿರುಗ ಬರಲ್ಲ· ಯಾನ ಆಯ್ತು, ಯಾನ ಹೋಯ್ತು, ನೀವೆಲ್ಲ
> ಕಟ್ಟಕಟ್ಟಳ ಮುರಿಯಂ ಮಾಡಿಂ ತಪ್ಪಗ ಈಗ ನೀವೆಲ್ಲ ಊಗಾಡ್ಗ ಇದಂಕಂಡು
> ನಾವು ಹೇಳಂ ಕೆಲ್ಸವ ಮಾಡ್ಕಂಡು··· ಹೆಂಗೂ ಇದ್ಕಳ್ಳಿ··· ' ಅಂತ ಅನ್ಕವರು·
> ನಂ ಜಾತಿ ಬಡ್ತಸ್ತ್ನ ಬೇಕಾಗಿದ್ದಾಂ ಅದೀಯ· ಅ ಉತ್ತಮರು ಕಾಲಲ್ಲ
> ತುಳೀರ್ಸಿದಂ ಇವ್ರು ಕೈಲ ಮಾಡ್ಕಳರು· ಇರಾರು···· "

ಕುರಿಯುಯ್ಕನ ಈ ನುಡಿಯು ಮೊಡಿಯಾಗಿ ಒಡಮುರಾಡಿ ಅ ಮೋಡಿಯ ಬೆಳುಕಾಗಿ:

> " ಈಗ ಅಂಥಾ ಒಳ್ಳಕಾಲ್ಲ ಕುಾನುಾ? ಈ ಕಾಲ ಕೆಟ್ಕಾಲ ತಿಳ್ಕ· ಈಗ ನಂ
> ನೋಡಾಂಗ ಏನಾಯ್ತದ? ಯಾರಗ್ಕ? ಅ ಉತ್ತಮ ಜಾತ್ಕವರ್ಗ— ಕೇಳಿ,
> ಅವರ ಒಳ್ಗ ಅಗುವುದರ ಅಭ್ಮಾನದ ಅರಿವು ಅವ್ರಿಗಿಯ ಅರಿವಾಗ್ಲ ಇರಲ್ಲ·
> ಆದ್ಯಾವ ಅವರ ರಗ್ತಕ? ರಗ್ತಕ ತಲತಲಾಂತರದ ನೆಪ್ಪಿರ್ದ··· ತಿಳ್ಕಳ್ಳಿ,
> ಅವರು ಸುಮ್ನಿದ್ರಾ ಅವರ ರಗ್ತ ಸುಮ್ನಿದ್ದುಂದಾ?····
> ···· ಹೆಂಗ ತಾನಿಯಾ···· ಸುಮ್ನಿರಕ ಆದುಂ? ಅದರ ತೆವ್ಲ ಅದಾ? ನಂ
> ಜಾತ್ಕವರ ಕಂಡೇಟ್ಗಯ ಉತ್ತಮ ಕುಲಂವರ ರಗ್ತ ಏನಂದ್ಕತ್ತದ:
>
> ' ಓಹೋ ಈಗ ಕಾಣೋ ಈ ಹೊಲಮಾದುಗಾದಿ ಪೂರ್ವಿಕನು, ನಮ್ಮ
> ಉತ್ತಮ ಕುಲಂ ಮುಾಲಾದಿಗೆ ಸೇರಂ ಹೆಡ್ತಕ ಹೊತ್ತಂಡು ಹೋಗಿದಂವನ
> ಅ ವಂಶದ ಕುಡಿ ಈ ಹೊಲಮಾದುಗಾದಿ···'

ಅಂತ ಅಂದ್ಕತ್ತದ· ಯಾನ? ಈಗಲ ಉತ್ತಮನ ರಗ್ತ· ಈಗಲ ಈ ಉತ್ತಮನ ರಕ್ತಗ ಅ ಅದೆಲ್ಲವಿ ಪಿಡ್ಬರ ಬುಟ್ಟಂಗ ಕಾಣುನ್ತದಕಯ್ಕ· ಅ ನೆಪ್ಪುಗ ಉತ್ತಮರ ರಕ್ತ ಕುದಿತಾದ· ನಮ್ಮಾಗದ್ಯಾವಿ ಹಂಗೆ ತಾನಿಯಪ್ಪ ಆಗದು? ಅವ್ರೆ···· ಈ ಥರಾಗಿ ಇರಾಗ ಕಾರಣ ಕೇಳ್ತಯಿಲ್ಲಪ್ಪ ಕುಾನುಾ···"

ಸಂಘದ ಸೊಕಂಡ ಕಿಸ್ಸಪ್ಪಾದಿ ಕೂಸ್ಗಳೂ ತಾಯ ಎದ ಹಾಲ್ಗಿ ಲಪೋಲಪೋ ಅಳುತ ತೊದಲ್ತಿರಲು, ರಾತ್ರ ತುಂಬಾವ ಇದೇ ಥರವಾಗ ಥಳಿ ಗಂಟಾಗಿರಲು, ಒಂದೇ ದುಡದ ದೊಡ್ಡಣ್ಣ ಅಂಬುವವ ಎದ್ದು ನಡದು ಕುರಿಯಯ್ಯನ ಕಾಲುಗಳಿಗ ಹಣೆಮುಟ್ಟಿಸಿ ಶರಣುಮಾಡಿ ನಿಂತು ಕೈಜೋಡಿಸಿ ಪ್ರಾರ್ಥಿಸುತ "ಶಾತಯ್ಯನೋರೇ, ಇಂಥ ಮಾತಗಳ ಆ ದಾಕ್ಯವನ್ನೋರ ಮಾದೇವಪ್ಪರು ಬಂದಾಗ ಅವ್ರ ಜೊತಲ ಆಡೀ ಚಂದಾಗಿದ್ದದ" ಅಂದನು. ಅದ್ಕ ಕುರಿಯಯ್ಯ "ಯಾರ? ಒಡೊಯ್ರಿ ಮಾಲ ಹಿಡ್ಕಂಡು ಬೀದಿ ಸೇಯ್ತ ಕಾತಗಳ್ತದಲ್ಲಾ ಆ ಮಾದೇವಗ? ಐ ತಗಾ! ಅದಿನ್ನೂ ಹಾಲ್ಕುಕನ" ಅಂತ್ಲೆ, ಅನ್ನುಬುಟ್ಟ ತೋರಾದ ಜೋತಮ್ಮನು ಕುರಿಯಯ್ಯನ ಮಯ್ಯಬುಟ್ಟ ಗಲುಗ್ತ ಇಳದು ಕಿಲಕಿಲ ನೆಗ್ತ ಹೊಲಾರ ಜೋತಮ್ಮನ ಪಕ್ಕ ಬಂದು ನಿಂತ್ಕಂಡಳು ಕಿಲಕಿಲ.

ಆಗ ಅಮಾಸನು ಬಿಲ್ಲುಬಾಣ ಹಿಡಿದವನಂತೆ ಎಗರಿ "ಯಾನಯ್ಯ? ಯಾನ ನೀನು ನಂ ಮಾದೇವಪ್ಪನಿಗ ಅನ್ನದು?" ಅಂತ ಗಬಾಯಿಸ್ತ ಹೊಡೆಯುವನಂತೆ ಕೈ ಎತ್ತಲು ಆ ಎತ್ತಿದ ಕಯ್ಯನ್ನು ಗಾಳಿದಾರ ಹಿಡಿದು ತಿರುಚ್ತಾ "ಓಹೊಹೋ ಏಸಿ ಸುಮ್ಮರು ಜಗದೇಕವೀರರೋ" ಅಂತ ತಿರುಚ್ತ ಅಮಾಸ್ನ ಸೊಕ್ಕ ಕಿವುಚುಸುತ್ತಿರಲು, ಇತ್ತ ಕುರಿಯಯ್ಯ ಬೆಚ್ತ "ನಾನೇನ ಅಂದ್ನಪ್ಪ ಮಾದೇವಪ್ಪನಿಗ! ಒಂದ ಬೀದಿ ಕೂಚ್ರಪ್ಪ ಅಂದ್ರ ಆ ಪುಣ್ಯಾತ್ಮ ಒಂದು ಕಟ್ಟಿಯ 'ಶಕ್ಕ ತಾತ' ಅಂತ ಬಾವ್ಯದರಿ ಕೂಡ್ತಾನ. ಅಮ್ಯಾಕ ನನ್ನಪ್ಪಾ ಈಸಗತ್ತನ ಅನ್ನು. ಅಮ್ಯಾಕ ಅವ್ರ ಅಪ್ಪನ ಪೋಲೀಸ ಠಾಕ್ರಿಗೆ ಸೇರಿಸಿದವರು ಯಾರು ಅಂತ ಅಂದ್ಕಿದಿರೀ..." ಅಂದನು.

ಹೊತ್ತು, ಕಲ್ಲೂ ನೀರೂನ್ನ ಕರಗಿ ಹೋಂಟೋಗಿದ್ದಾಂ ಆ ಮುಗಿಯದ ತಾಕಡಿಸೊ ಸಭಾ ತಲಾ ಮೂರು ಬಾಟ್ಲ ಹಾಕಂಡ ಥರಾಗಿ ತಲೆ ವಾಲಾಡಿಸ್ತ – ಯಾರು ಮಾತಾಡೀರು? ಲಾಯರ ಸೋಮಣ್ಣರು "ಏನ ಬುಟೊಗ್ಟಾರ ಕಿಸ್ತು ಮಾತ್ರ ಯಾರು ಬುಟ್ಟುಗೊಡಬಾರದು ಸ್ವಾಮಿ" ಅಂದರು. ಲಾಯರ ಶಿವೀರ ಪಿಸುಗುಟ್ಟ ಅಮ್ಯಾಲ ಓರಾಜಾಣ ಜೋರಾಗಿ "ದಾರಿ ಉದ್ದಕೂ ಊಟದ ವ್ಯವಸ್ಥೆ ಮಾಡಲಾಗಿದೆ" ಎಂಬ ಅವರ ವಾಕ್ಯ ಮುಗಿಯುವುದರೊಳಗಾಗಿ ಆ

'ಊಟ' ಎಂಬ ಏಡಕ್ಷರವ ತವಕನ ತನ್ನ ಹೊಟ್ಟೆಗ ಹಾಕಂಡು ಕಾಯುತ್ತಿದ್ದನೇನೋ
ಪಕಾಳಯ್ಯನುಎದ್ದೂಂ ನಿಂತೂ ಹೊದಿಂದಂ ದುಪ್ಪಟ್ಟಿ ಬಿಗಿ ಹಿಡ್ದು
ನನ್ನಾಡಿ ಬರ್ರಿಲ್ಲಿ ನೋಡ್ಮ್ಯ" ಅಂದನು. ಅವನ ದಿಕ್ಕಿಗ ಎಲ್ಲಾರ್ದಿ ತಿರುಗ ಥರವಾಗಿ
ಆಗ ಗಾರಸಿದ್ದ್ಯಾವ ದನಿ ಮೊಳಗಿಸುತ "ಇಲ್ಲಿಗಂಟಾ ಎಲ್ಲಿದ್ದ್ವಪ್ಪಾ... ಇವ್ನ ಮನ
ಹಾಳಾಗ! ಇವ ಯಮನಾರ್ದಿ ನಂ ಮೆರವಣಿಗ್ಗ ಬಂದುಬುಟ್ಟಾ... ಆ ಮೆರವಣಿಗ್ಗ
ಯಮನಾರೂ ನುಂಗಾಗಾಳಿ ಬಂದೂ ಅದು ಪಕಾಳಯ್ಯನ ದುಪ್ಪಟ್ಟಿ ಹಾರ್ಸಗಂಡು
ಹೊಂಟೋಗಿ ಅತ್ತಗ, ಇತ್ತಗ ಇವ ಹುಟ್ಟಿದ ನಿರ್ವಾಣದಲ ನಿಂತಗಂಡು ಆ ನಮ್ಗ
ಕಾಣುಸ್ತ... ಎಲ್ಲಾರ್ದಿ ಆ ಮೆರವಣಿಗನಿಂದ ಬುಟ್ಬುಟ್ಟು ದೌಡ ಓಡೀಬೇಕೂ
ಆ ಥರವಾಗಿ ಆಗುಬುಟ್ಟದು ಎಲ್ಲಾಲುವಿ..." ಅನ್ನಲು ಪಕಾಳಯ್ಯ ಅದ್ಕ ಆಗ
" ಐ ಐ ಯಮನುಡ ಗಾರಸಿದ್ದ ನೀ ಆಡ ಮಾತು ಐ ಐ" ಅಂತಿರಲೂ
ಎಲ್ಲರೂ ನಗುತಿರಲೂ ನಿದ್ದೂಂವಿ ನಗುತಾಲೆ ಬಂದು ಅವರಿಸಿತಲ್ಲಾ.

ಆಗ, ಹೊತ್ತು ಮೂಡುವ ಮೊದಲಾಗಿ, ರಾತ್ರಿ ಸಂಘದವರು ಹಾಡಿದ ಪದಗಳು ರಾಗಿಕಲ್ಲ
ರಾಗಾನ್ವಿ ಬಂದು ಮುಖ್ಯರಾದ ಕಿನ್ನಪ್ಪರ ಎಬ್ಬಿಸಿತು. ಎದ್ದು ನೋಡ್ತಾರೆ: ಎಲ್ಲಾ
ಸೇನಾನಿಗಳೂ ಮಹಾಭಾರತದ ಸಮರ ನೋಡ್ವಾಗ ಯಾರಕನಿ ತಗದು ಪೋಟ್ಟ
ನಾರಿಗುಡಿಲ ಹಾಸಿಟ್ಟ ಥರವಾಗಿ ಮಲಗವರೆ ಎಲ್ಲಾರು. ಒಬ್ಬನ ಕತ್ತಿನ ಮ್ಯಾಲ
ಒಬ್ಬನ ಕಾಲೋ ಇನ್ನೊಬ್ಬನ ಹೊಟ್ಟಮ್ಯಾಲ ಇನ್ನೊಬ್ಬರ ಕಯ್ಯೋ ಈ
ಪ್ರಕಾರವಾಗಿ. ಆ ಬಂದು ಗುಡುಂತಿದ್ದ ಗೊರಕಾ ಸಬುದಾಕೆ ಬೆಚ್ಚಿ ಪರಸ್ಥಳವಾಗಿ
ನಿದಂಬಾರದ ದಾಕ್ಟರು ತಮ್ಮ ಬುಟ್ಟಿಕಣ್ಣ ಬುಟ್ಕಂಡಿದ್ದರಲ್ಲಾ. ಆಗ ಕಿನ್ನಪ್ಪರು
ಎಲ್ಲರಿಗೂ ಏಳ್ರೋ ಏಳ್ರೋ ಅಂದರು. ಅಂದರೂ ಯಾರೂ ಏಳದಿಲ್ಲೂ ಆಗ ಆ
ನಳಿಲ ಒಂದ್ದಿವಸದ ತಣ್ಣೀರು ತಾನವ ಮಾಡ್ಕಂಡು ಬಂದರು. ಎಲ್ಲಾರೂ
ಮಲಗಿರಲು ಹಾಗಾಗೆ ಎಲ್ಲಾರೂ. ಆಗ ನೂಡಲೇನೂ ತೋಚದಾಯ್ತು. ಆಗ ದಾಕ್ಟರಗ
ರನ್ನಿಂಗೆಗೆ ಎಬ್ಬಿಸಿದರು.

ಆ ಎರಡಂಗಾರು ಕೇರಿಗೆ ಸರಿಯಾಗಿ ನಡೆದು ಊರಾಡಲು ಸಿಗಲು ಆಗ ಈ ಇರ್ವರೂ ಒಬ್ಬರೊನೊಬ್ಬರು ನೋಡ್ಕೊಂಡರು. ಅಮ್ಯಾಲ ಕಣ್ಗಳಲ್ಲೆ ಮಾತಾಡ್ಕೊಂಡರು. ಅಮ್ಯಾಲ ಧಾಂಧೂಂ ಅಂತ ಹೆಜ್ಜೆ ಹಾಕಂಡೂ ದಸಮುಸ ಅಂತ ಉಸ್ಸುರ ಮೂಗೆಲ್ಲ ಬುಟ್ಗಂಡೂ ಆ ರನ್ನಿಂಗನ್ನು ಈ ಒಂದು ಚಂದದಲಿ ನೂಡುತಿರಲೂ

ಆ ಟೇಮಲ್ಲಿ ಊರ ಯಮ್ಮಗಳೆಲ್ಲಾ ಒಟ್ಟಾಗಿ ಅಡ್ಗ ಬಂದು ಒಬ್ಬರ ಮೊಕವ ಒಬ್ಬರಗ ಕಾಣ ಒಳಗಾಗಿ ಅಡ್ಗ ಬಂದು ಕೂರುವ ಟೇಮು ಅದು. ಈ ಕುಂತ ಯಮ್ಮಗಳ ಸಾಲುಗ ಆ ಒಂದು ಚಂದದ ರನ್ನಿಂಗು ಕಂಡುಬಂದೂ, ಇದ್ಯಾಕಪ್ಪ ಶಿವ ಊರ್ಗ ಈ ಪಾಟ ಸುತ್ತುತಾ ಇರೋದು ಅಂತ ಅವರು ನಡುಗೋಗಿ ತಂ ಸೆರಗಿಲ ತಂ ಮೊಕ್ವ ಮುಚ್ಕೊಂಡು ಕವಕನ ನಿಂತ್ಗಂಡೂ, ಇನ್ನು ನಿಂತ್ಕೊಂಡ ಕೆಲವರ್ಗ ಗಿಡ ಬೆದುರಿಕೆಗೆ ಅಲ್ಲೆ ಕುಂತ್ಗಳೂ ಥರವಾಗ್ತ ಅತ್ತುಗಾ

ಇತ್ತಗಾ ಅದಾವುದನ್ನೂ ನೋಡದ ಈ ಇರ್ವರೂ ನಾಕರವಾಗಿ ತಮ್ಮ ರನ್ನಿಂಗ ಮಾಡ್ತ ಇರಲು, ಈ ಕವಿಯಂಥವರಾಗಿದ್ದರ ಮಸಿ ಆ ಈ ಕಡ್ಗ ನೋಡ್ತಿದ್ದರೇನೋ ಇರಲಿ, ಈ ಒಂದು ಚಂದದಲಿ ರನ್ನಿಂಗ ಮಾಡಿದವರು ಮಾರಿಗುಡಿಗ ಬಂದುಬಿದ್ದು ಅವರು ನಡೆಸಿದಂಥ ಉಸುಗಾಟದ ಬಗೆಯು ಒಂದಿಬ್ಬರ ಬುಟ್ಟು ಎಲ್ಲರನ್ನೂ ಎಬ್ಬಿಸಿಬುಟ್ತು.

ಅಲ್ಲಗ ಆ ಎರಡಂಗರೆಲ್ಲಾ ಒಬ್ಬೊಬ್ಬರಾಗಿ ಮೆರುವಣಿಗ ನಿಲ್ಲುತೊಡಗಿ ಅಲ್ಲೆ ಪಕಾಳಯ್ಯನು ತನ್ನ ದುಪ್ಪಟ್ಟ ಬಿಗಿ ಹಿಡಿದು ಮುಂದಾಗಿ ನಿಂತಿದ್ದನು.

ಇನ್ನು ಮೆರವಣಿಗ ಹೊರಡಬೇಕು ಆಗ ತನ್ನ ಗುಬ್ಬುಗಳ ನಡುವಾ ತಳಮಾಡಿ ಕುಂಕುಮ ಧರಿಸಿದ ಗಾರಸಿದ್ದ್ಯಾವನು ಅಂಬೇಡ್ಕರ ಪೋಟೋಗ ಸರಣುಮಾಡಿ, ತಟಕನ ತನ್ನ ಮುಲ್ಲುಜುಬ್ಬ ಮರೆಲರಿಸಿದ ತೆಂಗ್ಕಾಯಿತ್ತಿ 'ಏಳುಮಲೇ ಎಪ್ಪತ್ತೇಳು ಮಲೇ ನನ ಏತ್ತಪ್ಪನೋಇ ಮಾದಪ್ಪಗ ಉಘೇ ಅನ್ನೀ ...' ಅನ್ತ ಪಟಾರನ್ನಿ ಚಲ್ಲಾಡಿಸಿದನು. ಐಕಳು ಪೈಕಳು ಕಾಯುವಾಗ್ಗ ಮುತಗಂಡು ಉಘೇ ಅಂತ ಬಿದಿಂದೋವಾಗ ಸಂಘದ ಮೊಕಂಡರು ಬೆಚ್ಚಿಬಿದ್ದೆಂದೂಂ, ಇತ್ತಗ ಮುಂಡಗವಿ ಗೋವಿಂದು

ಜಲಾಲ್ದತ್ತ ಹಾರಿ ಕಾಂತಯ್ಯಾಜರ ಬಾಯ್ಗ ಬಲ್ಪಕಂಡು ತಿಂತಾ, ಮಿ॥ ಕೇಡಿಂಯು ನೆಗಾಡ್ತ ಅಲ್ಲ್ಗ
ನಾಗರಾಜುವು ಬಂದು ''ಇದ್ಯಾಕ್ರಿ ಹಿಂಗೆಲ್ಲಾ ಮಾಡುದ್ರಿ?'' ಅಂತ್ಲೆ ಗಾರಸಿದ್ದ್ಯಾವ
ಅದ್ಕ '' ಒಳ್ಳೆದಾಯ್ತು ದಕನ ನೋಡ್ರಿ ಸ್ವಾಮೀ. ಇದ್ಯಾಕ ಕಾಯ್ತೊಳ್ಳಡದಾಲ
ಅಂದ್ಕೊಂಡಿದೀರಿ. ತಲೆ ಸಾವ್ರ ಜಜ್ಜ್ಬಕ್ತಿನಿ ಬೇಕಾರ'' ಅಂದನು.

ನಂಘದ ಮೊಕಂಡರು ತಂತಂ ಮೊಕ್ಕ ಬಕ್ಕೊಂಡಿದ್ದರು. ಗಾರಸಿದ್ದ್ಯಾವಗ ಇದರ ಅರುತಮಾನ ಸಿಗದಿರಲು, ಮೆರವಣಿಗೆಲ ಧಿಕಾವಾಗಿ ನೇದಲು ತರಿದಿದ್ದ ಪ್ಯಾಕಸಿಂಗಸೂ ಸಿಕರೊಟಲ ಹೋಗ್ಯ ಎಬ್ಬಸತೊಡಗಲು ಹೋಗ್ಯ, ಕಿನ್ನಪ್ಪರು '' ಯ್ಯಾರು ಬೀಡಿಸಿಗರೇಟು ವಗೈರಿ ನೇದಕೂಡದು'' ಅಂದರು. ಇದೊಳ್ಳೆ ಕತ ಅಂತ್ಲಾ ಅಂದ್ಕೊಂಡು ಗಾರಸಿದ್ದ್ಯಾವ ಮೆರವಣಿಗ ಹಿಂದ್ಕ ಬಂದು, ಸಿಕರೊಟ್ನ ಹೊಗ್ಯ ಎಬ್ಬುಬಸ್ತ ಬತ್ತಿರಲಾಗ ಆ ದಾಕ್ಟರು ಅಲ್ಲಿಂದ್ಲೆ ಬೀಡಿ ಬಾಯ್ಗ ಕಚ್ಚ್ಗಬಂದು '' ಏಯ್ ಬೆಂಕಿಕೊಡ್ರಿ'' ಅಂತ ಅಬ್ಬರಿಸಿದರು. ಬೆಚ್ಚ್ಕೊಂಡು ಗಾರಸಿದ್ದ್ಯಾವ '' ಸ್ವಾಮಿ ಸ್ವಾಮಿ! ಇದ್ಯಾಕ ಸ್ವಾಮಿ ನೀವ ಮಾಡ ಕೆಲ್ಸ? ಅಪ್ಪಾಪ್ಪ ನಂ ಜಾತಿಮಾನ್ನ ಊರೊಳಗ ಅತ್ತಗ ತಗೆಂಬುಡ್ತಿದೆಂರೆಲ್ಲಪ್ಪ!'' ಅಂತ ದಾಕ್ಟರ ಬಾಯ್ಲಿದ್ದ ಬೀಡಿ ಕಿತ್ತನೆದು ಆ ಬಾಯ್ಗ ಸಿಕರೊಟು ಇಡಲು ಆಗ ಈರ್ಗ್ಯರೂ ಆ ಮೆರವಣಿಗ್ಗ ಹಿಂದ್ಲಗೋಡೆಗಳಂತಾಗಿ ಹೋಗಬುಟ್ಗಂಡರೂ, ಆ ಒಂದು ಗಳಿಗಾರೂ ನುಮ್ಮನಿರಲಾರದ ಗಾರಸಿದ್ದ್ಯಾವ ಮಾತ್ಗಬದ್ದನು.

'' ಆ ಬದ್ರಾವತಿ ದಿಕ್ಲ ಕಿನ್ನಪ್ಪರು ಸಾವುಗೀಯು ಮಾಡಿರ್ಕನಿ... ?''

ಅಹಹಾ ದಾಕ್ಟರು ನಕ್ಕರು.

'' ನಂಗುಬಿ ನನುವಾಗೀನುವಾ ಅಂದ್ರ ಪ್ರಾಣಕನ್ನಿಸ್ವಾಮಿ. ದಸರ್ಕ ಕುನ್ತಗ ಬಂದಿದ್ದಿ. ಅಲ್ಲೆನಾರ ನನ್ನ ನೋಡಗೀಡಿದಿರ್ಕನೀ...?''

ಓಹೋಹೊ ದಾಕ್ಟರ ಮುಖ್ಕಡೀ ನಕ್ಕಿತು.

'' ನಾ ಮಾಡದು ಗಾರಕೆಲ್ಸಕನ್ನಿ ಸ್ವಾಮಿ. ಈ ಕಗ್ಗ ಹಿಡ್ಕೊಂಡು ನಾನೂವಿ ಆ ನಿಮ್ಮ ಸಕಲೇಸಪುರ, ಇರಾಜಪೇಟಾ, ಆ ಮಡಕೇರಿ... ಆ ಮರ್ಕೇರಿ

ಅಂತ್ಲಿಂಯು ನೆಪ್ಪಗ ಬಂತು ನೋಡಿ··· ಹೀಗಿಂಯು ಒಂಜಿನ ಅಲ್ಲಿ ಬಸ್ಟ್ಯಾಂಡ್ಲ ಮಲಗಿದ್ದೆ ನಾನು, ಇನ್ನೂದಿ ಬೆಳಕರಿದಿರಲ್ಲಾ··· ಇದ್ರು, ಅದಾಕ್ನ! ಅದಾಕ್ನಾ ನೋಡಿ ಅಲ್ಲಿ ಯಮ್ಮಾ! ಮುರಾರ್ಕಿಕ್ಕಳ ಹೆಣ್ಣವರಂಥದ್ರಿಂಯಾ ಮೂರುಬಿಟ್ಟನ ಅಗುಲಕ ಜಡ್ಡಿ ಇಕ್ಕಂಡ್ಯಾ··· ಯಮ್ಮ ಜಡ್ಡಿ ಇಕ್ಕಂಡುಕನ್ನಿ ನೋಡಿ! ಅದೂದಿ ಮೂರ್ಬಿಟ್ಟನ ಅಗಲ್ಕ··· ಅಯ್ಕಯ್ಕಪ್ಪ··· ಆ ಯಮ್ಮ ಅಪಾಟ್ಗ ಓಡೋ ಆ ಥರಕಾ ನಾನೇ ಬಪ್ಪೋಗೀ··· ಕವಕನ ನಂಗ. ಅವ್ವಾ··· ನಾ ನಿದಂಲಿದಾಂಗ ಯಾವಳೋ ಸ್ತ್ರೀಮಲೆಂಯಾಳ ದೇಸಂವಳಗ ನನಮ್ಮಕ್ಕಲ ಗಾಕನಗೀನ ಬಿದುಂ ತವಕನ ತನೆ ರಾಜ್ಯಕ ಎಸ್ಗ ಬಂದು ಇಳ್ಳುಕಬುಟ್ಟದಂಳಕನೀ··· ಅನ್ನಿಸ್ತಿರದು···”

ಅಹಹಾ ಓಹೋಹೋ ದಾಕ್ಟರ ಮಯ್ಯಿಡೀ ಕುಲುಗಾಡ್ತ ನಕ್ಕಿತು.

“ ಅದಾಕ್ನ ನೋಡಿ ರಾಸ್ರ ನಿಂ ನಾಸ್ಕ್ ತಲಬುಡ ಒಂದೂವಿ ನಂಗಿಂಯು ತಿಳಿನಿಲ್ಲಲ್ಲಾ!”

ಅಹಹಾ ಅನ್ನದ ದಾಕ್ಟರು ಅಂದರು ಗಂಭೀರವಾಗಿ ಏನಂದರ — “ ನಾನು ಹೇಳ್ತಾ, ಇದಂದು ಏನಪ್ಪ ಅಂದ್ರೆ··· Contradictionnu” ಅಂದಂಥ ದಾಕ್ಟರುಗ ಆ ‘ nnu ’ ಉಚ್ಚಾರ ಮಾಡ್ದಾಗ ಹೊರಳದ ನಾಲುಗ ತುದಿ ಕತ್ತರಿಸ್ಸ ರಕ್ತ ಜಿಲುಗುಟ್ತಾ, ನರಳ್ತಾ···· ಇತ್ತಗಾ ಈ ಗಾರಸಿದ್ದಾವ ಮಯ್ಯಿಮುಲುಲ್ಲಜುಬ್ಬುವ ಕುಲುಕುಸ್ತ “ ಐ ಅದಾ? ಗೊತ್ತಕನ ಬಡೀ···· ಯಾನೋ ಬಾಕ್ರೆ ಇದ್ದೇಕೇನ ಅಂದ್ಕಂಡಿದಿಂ ನಾನು····” ಅಂದನು. ಆ ತುದಿ ನಾಲುಗದಲಿ ರಗುತ ಸಾಡುಸ್ತ ದಾಕ್ಟರು ನಗಲಾರದವರಾಗಿದರು.

ಅದಾಂಯ್ತ್ರ, ನಾಳೆ ಸೇರುವಾಂಗ ಏಡ್ಡಾಲುಗಳ ನಡಾಂತರದಲ್ಲಿ ಅಮಾನನು ದೇವ ದಂಯದಿಂದ ಗೋಡೆಚೆಲರಹಿತ ಬಾಡುಗ ಸ್ವೆಕರ್ಟಬಿಡ್ತ ಸಾಲು ಸಂಯಾಗುಸ್ತ ಬರುತ್ತ ತಾರಮ್ಮನ ಹಟ್ಟಮುಂದ ಅಲ್ಲಿ ಬಾಣ್ತ ಕೆಂಪಿ ಸುಂದ್ರಿಸಾಕ್ಕ ಸಾಕ್ಲಂ ಎತ್ತಂಡಾ ನವಲು ಲೇನ್ನಿ ಲಂಗ್ಡ ನೋಡ್ತಾಲು ಕಾಣುವಂಗ ಇಳಿಬುಟ್ಗಂಡಾ ಕಾಲ್ಬೆರಳಲ್ಲಿ ಕಣ್ಣುಗೋತು ಗೋಳುವಸ್ತು ಚಂದದ ಪಿಲ್ಲಿ ಹಾಕಂಡಾ ಪಾತ್ರಪಗಡ ಬೆಳಗ್ತಿರೋ ಅರುಸಿನದ ಮಯ್ಯ ಅವಳ ಕಂಡು ಮೆರವಣಿಗಲದಂ ಕೆಲುವರ ದುಡ ಕಟ್ಟೊಲ್ಲೀಂಯ್ತು. ಉದಾಹರಣೆಗೆ — ವರದಾ ಕೇವಲ ಕಮ್ತಾ, ಸಿಂಗು ತುಟಿ ಮುಚಗಂಡು ಮಾಗಿಲ್ಯಂಯ ನಸಗುಡ್ತಾ, ಹೆಬ್ಬಂಗೂಗ ಅಧಿಕೃತ ದರ್ಶಿಸಿದಂತಾಗಿ ನಿಂತುಬುಡಲು ದೊಡ್ಡಾಗ ಪರಿಸ್ಥಿತಿಯು ಅರುವಾಗಿ ಹೆಬ್ಬಂಗೂಗ

ತಿಪಂ " ಸಾರ ಸಾರೂ... ಈಗ ಗಳಿಗಾ ಸರಿಯಾಗಿಲ್ಲ. ದೊಡ್ಡದೊಡ್ಡವರೆಲ್ಲಾ ಬಂದಿದೂರೇ ಟೇಮು ಇದು. ಈಗ್ಗೊಸಿ ಅನ್ಸರಸ್ಕಂಡು ಬನ್ನೀ" ಅಂತ ಬಾಂಯ್ತುಂಬ ಜೇನ್ಸುರುಸ್ತ ಅನ್ನಲು ಹಂಬಲ್ಲಂಗು ನಡೆಯುಲು ಮೆರುವಣಿಗ ನಡೆದು ಚನ್ನನ ಹಟ್ಟೀ ಮುಂದಕ ಬಂತು.

ಆ ಕೂತಗಳ ತಳದಲ್ಲಿ ಚನ್ನನ ಅಪ್ಪನು ಕೂತರು, ವನ್ನುಂಗಳ ಚನ್ನನ ಅವ್ವ ನಿಂತರು ತಮ್ಮಮಗನ ಥರವ ಕಾಣೋ ತವಕವಾಗಿ ಇರಲೂ

ಮೆರುವಣಿಗಂ ಗಾರಸಿದ್ದಾವ ಕಾಣ್ತಲೆ ಚನ್ನನ ಚಪ್ಪ —" ಅಡಡೇ ಗಾರಸಿದಂ! ಇತ್ತಗ ನೋಡೆಂ ಹೋಗ್ಯುತ್ನಲ್ಲಪ್ಪಾ ನೋಡ್ದಿಯಾ ಅವ..." ಅಂತ್ಲೆ ಬಂದಂಥ ಗಾರಸಿದ್ದಾವನ ಎಳುಂ ಕೂರ್ಸ್ಗಂಡು ಅವನ ತಲ ಸವರ್ತ " ಇನ್ನಾವಿ ನಿನ ತಲಿ ಕೂದ್ಲವಕಂಯ್ಕ. ಮಾತ್ರ ಪರಕಾರ ಬೇಡಿ ಮಡುಗ್ಬುಟ್ಟು ಮುಂದ್ಕ ನಡೆಯುಂಯ್ಕ" ಅಂದನು. ಗಾರಸಿದ್ದಾವ ನಗಾಡ್ತ " ಎಲ್ರಾವಿ ದನಕುರಿ ಮೇಯ್ಯುಸುದ್ರ ನೀನು ನರಮನುಸರ್ನ ಮೇಯುಸ್ತಯ್ಕಪ್ಪಾ" ಅಂದು ನಾಕಾಲು ಬೇಗಿ ಒಂದು ಸಿಗರೇಟ್ನ ಮುಂದಿರಲು, ಚನ್ನನ ಅಪ್ಪ —" ಈ ಟೇಮಿಲ್ಲ ನಂ ಚನ್ನ ಇಲ್ಲ ಇದಿಂದ್ರ..." ಅಂತ್ಲೆ ಗಾರಸಿದ್ದಾವ " ಏ ಅದ್ರ ಬದಲ್ಗೆ ಬಾಕ್ರೆ ಥರವಾಗಿರ್ತುತ್ತನಾ" ಅನ್ತ ಎದುಂ ಮೆರುವಣಿಗ್ಗ ಕೂಡುಕೊಂಡನು.

ಇತ್ತಗ ಚನ್ನನ ಅಪ್ಪನ ಕಣ್ಗಳಲ್ಲ ಮಗನ ರೂಪವು ಎದ್ದುಂ ಬದ್ದಾಂಡುತ ಮುಂದಿದ್ದಂ ದೀಪಗಳು ಹೊಗೆಯಾದವು. ಆಗ ತಲಹುಳಾ ಪತರುಗುಟ್ಟಲು ದೀಡಿಯ್ಯಾಡ್ಕೆಗೆ ಶಿವಾಚಾರದ ಅಂಗಡಿ ಮುಂದಕ ಚನ್ನನ ಅಪ್ಪ ಬಂದು ನಿಲ್ಲುತ್ತಲೆ ಅಲ್ಲ ಕುಂತು ನಿಂತ ಶಿವಾಚಾರದವರು 'ಬನ್ನಿ ಬುದ್ದೊಂಕಿ' 'ಬನ ಬನ್ನಿ ಸೋಮ್ಹೋ' ಅಂತಂತ ತಲಗೊಂದು ಮಾತು ಎಸೀತಾ ನಗಾಕ ತೊಡಗಿದರು. ಚೆನ್ನನ ಅಪ್ಪ ಬೆಕ್ಕಂಡು "ಇದ್ಯಾಕ ಧಣಿಗಳ ಈ ಥರಾದ ಮಾತ್ಗಳು..." ಅಂತ್ಲ ಆಗ "ಇನ್ಯಾಕನ್ನ ಮಾಡೋದು ಬುದ್ದೊಂಕಿ. ನಿಂ ಜಾತ್ಕವರೆಲ್ಲಾ ನಾಳಕಿಂದ್ಲಿಂತು ಜೀತ ಬುಟಬುಟ್ಟರಂತಲ್ಲಾ..." ಅಂತ ಒಬ್ಬ ಅಂದು ನಿಲ್ಲುಸುದ್ರ ಇನ್ನೊಬ್ಬ "ಜೀತ ಬುಟಮ್ಯಾಕಲ ಹೊಲಾರ್ನೀನ ಮಾತಾಡ್ಸಕ ಅದಂತ್ಯ! ಯಾನಾರೂ ನೋಡಕ್ಕ ಅದಂತ್ಯ! ಆಗ ಹೊಲಾರು, ಅನ್ನತುಪ್ಪನಿಯುಕಂಯೊಕೀ ಗಟ್ಟಾದು..." ಅಂದನು.

ಆ ಮಾತ್ಗ ಬದ್ದಾಂಬದ್ದುಂ ಚನ್ನನ ಅಪ್ಪ ನೆಗಾಡ್ತ, ಈ ನಗೂಗ ಯಾರೂ ಮುಂದ್ಕ ಮಾತಾಡಕ ಆಗದಂತೆ ನಗಾಡಕ ತೊಡಗಿದನು. ಆಗ ಅವರು ಬಾಂತ್ಯಗೆದರೂ ಅವ ನಿಲ್ಸದೆ ನಗೂವ, ಅಲ್ಲ ಕುಂತಿದ್ದಂ ಮೆಡರುಗಣ್ಣನ ಗೌಳವನೂ ವದುರಾಡ್ತ, ಪಾಲ ನಿತ್ಕಂಡು "ನಿಲ್ಸಡ ಸಿದಿಂಮಗ್ನ ನಿನ ನಾಗೂವ. ಚಂದ ಅಂತ ನಾಗ್ತನ ನಾಗೂವ. ಈಗ್ಲೂಯಾ ತಿಳ್ಕ ಬಡ್ಡೇದ್ನೀ... ಇಲ್ಲಂದ ಓಟ ತಕ್ಕಂಡು ಗದ್ಯಂಡು ಹೋಯ್ತ್ರಲ್ಲಾ ಆ ನಿಮ್ ಜಾಕ್ಸ್‌ವರ ಆ ಇಂದ್ರಗಾಂದಿ ಅಂಬವ್ಳೀ ಜೀತ್ಕ ಇರ್ಸಗಂಡಿದ್ದಾಂಳಂತ! ಆಥವಾಗಿ ಅವ್ಳ ಇರಬೇಕಾರ ಇನ್ನು ನಿಂಮಗಳ ಜೀತಬುಡ್ಸೋರ್ಯ ಅಂದಾಳ? ಇಲ್ಲ ನಾಕ ಐಕ ಕೂತ್ಕಂಡ್ರ ದಿಳ್ಳಗ ಕೇಳ್ಸ ಮಾತುಡ ಅದೂ?" ಅಂದನು.

ಆಗೂಲ್ಲವ ಚನ್ನನ ಅಪ್ಪ ನಗ್ತಲೇ ನಗೂವ:

"ಬುದ್ಧಿ, ಇದು ಯಾವ ಥರ್ಮಪಾಲ ಅಂದ್ರ, ಗುಳ್ಳನರಿ ಲಿಂಗ ಕಟ್ಟಸಂಗಂಡ ಥರಾ... ಕೇಳಿ, ಒಂದ್ಸಲ ಸರಣರೆಲ್ಲ ಲಿಂಗಧಾರಣ ಮಾಡ್ಸಕತ್ತ ಇರ್ತಾಗ, ಅದ್ನೀಗ ಒಂದು ಗುಳ್ಳನರಿ ನೋಡ್ಕಬುಡ್ತಂತ. ಆ ನೋಡಿದಂ ಗುಳ್ಳನರಿ

ನೋಡ್ಕೊಂಡು ಸುಮ್ನಿರಾ ಇತ್ತು? ತಾಡಾ, ನಾನೂವಿ ವಸಿ ಲಿಂಗ ಕಟ್ಟುಸ್ಕೊಳುವ ಅಂದ್ಕೊಂಡ ಬಂದು "ನರಿಗೂವಿ ಲಿಂಗಕಟ್ಟ ಸೋಮ್ಯೆ" ಅಂತ ಕೇಳ್ತಂತ. ಆ ಲಿಂಗ ಕಟ್ಟವರು ಆದ್ರ ಮಾತನಿಗ ಕೇಳ್ಸಕಂಡು ಗುಲ್ಲಂತ ನಗಾಡ್ತ "ನೀನು ಬಾಡುಬಳ್ಳನೆಳ್ಳಗಿಳ್ಳ ತಿಂನವ್ನು. ನಿಂಗ ಬ್ಯಾಡ" ಅಂದ್ರಂತ. ಆದ್ಯಾರೂ ಸುಮ್ನಿಂತ್ತು, ಅದೂ? ಸುಮ್ಮಿರಲಾರಂ "ಅದೆಲ್ಲಾ ತಿಂಬದ ಬುಟ್ಬುಟ್ತನಿಕನ, ಕಟ್ಟೀ ಲಿಂಗಾ" ಅಂತ ಆಣೆ ಬಾಸ ಮಾಡಿ ಗೋಗರ್ಕೊಂಡು ಲಿಂಗಧಾರಣ ಮಾಡ್ಸಗಳ್ತದಂತ ಕೊನಗೂ...

... ಮ್ಯಾಕಲ ಇದೆಲ್ಲಾ ನೋಡ್ತಾ ಇರೋ ಆ ದೇವೆಂದ್ರಾಂತು ಅವಾರೂ ಸುಮ್ಮಿಗಿದ್ದಾನು? ಸುಮ್ನಿರಾಲ್ಲರಂ ಏನಾರ್ಡಂ? 'ನೋಡೌ, ಇದರ ದುಡ ಪರೀಕ್ಸವ' ಅಂದ್ಕೊಂಡು ಮಳ ಬರ್ಸದನಂತ ಮಳೆ. ಆ ಮಳಾಗ ನೆಳ್ಳಗಳು ಎದಾಂ ಬಿತಬಿತಾನು ಓಡಾಡ ಥರವಾಗಿ ಓಡಾಡ್ತ ಇದ ಕಣ್ಣಾರ ನೋಡ್ಕೊಂಡೂ ಲಿಂಗ ಕಟ್ಟಗಂಡಿರೋ ಈ ಗುಳ್ಳನರಿ ಎಸ್ಟಕಾಲ ಅಂತ ತಡ್ಕೊಂಡಿದ್ದುಂದೂ? ಆಗ ಆ ಗುಳ್ಳನರಿ ಏನ್ಮಾಡ್ತು? ಕೇಳೀ... ತನ್ನ ಕುತ್ತಿಗೇಲಿ ಕಟ್ಟದಂ ಲಿಂಗ ತಗುಂ ಕಳ್ಳ ಬೇಲಿಗ ನ್ಯಾಕ್ತಾಕಬುಟ್ಟಾ... ಆ ಓಡಾಡೋ ನೆಳ್ಳಗಳ ಓಡಾಡ್ಸಕಂಡೂ ಅವುಗಳ ಮ್ಯಾಕಲ ದಬ್ಬಾಕಂಡು ಬಿದ್ಕೊಂಡೂ ಸಿಕಸಿಕ್ಕದಂ ತತರಬಿತರ್ನ ಹಿಡ್ಕೊಂಡೂ ಸಂಪತ್ತಾಗಿ ತಿಂತಾ ಇತ್ತಂತ. ಆಗ ಇದು..."

ಆಗ, ಅವೇ ಬಂದು ಮುಂದ್ಕ ಬಿದಂ ಬೀಡಗಳ ಅಂತ್ಕೊಂಡೂ
ಆ ಅಂತ್ಕೊಂಡ ದನ್ನನ ಅಪ್ಪ ತನ್ನ ತಳಕ ಬಂದು ಕೂತನು.

ದಲಿತ ಸಂಘದ ಓಡಾಟ ಕೂಡಿದ ಅಮಾಸಗ ತಿಂಗಳ ಕಾಯಕದಲ್ಲು ಪರ್ಯಾರ್ಜನ ಮೊತ್ತವಾಗ್ತ ದುಡ್ಡುಕಾಸು ಓಡಾಡುವುದು ನಿಲುಗಡೆಯಾಗಿ ಅಮಾಸನ ಆರ್ಥಿಕ ಸ್ಥಿತಿಯು ದಲ ಹೊಡೀತಾ ಬೀದಿಗೂ ಭಂಗ ಪಡಬೇಕಾದ ಸ್ಥಿತಿಗೆ ತಲುಪಿದನು. ಆ ಬರಬೇಕಾದ ಹಳಬಾಕಿಯು ಸಾಬರು ಆ ಊರೂ ಈ ಊರೂ ಕಾಣಿಸ್ತ, ಆ ಸಿಗದ ಸಾಬರ ಪತ್ತೆಗಾಗಿ ಅಮಾಸ ಸಾಜಲಗೂಡ ಲೋಕ್ಕ ಸುತ್ತಿ ಸುತ್ತಿ ಸುಣ್ಣವಾಗ್ತ, ಅಂತೂ ಒಂಜಿನ ಕಣ್ಣಿಗ ಬದಾಂಗ ಅಗ ಓಡೋಡ್ತ, ಬಂದು ಸಾಬರು ಅಮಾಸನ ಎಡಾ ತೋಳನ್ನ ಬಗಿಹಿಡುಂ ಅಲ್ಲಾಡಿಸ್ತ:

"ಅರರೆ ಅಮಾಸ್ಯಾ... ಎಲ್ಲಿ ಹೋಗಿದ್ದೊಂ ಮಾದರಚೋತ. ನಿಮ್ಮಂ ವಾಲು ಯಾಕ್ಲೆ ಈಗೀಗ ಕಾಣ್ತಿಲ್ಲಾ ಬೋಸುಡಿಕೆ. ಬಾಕ್ರೆಯವರ್ಗ ಬಕರಿ ಮಾಡ್ತ ನಮಾಕಹರಾಮಗಿರಿ ಮಾಡ್ತಿದ್ದಿಯೇನ್ಲೆ ನಿನ್ನ್ಯಾನ ಬೋಸುಡಿಕೇಯ. ನಮಂಕ ಗೊತ್ತಾಗಲ್ಲ ಅಂದ್ಕಂಡಿದ್ದಿಯೇನ್ಲೆ ನಿನ್ನಕ್ಕನ? ಈಗ ಅಡಾನ್ಸ ದುಡ್ಡ ಮಡುಗಬುಟ್ಟು ಮುಂದ್ಕ ಇಸ್ಪೀಟ್ ಇಡು..."

ಅಂತಂತ ದಬಾಯಿಸ್ತ, ಸಾಬರೂ ಆ ಬಾಯಿಬಡುಕೂ ಅಮಾಸಗ ಬೈದ ಸಾಬರೂ:

"ಥತ್ ತೇರಿ ನಿಂಗ ಹೇಳೋದ ಮರ್ತದೆಂ ನೋಡು. ನಾನು ಬೊಂಬಾಯಿಗ ಹೋಗಿದ್ದುಂ ನಿಂಗ ಗೊತ್ತಿಲ್ಲಾ! ಅಲ್ಲಿ ನಿಮ್ಮುಂ ದೊಕ್ರು ಜನ್ರಂಗೆ ನೋಡೆಂ ಕಣ್ಲ, ಏನ ಅಂದ್ಕಂಡಿದ್ದೀಯಾ ಈಗ ನಿಮ್ಮುಂ ಜನ್ರನ್ನ ಅಲ್ಲಿ! ಇಡೀ ಬೊಂಬಾಯ್ ಮೇಲೇನೆ ಅವ್ರ ಏಜನ ದಿಲದಾರ ಅವ್ರೆ ಅವ್ರ..."

ಸಾಲದೂ ಅಮಾಸಗ, ಮುಂದ್ಕ ಹೇಳಲು ಸಾಬರೂ:

"ತಿಳಿಯಾಕೆ... ಈ ಬಂಜೋತ ನೆಲಂಸಾಕಿಲ ಕಾಲು ಇಡಲ್ಲ ಅವ್ರ. ಕಾರ್ನಲ್ಲೆ ಅವರು ಓಡಾಡದೇಲ್ಲಾ. ನಾನು ರಸ್ತೇರ ನಿಂತಿದ್ದವನು 'ಅರೇಬಯಾಕ್ಕ ಜಿನ್ನಾ! ಅಂದೆ ನೋಡು. ಅಷ್ಟರೊಳಗೇನೆ ನನ್ನಗಂದು ಬೇಮ್ಸ ಕಾರು ಒದಮೈರಿ ದೂರ ಹೊಂಟೋಗ ಬುಡಾದ!"

ಸಾಲದೂ ಅಮಾಸಗ, ಮುಂದ್ಕ ಗಸುರಾಡ್ತ ಸಾಬರೂ:

" ಕಾರು ನಿಂತಿದ್ರೆ ನಿನ ಇಚಾರಾನೂ ಮಾತಾಡ್ತಿದ್ದೆ ತಿಳ್ಕೋ. ಅದ್ಯೇನು
ದುಡ್ಡುಕೊಡಬೇಕಿತ್ತೇನ್ಲೇ? ಎಷ್ಟು ಆದ್ರೂ ಜನ್ನ ನಮ್ಮುಂಕಡೆ ಬೊಕ್ರು ತಾನೆ?
ಅರೆಬಂಯ್ಯಾಕೆ ಅನ್ನುವಷ್ಟಕ್ಕೇನೆ ಆ ಬೆಂಡಕಾರ ಒಂದಮ್ಯೆಂ
ಹೊಂಟೋಯ್ತಲ್ಲಾ! ನೀನಾಗಿದ್ರೂ ತಾನೇ ಏನ್ಮಾಡ್ತಿದ್ದೆ?"

ಸಾಲದ್ದೋ ಅಮಾನಗ, ಏದುಸಿರಾಡ್ತ ಸಾಬರೂ:

"ಬೊಂಬಾಯ್ ಮೆ ಜನ್ನ ಏನಾಗವ್ನೆ ಗೊತ್ತೇನ್ಲೇ ಬೋಸುಡಿಕೇ. ತ್ರಿ
ಇಸ್ಟಾರ್ ಹೋಟಲ್ ಮೆ ಮೇನೇಜರು ಗೊತ್ತ? ಅವನ್ಮುಂದಿಲಗೆ
ನಿಮ್ಮಾಂಥ ಸಾವ್ಕಾರ ಒಂದು ಸಾಕ್ಟ ತಿಳ್ಕೋ..."

ಎಂದರೋ ಸಾಬರೂ

ಬಾಕೀ ಮಾತಿಲ ಇರಲೀ ಅಮಾಸಗ, ಅಮಾಸನೇ ಅಮಾಸನ ಮರುತಲಾ ಊರಿಗೆ ಅಮಾಸನು ಹರಿಯುತ್ತಾತ ಬಂದೂ ಅದು ಆ ನಂಜ ಆ ಗಡಂಗುಗೂ ಬಂದೂ ಗಾರಸಿದ್ಧ್ಯಾವನು ಮತ್ತಾಗಿ ಕುಂತಿಲ ಪಾರಂ ಬಟವಾಡೆ ಹತ್ತ್ರ ರೂಪಾಯಿ ಒಂದಾದ ಮೇಲೊಂದ ಎಸೀತಾ ಆ ಸುತ್ತಲವರಿಗೂ ಏರಿಸ್ತ, ಚಾಕ್ಲೇಟ ಕಂಯ್ಯಾಂದಿಗಳಿಗೆ ಹೆಂಡ್ದ ಕಲ್ಸ ನೆಸದಾಡುಸ್ತ, ಆ ದೇಹಗಳು ಮರುತ್ತ ಉರುಳಾಡ್ತ, ಜೀವ ತಾವಾಗಿರುವಾಗ ಇನ್ನೇನು ಇದೊಂದು ಇನ್ನೇನೂ.

ಗಾರಸಿದ್ಧ್ಯಾವ ಮೊಕದಿಂದ್ಲೆ ಬೆವರು ಜಲ್ದ ಒಂದು ಬೊಗಸ್ದ ಬಳುಂ ತಗುಂ ಏನಂದ:

"ಅಂಯ ಕೇಳೀ ಬಡ್ದೆತ್ತವೇ... ನಂ ಜನ್ನ ಈಗ ಆ ತ್ರಿ ಇಸ್ಟಾರ್ ಹೋಟ್ಲ
ಬುಟುಬ್ಬಟ್ಟಂಗಕನ. ಜನ್ನರನ ಅಂತ ತಾನಿಂಯುಪ್ಪ ಅನ ಹೆಸ್ರು ಬೇಂಡೆ
ಮಾಡ್ಕೊಂಡಿದ್ದಾಂದು? ಅದ್ಕೆ ಆ ಬೊಂಬಾಂಯುದೋರ. ಜನ್ನರನ ಅಂದ್ರು ಓಹೋ ತಂ
ಜಾತಿಂಯವ್ನೆ ಇರ್ಬೇಕು ಅಂದ್ಕೆಬುಟ್ಟು ಅಮ್ಕೊಲ ನಂ ಜನ್ನನ ಜಂದ್ಕೆಂಯು
ನೋತ್ಕುಬುಟ್ಟ 'ಈ ಜಾದಿಂದ್ಲೆ ನಮ್ಮ್ರತಪ್ಪೆ ಕೆಲ್ಸಕ ಬಂದುಬ್ಬಡಂಯ್ಕೆ' ಅಂದ್ಕಂತ.."

ಅಲ್ಲಾ ಅಂತನ್ನವರು ಅಲ್ಲ ಂಯಾರು ತಾನೇ ಂಯಾರೂ. ಆ ದೇಹದರಿವ ಇಲ್ಲದ ಆ ಜೀವಗಳು
ಕೇಳ ಕಿವಿಂಯಾದ್ದು:

"ಕೆಲ್ಸ ಅಂದ್ರು ನಂ ಥರಂ ಕೆಲ್ಸ ಅಂದ್ಕೊಂಡಿರೀಕಾ ಎಡ್ಡ ಬಡ್ದೆತ್ತವ! ಎಸ್ಟೇ
ಆದ್ರೂ ಹಳ್ಳಿಗಮಾರಗಳು ನೀವಾ... ಒಂದು ಊರಾನ್ನರು ನೋಡಿದೀರಾ?
ಹೋಗ್ಲಿ ಒಂದು ಕೇರಿನಾರೂ ನೋಡಿದೀರಾ? ನಂ ಜನ್ನ ಇರಾ ಕೆಲ್ಸ ಎಂಥದು
ಅಂತಾ ಗೊತ್ತಾಂಯ್ಕೆ ನಿಮಗೆ?"

ಗೊತ್ತು, ಯಾರಗ ತಾಸೀಯಾ ಗೊತ್ತಾ?

" ಆ ಬೊಂಬಾಯದೊರ ಅವ್ವಲ್ಲಾ, ಅವ ವಾರಕ್ಕ ಒಂದ್ಸಲ ಮಾತ್ರ ದರ್ಬಾರ ನಡ್ಸದು. ಆ ದರ್ಬಾರ ನಡೆಯೋ ಟೇಮ್ನಗ ನಂ ಜನ್ಕ ಸುಂಗಾರ ಮಾಡ್ಕಂಡು... ಆ ದರ್ಬಾರಗ ಗತ್ತಾಗಿ ನಡ್ಕಬಂದು ಎಲ್ಲರಿಗಿಂತ ಮುಂದೆ ಕೂತ್ಗಳುವಂಥಾ ಕೆಲ್ಸ. ಅಮ್ಯಾಕಲ ಕೇಳಿ... ಆ ದರ್ಬಾರ ನಡೆಯಾಗ ಕೆಮ್ಮುಗಿಮ್ಮು ಬರಬಾರದಂತಕಯೊಕೀ ಕೇಳ್ಕಳ್ಳ! ಅದ್ಬೇರೆ ಕತವಾದುಂ ಅಮ್ಯಾಕ....."

ಅಲಸುತ್ಲದಂವ ಆ ಜೀವಗಳು ಆ:

"ನಮ್ಮಂಥವರು ಯಾರಾರು ಹೋದ್ರ ಕೆಮ್ಮುಬುಟ್ರ ಪರಾಣ ತಗ್ಸಕಂಡು ತಿರಗ ಹಿಂದಕ್ಕ ಬರಾ ಮಾತೇ ಇಲ್ಲ ತಿಳ್ಕಳ್ಳೀ... ಅಂಥ ಕಡುಂದೊರ ಅವ್ವ. ಅಯ್ತಾ? ಅಮ್ಯಾಕ ಯಾನಪ್ಪ ಅಂದ್ರ... ಆ ದರ್ಬಾರ ಮುಗ್ಯಾಂಗ ನಂ ಜನ್ಕ ಗತ್ತಾಗಿ ಎದುಂ ಧಿಕಾವಾಗಿ ನಗೀತಾ ನಗ್ತ ನಗ್ತ ಬರೂವಂಥಾ ಕೆಲ್ಸ..."

ಆ ಜೀವಗಳು ನಗುವ ಅದುವ ಜೀವಗಳೂ ನಗುವಾಗಿ:

"ತಿಳ್ಕಳ್ಳೀ ಹಳ್ಳಿಗವೂರ ಬಡ್ಡೆತ್ತಾ... ಒಂದ ದೇಸನಾರೂ ನೋಡಿಂ ಇರೋ ಬಡ್ಡೆತ್ತಾ ಈಗಾಲ್ಲರೂ ತಿಳ್ಕಳ್ಳೀ. ಆ ದರ್ಬಾರಗ ಎಂತೆಂಥವ್ರ ಬತ್ತಾರ ಗೊತ್ತುರ್ದಾ ನಿಮಗ? ದೇಸ ದೇಸಂ ರಾಜ್ರೆಲ್ಲ ಬತ್ತಾರ. ಅಲ್ಲಗ ಹೋಗೂವಾದೇ ಒಂದ ದೊಡ್ಡಸ್ತಿಕಕನಾ. ಅಸ್ಯಾಕಾ ಕೇಳಿ... ಆ ನೂರನೂರ್ಕ ರೂಪಾಯ ನೋಟ್ಗಳ ಒಲಗ ಹಾಕಿ ಉರ್ಸ ತಾನಿಯುಪ್ಪ ಆ ಇಂದ್ರಗಾಂದಿ ಅನ್ನೋಳು ಟೀ ಕಾಯ್ಸಗುಡು ಕುಡಿಯೋದು? ಅಂಥವಳೂ ಮುಕ್ಷ ಬಾ ಬಳ್ಕಂದೂ ಕಣ್ಣಗ ಥಳಾರನೋಕ ಸೀರ ಉಟ್ಗಂಡೂ ಸುಂಗಾರದಲಿ ಯಾನೇ ಕೆಲ್ಸ ಇದ್ರೂವಿಸ್ತೆತ ಅತ್ತಗ ಎಸುಂಬುಟ್ಟು ಆ ದರ್ಬಾರಗ ಮಾತ್ರ ತಪ್ಪಿಸ್ಕಳ್ಳಯು ಬಂದು ಒಬ್ಬೊಬ್ಬೇರಿ ಮುಲಾಲಾರಿ ಕೂತ್ಗಂಡಳಂತ. ಕೇಳೀ ಅವಳ್ಯಂಯುಸುದ ಅಲ್ಲ ನೀ ಯಾರ? ನೀ ಯಾವಾರ? ಅನ್ನೋರು ಇಲ್ಲಂತ. ಅಲ್ಲಗ್ಕ ತಿಳ್ಕಳ್ಳೀ... ಇನ್ನ್ಯಂಗಿದ್ದಾಂದು ಅಂತ! ಇನ್ನ್ಯಂಗಿರಬೌದು?"

ಇನ್ನ್ಯಂಗಿರಬಹುದೂ? ಗಾರಸಿದ್ದ್ಯಾವನ ಈ ದರ್ಬಾರು ನಡೆದೂ ನಡೆದೂ ಆ ದರ್ಬಾರ ನುಡಿಗಳೂ ತೂರಾಡ್ತಾ ನಡೆದೂ ಅವ ಊರ ಕಿಬ್ಬಹಾಯುಸೊ ಗಬ್ಬದ ಸಿನಿಮಾ ಪದ ಕಿರುಚೂಗ ಮಿಗಿಲಾಗಿ ಅವ ಆ ಹರಿದಿದಾಂ ಬೀದೀಲಿ ಕೈಕಳು ಕುಣುದೂ ಕುಪ್ಪಳಿಸೀ ಅವಾ ಆ ಗಡೀಗ ತಕ್ಕಂಥ ಕುಣದಾಟ ಹರುಂ ಹರಿಯುತಾ.

ಅದು ಕುಸುಮಾಳು ಇದ್ದಲ್ಲಿಗೂ ಬಂತು. ಅಲ್ಲಿ ಹಗಲೂ ರಾತ್ರಿಯು ಪರಿವಿಲ್ಲದ ಅವಳ ಕಂದಮ್ಮನು ಕಣ್ಣರಳಿಸಿಕೊಂಡು ಕಾಕುಹಾಕ್ತ ಕಂಯ್ಯುಕಾಲು ಮೇಲೂ ಕೆಳಗ ಆಡುಸ್ತ ಆಡುತ್ತಿದ್ದರ ಅದರವ್ವ ತನ್ನ ಪರಿವಿಲ್ಲದೆ ನೋಡಿದ್ದ ನೋಡ್ತ ಕೂತಿದ್ದಳು. ಹೊತ್ತುಂಬವು ಇದ್ದ ಅವಳ ಹನಿಬೆವರು ಆಗಾಗ ಒಡೆದು ಮೊಕದಿಂದ ಕೆಳಗಿಳಿಯುತಾ ಆ ತಾಯ್ಯವಕ್ಕ ಅವಳ ಕೂದಲಾ ಆ ಮೊಕಕ್ಕೆಲ್ಲ ಅಂಟುಕೊಂಡು ಅಲ್ಲಾಡದಿತ್ತು. ಆ ಕೂಸು ಆಡುವ ಜೋದ್ಯವ ನೋಡ್ತಾ ಕುಸುಮಾನ ತಮ್ಮನಾಗಿದ್ದ ಹನ್ನೆರಡು ವರುಷದ ಪರ್ವದ ಕೂತಿತ್ತು. ದೇವಮಾನವರಂತೆ ರೆಪ್ಪ ಮಿಟುಕಿಸದ ಆ ಬೆರಗು ಕಣ್ಗಳ ಒಳಕ್ಕ...

.... ಅಕ್ಕ ಕುಸುಮಾಳ ಕಣ್ಗಳ ಜಲವು ಹರಿಯುತಾತ ಹರಿಯುತ್ತಿದ್ದುದೂ ಪರ್ವದನ ಕಣ್ಗಳಲಿ ಬೆರಗು ಹೆಪ್ಪುಗಟ್ತ ಹೆಪ್ಪುಗಟ್ಟಲಿದ್ದುದೂ ಆ 'ದೂರದಿಂದ ಬಂದಂಥ ಸುಂದರಾಂಗ ಜಾಣ... ನಾ ಕಾಣೆ' ಹಾಡು ಹಾಡ್ತ ಹಾಡುತ್ತಿದ್ದುದೂ ಈ ಅಲೋ ಅಕ್ಕನ ನಗುಸಾಲು ಪರ್ವದ ಆ ಹಾಡಗ್ಗ ತಕ್ಕಾಗಿ ಕುಣ್ತ ಕುಣಿಯುತ್ತಿದ್ದುದೂ ಕುಣೀತಾ ಆ ಕುಸುಮಾಳ ಜಲದುಂಬಿದ ಎದೆ ಕಳಸ್ವ ಯಮಾರಕನಿ ತಗುಂ ಎತ್ತಿ ಗಕ್ಕನೆತ್ತಿಟ್ಟಂಗಾಗಿ....

ಆಗ ಕುಸುಮಾಳ ಕಣ್ಗಳ ಜಲವು ನಿಂತೀತಲ್ಲಾ
ಆಗ ಆ ಕನ್ನೇಲಿದ್ದ ಜಲವು ಆ ಕನ್ನೇಲಿ ಹಿಂಗೀತಲ್ಲಾ
ಆಗ ಅರಗಿಣ್ಣ ಮಾಡದ ಕುಸುಮಾಳು ವಾಲಾಡಿಯೇ ವಾಲಾಡ್ತ
ಆಗ ಅವಳ ಮಾರುದ್ದ ಕೂದಾಲೂ ಅವ್ವ ತಲನುಣ್ತ ವಾಲಾಡ್ತ

ಊರು ಸುತ್ತೀನಾ ಮಾಂತ್ರಿಕರು ಓಡೋಡಿ ಬಂದರೂ ಎಂಟ್ಜನಾ
ಅವ್ರು ನಾಗಬೆತ್ತದ ಹೊಡೆದಾಗ ಮುರೀತಲ್ಲೊ ಆ ನಾಗಬೆತ್ತವ
ಅವ್ರು ಹುಲೀ ಬಾಣ್ತ ಕೂದೂಲಾಗ್ಗ ಮುಷ್ಟೀಲೀ ಹಿಡಿಯಾಲೂ
ಆ ಹಿಡಿ ಮುಷ್ಟೀಗ ಎಂಟು ಹಿಡಿ ಕೂದೂಲಾಗ ಕಿತ್ತುಬಂದೂ
ಆ ಗಾಳಿ ಮಾತೀನ ಅರುತಾವು ಅವ್ರಗ್ಗ ಸಿಕ್ಕಾದೆ ಮುಂದೂಕಾ
ಕೊಳ್ಳೆಗಾಲದ ಮಾಂತ್ರಿಕರು ಓಡೋಡಿ ಬಂದರೂ ಎಂಟ್ಜನಾ
ಅವ್ರು ನಾಗಬೆತ್ತದಲಿ ಹೊಡೆದಾಗ ಮುರೀತಲ್ಲೊ ಆ ನಾಗಬೆತ್ತವ
ಅವ್ರು ಹುಲೀ ಬಾಣ್ತ ಕೂದೂಲಾಗ್ಗ ಮುಷ್ಟೀಲಿ ಹಿಡಿಯಾಲೂ

ಆ ಹಿಡಿ ಮುಷ್ಟೀಗ ಹದ್ನಾರು ಹಿಡಿ ಕೂದೂಲಾಗ ಕಿತ್ತ್ಬಂದೂ
ಆ ಗಾಳಿಮಾತೀನ ಆರುತಾವ ಅವರ್ಗ ಸಿಕ್ಕಾದೆ ಮುಂದುಹಾ

ಮಲೆಂಯಾಳದ ಮಾಂತ್ರಿಕರು ಓಡೋಡಿ ಬಂದರೂ ಎಂಟ್ಟನಾ
ಅವ್ರು ನಾಗಬೆತ್ತದಲಿ ಹೊಡೆದಾಗ ಘುರೀತಲ್ಲೋ ಆ ನಾಗಬೆತ್ತಾವ
ಅವ್ರು ಹಸಿಬಾಣ್ತಿ ಕೂದೂಲಾಗ ಮುಷ್ಟೀರ ಹಿಡಿಂಯಾಲೂ
ಆ ಹಿಡಿ ಮುಷ್ಟೀಗ ಮೂವತ್ತೆರಡು ಹಿಡಿ ಕೂದೂಲಾಗ ಕಿತ್ತ್ಬಂದೂ
ಆ ಗಾಳಿ ಮಾತೀನ ಆರುತಾವ ಅವರ್ಗ ಸಿಕ್ಕಾದೆ ಮುಂದುಕಾ

ದೇಸ ದೇಸ್ದ ಮಾಂತ್ರೀಕರು ಓಡೋಡಿ ಬಂದರೂ ಎಂಟ್ಟನಾ
ಬಂದವರ್ಗ ಕೂದೂಲು ಇಲ್ಲದ ಕುಸುಮಾಳ ತಲ್ದ ಕಂಡೂ
ಕೈ ಕಟ್ಟೀತಲ್ಲೋ
ಬಂದವರ್ಗ ಕುಸುಮಾಳ ಗಾಳಿಮಾತೀನ ಆರುತಾವ ಸಿಕ್ಕಾದೇ
ಬಾಂಯ್ ಕಟ್ಟೀತಲ್ಲೋ
ಆ ಓದಿಲ್ಲದ ಕುಸುಮಾಳು 'I want to be in my house'
ಅಂತಾಳಲ್ಲೋ

ಅಂತಿರುವಾಗ ಕುಸುಮಾಳು, ಕಿಡ್ಡ ಹಾಯಿಸೋ ಹಬ್ಬದ ಸಮಾಚಾರವ ಕಾಣದ ಬಾಗಲುಗಂಬದ ಚನ್ನನ ಅವ್ವನು ಗಂಡನನ್ನು ದಿಟ್ಟಿಸ್ತಾ, ಆ ಗಂಡನು ಕೂತಿರುವಲ್ಲೇ ಕೂತಿದ್ದನು. ಸಾಕಾಗಿ, ಚನ್ನನ ಅವ್ವ " ಯಾನ? " ಅಂದಳು. ಯಾನ ಎಂಬಂತೆ ಚೆನ್ನನ ಅಪ್ಪ ನೋಡಿದನು. ಚೆನ್ನನ ಅವ್ವ " ಬನ್ನಿ ವಸ್ಕ " ಅಂದಳು. ಚನ್ನನ ಅಪ್ಪ ಕೂತಲ್ಲಿಂದ ಏಳದವನು " ಅದ್ಯಾಕ ಅಲ್ಲಿಂದ್ಲೇ ಹೇಳಂದ್ರ ಕೇಳ್ಸಲ್ವ ನಂಗ " ಅಂದನು. ಅದುಕ ಚೆನ್ನನ ಅವ್ವ " ಅದಿಯಾ, ಎಲ್ಲಾರ್ರ ಅಂತಾರಲ್ಲಾ... ನಾವೂ ಒಂಚನ ಹೋಗಿ ವಸಿ ನೋಡ್ಕಂಡಾರೂ ಬರಾವ.... " ಅಂದಳು ಚೆನ್ನನ ಅಪ್ಪ ಕೆಮ್ಮಲ್ಲೆ ನೆಗಾಡ್ತ ಮಾತಾಡಿದನು.

" ಅಂತೊಕ್ಕೆ ಪೆಚ್ಚೀ... ಬೊಂಬಾಯಿ ಅಂದ್ರ ಯಾನಂದ್ಕೊಂಡಿದೀಯ ನೀನು? ಸುಮ್ನೆ ಕೂತನ ಇವ ಯಾನನ್ನೂ ಇಚಾರ್ಸಲ್ಲ ಅಂದ್ಕಂಬುಟ್ಯ? ತಿಳ್ಕಾ... ಆ ಬೊಂಬಾಯ್ನ ಅದ್ರ ಇರೋದೆಲ್ಲಾ ಬರೀ ನೀರಂತಕನ. ಈ ನೆಲ ಅನ್ನೊ ಪದವ ಮುರಾಕ್ಯಾನ ಅಗಲಕೂ ಇಲ್ವಂತಕನ. ಅಲ್ಲಿಗ ಹೋದವರು... ಯಾನಾರೂ ತಪ್ಪಸ್ಕಂಡ್ರಂತು ಹರಿಹರಬ್ರಮ್ಮನಾಗೂ ಮುಕ್ಷ ಹಿಂದ್ಕ ಅವರ ಊರ್ಗ ತಲ್ಪುಕ ಆಗಂಥಾ ಊರಂತ ಅದೂ! ಇನ್ನು ನಮ್ಮಂಥವರ್ಗ ಆದೂದ? ಅಂತೊಕ್ಕೆ ಅದ್ರ ಕಥೆ ನಾ ಏನೇಳ್ಲಿ ತಕಾ... "

" ಅದಿಯಾ ಆ ದೂರ ದರ್ಬಾರ್ನ ಗೇಟ್ನಸಪ ಒಂದು ವಾರ್ಗಂಟ ಕಾಯ್ಕಂಡಿರದು. ಹೆಂಗುವಿ ಚಾಕ್ರಿ ಮಾಡ್ಕ ಅಲ್ಲಿಗ ಬುಟ್ತಾನಲ್ಲ ಹೆಂಗಾವಿ... "

" ಅಯ್ಕಂತೊಕ್ಕೆ ಪೆಚ್ಚೀ... ಹೋಗಾಕ ಒಂದು ಪಕ್ಷ ನಿಚ್ಚಯ್ಸಕಂಡ್ರ ಅಂತಾನೇ ಅಂದ್ಕ. ಅಲ್ಲಿಗೇನಾರ ನಡ್ಕಂಡು ಹೋಗೋರನಾರೂ ಇದಾಂದ? ರೈಲಗಿಯ ಹೋಗಾಕ ಮುರಾರ್ಜಿನಾ ಬರಾಕ ಮುರಾರ್ಜಿನ ಸಕ್ಕಂದದಂತಲ್ಲಾ! ಅಮ್ಯಾಕ್ಲ ಒಂದ ಸಲ್ಗ ನೂರ್ ರೂಪಾಯ್ ಬಿದಂದಂಸಲ್ಲಾ! ಎಷ್ಟು ಬೇಕಾದ್ದೂ... ಅದ ನೀನೇ ಲೆಕ್ಕ ಹಾಕ್ಕ... "

" ಅದಿಯಾ ಇನ್ನೊಂದು ಗಂಡ್ನಾ ಜೀತ್ಕ ಇರುಸಬುಡಾವ. ಹೊಲ ಭೋಗ್ಯಕ್ಕ ಹಾಕ ಬುಡಾವ... "

"ಅಯ್ಯೋ ಪೆದಬುದ್ದೀ·· ಆಸ್ಪದ್ರಾ ಸರ್ಕಾರ್ದ ಅಂದ್ರೆ ಬುದ್ಧೀ· ಅಯ್ಯಾ· ನಿನ ಮಾತ್ನ ಪರಕಾರವಾಗಿ ಕಾಸಿದಂವರ ಕಾಲ್ಕಟ್ಗಂಡು ಸಾಲೂಂ ಸೋಲೂಂ ಮಾಡ್ಕಂಡೂ ಅವನ್ನ ನೋಡಬಂ ಅಂತ್ಲೇನೇ ಇಟ್ಗ· ನಂ ನೋಡೆಂಲೆಗೆ ಆ ಕಡಂ ದೊರ, ಓಹೋ ಈ ಜನ್ನ ಹೋಲಾರವ್ನ ಅಂತ ತಿಳ್ಕಂಡು ನಂ ಕುಸಿನ ತಲ ಕಡಂ ಆಘಾರಾಜೆಗ್ಲಾ ಇರಾದು ಬರೀ ನೀರಂತಲ್ಲಾ··· ಅಲ್ಲಿಗ ಎಸೀಸಬುಟ್ರು ನೀನೂವಿ ನಾನೂವಿ ಅಲ್ಲ ಏನ ತಾನೇ ಮಾಡಾಗಿದಂವ?"

"ಅವ್ವೆ, ನಾವ ಆ ದೊರ ಕಂಡೇಟ್ಗಂಯ್ತು ಅಡಬಿದ್ದೂಂ··· 'ನೀವ ಡಾಕ್ರಗ ತಕ್ಕಂಡಿರೋ ಜನ್ನರಸಪೋನ್ನೇರ ಹಟ್ಟೀ ಜೀತಗಾರ್ರು, ಸೋಮಿ ನಾವಾ··· ಸುಮ್ನಂಯ್ತು ಇತ್ತಗ ಬಂದಿದ್ದಿ ಅಶೀ···' ಅನ್ನವ· ಆಮ್ಯಾಕೂ ಯಾನಾರೂ ಕೇಳಾದ್ರು··· 'ಈ ಜನ್ನರಸಪೋನ್ನೇರುಂ ಊರುಲ್ಲಿ ದೊಡ್ಡ ಮಹಾಟಂಯ್ತು ಅಶಿ· ಅವರೊಂದು ಅಂಗಡಿ ಊರಾಲ್ದ ನೋಡೀ··· ಅದ ಈ ಏಡು ನೇತ್ರಗಳಿಂದಲೂ ನೋಡಕ ಆಗಲ್ಲ ಅಶೀ, ಅದೂ ಮುಲಾಗಾಳು ಉದಾಂ ಆಗಲಾ! ಅಲ್ಲೀ ಜೋಳ್ಕಂತ ರಾಗ್ಕಂತ ಅಕ್ಕಂತ ಆ ಉಪ್ಪಟ್ನ ರವ್ಕಂತ ಅಂತಾ ಕಣ್ಣಂಗ ಬೇಕಬೇಕಾದ್ದೂಂ ಕೇಶೀ ಆ ಬೆಲ್ಲ ಬೀಸೋಪ್ಪು ಕಾಪಿಪುಡೀ ಮುಲಾ ಮುಲಾಟ ಬಿದಂವ ಅಶೀ ಅವ್ವಾಂ! ಒಂದಾ ಎರಡಾ···' ಅನ್ನವ· ಅದೇ ನಾವ ತಿರ್ಗ ಊರ್ಗ ಬರ್ವಾಗ, ಜನ್ನ ಸುಮ್ಮ ಆಸ್ಪದ್ರಾರ ಬಂದವ್ನ ಥರ ಮಾಡಿ, ಬೆರಳ ಸಂದೀಲಿ ಸಿಕ್ಕಿಸಿಕಂಡಿದ್ದುಂ 'ಅವ್ವೆ ತಕ್ಕಾ··· ನೂರ ರೂಪಾಯ್ನಗ· ಅಂತ ಕೊಡಲಾರ್ನ···?"

"ಅಯ್ಯಯ್ಯೋ ಪೆದಬುದ್ದೀ ಕೇಳೂ··· ನಿನ ಮಾತ ಕಟ್ಗಂಡು ಯಾನೋ ಮಾಡಕ ಅಂತ ಹೋಗೀ ಇನ್ನೇನೋ ಆದಾದು ಸುಮ್ಮರೂ· ನಮ್ಮ ಆ ಕ್ರಿಂಯ್ತಾ ಒಂದು ಸುದ್ಧ ಇದ್ರು ಬಂದಲ್ಲಾ ಒಂಜಿನ ಅವ್ನೀ ಬತ್ತನಕನಾ· ಸಾಸ್ತ್ರ ಹೇಳ್ತೌನ್ನ ರೂಪಂಲಿ ಬರಬಾದೂ· ದಾಸಯ್ಯನ ರೂಪಂಲಿ ಬರಬೌದು··· ಮಾಟ ಮಂತ್ರದವ್ನ ರೂಪಂಲಿ ಬರಬೌದೂ···"

"ಯಾವ ರೂಪಂಲ್ಲಾದ್ರೂ ಆಗ್ಲಿಕನಾ··· ಯಾವಾತ್ತ್ರೂ········ ಒಂಜಿನಾರೂ··· ಬಂದನಾ···?"

"ಬರೆಂ? ಸಂಬಂಜ ಅನ್ನೋದು ದೊಡ್ಡದುಕನಾ····!"

ಉಪಸಂಹಾರ

ಈ ರಾತ್ರಿಗಳೂ ಬಂದುವು. ಆ ರಾತ್ರಿಗಳೂ ಹೋದುವು. ಈ ಹಗಲುಗಳೂ ಬಂದುವು. ಆ ಹಗಲುಗಳೂ ಹೋದುವು. ಅವು ಹೋಯಿತು, ಬಂತು, ಅವು.

ಆ ಸೊಪ್ಪುಸೋದರ ಮಾವ, ಈ ಹೊಬ್ಬಳಿಯಾಚೆ ಮಾಡ್ತಿದ್ದ
ಆ ತೌರಾರ ಹಾಣ್ಣುಪ್ಪು ಮುಂದುಕೀ ಅವಳ ಹೆಸರೋ ಸಿಂಗಾರಮ್ಮ
ಆ ಏಳಾದೇ ಕಳಿತಿಹಳೂ ಚಿನ್ನಕುಸುಮಾರು ಕೂಡುವ ತಳ ಅದುವು
ಆ ಸಿಂಗಾರಮ್ಮನ ಕಣ್ಣಿಂದಾದುದು ಅವಳ ಕಣ್ಣಿಂದ ಇದೆಯಲ್ಲಾ
ಆ ಅಲ್ಲಿ ಚನ್ನನ ಉಸಿರನ್ನು ಅವನ ದೇಹದಿಂದಲಿ ತಗುದರಲ್ಲಾ
ಆ ರಾತ್ರಿ ತಗೂದ ಬಾಗಿಲೂವು ಆ ತಗುದಂತಲೇ ಇದೆಯಲ್ಲಾ

ಆ ಮಂಡಿಮಾಳಿಲ ನರಂಕಯ್ಯಿ ಇಳಿಬುಟ್ಟು ಆ ಸಿಂಗಾರಮ್ಮ
ಆ ನರದಿಂದ ಮಾಡಂ ಅವಳ ದೇಹವು ಆ ನರವಾಗಿ ಒಡಮೂಡೀ
ಆ ನಿಟ್ಟುಸಿರೋ ಸಿಂಗಾರಮ್ಮನೋ ಆ ನಿತ್ಯವೂ ನೋಡಾಲೂ

ಆ ಭೂಮಿತಾಯಿ ಮಾಳಿಲ ಕಂಡಿದೇನು? ರಾಗುತ್ತಾದ ಒಂದು ಸೊಬಗು
ಆ ಬೆಡಗೀರು ಇಬ್ಬರೂ ಒಂದಿಂಕ್ರ ಆ ಹಣೆಬರೂ....

ಆ ಆಗ ಅವಳು ತಗದೂದು ನೆನೆಂಬಾದ ನಿಜಾಂದ ಹಬ್ಬೆಯಾ
ಆ ಆಗ ಈ ಎಡಗೈ ಹೆಬ್ಬೆಟ್ಟ ಸುಣ್ಣ ಹಚ್ಚಿಂಡೂ ಆ ಸಿಂಗಾರಮ್ಮ
ಆ ಆಗ ಹಣೆಬರ್ಹ ರಾಗುತ್ತಾದ ಸೊಬ್ಗು ಆ ಕಾಣಂಗ ಮಾಡಿದಳಲ್ಲಾ

ಆ ಆಗ ಅದು ಕಣ್ಣಿಬ್ಬ ಕಡೆಗದು ಕಂಡುಬಂದೀತಲ್ಲಾ

ಈ ಈಗ ಇವುಗಳನ್ನು ಆಗ ಗುರುತಿಲ್ಲದ ಪುಸ್ತಕ ತಂದುಬುಟ್ರಲ್ಲಾ
ಈ ಈಗ ಇವಳಾಗ ಕಂಡುಬಂದೀತಲ್ಲಾ ಅಲ್ಲನು ರಾಗುತ ಹಣೆಬರಾ
ಈ ಈಗ ಇವುಗಳನ್ನಾಗ ಆ ದೇವೇಂದ್ರಯ್ಯ ಪುಸ್ತಕ ತಂದುಬುಟ್ರಲ್ಲಾ
ಈ ಈಗ

ನಮೂನೆ ಕತೆ – ಶಿಷ್ಟಭಾಷೆಯಲ್ಲಿ

(ಇಲ್ಲಿ ದಲಿತ ಪಾತ್ರಗಳ ಸಂಭಾಷಣೆಯನ್ನು ಮೂಲಕೃತಿಯ ದಲಿತ ಕನ್ನಡದಲ್ಲಿಯೂ ಹಾಗೂ bracketನಲ್ಲಿ ಶಿಷ್ಟಕನ್ನಡದಲ್ಲಿಯೂ ಕೊಡಲಾಗಿದೆ).

ಕುಸುಮಬಾಲೆ

ಎತ್ತಣ ಮಾಮರ ಎತ್ತಣ ಕೋಗಿಲೆ? ಎತ್ತಣಿಂದೆತ್ತ ಸಂಬಂಧವಯ್ಯಾ?!
ಬೆಟ್ಟದ ನೆಲ್ಲಿಯಕಾಯಿ ಸಮುದ್ರದೊಳಗಣ ಉಪ್ಪು ಎತ್ತಣಿಂದೆತ್ತ ಸಂಬಂಧವಯ್ಯಾ?!
ಗುಹೇಶ್ವರ ಲಿಂಗಕ್ಕೆಯೂ ಎನಗೆಯೂ ಎತ್ತಣಿಂದೆತ್ತ ಸಂಬಂಧವಯ್ಯಾ?! —ಅಲ್ಲಮ

ಕಲ್ಲೂ ನೀರೂ ಕರಗುವ ಸಮಯ. ಆಗ ದಿನನಿತ್ಯದ ಕೆಲಸಕಾರ್ಯ ಮುಗಿಸಿದ ಜೋತಮ್ಮದಿರು ಸುಖದುಃಖ ಮಾತನಾಡಿಕೊಳ್ಳಲು ಆ ದಟ್ಟ ಕತ್ತಲಿನಲ್ಲಿ ಗ್ರಾಮದ ಮುಂದೆ ರೂಢಿಯಂತೆ ಸೇರಿದರು. ಅವರು ಮಾತನಾಡಲೆಂದು ಇವರು, ಇವರು ಮಾತನಾಡಲೆಂದು ಅವರು — ಈ ರೀತಿ ಸುಮ್ಮನೆ ಇದ್ದರು. ಅವಾಗ ಅಲ್ಲಿಗೆ ಒಬ್ಬ ಹೊಸ ಜೋತಮ್ಮ ಶಾಲೆಯ ಕಡೆಯಿಂದ ಬಂದವಳು, ಬಸ್ಸಿನವರು ದಾನವಾಗಿ ಕಟ್ಟಿಸಿದ್ದ ಜಗಲಿಕಲ್ಲಿನ ಮೇಲೆ ಉಸ್ಸಪ್ಪ ಎಂದು ಕುಳಿತು ನಿಟ್ಟುಸಿರುಬಿಟ್ಟಳು. ಆಗ ಊರಿನ ಶ್ರೀವಂತ ಮನೆಯ ಜೋತಮ್ಮ —

"ನಿನ್ನದು ಯಾವ ಊರಮ್ಮ?" ಎಂದು ಕೇಳಿದಳು.

"ಅಯ್ಯೋ ನಂಗೂ ಯಾವೂರು ಯಾವ ಕೇರಿ ಅಕ್ಕಯ್ಯ? ನಾನೊಬ್ಬ ಪಾಪಿ ಪರ್ದೇಸಿ. ಇದ್ದರೆ ಈ ಊರು ಎದ್ದರೆ ಮುಂದೂರು. ಈಗ ಊರ್ಗ ಬಂದಿರೊ ದೊಂಬ್ರ ಕಡೆಯೋಳು.."

("ಅಯ್ಯೋ ನನಗೆ ಯಾವ ಊರು, ಯಾವ ಬೀದಿ ಅಮ್ಮೋರೆ? ನಾನೊಬ್ಬಳು ಪಾಪಿ, ಪರದೇಶಿ. ಇದ್ದರೆ ಈ ಊರು, ಹೋದರೆ ಮುಂದಿನ ಊರು. ಈಗ ಊರಿಗೆ ಬಂದಿರುವ ದೊಂಬರ ಕಡೆಯವಳು...")

" ಅಮ್ಮಮ್ಮ! ನಿನ್ನ ಮಾತಿನಲ್ಲಿ ಎಷ್ಟು ಒಯ್ಯಾರ! ಇನ್ನು ನಿನ್ನೊಳಗೆ ಇನ್ನೆಷ್ಟೋ! ಕೇಳುತ್ತ ಇರುವದೇ ಒಂದು ಅನುಭವ. ಎಷ್ಟೇ ಆದರೂ ನೀನು ಊರೂರು ಸುತ್ತುವವಳು. ಇವತ್ತಿಗೆ ಹನ್ನೆರಡು ವರ್ಷದ ಹಿಂದಿನ ಮಳೆಗಾಲದ ಬೆಳೆಯಲ್ಲಿ ಬಂದಿದ್ದೆಯಲ್ಲ ಅವಳೇನ?"

"ಅವ್ವಯ್ಯಾ ಕಣ್ರೀ ಅಕ್ಕಯ್ಯ. ಇನ್ನೂ ನನ ನೆಪ್ಪು ತಮ್ಗ ಚಿಗುರಾಗಿದೆಯಲ್ಲ ಇದಲ್ವ ನನ ಪುಣ್ಯ!"

("ಹೌದು ಅಮ್ಮೋರೆ! ಇನ್ನೂ ನನ್ನ ಗುರುತು ತಮಗೆ ನೆನಪಿದೆಯಲ್ಲ!
ಇದೇ ನನ್ನ ಪುಣ್ಯ!")

ಎಂದು ಹೊಸ ಜೋತಮ್ಮ ಆಶ್ಚರ್ಯದಲ್ಲಿರಲು, ಉಳಿದ ಜೋತಮ್ಮರಿರು ಹೊಸಬಳನ್ನು ಮುಟ್ಟಿ ಮಾತನಾಡಿಸುತ್ತ, ಅಲ್ಲಿ ಸಣ್ಣ ಗದ್ದಲ ಎದ್ದಿತು. ಆಗ ಊರಿನ ಶ್ರೀಮಂತರ ಮನೆಯ ಜೋತಮ್ಮ —

" ಅದೇನು ಅಪ್ಪ ಮಾತನಾಡುತ್ತೀರಿ! ಕೇಳಿರಿ ಹೆಂಗಸರೆ, ಈ ದಿನ ನಮ್ಮ ಮನೆ ಕುಸುಮಳ ಗಂಡ ಬಂದಿದ್ದ. ಬಂದವನು ಮಗು ಮತ್ತು ಹೆಂಡತಿಯನ್ನು ಸ್ವಲ್ಪ ಸಮಯ ನೋಡಿದನೋ ಇಲ್ಲವೋ! ನಿಲ್ಲದೆ ಹೊರಟುಬಿಡುವುದೇ ಪುಣ್ಯಾತ್ಮ! ..."

"ಅಯ್ಯಯ್ಯೋ! ಎಲ್ಲಾದ್ರು ಉಂಟೇನಮ್ಮ! ಏಕಾದರೂ ಆ ರೀತಿ ಮಾಡಿದನಮ್ಮ?"
" ನಾನು ಏನು ಹೇಳಲಮ್ಮ, ತಾಯಿ? ಮಗು ನೋಡುತ್ತ, ಕೆಂಪಗಿರುವ ಅವನ ಮುಖ ಕಪ್ಪಾಗಿ ಹೋಯಿತು. ಕುಸುಮಳನ್ನು ಏನು? ಹೇಗಿದ್ದೀಯ? ಅನ್ನಲಿಲ್ಲ... ಸ್ವಲ್ಪ ಕಣ್ಣೆತ್ತಿ ನೋಡಲಿಲ್ಲ. ಹೊರಗೆ ಹೋಗ್ತಾ ಇದ್ದ..."

"ಅಯ್ಯಯ್ಯೋ ಎಲ್ಲಾದರೂ ಉಂಟೇನಮ್ಮ? ಆ ರೀತಿಯಾಗಿ ಯಾರಾದರೂ ಮಾಡಿದನಮ್ಮ... ? ಅದಕ್ಕೆ ನಾನಾದರೂ ಏನು ತಾನೇ ಹೇಳಲಮ್ಮ, ತಾಯಿ?"

"ಅಕ್ಕ ನಾ ಹೇಳ್ತೀನಿ ತಾಳಿ ಅದ..."

(" ಅಕ್ಕ ಅದನ್ನು ನಾನು ಹೇಳ್ತೀನಿ ತಾಳಿ...") — ಎಂದು ಸೊಪ್ಪು ತರಕಾರಿ ವ್ಯಾಪಾರಸ್ಥೆಯಾದ ನಾಯಕರ ಮನೆ ಜೋತಮ್ಮ ನುಡಿಯಲು, ಕೋಪಗೊಂಡ ಶ್ರೀಮಂತರ ಮನೆ ಜೋತಮ್ಮ —

"ನೀನು ಎಲ್ಲಾದಕ್ಕೂ ಬಾಯಿ ಹಾಕಿಕೊಂಡು ಬಾರಮ್ಮ. ಆ ಮನೆ ತಳಪಾಯದ ದಿನವೇ ಹುಟ್ಟಿರುವ ನನಗೆ ಗೊತ್ತಿಲ್ಲವಂತೆ... ಇನ್ನು ಏನನ್ನ ನೀನು ಹೇಳುವುದು?" ಎಂದಳು.

ಈ ಸಿಟ್ಟಿಗೆ ಸೊಪ್ಪು ಹಾಕದ ಹರಿಜನರ ಮಾರಿಗುಡಿ ಜೋತಮ್ಮ —

"ಅದಾಕ್ಕೆ ಅವ್ಳ ಬಾಂಯ್ ಮುಚ್ಚುಸಿರಿ ನೀವು? ಏನೇನ ಕಂಡಿದಾಳೋ ಅವಳು! ಹೇಳ್ಲಿ ಬುಡಿ, ಅದನ್ನ ಕೇಳವು..."

("ಅದೇಕೆ ಅವಳ ಬಾಯಿ ಮುಚ್ಚುತ್ತೀರಿ ನೀವು? ಅವಳು ಏನೇನು ಕಂಡಿರುವಳೋ! ಹೇಳಲಿ ಬಿಡಿ, ಅದನ್ನು ಕೇಳೋಣ...") ಅಂದಳು. ಆಗ ಶ್ರೀಮಂತರ ಮನೆ ಜೋತಮ್ಮ ಮುಖವನ್ನು ಗಂಟಾಕಿಕೊಂಡು ಒಲ್ಲದ ಮನಸ್ಸಿನಿಂದ —

"ಹ್ಞಾ, ಹೇಳಮ್ಮ, ಅದೇನು ನಿನಗೆ ಕಂಡಿರುವುದೋ ಅದನ್ನು ಕೇಳೋಣ..." ಎಂದಳು. ಆಗ ಒಂದು ಸಾರಿ ಸುತ್ತಲು ನೋಡಿ ನಾಯಕರ ಮನೆ ಜೋತಮ್ಮ—

"ಅದಿಂಯ್ಯಾ ಅತ್ಗೆಮ್ಮೋರೆ.. ನಿಂ ಕುಸುಮುದಿ ಆ ಹೊಲಾರ ಚನ್ನನ್ನೂದಿ ಕೂಡ್ಕೋ ತಳವ ನಂ ಜೋಪಡಿ ತಾನೇಯ್ಯ? ಕೆಂಪಗಿರೋ ಗಂಡ ಹೆಂಡ್ತೀಗೆ ಹುಟ್ಟಿರೋ ಕೂಸ ಚನ್ನನ ಥರಾವ್ಗಿ ಕಪ್ಪಾಗಿ ಅದು ಹುಟ್ಟೇ... ಅದನ್ನೀಗ ಕುಸುಮುಳ ಗಂಡ ಅರ್ತಗಂಡು... ಅಂತೇನಾರು..."

("ಅದೇ ಅತ್ತಿಗೆಯವರೆ... ನಿಮ್ಮ ಕುಸುಮಳು ಆ ದಲಿತರ ಚೆನ್ನನು ಸೇರುವ ಸ್ಥಳ ನಮ್ಮ ಗುಡಿಸಲು ತಾನೆ? ಕೆಂಪಗಿರುವ ಗಂಡಹೆಂಡತಿಗೆ ಹುಟ್ಟಿರುವ ಮಗು ಚೆನ್ನನ ರೀತಿ ಕಪ್ಪಗಿರಲು... ಅದನ್ನ ಕುಸುಮಳ ಗಂಡ ಅರ್ಥಮಾಡಿಕೊಂಡು... ಅಂತೇನಾದರು...") ಅಂತ ಹೇಳಿ ಮುಗಿಯುವುದರೊಳಗೆ ಬ್ರಾಹ್ಮಣರ ಮನೆ ಜೋತಮ್ಮ —

"ಎಲ್ಲರೂ ಮಾಡುವ ಯಥಾರ್ಥವನ್ನೇ ಹೇಳುತ್ತಾಳೆ. ಏನು ವಿಚಾರ ಅದು?" — ಎಂದು ಶ್ರೀಮಂತರ ಮನೆ ಜೋತಮ್ಮನ ಕಡೆಗೆ ತಿರುಗಿ —

"ಅವಳ ಮಾತು ಹಾಗೆ ಇರಲಿ ಮಗು ಮತ್ತು ಬಾಣಂತಿ ಚೆನ್ನಾಗಿದಾರೆ? ಹೇಳಿ ಅದನ್ನಾದರು ಕೇಳೋಣ..." ಎಂದಳು. ಆಗ ಶ್ರೀಮಂತರ ಮನೆ ಜೋತಮ್ಮ —

"ಮಗುವೇನೋ ಆರೋಗ್ಯವಾಗಿ ಚೆನ್ನಾಗಿ ಆಟವಾಡಿಕೊಂಡಿದೆ. ಆದರೆ... ಆ ನಮ್ಮ ಕುಸುಮಳನ್ನು ಈ ಎರಡು ಕಣ್ಣುಗಳಿಂದ ನೋಡಲಿಕ್ಕಾಗುವುದಿಲ್ಲವಮ್ಮ. ಆ ಎಳೆಯ ನಗುವನ್ನು, ಈ ಸೌಂದರ್ಯವನ್ನು ಸೇರಿಸಿ ಭಟ್ಟ ಇಳಿಸಿ ಮಾಡಿದ ರೀತಿ ಇದ್ದಂವಳು... ಶಿವ

ಅವಳು ನಕ್ಕರೆ ಅವಳ ಹಲ್ಲ ಮೇಲಿನ ಆ ಒಂದು ಚೂರು ಸಿಂಗಲ್ಲ*ನಲ್ಲೇ ಈ ಲೋಕದ ಸೌಂದರ್ಯವನ್ನೆಲ್ಲ ಆ ದೇವರು ಇಟ್ಟು··· ಆ ರತಿ ಅನ್ನುವವಳಿಗೆ ಅದನ್ನ ಹೇಗಾದರೂ ಮಾಡಿ ಕಿತ್ತುಕೊಂಡು, ತನ್ನ ಹಲ್ಲಿನ ಮೇಲಕ್ಕೆ ಇಟ್ಕೊಬೇಕು ಎನ್ನುವಂತೆ ಇದ್ದಳು ! ಈಗ ಆ ನನ್ನ ಮಗುವನ್ನು ಹಿಡಿದು ಹಿಂಡಿದರೆ ಒಂದು ತೊಟ್ಟು ರಕ್ತ ಇದೆಯೋ··· ಇಲ್ಲವೋ··· ಅನ್ನುವ ಹಾಗಿದ್ದಾಳೆ···”

ಈ ಮಾತಿಗೆ ಯಾವ ಜೋತಮ್ಮನ ಬಾಯಿಂದಲೂ ಮಾತು ಹೊರಡಲಾರದೆ ಕೆಲವರು ಲೊಚಗುಟ್ಟುತ್ತ, ಕೆಲವರು ಅಯ್ಯೋ ಎನ್ನುತ್ತಾ, ಉಳಿದವರು ದೀನವಾಗಿ ತಾವೇ ನಿಟ್ಟುಸಿರಾಗಿ ಕುಳಿತು—

“ಯಾವ ದಿನ ನೇರಲಿ ಇಂಥ ಕಷ್ಟದ ಮಾತುಗಳನ್ನು ಕೇಳಬೇಕು, ನೋಡಬೇಕು. ನಮ್ಮ ಹಣೆಯಲ್ಲಿ ಅದೇನು ಬರೆದಿದೆ? ಆ ದೇವರು ಏಕಾದರೂ ನಮ್ಮನ್ನ ಸೃಷ್ಟಿಸಿದ? ನಮಗೆ ಮರಣವನ್ನಾದರೂ ಕೊಡಬಾರದೆ?”

ಹೀಗೆ ತಲೆಗೊಂದು ಎಂದು ಹರಟುತ್ತ ಕುಳಿತಿರಬೇಕಾದರೆ, ಆ ಕಡೆ ಐದು ಜನ, ಈ ಕಡೆ ಐದು ಜನ, ಹಿಂದೆ ಐದು ಜನ, ಮಧ್ಯೆ ಕುಸುಮಳ ಅಪ್ಪ ಮಾತನಾಡುತ್ತ, ಉಳಿದವರು ಹ್ಞೂ ಗುಟ್ಟುತ್ತ ಊರೊಳಗೆ ಕಾಲಿಟ್ಟರು. ಈ ಕಲಿಯುಗದ ಜನರಿಗೆ ನಿರ್ದಿಷ್ಟವಾದ ವೇಳೆ ಎನ್ನುವುದಿಲ್ಲದ್ದರಿಂದ ಒಂದು ಸ್ವಲ್ಪ ಸಮಯವಾದರೂ ತಾವು ನೆಮ್ಮದಿಯಾಗಿ ಕುಳಿತು ಸುಖದುಃಖವನ್ನು ಮಾತನಾಡಿಕೊಳ್ಳಲಾಗದ ಜೋತಮ್ಮದಿರು ಬೇಸರದಿಂದ ಎದ್ದು ತಮ್ಮ ತಮ್ಮ ಸ್ಥಳ ಸೇರಿಕೊಂಡರು.

ಕುಸುಮಳ ತಂದೆ ಸೋಮಪ್ಪನವರು ಮನೆ ಮುಂದುಗಡೆ ನಿಂತ ನಿಲುವಿನ ರಭಸಕ್ಕೆ, ಬಾಗಿಲ ಬಳಿಯಲ್ಲಿ ತಲೆ ಇಟ್ಟು ತೂಕಡಿಸುತ್ತಿದ್ದ ಕೆಲಸದಾಳಿಗೆ ಬೆಚ್ಚಿದಂತಾಗಿ ಎದ್ದೇಳಲು, ಒಂದು ಆನೆ ನುಗ್ಗುವಷ್ಟಿದ್ದ ಆ ಬಾಗಿಲು ಇಡೀ ಊರೇ ಒಂದು ಸಾರಿ ಆಕಳಿಸಿದಷ್ಟು ಶಬ್ದ ಮಾಡುತ್ತ ತೆರೆದುಕೊಂಡಿತು. ಆವಾಗ ಮನೆಯ ಒಳಗೆ ಇದ್ದ ಇದ್ದ ಬೇಜಾರು

---

*ಸಿಂಗಲ್ಲು – ಹಲ್ಲನ ಮೇಲೆ ಮತ್ತೊಂದು ಒಂಟಿ ಹಲ್ಲು ಹುಟ್ಟಿರುವುದನ್ನು ಸಿಂಗಲ್ಲು ಎನ್ನುತ್ತಾರೆ.

ತುಂಬಿಕೊಂಡಿದ್ದ ಕತ್ತಲು, ಬಾಗಿಲು ತೆಗೆಯುವುದನ್ನೇ ಕಾಯುತ್ತಿದ್ದು ಹೊರ ಬಂದು ಉಸಿರು ಬಿಡಲು, ಹಾಗೆಯೇ ಮನೆಯ ಹೊರಗಿದ್ದ ಕತ್ತಲಿಗೆ ತಾನು ಒಂದು ಸಾರಿ ಮನೆಯ ಒಳಗಿನ ಅಂದವನ್ನು ನೋಡೋಣವೆನಿಸಿ ಅದು ಒಳಗೆ ಬಂದಿತು.

ಕೆಲಸದಾಳು ಓಡಾಡಿಕೊಂಡು ಲಾಟೀನು ಬತ್ತಿ ಎತ್ತರಿಸಿ ಮಿನುಗುವ ಬೆಳಕನ್ನು ದೊಡ್ಡದಾಗಿಸಿದನು. ಆ ಬೆಳಕು ತನ್ನ ಶಕ್ತಿಮೀರಿ ಹಬ್ಬಿ ಕಣ್ಣುಗಳನ್ನು ಓಡಿಸಿದಷ್ಟೂ ಇನ್ನೂ ಕಂಡುಬರುತ್ತಿದ್ದ ಒಂದು ಊರಿನಷ್ಟಿದ್ದ ಆ ಮನೆಯ ಒಂದು ಕಡೆಯ ಮೂಲೆಯನ್ನಾದರೂ ತಲುಪಲು ಅದಕ್ಕೆ ಸಾಧ್ಯವಾಗದೆ ಏದುಸಿರು ಬಿಡುತ್ತ ನಿಂತಿತು.

ಕೆಲಸದಾಳು " ಅವ್ವರ ಏಳಿಸ್ಲ ಅಗಿ " (" ಅಮ್ಮನವರನ್ನು ಎಬ್ಬಿಸಲೇ? ") ಅಂದನು. " ಬೇಡ ನನ್ನದು ನಂಜನಗೂಡಿನಲ್ಲಿ ಊಟವಾಗಿದೆ. ನೀನು ಇನ್ನು ಮಲಗು;..." ಎಂದು ಸೋಮಪ್ಪನವರು, ಆಳುದ್ದದ ಹದಿನಾರು ಚಪ್ಪಡಿ ಕಲ್ಲಿನ ತೊಟ್ಟಿಗೆ* ಇಳಿದು ಕೈಕಾಲು ಮುಖ ತೊಳೆದು, ಅದಾದ ಮೇಲೆ ಅರ್ಧ ಹಜಾರವನ್ನು ಆವರಿಸಿದ್ದ ಮಂಚದ ಮೇಲೆ ದೇಹವಿರಿಸಿ ಒಂದು ಸಿಗರೇಟು ಹಚ್ಚಿ ಸೇದಿದರು. ಆದರೂ ಮನಸ್ಸು ನಿಂತಲ್ಲಿ ನಿಲ್ಲದಿರಲು ಬಾಣಂತಿ ಮನೆಯಲ್ಲಿರುವ ಮಗಳು ಕುಸುಮಳನ್ನು ಒಂದು ಸಾರಿ ನೋಡುವ ಆಸೆ ಉಂಟಾಯಿತು.

ಗಾಳಿ ಬೆಳಕುಗಳ ತಡೆಗಟ್ಟಿ ನಿಂತಿದ್ದ ಆ ಬಾಣಂತಿ ಮನೆಯು ಕುಸುಮಳ ಉಸಿರಾಟದಲ್ಲಿ ಬೆಚ್ಚಗಿತ್ತು. ಹರಳೆಣ್ಣೆ ದೀಪದ ಬೆಳಕು ಬೆಳಗುತ್ತ, ತಾಪವನ್ನು ಚೆಲ್ಲುತ್ತ ಉರಿಯುತ್ತಿತ್ತು. ಅಲ್ಲಿ ಕುಸುಮಳ ತೋಳಮೇಲೆ ಹಗಲುರಾತ್ರಿಯ ಪರಿವೆ ಇಲ್ಲದೆ ಅವಳ ಮಗು ಕಣ್ಣುಗಳ ಅರಳಿಸಿಕೊಂಡು ಕೇಕೆಹಾಕುತ್ತ, ಕೈಕಾಲುಗಳನ್ನು ಕೆಳಗೆ ಮೇಲಾಡಿಸುತ್ತ ಆಡುತ್ತಿದ್ದರೆ, ಅದರ ಅಮ್ಮ ತನ್ನ ಪರಿವೆಯಿಲ್ಲದೆ ನಿದ್ದೆಮಾಡುತ್ತಿದ್ದಳು. ಅವಳ ಹನಿಬೆವರುಗಳು ಹಣೆತುಂಬ ಹರಡಿ ಆಗಾಗ ಅವು ಒಡೆದು ಮುಖದಿಂದ ಕೆಳಕ್ಕೆ ಇಳಿಯುತ್ತಿದ್ದವು. ಅವಳ ಕೂದಲು ಅವಳ ಮುಖಕೆಲ್ಲ ಹರಡಿಕೊಂಡು ಆ ಬೆವರಿನ ತೇವಕ್ಕೆ ಅಂಟಿಕೊಂಡು ಅದೂ ಸಹ ಅಲುಗಾಡದೇ ಇತ್ತು.

---

*ತೊಟ್ಟಿ – ಕಂಬಗಳನ್ನುಳ್ಳ ಮನೆಯ ನಡುವೆ ಗಾಳಿ ಬೆಳಕಿಗಾಗಿ ಹಾಗು ಕೈಕಾಲು ಮುಖ ತೊಳೆಯಲು ಬಿಟ್ಟುಕೊಂಡ ಸುಮಾರು ಒಂದು ಅಂಕಣ ಅಥವಾ ಅದಕ್ಕಿಂತ ಹೆಚ್ಚು ಅಗಲವಿರುವ ಮನೆಯ ನಡುವಿನ ಕಲ್ಲುಚಪ್ಪಡಿಗಳನ್ನು ಹಾಸಿದ ಬಯಲು ಅಂಗಳ.

ಆ ಮಗು ಆಡುವ ಅಂದವನ್ನು ನೋಡುತ್ತ, ಕುಸುಮಳ ತಮ್ಮನಾಗಿದ್ದ ಹನ್ನೆರಡು ವರ್ಷದ ಪ್ರಸಾದನು ಎದುರಿಗೆ ಕುಳಿತಿದ್ದನು. ದೇವಮಾನವರಂತೆ ರೆಪ್ಪೆ ಮಿಟುಕಿಸದ ಆ ಬೆಂಗು ಕಣ್ಣುಗಳ ಒಳಕ್ಕೆ ಹರಳೆಣ್ಣೆ ದೀಪದ ತಂಪಾದ ಬೆಳಕು ಬಿದ್ದು, ಅದು ಅಲ್ಲಿಂದ ಇನ್ನೂ ತಂಪಾಗಿ ನೆಲಕ್ಕೆ ಚೆಲ್ಲುತ್ತಿತ್ತು. ಅವನ ಬಾಯೊಳಗೆ ಮೀರಿ ಸುರಿಯುತ್ತಿದ್ದ ಹಬ್ಬನ ಜೊಲ್ಲನ್ನು ಭೂಮಿತಾಯಿ ತನ್ನೆರಡು ಕೈಗಳಿಂದ ಬೀಳದಂತೆ ಹಿಡಿದುಕೊಳ್ಳುತ್ತಿದ್ದಳು.

ಇದನ್ನು ಕಂಡು ಮಗಳನ್ನು ನೋಡಲು ಬಂದ ಸೋಮಪ್ಪನಿಗೆ ಬಾರದ ನಗು ಬಂದು " ಯೋ ಪ್ರಸಾದ ಯಾಕೆ ಇನ್ನು ನಿನ್ನ ಕಣ್ಣಿಗೆ ನಿದ್ದೆ ಬಂದಿಲ್ಲ?" ಅಂದರು. ಪ್ರಸಾದನು ಬಾಯಿ ತುಂಬ ಇದ್ದ ಜೊಲ್ಲನ್ನು ಭೂಮಿತಾಯಿಗೆ ಚೆಲ್ಲಿಬಿಟ್ಟು " ಅಪ್ಪ ಇಲ್ಲಿ ನೋಡು! ಮಗು ಆಡುತ್ತಾ ಇದೆ" ಎಂದನು. ಅದಕ್ಕೆ " ಇನ್ನೇನು ಬೆಳಗಾಗುತ್ತಿದೆ, ಹೋಗು ನೀನು ಮಲಗು" ಅಂದರು. ಅಷ್ಟರಲ್ಲಿ ಬಾಯಿಗೆ ತುಂಬಿದ ಜೊಲ್ಲನ್ನು ಪ್ರಸಾದನು ಬಾಯಿಯ ಎರಡು ತುದಿಯಿಂದಲೂ ಸುರಿಸುತ್ತ ಪುನ: " ಅಪ್ಪ ಇಲ್ಲಿ ನೋಡು! ಮಗು ಆಡುತ್ತ ಇದೆ" ಎಂದನು.

ಒಂದು ಸಾರಿ ಸೋಮಪ್ಪನವರು ಆ ದೇಹದ ತುಂಬ ಉಸಿರಾಡಿ, ಮಗಳನ್ನು ಕಣ್ತುಂಬ ನೋಡಿ ಮಂಚದ ಮೇಲೆ ಬಂದು ಮಲಗಿದರು.

ಪ್ರಸಾದನು, ಏಳು ಜನ ಗಂಡುಮಕ್ಕಳ ನಂತರ ಒಬ್ಬಳು ಮಗಳಾಗಿ ಕುಸುಮಳು ಹುಟ್ಟಿ, ಇನ್ನು ಮಕ್ಕಳು ಸಾಕು ಎಂದಿರುವಾಗ ಅರಿವಿಗೆ ಬಾರದೆ ಹುಟ್ಟಿಬಿಟ್ಟಿದ್ದನು. ಇಂಜೆಕ್ಷನ, ಔಷಧಿಗೆಲ್ಲ ಜಗ್ಗದೆ ಗೆದ್ದು ಹುಟ್ಟಿಬಂದ ಪ್ರಸಾದನ ಪೆದ್ದತನ ಮತ್ತು ಅವನ ಜೊಲ್ಲು ಅವನು ಬೆಳೆದಂತೆಲ್ಲ ಅವೂ ಬೆಳೆಯುತ್ತ,' ಏಕಾದರೂ ಹುಟ್ಟಿದನೊ ಅನ್ನಿಸುತ್ತ, ಅವನು ಜನ್ಮ ತಾಳಿದ್ದನು.

ಈ ನನ್ನ ಮಗು ಪ್ರಸಾದನು ಕುಳಿತು ಊಟ ಮಾಡುವ ಕಾಲದಲ್ಲೂ ತಿನ್ನುವ ಯೋಗ ತರಲಿಲ್ಲವಲ್ಲ ಎನ್ನುವಾಗ ಹಾಗೆ ತಂದೆಯವರ ಕಣ್ಣಿಗೆ ನಿದ್ದೆಯು ಆವರಿಸಿತು. ಆಗ ಆ ಅರೆಜೀವದ ಕತ್ತಲ ಬೆಳಕಿನಲ್ಲಿ ಸೋಮಪ್ಪನವರ ಕಣ್ಣುಗಳ ಸುತ್ತ ಸುತ್ತುತ್ತಿದ್ದ ಕಪ್ಪು ಬಳೆಯು ಇನ್ನೊಂದು ಗೆರೆಯನ್ನು ಹೆಚ್ಚಿಸಿಕೊಂಡಿತು.

ಸೋಮಪ್ಪನವರ ಮೂಗಿನ ಮೇಲೆ, ಹುಬ್ಬಿನ ಕೆಳಗೆ ಎರಡು ಕಪ್ಪು ಪಾಕ್ಕದು ಇದ್ದು, ಆದರಲ್ಲಿ ನಾವು ಗೀಜಗನ ಹಕ್ಕಿ ಗೂಡುಕಟ್ಟಿ, ಆ ಲಾಟೀನಿನ ಕತ್ತಲ ಬೆಳಕು ಅಲ್ಲಾಡುತ್ತ, ತಳ್ಳಾಡುತ್ತ ಅಲ್ಲಿಗೆ ಬಂದು ಬಿದ್ದಾಗ, ಆ ಕಣ್ಣುಗುಡ್ಡೆಗಳ ಮೇಲಿಂದ ಆ ನಾವು ಎದ್ದುಬಂದು ನೆಡೆಯಾಡಿಸುವಂತಾಗುತ್ತಿತ್ತು.

ಆ ಕಡೆ ಸೋಮಪ್ಪನಿಗೆ ನಿದ್ದೆ ಬರಲು, ಅವರ ಮಜಬೂತಾದ ದೇಹವನ್ನು ಹೊರಲಾರದೆ ಹೊತ್ತು ಹೋಗುತ್ತಿದ್ದ ಅವರ ಆತ್ಮವು 'ಉಸ್' ಎಂದು ಕುಳಿತು ಸುಸ್ತಾರಿಸಿಕೊಳ್ಳತೊಡಗಿತು.

ಈ ರೀತಿ ಪಶುಪಕ್ಷಿಯಾದಿಯಾಗಿ ನರಮನುಷ್ಯರನ್ನೆಲ್ಲ ನಿದ್ದೆಯು ಆವರಿಸಿರಲು, ಆಗ ಸೋಮಪ್ಪನವರು ಮಲಗಿದ್ದ ಮಂಚವು ವಾಯುವ್ಯದ ಸೂಳೆಯಂತೆ ಒಯ್ಯಾರದಲ್ಲಿ ತಲೆತ್ತಿ, ಒಂದು ಸಾರಿ ನೋಡಿತು. ಸುಧಾರಿಸಿಕೊಳ್ಳುತ್ತಿದ್ದ ಆತ್ಮವನ್ನು ಕಂಡು, ಹ್ಞಾ ಅನ್ನಿಕೊಳ್ಳುವುದಕ್ಕೆ ಒಬ್ಬರು ಸಿಕ್ಕಿದರು ಅಂದುಕೊಂಡು ಸಂತೋಷದಿಂದ ಹೇಳತೊಡಗಿತು:

" ಒಂದು ಸಾರಿ ಏನಾಯ್ತು… ನಮ್ಮ ದೇಶದ ಮಹಾರಾಜರು ಹೆಣ್ಣು ನೋಡುವುದಕ್ಕೆ ಅಂತ ಪಕ್ಕದ ದೇಶದ ರಾಜ್ಯಕ್ಕೆ ಹೋಗುತ್ತಾರೆ. ಅಲ್ಲಿ ಈ ರಾಜ್ಯದ ಅರಮನೆ ಹೇಗಿದೆ ಸ್ವಲ್ಪ ನೋಡೋಣ ಎಂದುಕೊಂಡು ನಮ್ಮ ಮಹಾರಾಜರು ಒಂದು ಕಡೆಯಿಂದ ನೋಡಿಕೊಂಡು ಬರುತ್ತ ಇರಬೇಕಾದರೆ, ಆ ಅಂತಃಪುರವಾಗಿದ್ದ ಅಂತಃಪುರಕ್ಕೆಲ್ಲ ಕಳಸದ ರೀತಿಯಾಗಿ ಇದ್ದಂತ ಒಂದು ಮಂಚ ಅವರ ಕಣ್ಣಿಗೆ ಬಿತ್ತು.

ಆ ಮಂಚಕ್ಕೆ ಹರಿಸಿದ ದೃಷ್ಟಿಯನ್ನ ತೆಗೆಯದೆ, ನಮ್ಮ ದೇಶದ ಮಹಾರಾಜರು — ಅರೆ ನಾನು ನೋಡಿದರೆ ಇಲ್ಲಿಗೆ ಹೆಣ್ಣಿಗಾಗಿ ಬಂದಿರುವುದು. ಈ ಅರಮನೆ ಹೆಣ್ಣು ನಮ್ಮ ಅರಮನೆಗೆ ಬಂದರೆ, ನಮ್ಮ ಅರಮನೆಯಲ್ಲೂ ಇಂಥ ಒಂದು ಮಂಚ ಇಲ್ಲದಿದ್ದರೆ ಅವಳು ವಲಗುತ್ತಾಳ…. ಎನ್ನುವ ಚಿಂತೆಯು ಅವರ ಎದೆ ಒಳಕ್ಕೆ ನುಗ್ಗಿ ಒಂದು ಕಡೆಯಿಂದ ಸುಡುತ್ತ ಬರುತ್ತಿತ್ತು.

ಆಗ ನಮ್ಮ ರಾಜರು ಏನು ಮಾಡಿದರು ಅಂದರೆ…. ತಮ್ಮ ರಾಜ್ಯಕ್ಕೆ ಬಂದರು. ಬಂದವರು, ದೇಶದಲ್ಲಿರುವ ಬಡಗಿಗಳನೆಲ್ಲ ಕರೆಯಿಸಿ ಅವರನ್ನ ಪರೀಕ್ಷಿಸಿ ಏಳು ಜನರನ್ನ ಮಾತ್ರ

ಇರಿಸಿಕೊಂಡು ಅವರಿಗೆ ಬೀಳ್ಕೊಟ್ಟು " ನೋಡ್ರಯ್ಯ ಬಡಗಿಗಳೇ.... ನೀವುಗಳು ಈಗಲೇ ಉತ್ತಮವಾದ ಮರ ಕಡಿದು, ಅದರ ಸೈಜ ತೆಗೆದುಕೊಂಡು ಆ ಸೈಜಿನಲ್ಲಿ ಹೊರರಾಜ್ಯದ ಮಂಚ ಇದೆಯಲ್ಲ... ಸ್ವಲ್ಪ ಅದಕ್ಕಿಂತಲೂ ಅಚ್ಚುಕಟ್ಟಾಗಿಯೆ ಒಂದು ಮಂಚವನ್ನು ಮಾಡಿಕೊಡಿ ನಮಗೆ" ಎಂದು ಅಪ್ಪಣೆ ಮಾಡಿದರು.

ಆ ಹಾಕಿದ ಬಟ್ಟೆಯಲ್ಲೇ ಬಡಗಿಗಳು ಗರಗಸ, ಉಳಿ ಹಿಡಿದುಕೊಂಡು ಹೊರಟು, ಮೂರು ತಿಂಗಳು ಮರ ಹುಡುಕಿ, ಮೂರು ತಿಂಗಳು ಆ ಮರದ ಸೈಜ ತೆಗೆದು ಪಾಲಿಶ ಮಾಡಿ, ಮೂರು ತಿಂಗಳು ಕಾಲ ಚಿತ್ರ ಕೊರೆದು, ಗೊಂಬೆಯ ರೀತಿ ಮಾಡಿ ಇರಿಸಿದರು ನನ್ನ...." ಎಂದು ಮಂಚವು ಮಾತು ನಿಲ್ಲಿಸಿ ತನ್ನ ಚಿಕ್ಕ ವಯಸ್ಸಿನ ವೈಭೋಗವನ್ನು ಕಣ್ಣಿಗೆ ಕಟ್ಟಿಕೊಂಡು ಅದನ್ನು ನೋಡುತ್ತ, ನೋಡುತ್ತ ತನ್ನನ್ನೇ ಮರೆತುಬಿಟ್ಟಿತು.

ಮಂಚದ ಕಡೆಯಿಂದ ಮಾತು ನಿಂತು ಹೋದಾಗ, ಆ ಮಾತಿನೊಳಗೆ ತನ್ನ ಮರೆಯುತ್ತಿದ್ದ ಆತ್ಮಕ್ಕೆ ಬೇಸರವೆನಿಸಿ " ಈಗಲೂ ನೀನು ನಿನಗೆ ಮದುವೆ ಮಾಡಿ ಕಳುಹಿಸುವಾಗ ಹೇಗಿದ್ದೆಯೋ ಹಾಗೇ ಇದ್ದೀಯ..... ಮುಂದಕ್ಕೆ ಏನಾಯಿತು....? ಎಂದಿತು. ಆಗ ಮಂಚಕ್ಕೆ ಎಚ್ಚರವಾಗಿ ಅಂತೂ ಎಂದು ಆರಂಭಿಸಿತು:

" ಹೇಗೇನಿರುವುದು ನಾನು? ಅಂತೂ ಮಹಾರಾಯ.... ಆಗ ನೋಡಬೇಕಾಗಿತ್ತು ನನ್ನ. ನನ್ನನ್ನ ನೋಡುವುದಕ್ಕೆ ಅಂತಾನೆ ಎಷ್ಟೊ ದೇಶದ ರಾಜರು ಬರುತ್ತಿದ್ದರು. ಬರುವವರು ಎಷ್ಟು ಜನವೊ, ಹೋಗುವವರು ಎಷ್ಟು ಜನವೊ, ಆಗ ಈ ನನ್ನ ಮೈ ಮೇಲೆ ಒಂದು ಕೊಳೆ ಅನ್ನುವುದು ಇತ್ತೆ? ಒಂದು ಗರೀಜು ಅನ್ನುವುದು ಇತ್ತೆ? ಶುಭ್ರವಾದ ಹೊಸ ರೇಷ್ಮೆ ಬಟ್ಟೆಯಲ್ಲಿ ನನಗೆ ಒರೆಸುತ್ತ ಇದ್ದರು. ಒಂದು ಸಾರಿ ಸ್ವಚ್ಛಗೊಳಿಸಿದ ಮೇಲೆ ಅದರಲ್ಲಿ ಇನ್ನೊಮ್ಮೆ ಸ್ವಚ್ಛಗೊಳಿಸುತ್ತಿರಲಿಲ್ಲ. ಆ ಬಟ್ಟೆಯನ್ನ ಆ ಕಡೆಗೆ ಎಸೆದು ಬಿಡುತ್ತಿದ್ದರು. ಆಮೇಲೆ ದಿನಬಿಟ್ಟು ದಿನ ಪುನುಗು, ಕಸ್ತೂರಿ ಲೇಪಿಸುತ್ತಿದ್ದರು.... ಹೀಗೆ ಜೀವನ ಮಾಡಿದವಳಿಗೆ, ಗ್ರಹಚಾರ ಅನ್ನುವುದು ಗುದ್ದಿಕೊಂಡು ಬಂದರೆ, ನೋಡಿಕೊ ಎಲ್ಲಿಗೆ ತಂದಿಡುತ್ತೆ. ಈಗ ನನ್ನ ತುಳಿದುಕೊಂಡು ಓಡಾಡುವವರು ಅದೆಷ್ಟು ಜನವೊ! ಅದಿರಲಿ, ಭತ್ತ ಅನ್ನುವಾಗಿಲ್ಲ, ಜೋಳ ರಾಗಿ ಎನ್ನುವಾಗಿಲ್ಲ, ಹುರುಳಿ ಎನ್ನುವಾಗಿಲ್ಲ.... ಅದು ಇರಲಿ, ಕೊನೆಗೆ ದನ ತಿನ್ನುವ ಕಸಕಡ್ಡಿ ಎನ್ನುವಾಗಿಲ್ಲ.... ಎಲ್ಲವನ್ನು ನನ್ನ ಮೇಲೆ ಹಾಕಿ ಈ ರೂಪಕ್ಕೆ... ತಂದಿಟ್ಟಿರಲ್ಲ...

ಇಂಥ ಕಡೆ ನಾನು ಇರಬೇಕಲ್ಲ.... ನಾನು ಇರಬಹುದೆ? ಅದೇನು ಪಾಪವನ್ನು ಮಾಡಿರಬಹುದು ನಾನು.... ?” ಅನ್ನುವಷ್ಟಕ್ಕೇ ಮಾತಿಗೆ ಮೊದಲು ದು:ಖವೆ ಉಕ್ಕಲು, ಅಲ್ಲಿಗೆ ನಿಲ್ಲಿಸಿತು.

ಮುಂದಿನ ಕಥೆ ಆಲಿಸುತ್ತಲಿದ್ದ ಅಕ್ಕವ್ವ, ಸೋಮಪ್ಪನವರ ದೇಹವನ್ನು ಸೇರುವದಕ್ಕೆ ಮೊದಲು ಸೋಮಪ್ಪನವರ ತಂದೆಯಾದ ಯಾಡ, ಯಾಡನ ತಾಯಿಯು ಅಕ್ಕಮಹಾದೇವಮ್ಮನ ಬಗ್ಗೆ ಕೂಡ ತಿಳಿದುಕೊಂಡಿತು. ಗಂಡನ ತಿಥಿಯಾದ ಮೂರನೇ ದಿನ ತೌರಿಗೆ ದೌಡಾಯಿಸಿದ ಅಕ್ಕಮಹಾದೇವಮ್ಮ, ಅಪ್ಪ ಸತ್ತ ಹನ್ನೆರಡು ತಿಂಗಳಿಗೆ ಮನೆ ಕೆಲಸದಾಳಿಗೆ ಹುಟ್ಟಿದವನೆಂಬ ಅಪವಾದದ ತನ್ನ ಮಗು ಆರು ವರ್ಷದ ಯಾಡನೊಡನೆ ಗಂಡನ ಮನೆಗೆ ಪಾಲಿಗಾಗಿ ಬಂದಾಗ ಏನಾಯಿತೆಂದರೆ, ಸೋಮಪ್ಪನವರ ತಂದೆಯಾದ ಈ ಯಾಡ ಹೊಸ ಬಟ್ಟೆ ಹಾಕಿಕೊಂಡಿದ್ದರು ಸಾಕ್ಷಾತ್ ಮಂಗನಂತೆ ತಾಯಿಯ ಸೊಂಟಕ್ಕೆ ಬಿಗಿದುಕೊಂಡಿದ್ದನು. ಅಕ್ಕಮಹಾದೇವಮ್ಮನ ಇನ್ನೊಂದು ಕೈಯಲ್ಲಿ ಬದಿಲುಬುಟ್ಟಿಯೊಂದು ಇದ್ದು, ಬೆವರು ಒರೆಸಿಕೊಳ್ಳಲು ಆಗದೆ, ಬಂದವಳು ಪುರಾಣ ಹೇಳುವ ಬಸಪ್ಪಸ್ವಾಮಿಯವರ ಮನೆ ಹಜಾರದಲ್ಲಿ ಭಾರಗಳನ್ನು ಕೆಳಗಿಳಿಸಿ ಕುಳಿತು ಮೈ ಬೆವರನ್ನು ಬಳಿದು ಚೆಲ್ಲಿ ಉಸಿರಾಡಿದಳು.

ಒಳಗಡೆ ಇದ್ದ ಬಸಪ್ಪಸ್ವಾಮಿಯವರ ಮುಖ, ಕೈಕಾಲು, ಹೊಟ್ಟೆ ಹೀಗೆ ಎಲ್ಲೆಂದರಲ್ಲಿ ಮಲಾಡುತ್ತಿದ್ದ ಸುಕ್ಕುಗಳನ್ನು ಮುಚ್ಚುತ್ತ ವಿಭೂತಿಮಯವಾದ ಆ ದೇಹವು, ಪುರಾಣ ಓದುತ್ತಿದ್ದುದು ಬಂದು ಕುಳಿತವಳನ್ನು ಒಮ್ಮೆ ಕಣ್ಣೆತ್ತಿ ನೋಡಲು ಎಲ್ಲವೂ ಅರ್ಥವಾಯಿತು, ಮುಖವನ್ನು ಕಣ್ಣು, ಮೀಸೆಗಳಲ್ಲಿಯೇ ಮಾಡಿಕೊಂಡಿದ್ದ ತಮ್ಮನಾದ ಸಿದ್ದೂರನು ಕೈಕಾಲುಗಳೆರಡರಲ್ಲು ಹಗ್ಗ ಹೊಸೆಯುತ್ತಿದ್ದವನು, ಬಂದು ಕುಳಿತವಳನ್ನು ನೋಡಲು ಅವನ ತುಟಿ, ಮೀಸೆಗಳು ತಮಟೆ ಮುಂದೆ ಮಕ್ಕಳು ಕುಣಿಯುವಂತೆ ಕುಣಿಯ ತೊಡಗಿದವು.

ಆಗ ಅಣ್ಣ ಬಸಪ್ಪಸ್ವಾಮಿಯವರು ಸಮಾಧಾನ ತುಂಬಿ ನಡುಮನೆ ಕಡೆ ನೋಡಲು, ಅಕ್ಕಮಹಾದೇವಮ್ಮನನ್ನು ಕಣ್ಣಲ್ಲೆ ತಿನ್ನುತ್ತಿದ್ದ ಮಕ್ಕಳ ಫಲವಿಲ್ಲದೆ ವಯಸ್ಸಾಗುತ್ತಿದ್ದ ಅವರ ಹೆಂಡತಿಯು ನಡುಮನೆಗೆ ನುಗ್ಗಿ ಬಾಗಿಲನ್ನು ಮುಚ್ಚಿಕೊಂಡಳು. ಆಗ, ತಮ್ಮ ಸಿದ್ದೂರನು ಕಿರುಮನೆ ಕಡೆ ನೋಡಲು, ಹೊತ್ತುಗಂಟಿಕೊಂಡಿದ್ದ ಅವನ ಹೆಂಡತಿಯು ತನ್ನ ಕಾಲ ಬಳಿ, ಕೈ ಬಳಿ ಇದ್ದಂತ ಮಕ್ಕಳನ್ನೆಲ್ಲ ಆತುರದಲ್ಲಿ ಒಳಸೆಳೆದುಕೊಂಡು ಬಾಗಿಲನ್ನು ಮುಚ್ಚಿ ದಢ್ ಮಾಡಿದಳು.

ಆ ಬರುತ್ತಿರುವ ಅಕ್ಕಮಹಾದೇವಮ್ಮನನ್ನ ಕಂಡು, ಯಾರು ಇವಳು ಈ ಪ್ರಕಾರವಾಗಿ ಉರಿಯುತ್ತಿರುವ ಬಿಸಿಲನಲ್ಲಿ ಬಿಳಿಸೀರೆ ಉಟ್ಟುಕೊಂಡು, ಕುಂಕುಮ ಇಲ್ಲದ ಹಣೆಯಲ್ಲಿ, ಬಳೆ ಇಲ್ಲದ ಕೈಯಲ್ಲಿ, ಕಂಕುಳಲ್ಲಿ ಮಗುವನ್ನು ಇಟ್ಟುಕೊಂಡು ಊರಿಗೆ ಬರುತ್ತಿರುವವಳು – ಎಂದು ಅವಳನ್ನು ಅನುಸರಿಸಿ, ಗಂಡು, ಹೆಣ್ಣು, ಹಾಗೂ ಆಬಾಲವೃದ್ಧರು ಬಸಪ್ಪಸ್ವಾಮಿಯವರ ದೃಷ್ಟಿಗೆ ಸಿಗದಂತೆ, ಆ ಬಾಗಿಲನಲ್ಲಿ ಒಂದು ಜಾತ್ರೆಯಂತೆ, ಅದರಲ್ಲಿ ಕರಿಮಣಿ ಸರವನ್ನು ಪೋಣಿಸಿದಂತೆ ನಿಂತಿದ್ದರು.

ಬಸಪ್ಪಸ್ವಾಮಿಯವರು, ತಮ್ಮ ತನುಮನಧನವನ್ನು ಪುರಾಣದ ಪುಸ್ತಕದೊಳಗೆ ನೆಟ್ಟು ತಲೆ ಎತ್ತದೆ ಕುಳಿತವರು, ಸಮಯ ಕೂಡಿಬರಲು, ಹಾಗೆಯೇ ಕುಳಿತು – " ಯಾರಮ್ಮ ತಾಯಿ ನೀನು? ಅಪರಿಚಿತಳಾದ ನೀನು ಬರಲು ಕಾರಣವೇನು? " ಎಂದರು. ಅಲ್ಲಿ ಉಸಿರಾಡದೆ ಬಿಗಿಯುತ್ತಿದ್ದ ಗಾಳಿಯಿಂದಾಗಿ ಅಕ್ಕಮಹಾದೇವಮ್ಮನಿಗೆ ಅವರು ಅಷ್ಟು ಮಾತನಾಡಿದ್ದೇ ಪುಣ್ಯ ಎನಿಸಿ " ನಾನು ಭಾವ.... ನಿಮ್ಮ ಪಾದದ ಧೂಳು....." ಎಂದಳು. ಆ ಯಾವ ಒಂದು ಗೆರೆಯು ಏರುಪೇರಾಗದ ಬಸಪ್ಪಸ್ವಾಮಿಯವರ ಧ್ವನಿಯು " ಭಾವ ಅನ್ನುವ ಆ ಒಂದು ಮಾತು ಬಿಟ್ಟು ಬೇರೆ ಏನಾದರೂ ಇದ್ದಲ್ಲಿ ಹೇಳು...." ಅಂದಿತು.

ಅದೊಂದು ಬಿಟ್ಟು ಅಕ್ಕಮಹಾದೇವಮ್ಮ ಏನುತಾನೇ ಹೇಳಲು ಸಾಧ್ಯ. ರೋದನಾರಾಗದಲ್ಲಿ – ಅಪ್ಪ, ಅಮ್ಮ ಇರುವತನಕ ನೋಡಿಕೊಂಡಂಥ ಬಂಧು ಬಳಗ ಅನ್ನುವುದು, ಅಪ್ಪ, ಅಮ್ಮ ಸತ್ತ ಮೇಲೆ ಬೀದಿಗೆ ತಳ್ಳಿದ್ದನ್ನು..." ಹಾಡಿದಳು. ನಾಲ್ಕು ಕಡೆಗೂ ಯಾಡನು ಪೆದ್ದುಪೆದ್ದಾಗಿ ನೋಡತೊಡಗಿತು.

ಅಕ್ಕಮಹಾದೇವಮ್ಮ ಹಾಡಿ ಹಾಡಿ ಅವಳೇ ನಿಲ್ಲಿಸುವವರೆಗೆ ತಾಳ್ಮೆಯಿಂದ ಬಸಪ್ಪಸ್ವಾಮಿಯವರು ಕಾದಿದ್ದು " ಸರಿಯಮ್ಮ, ಅವರು ಮಾಡಿದ್ದು ಸರಿ, ನೀನು ಇನ್ನು ಹೊರಡಬಹುದು...." ಎಂದರು. ಅದಕ್ಕೆ ಅಕ್ಕಮಹಾದೇವಮ್ಮ " ಅಯ್ಯೋ ಇನ್ನು ನಾನೆಲ್ಲಿಗೆ ಹೋಗಲಿ ಭಾವನವರೆ.... ಇನ್ನು ನಿಮ್ಮ ಪಾದ ತೊಳೆದ ನೀರನ್ನು ಕುಡಿದುಕೊಂಡು.... ನನ್ನ ಗಂಡನ ಹೆಸರನ್ನು ಹೇಳಿಕೊಂಡು...." ಅನ್ನುತ್ತಿರಲು, ನಿಲ್ಲುವಿಲ್ಲವೆಂದರಿತ ಬಸಪ್ಪಸ್ವಾಮಿಯವರು ತಡೆದು " ನಿಲ್ಲಿಸಮ್ಮ, ಗಂಡ ಅನ್ನುವಂತ ಶಬ್ದವನ್ನು

ಉಚ್ಚಾರ ಮಾಡಬಾರದವಳು ನೀನು. ಶ್ರಾದ್ಧ ಆದಾಗಲೆ ಅದು ಅಲ್ಲಿಗೆ ಮುಗಿಯಿತು. ಮುಗಿದಂಥದ್ದು ಮತ್ತೆ ಸೇರದು. ಇನ್ನು ನೀನು ಹೊರಡಬಹುದು" ಎಂದು ಕಠಿಣವಾಗಿ ನುಡಿದರು.

ಅಕ್ಕಮಹಾದೇವಮ್ಮ ಬಾಯಿ ತೆಗೆಯಲು, ತಲೆ ಎತ್ತಿ ನೋಡಿದಂಥ ಆ ಬಸಪ್ಪಸ್ವಾಮಿಯು ತನ್ನ ಧ್ವನಿಯನ್ನು ಒಂದು ಗೆರೆಯಿಂದ ಏರಿಸಿಕೊಂಡು "ಇನ್ನು ನೀನು ಮಾತನಾಡಕೂಡದು ನಮ್ಮ ಕಣ್ಣುಗಳ ಮುಂದೆ ಇರಕೂಡದು" ಎಂದರು.

ಅಕ್ಕಮಹಾದೇವಮ್ಮನಿಗೆ ಬಾಯಿ ನಿಂತಿತು. ಕಿರುಮನೆಯಲ್ಲಿ ಮಕ್ಕಳ ಬಾಯಿಗೆ ಬೆಲ್ಲ ಬೀಪಿಸುತ್ತ ಹಜಾರದಲ್ಲಾಗುವುದನ್ನು ಮುಚ್ಚಿದ ಬಾಗಿಲನಲ್ಲು ಕಾಣುತ್ತ ಸಿದ್ರಾಮನ ಹೆಂಡತಿ ಇದ್ದಳು. ಸಿದ್ರಾಮನ ಸಟಿ ವಿಲಸೆಯಂತೆ ಅಪ್ಪನ ಕಾಲುಕೈಗಳೊಡನೆ, ಹಿಡಿದಿದ್ದ ಹಗ್ಗದ ಹುರಿಯು ಈಗ ತನಗೆ ತಾನೇ ಕುಣಿಯುತ್ತಿತ್ತು. ಕಾಯುತ್ತಿದ್ದ ಅಕ್ಕಮಹಾದೇವಮ್ಮನು ತನ್ನ ಎರಡು ಕೈಜೋಡಿಸಿಕೊಂಡು ಭಾವನವರ ಪಾದವನ್ನು ಹಿಡಿಯಲು ಮೇಲೆದ್ದಳು. ಕಣ್ಣು ಮುಚ್ಚಿಯೂ ಕಾಣುವುದನ್ನು ಸಿದ್ಧಿಸಿಕೊಂಡಿದ್ದ ಬಸಪ್ಪಸ್ವಾಮಿಯವರಿಗೆ ಅದು ಅರಿವಾಗಿ, ತಮ್ಮ ಪಾದಗಳನ್ನು ಒಳಕ್ಕೆ ಎಳೆದು ಸಿಗದಂತೆ ಅನುಸರಿಸಿ ಕುಳಿತು "ನಮ್ಮ ಕಣ್ಣುಗಳ ಮುಂದೆ ಇನ್ನು ಇರಕೂಡದು" ಎಂದರು.

ಮೇಲೆ ಎದ್ದಂಥ ಅಕ್ಕಮಹಾದೇವಮ್ಮ ಆಗ ಕುಳಿತು, "ಅಯ್ಯೋ ಶಿವ, ನಾನು ಏನಪ್ಪ ಮಾಡಲಿ, ಶಿವನಿಗೆ ಸಮಾನರಾದ ನಮ್ಮ ಭಾವನವರ ಕಣ್ಣುಮುಂದೆ ಇರಬಾರದಂಥ ಕೆಲಸವನ್ನು ನಾನು ಏನಪ್ಪ ಮಾಡಿರುವುದು ದೇವರೆ.... ?" ಎನ್ನುತ್ತ "ಇಂಥದ್ದು ಅಂತ ಯಾರಾದರು ಒಂದು ಸೂಜಿ ತುದಿಯಷ್ಟು ತೋರಿಸಿದರು ಕೂಡ ನಾನು ಕೆರೆಬಾವಿ ನೋಡಿಕೊಳ್ಳುತ್ತೇನೆ" ಅಂದಳು. ಅದಕ್ಕೆ ಬಸಪ್ಪಸ್ವಾಮಿಯವರ ಧ್ವನಿಯು ಇನ್ನೂ ಒಂದು ಗೆರೆ ಏರಿಸಿ "ನಮ್ಮ ಬಾಯಿಂದ ಕೆಟ್ಟ ಮಾತುಗಳನ್ನು ನೀನು ಆಡಿಸಬಾರದಮ್ಮ. ಗಂಡ ಸತ್ತ ಹನ್ನೆರಡನೆ ತಿಂಗಳಿಗೆ ಯಾರಿಗಾದರೂ ಈ ಭೂಲೋಕ ರೂಢಾವಳಿಯಲ್ಲಿ ಮಕ್ಕಳಾಗಿರುವಂಥ ಪ್ರಸಂಗ ಏನಾದರೂ ಇದ್ದಲ್ಲಿ ಅದನ್ನು ನಮಗೆ ತೋರಿಸಿ ನೀನು ಬರುವಂತವಳಾಗು. ಈಗ ನಡೆ ಹೊರಗೆ" ಎಂದಿತು.

ಮಾತುಗಳು ಬಾಣವಾಗಿ ಬಂದು ಇರಿಯುತ್ತಿರಲು ಆಗ ಅಕ್ಕಮಹಾದೇವಮ್ಮ ನೆಲದ ಮೇಲೆ ಕುಸಿದುಬಿದ್ದಳು. ಆ ಇದ್ದಷ್ಟು ಜಾಗದಲ್ಲೇ ಒದ್ದಾಡುತ್ತ " ಶಿವ.... ಈ ನನ್ನ ಕಿವಿಯಿಂದ ಕೇಳಬೇಕಾಯಿತಲ್ಲ ಇದನ್ನ. ಅಯ್ಯೋ ಶಿವ.... ಎಲ್ಲಾದರೂ ನಾನು ಅಂಥವಳೇ, ಭಾವ....? ನನ್ನ ಕಣ್ಣಿನ ಆಣೆ... ನಿಮ್ಮ ಪಾದದ ಆಣೆ.... ನನ್ನ ಒಳಗೆ ಸತ್ಯ ಅನ್ನುವುದು ಇಲ್ಲದಿದ್ದರೆ, ನನ್ನ ಸತ್ತಿರುವ ಗಂಡ ಬಂದು ಈಗ ನನ್ನನ್ನ ಸಾಯಿಸಿ ಕೊಳ್ಳಲಿ ಎಲ್ಲ ಬೇಕಾದರು ಬೆಂಕಿಕೆಂಡವನ್ನ ಅಂಗೈಯಲ್ಲಿ ಇಟ್ಟುಕೊಂಡು ಆಣೆಭಾಷೆ ಮಾಡುತ್ತೇನೆ. ದೇವರಂಥ ನಿಮ್ಮ ಬಾಯಿಂದಲು ಕೇಳಬೇಕಾದರೆ ಹೋದ ಜನ್ಮದಲ್ಲಿ ನಾನು ಎಂಥ ಘೋರ ಪಾಪ ಮಾಡಿದ್ದೆ. ಅಯ್ಯೋ ಶಿವ.... ನಿನ್ನ ಹೆಂಡತಿ ವಿಧವೆಯಾಗ, ನೋಡುತ್ತ ನೀನು ಸುಮ್ಮನೆ ಇದ್ದೀಯಲ್ಲಪ್ಪ.... ಬೇಕಾದರೆ ಈಗಲೆ...." ರಾಗಕ್ಕೆ ತಾಳಲಾರದೆ ಬಸಪ್ಪಸ್ವಾಮಿಯವರು " ಮುಚ್ಚುಬಾಯಿ " ಎಂದರು.

ತಲೆ ಎತ್ತಿದ ಬಸಪ್ಪಸ್ವಾಮಿಯವರ ಕಣ್ಣ ಮುಂದಿದ್ದ ಪುರಾಣ ಪುಸ್ತಕದೊಳಗೆ ಈ ಮಾಯಾವಿನಿಯು ಮಾಡುತ್ತ ಸೃಷ್ಟಿಕರ್ತನಿಂದಲು ಅಸಾಧ್ಯವಾದ ಕಾಲವನ್ನ ಹಿಂದೆಮುಂದೆ ಮಾಡುತ್ತ, ಆಡುತ್ತ, ಗೋಚರಿಸುತ್ತಲಿದ್ದಳು. ದೃಷ್ಟಿಸಿ ನುಚ್ಚುಬಡಬೇಕೆನ್ನುತ್ತಿರುವಾಗ, ನಡುಮನೆಯಿಂದ ಅವರ ಹೆಂಡತಿಯ ಧ್ವನಿಯು, " ಅದೇನು ನೀವು, ಅವಳನ್ನ ನೋಡುತ್ತ ಇನ್ನೂ ಪುರಾಣ ಮಾಡುತ್ತಿರುವುದು " ಅಂದಿತು. ಹೆಂಡತಿ ಮಾತಿಗೆ ಬಸಪ್ಪಸ್ವಾಮಿಯವರು " ನನಗೆ ಹೇಳಲು ಬರಲು ಮೂರು ಪೈಸೆಯ ಹೆಣ್ಣಾದ ನೀನು ಎಷ್ಟು ಸಮನಾದವಳು !" ಎಂದರು. ಆ ಧ್ವನಿ ಆ ಕಡೆ ನಿಂತಿತು. ಕೋಣೆ ಕಿವಿಯಾಗಿತ್ತು.

ಈ ಕಡೆ ಅಕ್ಕಮಹಾದೇವಮ್ಮ, ತನ್ನ ಬಾಯಿ ಮುಚ್ಚಿದ್ದರು ಹಣೆಯನ್ನ ಚಚ್ಚುತ್ತ, ನೆಲವನ್ನ ತನ್ನೆರಡು ಬೋಳು ಕೈಯಲ್ಲಿ ಸಾರಿಸುತ್ತ, ಆ ಶಬ್ದದಿಂದಲೇ ಮಾತು ಮಾಡಲು ತೊಡಗಿದಳು. ಆಗ ತಾಳಲಾರದೆ ಬಸಪ್ಪಸ್ವಾಮಿಯವರು " ತಮ್ಮ " ಎಂದರು. ಈಗ ದೇಹವಿಡಿ ಕುಣಿಸುತಲಿದ್ದ ಸಿದ್ದಾಂಗನು " ಅಣ್ಣ " ಎಂದನು. ಬಸಪ್ಪಸ್ವಾಮಿಯವರು " ಏನು ಮಾಡುವುದಪ್ಪ? " ಎಂದರು. ಸಿದ್ದಾಂಗನು ಕುಳಿತಲ್ಲೆ ಕುಣಿಯುತ್ತಿದ್ದವನು ರೌದ್ರಾವೇಶ ತಾಳಿ ಮೇಲೆದ್ದು " ನೀನು ಪುರಾಣ ಓದುತ್ತಿರು " ಎಂದವನೆ, ಅಕ್ಕಮಹಾದೇವಮ್ಮನಲ್ಲಿಗೆ ನೆಗೆದು ಬಂದು, ಅವಳ ಹೊಟ್ಟೆ ಕರುಳು ಕಲಸಿಕೊಳ್ಳುವಂತೆ ಒಂದು ಸಾರಿ

ಜಾಡಿಸಿ ಒದ್ದನು. ಆಗ ನೆಲಕ್ಕೆ ಅಪ್ಪಚ್ಚಿಯಾದ ಅವಳ ಚೆಲ್ಲಿದ ಮುಂದಲೆ ಕೂದಲನ್ನು ತನ್ನ ಕೈಮುಷ್ಟಿಗೆ ಸೇರಿಸಿ ಗಂಟಾಕಿಕೊಳ್ಳುವಷ್ಟಕ್ಕೆ ಅವಳ ಆ ದೇಹದಲ್ಲಿದ್ದ ಆ ಜೀವ ತನ್ನ ಸ್ವಾಧೀನ ಕಳೆದುಕೊಂಡಿತು. ಕಿತ್ತರೂ ಯಾಡನು ಹೊಟ್ಟೆ ಒಳಗಿದ್ದಂತೆ ಅಮ್ಮನಿಗೆ ಅಂಟಿಕೊಂಡಿದ್ದನು. ಆವಾಗ ಬಸಪ್ಪಸ್ವಾಮಿಯವರು ತಲೆ ಎತ್ತಿ ಕಣ್ಣುಗಳನ್ನು ಬಿಟ್ಟರು.

ಸಿದ್ದಾರನು ಮುಷ್ಟಿ ಎಳೆದಾಗ, ಆ ಮುಷ್ಟಿಗೆ ಗಂಟಾಕಿಕೊಂಡಿದ್ದ ಅಕ್ಕಮಹಾದೇವಮ್ಮ ಹಾಗೂ ಅವಳಿಗೆ ಅಂಟಿಕೊಂಡಿದ್ದ ಯಾಡ ಒಟ್ಟಿಗೆ ಮೂರುದೂರ ನೆಗೆಯುತ್ತಿದ್ದರು. ಅವಳ ಗಂಟುಮೂಟೆಗೆ ಒದ್ದರೆ ಅದು ಹತ್ತು ಮೀಟರ ದೂರ ನೆಗೆದು ಬೀಳುತ್ತಿತ್ತು. ಸುತ್ತ ಇದ್ದ ಜನ ಯಾವ ಮಾಯದಲ್ಲೋ ಹೋಗಿದ್ದರು. ಬೀದಿಯು ತನ್ನನ್ನು ಕುಗ್ಗಿಸಿಕೊಂಡಿತು. ಆಗ ದನಗಳು ಮೇಯುವ ಮೈದಾನ ಬಂದಿತು. ಅಲ್ಲಿ ಸಿದ್ದಾರನು ತನ್ನ ಮುಷ್ಟಿಯನ್ನು ಬಲವಾಗಿ ಮೇಲೆತ್ತಿ, ಒಂದು ಸಾರಿ ಬಲವನ್ನು ಬಿಟ್ಟು ನೆಲಕ್ಕೆ ಕುಕ್ಕರಿಸಿ ಕೆಳಗೆ ನೋಡಿದನು. ಅಷ್ಟರೊಳಗೆ ಅವನ ಕಣ್ಣು ಮುಂದೆ ಇದ್ದುದೆಲ್ಲವೂ ಅರೆಜೀವವಾಗಿ ಚದುರಿ ಹೋಗಿತ್ತು.

ಸ್ವಲ್ಪ ಜೀವವಾಡುತ್ತಿದ್ದ ಅಕ್ಕಮಹಾದೇವಮ್ಮನ ಮೈಗೆ ಅಂಟಿದ್ದ ಬೆಳ್ಳಿಕಡಗವು ಬೆಳಕು ಹೀರುತ್ತ ಹೊಳೆಯುತ್ತಿರಲು, ಸಿದ್ದಾರನ ಕೈ ಅದನ್ನು ಕಿತ್ತುಕೊಂಡು, ಅಲ್ಲಿಂದ ತಿರುಗಿ ನೋಡದೆ, ನಡೆದು ಬಂದು ಅಣ್ಣನ ಪಾದಕ್ಕಿರಿಸಿದನು.

ಈ ಕಡೆ ಚದುರಿ ಹೋಗಿದ್ದ ಬಟ್ಟೆ, ಅರೆಜೀವದಿದ್ದ ಅಕ್ಕಮಹಾದೇವಮ್ಮ, ಯಾಡನನ್ನು ಎಚ್ಚರವು ಎಷ್ಟೋ ಹೊತ್ತು ಕಳೆದು ತಲುಪಿತು. ಆಗ ಅಕ್ಕಮಹಾದೇವಮ್ಮನ ದೇಹದಲ್ಲಿ ಬೆವರು ಉಕ್ಕುತ್ತಿರಲು, ಅವಳ ಸೊಂಟವನ್ನು ಬಿಗಿಹಿಡಿದ ಯಾಡನ ಕೈಗಳು ಬೆವತು ಜಾರುತ್ತಿದ್ದವು. ಯಾಡ ಒಂದು ಸಾರಿ ಕಣ್ಣನ್ನು ಅರೆತೆರೆದು ಸುತ್ತಲಿನ ಜನರನ್ನು ನೋಡಿ ಕಣ್ಣು ಮುಚ್ಚಿ ಆಮೇಲೆ ಅರೆಗಣ್ಣು ತೆರೆದು, ಮತ್ತೆ ಮುಚ್ಚಿ ಈ ಪ್ರಕಾರ ಮಾಡುತ್ತಿದ್ದನು.

ಅಸ್ತ್ರಿಯಾದ ಅಳುವನ್ನು ಅಳಲು ತ್ರಾಣವಿಲ್ಲದವಳಾಗಿ ಅಕ್ಕಮಹಾದೇವಮ್ಮ, ಕಿತ್ತು ತೂರಾಡುತ್ತಿದ್ದ ತನ್ನ ಕೂದಲುಗಳನ್ನು ತನ್ನೆರಡು ಕೈಗಳಿಂದಲೂ ಬಾಚಿಕೊಳ್ಳುತ್ತಾ, ಅದನ್ನು ನೋಡುತ್ತ, ಗಾಳಿಗೂ ಜಾಗ ಕೊಡದ ಜನಕ್ಕೆ ತೋರಿಸುತ್ತಿರಲು ಬೆಳಗಾಯಿತು. ಅಕ್ಕಮಹಾದೇವಮ್ಮ ಹೋಗಲು ಬಂದವಳಲ್ಲವಾದ್ದರಿಂದ, ಸಿದ್ದಾರನು ಬೀಸಾಕಿದ ನೆಲ ಅಂಟಿ ಕುಳಿತಳು.

ಅಲ್ಲಿ ಯಜಮಾನನು ಆರುವರ್ಷದವನಾಗಿದ್ದ ಕಾಲದಂತೆಯೇ ಈ ಕಾಲದಲ್ಲೂ ಹರಿಜನರ ಬೀದಿಯಲ್ಲಿ ರಾತ್ರಿ ಊಟ ಮಾಡಿದವರಿಗೆ ಬೆಳಗಿನ ಉಪಹಾರದಂತೆ, ರಾತ್ರಿಯಲ್ಲಿ ಹೊಟ್ಟೆಗೆ ತಣ್ಣೀರುಬಟ್ಟೆ ಕಟ್ಟಿದ್ದವರಿಗೆ ಶ್ರೀಮಂತರ ಮನೆಯ ಮದುವೆ ಅನ್ನದಂತೆ, ರಂಜನೆಯು ಹಸಿವನ್ನು ಮೆಟ್ಟಿ ನಿಲ್ಲುತ್ತಿತ್ತು. ಅಲ್ಲಿ ಗಂಡ ಕಿಟ್ಟಯ್ಯನು ಮಡಿಚಿದ ಟರ್ಕಿಟವಲ್ ಹೆಗಲಲ್ಲಿ ಧರಿಸಿ ಉಟ್ಟಿದ್ದ ಪಂಚೆಯನ್ನ ಮಂಡಿಯಿಂದ ಮೇಲೆತ್ತಿ ಕಟ್ಟಿ ಬಾಗಿಲಿನ ಹೊರಗೆ ನಿಂತಿದ್ದರೆ, ಒಳಗೆ ಬೌಲ್ಸಿಗೆ ಗುಂಡಿ ಹಾಕುತ್ತ, ಹೆಂಡತಿಯಾದ ಕೆಂಪಿ ಇದ್ದಳು ಮತ್ತು ಅವರಿಬ್ಬರ ನಡುವೆ ಹೊಸ್ತಿಲು ಇತ್ತು. ಅವನು ಕಣ್ಣು ಮೆಡರಿಸುವನು. ಆದರೆ ಇವಳು ಕಣ್ಣೆತ್ತಿ ನೋಡದ್ದರಿಂದ ಅವನು ಕಣ್ಣು ಮೆಡರಿಸಿಯೂ ಬಡವಾಗುತ್ತಿದ್ದ ಪುಣ್ಯವಂತನಾಗಿದ್ದನು.

ಈ ತಿಕ್ಕಾಟವು ಯಾವುದೋ ಸುದ್ದಿ ಶಾಸ್ತ್ರಕ್ಕೆ ಸಂಬಂಧಿಸಿದ ಆಟದಂತಿದ್ದು ಜನರನ್ನು ಆಕರ್ಷಿಸುತ್ತ, ನಗಣ ಹೊತ್ತವರು ನಗಣ ಹೊತ್ತುಕೊಂಡು, ದನಕರು ಹಿಡಿದು ನಿಂತವರು ದನಕರು ಹಿಡಿದುಕೊಂಡು, ನಿಂತವರು ನಿಂತಲ್ಲಿ, ಕುಳಿತವರು ಕುಳಿತಲ್ಲಿ, ನಡೆಯುವವರು ನಡೆಯುದಂತೆ ನೆರೆಯತ್ತಾಗಿದ್ದರು. ಕೊನೆಗೆ ನಿಂತಿದ್ದಂತ ಗಂಡನಾದ ಕಿಟ್ಟಯ್ಯನು ಪಂಚೆ ಕೊಳೆ ಆಗದಂತೆ ಅನುಸರಿಸಿ ಅಲ್ಲೇ ಕುಕ್ಕರಗಾಲಲ್ಲಿ ಕುಳಿತು " ಅಮ್ಮಿ ಬಮ್ಮಿ ಹೊಣ್ಣ " (" ಲೇ ಬಾರೆ ") ಎಂಬುದನ್ನು ಇವನು, " ಐ ಬತ್ತೀನಿಕನ ನಡಾ " (" ಬರ್ತೀನಿ ನಡೆಯುರಿ ") ಎಂಬುದನ್ನು ಅವಳು ಹಿಡಿದುಕೊಂಡು ಎಳೆದಾಡತೊಡಗಿದರು.

ತುಕಾರಮ್ಮ ಬಹಳ ಲೆಕ್ಕಚಾರ ಹಾಕಿ ನೋಡಿ ಕೊನೆಗೆ ತನ್ನ ಕಣ್ಣುಕಿತ್ತು ಕೊಡುವಂತೆ ಮಗಳು ಕೆಂಪಿಯನ್ನು, ಅವಳ ಸಮೃದ್ಧವಾಗಿ ಹಾಗು ಅಚ್ಚುಕಟ್ಟಾಗಿದ್ದ ಚೆಲುವನ್ನು ಒಳ್ಳೆ ವ್ಯಾಪಾರಸ್ಥಗಾರನಿಗೆ ಧಾರೆ ಎರೆದು ಕೊಟ್ಟಿದ್ದಳು. ಕೆಂಪಿಯ ಗಂಡನಾದ ಯೋಗ್ಯವಂತ ಕಿಟ್ಟಯ್ಯನು ಸಾಹುಕಾರರು ಇಟ್ಟುಕೊಳ್ಳುವಂತ ಒಂದು ಸೈಕಲನ್ನು, ಅದಕ್ಕೆ ಒಂದು ಪಂಪನ್ನು ಇಟ್ಟುಕೊಂಡು, ಒಂದಲ್ಲ ಅಂತ ಎರಡು ಷರ್ಟ್, ಚಡ್ಡಿ, ಬನಿಯನ, ಜೊತೆಗೆ ಪಂಚೆ, ಟವಲ ಉಳ್ಳವನಾಗಿ ಹಾಗೂ ಕೇಳಿದವರಿಗೆ ಬೀಡಿಯನ್ನು ಜೇಬಿನಿಂದ ತೆಗೆದುಕೊಡುವಷ್ಟು ಆಗಿದ್ದನು. ಈ ದಕ್ಷತೆಗೆ ಕಾರಣ ಅವನು ಊರೂರು ಸುತ್ತುತ್ತ ಹುಣಸೇ ಹಾಗು ಬೇವಿನ ಬೀಜಗಳನ್ನು ನೀರುಪಾವುಗಳಲ್ಲಿ ಥಳುಕಾಗಿ ತೆಗೆದುಕೊಂಡು ಮುಸ್ಲೀಮ ವ್ಯಾಪಾರಿಗೆ ಮಾರುತ್ತಿದ್ದುದಾಗಿತ್ತು. ಇಂಥ ಪುಣ್ಯವಂತನೊಡನೆ ಮದುವೆಯಾಗಿಯು ಆಟವಾಡುವ ಕೆಂಪಿಯನ್ನು

ಕಂಡು, ಕೆಂಪಿಯು ದೊಡ್ಡಮ್ಮನ ಮಗಳಾದ ಈರಿಗೆ ಕೋಪ ತಡೆದರೂ ನುಗುತ್ತ ಬರುತ್ತಿದ್ದುದನ್ನು ಹಲ್ಲಿನಲ್ಲಿ ತಡೆದುಕೊಂಡು ಈರಿಯು ಮಾತನಾಡಿ " ಅದ್ಯಾಕನಾಯಿ ನೀ ಆಡುದು? ಬರಬರ್ಕ ಹೋಗದ ಬುಟ್ಟು" (" ಅದೇನಮ್ಮ. ಆಟ ಆಡುವುದು? ಬೇಗ ಹೋಗುವುದನ್ನು ಬಿಟ್ಟು") ಅಂದಳು. ಕೆಂಪಿಯು ಸಿಡುಬಿಡುವಂತೆ " ನಿನ್ಯಾರ ಗ್ರಾಸಿ ಬಾಯಿಕಂದು ಬಾ ಅಂತ ಕರದ್ರು? ನಿಂಗ ಸುಮಾನ ಅದ್ರ ಹೋಗು ನೀನೇಯಾ..."

(" ನಿನ್ನನ್ನು ಯಾರೆ ಮಧ್ಯ ಬಾಯಿ ಹಾಕಿಕೊಂಡು ಬಾ ಅಂತ ಕರೆದವರು? ನಿನಗೆ ಖುಷಿ ಆದರೆ ನೀನೆ ಹೋಗು....") ಎಂದು ಜಡಾಯಿಸಿದಾಗ ಈರಿ ಬಾಯಿಕಟ್ಟಿತು. ಆ ಕಡೆ ಈರಿಯು ಸುಮ್ಮನಾದಳು, ಗಂಡನು ನೀಡಿದ ಮಕ್ಕಳ ಫಲವು ಹನ್ನೆರಡು ವರ್ಷದ ಮೇಲೆ ಬೆಳವಣಿಯಾಗಿ, ದಿನ ಕಳೆದಂತೆ ಒಣಗಿಹೋಗಿದ್ದ ತನ್ನ ಕರುಳಬಳ್ಳಿಯನ್ನು ಹೊಟ್ಟೆಗೆ ಕಟ್ಟಿಕೊಂಡು, ಅದಕ್ಕೆ ಗಂಜಿ ನೀರೆರದು ಚಿಗುರಿಸುವ ಯತ್ನವನ್ನು ಮಾಡುತ್ತಿದ್ದಳು. ಅವಳ ಕರುಳಬಳ್ಳಿಗಂತೂ ಮೂಳೆಗೆ ನರಮನುಷ್ಯರ ದೊಡ್ಡದಾದ ಕಿವಿಗಳು ಹಾಗು ದೊಡ್ಡದಾದ ಕಣ್ಣುಗಳನ್ನು ಸಿಕ್ಕಿಸಿ ಇಟ್ಟಂತಿತ್ತು. ಇನ್ನು ಅವಳೋ ತನ್ನ ಕರುಳ ಬಳ್ಳಿಗೆ ತನ್ನ ಎದೆಗೂಡಿನ ಮೂಳೆಯನ್ನು ತೇಯ್ದು ತೇಯ್ದು ಕುಡಿಸುತ್ತ, ತನ್ನ ಹರಿದ ಕೂದಲಿಗೆ ಎಣ್ಣೆ, ನೀರು ಕಾಣದಿದ್ದರಿಂದ, ಕೆಂಚಗೆ ಇರುವ ಆ ಕೂದಲಿಗೂ ಅದಕ್ಕೂ, ಒಂದು ಕಡ್ಡಿಯ ಸಂದಿಗೆ ಬಿಟ್ಟುಸುತ್ತಿ ಎಣ್ಣೆಹಾಕಿ ಹಚ್ಚಿಟ್ಟಾಗ ಉರಿಯುವ ಪಂಜಿನಂತಿದ್ದಳು.

ಈ ಕಡೆ ಮನೆಗೆ ಹಿರಿಯಳಾದ ತುಳಸಮ್ಮನಿಗೆ ಇನ್ನು ಸುಮ್ಮನಿರುವದು ಸರಿಯಲ್ಲ ಅನ್ನಿಸಲು, ಅಳಿಯನಿಗೆ " ಅಪ್ಪ ಈಗ ನೀವ ದಯಮಾಡ್ರಿ. ಹೆಂಗೂವ ಕೆಂಪಿ ಬಸುರಿ. ಕೂಸೂ ಬಾಣ್ತೀನುವ ಜೊತಲೆ ಕರ್ಕಂದು ಹೋಗರೀ.... ಈಗ ದೊಡ್ಡಮನಸುಮಾಡಿ ದಯಮಾಡ್ರಿ ಮತ್ತ..." ("ಈಗ ನೀವು ಹೋಗಿದ್ದು ಬನ್ನಿ. ಹೇಗೂ ಕೆಂಪಿ ಗರ್ಭಿಣಿ, ಮಗು ಹಾಗು ಬಾಣಂತಿಯನ್ನು ಜೊತೆಯಲ್ಲೇ ಕರೆದುಕೊಂಡು ಹೋಗುವಿರಂತೆ... ಈಗ ಸ್ವಲ್ಪ ದೊಡ್ಡ ಮನಸ್ಸು ಮಾಡಿ ಹೋಗಿದ್ದು ಬನ್ನಿ...") ಎಂದು ಬಾಯ್ತುಂಬ ಹೇಳಿ ಹೊಗೆಸೊಪ್ಪಿನ ತುಂಡನ್ನು ಬಾಯಿಗೆ ಹಾಕಿಕೊಂಡಳು. ಅಳಿಯನು ಧ್ವನಿಯನ್ನು ಅಳಿಸುತ್ತ " ನಿವ್ಯಾಕ ಹೇಳ್ತೀರಿ ಕನ. ಅಲ್ಲಿ ನಂಗ ಗಂಜಿ ನೀರ ಕಾಣ್ಸೋರು ಯಾರ ಆಳಿ ಮತ್ತ..."

(" ನೀವೇನೋ ಹೇಳುತ್ತೀರಿ, ಆದರೆ ಅಲ್ಲಿ ನನಗೆ ಗಂಜಿ ನೀರು ಕೊಡುವವರು ಯಾರು ಹೇಳಿ....") ಎಂದನು. ಅದಕ್ಕೆ ತಾರಮ್ಮನಿಂದ ಉತ್ತರವು ತುಟಿಯಿಂದ ಹೊರಬೀಳಲು, ಅದನ್ನು ಕೆಂಪಿಯು ಮುಖಹಾಕಿ ಗಂಡನ ಕಡೆ ತಿರುಗಿ " ಊರೂರ ಬಗ್ರಬಗ್ರಾ ಅಂತ ಸುಂಟ್ರಗಾಳಿ ಸುತ್ತಂಗ ಕಾಲಲ್ಲಿ ಚಕ್ರಕಟ್ಕಂಡು ತಿರ್ಗತಿಯಲ್ಲಾ... ಅಲ್ಲಿ ಉಂಡ್ಕಂಡಿರು..." (" ಸುಂಯ್ ಎಂದು ಸುಂಟರಗಾಳಿ ಸುತ್ತುವಾಗೆ ಕಾಲಲ್ಲಿ ಚಕ್ರ ಕಟ್ಟಿಕೊಂಡು ಊರಿಂದ ಊರಿಗೆ ತಿರುಗುತ್ತೀಯಲ್ಲ... ಅಲ್ಲಿ ಊಟ ಮಾಡಿಕೊಂಡಿರು...") ಅಂದೂ ಸಾಲದೆ ಅಮ್ಮನ ಕಡೆ ತಿರುಗಿ— " ಅವ್ವ, ಇವ ಎಂಥ ಕೇಪುಮಾರಿ ಅಂತ ಗೊತ್ತುವ್ವ, ಅಷ್ಟು ಊರೂರು ತಿರ್ಗತನಲ್ಲ... ಅಷ್ಟು ಓಟ್ಲ ರುಚಿ ಕಂಡಿದಾನಲ್ಲ! ಒಂದಿನಾರು ನಂಗ ತಕ್ಕ ಬಂದು ಅಮ್ಮೀ ತಕ್ಕ.. ಮಸಾಲದೋಸ ತಂದಿನಿಕನ ತಿಂದ್ಕ... ಅಂದಿಲ್ಲ. ಹೆಂಡ್ತೆಂತ ಹೆಂಡ್ತಿ..." (" ಅಮ್ಮ, ಇವನು ಎಂಥ ಜಿಪುಣಶೆಟ್ಟಿ ಅಂತ ಗೊತ್ತೇನಮ್ಮ. ಅಷ್ಟು ಊರೂರು ಸುತ್ತುತ್ತಾನಲ್ಲ... ಅಷ್ಟು ಹೋಟೆಲ ರುಚಿಯ ನೋಡಿದಾನಲ್ಲ! ಒಂದು ದಿನವಾದರೂ ನನಗೆ ತೆಗೆದುಕೊಂಡು ಬಂದು " ಲೇ ತಗೋ... ಮಸಾಲೆದೋಸೆ ತಂದಿದ್ದೀನಿ ತಿನ್ನು... ಅನ್ನಲಿಲ್ಲ. ಹೆಂಡತಿಯಂತೆ ಹೆಂಡತಿ...") ಎಂದೂ ಸಾಲದೆ ಗಂಡನ ಮುಖಕ್ಕೆ ಕೈತಿವಿದು " ಥೂ ನಿನ ಯಾಸಕ್ಕ ಬೆಂಕಿ ಹಾಕ" (" ಥೂ ನಿನ್ನ ವೇಷಕ್ಕೆ ಬೆಂಕಿ ಹಾಕ") ಅಂದಳು. ಮಗಳಿಗೆ ತಾರಮ್ಮ ಗದರಿಸಿಕೊಳ್ಳುತ್ತಿದ್ದಂತೆ, ಹೊರಗೆ ಜನ ಗೊಳ್ ಅನ್ನುತ್ತಿತ್ತು.

ತಾರಮ್ಮನು, ಹುಟ್ಟುವ ಮೊಮ್ಮಗುವಿಗೆ ತನ್ನ ಜೀವಕೊಟ್ಟು ಹೋಗಲು ಜೀವ ಹಿಡಿದುಕೊಂಡಿದ್ದಳಷ್ಟೆ. ಮಗಳು ಕೆಂಪಿಗೆ ಹುಟ್ಟುವ ಮಕ್ಕಳು ಮೂರು ತಿಂಗಳಾದ ಮೇಲೆ ನಿಲ್ಲುತ್ತಿರಲಿಲ್ಲ. ಇದರಿಂದಾಗಿ ಕೆಂಪಿಯು ತಂದೆ ಮನೆಯಲ್ಲಿರುವುದು ಹೆಚ್ಚಾಯಿತು. ಒಂದು ದಿನ ರಾತ್ರಿ ಸಮಯದಲ್ಲಿ ಗಾಳಿ ಪಿಸುಗುಟ್ಟಿದಂತಾಗುವುದು, ಅಮೇಲಾಮೇಲೆ ಅದು ಮನೆ ಒಳಗು ಶಬ್ದವಾಗುವುದು ನಡೆಯುತ್ತಿದ್ದವು. ವಾಯಸಾಪ್ಪದರೂ ಕಣ್ಣು, ಕಿವಿ, ಹಲ್ಲು ಗಟ್ಟಿಯಾಗಿದ್ದ ತಾರಮ್ಮನು ಒಂದು ದಿನ ಆ ಕಡೆ ಭಾಗದಲ್ಲಿರುವ ಪಾರಗಿತ್ತಿ ಮಗಳಾದ ಈರಿಯು ತನ್ನ ಮಗನನ್ನು ದೇವರ ಸನ್ನಿಧಿಗೆ ಕರೆದುಕೊಂಡು ಹೋಗಿರುವ ಸಂದರ್ಭವನ್ನು ನೋಡಿ, ಎಡಗೈಯಲ್ಲಿ ಮಗಳ ಮುಂದಲೆ ಹಿಡಿದುಕೊಂಡು ಬಲಗೈಯಲ್ಲಿ ಈಜಲ ಪೊರಕೆ ಹಿಡಿದುಕೊಂಡು ಬಗ್ಗಿದ್ದ ಬೆನ್ನನ್ನು ಇನ್ನೂ ಬಗ್ಗಿಸಿ, ಕಪ್ಪು ಹಿಡಿದಿದ್ದ ಹಲ್ಲನ್ನು ಕಡಿಯುತ್ತ " ಯಾನವ್ವ? ಯಾನ ಇದು ನಿನ ಮಾಯಾ ಮಂಗಾಟ? ಜಾಲು ಜಲಾಕು?" (" ಏನೇ? ಏನು ಇದು ನಿನ್ನ ಮಾಯ ಮಂಗನಾಟ? ಜುರುಕುತನ?" ಎಂದು ಗುಡುಗಿದಳು.

ಮಗಳು ಮುಖವನ್ನು ಸೆರಗಿನಲ್ಲಿ ಮುಚ್ಚಿಕೊಂಡು ದು:ಖಿಸುತ್ತಿದ್ದಳು. ಆದರೂ ತಾರಮ್ಮನು ಎಡಮುಷ್ಟಿಯಲ್ಲಿ ಹಿಡಿದು ಮಗಳ ಮುಂದಲೆ ತಿರುಗಿಸಿ ಕೇಳುತ್ತ " ಯಾರ ಮುಂದಕ್ಕ ಅಡ್ತ ಇರೋದು ನೀನೂ? ಅದೇನ ನಿನ ಹೊಟ್ಟಿ ಒಳಗ ಮುಚ್ಕೊಂಡಿದೀಯೋ ಅದ ಕಕ್ಕು ಅದಾ" (ಯಾರ ಮುಂದೆ ಅಡುತ್ತ ಇರುವುದು ನೀನು? ಅದೇನು ನಿನ್ನ ಹೊಟ್ಟೆ ಒಳಗೆ ಇಟ್ಟುಕೊಂಡಿದೀಯೊ ಅದನ್ನು ಹೊರಗೆ ಹಾಕು") ಅಂದಳು.

.... ಹೀಗೆ ಮಗಳು ಮುಖ ಮುಚ್ಚಿಕೊಂಡು ಸೊರಗುತ್ತಿದ್ದರೆ, ಅವಳ ಅಮ್ಮ ಹಿತವನ್ನು ಬಡದಿರಲು.... ಇದು ಹೀಗೆ ಮುಂದುವರೆಯುತ್ತ ಕೊನೆಗೆ ಕೆಂಪಿಯು ಸೋತು ಸೊರಗಿ ದು:ಖದ ರಾಗದಲ್ಲಿ —" ಅದ ಯಾನ ಅಂತ ನಾ ಹೇಳವ್ವ? ಅದ ನಾ ಯಾಗ ಅಂತ ಹೇಳ್ಲಿ? ನಾ ತಂದಂಥ ಫಲ್ತ ನಾ ಯಾಗೆ ಹೇಳ್ಲಿ ಹೇಳು. ನಾ ಸತ್ತಾಗ ಸ್ವರ್ಗಕ್ಕ ಸೇರ್ಕ್ಳಿ ನಂ ಅವ್ವ ಅಂತ ಹಿಂಡಕಾಳಾಕಾಕ ಒಂದು ಗಂಡೂಸು ಆಗೋದು ಬ್ಯಾಡ ಬೇಕಾರ ನಂಗ. ಬೆನ್ನಿಜ್ಜ ಕೊಡಾಗ ಅಂತ ಒಂದು ಹೆಣ್ಣಗೂಸು ಅಂತಾರು ಆಗದು ಬ್ಯಾಡವವ್ವ ನಂಗಾ...?" ("ಅದನ್ನು ಏನು ಅಂತ ನಾನು ಹೇಳಲಮ್ಮ? ಅದನ್ನು ಹೇಗೆ ಅಂತ ಹೇಳಲಿ? ನಾನು ತಂದಂಥ ಅದೃಷ್ಟವನ್ನು ನಾನು ಹೇಗೆ ಹೇಳಲಿ ಹೇಳು. ನಾನು ಸತ್ತಾಗ ಸ್ವರ್ಗಕ್ಕೆ ಸೇರಿಕೊಳ್ಳಲಿ ನನ್ನ ಅಮ್ಮ ಅಂತ, ಪಿಂಡ ಹಾಕುವುದಕ್ಕೆ ಒಂದು ಗಂಡು ಮಗು ಆಗುವುದು ಬೇಡ? ಕೊನೆಪಕ್ಷ ಬೆನ್ನಿಜ್ಜ ಕೊಡುವುದಕ್ಕೆ ಅಂತ ಒಂದು ಹೆಣ್ಣು ಮಗು ಅಂತಾದರು ಆಗುವುದು ಬೇಡವೇನಮ್ಮ ನನಗೆ...?") ಎಂದಳು. ಈ ಮಾತಿನ ಬಾಣವು ಬಂದು ತಾರಮ್ಮನ ಎಡಗೈಗೆ ನಾಟಲು ಮಗಳ ಮುಂದಲೆಯ ಜುಟ್ಟನ್ನು ಬಿಟ್ಟಳು. ಅಲ್ಲಿಂದ ಬಲಗೈಗೆ ನಾಟಲು ಹಿಡಿದ ಪೊರಕೆ ಬಿಟ್ಟು, ಅಲ್ಲಿಂದ ಜೀವಕ್ಕೆ ನಾಟಲು ತಾರಮ್ಮ ಕುಸಿದಳು.

ಆ ಕಡೆ ಮುಖ ಎತ್ತದೇ ಮಗಳು ದು:ಖಿಸುತ್ತಿರಲು, ಈ ಕಡೆ ಎತ್ತಿ ಎಸೆದಂತೆ ಕುಳಿತ ತಾರಮ್ಮನು ತನ್ನ ದೇಹಕ್ಕೆ ಉಸಿರನ್ನು ಕೂಡಿಸಿ, ನಡುಗುವ ದೇಹದಿಂದ ಮಾತನ್ನು ಹೊರಗೆ ಬಿಡುತ್ತ " ಅದ್ಯಾಕ ಇರಾದು ಬಿಡಿಸಿ ಹೇಳವ್ವ ತಾಯಿ" (" ಅದೇನು ಸ್ವಲ್ಪ ಬಿಡಿಸಿ ಹೇಳಮ್ಮ ತಾಯಿ") ಎಂದಳು. ಕೆಂಪಿಯು ದು:ಖದ ಜೊತೆ ಮಾತನ್ನು ಸೇರಿಸಿ " ನೀನು ಹೇಳೂ ಅಂತಂದ್ರ ಅದ ನಾ ಹೆಂಗೇಳಲವ್ವ? ಅದ ಯಾವ ಬಾಯಿಂದ ಹೇಳ್ಲಿ? ಕೋಳಿ ಕದ್ಕಂಗಾ ಕದ್ಕವನ್ಗ ನನ ಕಟ್ಟುಟ್ಯಾರ... ಮಕ್ಕಳ ಫಲ ಊರ್ಜಿತಾವ ನಾ ಹೆಂಗ

ಕಾಣ್ಲಿ? ನಾ ಹೇಗೆ ಕಾಣ್ಲಿ?" (" ನೀನು ಹೇಳು ಅಂದರೆ ಅದನ್ನ ನಾನು ಹೇಗೆ ಹೇಳಲಮ್ಮ? ಅದನ್ನು ಯಾವ ಬಾಯಿಂದ ಹೇಳಲಿ? ಅರಸಿಕನಿಗೆ ನನ್ನ ಮದುವೆ ಮಾಡಿಬಿಟ್ಟು... ಮಕ್ಕಳ ಫಲವನ್ನು ಪಡೆ ಎಂದರೆ ಹೇಗೆ ಪಡೆಯಲಿ?") ಎಂದು ದು:ಖಿಸತೊಡಗಿದಳು.

ಅಹಾ! ಎಂಥ ಘೋರ ಅನ್ಯಾಯ ತಾನು ಹೆತ್ತಂಥ ಮಗಳಿಗೆ ತನ್ನ ಕೈಯಿಂದಲೆ ಆಯಿತಲ್ಲ ಅಂತ ಹೇಳಿ, ತೂರಮ್ಮನ ಕೇಳಿಸುವ ಕಿವಿಯು ಕೇಳದಂತಾಯಿತು. ಕಾಣಿಸುವ ಕಣ್ಣು ಕಾಣಿಸದಂತಾಯಿತು.

ಹೀಗಾದ ನಂತರವೂ ಕೆಂಪಿಗೆ ಹುಟ್ಟಿದ ಮಕ್ಕಳ ಫಲ ಮೂರು ತಿಂಗಳಾದ ಮೇಲೆ ನಿಲ್ಲದಿರಲು, ಚಿಂತೆಯನ್ನು ಪಕ್ಕದಲ್ಲೆ ಇಟ್ಟುಕೊಂಡವಳಾಗಿ ತೂರಮ್ಮನು — ಎಲಾ.... ಯಾವ ದ್ಯಾವ್ರ ಕೇಳಕ ಅಂತ ಹೋದ್ರುನುವ, ಆ ದ್ಯಾವ್ರ ನಾ ಹೋದ್ದೇಟಿಗೆಯ ಕುರುತು ಗಳಿಗ್ದಕೂ ಮೊದ್ಲ ಕರುದು, ಸಿನೇತಗಾರ್ಳ ಕಂಡಂತೆ ಮಾತಾಡುಸ್ತ... ಹೊ ಹೊ ಬಾ, ಬಾ, ಮಗಳೇ ಬಾ ತೂರಮ್ಮ, ನನ್ನ ಕಂದಾ. ಈ ಸಲ ಮಾತ್ರ ನೀನು ಸಟಗೂವಾ ಚಿಂತ ಮಾಡ ಬ್ಯಾಡ. ಹುಟ್ಟೋ ಮೊಮ್ಮೊಗಗ ಗಟ್ಟಿ ಆಯುಸ್ಸ ಕೊಟ್ಟಿವಿನಿ. ಹುಟ್ಟಿದರ ಮೇಟಿಯು ಇಂತಿಂಥ ಹೆಸರಿಡೂ ಹುಟ್ಟಿದರ ಹಾಲೆಯು ಇಂತಿಂಥ ಹೆಸರಿಡು..." (ಅಲ್ಲಾ... ಯಾವ ದೇವರ ಕೇಳುವುದಕ್ಕೆ ಅಂತ ಹೋದರು ಕೂಡ, ಆ ದೇವರು ನಾನು ಹೋದ ಕೂಡಲೆ ನೆನೆಸಿಕೊಳ್ಳುವುದಕ್ಕೂ ಮೊದಲು ಕರೆದು, ಸ್ನೇಹಿತಳು ಕಂಡಂತೆ ಮಾತನಾಡಿಸುತ್ತ... ಓಹೋ ಬಾ ಮಗಳೆ, ಬಾ ತೂರಮ್ಮ, ಈ ಸಾರಿ ಮಾತ್ರ ನೀನು ಸ್ವಲ್ಪನೂ ಚಿಂತೆ ಮಾಡಬೇಡ. ಹುಟ್ಟುವ ಮೊಮ್ಮೊಗುವಿಗೆ ಗಟ್ಟಿ ಆಯುಸ್ಸ ಕೊಟ್ಟಿದ್ದೀನಿ. ಗಂಡು ಹುಟ್ಟಿದರೆ ಇಂತಿಂಥ ಹೆಸರಿಡು, ಹೆಣ್ಣು ಹುಟ್ಟಿದರೆ ಇಂತಿಂಥ ಹೆಸರಿಡು...") ಎಂದು ತಲೆನವರಿ ಕಾಣಿಕೆ ತೆಗೆದುಕೊಂಡು ಕಳುಹಿಸುತ್ತಿದ್ದಂತಹ ಮಾರಮ್ಮನವರ ನುಡಿಯು ಸುಳ್ಳಾಗುವ ಪತ್ರಗಾಗಿ ಆ ಚಿಂತೆಯು ನೆಣಸಾಡುತ್ತಿತ್ತು.

... ಹೋ ಹೊ ಆ ಥರಾಗಿಲ್ಲಾ ಅದೂ ಈ ಥರಾಗಿ ಅದ ಅದು, ಈ ತೂರಮ್ಮ ಅವ್ಳೂ ಅವ್ವ ಮದುಂಮಾಟ ಬಲ್ಲೋಳು. ಕಟ್ಟುಪಾಡು ಮಾಡ್ತಾಳ. ಹಟ್ಟಿ ಅಡ್ಗ ನಿಲ್ಲುಸ್ತಾಳ, ಸಿಕ್ಕಿಕಂಡ್ರ ಹಿಂದ್ಲಾದ್ದ ಮುಂದ್ಕ ಬರುಸ್ತಾಳ... ಈ ಥರಾಗಿ ಆವದೂ ಪಿಲಾನುಗಾರ ಗಾಳೋಗರಾವೊ ದೇವಮಾನವರ ಒಳಾಕಿಕೆ ಬಂದು ನನ ಕಂದನ್ಗ ಹುಟ್ಟೋ ಕೂಸ ಮುರೀತಾ ಇರೋ ಅದು ಈ ಸಲ ಯಾನಾರೂ ಬಂದುದೇ ಉಂಟಾದ್ರೆ ಈ ನನ ಕಳ

ಪಡಾವ ತಕ್ಕಂಡೂ ಅದ್ರಲ್ಲೆ ಅದ್ನೀಗ ಇನೂಂ ಪಾಲು ಮಾಡಿ ತಿಂತೀನೀ... ತಿಂತೀನೀ" (... ಓಹೋ ಆ ರೀತಿಯಾಗಿಲ್ಲ, ಅದು ಈ ರೀತಿಯಾಗಿ ಇದೆ ಈ ತಾಯಮ್ಮ ಇದ್ದಾಳಲ್ಲ ಅವಳು ಮಾಯಮಾಟ ಬಲ್ಲವಳು. ಕಟ್ಟುಪಾಡು ಮಾಡುತ್ತಾಳೆ. ಮನೆ ಹೊರಗೆ ನಿಲ್ಲಿಸುತ್ತಾಳೆ. ಸಿಕ್ಕಿಕೊಂಡರೆ ಹಿಂದಿನ ಪಾದವನ್ನು ಮುಂದಕ್ಕೆ ಬರಿಸುತ್ತಾಳೆ... ಈ ರೀತಿಯಾಗಿ ಯಾವುದೋ ಬುದ್ಧಿವಂತ ದೆವ್ವವೋ ಗ್ರಹವೋ ದೇವಮಾನವನನ್ನು ಒಳಹಾಕಿ ಕೊಂಡು ನನ್ನ ಮಗಳಿಗೆ ಹುಟ್ಟುವ ಮಗುವನ್ನು ಸಾಯಿಸುತ್ತಿರುವ ಅದು ಈ ಸಾರಿ ಏನಾದರೂ ಬಂದುದೇ ಆದರೆ, ನನ್ನ ಹಳೇ ಚಪ್ಪಲಿ ತೆಗೆದುಕೊಂಡು ಅದರಲ್ಲೇ ಅದನ್ನು ತುಂಡರಿಸಿ ಪೀಸಮಾಡಿ ತಿನ್ನುತ್ತೇನೆ... ತಿನ್ನುತ್ತೇನೆ") ಎನ್ನುತ್ತ ಊಟಮಾಡಿ ವಿಶ್ರಾಂತಿ ಪಡೆದಳು.

ಅಲ್ಲಿ ನಿಂತಿರುವ ಜನ ನಿಂತಿದೆ. ಕುಳಿತಿರುವ ಜನ ಕುಳಿತಿದೆ, ಪಂಚೆ ಕೊಳೆ ಆಗದಂತೆ ಕುಕ್ಕರಗಾಲಲ್ಲಿ ಕುಳಿತಿರುವ ಕಿಟ್ಟಯ್ಯ ಹಾಗೆಯೆ ಕುಳಿತ್ತಿದ್ದಾನೆ. ಸ್ವಲ್ಪ ಸಮಯದ ನಂತರ ಕುಳಿತ್ತಿದ್ದ ಕಿಟ್ಟಯ್ಯ ಎದ್ದು ಕೈಲಿದ್ದ ಕಡ್ಡಿ ಮುರಿದು " ಆಗ ನೀ ಬರಲ್ಲ ಅನ್ನಮ್ಮೀ" (" ಹಾಗಾದರೆ ನೀನು ಬರುವುದಿಲ್ಲವೇನೆ") ಅಂದನು. ಕೆಂಪಿಯು, ಇದೇನು, ಯಾವ ಊರ ದಾಸಯ್ಯ ಅನ್ನಲಿಲ್ಲ. ಹೆಗಲಲ್ಲಿ ಸರಿಯಾಗಿದ್ದ ಟವಲ್ಲನ್ನು ಪುನ: ಸರಿಮಾಡಿಕೊಂಡು ಹಾಗೆಯೆ ಗಂಟಲನ್ನೂ ಸರಿಮಾಡಿಕೊಂಡು ಹೆಂಡತಿಗೆ " ಇದಿಯ ಕೊನ ಸಲ ನೋಡ್ಕ" (" ಇದೆ ಕೊನೆ ಸಾರಿ ನೋಡು") ಅಂದನು. ಆಮೇಲೆ ಅತ್ತೆಗೆ " ಇದ್ಯಾಕ ಇವ ಹಿಂಗಂತನ ಅಂದ್ಕಬ್ಯಾಡಿ ಅತ್ತೆಮ್ಮಾ.... ನಿಮ್ಮ ಮಗಳ ಇನ್ನ ನೀವೇ ಇಟ್ಕಳ್ಳಿ" (" ಇದೇಕೆ ಇವನು ಹೀಗೆ ಹೇಳುತ್ತಾನೆ ಅಂದುಕೊಳ್ಳಬೇಡಿ ಅತ್ತೆ... ನಿಮ್ಮ ಮಗಳನ್ನು ಇನ್ನು ನೀವೇ ಇಟ್ಟುಕೊಳ್ಳಿ") ಅಂದು, ಒಂದಷ್ಟು ದೂರ ನಡೆದು, ನಿಂತು ಟರ್ಕಿಟವಲನ್ನು ಇನ್ನೂ ಒಂದು ಸಾರಿ ಮಡಚಿ ಸರಿಮಾಡಿಕೊಂಡು, ತಿರುಗಿ ಒಂದು ಸಾರಿ ನೋಡಿಯು ಕಾಣಿಸದಂತವನಾಗಿ ಆಮೇಲೆ ಎತ್ತಿಕಟ್ಟಿದ್ದ ಪಂಚೆಯನ್ನು ಕೆಳಕ್ಕೆ ಬಿಟ್ಟು ಕೊಂಡು ಆ ಪಂಚೆಯನ್ನು ಬರಬರ ಶಬ್ದ ಮಾಡಿಸುತ್ತ ನಡೆದನು.

ಒಳಗೆ, ಗಂಜಿಯನ್ನು ತನ್ನ ಮಗುವಿಗೆ ಚೀಪಿಸುತ್ತಿದ್ದ ಈರಿಗೆ ಇದು ದಿಗಿಲಾಗಿ, ಕೆಲಸ ಕೈಬಿಟ್ಟು " ಅಪ್ಪೋ ಇದ್ಯಾಕನಪ್ಪ ನೀವ ಮಾಡ್ತಾ ಇರದು? ಅದ್ಯಾಕನ ನೀವಾ..." (" ಅಲ್ಲಪ್ಪ ಇದೇನು ನೀವು ಮಾಡುತ್ತ ಇರುವುದು? ಅದೇನು ನೀವು...") ಅನ್ನುತ್ತ ಅವಳು ನಡೆದು ಜನಗಳಿಂದ ಮುಂದೆ ಹೋಗಿ ಬೇಲಿಗಳು ಸಿಕ್ಕಲಾಗಿ ಆಗ,

" ನೀವ ಬನ್ಯಪ್ಪ..."
(" ನೀವ ಬನ್ನಿಯಪ್ಪ...")
" ಅಲ್ಲ ನಂಗ ಯಾರವ್ರ ಅಂತ ಬರ್ಲಿ ಹೇಳೀ..."
(ಅಲ್ಲ ನನಗೆ ಯಾರಿದಾರೆ ಅಂತ ಬರಲಿ ಹೇಳಿ...")
" ಇದೊಳ್ಳ ಸೈ ಅನ್ನೋ ಮಾತಾಯ್ತಲ್ಲ ನೀವಾ ಆಡೋದು..."
(ಇದೊಳ್ಳೆ ಮಾತಾಯಿತಲ್ಲ ನೀವ ಹೇಳುವುದು...")
" ಆಗಾರ ಇನ್ಯಾವದ ಹೇಳಿ ಮತ್ತ ಸೈ ಅನ್ನ ಮಾತೂ...?"
("ಹಾಗಾದರೆ ಯಾವುದು ಹೇಳಿ ಮತ್ತೆ ಸರಿ ಅನ್ನುವ ಮಾತು...?")
" ಜನ ಯಾರ್ನಿ ಆಡ್ಕಳದು ಆಗಾರ..."
(" ಜನ ಯಾರನ್ನ ಹೇಳಿ ಆಡಿಕೊಳ್ಳುವುದು ಹಾಗಾದರೆ...")
" ನನ್ಯಾಕ ಆಡ್ಕಂದದು ಹೇಳೀ.."
(" ನನ್ನನ್ನೇಕೆ ಆಡಿಕೊಂಡಾರು ಹೇಳಿ...")
" ಅವ್ವೈ! ಅವ್ಳ ಎಷ್ಟ ಆದ್ರೂ ಹೆಣ್ಣಂಗುಸ ಅನ್ನಿಸ್ಕಳ್ತಳ... ನೀವ ದೊಡ್ಡನಸರೂವೀ ಹಂಗಿಯು ಆಡಂರ, ಮಾತು ನಿಂತ್ಕಳದು ಯಾರ್ಗ ಹೇಳಿ..."
(" ಅಯ್ಯೋ! ಅವಳು ಎಷ್ಟೇ ಆದರು ಹೆಂಗಸು ಅನ್ನಿಸಿಕೊಳ್ಳುತ್ತಾಳೆ... ನೀವ ದೊಡ್ಡಮನುಷ್ಯರು ಕೂಡ ಹಾಗೆ ಆಡುವುದೆ? ಮಾತು ನಿಂತುಕೊಳ್ಳುವುದು ಯಾರಿಗೆ ಹೇಳಿ...") ಅಂದಾಗ ಸೋತ ಕಿಟ್ಟಯ್ಯ ಈರಿ ಹಿಂದೆ ಟವಲ ಸರಿಪಡಿಸುತ್ತ ಬರುತ್ತಿರಲು, ಕಿಟ್ಟಯ್ಯ ಈರಿಗೆ " ಇದ್ಯಾಕ ಇಷ್ಟೊಂದು ಮುಪ್ಪು ಹಿಡ್ಕಂಡಿದೀರಲ್ಲಾ
(" ಇದೇನು ಇಷ್ಟೊಂದು ಬಾಡಿ ಹೋಗಿದೀರಲ್ಲ") ಅಂದನು. ಈರಿ " ಅಯ್ಯೋ ಈಗ್ಗಿಯು ಏನೋ ಸಾಸಿಕ ದಮ್ಮಯ್ಯ, ನೋಡಾಂಗಾರು ಅದೀನೀ"
(" ಅಯ್ಯೋ ಈಗಲೆ ಎಷ್ಟೋ ಪರ್ವಾಗಿಲ್ಲ, ನೋಡುವ ಹಾಗಾದರೂ ಇದೀನಿ")
ಅಂದು ಸ್ವಲ್ಪ ದೂರ ಹೋಗಲು " ಅಪ್ಪೈ ನಿಂ ಪಾದ, ನೀವ ಇನ್ನೊಂದ್ಸಲ ಬಂದಾಗ ಜೀತ ಮಾಡಾದ್ರೂ ತೀರಸ್ತೀನಿ. ನನ ಕೂಸ್ಗ ಯಾನೋ ಒಂದು, ಮಾಡ್ಸಬೇಕಾಗದ ಇಲ್ಲ ಅನಿಂಯು ಒಂದತ್ರೂಪಾಯಿ ಕೊಡಿ ಮತ್ತ..."
(" ಅಪ್ಪ ನಿಮ್ಮ ದಮ್ಮಯ್ಯ, ನೀವ ಇನ್ನೊಮ್ಮೆ ಬಂದಾಗ ಕೂಲಿ ಮಾಡಾದರು ತೀರಿಸುತ್ತೇನೆ. ನನ್ನ ಮಗುವಿಗೆ ಏನೋ ಒಂದು ಮಾಡಿಸಬೇಕಾಗಿದೆ, ಇಲ್ಲ ಅನ್ನದೆ ಒಂದು ಹತ್ತು ರೂಪಾಯಿ ಕೊಡಿ...") ಅಂದಳು. ಅದಕ್ಕೆ ಅವನು — ಇದೆಲ್ಲಾ ಇಸ್ಟೀಲ ಲೋಟ್ದಲಿ ಕುಡ್ದು ಜಯು ಹಿಡ್ಕಂಡ ಥರ್ದ ಕಾಣ್ತ ಅದ. ಮೊದ್ಲಿಯು ಹೇಳಾಕ ಯಾನಾಗಿತ್ತು, ನಿಮ್ಗ? ಬರಾಗ ಔಸಿದ್ನಾರು ತರನು..." (" ಇದೆಲ್ಲಾ ಸ್ಟೀಲ ಲೋಟದಲ್ಲಿ ಕುಡಿದು ಕ್ಷಯ ಹಿಡಿದುಕೊಂಡ ರೀತಿಯ ಕಾಣುತ್ತಿದೆ. ಮೊದಲೇ ಹೇಳುವುದಕ್ಕೆ ಏನಾಗಿತ್ತು, ನಿಮಗೆ? ಬರುವಾಗ ಔಷಧಿಯನ್ನಾದರೂ ತರುತ್ತ ಇದ್ದೆ...") ಅಂದನು.

ಈರಿ " ಅಯ್ಯಯ್ಯೋ ಅದು ಔಸಿಂದಲ್ಲಕ ನೋಡಿ" (" ಅಯ್ಯಯ್ಯೋ ಅದು ಔಷಧಿಗೆ ಹೋಗುವುದಲ್ಲ ನೋಡಿ") ಎಂದು ತನ್ನ ಧ್ವನಿಗೆ ಪ್ರಾಣ ಬೆರೆಸಿ ಇನ್ನೊಂದು ಸಾರಿ " ಅಪ್ಪೋ ಹತ ರೂಪಾಯ್ತಾರು.." (ಏನಪ್ಪ ಹತ್ತು ರೂಪಾಯಿಯನ್ನಾದರೂ..") ಅಂದಳು. ಅವನು ಜೇಬನ್ನು ಹುಡುಕಿದಂತೆ ಮಾಡಿ, ತೆಗೆದು ಒಂದು ರೂಪಾಯಿ ನೋಟು ಚಾಚಲು, ಈರಿಯು ಯಾರು ನೋಡುತ್ತ ಇಲ್ಲದ ದೈನ್ಯಪಡಿಸಿಕೊಳ್ಳುತ್ತ, ಆತುರದಲ್ಲಿ ತೆಗೆದುಕೊಂಡು ಸೀರೆ ನೆರಿಗೆಗೆ ಸೇರಿಸಿ" ಅಪ್ಪೋ... ಇನ್ನೊಂದೇಡು ರೂಪಾಯ್ತಾರುವ.." (" ಏನಪ್ಪ... ಇನ್ನೊಂದೆರಡು ರೂಪಾಯಿಯನ್ನಾದರೂ...") ಅಂದಳು.

ಆ ಬೆಳಗಿನ ಸಮಯದಲ್ಲಿ ಶಬ್ದ ನಾಲ್ಕು ದಿಕ್ಕನ್ನೂ ಭೇದಿಸಿ ಮೊಳಗುತ್ತ ಬಂದು ಕಿವಿಗೆ ಇರಿಯುತ್ತಿದ್ದುದು ಕೊನೆಗೂ ನಿಂತು ಈಗ ಗಾಳಿ ಬೀಸಲು ಶುರುವಾಯಿತು. ಚಿನ್ನನು ಹೊರಬಂದವನು ಜಗಲಿ ಮೇಲೆ ಕುಳಿತು, ಎಡಗೈಯಲ್ಲಿ ಕನ್ನಡಿ ಹಿಡಿದು ಬಲಗೈಯಲ್ಲಿ ಕತ್ತರಿ ಹಿಡಿದು ಮೀಸೆ ಕತ್ತರಿಸಲಾರಂಭಿಸಿದನು, ಇಂಗ್ಲಿಷಿನೊಡನೆ ಗುದ್ದಾಡಿ ಬಿ.ಎ. ಎಂಬ ಎರಡಕ್ಷರ ಪಾಸ್ ಆಗದೆ ಚಿನ್ನನಿದ್ದನು. ಹೊಟ್ಟೆಗೆ ಏನಾದರೂ ಕಡಿಮೆಯಾಗಿ ನಡಿಗೆ ಗತ್ತು ಬಾರದಿದ್ದರೆ, ನಡೆಯುವುದನ್ನು ಬಿಟ್ಟು ಕೂರುತ್ತಿದ್ದ ಚಿನ್ನನು, ತಮ್ಮಂದಿರ ಜೀತದ ತಂಗಳನ್ನಕ್ಕೆ ನಿಂತು ಚಿನ್ನರಸ ಎಂದು ಹೆಸರನ್ನು ಬದಲಾಯಿಸಿಕೊಂಡಿದ್ದ. ಚಿನ್ನನಿಗೆ ಈಗ ತನ್ನ ಮುಖಕ್ಕೆ ಒಪ್ಪುವ ಹಾಲ ಮೀಸೆ ಯಾವುದೆಂದು ಬಗೆಹರಿಸಿಕೊಳ್ಳುವುದರಲ್ಲಿ ಕಷ್ಟ ಎದುರಾಗಿತ್ತು. ಸೆಲಾಜ್ಞಿಗೆ ಕಣ್ಣಗಿ ಮಾಡಲು ಗಿರ್ಜಾ ವಿನೆ ಬಡುವುದು ಅವನ ಗುರಿ. ಆದರೆ ಇನ್ನು ಬಿಗುರು ಕೂಡಲಾಗಿತ್ತು.

ಇವನ ಸಮಸ್ಯೆ ಹೀಗಿರುವಾಗ, ಬೀದಿಗೆ ಕಾಲಿಡುತ್ತಿದ್ದ ಕಿಟ್ಟಯ್ಯ ಮತ್ತು ಈರಿಯು ಕಂಡುಬಂದು, ಚಿನ್ನನ ಮೀಸೆ ಕತ್ತರಿಸುವುದು ನಿಂತು, ಬದಲಾಗಿ ಅವನ ಮೈ ಉರಿ ಎದ್ದು ನಿಂತು — " ಅದ್ಯಾವ ಸೀಮ ಜನ್ಗಳ ನೀವಾ, ಅದ್ಯಾಕಾರೂ ಹುಟ್ಟಿದೀರಿ ನೀವಾ, ನಿಮ್ಮ ಹಟ್ಟಿ ಒಳಗ ಮಾಡ್ಕೊಳಕ ಅದ್ಯಾಕ ರೋಗ ಆಗಿರದು ನಿಮ್ಗ. ಮುಕ್ಕಗಲ ಕೇರಿಯವ್ರು ನೋಡ್ತ 'ಇಲ್ಲೊಂದು ಈ ಸೂಲ ಬೆಳ್ತಗಳ ಬಾಳಾಟ ಅನ್ನಂಗ ಆಡಾಗಿ ಮಾಡೀಮಾರಿ ಗಾರುಲ್ಲದ ಸಮಾಧಾನವಾಗಿ ಇರೋಕಾಗಲ್ಲ ನಂಗಾ... ಥೂ ಬೆಳ್ತವ..." (" ಯಾವ ಸೀಮೆ ಜನಗಳು ನೀವು ಏಕಾದರೂ ಹುಟ್ಟಿದೀರಿ ನೀವು ನಿಮ್ಮ ಜಗಳವನ್ನು ನಿಮ್ಮ

ಮನೆ ಒಳಗೆ ಮಾಡಿಕೊಳ್ಳುವದಕ್ಕೆ ಆದೇನು ರೋಗ ಆಗಿರುವುದು ನಿಮಗೆ. ಮೇಲ್ಜಾತಿಯವರು ನೋಡಬೇಕು, 'ಇಲ್ಲ ನೋಡಿ ಈ ಹರಿಜನರ ಜೀವನವನ್ನು ಅಂತ ಆಡಿಕೊಳ್ಳುವ ರೀತಿ ಮಾಡಿ ಊರಲ್ಲಿ ಸಮಾಧಾನವಾಗಿ ಇರುವುದಕ್ಕೂ ಬಿಡುವುದಿಲ್ಲವಲ್ಲ ನನಗೆ... ಥೂ ನಿಮ್ಮ...") ಎಂದು ಉಗಿದು ಹೇಳಿದನು. ಆದರೆ ತುಟಿಪಿಟಿಕ್ಕನ್ನದೆ ಅವರು ದಾಟಿದರು.

ಚೆನ್ನನ ಅಪ್ಪ ಬಿಳಿ ಕಂಬಳಿ ಹೊದ್ದುಕೊಂಡು ಪಕ್ಕದಲ್ಲಿ ಊರುಗೋಲು ಇಟ್ಟುಕೊಂಡು, ಈ ಕಡೆ ಬೀದಿಗೂ ಸೇರದ ಹಾಗೆ, ಆ ಕಡೆ ಮನೆಗೂ ಸೇರದ ಹಾಗೆ ಇರುವ ಸ್ಥಳದಲ್ಲಿ ಕುಳಿತವನು ಕಂಬಳಿ ಒಳಗಿಂದ ಕೈ ನೀಡಿ " ಓಹೋ... ನಮ್ಮ ತಾಯಮ್ಮನ ಅಳಿಯಂದ್ರಲ್ಲ! ನಮಗಾಗ ನಿಮಗಾಗವ ಹತ್ರದ ಸಂಬಂಜಕನ, ಒಂದ ಬೀಡಿ ಎಸ್ದುಬುಟ್ಟು ಹೋಗ್ರಪ್ಪೋ..." (" ಓಹೋ... ನಮ್ಮ ತಾಯಮ್ಮನ ಅಳಿಯಂದಿರಲ್ಲವೆ ನಮಗೂ ನಿಮಗೂ ಹತ್ತಿರದ ಸಂಬಂಧಕಣಯ್ಯ. ಒಂದು ಬೀಡಿ ಎಸೆದು ಹೋಗಪ್ಪ...") ಎಂದು ಕೈ ಚಾಚಿದನು.

ಈ ವೇಳೆಯಲ್ಲಿ ಮುಂದೆ ಬರುವ ಸಂಕ್ರಾಂತಿ ಹಬ್ಬದ ನಡಗರವು ಮೇಲ್ಜಾತಿ ಬೀದಿಯಲ್ಲಿ ನಡೆದಾಡಿ ಊರಿನ ಶ್ರೀಮಂತರ ಮನೆಯಲ್ಲಿ ಕುಣಿದು ಕುಪ್ಪಳಿಸುತ್ತಿದ್ದಾಗ, ಆ ಕಾಲದಲ್ಲಿ ಸಿದ್ದಾಂಗನು ಅರೆಜೀವ ಮಾಡಿ ಎಸೆದು ಹೋಗಿದ್ದ ಅಕ್ಕಮಹಾದೇವಮ್ಮ ಯಾಡರ ದೇಹಕ್ಕೆ ನಂಜೆ ಆಗುತ್ತಾಗುತ್ತ ಉಸಿರು ಎಂಬುದು ನೇರಿಕೊಂಡಿತು. ಗರಬಡಿದಂತೆ ಕುಳಿತಿದ್ದ ಅಕ್ಕಮಹಾದೇವಮ್ಮನ ಕಣ್ಣುಗಳಿಂದ ನೀರಿನ ಕೋಡಿಯು ಹರಿದು ಕೆರೆಯ ಸೇರುತ್ತಿರಲು.

ತಾಯಿ ಹೊಟ್ಟೆಗೆ ತಲೆಹಾಕಿ ಯಾಡನು ಕಣ್ಣುರೆಪ್ಪೆ ಮುಚ್ಚುವುದು ತೆರೆಯುವುದು ಹಾಗು ಸುತ್ತ ಕಣ್ಣಾಡಿಸುವುದು ಮಾಡುತ್ತಿದ್ದನು. ಅವನ ಒಳಗಿನ ದ್ರವವೆಲ್ಲ ಒಣಗಿದಂತಾಗಿ ಅವನ ಬತ್ತಿದ್ದ ನೇತ್ರಗಳಿಂದ ನೀರು ಅನ್ನುವುದು ತಾನೇ ಬರಲು ಎಲ್ಲಿತ್ತು ಎನ್ನುತ್ತಿರಲು, ಆಗ ಯಾಡನ ತಲೆಯನ್ನು ಭೂಮಿಯ ಮೇಲೆ ಇಟ್ಟು, ಅಕ್ಕಮಹಾದೇವಮ್ಮ ಎದ್ದು ನಡೆದು ಬಂದಳು ಆ ಕಣ್ಣೀರು ತುಂಬಿದ್ದ ಕೆರೆಯ ದಡಕ್ಕೆ. ಕೆರೆಗೆ ಮೂರು ಸಾರಿ ನಮಸ್ಕಾರ ಮಾಡಿದಳು. ಕಣ್ಣಿಗೆ ಆ ಕೆರೆಯ ನೀರನ್ನು ಮೂರು ಸಾರಿ ಒತ್ತಿಕೊಂಡಳು. ಪ್ರಾರ್ಥಿಸುತ್ತ,

ಮೂರು ಬೊಗಸೆ ನೀರನ್ನು ಕುಡಿದಳು. ಆ ಸೆರಗಿನ ತುದಿಯನ್ನು ನೀರಿಗದ್ದಿದಳು. ಆ ನೀರು ಕುಡಿದ ಸೆರಗಿನ ತುದಿಯನ್ನು ತನ್ನೆರಡು ಕೈಯಲ್ಲೂ ಹಿಡಿದು ತಂದು ಯಾಡನ ಬಾಯನ್ನು ಬಿಡಿಸುತ್ತ ಕುಳಿತ, ಸೆರಗಿನ ನೀರನ್ನು ತೊಟ್ಟಿಕ್ಕಿಸುತ್ತಿರಲು, ಆಗ ಯಾಡನ ದೇಹದಲ್ಲಿ ಉಸಿರು ಬಂದು, ಅವನ ಕಣ್ಣುಗಳಲ್ಲಿ ಕಣ್ಣೀರು ಹರಿದು ಬಂದಿತು.

ಅಲ್ಲಿಗೆ ಭೂದೇವಿತಾಯಿಯು ತನ್ನೆರಡು ರೆಕ್ಕೆಗಳು ಸೆರಗಿನ ಗರಿಯ ರೂಪದಲ್ಲಿ ಬರುವಂತಾಗಲು, ಅಕ್ಕಮಹಾದೇವಮ್ಮ ಯಾಡರು ಕುಳಿತ ಜಾಗವು ನೆಲೆಯಾಯಿತು. ಆ ಉಂಟಾದಂಥ ನೆಲೆಯಲ್ಲಿ ಅಕ್ಕಮಹಾದೇವಮ್ಮ ಯಾಡರು ರಾತ್ರಿ ಹೊತ್ತು ಮಲಗುತ್ತ, ಬೆಳಗ್ಗೆಯಾಗುತ್ತಲೆ ಅದನ್ನೆ ಹೋಟೆಲ್ ಆಗಿ ಮಾಡಿಕೊಂಡು ಪ್ರತಿದಿನ ಟೀ, ಇಡ್ಲಿ, ಭಾನುವಾರದಂದು ದೋಸೆ, ಜೊತೆಗೆ ಬೀಡಿ, ಬೆಂಕಿಪೊಟ್ಟಣ ಇಟ್ಟುಕೊಂಡು ವ್ಯಾಪಾರ ಮಾಡುತ್ತ, ಯಾಡನು ದಿನ ದಿನಕ್ಕೆ ಬೆಳೆಯುತ್ತ ದೊಡ್ಡವನಾದನು. ದೊಡ್ಡವನಾದ ಯಾಡನು, ಎಡಗಡೆ ಮೂಗಿನ ಹೊಳ್ಳೆಯಲ್ಲಿ ಬರುವ ಸಿಂಬಳವನ್ನು ಬಲಮುಂಗೈಯಲ್ಲಿ ಒರೆಸಿಕೊಳ್ಳುತ್ತ, ಬಲಮೂಗಿನ ಹೊಳ್ಳೆಯಲ್ಲಿ ಬರುವ ಸಿಂಬಳವನ್ನು ಎಡಗಡೆ ಮುಂಗೈಯಲ್ಲಿ ಒರೆಸಿಕೊಳ್ಳುತ್ತ, ಸಿಂಬಳದ ಪಾದನ್ನು ಕೈಗೆ ಕಟ್ಟಿ ಗ್ಲಾಸ್ ತೊಳೆಯುತ್ತಿದ್ದನು. ಯಾವುದಾದರೂ ದಿಕ್ಕು ತಪ್ಪಿದ ಇರುವೆ ಏನಾದರೂ ಸಕ್ಕರೆ ಹರಳನ್ನು ಕದ್ದು ಹೋಗುತ್ತಿರುವಾಗ ಸಿಕ್ಕಿಬಿದ್ದರೆ " ಅಯ್ಯೋ ಪಾಪಿಗಳ, ಈ ಬರಗಾಲದಲ್ಲಿ ಒಂದು ಸಕ್ಕರೆ ಹರಳಿಗೆ ಮೂರು ಪೈಸೆ ಆಗುತ್ತದೆ" ಅಂತ ಬಿಡಿಸಿಕೊಳ್ಳುತ್ತಿದ್ದನು. ಈ ಕಡೆ ಒಂದು ದಿನ ಹೋಟೆಲ್ ಹತ್ತಿರ ಬಸ್ಸು ಸ್ವಲ್ಪ ಸಮಯ ಸುಧಾರಿಸಿಕೊಂಡು ಟೀ ಕುಡಿದು ಹೊರಡುವಂತಾಗಿ, ಯಾಡನು ತೊಳೆದು ತೊಳೆದು ಬಿಡುತ್ತಿದ್ದ ಗಲೀಜಿನ ನೀರು ಕೆರೆ ಸೇರುವವರೆಗೆ ಆಗಿ, ಹಾಗೂ ಒಂದು ಬಸ್ಸು ಅನ್ನುವುದು ಬಂದು ಊರಲ್ಲಿ ತಂಗುವಂತಾದಾಗ ಅಕ್ಕಮಹಾದೇವಮ್ಮನ ಹೋಟೆಲ್ ತುಂಬಾ ಅಭಿವೃದ್ಧಿಯಾಯಿತು.

ಹಾಗೆಯೇ ಹುಲಿ ಮೇಲೆ ಕುಳಿತ ಮಲೆಮಹಾದೇಶ್ವರನ ಫೋಟೋ, ಕುದುರೆ ಮೇಲೆ ಕುಳಿತ ಬಸವಣ್ಣನ ಫೋಟೋಗಳನ್ನು ತಡಿಕೆಯಲ್ಲಿ ನೇತಾಕಿ ಅವುಗಳಿಗೆ ಹೂ, ಗಂಧ ಊದು ಬತ್ತಿಗಳನ್ನು ಹಚ್ಚಲಾಗುತ್ತಿತ್ತು. ರಾತ್ರಿ ಹೊತ್ತು ಅನ್ನ, ಒಗ್ಗರಣೆ ಸಾರು ತಯಾರಾಗುತ್ತ, ಆ ಒಗ್ಗರಣೆ ಸಾರಿಗೆ ಹದಿಹರೆಯದವರು ಗರ್ಭಿಣಿಯರಾಗಿ ಆಸೆ ಪಡುತ್ತಿರಲು, ಯಾಡನಿಗೆ ಕೆಲಸ ಹೆಚ್ಚಾಗಿ ಹಗಲು ಲೋಟ ತೊಳೆಯುತ್ತ, ರಾತ್ರಿ ತೂಕಾಸುತ್ತ, ನಾಳೆಯ

ಇಡ್ಲಿಗೆ ಹಿಟ್ಟು ರುಬ್ಬುವ ಕೆಲಸವಾಯಿತು. ಅವರಮ್ಮ ನೀರಿಗೆ ಅಂತ ಹೋದಾಗ, ಟೀ ಕುಡಿಯುವುದಕ್ಕೆ ಬರುತ್ತಿದ್ದ ಪೋಲಿ ಹುಡಗರು "ಲೋ ಯಾಡ ನಿಮ್ಮಮ್ಮನ ಕೊಡುತ್ತೀಯೇನೊ" ಅನ್ನುತ್ತಿದ್ದರು. ಇವನು ಮಗು ಕಣ್ಣರೆಪ್ಪೆ ಬಡುತ್ತಿದ್ದ ರೀತಿಯಲ್ಲಿ ಬಡುತ್ತ "ತಿರುಗಿ ವಾಪಸ ಕೊಡುವುದಾದರೆ ಕೊಡುತ್ತೀನಿ... ಬೇಕಾದರೆ" ಅನ್ನುತ್ತಿದ್ದ. ಅದಕ್ಕೆ ಅವರು ನಗುತ್ತಿದ್ದರು. ದೂರದಲ್ಲಿ ನೀರು ಸೇದುತ್ತಿದ್ದ ಅಕ್ಕಮಹಾದೇವಮ್ಮ ಯಾಡನ ಹುಟ್ಟು ಹೆಸರನ್ನು ಹಿಡಿದು "ಮಗು ರಾಜಶೇಖರಮೂರ್ತಿ ತೊಲೆಮೇಲೆ ಹೊಸದಾದ ಟೀ ಸೊಪ್ಪಿನ ಪಾಕೇಟು ಇಟ್ಟಿದೀನಿ. ಅದರಲ್ಲಿ ಟೀ ಮಾಡಿಕೊಡು ಪುಟ್ಟಾ...." ಅಂತ ಗೊಕ್ಕಳಿನಿಂದಲೆ ಧ್ವನಿ ಹೊರಡಿಸುತ್ತ, ನಾಲ್ಕು ಬೀದಿಗೂ ಕೇಳಿಸುತ್ತಾ ಕೂಗುತ್ತಿದ್ದರೆ ಇಲ್ಲಿ ಪೋಲಿ ಹುಡುಗರು "ಲೋ ಯಾಡ ನಿಮ್ಮಮ್ಮನ ಕೊಡುತ್ತೀಯೇನೊ" ಅನ್ನುತ್ತಿದ್ದರು. ಯಾಡ ಹೀಗೆ ದಿನೇ ದಿನೇ ಬೆಳೆದು ದೊಡ್ಡವನಾದನು.

ಹೀಗೆ ದೊಡ್ಡವನಾದ ಯಾಡನು ಒಂದು ದಿನ ತಾಯಿಗೆ "ಅಮ್ಮ ಅಮ್ಮ ಅದೇಕೋ ಈ ಕೆಲಸ ಬೇಸರ ನನಗೆ" ಅಂದನು. ಅಕ್ಕಮಹಾದೇವಮ್ಮ ಆಶ್ಚರ್ಯಪಟ್ಟುಕೊಂಡು "ಇದೇಕಪ್ಪ ಪುಟ್ಟ ಇಂದು ಹೊಸ ಮಾತನ್ನು ಹೇಳುತ್ತ ಇದೀಯ. ಇನ್ನು ಬೇರೆ ಕೆಲಸ ಏನು ಮಾಡುತ್ತೀಯಪ್ಪ?...." ಎಂದಳು. ಅದಕ್ಕೆ ಒಂದು ಮೇಕೆ, ಒಂದು ಕುರಿ, ಒಂದು ಹಸುವನ್ನು ತೆಗೆದುಕೊಟ್ಟರೆ ಅವುಗಳನ್ನು ಮೇಯಿಸುತ್ತ, ಅದರಲ್ಲೇ ಅಭಿವೃದ್ಧಿ ಆಗುತ್ತೇನೆ ಎಂದನು. ಮಗ ಕೇಳಿದ್ದನ್ನು, ಅಮ್ಮ ಸೆರಗು ಒಡ್ಡಿ ವಾರಕ್ಕೆ ಬೇಡಿ ತರಲು ಅಲ್ಲೊಂದು ಕುರಿಕೊಟ್ಟಿಗೆಯಾಗಿ ಯಾಡ ಮೇಯಿಸುತ್ತಿರಬೇಕಾದರೆ ಎಲ್ಲರಿಗಿಂತಲೂ ಮೊದಲೆ ಎದ್ದೇಳುತ್ತಿದ್ದನು. ಆ ಕಡೆ ಜೀತಕ್ಕೆ ಇದ್ದ ಮಕ್ಕಳು ಬರುವುದಕ್ಕೆ ಮೊದಲೇ ಇದ್ದಬದ್ದ ಹಸಿರುಹುಲ್ಲನ್ನು ತಾನೇ ಮೇಯಿಸಿಬಿಡುತ್ತಿದ್ದನು. ಹಾಗೇನಾಯ್ತು, ಇವನು ಮೇಯಿಸುವ ಶೈಲಿಗೆ ಎಲ್ಲರು ಮೇಲೆಬಿದ್ದು ನಮ್ಮ ದನ ಮೇಯಿಸು, ನಮ್ಮ ಆಡುಕುರಿ ಮೇಯಿಸು ಅಂತ ದನಕರುಗಳನ್ನು ತಂದುಬಿಡುತ್ತಿದ್ದರಿಂದ ಯಾಡನ ಕೊಟ್ಟಿಗೆ ಹಿಗ್ಗಿತು.

ಒಂದು ದಿನ ಯಾಡನು ಮುತ್ತುಗದ ಮರದ ಮೇಲೆ ಕುಳಿತು ಬುತ್ತಿಬಿಚ್ಚಿ ತಿಂದು ಕಣ್ಣರೆಪ್ಪೆ ಚಿಕ್ಕದು ದೊಡ್ಡದು ಮಾಡುತ್ತ, ಸುತ್ತಲೂ ನೋಡುತ್ತ ದನಕುರಿ, ಆಡು

ಮೇಯಿಸುತ್ತಿರಬೇಕಾದರೆ ಜೀತದ ಮಕ್ಕಳೆಲ್ಲ ಪಡ್ಡೆ ಆಡುತ್ತ ಇದ್ದವು. ಅಲ್ಲಿ ಕಾಸನ್ನು ಕಟ್ಟಿ ಆಡುವವರು ನಾಲ್ಕು ಜನರಾದರೆ, ಮೇಲೆಬಿದ್ದು ನೋಡುವವರು ಹತ್ತು ಮಕ್ಕಳು. ಯಾಡ ಏನಾಡಿದ ಮರ ಇಳಿದು ಬಂದು — "ನೋಡ್ರೋ, ನೋಡ್ರೋ, ನಾಳೆ ನಮ್ಮಮ್ಮ ಮಾಡಿದ ವಡೆ ತಂದುಕೊಡುತ್ತೇನೆ. ಈಗ ನನ್ನ ದನ, ಕುರಿ, ಆಡುಗಳನ್ನು ಸ್ವಲ್ಪ ನೋಡಿಕೊಳ್ಳಿ. ನನಗೇಕೋ ಸ್ವಲ್ಪ ಭೇದಿ ಆಗುತ್ತಿದೆ" ಅಂತ ಹೇಳಿ ಹಳ್ಳಕ್ಕೆ ಇಳಿದು, ಕುವ್ವೆ ಕುವ್ವೆ ಬರ್ರಾ ಅಂದು ಆಡುಕುರಿಗಳನ್ನೆಲ್ಲ ಹತ್ತಿರಕ್ಕೆ ಬರಿಸಿಕೊಂಡು, ಅಂಬಾ ಅಂದು ಹಸುದನಗಳನ್ನೆಲ್ಲ ಬರಿಸಿಕೊಂಡವನು, ಅವುಗಳನ್ನು ಓಡಿಸಿಕೊಂಡು ನಂಜನಗೂಡಿನ ಶುಕ್ರವಾರದ ಸಂತೆಗೆ ತಂದನು.

ಶಿವ ಆ ಸಂತೆ ಆ ಗೋಳಿ ಕಣ್ಣಿಗೆ ಕಾಣುವ ತನಕ ಇತ್ತಲ ಅಷ್ಟುದ್ದ ಅಷ್ಟಗಲಕ್ಕೆ, ಭೂಮಿತಾಯಿಯ ಎದೆ ಮೇಲೆ ಕುರುಚಲು ಗಿಡದ ಗುಡ್ಡದ ರೀತಿಯಾಗಿ, ಒಂದು ಕಡೆಗೆಲ್ಲ ಜೋಳದ ರಾಶಿ, ಇನ್ನೊಂದು ಕಡೆಗೆಲ್ಲ ಬೆಲ್ಲದ ರಾಶಿ, ಮತ್ತೊಂದು ಕಡೆಗೆಲ್ಲ ದನ, ಕೋಳಿ, ಕುರಿ, ಬೆಕ್ಕು ಸಹ ಇತ್ತು. ಅಲ್ಲಿಂದ ಏಳುವ ಸದ್ದುಗದ್ದಲವೆಲ್ಲ ಆಕಾಶಕ್ಕೆ ಗುದ್ದುತ್ತಿದ್ದರೆ.... ಆ ಜನರೂ ವಿಭಿನ್ನವಾದ ಉಡುಪು ಹಾಕಿಕೊಂಡು ಆ ಕಡೆಗೆ ಈ ಕಡೆಗೆ ಸುಮ್ಮನೆ ಸುತ್ತುತ್ತಿದ್ದರು. ಯಾಡ ಪೇಟವನ್ನು ತಲೆಗೆ ಸುತ್ತಿಕೊಂಡು ವೇಷ ತಾಳಿಕೊಂಡು ದನ ಇರುವ ಕಡೆ ದನ ನಿಲ್ಲಿಸಿ, ಕುರಿ ಇರುವ ಕಡೆ ಕುರಿ ನಿಲ್ಲಿಸಿ ಆಡು ಇರುವ ಕಡೆ ಆಡು ನಿಲ್ಲಿಸಿ, ನಡುಮಧ್ಯದಲ್ಲಿ ತಾನು ಮೋಜಣಿದಾರನಂತೆ ನಿಂತುಕೊಂಡಾಗ, ಯಾರೋ ಶ್ರೀಮಂತರ ಮಕ್ಕಳು ಮೂರು ಜನರು ದನದ ವ್ಯಾಪಾರಕ್ಕೆ ಅಂತ ಒಬ್ಬ, ಕುರಿ ವ್ಯಾಪಾರಕ್ಕೆ ಅಂತ ಒಬ್ಬ, ಮೇಕೆ ವ್ಯಾಪಾರಕ್ಕೆ ಅಂತ ಒಬ್ಬ ಬಂದರು. ಆ ಮೂರು ಜನರಿಗೂ ಯಾಡನ ದನಕರುಗಳ ಮೇಲೆ ಆಸೆಯಾಗಿ ಬಿಟ್ಟು ಹೋಗಲು ಮನಸ್ಸಾಗಲಿಲ್ಲ. "ಏನಯ್ಯ ಹುಡುಗ, ಏನು ಹೆಸರು?" ಎಂದು ಕೇಳಿದರು. ಅವರಮ್ಮ ನೀರು ತರುವಾಗ ಕೂಗುವ ರಾಜಶೇಖರಮೂರ್ತಿ ಎಂಬ ಹೆಸರನ್ನು ಹೇಳಿದಾಗ ಓಹೋ ಇವನು ಯಾರೋ ದೊಡ್ಡ ಮನುಷ್ಯರ ಮನೆಯವನೇ ಇರಬೇಕು ಅಂದುಕೊಂಡು ವ್ಯಾಪಾರಕ್ಕೇನಯ್ಯ ಈ ದನಕರುಗಳು ಇರುವುದು?" ಅಂದಾಗ ಯಾಡ "ಹೌದು ಕನ್ರಿ, ನಮ್ಮ ತಂದೆಯವರು ಇಲ್ಲೇ ತಾಲ್ಲೂಕು ಆಫೀಸಿನಲ್ಲಿ ಮೋಜಣಿದಾರರನ್ನು ನೋಡಿಕೊಂಡು ಬರುತ್ತೇನೆ ಇರು, ಎಂದು ಹೇಳಿ ಹೋಗಿದ್ದಾರೆ. ಇನ್ನೊಂದು ಸ್ವಲ್ಪ ಸಮಯ ಬಂದು ಬಿಡುತ್ತಾರೆ, ಸ್ವಲ್ಪ ತಡೆದುಕೊಳ್ಳಿ" ಅಂದನು.

ಆಗ ಆ ಶ್ರೀಮಂತರ ಮಕ್ಕಳು ಆಡುಕುರಿ ದನವನ್ನು ನೋಡುತ್ತ, ಅವಾಗ ಸುಂ ಕುದರಿವನ್ನು ನೋಡುತ್ತ, ಆನಂದಿಸುತ್ತ, ಆದರೂ ಬೇಸರವಾಗಿ ಧರ್ಮ ಅನ್ನುವ ಹೋಟಲಿಗೆ ಹೋಗಿ ಟೀ, ಬೊಂಡ ತಿಂದುಕೊಂಡು, ಬೀಡಿಸಿಗರೇಟು ಸೇದಿ ಮುಗಿಸಿ ಬಂದಾಗ ಆಪೊತ್ತಿಗೆ ಸಾಯಂಕಾಲವಾಗತೊಡಗಿತು. ಅವಾಗ ಶ್ರೀಮಂತರ ಮಕ್ಕಳಿಗೆ ತಡೆಯಲಾಗಲಿಲ್ಲ. " ಅಲ್ಲಪ್ಪ ಹುಡುಗ ನಾವು ನೋಡಿದರೆ ನಿನ್ನ ದನಕರುಗಳನ್ನು ನಂಬಿಕೊಂಡು ಬೇರೆಕಡೆಗೆ ಏನನ್ನು ಮಾಡಲಿಲ್ಲ. ಆ ಕಡೆ ಬೇರೆ ಊರಿನವರೆಲ್ಲ ಕಣ್ಣಿಗೆ ಇಷ್ಟವಾದದ್ದನ್ನೆಲ್ಲ ಬೇರೆಯವರ ಹತ್ತಿರ ಅಯ್ಕೊಂಡು ಹೊರಟುಹೋದರು. ಈ ಕಡೆ ನಿಮ್ಮ ತಂದೆಯವರು ಬರಲಿಲ್ಲ. ಇನ್ನು ನಿಮ್ಮ ತಂದೆಯವರು ಬಂದು ನಾವು ವ್ಯಾಪಾರ ಕುದುರಿಸಿ, ನಮ್ಮ ಊರನ್ನು ತಲುಪುವುದು ಯಾವಾಗ" ಅಂದರು. ಯಾಡನು "ಅಯ್ಯೋ ನಮ್ಮ ತಂದೆಯವರು ಎಲ್ಲೋ ಮೇಜಣದಾರರ ಜೊತೆ ವಡೆ, ಟೀ ಕುಡಿಯುತ್ತ, ಸಿಗರೇಟು ಸೇದುತ್ತ, ಮರೆತುಬಿಟ್ಟಿರಬಹುದು. ನೀವು ಈ ಕಡೆ ಸ್ವಲ್ಪ ನೋಡಿಕೊಳ್ಳುತ್ತ ಇರಿ. ನಾನು ಹೋಗಿ ಆ ಕಡೆಯಿಂದ ಜೊತೆಯಲ್ಲಿ ಬಂದುಬಿಡುತ್ತೇನೆ" ಅಂದನು. ಆ ಶ್ರೀಮಂತರ ಮಕ್ಕಳು ನಗುತ್ತ, ತಡೆದು —"ಎಲ್ಲಾದರು ಉಂಟೇನಯ್ಯ ಪೆದ್ದ ಹುಡುಗ. ಸಂತೆಯಲ್ಲಿ ಒಳ್ಳೆಯವರು ಉಂಟು, ಕೆಟ್ಟವರು ಉಂಟು ಏನಾದರು ಬೆಲೆ ಕೇಳಿದಾರೇನಯ್ಯ.... ?" ಅಂದರು.

" ಹೌದು...... ಕೇಳಿದಾರೆ. ಕೇಳಿದವರಿಗೆ ಮೊದಲು ಅವರಿಂದಲೇ ಬೆಲೆ ಕೇಳು ಎಂದಿದಾರೆ......"

" ಅಯ್ಯೋ, ಮುಟ್ಠಾಳ... ಹಾಗಾದರೆ ಅದೆಷ್ಟು ಬೆಲೆ ಹೇಳು;...."

" ನೀವು ಬೆಲೆಯನ್ನು ಮೊದಲು ಹೇಳಿ...."

ಆ ಮೂರು ಜನ ಶ್ರೀಮಂತರ ಮಕ್ಕಳು ತಮ್ಮತಮ್ಮಲ್ಲೇ ಮಾತನಾಡಿಕೊಂಡರು.

"ನಮ್ಮ ಬೆಲೆ ಮೂರು ಸಾವಿರ ಕಣಯ್ಯ...."

"ನಾಲ್ಕು ಸಾವಿರಕ್ಕೆ ಬಂದರೆ ಕೊಟ್ಟುಬಿಡು. ಅದಕ್ಕೂ ಮೊದಲು ಕೇಳಿದವರಿಗೆ ಐದು ಸಾವಿರ ಹೇಳು ಅಂತ ಹೇಳಿದಾರೆ...." ಆ ಯಾಡನ ಮಾತಿಗೆ ಆ ಶ್ರೀಮಂತರ

ಮಕ್ಕಳು ನಗುತ್ತ, ಬೆಲೆಯೇನೋ ಒಂದು ರೂಪಾಯಿ ಹೆಚ್ಚು ಅನ್ನುವ ಹಾಗಿದ್ದರೂ ಮಾಲು ಕೂಡ ಆ ಮಟ್ಟಕ್ಕೇ ಇದೆ. ಅಂದುಕೊಂಡು, ನೂರು ರೂಪಾಯಿಯ ಹೊಸ ಹೊಸ ನೋಟುಗಳನ್ನು ಎಣಿಸಿ ಕೊಟ್ಟು ದನಗಳನ್ನು ತೆಗೆದುಕೊಂಡರು.

ಆ ಕ್ಷಣವೇ ರವೂಡನು ಛಮ ಅಂತ ಕರೆಯುತ್ತಿದ್ದ ಹೋಟೆಲಿಗೆ ತಾನು ಕೂಡ ಹೋಗಿ ಬೋಂಡ, ಟೀ ಕುಡಿದುಕೊಂಡನು, ಅಲ್ಲಿ ಲೋಟ ತೊಳೆಯೋ ಹುಡುಗ ಐದು ಗ್ಲಾಸನ್ನು, ಐದು ಬೆರಳಲ್ಲಿ ಸಿಕ್ಕಿಸಿಕೊಂಡು, ಗರೀಜಿನ ನೀರಿಗೆ ಆ ಐದು ಗ್ಲಾಸನ್ನು ಜಳಕ್ಕನೆ ಮುಳುಗಿಸಿ, ಒಳಗೆ ಲಳಲಳ ನಡುಂಮಾಡಿ ಮೇಲಕ್ಕೆ ಥಳಥಳನೆ ಲೋಟವನ್ನು ತೆಗೆದಿಡುತ್ತಿದ್ದುದನ್ನು ನೋಡಿಕೊಂಡು, ಇವನು ಬರ್ರಿ ಅಂತ ಬಸ್ಸಲ್ಲಿ ಬಂದು, ಊಟದ ಬುತ್ತಿಯನ್ನು ಬಿಚ್ಚುತ್ತ, ಇದ್ದ ಆ ಮುತ್ತುಗದ ಮರವನ್ನು ಹತ್ತಿ ನೋಡುತ್ತಾನೆ – ಆ ಜೀತದ ಮಕ್ಕಳು ಇನ್ನು ಕೂಡ ಪಚ್ಚ ಆಟ ಆಡುತ್ತಿವೆ. ಇವನು ಇಳಿದು ಆ ಮರದ ಕೆಳಗೆ ಮಲಗಿ ಬಾಯಿಯೆರಡು ತುದಿಯ ಆ ಕಡೆಗೆ ಒಂದು ಗೇಣು, ಈ ಕಡೆಗೆ ಒಂದು ಗೇಣು ಜೊಲ್ಲು ಸುರಿಸಿಕೊಂಡ.

ಒಬ್ಬರ ಮೇಲೊಬ್ಬರು ಆ ಜೀತದ ಮಕ್ಕಳು ಬಿದ್ದುಕೊಂಡು ಪಚ್ಚ ಆಟ ಆಡುತ್ತಿದ್ದವು. ಬಿಟ್ಟ ಪಚ್ಚ ಕಾಣಿಸದಾದಾಗ, ಓಹೋ ಕತ್ತಲಾಯಿತು ಅಂದುಕೊಂಡು ಎದ್ದು ತಮ್ಮ ತಮ್ಮ ದನಕರುಗಳಿಗಾಗಿ ಕಾಣುವಷ್ಟು ದೂರಕ್ಕೆ ನೋಡುತ್ತಾರೆ. ಒಂದು ದನವೂ ಕಂಡುಬರಲಿಲ್ಲ. ಆ ಹತ್ತು ಜನರು ಆ ಹತ್ತು ದಿಕ್ಕು ನೋಡಿಕೊಂಡು ಪಾಪನ ಮುತ್ತುಗದ ಮರದ ಹತ್ತಿರ ಬರುತ್ತಾರೆ. ಅಲ್ಲಿ ರವೂಡ ವೇಷ ಹಾಕಿ ಜೊಲ್ಲು ಕರೆಮಾಡಿಕೊಂಡು ಮಲಗಿದ್ದಾನೆ. ಆ ಜೀತದ ಮಕ್ಕಳು ಏನಂತ ಮಾತಾಡಿಕೊಂಡರು: ನಮ್ಮ ನಮ್ಮ ಗೌಡರು ಇನ್ನು ನಮ್ಮನ್ನು ಬಿಡುವುದಿಲ್ಲ. ಎದ್ದೇಳಿದರೆ ರವೂಡನು ಕೂಡ ಬಿಡುವುದಿಲ್ಲ.... ಅಂದುಕೊಂಡು ಹೆದರಿ ಕಾಫಿ ತೋಟಕ್ಕೆ ಹೋಗಿ ಸೇರಿಕೊಂಡರು.

ಕತ್ತಲು ಭೂಮಿಗೆ ತನ್ನ ದಾರದ ಎಳೆಗಳನ್ನು ಬಿಡುತ್ತಿತ್ತು. ಆದರೂ ಇನ್ನೂ ದನಕರುಗಳು ಬಾರದಿರಲು ದಿಗಿಲುಗೊಂಡ ಗೌಡರು, ಗೌಡತಿಯರು, ಗಂಡಸತ್ತ ವಿಧವೆಯರು ಜಮಾಯಿಸಿ ಧೂಳು ಕಾಣಲು ಆತುರವಾಗಿದ್ದರು. ಆ ದಸ್ಸಿಯ ಮಣ್ಣು, ಕಸ ಒಂದುಗೂಡಿ

ಅದು ಯಾಡನಾಗಿ, ಆ ಕಲ್ಲುಮುಳ್ಳು ರಸ್ತೆಯಲ್ಲಿ ಉರುಳುಸೇವೆ ಮಾಡುತ್ತ, ಹತ್ತು ದನ ಎಬ್ಬಿಸುವ ಧೂಳನ್ನು ಅವನೊಬ್ಬನೇ ಎಬ್ಬಿಸುತ್ತ ಉರುಳುತ್ತಾ ಬರುತ್ತಿದ್ದನು. ಇದೇನು ಎಂಬುದರ ವರ್ತಮಾನ ಯಾರಿಗೂ ತಿಳಿಯದಿರಲು, ಎಲ್ಲರಿಗೂ ಒಂದೇ ಸಾರಿ ದಿಗ್ಭ್ರಮೆ ಹಿಡಿದು, ತುಂಬಾ ಕಷ್ಟದವರು ಯಾರೋ ಮಠಕ್ಕೆ ಹರಕೆ ಹೊತ್ತಮಿಂದ ಈ ಸೇವೆ ನಡೆಯುತ್ತಿರಬೇಕೆಂದು ಅಂದಾಜಿಸುತ್ತ ಇರುವಲ್ಲಿಗೆ ಯಾಡನು ಉರುಳಿಕೊಂಡು ಬಂದನು. ಅಲ್ಲಿ ನಾನಾ ರೀತಿಯಲ್ಲಿ ಉರುಳುತ್ತ ಇದೇನಪ್ಪ ಶಿವ ಇದು ಅನ್ನಿಸುತ್ತ ಆ ಮಹಾನುಭಾವ ಯಾಡನ ಷರ್ಟ ಚಡ್ಡಿಗಳು ಯಾವುದು ಇತ್ತೋ ಅವುಗಳಿಗೆ ಮಣ್ಣು ಧೂಳು, ಮಲ, ಮೂತ್ರ, ಸಗಣಿ ಇತ್ಯಾದಿಗಳು ಬಿಡಿಸಲಾಗದಂತೆ ಅಂಟಿತ್ತು. ಅದಿರಲಿ ಅದರೊಳಗಿದ್ದ ಆ ದೇಹವು ರಕ್ತವಾಡುತ್ತ ನೂರ ಎಂಟು ಬಣ್ಣವಾಗಿ ಅದು ನಿಂತಕಡೆ ನಿಲ್ಲದೆ ಉರುಳುತ್ತ, ಆ ನಿಂತವರ ಪಾದಗಳನ್ನು ಹಿಡಿಯುತ್ತಿತ್ತು.

ಬೆವರಿದ ಆ ಜನರು ಬೆಂಕಿಕಡ್ಡಿ ಹಚ್ಚಿ ಬೆಳಕು ಮಾಡಿ ನೋಡಲು ಗುರುತು ಸಿಗದಿರಲು ಆಗ ತುಂಬಾ ಕಷ್ಟದಲ್ಲಿ ಯಾರೊ ಒಬ್ಬ ಬುದ್ಧಿವಂತನಿಗೆ ಮೊದಲು ತಿಳಿದುಬಂದು ಅದು ಯಾಡ ಎಂಬುದು ಅರಿವಾಯಿತು. ಆಗ ಎಲ್ಲರು ಯಾಡನನ್ನು ಎತ್ತಿಕೂರಿಸಿದರು. ಓಡಾಡುತ್ತ ಒಬ್ಬ ನೀರು ತಂದನು. ಇನ್ನೊಬ್ಬ ಯಾಡನ ಬಾಯಿ ಬಿಡಿಸಿದನು. ಆ ಬಿಡಿಸಿದ ಬಾಯಿಗೆ ಮತ್ತೊಬ್ಬ ನೀರನ್ನು ಹನಿಹನಿಯಾಗಿ ಬಿಟ್ಟನು. ಮಗದೊಬ್ಬ ಟವಲ್ಲಿನಿಂದ ಗಾಳಿ ಬೀಸಿದನು.

ತಾಯಿ ಅಕ್ಕಮಹಾದೇವಮ್ಮ ಲಬಲಬ ಬಾಯಿ ಬಡಿಯುತ್ತ ಬಂದು ಉರುಳಾಡುತ್ತ ಇದ್ದ ಯಾಡನ ಮುಂದೆ ಕುಳಿತು ಓಲಾಡಿದಳು. ಎಲ್ಲದಕ್ಕೂ ಯಾಡ ಲಪೋ ಲಪೋ ಲಪ್ಪೋ ಲಪ್ಪೋ ಅನ್ನುತ್ತಿದ್ದ. ಆಗ ಬುದ್ಧಿವಂತನೊಬ್ಬ ಇದು "ಏನನ್ನೋ ಕಂಡು ಹೆದರಿಕೊಂಡಿರುವುದು, ಸ್ವಲ್ಪ ಸಮಯ ಸುಮ್ಮನೆ ಮಲಗಿಸಿ" ಅಂದನು. ಬಳಿ ವಿಲೇನಯವನೊಬ್ಬನು ಬೇವಿನಸೊಪ್ಪು ತಂದು ದೃಷ್ಟಿ ತೆಗೆದು ಹಾಗೇ ಯಾಡನ ಶರೀರದ ಮೇಲೆ ನವಿರಾಗಿ ಸವರುತ್ತ "ಬಿಟ್ಟಿತು ಎನ್ನು" ಎಂದು ಸೊಪ್ಪಿನಿಂದ ಸವರುತ್ತ ಹಿಡಿದಿರುವುದನ್ನು ಬಿಡಿಸುತ್ತಿದ್ದನು. ಬಿಡಿಸಿದ ನಂತರ 'ಅದೇನು ನೋಡಿದಿಯಪ್ಪ' ಅಂದರೆ ಅದಕ್ಕೂ ಕೂಡ ಯಾಡ ಲಪೋ ಲಪೋ ಲಪ್ಪೋ ಲಪ್ಪೋ ಎಂದು ಒದರುತ್ತಿದ್ದಂತೆ ಊರಾಗಿದ್ದ ಊರೆ ನೋಡುತ್ತ ನಿಂತಿತ್ತು.

ಅಕ್ಕಮಹಾದೇವಮ್ಮ ದು:ಖದ ಹೊಳೆಯಾಗಿ, ಒಂದು ದಿಕ್ಕಿಗೆ ಕೈ ತೋರಿಸುತ್ತ "ನಮ್ಮ ಅಭಿವೃದ್ಧಿಯನ್ನು ಸಹಿಸಲಾಗದವರು ಮಾಡಿರುವ ಮಾಟಮಂತ್ರವಿದು.... ಇದು ಅಂತಿಂಥದಲ್ಲ ....." ಎನ್ನುತ್ತ, ನೆಲವನ್ನು ಸಾರಿಸುತ್ತ ಓಲಾಡುತ್ತಿದ್ದಳು.

ಈ ದೃಶ್ಯವ ನಿದ್ದೆಬಂದು ಆ ಜನಕ್ಕೆ ಗುಡ್ಡವವರೆಗೂ ನಡೆದು, ಅಲ್ಲಿ ನಿಂತವರು ತಲಾ ಒಂದು ಸಾರಿಯಾದರೂ 'ಅದೇನೊ ಯಾಡ?' ಅಂತ ಕೇಳಿ ಕೇಳಿ ಸುಸ್ತಾಗಿ ಕೊನೆಗೆ ಯಾಡನು ನಮ್ಮ ಅಡುಕಬಿ, ದನ ಅಂತ ಉಸಿರುಬಿಟ್ಟನು. ಅಕ್ಕಮಹಾದೇವಮ್ಮನಾಗ ಜೀವವನ್ನು ಹಿಡಿದುತಾಗಿ ಸಾರಿಸುವುದು, ಕುಟ್ಟುವುದು ನಿಲ್ಲಿಸಿ ದಿಗ್ಭ್ರಮೆಗೊಂಡಳು. ಸುತ್ತಲು ಜನ ತುಂಬಿದ್ದರಿಂದ ಗಾಳಿಯಾಡಲು ಕಷ್ಟವಾಗಿ ಉಸಿರು ಸಿಕ್ಕಿಕೊಂಡಿರಲು ಆಗ ಯಾಡನು.

"ನನಗೆ ಭೇದಿ ಆಯಿತು. ಜೀತದ ಮಕ್ಕಳಿಗೆ ನೋಡಿಕೊಳ್ಳಿ ಅಂತ ಹೇಳಿ ನಾನು ಕಕ್ಕಸ್ಸಿಗೆ ಹೋದೆ. ಅದೇಕೋ ಸುಸ್ತಾಯಿತು. ಬಂದವನು ಮುತ್ತುಗದ ಮರದ ನೆರಳಲ್ಲಿ ಮಲಗಿಕೊಂಡೆ. ಅದೇಕೊ ಕಾಣೆ ನನಗೆ ಮಾಯದ ನಿದ್ದೆ ಬಂದು ಒರಗಿಕೊಂಡಿತು. ನಿದ್ದೆ ಮುಗಿದು ಕಣ್ಣು ಬಿಟ್ಟೆ.... ನನ್ನ ನೆತ್ತಿ ಬಿಕೋ ಅನ್ನುತ್ತಿತ್ತು...." ಅಂದನು.

ಆ ನಿಂತ ಕುಳಿತ ದನಗಳ ವಾರಸುದಾರರು ಕುಸಿದು ಕೂರಲು, ಆಗ ಅಕ್ಕಮಹಾದೇವಮ್ಮ ಒಂದೇ ಉಸಿರಿಗೆ ಎದ್ದು, ಬೇಲಿಯಲ್ಲಿ ಒಂದು ಆಳುದ್ದದ ಲಕ್ಕಿ ಕಡ್ಡಿಯನ್ನು ಪಟಪಟನೆ ಮುರಿದು ತಂದು, ತನ್ನ ಎಲ್ಲಾ ಉಸಿರನ್ನು ಸೇರಿಸಿ ಯಾಡನಿಗೆ ರಪ್ಪ ರಪ್ಪನೆ ಬಡಿಯುತ್ತಿದ್ದಾಗ ತಡೆಯಲು ಬಂದವರಿಗೂ ಕೆಲವು ಏಟುಗಳು ಬಿದ್ದವು. ಬುದ್ಧಿವಂತನೊಬ್ಬ ಈ ರೋಷವನ್ನು ತಡೆದು ಹೇಳಿದ!

ಅಯ್ಯೋ ಮರುಳೇ, ನಿನ್ನ ಮಗ ಬದುಕಿಬಂದಿರುವುದೇ ನಿನ್ನ ಪುಣ್ಯ. ಆ ಜೀತದ ಮಕ್ಕಳು ಎಲ್ಲಿ ಹೋದವೋ, ಏನಾದವೋ. ನೀನು ಮಾಡಿದ್ದ ಧರ್ಮ ಅವನನ್ನು ಉಳಿಸಿದೆ. ಎಲ್ಲರಿಗೂ ಆದದ್ದು ನಿನಗೂ ಆಗುತ್ತೆ. ಸಮಯ ಅನ್ನುವುದು ಕುತ್ತಿಗೆಗೆ ಬಂದು ಕುಳಿತಾಗ ನನ್ನದು ಕೊಡು, ತನ್ನದು ಕೊಡು, ಅಂತ ಯಾರಾದರೂ ಹೇಳಿದರೆ, ಮೇಲಿನ ದೇವರು

ಅದನ್ನು ಬಿಡುವನೆ? ಈಗ ಹುಡುಗ ಹೆದರಿಕೊಂಡಿದೆ. ರತನೀರು[*] ಮಾಡಿ ಒಳಕ್ಕೆ ಕರೆದುಕೊ....." ಅಂದವರ ಕಾಲಿಗೆ ಅಕ್ಕಮಹಾದೇವಮ್ಮ ಬಿಗಿಹಿಡಿದು ಬಿದ್ದಳು —

"ಅಪ್ಪ ದೇವರೆ.... ನಾನು ಋತುಮತಿ ಆದಾಗಿಂದಲು ಒಂದು ಸಣ್ಣ ಮಗುವಿನ ಕೈಯಲ್ಲೂ ಬೆರಳು ತೂರಿಸಿಕೊಂಡು ಜೀವನ ಮಾಡಲಿಲ್ಲ. ಮನೆ ಒಳಗೆ ಒಬ್ಬರೂ ತರುವವರಿಲ್ಲ.... ಒಬ್ಬರೂ ಬರುವವರಿಲ್ಲ.... ಇಂಥ ಕಡೆ ನಾನು ಒಂದು ಧೂಪವನ್ನಾದರೂ ಹಾಕಿಕೊಂಡು... ಒಂದು ದೀಪವನ್ನಾದರೂ ಹಚ್ಚಿಕೊಂಡು..... ಅವರ ಹೆಸರನ್ನ ಹೇಳಿಕೊಂಡು, ಹೇಗೋ ಜೀವ ಹಿಡಿದುಕೊಂಡಿರುವ ನನಗೀಗ..... ಈ ಮಗನಿಂದಾಗಿ......" ಅನ್ನುತ್ತ, ಆ ಹಿಡಿದ ಕಾಲುಗಳ ಹಿಡಿತವನ್ನು ಬಿಡದಿರಲು, ಅವರು ಅವಳ ಮೈದಡವುತ್ತ ಮೇಲೆತ್ತಿ ನಿಲ್ಲಿಸಿದರು. ಅಕ್ಕಮಹಾದೇವಮ್ಮ ಯಾಡನಿಗೆ ಹಾಗೂ ಬಡದೆ ಗುದ್ದುತ್ತ ನಡೆದಳು. ನಡೆದಂತ ಮಾಯ ಯಾರಿಗೂ ತಿಳಿಯದೆ, ಧನಗಳನ್ನು ಇಟ್ಟುಕೊಂಡು ಒಬ್ಬ ಧನಿಕ ಎನ್ನಿಸಿಕೊಂಡವನಿಗೆ ಮನೆಯಲ್ಲಿ ಊಟಮಾಡುವುದಕ್ಕೆ ಅಂತ ಕುಳಿತರು. ಅದು ಹೊಟ್ಟೆಗೆ ಇಳಿಯದಾಯಿತು.

ಆ ನಡುರಾತ್ರಿಯಲ್ಲಿ ಅಕ್ಕಮಹಾದೇವಮ್ಮ ನಾಳಿನ ಇಡ್ಲಿಗೆ ಹಿಟ್ಟನ್ನು ತನ್ನ ಸೋತ ಕೈಗಳಿಂದಲೆ ರುಬ್ಬುತ್ತ, ಗೋಳಾಡುತ್ತಲೆ ಕೈಯಾಡಿಸುತ್ತಿದ್ದಳು. ಅಲ್ಲಿಗೆ ಯಾಡನು ತೆವಳುತ್ತ ಬಂದು ಕಣ್ಣುರೆಪ್ಪೆ ಬಿಕ್ಕದು ದೊಡ್ಡದು ಮಾಡುತ್ತ ಆ ಸೀಮೆಎಣ್ಣೆ ದೀಪದ ಬೆಳಕನ್ನು ಮುಂದುಗೊಳಿಸಿದ. ತಾಯಿಯು ಮಗನ ಮೈಯಲ್ಲಿನ ಲಕ್ಕಡಿ ಏಟಿನ ಬಾಸುಂಡೆಯನ್ನು ನವರುತ್ತ "ಮೊದಲೆ ಹೇಳುವುದಕ್ಕೆ ಏನಾಗಿತ್ತಪ್ಪ ಮಟ್ಟ...." ಎಂದಳು. ಯಾಡನು "ನಾನೇನಾದರೂ ಮೊದಲೆ ತಿಳಿಸಿಬಿಟ್ಟು.... ನೀನು ನನಗೆ ಹೊಡೆದಾಗ ಅಳಬಾರದೆ ಇದ್ದರೆ ಆಮೇಲೆ...." ಅಂತ ಅನ್ನುತ್ತ, ಎಡಗಡೆಯ ಜೇಬು ಲಾಡಿಯ ಮಾತ್ರ ಹಿಡುಕುತ್ತ, ನೂರು ನೂರು ರೂಪಾಯಿಗಳನ್ನು ಒಂದಾದ ಮೇಲೆ ಒಂದನ್ನು ಹೊರಗೆ ಬಿಸುತ್ತ, ಜೊತೆಗೆ ಆ ನೋಟಿಗೆ ಅಂಟಿಕೊಂಡಿದ್ದ ಕೂರೆ[**] ಮುಂತಾದವು, ಆ ದುಡ್ಡಿನ ಆಸೆಗೆ ಪ್ರಾಣಬಿಟ್ಟರು ದುಡ್ಡನ್ನು ಬಿಡುವುದಿಲ್ಲವೆಂದು ಅವು ಇಣುಕುತ್ತ ಬಂದವು.

---

[*] ರತನೀರು — ಬೆಡ್ಡುವಿಕೆಯ ಪರಿಹಾರಕ್ಕಾಗಿ ತಟ್ಟೆಯಲ್ಲಿ ಕೆಂಪುನೀರು ಮಾಡಿ ಎಣ್ಣೆಯಲ್ಲಿ ಅದ್ದಿದ ಬತ್ತಿಯನ್ನು ಪಕ್ಕಕ್ಕಿಟ್ಟು ಆರತಿ ಮಾಡಿ ಎಡಗೈ ಹೆಬ್ಬೆಟ್ಟಿನಿಂದ ಆ ನೀರಿನ ಬೊಟ್ಟನ್ನು ಹೆದರಿದ ವ್ಯಕ್ತಿಯ ಹಣೆಗಿಟ್ಟು ಉಳಿದ ನೀರನ್ನೆಲ್ಲ ಹಾದಿಯ ನಡುವೆ ಹರಡುವ ಒಂದು ಆಚರಣೆ.

[**] ಕೂರೆ — ಕೊಳಕು ಬಟ್ಟೆಗಳಲ್ಲಿ ಹುಟ್ಟಿಕೊಳ್ಳುವ ಒಂದು ಜಾತಿಯ ಕ್ರಿಮಿ.

ಅವಾಗ ಅಕ್ಕಮಹಾದೇವಮ್ಮನಿಗೆ ಮದುವೆಗೆ ಬಂದಂಥ ತನ್ನ ಮಗನನ್ನು ತನ್ನ ಕೆಟ್ಟ ಕೈಗಳಿಂದ ಕಣ್ಣುಕಾಣದೆ ಹೊಡೆದುದಕ್ಕಾಗಿ ದುಃಖವು ಉಕ್ಕಿಬರಲು " ಅಯ್ಯೋ ನನ್ನಪ್ಪಾ... ನಿನಗೆ ಮುಖ, ಮೂತಿ, ಮೈ ಅಂತ ನೋಡದೆ ಹೊಡೆದೆನಲ್ಲಪ್ಪ, ಈ ನನ್ನ ಕೆಟ್ಟ ಕೈಗಳು.... ಇವು ಯಾವಾಗ ನಾಶವಾಗುವವು ....." ಎಂದು ಅಳುತ್ತಿದ್ದಳು.

ಆಗ ಯಾಡನಿಗೆ ಏಕೋ ದುಃಖವು ಉಕ್ಕಿಬಂದು ದುಃಖಿಸಿದನು. ಆ ದುಃಖವು ಅವನ ಮೈಪೂರ್ತಿ ಉಂಟಾಗಿ, ಗೋಳೋ ಎಂದು ಹೊರಬಂದು ಆ ಗುಡಿನಿಂದಲೂ ಎದ್ದು ಆ ಊರನ್ನು ಆವರಿಸಿಕೊಂಡು, ಆ ಊರಿಂದಲೂ ಎದ್ದು ಮುಗಿಲನ್ನು ಮುಟ್ಟಿತು.

ಈ ಕಡೆ ನಡುರಾತ್ರಿಯಲ್ಲಿ ಮಂಚದ ಮೇಲೆ ದೇಹವಿರಿಸಿದ್ದ ಸೋಮಪ್ಪನವರು ದೇಹವನ್ನು ಅದರೊಳಗಿದ್ದ ಆತ್ಮವು ಇರುವಲ್ಲಿ ಇರಗೊಡದೆ ಎತ್ತಿ, ಬೀಸಾಕುತ್ತ, ಮಂಚಕ್ಕೂ ಮೈ ನೋವಾಗಿ ಸಾಕಪ್ಪ ಈ ಜನ್ಮ ಅನ್ನಿಸಿತು. ಆ ಮಂಚವು ತಲೆಯನ್ನು ಎತ್ತಿ, ದಾಡ ನೋಡಿ.. ನೋಡಿ ಅದರ ಕುತ್ತಿಗೆಗೆ ಸೆಳೆತ ಬಂದು ಸೋಮಪ್ಪನವರು ಕಣ್ಣುಗಳ ಬಿಟ್ಟುಕೊಂಡು ಇರುವ ಕಾರಣವಾಗಿ ಮಂಚಕ್ಕೆ ಏನಾದರು ಮಾತು ತೆಗೆಯಲು ಸಾಧ್ಯವಾಗದೆ ಅದರ ಮಡುಗಟ್ಟಿದ ಸಂಕಟವು ಹೇಳತೀರದಾಗಿತ್ತು.

ಸೋಮಪ್ಪನವರು ಸಂಕ್ರಾಂತಿ ಹಬ್ಬದಂದು ಬಡವರಿಗೆ ದಾನಧರ್ಮ ಮಾಡಲು ಸಾವಿರ ಸೀರೆಗೆ ಆರ್ಡರಕೊಟ್ಟಿದ್ದರು. ಇಂದು ಬರಬೇಕಾದ ಲಾರಿಯು ಬಾರದೆ ಅವರ ಉಸಿರಾಟವು ಏರುಪೇರಾಗಿ, ನಿದ್ದೆಯಲ್ಲೂ ಕಣ್ಣುಗಳು ಸೀರೆಗಳನ್ನು ನೋಡುವ ಆತುರದಲ್ಲಿ ಓಡಾಡುತ್ತ .... ನಾಳೆಗೆ ಸಾವಿರ ಸೀರೆಗಳು ಬಂದು.... ಆ ಒಂದೊಂದು ಸೀರೆಯು ಹದಿನಾರು ಮೊಳ ..... ಆ ಸಾವಿರ ಸೀರೆಗೆ ಹದಿನಾರು ಸಾವಿರ ಮೊಳವಾಗಿ..... ಅದರ ಒಂದು ತುದಿಯಲ್ಲಿ ಊರು ಸುತ್ತಾ ಸುತ್ತಿಸಿಕೊಂಡು..... ಆಗ ಈ ತುದಿಯು ಆ ತುದಿಯು ಕೂಡಿ ಆ ಊರಾಗಿದ್ದ ಊರನ್ನು ಸುತ್ತುವರೆದಂತೆ.... ಆ ನಗುವು ಅವರ ನಿದ್ದೆಯನ್ನು ಕೊಲ್ಲುತ್ತಿತ್ತು. ಈಗ ಸುಖವಾಗಿ ಯೋಚಿಸುತ್ತ, ಸೋಮಪ್ಪನವರ ಬಿಟ್ಟ ಕಣ್ಣುಗಳ ಸುತ್ತಲು ಆವಿಸುತ್ತಿದ್ದ ಕಪ್ಪಿಗೆ ಇನ್ನೊಂದು ಗೆರೆಯನ್ನು ಕಾಲಚಕ್ರವು ತನ್ನ ಟೈಮಿಗೆ ಕರಾರುವಕ್ಕಾಗಿ ಅರಿವಾಗದಂತೆ ಗೆರೆ ಎಳೆದು ಡ್ಯೂಟಿ ಮುಗಿಸಿತು.

ಇದಾದ ನಾಳಿಗೆ ಆ ಕಾಲಚಕ್ರವು ತನ್ನ ಟ್ರಿಮಿಗೆ ಬಂದು ಸೋಮಪ್ಪನವರ ಕಣ್ಣು ಬಳಿಯು ಸುತ್ತಲ ಕಪ್ಪಿಗೆ ಇನ್ನೊಂದು ಗೆರೆಯನ್ನು ಎಳೆಯುವ ಕಾಲದಲ್ಲಿ ಸಾವಿರ ಸೀರೆಗಳು ಬಂದು ಮನೆ ತುಂಬಿದಾಗ ಸೋಮಪ್ಪನವರು ಎಂದೂ ಇಲ್ಲದಷ್ಟು ಸರ್ವವನ್ನು ಮರೆತು ನಿದ್ದೆಹೋಗಿದ್ದರು. ಅದರಿಂದಾಗಿ ಅವರ ಆತ್ಮವು ಎದ್ದು ಸೋಮಪ್ಪನವರ ತಲೆಯ ಬಳಿ ಸಂತೋಷವಾಗಿ ಕುಳಿತಿತು. ಆಗ ಮಂಚಕ್ಕೆ ಬಲು ಆನಂದವಾಗಿ, ಸುಮ್ಮನೆ ಸ್ವಂಟಾಗಿ ಬಾಯಲ್ಲಿ ಉಸ್ಸಪ್ಪ.... ಎಂದು, ಆ ಮಾಮೂಲ ಒಯ್ಯಾರದಲ್ಲಿ ಕತ್ತನ್ನು ಆಡಿಸುತ್ತ, ನಾನೇ ಹೇಳಬೇಕಾದರೆ ಅದು ಕೇಳದೆ ಇರುತ್ತದೆಯೆ ಎಂಬ ಅಹಂಭಾವದಿಂದ ಹೇಳತೊಡಗಿತು;

ಎಲ್ಲಿಗೆ ನಿಲ್ಲಿಸಿದ್ದೆಂದು ನಾನು? ಇಂಥ ಕಡೆ ಇರುವುದಕ್ಕೆ ಏನು ಪಾಪ ಮಾಡಿದ್ದೇನೊ ನಾನು..... ಅನ್ನುವರಿಲ್ಲಗೆ ತಾನೇ? ನನ್ನ ಬೊಂಬೆ ರೀತಿ ಮಾಡಿಸಿದನಲ್ಲ ಆ ಪುಣ್ಯವಂತ ದೊರೆ. ..... ಅವನನ್ನು ಈ ತಂಪಾದ ಸಮಯದಲ್ಲಿ ನೆನಪಿಸಿಕೊಳ್ಳಬೇಕು. ಅವನು ಇರುವತನಕ ಗಿಣಿಗಿಂತಲೂ ಸ್ವಲ್ಪ ಹೆಚ್ಚು ಅನ್ನುವ ರೀತಿ ನನ್ನನ್ನ ನೋಡಿಕೊಂಡರು. ಅವನ ಮಗ ಬಂದನಲ್ಲ ಅವನ ಕಾಲದಲ್ಲೂ ಪರ್ವಾಗಿಲ್ಲ, ಇರುವುದನ್ನು ಇಲ್ಲ ಅಂತ ನಾನು ಸುಳ್ಳನ್ನು ಹೇಳಿದರೆ ಆ ಮೇಲಿರುವ ದೇವರು ಮೆಚ್ಚುತ್ತಾನೆಯೆ? ಇವನಾದ ಮೇಲೆ ಇವನ ಮಗ ಪಟ್ಟಕ್ಕೆ ಬಂದನೋ ಅಥವಾ ಚಟ್ಟಕ್ಕೆ ಬಂದನೋ..... ಈ ನನ್ನ ಮೊಮ್ಮಗನ ದೆಸೆಯಿಂದ ಎರಡು ವರ್ಷಕ್ಕೆ ಎರಡು ಲೋಕ ಕಂಡುಬಿಟ್ಟೆ ನಾನು. ಇವರಮ್ಮ ಗರ್ಭಿಣಿ.... ಅವನನ್ನ ನನ್ನ ಮೇಲೆ ಹೊತ್ತು ಹೆತ್ತು.... ಅದನ್ನ ಈಗಲು ನೆನಪಿಸಿಕೊಂಡರೆ ಆ ವಾಸನೆ ನನ್ನ ಮೂಗಿಗೆ ಬಡಿದಂತಾಗುತ್ತದೆ. ಇದೇನಾದರು ಅವನಿಗೆ ನೆನಪಿದೆಯೆ? ಆ ಮುಟ್ಠಾಳನಿಗೆ ಈ ನೆನಪಿದ್ದರೆ ನಾನೇಕೆ ಇಲ್ಲಿಗೆ ಬಂದು ಚಿಂತೆ ಮಾಡಬೇಕಿತ್ತು. ಅದಿರಲಿ ಅವನು ನಿಂತ ಕಡೆ ನಿಲ್ಲುತ್ತಿರಲಿಲ್ಲ. ಒಂದೇ ಉಸಿರಿಗೆ ಪಿಶಾಚಿ ಸುತ್ತುವ ಹಾಗೆ ದೇಶ ಸುತ್ತುತ್ತಿದ್ದ. ಇಲ್ಲಿ ಅವನ ಹೆಂಡತಿ, ಒಂದು ಸಾರಿ ಒಬ್ಬನ ಜೊತೆ ಮಲಗಿದರೆ ಪುನಃ ನಾಳಿಗೆ ಇನ್ನೊಬ್ಬ ಆಗಬೇಕು.... ಅಂಥ ಚಟದವಳು. ಒಂದು ಸಾರಿ ಈ ನನ್ನ ಮಗ ಆ ದೇಶ ಈ ದೇಶ ಅಂತ ಸುತ್ತಿಕೊಂಡು ಸಮುದ್ರದ ಆಚೆಗೂ ಕೆಲಸವಿಲ್ಲದೆ ಹೋಗಿದ್ದನಂತೆ, ಅವನಿಗೆ ಮೃತ್ಯು ಬಂದು ನಾಶವಾಗವನು. ಅಲ್ಲಿಂದ ಬಂದವನು ಒಂದು ಶಿಷ್ಟಚಾರವನ್ನಾದರೂ ಕಲಿತುಕೊಂಡು ಬಂದನೆ ಅವನು? ನನ್ನನ್ನು ನೋಡಿದ ಅಂದರೆ ಛೀ ಥೂ ಗಿಂಯೋನು. ಈ ಯೋಚನೆ ಅನ್ನುವುದು ಇಲ್ಲದಿದ್ದರೆ ನನ್ನ ಈ ಜೀವನ ಹೇಗಿರುತ್ತಿತ್ತೊ.

ಆ ದೇವರು ಕೊನೆಗೂ ಒಂದು ದಿನ ಅಲ್ಲಿಂದ ಬೇರೆ ಆಗುವ ಮುಕ್ತಿ ದೊರಕಿಸಿ ಕೊಟ್ಟ. ಕೊನೆಗೊಂದು ದಿನ ನನ್ನನ್ನ ತಂದು ಹರಾಜಿಗೆ ಎಸೆದರು. ಎಂದೂ ಬಿಸಿಲು ಕಾಣದವಳು ನಾನು.... ಹೀಗಾಗಿ ಆ ಬಿಸಿಲಿಗೆ ಮೂರ್ಛೆರೋಗ ಬಂದಂತಾಯಿತು ನನ್ನ ಜೀವಕ್ಕೆ.... ಆಮೇಲೆ ಆ ಜನರೋ ಅಲ್ಲ ದನರಾ ಮೆರವಣಿಗೆ ನೋಡುವುದಕ್ಕಿಂತ ಹೆಚ್ಚಾಗಿ ನಿಂತಿದ್ದರು. ನನ್ನನ್ನ ಮುಟ್ಟಿ ನೋಡುವವರು ಎಷ್ಟು ಜನರೋ.... ನನ್ನನ್ನ.....

ಒಬ್ಬ ಪೇಟವನ್ನ ಹಾಕಿಕೊಂಡು ಆ ಪೇಟಕ್ಕೆ ಹಕ್ಕಿಯ ಪುಕ್ಕದ ಕುಚ್ಚು ಕಟ್ಟಿಕೊಂಡು ಆ ಜಮಾಧಾರಿ* ಕುಣಿಯುತ್ತ 'ಜೀ ಹುಜೂರ ಸವಾಲ ನೂರು ರೂಪಾಯಿ' ಅಂತ ಪಾದದಿಂದಲು ಬಲವನ್ನ ಎಳೆದುಕೊಂಡು ಬಾಯಿಂದ ಕೂಗುತ್ತಿದ್ದ. ಅದಕ್ಕೆ ಹತ್ತುಜನ, ಹೋರಾಡುತ್ತ ಸಾವಿರದವರೆಗೆ ಏರಿತು..... ಏನು? ರೇಟು! ಈ ಪೈಪೋಟಿಯ ಕಣ್ಣಿಗೆ ಒಂದು ಹಬ್ಬದಂತೆ ಕಾಣುತ್ತಿತ್ತು.

ಆ ಕತೆ ಅಲ್ಲಿ ಆ ರೀತಿ ಆಗುತ್ತಿದ್ದರೆ, ಇಲ್ಲಿ ನನ್ನ ಕತೆ ಇನ್ನೊಂದು ರೀತಿಯಾಯಿತು. ನನ್ನ ಹತ್ತಿರ ಏನು ಕಾಣಿಸಿತೋ, ಅವನ ಮುಖಕ್ಕೆ ಉಗಿಯುವುದಕ್ಕೂ ಮನಸ್ಸಾಗದು ನನಗೆ. ಯಾವುದಕ್ಕೂ ಬೇಡದವನು, ಆ ಜುಬ್ಬ, ಷರ್ಟ, ಷರ್ಟಿನ ಮೇಲೆ ಒಂದು ಟವಲ್ಲ ಹಾಕಿ ಕೊಂಡಿದ್ದವನು ನನ್ನ ಸುತ್ತಲೂ ಸುಮ್ಮನೆ ಸುತ್ತುತ್ತಿದ್ದ. ಇದೇನು ಇವನಿಗೆ ಇಷ್ಟೊಂದು ಧಿಮಾಕು ಅಂತ ನೀವು ಅಂದುಕೊಂಡರು ಸರಿಯೇ.... ನನ್ನಾಣೆಯಾಗು ಆ ದಿನವೆ ನನಗೆ ಜುಬ್ಬ, ಷರ್ಟ ಅನ್ನುವುದು ಗೊತ್ತಾಗಿದ್ದು..... ಅವನು ನನ್ನ ಮೆಲ್ಲಗೆ ಸವರಿದರು ಕೂಡ ನನಗೆ ಗರಗಸ ತೆಗೆದುಕೊಂಡು ಕುಯ್ಯುವ ರೀತಿ ಆಗುತ್ತಿತ್ತು. ಅದಿರಲಿ ಬೇಕಾದರೆ, ಅವನ ಕೈ ವಾಸನೆ.... ನೂರು ಜನರನ್ನ ಒಂದೇ ಸಾರಿ ಹೆತ್ತವಳ ರೀತಿ ಗಬ್ಬು ವಾಸನೆ ಹೊಡೆಯುತ್ತಿತ್ತು. ಅವನ ವರ್ಣನೆಗೂ.... ಅವನು ನನ್ನ ಸುತ್ತುವ ಭಾವಕ್ಕೂ ಆ ಜನರಿರಲಿ, ಆ ಜಮಾಧಾರಿ ಕೂಡ ನಗುತ್ತಿದ್ದ. ಅವನು ನನ್ನ ಸುತ್ತಲೂ ಸುತ್ತುತ್ತಿದ್ದನಲ್ಲ... ಬೇಕಾದರೆ ಸುಮ್ಮನೇ ಸುತ್ತಲಿ. ಆದ್ರೆ ಕೇಳು...... ಮೂಸಿ ನೋಡುತ್ತಿದ್ದ ಆ ಮುಟ್ಠಾಳ. ಆದರೂ ನಾನು ಏನೂ ಮಾಡುವ ಹಾಗಿರಲಿಲ್ಲ. ಏಕೆಂದರೆ ನಾನು ಬಂದು ಬಿದ್ದಿರುವುದು ನೋಡಿದರೆ ಹರಾಜಿಗೆ.

*ಜಮಾಧಾರಿ — ಹರಾಜು ಕೂಗುವವನು.

ಆ ಜಮಾದಾರಿ ಎಂದೂ ನಗುವನ್ನೇ ಕಂಡಿರಲಿಲ್ಲವೇನೋ. ಅವನ ದೊಡ್ಡ ಹೊಟ್ಟೆ ತುಂಬ ನಗುವನ್ನು ತುಂಬಿಸಿಕೊಂಡು ಉಕ್ಕಿಸುತ್ತ 'ಏನಯ್ಯ! ಯಾವ ಊರು?' ಅಂದನು. ಅದಕ್ಕೆ ಇವನು ಇಂಥ ಊರು, ಇಂಥ ಬೀದಿ ಎನ್ನಬಾರದೆ? ಇವನು ಹೇಳುವುದೇನು?...... ಪೂರ್ವದ ಕಡೆಗೆ ಕೈ ತೋರಿಸುತ್ತ 'ಈ ಕಡೆ ಇರುವ ಊರು ಎನ್ನುವುದೆ! ಅದಕ್ಕೂ ಆ ಜಮಾದಾರಿ ಹೊಟ್ಟೆಗೆ ತುಂಬಿಕೊಂಡ ನಗು ಸೇರಿ, ಅವನು ತನ್ನೆರಡೂ ಕೈಗಳಲ್ಲಿ ಹೊಟ್ಟೆ ಹಿಡಿದುಕೊಂಡು ನಗುತ್ತಾ ಕುಳಿತುಕೊಂಡಾಗ.... ಆ ಸುತ್ತ ಇದ್ದ ಜನ ಚಪ್ಪಾಳೆ ತಟ್ಟುತ್ತ ನಗುತ್ತಿತ್ತು. ಅಣ್ಣ ನೀನು ಏನಾದರೂ ತಿಳಿದುಕೋ ನಾನು ಬಂದು ಬಿದ್ದಿರುವುದು ನೋಡಿದರೆ ಹರಾಜಿಗೆ ಎಸೆದಿರುವ ಹಳಸಲು ಅನ್ನ. ಅಂಥ ನನಗೂ ಕೂಡ ನಗು ಉಕ್ಕಿ ಬರುತ್ತಿತ್ತು.

ಆ ಪೇಟವನ್ನು ಅದರ ಮೇಲಿನ ಕುಚ್ಚನ್ನು ಕಾಣುತ್ತ ಆ ಜಮಾದಾರಿ ಕುಣಿಯುತ್ತಲೇ "ಏನಯ್ಯ? ಏನು ಹೆಸರು?" ಅಂದನು. ಆಗ ಆ ವೇಷದವನು ತನ್ನ ಎರಡು ಕೈಗಳನ್ನೂ ಆಂಜನೇಯಸ್ವಾಮಿ ರೀತಿ ಎದೆ ಮುಂದಕ್ಕೆ ತಂದುಕೊಂಡು ಮುಂಗೈ ಬೆರಳು ಕೆಳಗೆಬಿಟ್ಟು ನಡುಗಿಸುತ್ತ "ಯಾಡೀಗೌಡ ಅಂತ ಊರಲ್ಲಿ ಕರೆಯುತ್ತಾರೆ ಸ್ವಾಮಿ" ಅಂದನು. ಅವನ ವೇಷಕ್ಕೆ, ಅವನ ಮಾತಿನ ಭಾವಕ್ಕೆ ನನಗೆ ನಗು ಬರುತ್ತಿರಬೇಕಾದರೆ ಇನ್ನು ಉಳಿದವರು ನಗುವುದರಲ್ಲಿ ತಪ್ಪೇನಿದೆ..... ಈ ಖುಷಿಗೆ ಆ ಜಮಾದಾರಿಗೆ ಸುಮ್ಮನಿರಕ್ಕಾಗದೆ "ಈ ಮಂಚದ ಮೇಲೆ ನಿನಗೆ ಆಶೆ ಉಂಟೇನಯ್ಯ?" ಅಂದನು. ಅವನ ಹೆಸರೇನು? ಯಾಡೀಗೌಡ ಏನೋ ಅಂತಲ್ಲವೆ..... ಆ ನನ್ನ ಮೊಮ್ಮಗ ಸುಮ್ಮನಿರದೆ ಆಶೆ ಏನೋ ಉಂಟು ಸ್ವಾಮಿ. ಆದರೆ ನನ್ನ ಕೈಯಲ್ಲಿ ಕೊಳ್ಳುವಷ್ಟು ಶಕ್ತಿ ಇಲ್ಲವಲ್ಲ" ಅಂದನು.

ಈ ಸಮಯಕ್ಕಾಗಲೇ ಅವನ ವೇಷಕ್ಕೆ ಅರ್ಧ ಜನ, ಅವನ ಮಾತಿನ ಭಾವಕ್ಕೆ ಇನ್ನರ್ಧ ಜನ ತಮ್ಮನ್ನೇ ಮಾರಿಕೊಂಡುಬಿಟ್ಟಿದ್ದರು. ಅವರು ನಕ್ಕ ನಗುವೇನೂ ಬೀದಿಯಲ್ಲಿ ಪುಕ್ಕಟೆ ಬಿದ್ದಿತ್ತೇ ಅಣ್ಣ? ತಾಳು, ಜೇಬಲ್ಲಿ ಸಾವಿರ ರೂಪಾಯಿಯ ನೋಟು ಇದೆ, ಪೇಟೆ ಬೀದಿಯಲ್ಲಿರುವ ದೊಡ್ಡ ಅಂಗಡಿಯಲ್ಲಿಯೇ ನಗುವನ್ನು ಖರೀದಿಸಿಕೊಂಡು ಬರುತ್ತೇನೆ ಅನ್ನುವಾಗಿತ್ತೆ? ಕನಸಲ್ಲೂ ನಗುವುದಕ್ಕೆ ಆಗುತ್ತದೋ ಇಲ್ಲವೋ ಅನ್ನುವ ಆ ಕಾಲದಲ್ಲಿ, ಅವರು ನಕ್ಕ ನಗುವಿಗೆ ಎಷ್ಟು ಸಾವಿರ ಕೊಟ್ಟರೂ ತಾನೆ ಸಮಾನವಾಗಲು ಸಾಧ್ಯವೆ? ಇದು ಇಲ್ಲಿಗೆ ತಮಾಷೆಯಲ್ಲಿ ಮುಗಿಯುವುದಿಲ್ಲ ಎನ್ನಿಸಿತು.

.... ನಾನು ನತದೃಷ್ಟ, ಯಾವ ಸಮಯದಲ್ಲಿ ಏಕಾದರೂ ಹಾಗಂತ ನೆನೆದು ಕೊಂಡೆನೋ ಕಾಣೆ, ನಗುವ ಜಮಾದಾರಿ ಗಂಭೀರವಾಗಿ ನಿಂತು ಬಲಗೈ ಮೇಲಕ್ಕೆತ್ತಿ, ಎಡ ಗೈಯನ್ನು ಪೂರ್ವದ ಕಡೆಗೆ ತೋರಿಸುತ್ತಾ, ಕುಣಿಯದೇ ಏನು ಹೇಳಿದ ಅಂದರೆ:

“ ನೋಡಿ ಮಹಾಜನಗಳೇ...... ನನ್ನ ಎಡಗೈ ಕಡೆ ಇರುವ ಶ್ರೀಮಾನ ಯಾಡೀಗೌಡರಿಗೆ, ಇಲ್ಲಿರುವ ಸಾವಿರಾರು ರೂಪಾಯಿ ಕೊಟ್ಟರೂ ಸಿಗದೆ ಇರುವಂತ ಮಂಡದ ಮೇಲೆ ಆನೆ ಉಂಟಾಗಿದೆಯಂತೆ. ಅವರಿಗೆ ಈ ಆನೆ ದೇವರು ಕೊಟ್ಟದ್ದು. ಅದು ನಾವು ಮಾಡಿದ ಪುಣ್ಯದ ಫಲ. ಆದರೆ ಕೇಳಿ..... ಅವರ ಹತ್ತಿರ ಕೊಂಡುಕೊಳ್ಳುವಷ್ಟು ಶಕ್ತಿ ಇಲ್ಲವಂತೆ. ಆ ಕೊಂಡುಕೊಳ್ಳುವಷ್ಟು ಶಕ್ತಿ ಇಲ್ಲದೇ ಇದ್ದರೂ ಕೂಡ, ಅವರು ನಮಗೆ ಕೊಟ್ಟಿರುವ ಸಂತೋಷವನ್ನು ನಾವು ನಮ್ಮ ನಮ್ಮ ಮನೆಗೆ ತಗೆದುಕೊಂಡು ನಮ್ಮ ನಮ್ಮ ಹೆಂಡತಿ ಮಕ್ಕಳಿಗೂ ಹಂಚುವಷ್ಟು ಕೊಟ್ಟಿದ್ದಾರೆ. ಅದಕ್ಕಾಗಿ ಮಹಾಜನರೇ ಜೀ ಹುಜೂರ ಸವಾಲ ಮೇಲೆ ಶ್ರೀಮಾನ ಯಾಡೀಗೌಡರು ನಾಲ್ಕಾಣೆ ಹೆಚ್ಚಿಗೆ ಕೂಗಲಿ ಸಾಕು. ಮಹಾಜನರು ಯಾರು ಬಿಡ ಕೂಗಬಾರದು. ಇದಕ್ಕೆ ಸಮ್ಮತಿಯೇ....?” ಅಂದಾಗ, ಆ ಮಹಾಜನರು ಎಲ್ಲರೂ ಎರಡು ಕೈಗಳನ್ನೂ ಎತ್ತಿಕೊಂಡು ಕುಣಿಯುತ್ತ, ಸಮ್ಮತಿ ಸಮ್ಮತಿ ಅಂತ ದೊಡ್ಡಮನಸ್ಸಿನಿಂದ ತಮ್ಮ ದೊಡ್ಡತನವನ್ನು ಮರೆದು ಕಿರುಚುತ್ತ ಇರಲು, ಆ ಜಮಾದಾರಿ ಎರಡು ಕೈಗಳನ್ನು ಮೇಲಕ್ಕೆತ್ತಿ ಆಡಿಸುತ್ತ ಆ ಗದ್ದಲವನ್ನು ನಿಲ್ಲಿಸಿ ಆಮೇಲೆ ತನ್ನ ಮೊದಲನ ಸ್ಟೈಲನಿಂದ ಇದನ್ನು ನೋಡಿ, ಇದು ಸಾವಿರ ರೂಪಾಯಿಗೂ ಸಿಗಲಾರದಂತ ಮಂಡ. ಈ ಮಂಡಕ್ಕೆ ಬೇರೆ ದೇಶದ ರಾಜರು ಮನಸ್ಸು ಮಾಡಿ ಎಷ್ಟೋ ಯುದ್ಧಗಳೇ ನಡೆದು ಹೋದವು. ಈಗ ಅದನ್ನೆಲ್ಲ ಕಟ್ಟಿಕೊಂಡು ನಮಗೇಕೆ. ಇದಕ್ಕೆ ಜೀ ಹುಜೂರ ಸವಾಲ ಕೇವಲ ನೂರು ರೂಪಾಯಿ! ಕೇವಲ ನೂರು ರೂಪಾಯಿ! ಎಂದನು ನಗುತ್ತ.

ಏನು ಅವನ ಹೆಸರು?.... ಯಾಡೀಗೌಡನಾಗಲ್ಲವೇ? ಅವನು ಜಮಾದಾರಿ ಕಾಲಿಗೆ ತನ್ನೆರಡು ಕೈಯನ್ನು ಮುಟ್ಟಿ ನಮಸ್ಕಾರ ಮಾಡಿ, ಆಮೇಲೆ ಟವಲ ಹಾಸಿ ಸಕಲರಿಗೂ ನಮಸ್ಕರಿಸಿ ಎರಡು ಕೈ ಜೋಡಿಸಿಕೊಂಡು ಒಂದೇ ಮನಸ್ಸಿನಲ್ಲಿ ನಿಂತು – “ ನೂರು ರೂಪಾಯಿಯ ನೋಟು, ಅದರ ಮೇಲೆ ನಾಲ್ಕಾಣೆ” ಎಂದನು. ಆ ಮಾತಿಗೆ ಆ ಮಹಾಜನ ಹಾಗೂ ಆ ಜಮಾದಾರಿ ಬಿದ್ದು ಇನ್ನೂ ನಗುತ್ತಿದ್ದರು. ಆ ನಗುವಿನಲ್ಲಿ ಎಷ್ಟೋ

ಗಂಟೆ ತನಕ ನಡೆದು, ಅದು ನಿಂತ ಮೇಲೆ ಆ ಜಮಾಧಾರಿ ಯಾಡೇಗೌಡನ ಮುಂದಕ್ಕೆ ಕೈ ನೀಡಿ ಅದನ್ನು ಕುಣಿಸುತ್ತ "ನಾಲ್ಕಾಣೆ ನಾನೇ ಹಾಕಿಕೊಳ್ಳುತ್ತೇನೆ. ಕೊಡು ರೂಪಾಯಿಯ ಒಂದು ನೋಟು ಸಾಕು" ಅಂದನು.

ಆಗ ಯಾಡೇಗೌಡನು ಜೋಡಿಸಿದ್ದ ಕೈಯಲ್ಲೇ ಜಮಾಧಾರಿಗೆ ಮುಗಿದು "ಬೇಡಿ ಸ್ವಾಮಿ, ನಿಮ್ಮ ಕೈಯಲ್ಲಿ ನಾಲ್ಕಾಣೆ ಹಾಕಿಸಿದರೆ ಈ ಜನ ಒಪ್ಪುವುದಿಲ್ಲ. ಈ ಜನ ಒಪ್ಪಿದರೂ ಆ ದೇವರು ಮೆಚ್ಚುವುದಿಲ್ಲ?" ಅನ್ನುತ್ತ, ಷರ್ಟ್ ಎತ್ತಿ, ಬಲಗಡೆಯ ಚಡ್ಡಿ ಲಾಡಿಯ ಹದವಾಗಿ ಹಿಡುಕಿದಾಗ ಒಂದಾದ ಮೇಲೊಂದು ನೂರು ರೂಪಾಯಿಯ ನೋಟುಗಳು ಎರಡು ಹೊರಬಂದಾಗ ಹಿಡುಕುವುದನ್ನು ನಿಲ್ಲಿಸಿದನು. ಆಗ ತಲೆಯನ್ನು ಕುಣಿಸುತ್ತ, ಬರುತ್ತಿದ್ದ ನೋಟುಗಳು ಅಲ್ಲಿಗೆ ನಿಲ್ಲಲು, ಆ ಎರಡು ನೋಟನ್ನು ಯಾಡೇಗೌಡ ಭಕ್ತಿಯಿಂದ ಹಾಸಿದ್ದ ಟವಲಿನ ಮೇಲೆ ಇಟ್ಟು ಕೈ ಮುಗಿದು "ಹಿಂದಕ್ಕೆ ತೊಂಬತ್ತೊಂಬತ್ತು ರೂಪಾಯಿ ಎಪ್ಪತ್ತೈದು ಪೈಸೆಯನ್ನು ದಯಪಾಲಿಸಿ ಸ್ವಾಮಿ" ಅಂದನು. ಜೋಡಿಸಿದ್ದ ಕೈಯನ್ನು ಜೋಡಿಸಿಕೊಂಡೆ, ಆ ಜನಕ್ಕೂ ಬೆರಗಾಗಿ ಬಿಟ್ಟಬಾಯಿಯನ್ನು ಬಿಟ್ಟುಕೊಂಡು ನಿಂತಿರಲು, ಆ ನೋಟಿನ ಮೇಲೆ ಕೂರೆಗಳು ಸಂಸಾರ ಸಮೇತವಾಗಿ ಬಂದು ಅರಮನೆ ನೋಡುತ್ತ ಇದ್ದವು. ಆಗ ನನ್ನ ಎದೆ ಒಡೆದು ಚೂರಾಯಿತು. ಅದಾಯಿತು? ಅಲ್ಲಿಗೆ ನನ್ನ ಋಣ ತೀರಿತು; ಮುಗಿದುಹೋಯಿತು. ಆದರೆ ಈಗ ಅಣ್ಣ..... ನೀವೇನಾದರೂ ಹೇಳಿಕೊಳ್ಳ ಬೇಕಾದರೆ, ಆ ಹನ್ನೆರಡು ಜನ ಜಟ್ಟಿಗಳು ನನ್ನನ್ನು ಹೊತ್ತುಕೊಂಡು ಬಂದು ಬಸ್ಸಿನ ಮೇಲೆ ಜೀವದ ರೀತಿ ಜೋಪಾನವಾಗಿ ಮಲಗಿಸಿದರು..... ನೀವೇನಾದರೂ ಹೇಳಿ.... ಆ ಬಸ್ಸಿನ ಉದ್ದ ಸುತ್ತ ಅಗಲ ನನಗೆ ಸಾಲದು ಎನ್ನುವಾಗಿತ್ತು. ಬಸ್ಸು ಕೂಡ ನನ್ನನ್ನು ಮುಟ್ಟಿಸಿಕೊಂಡುದಕ್ಕೆ ಎಷ್ಟೊಂದು ಆನಂದವನ್ನು ವೈಭವವನ್ನು ಪಟ್ಟಿತೊ. ನಿಧಾನವಾಗಿ ಪೂರ್ವದ ದಿಕ್ಕಿಗೆ ಪ್ರಯಾಣ ಬೆಳೆಸಿತು. ಬಸ್ಸು ಪಟ್ಟಣವನ್ನು ಬಿಟ್ಟಾಗಲಾದರೂ ನೀವು ಏನಾದರೂ ತಿಳಿದುಕೊಂಡರೂ ಸರಿಯೆ, ನಾನು ತಿರುಗಿ ಕೂಡ ನೋಡಲಿಲ್ಲ. ಅದೆಷ್ಟು ನಿಜ ಅದೆಷ್ಟು ಸುಳ್ಳು ನಾನು ಬೇರೆ ತಿಳಿದಿಲ್ಲ..... ಅದು ಸುಳ್ಳಾಗಿದ್ದರೆ ಈದಿನವಾದರೂ ನಿಜವಾಗಲಿ. ಈ ಕಡೆ ನಾನು ಆ ಪಟ್ಟಣವನ್ನು ಬಿಟ್ಟಕ್ಷಣ ಆ ಕಡೆ ಆ ಅರಮನೆಯಾಗಿದ್ದ ಅರಮನೆ ದಿಗ್ಗನೆ ಉರಿದು ಬೂದಿಯಾಯಿತು.

ಆದರೆ ಅಣ್ಣ, ನನ್ನನ್ನು ಬಸ್ಸಿನಿಂದ ಜೋಪಾನವಾಗಿ ಇಳಿಸಿಕೊಂಡು ಪೈಪೋಟಿಯಲ್ಲಿ ಹೊತ್ತುಕೊಂಡು ಬಂದವರು, ಉಗಿಯುವುದಕ್ಕೂ ಮನಸ್ಸಾಗದು ಅಂಥ ಭಿಕಾರಿಯಾಗಿ ನಿಂತಿದ್ದ ಒಂದು ಗುಡಿಸಲಿನ ಮುಂದೆ ಜೋಪಾನವಾಗಿ ಇಳಿಸಿದರು ನೋಡಿ...... ಆವಾಗ ನನ್ನ ಜೀವ ಇದ್ದದ್ದು ಆ ಕಡೆ ಜರ್ರಂತ ಜರುಗಿತ್ತು. ನಾನು ಅರಮನೆ ಸುಖ ನೋಡಿದವಳು. ನನಗೆ ಅರಮನೆಯಂತು ಆಗಬೇಕು..... ಅದಿಲ್ಲದಿದ್ದರೆ ನನಗೆ ನಿದ್ದೆಯು ಬರಲ್ಲ ಅಂತೇನು ಕೇಳಲಿಲ್ಲ. ಆದರೆ, ನಾನು ಕಾಲು ಚಾಚಿಕೊಂಡು ಇರುವಷ್ಟಾದರೂ ಇರುವುದಕ್ಕೆ ಸ್ಥಳ ಇರಬೇಕೊ, ಬೇಡವೊ? ಆ ಗುಡಿಸಲು ನನ್ನಷ್ಟು ಉದ್ದ, ನನ್ನಷ್ಟು ಅಗಲ ಇದೆಯೊ? ಇಲ್ಲವೊ? ಎನ್ನುವಾಗಿತ್ತು..... ಅವರೇನು ಮನುಷ್ಯರೆ? ಮರಗಳೆ? ಕೇಳಿ.... ಅವರೆಲ್ಲರಿಗೂ ಆ ಚಳಿ ಏನು, ಆ ಮಳೆ ಏನು, ಆ ಮೇಲೆ ಆ ಬಿಸಿಲು ಅನ್ನುವುದೇನು? ಒಂದೇ, ಎರಡೆ? ನಾನು ಇಷ್ಟು ಚಿಕ್ಕವಯಸ್ಸಿಗೆ ಅನುಭವಿಸಿದಂತ ಕಷ್ಟ ಆ ಸೀತಾದೇವಿಗೂ ಬಂದಿತ್ತೋ ಇಲ್ಲವೋ, ಕೇಳುವ ನಿಮಗೆ ಇಷ್ಟೊಂದು ದು:ಖ ಆಗುತ್ತಿರಬೇಕಾದರೆ ಇನ್ನು......" ಎಂದು ಮಂಚ ದು:ಖಿಸುತ್ತ ಅಳಲಾರಂಭಿಸಿದಾಗ, ಆಲಿಸುತ್ತಿದ್ದ ಆತ್ಮಕ್ಕೆ ಇದೆಲ್ಲ ಮೊದಲಿನ ರೀತಿಯಾಗಿ ಇಲ್ಲಿಗೆ ನಿಲ್ಲಿಸಿ ಬಿಡುವುದೋ ಎಂದು ಚಿಂತೆಯಿಂದ ದು:ಖಿಸುತ್ತಿದ್ದ ಮಂಚದ ತಲೆಯನ್ನು ಸವರುತ್ತ " ಅಂತೊಕ್ಕೆ ನಾವು ಬೇಜಾರು ಎಂದು ಅನ್ನ, ನೀರು ಬಿಟ್ಟು ಅಳುತ್ತ ಕುಳಿತುಕೊಂಡರೆ, ನಮ್ಮ ಹಣೆಬರಹ ಬದಲಾಗಲು ಸಾಧ್ಯವೆ? ಮುಂದಿನ ವಿಷಯವನ್ನು ಹೇಳು....." ಎಂದಿತು. ಆತ್ಮವು ಮಂಚದ ತಲೆ ಸವರುತ್ತಿರಲು ಉಕ್ಕುವ ದು:ಖಕ್ಕೆ ಸಮಾಧಾನವಾಗಿ ಮಂಚವು;

" ಅಣ್ಣ ನಾನು ಕೂಡ ನಿಶ್ಚಯಿಸಿಕೊಂಡೆ. ಆದರೆ ಅದೃಷ್ಟ ಎನ್ನುವುದಕ್ಕೆ ಹೇಳುತ್ತೇನೆ ಕೇಳಿ..... ನಾನು ಬಂದ ಮೇಲೆ ಇಲ್ಲಿಗೆ ರಾತ್ರಿಸಮಯ ಯಾರೋ ಮೂರು ಜನ, ಅವರ ಭಾಷೆ ನಮಗೆ ತಿಳಿಯದು, ನಮ್ಮ ಭಾಷೆ ಅವರಿಗೆ ತಿಳಿಯದು, ಒಬ್ಬ ಮದ್ರಾಸಿನವನು, ಒಬ್ಬ ತೆಲುಗಿನವನು, ಮತ್ತೊಬ್ಬ ಮಲಯಾಳದವನಂತೆ, ಇವರು ಬಂದು ಹೋಗುವುದಕ್ಕೆ ಶುರುವಾದರು. ಆ ಮೂರು ಜನರು ಮೋಟಾ ನೋಟಿನವರಂತೆ..... ಅವರು ರೂಪಾಯಿಯ ನೋಟುಗಳನ್ನು ಗೋಣಿ ಚೀಲದಲ್ಲಿಯೆ ತುಂಬುತ್ತಿದ್ದರು.... ಅಂಥವರು ಒಂದು ದಿನ

ರಾತ್ರಿ ಸಮಯದಲ್ಲಿ ಮಾತಿನ ನಡುವೆ " ಈ ಮಂಟಪವನ್ನು ನಮಗೆ ಕೊಡಿ ಗೌಡರೇ" ಎಂದರು. ಯಾಡೇಗೌಡ, ಅಯ್ಯಯ್ಯೋ ನನ್ನ ಜೀವ ಇರುವುದೆ ಈ ಮಂಟಪದಲ್ಲಿ....." ಎಂದು ನನ್ನನ್ನ ತಂದಂಥ ಬಗೆ ಇನ್ನೊಂದು ಬಾರಿ ಪುನರಾವರ್ತನೆಯಾಯಿತು.

ಯಾರೋ ಹಿಂದೆ ಒಬ್ಬ ಮಹಾತ್ಮಗಾಂಧಿ ಎನ್ನುವವನು ಇದ್ದನಂತಲ್ಲ..... ಆ ಡೋಟುದಂಡದವನು, ಅವನು ಕೊಡುವ ಕಿರುಕುಳವನ್ನು ಆ ಇಂಗ್ಲಿಷಿನವರಿಗೆ ತಡೆದುಕೊಳ್ಳುವುದಕ್ಕೆ ತುಂಬಾ ಕಷ್ಟವಾಗಿ, ಅವನನ್ನು ಹಿಡಿದು ಜೈಲಲ್ಲಿ ಬಂಧಿಸಬೇಕು ಯಾರ ಕೈಯಿಂದಲೂ ತೆಗೆಯುವುದಕ್ಕೆ ಆಗಬಾರದು...... ಅಂಥ ಬೀಗ ಹಾಕುತ್ತಿದ್ದರಂತೆ. ಆದರೂ ನಮ್ಮ ಈ ಡೋಟುದಂಡ ಗಾಂಧಿ ಎಂಬುವವನು ಯಾವ ಸಮಯದಲ್ಲೂ ಆ ಕಡೆ ಬಂಧಿಸಿದರೆ ಈ ಕಡೆ ತಪ್ಪಿಸಿಕೊಂಡು ನಗುತ್ತ, ನಗುತ್ತ, ಟೋಪಿ ಸರಿಮಾಡಿಕೊಳ್ಳುತ್ತ, ಬರುತ್ತಿದ್ದನಂತೆ ಆ ಮಹಾತ್ಮಗಾಂಧಿ.....

ಆ ಮಹಾತ್ಮಗಾಂಧಿಯೇ ಸಾಕ್ಷಾತ್ ಪ್ರತ್ಯಕ್ಷವಾಗಿ ಬಂದು ನಿಂತು, "ಮಕ್ಕಳೇ..... ನಿಮಗೆ ಬೇಕಾಗಿರುವ ವರವೇನು?....." ಎಂದು ಈ ಮೂರು ಜನರಿಗೆ ಕೇಳಿದಂತಾಯಿತು. ಆ ಮೂರು ಜನರು ನಮ್ಮ ಗುಂಪಿಗೆ ಸೇರಿಕೊ ಮಹಾಸ್ವಾಮಿ ಎಂದು ಯಾಡೇಗೌಡನ ಕಾಲಿಗೆ ಬಿದ್ದರು. ಯಾವಾಗ ಆ ಮೂರು ಜನರು ಯಾಡೇಗೌಡನ ಕಾಲಿಗೆ ಬಿದ್ದರು ನೋಡು..... ಆ ಕ್ಷಣದಲ್ಲಿಯೆ, ನಾನು ಅರಮನೆಯಲ್ಲಿದ್ದಾಗ ನನ್ನ ಸ್ನೇಹಿತಳಾಗಿದ್ದ ..... ಅದೇ ನಾವು ಒಟ್ಟಿಗೆ ಸೇರಿಕೊಂಡಾಗ ನಗುತ್ತ, ತಮಾಷೆ ಮಾಡಿಕೊಳ್ಳುತ್ತ, ಸಂತೋಷವಾಗಿದ್ದೆವಲ್ಲ....... ಆ ಲಕ್ಷ್ಮಿ ಅನ್ನುವವಳೇ ನನಗಾಗಿ ದೇಶವಿದೇಶವನ್ನೆಲ್ಲ ಸುತ್ತಿ ಸುಸ್ತಾಗಿ ಕೊನೆಗೆ ಪತ್ತೆ ಹಚ್ಚಿಕೊಂಡು ಇಲ್ಲಿಗೆ ಬಂದಳು. ಬಂದವಳು ನನ್ನ ಕಾಲುಗಳನ್ನು ತಬ್ಬಿಕೊಂಡು ಗೋಳೋ ಎಂದು ಅಳುತ್ತ " ಇನ್ನೊಂದು ಸಾರಿ ನನ್ನನ್ನ ಕೈಬಿಡಬೇಡ ಅಕ್ಕ " ಎಂದು ಅಂಗಲಾಚಿ ಬೇಡಿಕೊಳ್ಳುತ್ತ ದು:ಖಿಸಿದಳು. ನಾನು ಅವಳ ಕಣ್ಣೀರನ್ನು ಒರೆಸಿ, ತಲೆ ಸವರುತ್ತ ಸಮಾಧಾನ ಮಾಡಿ — " ಬಿಡುವುದು ಕಟ್ಟಿಕೊಳ್ಳುವುದು ನಮ್ಮ ಕೈಯಲ್ಲಿ ಎಲ್ಲಿದೆ ತಂಗಿ? ನಾವು ಇಷ್ಟು ದಿನದವರೆಗೆ ಬೇರೆ ಬೇರೆ ಇರಬೇಕು ಎಂದು ಹಣೆಯಲ್ಲಿ ಬರೆದಿತ್ತು. ಅದಕ್ಕಾಗಿ ಇದ್ದೆವು ಅಷ್ಟೆ. ಅದರಲ್ಲಿ ನನ್ನದೇನಿದೆ? ನಿನ್ನದೇನಿದೆ?" ಎಂದೆಲ್ಲ ಅವಳ ದು:ಖ ಕಡಿಮೆಮಾಡುವುದಕ್ಕೆ ನನಗಾದ ಸುಸ್ತು ಸ್ವಲ್ಪವೇನಲ್ಲ.

ಈ ಸುಸ್ತು, ಇದರ ಮೇಲೆ ಆ ಮೋಟಾನೋಟನವರು ಮೊದಲು ನಂಬಿಸುವುದಕ್ಕೆ ಚೆಲ್ಲುವ ನಿಜವಾದ ನೋಟಿನ ಚೀಲಗಳನ್ನು ತಂದರು, ಆ ಭಾರ ಬೇರೆ ಬಂದು ನನ್ನ ಮೇಲೆ

ಬಿದ್ದಿತು. ಆ ಗೋಣಿ ಚೀಲದಲ್ಲಿ ಜನರನ್ನೇ ಕೊಂಡುಕೊಳ್ಳುವ ನೋಟಿನ ಕಂತೆಗಳು ತುಂಬಿದೆ ಎಂದು ಯಾರಿಗೆ ತಿಳಿದಿತ್ತು? ಆ ರಾತ್ರಿ ರೂಪಾಯಿಯ ಚೀಲಗಳನ್ನು ಈ ಯಾಡೀಗೌಡ ಮಾಯಮಾಡಿ ನನ್ನ ಕೆಳಗೆ ಬಚ್ಚಿಟ್ಟುಕೊಂಡನು, ಉಸಿರು ಬಿಡದೆ ನನ್ನೊಳಗೆ ಮಾಯವಾಗಿರಬೇಕಾದರೆ, ಆ ಮೂರು ಜನರು ನಡುರಾತ್ರಿಯಲ್ಲಿ ಮೆಲುಧ್ವನಿಯಲ್ಲಿ ಮಾತನಾಡುತ್ತ ಯಾಡೀಗೌಡರೆ ಎಂದು ಬಂದರು.

ಬಂದು ಒಳಗೆ ನೋಡುತ್ತಾರೆ, ಒಳಗೆ ಅಕ್ಕಮಹಾದೇವಮ್ಮ ತನ್ನ ತಲೆಯ ಕೂದಲನ್ನೆಲ್ಲ ಹಾರಾಡಿಸುತ್ತ, ಸೀರೆ,ರವಿಕೆಗಳನ್ನು ಹರಿದುಕೊಂಡು, ಎದೆ ಮೇಲಿನ ಸೆರಗನ್ನು ಚೆಲ್ಲಿಕೊಂಡು, ಕಣ್ಣುಗಳಲ್ಲಿ ಕಣ್ಣೀರು ಸುರಿಸುತ್ತ, ಆ ಮೂರು ಜನರನ್ನು ಕಂಡ ತಕ್ಷಣ, ಹೊಟ್ಟೆ ಮತ್ತು ಬಾಯಿಯನ್ನು ಶಬ್ದವಿಲ್ಲದೆ ಬಡಿದುಕೊಳ್ಳುತ್ತ " ಅಯ್ಯೋ ನನಗೆ ಇದ್ದಂತ ಒಬ್ಬ ಮಗನನ್ನು ಕೊಂದುಬಿಟ್ಟರಲ್ಲಪ್ಪ.... ಪೋಲಿಸ ಬಂದು ತುಂಡುಕೊಂಡು ಹೋದರಲ್ಲಪ್ಪ ..... ನೀವು ರಾತ್ರಿ ಸಮಯದಲ್ಲಿ ಬರುವುದನ್ನು ನೋಡಿಯೇ ನಿಮ್ಮನ್ನು ದೆವ್ವಗಳೊ ಅಥವಾ ಯಮರಾಜನ ಬಂಟರೋ ಇರಬೇಕೆಂದು ತಿಳಿದುಕೊಂಡಿದ್ದೆ.... ಅದನ್ನು ನಿಜ ಮಾಡಿದಿರಿ. ಅಯ್ಯೋ, ನಿಮಗೆ ಈ ನನ್ನ ಕೈಯಲ್ಲಿ ಅನ್ನ ಬಡಿಸಿದೆ..... ನನ್ನ ಮನೆಯಲ್ಲೇನು ಅನ್ನ ಕುಣಿಯುತ್ತಿತ್ತೇ? ನಿಮ್ಮ ಮನೆ ದಿಗ್ಗನೆ ಹತ್ತಿ ಉರಿದು ಬೂದಿಯಾಗಲಿ! ನಿಮ್ಮ ಹೆಂಡತಿಯರು ವಿಧವೆಯರಾಗಲಿ! ನಿಮ್ಮನ್ನು ಮತ್ತೆ ನೋಡದೆ ಇರುವಂತಾಗಲಿ! ದೇವರೆ!.." ಎಂದು ಬಾಯಿಯಿಂದ ಇನ್ನೊಂದು ಮಾತು ಬರುವುದರೊಳಗಾಗಿ ಅವರು ತಿರುಗಿ ನೋಡದೆ ಇರುವಂತಾದರು. ಆವಾಗ ನನ್ನೊಳಗೆ ಅಡಗಿಕುಳಿತಿದ್ದ ಯಾಡೀಗೌಡ ಕಂಕುಳಲ್ಲಿ, ಕೈಯಲ್ಲಿ ಆ ರೂಪಾಯಿಯ ಚೀಲಗಳನ್ನು ತಬ್ಬಿ ಕೊಂಡು ನಗುಮುಖದಲ್ಲಿ ಹೊರಗೆ ಬಂದನು. ಅನಂತರ ನೋಡು, ಈಗ ನೀನು ಇರುವ ಈ ದೊಡ್ಡ ಮನೆ ಅದಕ್ಕೂ ಕೂಡ ನನ್ನ ಅಳತೆ ನೋಡಿಕೊಂಡು, ಅದಕ್ಕೆ ತಕ್ಕ ರೀತಿಯಾಗಿ....." ಎಂದು ಅನ್ನುವುದಕ್ಕೂ ಮುಂಜಾನೆ ಸೂರ್ಯ ಬಂದು ಬೆಳಗಾಗುವುದಕ್ಕೂ ಸರಿಹೋಯಿತು. ಹೇಳುತ್ತಿದ್ದ ಮಂಚ ಮಲಗಿತು. ಕೇಳುತ್ತಿದ್ದ ಆತ್ಮ ಸಂತೋಷವಾಗಿ ಹೋಗಿ ಸೋಮಪ್ಪನವರ ದೇಹಕ್ಕೆ ಸೇರಿಕೊಂಡಿತು.

ಆಮೇಲೆ ಬೆಳ್ಳಿಯ ಬೆಳಕಾಗಿ, ಪ್ರಸಾದನು ಕಣ್ಣುಬಿಡಲು – ಅಂದು ಬಸಪ್ಪಸ್ವಾಮಿ, ಸಿದ್ರಾಂಬ ತಾಯಂದಿರ ಮನೆಯಾಗಿದ್ದುದು ಇಂದು ದನ ಕಟ್ಟುವ ಕೊಟ್ಟಿಗೆಯಾಗಿತ್ತು. ಅಲ್ಲಿ ಗೂಳಿಗಳನ್ನು ತೊಳೆದು ಸಂಕ್ರಾಂತಿ ಹಬ್ಬಕ್ಕಾಗಿ ಶೃಂಗಾರ ಮಾಡಲು ಅಣ್ಣಂದಿರು

ಹೊರಟಿದ್ದರು. ತಮ್ಮನಾದ ಪ್ರಸಾದನು ಬಿಡದೇ ತಾನು ಹೋಗಲು ನಿಂತನು. ಒಬ್ಬ ಮುಂಗೋಪಿ ತಾಯಿ ಮಲ್ಲಾಜಮ್ಮನಿಗೆ " ಅಮ್ಮ ಈ ಪ್ರಸಾದನನ್ನು ಆ ಕಡೆಗೆ ಹಿಡಿಕೋ. ದನದ ಕೊಟ್ಟಿಗೆಯಲ್ಲಿ ಗೂಳಿಯ ಬಾಲ ಹಿಡಿದುಕೊಂಡು ಉಯ್ಯಾಲೆ ಆಡುತ್ತಾನೆ ಮುಟ್ಠಾಳ" ಅಂದನು.

ಮಲ್ಲಾಜಮ್ಮನು ಸಾಕ್ಷಾತ್ ಅಕ್ಕಮಹಾದೇವಮ್ಮನ ತದ್ರೂಪವನ್ನು ತಾಳಿಕೊಂಡು ಹುಟ್ಟಿ ಈ ಮನೆ ಸೇರಿದ್ದಳು. ಈಗ ಹಟ ಹಿಡಿದಿರುವ ಕಿರಿಯ ಮಗನ ಕೈ, ಬಾಯಿಗೆ ಸಕ್ಕರೆ ಬೆಲ್ಲ ಕೊಟ್ಟು ಸಮಾಧಾನಪಡಿಸಿದಳು. ಹಿಂದೆ ಅಕ್ಕಮಹಾದೇವಮ್ಮ ಧರಿಸುತ್ತಿದ್ದ ಉದ್ದನಾದ ಕರಡಿಗೆಯನ್ನು(ವೀರಶೈವರು ಕೊರಳಲ್ಲಿ ಧರಿಸುವ ಲಿಂಗದ ಪೆಟ್ಟಿಗೆ) ಮಲ್ಲಾಜಮ್ಮ ಧರಿಸಿರುವುದಕ್ಕೂ, ಅಕ್ಕಮಹಾದೇವಮ್ಮನ ಗಲ್ಲದ ಮೇಲಿದ್ದ ಕಾರೆ ಹರಳಿನಂತೆ ಮಲ್ಲಾಜಮ್ಮನಿಗೂ ಅದೇ ರೀತಿ ಅಲ್ಲಿ ಇರುವುದಕ್ಕೂ, ಅಕ್ಕಮಹಾದೇವಮ್ಮನ ಲಕ್ಷಣಗಳು ಮಲ್ಲಾಜಮ್ಮನಲ್ಲಿ ಕಾಣುತ್ತಿರುವುದರಿಂದ — 'ಅಂದು ಅಕ್ಕಮಹಾದೇವಮ್ಮ ಅನುಭವಿಸಿದ ಕಷ್ಟಕ್ಕೆ ಈಗ ಸುಖ ಪಡೆಯಲೆಂದೇ ಇನ್ನೊಮ್ಮೆ ಹುಟ್ಟಿ ತನ್ನ ಮನೆಗೆ ಸೇರಿಕೊಂಡಿದ್ದಾಳೆ' ಎಂದು ಮಲ್ಲಾಜಮ್ಮನನ್ನು ಕರೆಯುತ್ತಿದ್ದರು.

ಈ ಮಲ್ಲಾಜಮ್ಮ ಆಗ ಬೆಳಗು ದೀಪವ ಮಗು. ಇವಳನ್ನು ಯಾರೋ ಕೆಟ್ಟ ಹೆಂಗಸು ಹೆತ್ತು, ತಾನು ಮಾಯವಾಗಿ ಮಗುವನ್ನು ಆಸ್ಪತ್ರೆಯಲ್ಲಿ ಎಸೆದಿದ್ದಳು. ನಗುವ ಮಗುವಿನ ಅಂದವನ್ನು ಮಕ್ಕಳ ಫಲ ಕಾಣದ ಸಿರಿವಂತರು ಕಂಡು, ಅದಕ್ಕೆ ಮನಸೋತು, ಅದನ್ನು ತಂದು ಶುದ್ಧಮಾಡಿಕೊಂಡು ಲಿಂಗಧಾರಣೆ ಮಾಡಿಸಿ, ಮಲ್ಲಾಜಮ್ಮನೆಂದು ಹೆಸರಿಟ್ಟು ಬೆಳೆಸಿದರು. ಆ ಬೆಳೆದಂಥ ಮಲ್ಲಾಜಮ್ಮನನ್ನು ನೋಡಿದಂಥ ಯಾಡೇಗೌಡರಿಗೆ ನಗುತ್ತ, ಮರಣ ಹೊಂದಿದ ತನ್ನ ತಾಯಿಯಂತೆ ಕಂಡಳಾಗಿ, ಅವಳು ತನಗಾಗಿ ಅನುಭವಿಸಿದ ವನವಾಸ ಕಣ್ಣಿನ ಮುಂದೆ ಬಂದು, ಮಗ ಸೋಮಪ್ಪನಿಗೆ ಮಲ್ಲಾಜಮ್ಮನನ್ನು ತಂದು ಮದುವೆ ಮಾಡಿ, ಎರಡು ಕಡೆಯ ಆಸ್ತಿಗಳನ್ನು ಕಸಿಮಾಡಿ, ಮತ್ತಷ್ಟು ಅಭಿವೃದ್ಧಿ ಹೊಂದಿದವರಾಗಿ ನಗುತ್ತ ಸಾವ ಕೂಡ ಸ್ವರ್ಗಸ್ಥರಾಗಿದ್ದರು.

ಸಕ್ಕರೆ ಬೆಲ್ಲವನ್ನು ತಿಂದು ಗಳಿಕೆಯನ್ನು ತುಟಿ, ಮೂಗು, ಕೈಗೆಲ್ಲ ಮಾಡಿಕೊಂಡಿದ್ದ ಪ್ರಸಾದನು, ಅಮ್ಮ ತಂದು ಕುಡಿಸಿದ ಹಾಲನ್ನು ಅರ್ಧ ತಾನು ಕುಡಿದು ಇನ್ನರ್ಧ

ವನ್ನು ಭೂಮಿಗೆ ಕುಡಿಸಿದನು. ಆಮೇಲೆ ನೆನ್ನೆ ದಿನ ಸೀರೆ ತುಂಬಿಕೊಂಡು ಬಂದಿದ್ದ ಲಾರಿ ತಾನಾಗಿ ಕೈಗಳನ್ನು ಗಾಳಿರಾಟೆಯ ರೀತಿ ಆಡಿಸುತ್ತ, ಬಾಯಲ್ಲಿ ಜುಂಯ್ ಎಂದು ಶಬ್ದ ಮಾಡುತ್ತ, ಪೆಟ್ರೋಲ್ ಜೊಲ್ಲನ್ನು ಸುರಿಸುತ್ತ, ಸ್ಟಾರ್ಟ್ ಮಾಡಿದನು.

.... ಆ ಸ್ಟಾರ್ಟ್ ಆದ ಲಾರಿ ಎಲ್ಲಿಗೆ ಬಂದಿತು? 'ಸೀರೆಯ ರಾಶಿ ಹತ್ತಿರ ಬಂದಿತು. ಸೀರೆ ರಾಶಿಗೆ ಬಂದ ಲಾರಿ ಏನು ಮಾಡಿತು? ಆ ಸೀರೆಗಳನ್ನು ಬೆನ್ನಿಗೆ ತುಂಬಿಕೊಂಡಿತು. ಆ ತುಂಬಿಕೊಂಡ ಲಾರಿ ಎಲ್ಲಿಗೆ ಹೊರಟಿತು? ಎಲ್ಲಾ ಕಂಬಗಳ ಮುಂದೆ ಬಂದಿತು. ಆ ಕಂಬಕ್ಕೆ ಬಂದು ಲಾರಿ ಕಂಬಕ್ಕೆ ಏನು ಕೊಟ್ಟಿತು? ಸೀರೆಯನ್ನು ಉಡು ಎಂದು ಕೊಟ್ಟಿತು......

ಈ ಆಟ ಮುಗಿದು ಪ್ರಸಾದನು ಲಾರಿಯಾಗಿಯೆ ಹೊರಬಂದು ಪ್ರತಿದಿನ ಕಾಣುವ ಮರವನ್ನು ನೋಡಿದಾಗ, ಲಾರಿ ರೂಪವನ್ನು ಬಿಟ್ಟು ತನ್ನ ನಿಜ ರೂಪವನ್ನು ತಳೆದು ಜಗುಲಿ ಮೇಲೆ ಕುಳಿತು, ಜಗುಲಿಯ ಕೆಳಕ್ಕೆ ಕಾಲುಗಳನ್ನು ಇಳಿಬಿಟ್ಟು ಆಡಿಸುತ್ತ, ಮರವನ್ನು ನೋಡುತ್ತ ಜೊಲ್ಲು ಸುರಿಸುತ್ತಿದ್ದನು. ಆಗ ಮರದಲ್ಲಿ ಮಗು ಆಡುವುದು ಕಾಣಿಸಿತು. ಪ್ರಸಾದನಿಗೆ ನಗುಬಂದು " ಅಮ್ಮಾ..... ಅಮ್ಮಾ.... ಮರದ ಮೇಲೆ ಮಗು ನಗುತ್ತ, ಕೇಕೆ ಹಾಕುತ್ತ, ಆಡುತ್ತ ಇದೆ. ನೋಡು ಬಾ, ನೋಡು ಬಾ...." ಎಂದು ಕರೆಯುತ್ತಿರಲು ಯಾರು ಕೂಡ ಬಾರದೆ, ಜನರು ಇವನ ಮಾತಿಗೆ ನಗುತ್ತಲೋ ಅಥವಾ ಸಂಕಟದಲ್ಲೋ ಅವರವರಿಗೆ ತಿಳಿದ ರೀತಿಯಲ್ಲಿ ನಡೆದಾಡುತ್ತಿದ್ದರು.

ಮಠದ ಒಂದುಕಡೆ ಜಗುಲಿ ಮೇಲೆ ರೌಂಡಾಗಿ ಕುಳಿತವರು ಈ ಪ್ರಪಂಚವನ್ನು ಮರೆತು ಇಸ್ಪೀಟು ಆಡುತ್ತ, ಆ ಇಸ್ಪೀಟಿನ ಎಲೆಗಳು ನಡೆದತ್ತ, ಬೀಡಿಸಿಗರೇಟಿನ ಹೊಗೆಯು ಆ ಎಲೆ ಜೊತೆಗೆ ಸುತ್ತು ಬಳಸುತ್ತಿತ್ತು. ಆಟವಾಡುತ್ತ, ಕುಳಿತಲ್ಲಿಗೆ ಬೀಡಿ, ಸಿಗರೇಟು, ಬೇಕಾದವರಿಗೆ ವಡೆ, ಟೀ ಯನ್ನು ಹಿಂದೆ ಅಕ್ಕಮಹಾದೇವಮ್ಮ ನಡೆಸುತ್ತಿದ್ದಂಥ ಹೋಟೆಲ್ ರೀತಿಯ ಹೋಟೆಲಿನಿಂದ ಬೇಕಾದವರಿಗೆ ಬೇಕಾದ್ದು ಸಪ್ಲೈ ಆಗುತ್ತಿತ್ತು. ಅಲ್ಲಿ ಸೋತು ಪಾಪರ್ ಆದವನೊಬ್ಬನು ರೇಡಿಯೋ ಹಾಡನ್ನು ಕಿವಿಗೆ, ಗದ್ದಂ ಗದ್ದಂ ಬಿಲ್ಲೆ ಎನ್ನದೇ, ನೋಟು ಎನ್ನದೇ ತೆಗೆದುಕೊಂಡು ಒಂದು ಕಡೆ ಗುಡ್ಡೆಮಾಡಿಕೊಂಡಿದ್ದವನ ದುಡ್ಡಿನ ಗುಡ್ಡೆಯನ್ನು ಕಣ್ಣಿಗೂ, ಬೀಡಿಯನ್ನು ಬಾಯಿಗೂ ಕೊಟ್ಟು ಕುಳಿತಿದ್ದನು.

ಇನ್ನೊಂದು ಕಡೆ ಆ ಮಠದ ಜಗುಲಿಯ ಮೇಲೆ ಮತ್ತು ಕೆಳಗೆ ಒಂದು ಚಿಕ್ಕಗುಂಪು ಸುತ್ತುವರೆದು ತನ್ನದೇ ಆದ ಪ್ರಪಂಚದಲ್ಲಿ ಲೀನವಾಗಿತ್ತು. ಅಲ್ಲಿ ಏನು ನಡೆಯುತ್ತಿರೆ ಎಂಬುದು ದೂರಕ್ಕೆ ತಿಳಿಯುದಂತಿತ್ತು. ಹೀಗಿರುವಾಗ, ನಂಜನಗೂಡಿನ ಕಡೆಯಿಂದ ದಢೂತ ಅಮಾನನು ಬಾಡಿಗೆ ಸೈಕಲಿನಲ್ಲಿ ಅದರ ಹ್ಯಾಂಡಲ್ಲನ್ನು ಹಿಡಿದುಕೊಳ್ಳದೆ ಕೈ ಹಿಂದಕ್ಕೆ ಮುಂದಕ್ಕೆ ಬೀಸುತ್ತ, ಸೈಕಲ್ಲನ್ನು ನಲಿದಾಡಿಸುತ್ತ, ತಾನು ನಲಿಯುತ್ತಾ, ಊರಿನ ಕಡೆ ಬರುತ್ತಿದ್ದನು, ಕುಟ್ಟುವ ತಮಟೆ ಮುಂದೆ ಕುಣಿಯುತ್ತ ಬೆಳೆದ ಅಮಾನನಿಗೆ, ಅವನ ಸೈಕಲಿನಲ್ಲಿ ನೇತಾಡುವ ಗೋಣಿ ಚೀಲದಲ್ಲಿರುವ ಸಾಮಾನನ್ನು 'ಏನೊ ಅದು' ಎಂದು ಯಾರಾದರು ಕೇಳಿದರೆ " ಐ ಚರ್ಮ, ಕನ್ನಿ ಬುದ್ಧಿ" ("ಚರ್ಮ") ಎನ್ನುತ್ತಿದ್ದನಾದರೂ ಅದು ಚರ್ಮವಾಗಿರದೆ ಸ್ತ್ರೀಯರ ಮುಟ್ಟಿನ ಸೀರೆಯಾಗಿದ್ದವು. ಮುಟ್ಟಿನ ಸೀರೆ ಸಂಪಾದನೆ ಕಾರ್ಯದ ಯಶಸ್ಸಿಗಾಗಿ ಅಮಾನನು ನೂರಾರವರೆಗೆ ಸಂಖ್ಯೆಗಳನ್ನು ಕಲಿತು ಅದನ್ನು ಜ್ಯೋತಿಷಿಗಳ ಮಂತ್ರದ ಅಂಕಿಯಂತೆ ಉಪಯೋಗಿಸುತ್ತ, ಊರಲ್ಲಿ ಯಾವ ಯಾವ ಮನೆಯಲ್ಲಿ ಯಾವ ಯಾವ ಹೆಂಗಸು ಯಾವ ಯಾವ ದಿನ ಮುಟ್ಟಾಗುವಳು ಎಂಬುದನ್ನು ಒಂದು ಕರಾರುವಕ್ಕಾದ ಪಂಚಾಂಗವನ್ನು ರಚಿಸಿಕೊಂಡಿದ್ದನು. ಮಹಾರಾಜರು ನಂಬುವ ಒಂಟಿಕೊಪ್ಪಲ ಪಂಚಾಂಗವು ಸುಳ್ಳಾದರೂ ಅಮಾನನ ಪಂಚಾಂಗವು ಯಾರದಾದರೂ ಪ್ರಕೃತಿ ವ್ಯತ್ಯಾಸದಿಂದಾಗಿ ಹೆಚ್ಚೆಂದರೆ ಒಂದು ದಿನ ಹೆಚ್ಚುಕಡಿಮೆಯಾಗುತ್ತಿತ್ತು. ಅದೂ ನಿಜವಾಗುತ್ತಿತ್ತು.

ಈ ನಿಜವನ್ನು ಹಿಡಿದು, ನಿದೆಯು ಬಂದು ತುಳುಕಡಿಸುವ ಕಾಲವನ್ನು ಅರಿತವನಾದ ಅಮಾನನು, ಆ ವೇಳೆಯಲ್ಲಿ ಅಗತ್ಯವಾದರೆ ಕ್ಷಣಮಾತ್ರದ ಭೇಟಿ ನೀಡಿ ಮೇಲ್ಭಾಗದ ತುದಿಯ ಕೆಳಗೆ ಸಿಕ್ಕಿಸುವ ಮುಟ್ಟಿನ ಸೀರೆಗಳನ್ನು ಮಾಯಮಾಡುತ್ತಾ, ಸಾಕಷ್ಟು ಸೀರೆಭಾಗ್ಯ ಪಡೆದು, ನಿಯಮನಿಷ್ಠೆಗೆ ಹೆಸರಾದ ಮೇಲ್ಜಾತಿ ಬೀದಿಯ ಹೆಂಗಸರಿಗೆ ಇದು ಯಾವುದರ ಕೆಲಸ ಎಂಬುದನ್ನು ಅರಿವಾಗದಂತೆ ದಿಕ್ಕೆಡಿಸಿದ್ದನು.

ಸ್ವಪ್ರತಿಭೆಯಿಂದ ಈ ಕಾಯಕವನ್ನು ಕಂಡುಹಿಡಿದವನಾಗಿ ಅದನ್ನು ನಿಯಮನಿಷ್ಠೆಯಲ್ಲಿ ಆಚರಿಸುತ್ತಿದ್ದ ಅಮಾನನು, ಮಾಲನ್ನು ಫ್ರೆಶ್ ಆಗಿರುವಾಗಲೆ ಬಿಕರಿ ಮಾಡಲು ಸಿಕ್ಕಿದ ದಿನವೇ ನೇರವಾಗಿ ನಂಜನಗೂಡಿನ ಹೊಳೆ ತಲುಪಿ ಅಲ್ಲಿ ಆಗಸನ ವೇಷದಲ್ಲಿ ಮಾಲು ಹಸನುಮಾಡಿ ಅಡ್ವಾನ್ಸ್ ಕೊಟ್ಟಿದ್ದ ಮುಸಲ್ಮಾನನಿಗೆ ನಿಯತ್ತಿನಲ್ಲಿ ಮಾರುತ್ತಿದ್ದನು.

ಅಮಾಸನ ಈ ಉದ್ಯೋಗವು ಕೂಲಿ ಕೆಲಸಕ್ಕಿಂತ ಹೆಚ್ಚು ಲಾಭದಾಯಕವಾಗಿಯೂ, ಅನಿಶ್ಚಿತತೆ ಇಲ್ಲದಾಗಿಯೂ ಹಾಗು ಯಾರಿಗಾದರೂ ಮುಟ್ಟನಿಸಲು ಸಂಭವಿಸುವ ನಷ್ಟವನ್ನು ಪ್ರಕೃತಿಯು ಹೊಸ ಗಿರಾಕಿಗೆ ಕೂಡಿಸುತ್ತ, ಅದು ಅಲ್ಲಿಗೆ ಸಮನಾಗುತ್ತಿತ್ತು. ಇದು ಅಮಾಸನ ಹೊಟ್ಟೆಬಟ್ಟೆಗೆ, ಬೀಡಿ, ಸಿನಿಮಾ, ಸೈಕಲ ಬಾಡಿಗೆಗೂ ಆಗಿ, ಉಳಿದದ್ದು ಇವನ ನಂಬಿ ಸೂರಿಗುಡಿ ನೆಲಕ್ಕಂಟಿ ಬಾಯಿಬಿಟ್ಟುಕೊಂಡಿದ್ದ ಕರಿಯಯ್ಯನಿಗೂ ಗಂಜಿಯನ್ನು ದೊರಕಿಸುತ್ತಿತ್ತು.

ಯಾವ ವಿಧವಾಗಿ ಸೈಕಲ ಮೇಲೆ ಬರುತ್ತಿದ್ದ ಅಮಾಸನು ಯಾರ ಕಣ್ಣಿಗೆ ಸಿಕ್ಕಿದ್ದನೆಂದರೆ, ಇಸ್ಪೀಟ ಆಟದಲ್ಲಿ ಹಣವನ್ನು ಗೆದ್ದು ಕಬಳಿಸಿಕೊಂಡಿದ್ದವನ ಕಣ್ಣಿಗೆ ಬಿದ್ದನು. ಈಗ ಕಾಲನ ಬಳಿ ಗುಡ್ಡೆಯಾಗಿ ಬಿದ್ದಿರುವ ಶ್ರೀಲಕ್ಷ್ಮಿಯ ಚಂಚಲವನ್ನು ಅರಿತವನಾದ ಅವನು ಕಾರಣ ತೆಗೆದು ಆಟ ನಿಲ್ಲಿಸುವುದಕ್ಕೆ ಕಣ್ಣಲ್ಲೆ ಬೆಂಕಿ ಸುರಿಸುತ್ತ, ಹಲ್ಲನ್ನು ಕಚ್ಚಿಕೊಂಡು " ನೋಡ್ರೋ ನೋಡ್ರೋ ! ಹೊಟ್ಟೆಗೆ ಊಟವಿಲ್ಲದೆ ಇದ್ದರು ಆ ದಲಿತನ ಕೊಬ್ಬನ್ನ! ನಾವು ನೋಡಲಿ ಎಂದು ಹಾವಿನ ರೀತಿ ನುಲಿಯುತ್ತ, ಬರುತ್ತ, ಇದ್ದಾನೆ ! ಆ ಹ್ಯಾಂಡಲ್ಲನ್ನೇ ಹಿಡಿದುಕೊಳ್ಳುವುದಕ್ಕೆ ಆಗಬಾರದು...... ಆ ರೀತಿಯಾಗಿ ಅವನ ಆ ಎರಡು ಮುಂಗೈಯನ್ನು ಕತ್ತರಿಸಿ ಆ ಕಡೆಗೊಂದು ಈ ಕಡೆಗೊಂದು ಎಸೆದುಬಿಡಬೇಕು...." ಎಂದು ಬಾಯೊಳಗಿನ ಹಲ್ಲುಗಳನ್ನು ಕಡಿಯುತ್ತಿದ್ದನು.

ಆಟ ದೊಡ್ಡದು. ಆ ಮಾತಿಗೆ ಪಕ್ಕದವನು, " ನೀನು ಅವನಿಗೆ ಮುಂಗೈ ಕತ್ತರಿಸಿ ಮಠದ ಬಾಗಿಲಿಗೆ ಆ ಕಡೆಗೊಂದು ಈ ಕಡೆಗೊಂದು ತೋರಣ ಕಟ್ಟುವಾಗ ನಾನು ಜೊತೆಗೆ ಬರುತ್ತೇನೆ. ಈಗ ಒಂದು ಒಳ್ಳೆ ಎಲೆ ಹಾಕು" ಎಂದನು. ಇವನು ಕಡಿಯುತ್ತಿದ್ದ ಆ ಹಲ್ಲುಗಳನ್ನು ತುಟಿಯಲ್ಲಿ ಮುಚ್ಚಿಕೊಂಡು, ತುಟಿಗೆ ನಗು ತಂದುಕೊಂಡು " ನಿನಗೆ ಬೇಕಾದಂಥ ಎಲೆ ಕೊಡುತ್ತೇನೆ, ತಗೋ" ಎಂದು ಆ ಎಲೆಯನ್ನು ಮೊಗಚಿಟ್ಟು ಆಟ ತೋರಿಸಿದನು.

ಇಸ್ಪೀಟ ಗ್ಯಾಂಗಿನ ಕಣ್ಣು ತಪ್ಪಿಸಿ ಅಮಾಸನು, ಮಠದ ಇನ್ನೊಂದು ಜಾಗಿಯ ಕಾಯಕವನ್ನು ಸಾಧಿಸಿದವನಾಗಿ ಮಿಂಚಿನಂತೆ ನಂಜನಗೂಡಿಗೆ ಬಂದು ಅಲ್ಲಿ ಹಾಸ್ಟೆಲ, ಆಸ್ಪತ್ರೆ,

ಹೊಳೆದಡ, ಈ ಮೂರು ಲೋಕವನ್ನು ಸುತ್ತಿ, ದಠ ಸಂಘದ ನಾಗರಾಜುವನ್ನು ಪತ್ತೆ ಮಾಡಿಕೊಂಡು ಯಾವಾಗ ಹೋಗಿದ್ದನೋ ಎನ್ನುವಂತೆ ಊರಿಗೆ ಬಂದನು.

ಕಂಕುಳಲ್ಲಿ ದೇವರಗುಡ್ಡರ ಜೋಳಿಗೆ ಎನ್ನುವಂತಿದ್ದ ಬ್ಯಾಗನ್ನು ನೇತಾಕಿಕೊಂಡು, ಅದರೊಳಗೆ ಕವನ ತುಂಬಿಕೊಂಡು, ಯಾವುದೋ ಕಾಲದವನು ಈ ಕಾಲದಲ್ಲಿ ಬದುಕಿದ್ದಾನೆ ಮಹಾತ್ಮ ಎನ್ನುವಂತೆ ನಡೆದಾಡುತ್ತಿದ್ದ ನಾಗರಾಜುವಿನ ಹಣೆಯೇ ಆ ಮುಖದಲ್ಲಿ ಅರ್ಥ ಅವಿಸಿಕೊಂಡಿತ್ತು. ಇನ್ನು ಊಹೆಯಲ್ಲಿಯೇ ಆ ಬುಡಬುಡಿಕೆ ಮಾಟದ ಕಣ್ಣು ಮತ್ತು ಆ ಗತಕಾಲದ ವಾಸನೆಯನ್ನು ಕಂಡುಹಿಡಿಯಬಹುದಾದಷ್ಟಿದ್ದ ಮೂಗು ತುಂಬಾ ಕಷ್ಟದಲ್ಲಿ ಜೀವಿಸಿದ್ದವು.

ಈ ನಾಗರಾಜು ಮಠದ ಬಾಗಿಲು ತಲುಪುವುದರೊಳಗಾಗಿ, ಆ ಕಡೆ ಇಸ್ಪೀಟಾದರೆ, ಈ ಕಡೆ ಜಗುಲಿಯ ಮೇಲೆ ಕಳಗಲ್ಲ ಮುಳುಗಿದ್ದ ಗುಂಪು ಗಾರೆಸಿದ್ದ ಮಾವನಿಗೆ ಆಗಲೆ ಎರಡನೆ ರೌಂಡು ಹೊಡೆತ ಚುಕ್ತಾ ಮಾಡಿ, ಮೂರನೆ ರೌಂಡಿಗೆ ರೋಷವನ್ನು ಮೈದುಂಬಿ-ಕೊಳ್ಳುತ್ತಿತ್ತು. ಆ ಹಣೆಯು ಒಂದು ಬೆರಳಿನ ಅಗಲವಿದ್ದರೆ, ಈ ಹುಬ್ಬು ಎರಡು ಬೆರಳಿನ ಅಗಲವಾಗಿದ್ದ ಆ ಗಾರೆಸಿದ್ದಮಾವನ ಮೈತುಂಬ ರೋಷವು ತುಂಬಿಕೊಂಡು, ಅವನಿಗೆ ಏನಾದರೂ ಬೆತ್ತಲೆ ಮಾಡಿ ನಿಲ್ಲಿಸಿದಲ್ಲಿ ಅವನು ಆ ಗುಂಪಿಗೂ ಮೂಲಪುರುಷನಾದ ಆದಿಮಾನವನಂತೆ ಕಂಡುಬರುವಂತಿದ್ದನು. ಅವನ ಮುಂದೆ ಬೇಸರದಲ್ಲಿ ಬಿದ್ದಿದ್ದ ಹದಿನಾರು ಎಳನೀರುಗಳು ಅವನನ್ನು ಮಠದ ಹೊರಗೆ ನಿಂತ ನಾಯಿಯಗುಂಬಕ್ಕೆ ಕಟ್ಟಿಹಾಕಿಸಿದ್ದವು. ಕಟ್ಟರಿಸಿಕೊಂಡ ದೇಹವು ಹೊಡೆದವರ ಕೈಗಳನ್ನು ನೋಯಿಸುತ್ತಿದ್ದರಿಂದ, ನೊಂದ ಕೈಗಳಿಗೆ ವಿಶ್ರಾಂತಿ ಕೊಡುತ್ತಿದ್ದರಿಂದ ಪ್ರತಿ ಹೊಡೆತದ ನಡುವೆಯೂ ಡೈಲಾಗ ನಡೆಯುತ್ತಿತ್ತು.

"ಲೊ ಮುಟ್ಟಾಳ ನಿನ್ನತ್ರ ದಂಡ ತೆಗೆದುಕೊಳ್ಳದಿದ್ದರೆ... ನಾನು ನಮ್ಮಪ್ಪನ ಮಗನೇ ಅಲ್ಲ, ಸುಮ್ಮನೆ ಏಕೆ ಹೊಡೆಯಿಸಿಕೊಂಡು ಸಾಯುತ್ತೀಯ... ಮರ್ಯಾದೆ-ಯಿಂದ ನೂರೊಂದು ರೂಪಾಯಿ ಕೊಟ್ಟುಬಿಡು...."

" ತಪ್ಪು ಮಡಗ್ಗಕ ನಾ ತಪ್ಪ ಮಾಡಿರದಾರುವಿ ಯಾನಪ್ಪ?"

("ದಂಡ ಕೊಡುವುದಕ್ಕೆ ನಾನು ತಪ್ಪು ಮಾಡಿರುವುದಾದರು ಏನು?")

"ಪುನಃ ಅದನ್ನೇ ಹೇಳುತ್ತೀಯಲ್ಲ. ಹಾಗಾದರೆ ನೀನು ಎಳನೀರು ಕಿತ್ತಿರುವುದು ನಿಮ್ಮಪ್ಪನ ತೋಟದಲ್ಲೇನು?"

"ಕುಡಿಯಾಕ ಅಂತ ಎಳ್ನೀರ ಕಿತ್ಗಂಡ್ರೂ ತಪ್ಪಪ್ಪ ಅದಾವ?"

("ಕುಡಿಯುವುದಕ್ಕೆ ಅಂತ ಎಳನೀರು ಕಿತ್ತುಕೊಂಡರು ಅದು ತಪ್ಪೆ?")

"ಇದು ಕಾಣೋ ಮಾತು! ಕುಡಿಯುವುದಕ್ಕೆ? ಏನೋ ಅದು ಕುಡಿಯುವುದಕ್ಕೆ! ಒಂದು ನಾಲ್ಕಲ್ಲ. ಹೋಗಲಿ ಇನ್ನೊಂದು, ಹೆಚ್ಚು ಅಂದರೆ ಇನ್ನೊಂದು. ಹ್ಞ ಹದಿನಾರನ್ನು ಕೀಳುತ್ತಾರೋನೋ? ಅದು ಕುಡಿಯುವುದಕ್ಕೆ?"

"ಎಲ್ಲಾನುವ ನಿಮ್ಮೆದ್ರುಗ ಕುಡುದ್ರ ಒಪ್ಗಂಡರ್ಕಪ್ಪ ಆಗ್ಲಾರವ?"

("ಎಲ್ಲವನ್ನು ನಿಮ್ಮೆದುರೇ ಕುಡಿದರೆ ಆಗಲಾದರೂ ಒಪ್ಪಿಕೊಳ್ಳುತ್ತೀರ?")

ಗಾರೆಸಿದ್ದಮಾವನ ಈ ಸವಾಲು ಮುಖಂಡನಿಗೆ ಗಾಬರಿಯನ್ನುಂಟುಮಾಡಿ ಹೇಗೇನಾದರೂ ಜಾಜಿಗೆ ಕುಳಿತು ಇರುವ ಎಳನೀರು ಕೈಬಿಟ್ಟು ಹೋದರೆ ಎಂದು, ಮುಂದಕ್ಕೆ ತೋಟದವನು ಮಾತು ತೆಗೆದು ಶೈಲಿ ಬದಲಿಸಿದನು.

"ನಮ್ಮ ತೋಟದ ಎಳನೀರು ಯಾರಿಗೆ ಇರುವುದು? ಇವನಿಗೆ ಕುಡಿಯುವುದಕ್ಕೆ ನಾವು ತೋಟ ಮಾಡಿರುವುದು. ಏಕೆ ಹೇಳು? ಇವರ ಅಮ್ಮ ನನಗೆ ಉಪಪತ್ನಿ. ಅದಕ್ಕೆ..."

ಅದಕ್ಕೆ ಗಾರೆಸಿದ್ದಮಾವ "ಇದ್ಯಾಕನಪ್ಪ ನೀವು ಆಡ ಮಾತು?"

("ಇದೇನು ನೀವು ಆಡುವ ಮಾತು?") ಎಂದನು. ಅದಕ್ಕೆ ಗುಂಪಿನಲ್ಲೊಬ್ಬ "ಅಂತೊಕ ದಡ್ಡ... ಎಲ್ಲಾ ಬಿಟ್ಟು ಅವರ ಅಮ್ಮನ ಹತ್ತಿರಕ್ಕೆ ಏಕೆ ಹೋಗುತ್ತೀಯ... ಅದು ಅಜ್ಜ ಹತ್ತಿರಕ್ಕೆ...) ಎಂದನು.

ಅದಕ್ಕೆ ಇನ್ನೊಬ್ಬ "ಅದಕ್ಕೇನಂತೆ ತಗೊ...." ಎಂದಾಗ ಆ ಗುಂಪು ಒಂದೇ ಬಾಯಿ ಎಂಬಂತೆ ನಗುತ್ತಿತ್ತು. ಗಾರೆಸಿದ್ದಮಾವನ ಸದಾ ಬಿಟ್ಟುಕೊಂಡಿರುತ್ತಿದ್ದ ಬಾಯಿ ಮುಚ್ಚಿಕೊಂಡಿರುವ ಸಮಯಕ್ಕೆ ನಾಗರಾಜು ಬೇಕೆಂದೆ ಕೆಮ್ಮುತ್ತಾ ಅಲ್ಲಿಗೆ ಬಂದರು.

ಊರಿಗೆ ಬಂದ ಹೊಸ ವಾಸನೆಯನ್ನು ಹಿಡಿದು ಆ ಮುಖಂಡನು ನಾಗರಾಜುವಿಗೆ "ಬನ್ನಿ ಬನ್ನಿ ಮೇಸ್ಟ್ರು ನಿಮ್ಮ ಜಾತಿಯವರಿಗೆ ನೀವು ಸ್ವಲ್ಪ ಓದಿದವರು ಬುದ್ಧಿ ಹೇಳಿದರೆ ಆಗಲಾದರು ಕೇಳುತ್ತಾರೇನೊ. ಅಲ್ಲಾ ಮೇಸ್ಟ್ರು..... ನಿಮ್ಮ ಜಾತಿಯವರು ಊರಿನಲ್ಲಿ ಇರುವ ಮರದ ಮೇಲಿನ ಎಳನೀರಿನ ಒಂದು ಹೀಚನ್ನು ಬಿಟ್ಟುಕೊಡುವುದಿಲ್ಲವಲ್ಲ..... ಯಾವ ರೀತಿಯಲ್ಲಿ ನಾವು ಊರಲ್ಲಿ ಜೀವನ ಮಾಡುವುದು? ಒಂದೋ ಅವರು ಇರಬೇಕು ಊರಲ್ಲಿ. ಇಲ್ಲ ಊರಲ್ಲಿ ನಾವು ಇರಬೇಕು. ಆಗ ನೋಡಿ ಒಂದು ಮಟ್ಟಕ್ಕೆ ಆಗುವುದು ಇದು...." ಎಂದು ನಾಂದಿ ಬಾಣವನ್ನು ಬಿಡುತ್ತಿದ್ದನು. ಅವನ ಸುತ್ತ ಇದ್ದ ಗುಂಪು ಗುರ್ರ ಎಂದು ನೋಡುತ್ತ ನಾಗರಾಜುವಿಗೆ ಮೊದಲ ರೌಂಡಿನ ಕಣ್ಣಿನ ಹೊಡೆತವನ್ನು ಹೊಡೆದು, ಆ ಕಣ್ಣಿಗೆ ವಿಶ್ರಾಂತಿಕೊಟ್ಟು ನಾಗರಾಜುವಿನ ಮಾತಿಗೆ ಅವರು ಕಾಯುತ್ತಿರಲು ನಾಗರಾಜು ಕೆಮ್ಮುತ್ತಿದ್ದರು. ಈ ಕೆಮ್ಮು ನಿಲ್ಲದೆ ಆಗ ಪುನ: ಆ ಮುಖಂಡನೇ ಮಾತು ಮುಂದುವರೆಸತೊಡಗಿದನು.

"ಅಲ್ಲಾ ಮೇಸ್ಟ್ರು, ಒಂದು ಕೂದಲಿನ ಎಳೆ ಅಷ್ಟು ನಮ್ಮ ಕಡೆ ತಪ್ಪಿದ್ದರೆ ಅದನ್ನು ನಾವು ಒಪ್ಪಿಕೊಳ್ಳುತ್ತೇವೆ. ಇವನು ಈ ಗಾರೆಸಿದ್ದ ಇದ್ದಾನಲ್ಲ, ಅವನು ಕಿತ್ತಿರುವ ಎಳನೀರನ್ನು ನೋಡಿದರೆ ಹದಿನಾರು, ಹದಿನಾರು ಮೇಸ್ಟ್ರು! ಅದಕ್ಕೆ ದಂಡ ಕೊಡು ಅಂದರೆ.... ಅದನ್ನು ಕುಡಿಯುವುದಕ್ಕೆ ಕಿತ್ತೆ ಅನ್ನುತ್ತಾನಲ್ಲ.....! ಯಾವ ಲಾಯರು ತಾನೇ ಇದನ್ನು ಒಪ್ಪುತ್ತಾನೆ? ಈ ರೀತಿ ಈ ಗಾರೆಸಿದ್ದ ಎಷ್ಟು ಊರನ್ನು ಹಾಳುಮಾಡಿರಬಹುದು ಮೇಸ್ಟ್ರೆ?"

ಈ ಮಾತಿಗೆ ನಾಗರಾಜು ಕೆಮ್ಮು ನಿಲ್ಲಿಸಿ ಗಂಟಲಲ್ಲಿ ಧ್ವನಿಯನ್ನು ಗೊರಗುಟ್ಟಿಸುತ್ತ ಆಗುವ ಪದವನ್ನು ಗುಣುಕಿ ತೆಗೆದು " ಏನ್ರಿ, ನಾಯ್ಡುಲೀ, ಇಪ್ಪುಕುಡಾ ಕಂಬಕ್ಕಟ್ಟಿ ಕೊಡಿತಿಂದೀರೆಲ್ಲಾ ನಿಮದಾಂ ತಪ್ಪುಲ್ಲ?" (" ಏನ್ರಿ, ಇಷ್ಟಕ್ಕೂ ಕಂಬಕ್ಕೆ ಕಟ್ಟಿ ಹೊಡೆದಿದ್ದೀರಲ್ಲ ನಿಮ್ಮದು ತಪ್ಪಲ್ಲವೆ?") ಎಂದು ಕೆಮ್ಮತೊಡಗಿದನು. ಆಗ ಆ ಮುಖಂಡ ಸುತ್ತಲೂ ಒಂದು ಸಾರಿ ನೋಡಿದನು. ಸುತ್ತ ಇದ್ದ ಗುಂಪು ಕಣ್ಣಿನಲ್ಲೇ ನಾಗರಾಜುವಿಗೆ ಎರಡನೇ ರೌಂಡು ಹೊಡೆಯಲು ಈಗ ಮುಖಂಡ ತಾನು ಕೆಮ್ಮುತ್ತ —

" ಈ ಮಾತನ್ನು ಮೆಚ್ಚಬೇಕಾದ್ದೆ, ಶಭಾಷ್ ಮೇಸ್ಟ್ರು! ನಾನು ಕೂಡ ಆ ಸಕಲೇಶಪುರದವರೆಗೂ ಹೋಗಿರುವವನು. ಇಂಥ ಮಾತನ್ನು ಎಲ್ಲೂ ಕೇಳಿರಲಿಲ್ಲ. ನನ್ನ

ಕಿವಿಗೆ ಬಿದ್ದೇ ಇರಲಿಲ್ಲ. ಅಯ್ಯಯ್ಯೋ ಎಂಥ ಹೊಸ ಮಾತು ಇದು ! ಈ ದೇಶವೆಲ್ಲಾ ಹುಡುಕಿಕೊಂಡು ಬಂದರೂ ಸಿಗಲಾರದು ! ಅಂಥ ಮಾತು..... ಆಯಿತು ಮೇಸ್ಟ್ರು, ಅದಕ್ಕೂ ಒಪ್ಪಿಕೊಳ್ಳುತ್ತೇನೆ. ಅದೇ ನಾವು ಸುಮ್ಮನೆ ಕಟ್ಟಾಕಿ ಬಿಡದಿಯಲ್ಲದೇ ಅವನಿಗೆ ಹೊಡೆದೆವಲ್ಲ... ಅದು ತಪ್ಪು, ನಮ್ಮದೇ ತಪ್ಪು ಎಂದು ಹೇಳುತ್ತೇನೆ. ಅವನು ಎಳನೀರು ಕಿತ್ತನಲ್ಲ... ಅದು ಮಾತ್ರ ಒಳ್ಳೆ ಕೆಲಸ. ಅದರಲ್ಲಿ ಏನಾದರೂ ತಪ್ಪಿದೆಯೆ? ತಪ್ಪಿದೆಯೇನ್ರಿ ಮೇಸ್ಟ್ರೆ?" ಎಂದವನು ಒಂದು ಊರಿನ ಅಗಲದಷ್ಟು ಕಣ್ಣುಬಿಟ್ಟು ನೋಡುತ್ತ, ಸಿಗರೇಟು ಹಚ್ಚಿ ಹೊಗೆಬಿಟ್ಟು ಕೆಮ್ಮತೊಡಗಿದನು. ಅವನು ಅಲ್ಲಿ ಕೆಮ್ಮಲಾರಂಭಿಸಲು, ಇಲ್ಲಿ ನಾಗರಾಜುವಿಗೆ ಕೆಮ್ಮು ನಿಂತು "ಅದೂ ತಪ್ಪೇರಿ. ಅದ್ಕ ನೀವ್ಗಳು ಕಟ್ಟಾಕಂಡು ಹೊಡ್ದಿಂದರೂ ತಪ್ಪೇರಿ. ಆ ಎಳನೀರನ್ನಾ ಅದ ಕಿತ್ತವರನ್ನಾ ಪೋಲೀಸ್ಗೆ ಕೊಡಬೇಕಿತ್ತು. ಅದು ಬಿಟ್ಟು...." ("ಅದು ಕೂಡ ತಪ್ಪೇನೇ. ಅದಕ್ಕೇ ನೀವು ಕಟ್ಟಿಹಾಕಿಕೊಂಡು ಹೊಡೆದಿರುವುದು ತಪ್ಪೇನೇ. ಆ ಎಳನೀರನ್ನು ಹಾಗು ಕಿತ್ತವರನ್ನು ಪೋಲೀಸಗೆ ಕೊಡಬೇಕಿತ್ತು. ಅದು ಬಿಟ್ಟು....") ಎನ್ನುತ್ತಿರಲು, ಮುಖಂಡ ನಾಗರಾಜುವಿನ ಮಾತನ್ನು ತಡೆದು "ಅದೇಕೆ ಮೇಸ್ಟ್ರು ಪೋಲೀಸಿನವರಿಗೆ ಕೊಡಬೇಕು? ನಮ್ಮ ಕೈಗೆ ಬಳೆ ತೊಟ್ಟುಕೊಂಡಿದೀವೇನು ನಾವು? ಹಾಗಾದರೆ ನಮ್ಮ ಊರಿನಲ್ಲಿ ನ್ಯಾಯವಂತರೇ ಇಲ್ಲವೆ? ನೀವು ಓದಿದವರು. ನೀವು.... ಮೇಸ್ಟ್ರು. ನಿಮ್ಮಂಥವರು ನ್ಯಾಯವನ್ನು ಹೇಳಿದರೆ ಅದನ್ನು ನಾವು ಕೇಳುವುದರಲ್ಲಿ ತಪ್ಪೇನಿದೆ? ಈಗ.... ನಮ್ಮದು ತಪ್ಪು ಎಂದು ತಾನೆ ನೀವು ಹೇಳುವುದು? ಹಾಗೂ ಬರುತ್ತೇನೆ.... ಮೇಸ್ಟ್ರು, ಸರಿಯೆ? ಎಲ್ಲಿ ಆ ಗಾರೆಸಿದ್ದನ ಕಟ್ಟನ್ನು ಬಿಚ್ಚಾಕಿ...." ಎನ್ನುತ್ತಿದ್ದಂತೆ ಕಟ್ಟುಗಳು ಬಿಚ್ಚಿಕೊಳ್ಳಲು, ಆಗ ಮುಖಂಡನು ತನ್ನ ಜುಬ್ಬದೊಳಗಿನ ಜೇಬನ್ನು ಅಲುಗಾಡಿಸುತ್ತ ನೂರೊಂದು ರೂಪಾಯಿ ತೆಗೆದು "ಈಗ ನಮ್ಮ ಕಡೆ ದಂಡವನ್ನು ತೆಗೆದುಕೊಳ್ಳಿ, ಮೇಸ್ಟ್ರು. ಇದನ್ನು ನೀವೇ ಮಠಕ್ಕೆ ತಲುಪಿಸಿಬಿಡಿ. ಆಮೇಲೆ ಅವನದನ್ನು ತಪ್ಪು ಎಂದು ಹೇಳಿದಿರಿ ತಾನೆ? ಈಗ ಅವನ ದಂಡವನ್ನು ಕೊಡಿಸಿ. ಎಲ್ಲರಿಗೂ ಒಂದೆ ರೀತಿಯಲ್ಲವೆ ನ್ಯಾಯ.... ಎಂದನು.

ಈ ಧರೆಗೆ ಬಂದ ಆ ಗಳಿಗೆ ಜಾಯಮಾನವೊ ಏನೊ ಸ್ವಲ್ಪ ಸಮಯವಾದರು ಸುಮ್ಮನಿರದ ಗಾರೆಸಿದ್ದಯ್ಯನು ಮುಖಂಡನ ಬೆರಳು ತುದಿಯಲ್ಲಿ, ನಾಗರಾಜುವಿನ ಮುಂದ

ಹತ್ತಿರದಲ್ಲಿ ಬೀಳುವ ರೀತಿ ಆಡುತ್ತಿದ್ದ ನೋಟುಗಳನ್ನು ತಕ್ಷಣ ತನ್ನ ಕೈಗೆ ಬಿಡಿಸಿ ಕೊಂಡು, ಒಂದು ರೂಪಾಯಿಯನ್ನು ತನ್ನ ಬೆರಳಿನೊಳಗೆ ಕಾಣದ ರೀತಿ ಮಾಡಿ, ನೂರು ರೂಪಾಯಿಯನ್ನು ಆ ಮುಖಂಡನ ಮುಂದಿಟ್ಟು " ತಕ್ಕಪ್ಪ ಈಗ ನನ ಪಾಲ್ನ ತಪ್ಪ. ಉಳಕ ಒಂದ್ರೂಪಾಯ ಅಮ್ಯಾಕಾ ಕೊಡ್ತೀನಿ. ನಂಗ ನೂರು ಸಾಲ ಕೊಟ್ರಿ ಅಂದ್ಕೊಳ್ಳಿ, ನಿಮ ಪಾಲ್ನ ತಪ್ಪ ನೂರೊಂದು ನೀವ ಬ್ಯಾರಿಯಾಗಿ ಮಡಕ್ಕ ಕಟ್ಗೊಳ್ಳಿ..." (ತೆಗೆದುಕೊಳ್ಳಿ ಈಗ ನನ್ನ ಭಾಗದ ದಂಡವನ್ನು, ಉಳಿದ ಒಂದು ರೂಪಾಯಿಯನ್ನು ಆಮೇಲೆ ಕೊಡುತ್ತೇನೆ. ನನಗೆ ನೂರು ರೂಪಾಯಿ ಸಾಲ ಕೊಟ್ಟಿದ್ದೀರಿ ಎಂದು ತಿಳಿದು ಕೊಳ್ಳಿ. ನಿಮ್ಮ ಭಾಗದ ದಂಡ ನೂರೊಂದು ರೂಪಾಯಿ ನೀವು ಬೇರೆಯಾಗಿ ಮಡಕ್ಕೆ ಕಟ್ಟಿಕೊಳ್ಳಿರಿ....") ಎಂದು ಹೇಳಿ ನಾಗರಾಜು ನೆರೆದಿದ್ದ ಆ ಗುಂಪಿಗೆಲ್ಲ ಆಶ್ಚರ್ಯ ಪಡಿಸಿದನು.

ಮುಖಂಡನಿಗೆ ಮಾತು ನಿಂತು ಚಕಿತಗೊಂಡನು. ಗಾರಸಿದ್ದಮ್ಮಾವ ದಿಗ್ಭ್ರಮೆಗೊಂಡಿದ್ದ ನಾಗರಾಜುವಿಗೆ " ಈಗ ಅಂತ್ರಲ್ಲ ಬನ್ನಿ ಸ್ವಾಮಿ" (" ಈಗ ಅಂತ್ರಲ್ಲ ಬನ್ನಿ ಸ್ವಾಮಿ") ಎಂದು ಎಳೆದು ತಿರುಗಲು, ಕೆಳಕ್ಕೆ ಧುಮುಕಿದ ಮುಖಂಡನು :

" ನಮ್ಮ ದುಡ್ಡನ್ನು ನಮಗೆ ಕೊಟ್ಟು ಅದೇಗೆ ನನ್ನ ಭಾಗದ ದಂಡ ಕೊಟ್ಟಿದ್ದೇನೆ ಎನ್ನುತ್ತೀಯಲ್ಲೋ ಗಾರಸಿದ್ದ?"
" ಅವ್ರ ನೀವ ಸಾಲ ಅಂತಕಪ್ಪ ನಂಗ ಕೊಟ್ಟಿರದು. ಸಾಲ ಅಂತಾದಮ್ಯಾಲ ನಿಮದೆಂಗಾದದ್ದು ದುಡ್ಡು?" (ಅಂದ್ಮೇಲೆ ನೀವು ಸಾಲವೆಂದು ನನಗೆ ಕೊಟ್ಟಿರುವುದು, ಸಾಲ ಅಂತಾದಮೇಲೆ ದುಡ್ಡು ನಿಮ್ಮದೇಗಾಗುತ್ತೆ?")
" ಸಾಲ? ಹಾಗಾದರೆ ಎಂದು ನೀನು ಸಾಲವನ್ನು ವಾಪಸ ಕೊಡುವುದು?"
" ಯಾವಾಗಾದರೂ ಕೊಡ್ತೀನಿ ತಕ್ಕಪ್ಪ ಅದ್ಯಾಕ? ನಾ ಹೋಂಟದು ಮೇಳಿ ಅಲ್ಲಕನ ಕಡಾ...!! "
(ಅದಕ್ಕೇನು ಸ್ವಾಮಿ ಎಂದಾದರು ಕೊಡುತ್ತೇನೆ? ನಾನು ಹೋಗುವುದು ಉಳುವುದಕ್ಕಲ್ಲ ಗಾರೆಕೆಲಸಕ್ಕೆ...!! ")

" ಮೇಸ್ತ್ರಿ, ಇದಕ್ಕೆ ಸ್ವಾರಿಯ ಹೇಳಿ. ಜೋಳಿಗೆ ಒಳಗೆ ಜಾಡಿ ಬೀಜ , ಸುಳ್ಳಿನ ಮಳೆ ತುಂಬಿಕೊಂಡು, ಅದನ್ನು ನೇತಾಕಿಕೊಂಡು ಊರೂರಿನ ಮೇಲೆ ತಿರುಗುತ್ತ ಆಂಗ್ಲಮ್ಮಂದಿರ

ರೀತಿ ಇರುವವರನ್ನು ಹಾಳುಮಾಡಿ ಊರನ್ನು ನಾಶಮಾಡುವುದಕ್ಕೆಂದು ಬಂದಿದೀರ... ?" ಎಂದು ಅವನು ಹೇಳುತ್ತಿದ್ದರೂ ಆ ಕೆಮ್ಮುವ ನಾಗರಾಜುವನ್ನು ಗಾರೆಸಿದ್ದಮಾವ ಎಳೆದುಕೊಂಡು ಹೊರಟೇಬಿಟ್ಟನು. ಆ ಗುಂಪಿನಿಂದ " ಅವನ ಬ್ಯಾಗನ್ನು ಕಿತ್ತುಕೊಳ್ಳಿರಿ" ಎಂಬ ಮಾತು ಹಾಗೂ ಗಾರೆಸಿದ್ದಮಾವನ ಬೆನ್ನಿಗೆ ಒಂದೆರಡು ಕಲ್ಲು ಬಂದು ಬಿದ್ದುವು.

ಬೀದಿ ತಲುಪಿದರೂ ನಾಗರಾಜುವಿಗೆ ಕೆಮ್ಮು ನಿಂತಿರಲಿಲ್ಲ. ಗಾರೆಸಿದ್ದಮಾವ ಮಾತು ಮಾತಿಗೂ " ಕೇಮಿಲ್ಲದಂತು ಅದ್ಯಾಕ ಬರಾಕ ಹೋದ್ರೀ ಸ್ವಾಮಿ ನೀವ ಬ್ಯಾರಿಂತು" (" ಕೆಲಸವಿಲ್ಲದೆ ಅದೇಕೆ ಬರುವುದಕ್ಕೆ ಹೋದಿರಿ ನೀವ ಬೇರೆ") ಎನ್ನುತ್ತಿದ್ದನು. ಮೈದುಂಬಿ ಕೊಂಡಿದ್ದ ಸುಸ್ತನ್ನು ನಾಗರಾಜು ಒಂದು ಸ್ಥಿತಿಗೆ ತಲುಪಿಸಿ, ಆಮೇಲೆ:

" ಅಲ್ಲಕನ್ರೀ... ನಿಮ್ಮನ್ನ ಕಟ್ಟಿಕಂಡು ಹೊಡೀತಾ ಇರ್ವಾಗ ಬರದ ಇರಾಕ ಆದ?" (" ಅಲ್ಲಾ ಕನ್ರೀ... ನಿಮ್ಮನ್ನು ಕಟ್ಟಿಕೊಂಡು ಹೊಡೆಯುತ್ತ ಇರುವಾಗ ನಾನು ಬರದೆ ಇರಲು ಸಾಧ್ಯವೇ?")

" ಅವ್ರು ನನ್ನ ಕಟ್ಟಿಕಂಡು ಹೊಡೀದಿದ್ರ...? ಆ ಬಡ್ಡೆತ್ತವು ಎಷ್ಟ ಜನ ಇದ್ದರೂ ನಾ ದಕ್ಕಿನಾ ಸ್ವಾಮಿ! ನನ್ನ ಕಟ್ಟಿಕೆಂ ಹೊಡೆಯೋ ಗೋರಂಡ ಗಂಡ್ಸು ಊರಲ್ಲಿ ಇನ್ನೂವಿ ಹುಟ್ಟಿಲ್ಲ ಅಂದ್ಕೊಳ್ಳಿ.... ಅಮ್ಮಮ್ಮಾ!" (" ಅಂತೊಯ್ಯ ನನ್ನನ್ನ ಕಟ್ಟಿ ಕೊಂಡು ಹೊಡೆಯುತಿದ್ದರೆ....? ಅವರು ಎಷ್ಟು ಜನ ಇದ್ದರು ನಾನು ಸೋಲುತ್ತೀನ ಹೇಳಿ! ನನ್ನನ್ನ ಕಟ್ಟಿಕದೆ ಹೊಡೆಯುವ ಎದೆಗಾರಿಕೆಯುಳ್ಳ ಗಂಡಸು ಊರಲ್ಲಿ ಇನ್ನು ಹುಟ್ಟಿಲ್ಲ ತಿಳಿದುಕೊಳ್ಳಿರಿ....")

" ಏನ್ರೀ ನೀವ ಆಡ ಮಾತು? ತಪ್ಪುಕೊಟ್ಟಾ..."

(ಏನ್ರಿ ನೀವು ಆಡುವ ಮಾತು? ದಂಡ ಕೊಟ್ಟು......")

" ಐ ಅದ್ಯಾವ ಸೀಮ ತಪ್ಪ ಸ್ವಾಮಿ ಅದು? ನಾನೇ ಒಂದ ರೂಪಾಯಿ ತಪ್ಪ ತಕ್ಕ ಬರ್ಲಿಲ್ವಾ?" (ಯಾವ ಸೀಮೆ ದಂಡ ಸ್ವಾಮಿ ಅದು? ನಾನೇ ಒಂದು ರೂಪಾಯಿಯಂತು ದಂಡ ತೆಗೆದುಕೊಂಡು ಬರಲಿಲ್ಲವೇ?")

" ಸಾಲವಲ್ಲವೇನ್ರೀ ಅದು.... ?"

" ಎಂಥ ಸಾಲ ಸ್ವಾಮಿ ಅದು? ಅವ ಬಂದು ನನ್ನತ್ರ ತಕ್ಕಂಡನ...."

(" ಎಂಥ ಸಾಲ ಸ್ವಾಮಿ ಅದು? ಅವನು ಬಂದು ನನ್ನತ್ತಿರ ಕಿತ್ತುಕೊಳ್ಳೋದು...")

ಎಂದು ಮಾತನಾಡುತ್ತ ಬರುತ್ತಿರಲು, ಚೆನ್ನನ ಅಪ್ಪ ಯಾವುದಕ್ಕೂ ಸೇರದ ಹಾಗೆ ಕುಳಿತವನು ಕಂಬಳಿ ಒಳಗಿನಿಂದ ಕೈ ತೆಗೆದು ಚಾಚಿ " ಹೊ ಹೊ ಊರ್ಗ ಹೊಸಬ್ರು ಅಂತ ಕಾಣ್ತದ... ಒಂದ ಬೀಡಿಗೀಡಿ ಇದ್ರೆ ಕೊಡಿ ನೋಡ್ಮ" (" ಓಹೋ ಊರಿಗೆ ಹೊಸಬರೆಂದು ಕಾಣುತ್ತದೆ.... ಒಂದು ಬೀಡಿ ಇದ್ದರೆ ಕೊಡಿ") ಎಂದನು.

ಆಗ ಒಂದು ಬೀಡಿ ತೆಗೆದು ಗಾರೆಸಿದ್ದಯ್ಯನು " ಈ ನಮ್ ಚೆನ್ನನ ಅಪ್ಪಂಗ ಬೀಡಿ ಕೊಟ್ಟೂ ಕೊಟ್ಟೂ ನನ ತಲ ಕೂದ್ಲೆಲ್ಲ ಉದುರೋಯ್ತಪ್ಪ" (" ಈ ನಮ್ಮ ಚೆನ್ನನ ಅಪ್ಪನಿಗೆ ಬೀಡಿಯನ್ನು ಕೊಟ್ಟು ಕೊಟ್ಟು ನನ್ನ ತಲೆ ಕೂದಲೆಲ್ಲ ಉದುರಿ ಹೋಯಿತಪ್ಪ") ಎಂದು ಕೊಟ್ಟನು. ಆ ಬೀಡಿಗೆ ಬೆಂಕಿ ಹಚ್ಚುತ್ತ ಚೆನ್ನನ ಅಪ್ಪ – " ನಿನ್ನಾಕ್ಯರುಡ ಗಾರೆಸಿದ್ದ ಕೊಡು ಅಂತ ಕೇಳ್ದವರು? ನಾನು ಅವರ್ನ ಕೇಳ್ದುದ್ರ ಸುಮ್ನ ರಾನ್ರೆ ನೀನೇ ಕೊಟ್ಟುಬುಟ್ಟು ಅದಕ್ಕೆ ಒಂದ ಮಾತಾಡ್ತೀಯ ಈಗ? ಅಯ್ತು ಕಣಯ್ಯ! ನಿನ ಮಾತಿಗೆ ಬತ್ತೀನಿ ಕಣಯ್ಯ. ನಿನ ತಲೆ ಇರಕೂದಲು ಒಂದೂ ಇಲ್ದಂಗ ಉದುರೋಗ ಗಂಟಾನೂ ಬೀಡಿ ಕೊಡ್ತಿಯ್ಯ ಸಾಕು. ನಿನ ತಲ ಬೋಳಾಗ ಆದಮ್ಯಾಲ ನಿನ ಬೀಡಿ ಕೇಳಾದ ನಾನೇ ಬುಟ್ಟುಬುಡ್ತೀನಿ" (" ನಿನ್ನನ್ನು ಯಾರೋ ಗಾರೆಸಿದ್ದ ಕೊಡು ಎಂದು ಕೇಳಿದವರು? ನಾನು ಅವರನ್ನು ಕೇಳಿದೆ, ಸುಮ್ಮನೆ ಇರಲಾರದೆ ನೀನೆ ಕೊಟ್ಟು ಈಗ ಅದಕ್ಕೆ ಮಾತನಾಡುತ್ತೀಯ? ಅಯ್ತಪ್ಪ! ನಿನ್ನ ಮಾತಿಗೆ ಬರುತ್ತೇನೆ, ನಿನ್ನ ತಲೆಯಲ್ಲಿ ಇರುವ ಕೂದಲು ಒಂದು ಇಲ್ಲದಂತೆ ಉದುರಿ ಹೋಗುವವರೆಗೆ ಬೀಡಿಕೊಡು ಸಾಕು. ನಿನ್ನ ತಲೆ ಬೋಳು ಆದಮೇಲೆ ನಿನ್ನನ್ನು ಬೀಡಿ ಕೇಳುವುದನ್ನು ನಾನೇ ಬಿಟ್ಟುಬಿಡುತ್ತೇನೆ") ಎಂದು ನಗುತ್ತಿದ್ದನು. ಆಗ ಹೊರಗೆ ಬಂದಂತ ಚೆನ್ನನಿಗೆ ನಾಗರಾಜು ಕಂಡುಬಂದು " ಹೊ ಹೊ ವೆಲ್ಕಂ ಸಾ... ಬನ್ನಿ ಸಾ" (" ವೆಲ್ಕಂ ಸಾರ್.... ಬನ್ನಿ ಸಾರ್") ಎನ್ನುತ್ತ ಬಂದನು. ನಾಗರಾಜು ಎಲ್ಲರೂ ಎನ್ನುವಂತೆ " ಏನ್ರೀ ಜೇಮ್ಸ್‌ಬಾಂಡು.... ನಿಮ್ಮಂಥವರೆಲ್ಲ ಊರಲ್ಲಿ ಇದ್ರೂವಿ ಇಂಥವ್ಕೆಲ್ಲ ಅವಕಾಶ ಕೊಡ್ತೀರಲ್ಲ" ("ಏನ್ರೀ ಜೇಮ್ಸ್‌ಬಾಂಡ್...... ನಿಮ್ಮಂಥವರೆಲ್ಲ ಊರಿನಲ್ಲಿ ಇದ್ದೂ ಇಂಥವಕ್ಕೆಲ್ಲ ಅವಕಾಶ ಕೊಡುತ್ತಿರಲ್ಲ") ಎಂದರು.

ಚೆನ್ನ ಕಣ್ಣು ಮುಚ್ಚುತ್ತ ನಗುವನ್ನು ಒಟ್ಟಿಗೆ ಅರಳಿಸುತ್ತ " ಯಾನ ಸಾ, ಯಾನ ಸಾ... ನೀವ ಅನ್ನಾತ್ತ ಇರಾದು ನಂ ಗಾರೆಸಿದ್ದಾಯ್ನ ಮಾತ? ಅವ್ನ ಕಯ್ಲಿ ಇನ್ನೊಂದ್ಸಲ ಕಂಡವ್ರ ಎಳ್ದೀರ ಮುಟ್ಟಲ್ಲ ಅನ್ಸುತ್ತ....." (ಏನು ಸಾರ್... ನೀವು ಹೇಳುತ್ತಿರುವುದು

ನಮ್ಮ ಗಾರೆಸಿದಂಮಾವನ ಮಾತೆ? ಅವನ ಕೈಯಲ್ಲಿ ಇನ್ನೊಂದು ಸಾರಿ ಬೇರೆಯವರ ಎಳನೀರನ್ನು ಮುಟ್ಟುವುದಿಲ್ಲ”) ಎಂದು ಹೇಳಿಸಿ ಎಂದಾಗ, ತಕ್ಷಣ ಗಾರೆಸಿದಂಮಾವ “ಇನ್ನು ಮುಟ್ಟಲ್ಲಕಯ್ಯ” (“ಇನ್ನು ಮುಟ್ಟುವುದಿಲ್ಲ ಕಾಣಯ್ಯ”) ಎಂದನು.

ಗಾರೆಸಿದಂಮಾವನ ಆ ಮಾತು ಚೆನ್ನನಿಗೆ ಉಕ್ಕಿಸಿದ ಆ ನಗುವಿಗೆ ಹೊಟ್ಟೆ ಹಿಡಿದುಕೊಂಡು ನಗುತ್ತ “ಹೊ ಹೊ ಮಾವೋ ಯಾನಂದ್ಯ ಯಾನಂದ್ಯ? ಮುಟ್ಟಲ್ಲ ಅಂತ! ಬಸುರಿ ಹೆರ್ಗ ಟೈಮಿಲ್ಲ ಯಾನಂದ್ಕಂಡಳು ಹೇಳು....” (“ಏನೆಂದೆ ಮಾವ? ಮುಟ್ಟುವುದಿಲ್ಲ ಎಂದು! ಗರ್ಭಿಣಿ ಹೆಂಗಸು ಹೆರಗೆ ಟೈಮಿನಲ್ಲಿ ಏನೆಂದುಕೊಳ್ಳುತ್ತಾಳೆ ಹೇಳು...”) ಎಂದು ನಗುತ್ತ ಇರಲು, ಗಾರೆಸಿದಂಮಾವ ತನ್ನ ನಗುವನ್ನು ಒಳಕ್ಕೆ ನುಂಗುತ್ತಿರಲು, ನಾಗರಾಜು “ಏನ್ರೀ ಅದು?” ಎಂದರು. ನಗುತ್ತಿದ್ದ ಚೆನ್ನ ಆಗ “ಅದಿಯ ಸಾ, ಬಸುರಿ ಹೆರ್ಗ ಟೈಮಿಲ್ಲ, ಆ ನೋವ ತಡ್ಕಳಾಕ ಆಗಲಾರೆ, ‘ಸಿವಾ, ಈ ಜಲ್ಮದಲ್ಲಿ ಇನ್ನೊಂದ್ಸಲ ಮಾಡಸ್ಕಳಲ್ಲಕಪ್ಪ... ಇದೊಂದ ಸಲ ಯಾಗಾರಾ ಮಾಡಿ ಪಾರು ಮಾಡ್ಬುಡಪ್ಪ...’ ಅಂದ್ಕಂಡಳಂತೆ. ಆಮ್ಯಾಕ ಬಾಣ್ತಿ ಆದ ತಿರ್ಗ ನಾಳ್ಕ ಅವಳ್ಗ ಬೇಕು ಅನ್ಸಿದಂತೆ! ಆ ಥರಂವ ಈ ನಮ್ಮ ಗಾರಸಿದ್ದ್ಮಾವ, ಬೇಕಾರ ಈಗ್ಲಿಯ ಎಲ್ಲಿಂದಾರು ಎಳ್ನೀರ್ನ ಕಿತ್ಗಬಂದು ನಿಮ ಮುಂದಿಟ್ಟು ‘ಗುತ್ತ್ಗ ಮರೆಂದುಂ, ಕುಡೀರಿ ಸೋಮಿ ನಾಚ್ಕಬೇಡಿ’ ಅಂತ ನಿಮ್ಗಯ ಕುಡಿಸ್ತನ...” (“ಅದೇ ಸಾರ, ಗರ್ಭಿಣಿ ಹೆಂಗಸು ಹೆರಗೆ ಸಮಯದಲ್ಲಿ ನೋವನ್ನು ತಡೆದುಕೊಳ್ಳುವುದಕ್ಕೆ ಆಗಲಾರದೆ, ‘ಶಿವಾ, ಈ ಜನ್ಮದಲ್ಲಿ ಇನ್ನೊಂದುಸಾರಿ ಗರ್ಭಿಣಿಯಾಗುವುದಿಲ್ಲವಪ್ಪ... ಇದೊಂದು ಸಾರಿ ಹೇಗಾದರು ಮಾಡಿ ಪಾರು ಮಾಡುಬಿಡಪ್ಪ....’ ಎಂದು ಕೊಳ್ಳುತ್ತಾಳಂತೆ. ಆಮೇಲೆ ಬಾಣಂತಿ ಆದ ಮೂರನೆ ದಿನವೆ ಅವಳಿಗೆ ಮತ್ತೆ ಆಗಬೇಕು ಎಂದು ಆಸೆಯಾಗುತ್ತದಂತೆ! ಆ ರೀತಿಯವನು ಈ ನಮ್ಮ ಗಾರೆಸಿದಂಮಾವ. ಬೇಕಾದರೆ ಈಗಲೆ ಎಲ್ಲಿಯಾದರು ಎಳನೀರನ್ನು ಕಿತ್ತುತಂದು ಮುಂದಿಟ್ಟು ‘ಗುತ್ತಿಗೆ ಮರದ್ದುಂ, ಕುಡಿಯಿರಿ ಸ್ವಾಮಿ ನಾಚಿಕೊಳ್ಳಬೇಡಿ’ ಎಂದು ನಿಮಗೆ ಕುಡಿಸುತ್ತಾನೆ........”)

ಗಾರೆಸಿದಂಮಾವನು ಚೆನ್ನನ ಮಾತಿಗೆ ನಗುತ್ತ “ಈ ಚಿಕ್ಕಂಡ್ನ ಮಾತ ಕೇಳ್ಕಂಡು ನೀವ ಅಡ್ರಿ ಬನ್ನಿ ಸೋಮಿ. ನಂ ಮನೆರ ಇಗೋ ಅಂಬರಿಯಾ ತುಂಬಸೊಪ್ಪು ಕುಡ್ಕಂಡು ಬರ್ರಾರಿ” (“ಈ ಚಿಕ್ಕಹುಡುಗನ ಮಾತು ಕೇಳಿಕೊಂಡು ನೀವ ಅಡುವಿರಿ ಬನ್ನಿ ಸ್ವಾಮಿ,

ನಮ್ಮ ಮನೆಯಲ್ಲಿ ಇರುವ ಗಂಜಿಯೋ ತಂಬಿಸೊಪ್ಪೋ ಕುಡಿದುಕೊಂಡು ಬರುವಿರಂತೆ") ಎಂದಾಗ, ನಾಗರಾಜು " ನಂಗ ಅದೆಲ್ಲ ಬ್ಯಾಡಕನ್ರೀ" (" ನನಗೆ ಅದೆಲ್ಲಾ ಬೇಡಕನ್ರಿ") ಎಂದರು. ಆಗ ಗಾರೆಸಿದ್ದಮ್ಮಾವ " ಅಂಬ್ಲಿ ಅಂದ್ರ ಅಂಬ್ಲಿ ಅಲ್ಲಕನ ಬನ್ರಿ ಸೋಮೀ. ಅದ್ಯಾಕ ಹೆದ್ರಕಂಡರಿ! ಅಕ್ಕೀನೆ ಹಾಕಿಸ್ತಿನಿಕನ ಬನ್ರಿ. ಬಯ್ಯ ದನ್ನರನು ನೀನೂವಿ" (ಗಂಜಿ ಎಂದರೆ ಗಂಜಿಯನ್ನೇ ಮಾಡಿಸುವುದಿಲ್ಲ ಕಾಣ ಬನ್ರಿ ಸ್ವಾಮಿ. ಅದೇಕೆ ಹೆದರಿಕೊಳ್ಳುತ್ತೀರ ಅಡಿಗೆಯನ್ನೇ ಮಾಡಿಸುತ್ತೇನೆ, ಬಾರಯ್ಯ ದೆನ್ನರನ, ನೀನು ಕೂಡ") ಎಂದನು.

ಮಠದ ಮುಂದೆ ನಡೆದದ್ದೇ ಮೊದಲಾಗಿ ಇನ್ನೂ ಮರೆತಿರದ ನಾಗರಾಜುವಿನ ದಿಗ್ಭ್ರಮೆಗೆ ಇದು ಸೇರಿ " ಅಯ್ಯಯ್ಯೋ ಹಂಗಲ್ಲಕನ್ರಿ ನಾನು ಅಂದುದ್ದು..." (" ಅಯ್ಯಯ್ಯೋ ಹಾಗಲ್ಲ ರೀ ನಾನು ಹೇಳಿದ್ದು...") ಎಂದದ್ದು ಕಿವಿಗೆ ಹಾಕಿಕೊಳ್ಳದ ಗಾರೆಸಿದ್ದಮ್ಮಾವನು " ನಿಮ್ಮಾಂಗ ನಾವೇನ ಸಿಟಿಯವ್ರ ಸೋಮಿ ನಾವು? ಕೊಂಡು ತಂದ ಅಕ್ಕಿ ಇನ್ಯಾಂಗಪ್ಪ ಅನ್ನಕ. ಗದ್ದೆಸೀಮಲಿ ಗೇದ್ಕಂಡು ಬಂದಿರದುಕನ ಬನ್ರಿ" (" ನಿಮ್ಮ ರೀತಿ ನಾವೇನು ಸಿಟಿಯವರೆ? ಕೊಂಡು ತಂದ ಅಕ್ಕಿ ಹೇಗಪ್ಪ ಎನ್ನುವುದಕ್ಕೆ. ಗದ್ದೆ ಸೀಮೆಯಲ್ಲಿ ಕಷ್ಟ ಪಟ್ಟು ಸಂಪಾದಿಸಿಕೊಂಡು ಬಂದಿರುವುದು ಕಾಣ ಬನ್ರಿ ಸ್ವಾಮಿ") ಎನ್ನುತ್ತ ಆ ಕಡೆಗೆ ನಡೆದನು.

ಹಾಂವತ ಎಂದು ಖುಷಿಯಾಗಿದ್ದವಲ್ಲ ತಾರಮ್ಮನ ಗುಡಿಸಲಿನ ತೆಂಗಿನಗರಿ ಇತ್ಯಾದಿ, ಅಲ್ಲಿ ತಾರಮ್ಮನ ಕೈ ಸನ್ನೆಗೆ ತಕ್ಕಾಗೆ ಈರಿಯ ಕೈ ಆಡುತ್ತ, ಈಗ ಮಸಾಲೆಕಾರ ರುಬ್ಬುತ್ತ ಅಲ್ಲಿಂದೇಳುತ್ತಿದ್ದ ಆ ವಾಸನೆಗೆ, ಆಗತಾನೆ ಸಾರಿಸಿ ಒಣಗದೆ ಇನ್ನೂ ನೀರಿರುವ ಸಗಣಿ ವಾಸನೆಯೂ ಬೆರೆಯುತ್ತಿತ್ತು. ಅಲ್ಲಿ ಹುಂಜವೊಂದರ ರುಂಡವು ಮುಂಡದಿಂದ ಬೇರ್ಪಟ್ಟು ಬಿದ್ದಿರಲು, ಕುಯ್ಯುವಾಗ ಆ ಹುಂಜದ ಬಾಯಿಗೆ ನಾಲ್ಕು ಹನಿ ನೀರನ್ನು ತೊಟ್ಟಿಕ್ಕಿಸಿದ್ದರು. ಅದರ ಒಟ್ಟು ಶರೀರದ ಒದರುವಿಕೆ ಈಗ ನಿಂತಿತ್ತು. ಆ ಶರೀರದ ಒಳಗಿನ ಸ್ವತಂತ್ರ ಮಾಂಸಖಂಡಗಳಲ್ಲಿದ್ದ ಕಿರುಜೀವ ಬಿಟ್ಟುಹೋಗುತ್ತ ಕೊನೆಯದಾಗಿ ಥವಥವ ಎನ್ನುತ್ತಿತ್ತು. ಮುಂದೆ ಇದ್ದ ಬಟ್ಟಲಿಗೆ ತೊಟ್ಟಿಕ್ಕಿಸಿದ್ದ ರಕ್ತವು ಹೆಪ್ಪುಗಟ್ಟುತ್ತ, ಅದರ ಮೇಲೆ ಉದುರಿಸಿದ್ದ ನಾಲ್ಕಾರು ಉಪ್ಪಿನ ಹರಳುಗಳು ಕರಗದೆ ಕುಳಿತಿದ್ದವು. ಅಲ್ಲಿ ಹಚ್ಚಿಟ್ಟಿದ್ದ ಊದುಬತ್ತಿಯು ಇನ್ನೂ ಉರಿಯುತ್ತ, ಈ ವಾಸನೆಯು ಮಸಾಲೆ, ಸಗಣಿ ವಾಸನೆಗಳ ಜೊತೆ ಸೇರುತ್ತ, ಈರಿಯು ಹುಂಜದ ಪುಕ್ಕವನ್ನು ಕಿತ್ತು ಬೆಂಕಿಗಿಟ್ಟು ಸುಡತೊಡಗಿದಾಗ ಈ ಮೂಗನ್ನು ಸೀಳುವ ವಾಸನೆಯಲ್ಲಿ ಧಾಳಿಮಾಡುತ್ತ, ಸುತ್ತಲು ಉಸಿರಾಡುವ ಗಾಳಿಯ ಜೊತೆ ಬೆರೆತುಹೋದವು.

ಈ ಬಗೆಯಾಗಿ ವಾಸನೆಗಳು ಒಂದುಗೂಡಿ ಪರಿಣಾಮ ಬೀರುತ್ತಿದ್ದರೆ ಆ ಕಡೆ ಈರಿಯು ಸ್ನಾನಮಾಡಿ ಉಪವಾಸವಿದ್ದು ಹಣೆಯ ತುಂಬ ವಿಭೂತಿ ಕುಂಕುಮ ಹಚ್ಚಿ ತನ್ನ ತಲೆಗೂದಲನ್ನು ಎಂದೂ ಇಲ್ಲದಂತೆ ಇಂದು ಬಾಚಿದ್ದಳು. ಬಾಚಲು ಸುರಿದಿದ್ದ ಹರಳೆಣ್ಣೆಯು ಅವಳ ಕೆನ್ನೆಯನ್ನು ನವಿರಾಗಿ ಸವರುತ್ತ ಇಳಿಯುತ್ತಿತ್ತು. ಅವಳು ಬಾಚಿಕಟ್ಟಿದ್ದ ತುದಿ ಕೂದಲಿನ ಕೆಂಚಲ್ಲವು ಒಂದು ಕಡೆಯಾಗಿ, ಹೆಗಲು ಬೆಂಕಿಕೆಂಡವಾಗಿ ಕಾಣುತ್ತ, ಈ ಕೆಂಡವಾಗಿ ಇದ್ದುದರ ಮೇಲೆ ಮೂರು ಹೂಗಳು ನಗುತ್ತ ಕುಳಿತಿದ್ದವು.

ಅಮ್ಮ ಹೀಗಿರುವಾಗ, ಮಗನು ಬಿಸಿನೀರು ಸ್ನಾನ ಮಾಡಿಸಿಕೊಂಡು ದೇಹದ ಮೂಳೆಗೆಲ್ಲ ವಿಭೂತಿ ಬಳಿಸಿಕೊಂಡು ಸುಸ್ತಾಗಿ, ಅಲ್ಲಿ ತೇಲಾಡುವ ಯಾವ ವಾಸನೆಯೂ ತನಗೆ ಗೊತ್ತಿಲ್ಲ ಎಂಬಂತೆ ತನ್ನಷ್ಟಕ್ಕೇ ತಾನು ಗೋಡೆಗೆ ಮುಖ ಹಾಕಿ ಕುಳಿತಿದ್ದನು.

ಪೂಜ್ಯತೆಯಲ್ಲಿ ಈರಿಯು ಪ್ರೀತಿಯಿಂದ ಹತ್ತು ಜನ ಊಟ ಮಾಡುವಷ್ಟು ಹಿಡಿಯುವ ಕಂಚಿನತಟ್ಟೆ ಬೆಳಗುತ್ತ.... ಬೆಳಗಿದ ಮೇಲೆ ಆ ಕಂಚಿನತಟ್ಟೆ ಹೊರಸುತ್ತಿಗೆ ಮೂರು ಗೆರೆಯ ವಿಭೂತಿ ಎಳೆದು, ಅದಕ್ಕೆ ಊದುಗಡ್ಡಿ ಹಚ್ಚಿಟ್ಟು, ಕೈಜೋಡಿಸಿ ನೆಲಕ್ಕೆ ತಲೆ ಇಟ್ಟು ನಮಸ್ಕರಿಸಿದಳು. ಆಮೇಲೆ ಕಂಚಿನ ತಟ್ಟೆಗೆ ತಾನು ಮಾಡಿದಂಥಹವುಗಳನ್ನು ಕಣ್ಣುಗಳಿಗೆ ಒತ್ತಿ ನಮಸ್ಕರಿಸಿಕೊಳ್ಳುತ್ತ, ಒಂದೊಂದಾಗಿ ಜೋಡಿಸುತ್ತ, ಅರಳಿದ ಕುಸುಬಲಕ್ಕಿ ಅನ್ನವನ್ನು ಬಡಿಸಿ, ಆ ಅನ್ನವನ್ನು ತಗೆದು ಎಸೆಯುವಷ್ಟು ಘಮ್ ಎನ್ನುವ ಸಾಂಬಾರ್ ಹಾಕಿ, ಮೇಲೆ ಕೋಳಿಯ ಕಾಲ, *ಗುಂಡಾಕ್ಕಿಯ ಮೆದುಖಂಡವನ್ನು ನೇರಿಸಿ, ಒಂದು ಅಳತೆ ಇಟ್ಟು ಪಕ್ಕದಲ್ಲಿ ಒಂದು ಮಣ್ಣಿನ ತಟ್ಟೆ ತುಂಬ ತುಳುಕುವಷ್ಟು ಪಾಯಸ ಇಟ್ಟಾಗ ಕಂಚಿನತಟ್ಟೆ ತುಂಬಿ, ಜೊತೆಯಲ್ಲೇ ತಂದಿದ್ದಂಥ ಬ್ರೆಡ್ಡು ಗುಲ್ಕನ್ನುಗಳನ್ನು ಅದರ ಜೊತೆ ಇಟ್ಟಾಗ ಅದು ಭರ್ತಿಯಾಯಿತು. ಆಗ ಅಲ್ಲಿಗೆ ಉರಿಯುವ ಹರಳೆಣ್ಣೆ ದೀಪವನ್ನು ತನ್ನೆರಡು ಕೈಯಲ್ಲೂ ಹಿಡಿದು ದೃಢ ಮನಸ್ಸಿನಲ್ಲಿ ಆ ಕಂಚಿನತಟ್ಟೆ ತುಂಬ ಇದ್ದ ಆಹಾರದ ಮೇಲೆ ಎಲೆ ಅಡಿಕೆ ಇಟ್ಟು ಮೇಲೆ ಈ ಉರಿಯುವ ದೀಪವನ್ನು ಇಟ್ಟಳು.....

ಈರಿಯು ಆಸಾಧಿಕೊಂಡು ನೋಡುತ್ತಲೇ ತನ್ನ ಕ್ರಿಯೆಯನ್ನು ಕಲಿತಿರುವ ರೀತಿಗೆ ತೂರಮ್ಮನಿಗೆ ಹೆಮ್ಮೆಯಾಗುತ್ತಿರಲು, ಇದರಿಂದ ಈರಿಗೆ ಆನಂದವನ್ನು ಗೆದ್ದಂತಾಯಿತು. ಆಹಾರತುಂಬಿ ತುಳುಕಾಡುತ್ತಿದ್ದ ಕಂಚಿನ ತಟ್ಟೆಗೆ ಈರಿಯು ಹೊಸ ಬಿದಿರು ಬುಟ್ಟಿ ಮುಚ್ಚಿ, ಧೂಪದಾರತಿಗೆ ಕೆಂಡವನ್ನು ಅದರ ಮೇಲಕ್ಕೆ ಧೂಪವನ್ನು ಹಾಕಿ, ಆ ಧೂಪದ ಹೊಗೆ ಕವಿದಿರಲು,

---

* ಗುಂಡಾಕ್ಕಿಯು — ಮಾಂಸಕ್ಕಾಗಿ ಬಳಸುವ ಪ್ರಾಣಿಗಳ ಅಥವಾ ಕೋಳಿಯ ಹೃದಯದ ಮಾಂಸ.

ಆಗ ಧೂಪದಾರತಿಯನ್ನು ಕೈಜೋಡಿಸಿ ಹಿಡಿದು, ಕೆಂಡವನ್ನು ಕೊಟ್ಟ ಒಳಗೆ ಒಂದು ಸಾರಿ ಆರತಿ ಮಾಡಿ, ತನ್ನ ಮುಂದಲೆಯನ್ನು ನೆಲಕ್ಕೆ ಮುಟ್ಟಿಸಿ ನಮಸ್ಕರಿಸಿದಳು. ಹೊಸನೀರು ತುಂಬಿದ ಮಣ್ಣಿನ ಬಿಂದಿಗೆಗೆ ಅರಿಶಿನದಾರದ ಎಳೆ ಹಾಕಿ ಧೂಪದಾರತಿ ಮಾಡಿ ಕೈ ಮುಗಿದು ನಮಸ್ಕರಿಸಿದಳು. ನಂತರ ಎದ್ದು ಕಂಡಿನತಟ್ಟೆ ಬಳಿಗೆ ಬಂದು ಧೂಪದಾರತಿಯನ್ನು ಮಾಡಿ ಕೈ ಮುಗಿಯುವುದರೊಳಗೆ ಬೆವರು ಸುರಿಯತೊಡಗಿತು. ಅದೇ ಧೂಪದಾರತಿಯನ್ನು ತೆಗೆದುಕೊಂಡು ಬಂದು ಹೊಸನೀರು ತುಂಬಿದ ಮಣ್ಣಿನ ಬಿಂದಿಗೆಯ ಮುಂದೆ ಇಟ್ಟು ಅಡ್ಡ ಬಿದ್ದು ನಮಸ್ಕರಿಸಿದಳು.

ಆಗ ತನ್ನ ಕರುಳಿನ ಕುಡಿಗೆ ತಲೆಯನ್ನು ಸವರುತ್ತ ಈರಿಯು ' ಕೂಸಾ ' (' ಪಾಪು ') ಅಂದಳು. ಅದು ಕಣ್ಣುಬಿಟ್ಟಿತು. " ವಸಿ ಆಚ್ಗ ಹೋಗಿದ್ದು ಬತ್ತೀನಿ, ಯಾನಾರ ಹಟ್ಟಗಿಟ್ಟ ಅಸುದ್ರ ಆ ಪುಟ್ಟಲಿ ಒಂದೊಸಿ ಯಾನ್ನ ಮುಚ್ಚಿಟ್ಟಿನಿ ತಿಂದ್ಕ ನನಕಂದಾ " (" ಸ್ವಲ್ಪ ಹೊರಗೆ ಹೋಗಿದ್ದು ಬರುತ್ತೇನೆ, ಏನಾದರೂ ಹಸಿವಾದರೆ ಆ ಬುಟ್ಟಿಯಲ್ಲಿ ಒಂದು ಸ್ವಲ್ಪ ಏನನ್ನೋ ಮುಚ್ಚಿಟ್ಟಿದ್ದೇನೆ, ತಿನ್ನು ಪುಟ್ಟ ") ಅಂದಳು. ಅದು ತಲೆ ಆಡಿಸಿತು. ಈರಿ ಆಗ ತಾರಮ್ಮನಂತೆ ಮರೆಯಾಗಿ ನಿಂತು ಮಗುವಿನ ಮೇಲೆ ದೃಷ್ಟಿಯಿಟ್ಟಳು.

ಇನ್ನೇನು ಇನ್ನೊಂದು ಸ್ವಲ್ಪ ಸಮಯ ತಡಮಾಡಿದರೆ ಈ ಸಣ್ಣ ಕರುಳನ್ನು ಆ ದೊಡ್ಡ ಹೊಟ್ಟೆ ಕರುಳೆ ತಿಂದುಬಿಡುವಷ್ಟು ಈರಿ ಮಗನಿಗೆ ಹಸಿವಾಯಿತು. ಆಗಲೂ ಕೂಡ ಅಮ್ಮ ಬಾರದಿರಲು ತಲೆಯನ್ನು ಮೇಲೆತ್ತಿದನು. ನಂತರ ಎದ್ದು ಕುಳಿತನು. ಆ ಕುಳಿತಂತ ಈರಿ ಮಗನಿಗೆ ಅಮ್ಮ ಹೇಳಿದ್ದು ನೆನಪಿಗೆ ಬಂದು ಕಣ್ಣು, ಕಿವಿ ಬಿಟ್ಟುಕೊಂಡು ನೆಲದಮೇಲೆ ತೆವಳುತ್ತ ಬಿದಿರು ಬುಟ್ಟಿಯ ಬಳಿ ಬಂದನು. ಬಂದವನಿಗೆ ಬಿದಿರು ಬುಟ್ಟಿಯನ್ನು ತನ್ನೆರಡು ಕೈ ಬಲದಲ್ಲಿ ಮೇಲಕ್ಕೆತ್ತಿದಂಥ ರಭಸಕ್ಕೆ ಸುಸ್ತಾಗಿ, ಆ ಸುಸ್ತಿಗೆ ಕಂಡಿನ ತಟ್ಟೆ ತುಂಬ ಇದ್ದ ಸಾಮ್ರಾಜ್ಯವು ಆನಂದವನ್ನು ಉಂಟುಮಾಡಿತು. ಇದ್ದಂತ ಕಣ್ಣುಗಳು ಇನ್ನಷ್ಟು ಅಗಲವಾಗಿ ನೋಡಲು, ಆ ಸಾಮ್ರಾಜ್ಯದ ಮೇಲೆ ಜೋತಿಯು ಎಲೆಯನ್ನು ಹಾಕಿಕೊಂಡು ಅದರ ಮೇಲೆ ಕುಳಿತುಕೊಂಡು ಉರಿಯುತ್ತಿದ್ದಳು.

ಆಗ ಇನ್ನೂ ಅಗಲವಾಯಿತು ಕಣ್ಣು. ಬೆವರು ಮೈಯಲ್ಲ ಎಲ್ಲೆತ್ತೊ, ಹರಿದು ಜಲ್ಲಾಡಿತು. ಹುಡುಗನು ಮೈಯೆಲ್ಲ ಕಣ್ಣಾಗಿ ನೋಡಿದಾಗ ಕಂಡಿನತಟ್ಟೆ ತುಂಬ ಇದ್ದ

ಸಾಮ್ರಾಜ್ಯವು ಕಣ್ಣಿಗೆ ತುಂಬಿತು. ಕಣ್ಣಿಗೆ ತುಂಬಿದ ಆನಂದವು ಆ ಶರೀರಕ್ಕೂ ತುಂಬಿತು. ಆನಂದವು ಆ ಹುಡುಗನ ಮುಖದಿಂದ, ಅದೇ ಉಸಿರು ಹಿಡಿದು ನಿಂತ ಅವನ ಅಮ್ಮ ಹಾಗು ತಾರಮ್ಮ ಅಜ್ಜಿಯರು ದೃಷ್ಟಿಹರಿಸಿದ್ದ ಕಣ್ಣುಗಳಿಗೂ ತಲುಪಿತು. ಇವನಂತೆ ಆ ಶರೀರಗಳಲ್ಲೂ ಆನಂದವು ನಲಿದಾಡಿತು.

ಆ ಆನಂದಕ್ಕೆ, ಈ ಮುಂದಿನ ಸಾಮ್ರಾಜ್ಯವನ್ನು ಯಾವ ರೀತಿಯಲ್ಲಿ ಊಟ ಮಾಡಬೇಕೆಂದು ಗೊಂದಲವಾಯಿತು. ಅದರ ಕಣ್ಣುಗಳ ಅಗಲವೆಷ್ಟೊ. ಅನುಭೋಗಿಸಲು ಶಕ್ತಿಯಿಲ್ಲದ ಆ ಶರೀರವು ನಡುಗುತ್ತ, ಆ ನಡುಗುವ ಬೆರಳನ್ನು ಮಾಂಸದ ಸಾರಿಗೆ ಅದ್ದಲು, ಮಾಂಸದ ಸಾರಾದ ಬೆರಳನ್ನು ನಾಲಿಗೆಯು ಚೀಪುತ್ತ, ಅದೇ ಬೆರಳನ್ನು ಪಾಯಸಕ್ಕೆ ಕಳುಹಿಸಲು, ಅಂಟಿಕೊಂಡು ಬಂದಂಥ ಪಾಯಸವನ್ನು ನಗುನಗುತ್ತ, ನೆಕ್ಕಿಕೊಂಡು, ನಂತರ ಗುಲ್ಕನ್ನಿಗೆ ಬೆರಳು ಕಳುಹಿಸಿ ಅದನ್ನು ತೆಗೆದುಕೊಂಡು ಚೀಪುತ್ತ, ಮುಂದಕ್ಕೆ ಈರಿ, ಗುಂಡಾಕ್ಯಿ ತೆಗೆದುಕೊಂಡು ಅದನ್ನು ತಿನ್ನುತ್ತ, ಆಮೇಲೆ ಅವನ ಅಸ್ಥಿಪಂಜರದಲ್ಲಿ ಜೀವ ಸಂಚಾರ ಕೈಗೊಂಡು ಮುಂದೇನು ತಿನ್ನುವುದು ಎಂದು ತಿಳಿಯದಾದಾಗ, ಆ ಶರೀರವು ತನ್ನ ಅರಿವು ಕಳೆದುಕೊಂಡು ಒಂದುಕಡೆ ಒರಗಿಕೊಂಡು ಬಿದ್ದಿತು. ತಾರಮ್ಮ ಹುಡುಕಾಡುತ್ತ ಧಾವಿಸಲು ಈರಿಯು ನೋಡುತ್ತ, ಹಾಗೆಯೇ ನಿಂತಳು.

ವಿಧವಿಧವಾದ ಭಕ್ಷ್ಯಗಳನ್ನು ತಿಂದು ಆ ಹುಡುಗನ ಅಸ್ಥಿಪಂಜರದಂತಿದ್ದ ದೇಹದಲ್ಲಿ ಸ್ವಲ್ಪ ರಸವಾಡುವುದನ್ನು ಕಾಯುತ್ತಿದ್ದ ಮೃತ್ಯು ಈಗ ಆ ರಸವನ್ನು ಹೀರಿಕೊಂಡು ಹೊರಟಿತ್ತು. ಹೋಗುವಾಗ ಕಂಡಷ್ಟಕ್ಕೆ ತುಂಬ ಇದ್ದ ಸಾಮ್ರಾಜ್ಯ ಕಂಡು ಈರಿ ಮಗನ ಮುಖದಲ್ಲುಂಟಾಗಿದ್ದ ನಗುವನ್ನು ಬೇಕೆಂದೆ ಮೃತ್ಯು ತೆಗೆದುಕೊಂಡು ಹೋಗದೆ, ಆ ಮುಖದಲ್ಲೇ ಉಳಿಸಿ ಅರಳಿದ ಆ ಕಣ್ಣುಬಾಯಿಗಳನ್ನು ಮುಚ್ಚದೆ ನಡೆದಿತ್ತು.

ಬಂದವರು ಯಾರೋ, ಹೋದವರು ಯಾರೋ, ಯಾರೋ ಬಂದರು, ಯಾರೋ ಅಸ್ಥಿಪಂಜರದಂತಿದ್ದ ಆ ದೇಹವನ್ನು ತೆಗೆದುಕೊಂಡರು, ಯಾರೋ ಅದಕ್ಕೆ ಸ್ನಾನ ಮಾಡಿಸಿದರು, ಯಾರೋ ಹೊತ್ತುಕೊಂಡರು, ಹೆಗಲು ಬದಲಿಸುತ್ತ ಯಾರು ಯಾರೋ ನಡೆದರು, ಯಾರೋ ಹೂಳಿದರು, ಬಂದವರು ಯಾರೋ ನಗುಲೇಪಿಸಿದ ಈರಿಯ ಮುಖದ ಮುಂದಕ್ಕೆ ನೀರು ತುಂಬಿದ ಕಳಸ ಇಟ್ಟರು. ಯಾರೋ ಆ ಕಳಸಕ್ಕೆ ಊದುಬತ್ತಿ ಹಚ್ಚಿದರು. ಹೊಗೆಯು ತೇಲುತ್ತಿರಲು ಯಾರೋ ಆ ಕಳಸದ ಪಕ್ಕದಲ್ಲಿ ಕನ್ನಡಿ ಇಟ್ಟರು. ಆ ಕನ್ನಡಿಯು ಈರಿಯ ಆ ನಗು ಲೇಪಿಸಿದ ಮುಖ ಮತ್ತು ಆ ನಗುವನ್ನು ಪ್ರತಿಬಿಂಬಿಸುತ್ತಿತ್ತು.

ಗಾರೆಸಿದ್ದಮಾವನಿಗೆ ಬಿದ್ದ ಏಟುಗಳನ್ನು ಬೀಜಮಾಡಿ ನೆಟ್ಟು ಊರಲ್ಲಿ ದಲಿತ ಸಂಘವನ್ನು ಅಭಿವೃದ್ಧಿಪಡಿಸುತ್ತಿದ್ದ ನಾಗರಾಜುವಿನಿಂದ ತಪ್ಪಿಸಿಕೊಳ್ಳಲೇನೋ ಎಂಬಂತೆ, ಆಗ ಇನ್ನೂ ಕೊಲೆಯಾಗದ ಚೆನ್ನನು ಕೈಯಲ್ಲೊಂದು ಹಳೆ ಇಂಗ್ಲಿಷ್ ಪೇಪರ್ ಹಿಡಿದು ಬಸ್ಸಿಗೆ ಕಾಯುತ್ತ ಅರಳೀಮರದ ಕೆಳಗೆ ನಿಂತಿದ್ದನು. ಶ್ರೀಲಕ್ಷ್ಮಿ ಎಂಬ ಬಸ್ಸಿಗೆ ಕಾಯುತ್ತ ಚೆನ್ನನಿಗೆ ಅಆಇಈ ಕಲಿಸಿದ ಗುರು ಮಾಧ್ವಾಚಾರ್ಯರು ಪಿಂಚಣಿ ತರಲು, ನಂಜನಗೂಡಿಗೆ ಹೋಗಿಬರುವ ಕಾರಣವಾಗಿ, ಒಂದು ಕಾಲು ಊರಬಹುದಾದಷ್ಟು ಇರುವ ಪಿಂಡಿ ಮೇಲೆ ತಮ್ಮ ಒಂದು ಕಾಲನ್ನು ಊರಿ, ಉಳಿದ ಆ ಪಿಂಡಿ ನೆಲದಲ್ಲಿ ಒಂದು ತುದಿ ಇಡುವಷ್ಟಿದ್ದ ಸ್ಥಳದಲ್ಲಿ ತಮ್ಮ ಛತ್ರಿ ತುದಿಯನ್ನು ಇಟ್ಟು, ಹೆಗಲ ಮೇಲೆ ಮುವತ್ತಕ್ಕೆ ನಾಲ್ಕು ಕಡಿಮೆ ಇದ್ದ ಮೋಹಕ ಮಗಳು ಭಗವತಿಯ ಭಾರವನ್ನು ಹೊತ್ತು, ಭಗವತಿಯ ಮಾಟವಾದ ಬೆರಳಾಡಿ ತಂದೆಯ ಹರಿದ ಬಿಳಿಬಟ್ಟೆಯ ಹರುಕು ಅರಿವಾಗದಂತಿರಲು, ಬೆಳ್ಳಗೆ ತತ್ತರಿಸುವ ನಗುವಿನಲ್ಲಿ ಆ ಅರಳೀಮರದ ಕೆಳಗೆ ಅವರು ನಿಂತಿದ್ದರು.

ಆಚಾರ್ಯರ ಮುಖದ ಬಿಳಿ ಕೂದಲುಗಳು ಚಾಚಿಕೊಂಡು ಬಿಸಿಲು ಕಾಯುತ್ತ, ಅವರ ಈಗಿನ ಕಣ್ಣು ಕಿವಿಯು ನೆಟ್ಟಗೆ ನಿಂತಿತ್ತು. ಏಕೆಂದರೆ ಅವರಿಗೆ ಬೇಕಾದಾಗ ಕೇಳಿಸುವ ಕಿವಿಯು ಬೇಡವಾದಾಗ ಕಿವುಡಾಗುತ್ತ, ಬೇಕಾದಾಗ ಕಾಣಿಸುವ ಕಣ್ಣು ಬೇಡವಾದಾಗ ಕುರುಡಾಗುತ್ತ, ಪರಿಸ್ಥಿತಿಗೆ ಅನುಗುಣವಾಗಿತ್ತು. ಈಗ ಕಾಣುವ ಅವರ ಕಣ್ಣುಗಳ ಮುಂದೆ 'ಶಿಷ್ಯನಾದ ಚೆನ್ನನು ಏನೋ ಅಚಾನಕ ತಮ್ಮನ್ನು ನೋಡದೇ ನಿಂತಿದ್ದಾನೆ. ಅಹ ನೋಡಿದ್ದಲ್ಲಿ ಅವನೆಂದಾದರೂ ಹಾಗೆ ನಿಲ್ಲುತ್ತಿದ್ದನೇ, ಅಂಥವನಲ್ಲ ಅವನು. ನೋಡಿದರೆ ಎರಡು ಕೈಗಳನ್ನು ಜೋಡಿಸಿ ವಿನಯದಿಂದ ತಲೆಬಾಗಿಸುತ್ತಿದ್ದ ಚೆನ್ನನಲ್ಲವೇ? ಆ ದಲಿತನಾದರೂ ಅತ್ಯಂತ ಯೋಗ್ಯನಲ್ಲವೆ? ಆ ಅ ದಲಿತರ ಜಾತಿಯಲ್ಲಿ ಹುಟ್ಟಬಾರದಿತ್ತಲ್ಲವೆ?..

ಚೆನ್ನನು ಅಕ್ಷರ ಕಲಿಸಿದ ಗುರುವಿನ ಕಣ್ಣು ತಪ್ಪಿಸಲು ಕಾರಣವು, ಒಂದು – ಗುರುಗಳಿಗೆ ಬಸ್‌ಚಾರ್ಜನ್ನು ತನ್ನ ಸಾಲದ ದುಡ್ಡಿನಲ್ಲಿ ಹಾಕಬೇಕಾಗಿ ಬರುವ ಪರಿಸ್ಥಿತಿಯು ಹಾಗು ಎರಡು – ಸಂಸ್ಕೃತದ ಶ.ಷ,ಗಳು ನಾಲಗೆಯಲ್ಲಿ ಉಚ್ಚಾರಣೆ ಮಾಡಲಿಕ್ಕಾಗದ ಭೀತಿಗಾಗಿ.

ಹೀಗಿರಲು ಆ ದರಿದ್ರ ಬಸ್ಸು ಇನ್ನೂ ಬಾರದಿರಲು, ಆಚಾರ್ಯರು ಚೆನ್ನನ ದಿಕ್ಕಿಗೆ ಧ್ವನಿಮಾಡಿ " ಏನಯ್ಯ ಚೆನ್ನ ನಪ್ಪರ ಒಪ್ಪರಿ" ಎಂದರು. " ಅಯ್ತು ಸಾ" (" ಆಯಿತು ಸಾರ್") ಎನ್ನುವ ಚನ್ನನು ನಾಲಗೆಯನ್ನು ಪಳಗಿಸುತ್ತ ಬಂದನು.

" ಏನಯ್ಯ ಚೆನ್ನ ಹೇಗೆ ನಡೆಯುತ್ತಿವೆ ಕೆಲಸಕಾರ್ಯ, ಕ್ಷೇಮವೋ?"
" ಕ್ಷೇಮ ಸಾ" (" ಕ್ಷೇಮ ಸಾರ್")
" ಅಲ್ಲಪ್ಪಾ ಚೆನ್ನ ಈ ಬಸ್ಸಿಗೆ ಬಂದಿರುವಂಥ ತೊಂದರೆಯಾದರೂ ಏನು?
ನಾನು ಇಲ್ಲಿಗೆ ಬಂದು ಒಂದು ಗಂಟೆ ಕಳೆಯಿತಲ್ಲ "
".. ...."

" ಹಾಗೆ ಇನ್ನೊಂದು ಮಾತು ಚೆನ್ನ ಆ ಕಂಡಕ್ಟರ ಇದ್ದಾನಲ್ಲ ಅವನಿಗೆ ಹೇಳು... ಏನೆಂದರೆ ನಾನು ಪಿಂಚಣಿ ತೆಗೆದುಕೊಂಡು ಪುನಃ ಹಿಂತಿರುಗುವಾಗ ಆ ಕಡೆ ಛಾರ್ಜನ್ನು ಕೊಟ್ಟು ಹಾಗೆಯೇ ಈ ಕಡೆ ಚಾರ್ಜನ್ನು ಉಪಾಧ್ಯಾಯರು ಆಗಲೆ ಕೊಡುತ್ತಾರೆ ಎಂದು, ಇದು ಆಗಬಹುದಲ್ಲ?"

" ಈ ಕಡೇದ ನಾನೇ ಹಾಕತ್ತೀನಿ ಬುಡಿಸಾ....."
(" ಈ ಕಡೆಯ ಛಾರ್ಜನ್ನು ನಾನೇ ಕೊಡುತ್ತೇನೆ ಬಿಡಿಸಾರ್...")

" ಅಯ್ಯಯ್ಯೋ ಹಾಗೂ ಉಂಟೆ ಚೆನ್ನ, ಪುನಃ ನೀನು ಸಿಗುವುದು
ಅಮವಾಸ್ಯೆಗೋ ಅಥವಾ ಪೌರ್ಣಿಮೆಗೋ. ಋಣಭಾರ ಏಕಪ್ಪ?
ಈ ದೇಹ ಋಣಭಾರ ತಡೆಯಲಾರದಪ್ಪ."

" ಪರವಾಗಿಲ್ಲ ಸಾ" (" ಪರವಾಗಿಲ್ಲ ಸಾರ್") " ಅಂದಹಾಗೆ ಚೆನ್ನ ಆ
ನಮ್ಮ ಪಕ್ಕದ ಮನೆಯ ಹತ್ತಿರದ ಶಾಸ್ತ್ರಿಗಳ ಮಗಳು ಸಾವಿತ್ರಿ ಮೈಸೂರು
ಪಟ್ಟಣದಲ್ಲಿ ಇದ್ದಾಳಲ್ಲ, ಅವಳ ಬಗ್ಗೆ ಕೇಳಬಾರದ್ದನ್ನು ಕೇಳಿದೆ
ನಿಜವೇನಪ್ಪ?"

" ನಿಜ ಸಾ. ನಮ್ ಜಾತ್ಯವರ ಮದ್ವಾಗಿ ಮಡಿಕಂಡು ಈಗೊಂದು ಕೂಸೂ..."

(" ನಿಜ ಸಾರ್, ನಮ್ ಜಾತಿಯವರನ್ನು ಪ್ರೀತಿಸಿ ಮದುವೆಯಾಗಿ ಈವಾಗ
ಒಂದು ಮಗುವಾಗಿದೆ.....")

" ನಿಲ್ಲಿಸು ಚೆನ್ನ, ರಾಮರಾಮ ಕೇಳುವುದು ಉಂಟೆ: ನಾನು ನನ್ನ ಈ
ಕಿವಿಗಳಿಂದ ಕೇಳಲಾರೆನಪ್ಪ, ಈ ಲೋಕದಲ್ಲಿ ಹೀಗು ನಡೆಯುತ್ತದೆಯೆ?"

" ಹೌದು ಸಾರ್"

" ಇಲ್ಲಾ ಚೆನ್ನ, ನನಗೇಕೋ ಡೌಟಪ್ಪ. ಅಂದಹಾಗೆ ಚೆನ್ನ ನಾನು ನಿನಗೆ ಚೆನ್ನಾಗಿ ಗೊತ್ತಲ್ಲ. ನೀನು ತಿಳಿದ ಹಾಗೆ ನನಗಂತೂ ಜಾತಿಭೇದವಿಲ್ಲ, ನಾನು ನಿನ್ನನ್ನು ಮುಟ್ಟಿಸಿಕೊಳ್ಳಬಾರದು ಅಂತೇನಿಲ್ಲ. ಆದರೆ ನನಗೆ ವಯಸ್ಸಾಯಿತು ನೋಡು ಯಥಾರ್ಥ ಈ ಇಳಿವಯಸ್ಸಿನಲ್ಲಿ ಪದೆ ಪದೆ ತಣ್ಣೀರು ಸ್ನಾನ ಆರೋಗ್ಯಕ್ಕೆ ವ್ಯತಿರಿಕ್ತ ಅಲ್ಲವೇ?" ಎನ್ನುತ್ತಿರಲು ಆಚಾರ್ಯರು, ಬಸ್ಸು ಬರ್ರ ಎನ್ನುತ್ತ ಚೆನ್ನನ ರಕ್ಷಕನಂತೆ ಬಂದಿತು. ಆದರೂ ಮಾತುಗಳನ್ನು ಆಚಾರ್ಯರು ಮುಂದುವರೆಸಿ –" ಹ್ಞಾ ಚೆನ್ನ ನೋಡಪ್ಪ ಒಂದು ಮಾತು, ನನ್ನ ಮಗಳು ಭಗವತಿ ಇದ್ದಾಳಲ್ಲ, ಅವಳಿಗೊಂದು ವರ ಯಾರಾದರೂ ನಿನ್ನ ಪರಿಚಯದಲ್ಲಿ ನಮ್ಮ ಜಾತಿಯವರು ಯಥಾರ್ಥ ಕಂಡು ಬಂದಲ್ಲಿ ಹೇಗೆ ಎಂದು ವಿಚಾರವನ್ನು ಮುಟ್ಟಿಸು ಅಷ್ಟೆ. ಅವಳ ಚೆಲುವೇನು? ಅವಳ ಗುಣವೇನು? ಆಕೆ ಸಾಕ್ಷಾತ್ ನಮ್ಮ ಹಿಂದೂಧರ್ಮ ದೇವತಾ ಸ್ವರೂಪಳಯ್ಯ! ಅವಳ ಒಂದು ಕಣ್ಣು, ಕಂಡೂ ಕಾಣದಷ್ಟು ಸ್ವಲ್ಪ ಮಾಲು ಅಷ್ಟೆ. ಮಾಲುಗಣ್ಣು ಅದೃಷ್ಟವನ್ನು ಆ ದೇವರು ಕೋಟಿಗೆ ಒಬ್ಬರಿಗಲ್ಲವೆ ನೀಡುವುದು? ಯಾರಾದರೂ ಸೂಕ್ತವಾದವರು ಸಿಕ್ಕಲ್ಲಿ ಮರೆಯದೆ ಹೇಳುತ್ತೀಯಲ್ಲ? ಹ್ಞಾ ಮರೆತಿದ್ದೆ ನೋಡು.... ಅವಳಿನ್ನೂ ಮೈನೆರೆದಿಲ್ಲ...."

ತಂದೆ ಮಾತಿನಂತೆ ಮೈನೆರೆಯದ ಆ ಹಿಂದೂಧರ್ಮ ಸ್ವರೂಪಿಣಿ ಭಗವತಿಯು, ಭಗದ ಆ ಧರ್ಮಕ್ಕನುಗುಣವಾಗಿ ಮುಟ್ಟಾಗಿ ಒಂದು ಸಾರಿ ಹೊರಗೆ ಮಲಗಿರುವಾಗ, ನಿದ್ರೆಯು ತೂಕಡಿಸುವ ವೇಳೆಯಲ್ಲಿ ಅವಳಿಗೇಕೋ ನಿದ್ರೆಯು ಕಣ್ಣಿಗೆ ಬಾರದೆ ಇರುವ ಆ ಕ್ಷಣದಲ್ಲಿ, ತನ್ನ ಪಂಚಾಂಗದ ಪ್ರಕಾರವಾಗಿ ಬಂದು ಮರೆಯಾದ ಅಮಾಸನನ್ನು ಕಂಡು ಭಗವತಿಗೆ ಉಸಿರು ನಿಂತ ಹಾಗಾಯಿತು. ಅಲ್ಲಾ ಇಲ್ಲಿವರೆಗು ಬಂದೆಯ, ದಲಿತನಿಗೆಷ್ಟು ಧೈರ್ಯ ಚೀ, ಛಿ, ಆ ದಲಿತನ ನೀಚಕಾರ್ಯವೆ, ಸೂರ್ಯನಿಲ್ಲದೆ ದಲಿತನ ನೆರಳು ಸೋಕದೆ ಬದುಕಿದೆನಲ್ಲಾ......." ಎನ್ನುತ್ತಿರುವಾಗ ಆ ಭಗವತಿಗೆ ಬೆಳಗಿನ ಜಾವದ ತೂಕಡಿಕೆಯಲ್ಲಿ ಅಮಾನ ಅಪ್ಪಿಕೊಂಡಂತಾಗಿ ಬೆಚ್ಚಿ ಎದ್ದು ಅಪಾರ ಆಶ್ಚರ್ಯದಲ್ಲಿ ಕುಳಿತಳು. ಅವಳ ಮನಸ್ಸು ಕುಪಿತಗೊಂಡಿರಲು ಆ ಮೈ ಪುಳಕಿತವಾಗಿರಲು, ಆಗ ಎಲ್ಲವ ಮಾಯವಾಗಿ ಶುಕ್ರಗ್ರಹವು ಮಾತ್ರ ಕಾಣುತ್ತಿತ್ತು.

ಇಡೀ ದೇಹವನ್ನು ಕಣ್ಣು ಮಾಡಿ ಭಗವತಿಯು ಶುಕ್ರಗ್ರಹ ನೋಡುತ್ತ –" ಅಲ್ಲವೆ? ಈ ಮೂರು ದಿನ ನಾನು ಹೊಲಸು, ಆತನು ಹೊಲಸು, ಎರಡು ದೇಹವ

ಹೊಲಸಾಗಿರುವ ಪ್ರಸಂಗವಿರುವಾಗ ಹೊಲಸಿಗೆ ಹೊಲಸು ಕೂಡಿದರೆ ಆಗುವ ಅಧರ್ಮ ಯಾವುದು?" ಎಂಬ ಧರ್ಮ ಸೂಕ್ಷ್ಮತೆಯಲ್ಲಿದ್ದ ಪ್ರಶ್ನೆಯನ್ನು ಮನ್ಮಥನು ಬಂದು ದವಾಬ ಹಾಕಿದನಲ್ಲ.

ಅದು ಇದು ಎಲ್ಲಾ ಆಗಿ ಈರಿ ಮಗನ ಜೀವವು ಹುಸಿರು ಬೇರಿಯ ಮೇಲೆ ಹನ್ನೆರಡು ದಿನದತನಕ ನಾಗುತ್ತ ಕುಳಿತಿದ್ದು ಆಮೇಲೆ ಅದು ತನ್ನ ದಾರಿ ಹಿಡಿತ್ತು, ಅದರ ಹಿಂದೆಯೇ ಚೆನ್ನನ ಕೊಲೆಯು ನಡೆದು ತಿಳಿಯದಂತಾಗಿ, ಆಮೇಲೆ ತೂರಮ್ಮನ ಮನೆಯಲ್ಲಿ ಕೆಂಪಿಯು ಹೆತ್ತಂಥ ಮಾಂಸದ ಮುದ್ದೆಯು ಕಿರ್ರ ಎಂದು ಅಳುತ್ತಿತ್ತು. ಆ ಕಿರ್ರ ಎಂಬುದನ್ನು ಧ್ಯಾನಿಸುತ್ತ, ಮೂರು ಪೈಸೆ ನುಗ್ಗಿಸಬಹುದಾದ ಕಿವಿ ತೂತಿಗೆ ಕೆಂಪುಬಣ್ಣದ ಓಲೆಗರಿ ಹಾಕಿಕೊಂಡು, ಮೇಲಿನ ಕಿವಿಗೆ ಚಿನ್ನದ ನೀರು ಬಿಡಿಸಿ ಮಾಡಿಸಿದಂತ ಕೊಳವೆಯಾಕಾರದ ಮೇಲುಯನ್ನು ಧರಿಸಿದಂಥ ತೂರಮ್ಮನ ಕಿವಿಗದು ತಲುಪಿತು, ಆ ಕ್ಷಣದಲ್ಲಿವಳು, ಜೀವವಾಗಿದ್ದ ಜರಳೆಹುಳುವನ್ನು ಹಿಡಿದು ಎಡಗೈ ಹೆಬ್ಬೆಟ್ಟಿನಿಂದ ಅದುಮಿ ಜೀವವನ್ನು ತೆಗೆದು —

'ಈ ಜೀವ್ನೇ ಆ ಜೀವಕ ನಡೀ' ('ಈ ಜೀವವೇ ಆ ಜೀವಕ್ಕೆ ನಡೆ') ಎಂತನ್ನುತ್ತ ಮೂರು ಸಾರಿ ತನ್ನ ಶರೀರವನ್ನು ಒಂದುಗೂಡಿಸಿ ಅದನ್ನು ಒಂದು ದೃಢ ಮನಸ್ಸಿನಲ್ಲಿ ನಿಲ್ಲಿಸಿ ತನ್ನ ಕಪ್ಪುಹಲ್ಲುಗಳ ಬಿಗಿಯ ನಡುವೆ ಈ ಜೀವ್ನೇ ಆ ಜೀವಕ ನಡಿ ('ಈ ಜೀವವೇ ಆ ಜೀವಕ್ಕೆ ನಡೆ') ಎಂದು ಪುನಃ ಮೂರು ಸಾರಿ ಹೇಳಿದಳು. ಅದೇ ಮನಸ್ಸಿನಲ್ಲಿ ದೇವಿಗೆ ಕಾಣಿಕೆಕೊಟ್ಟು ಪಾದಿಸಿ ತಂದಿದ್ದ *ನಾಗಬೆತ್ತವನ್ನು ಬಲಗೈಗೆ ತೆಗೆದುಕೊಂಡು, ಕಂಕುಳಲ್ಲಿದ್ದ *ಮರುಜವಳಿ ಕಡ್ಡಿಯನ್ನು ಬಿಗಿಹಿಡಿದು ಆಗತಾನೇ ಹುಟ್ಟಿದ ಮಗುವಿನ ಬಳಿ ಬಂದಳು. ಈಗ ತನ್ನ ರಕ್ತವನ್ನು ಮಗುವಿಗೆ ಹಂಚಿ ಬಿಳುಪಾದ ಕೆಂಪಿಯು ತುಟಿ ಒಣಗಿ ಮಲಗಿದ್ದಳು. ಅಲ್ಲಿ ಹೊಕ್ಕುಳುಬಳ್ಳಿಯನ್ನು ಕತ್ತರಿಸಿ ಎರಡು ಜೀವವನ್ನು ಮಾಡಿದ್ದ ಕುಡುಗೋಲು ಇನ್ನು ರಕ್ತವಾಡುತ್ತಿತ್ತು. ಅಲ್ಲಿಗೆ ಬಂದಂಥ ತೂರಮ್ಮನು ಆ ಮಾಂಸದ ಮುದ್ದೆಗೆ ಹಿಡಿದಂಥ ನಾಗಬೆತ್ತದಲ್ಲಿ ಮೂರೇಟು ಸವರಿದಳು. ಮೂರು ಏಟು ಸವರಿದ ತೂರಮ್ಮ ಆ ನಾಗಬೆತ್ತಕ್ಕೆ ನಮಸ್ಕರಿಸಿ ಕಂಕುಳಿಂದ ಬಿಗಿ ತೆಗೆದು ಮರುಜವಳಿ ಕಡ್ಡಿಯನ್ನು ಹಿಡಿದಳು. ಮರುಜವಳಿಕಡ್ಡಿಯನ್ನು ಹಿಡಿದಂಥ ತೂರಮ್ಮ ಆ ಜೀವವಾಡುವ ಮಗುವಿಗೆ ನೀವಳಿಸಿ, ಮಗುವಿನ ಕಾಲುಬೆರಳು, ಕೈ ಬೆರಳು ಮತ್ತು ಹವಳವನ್ನು ಸವರಿದಳು. ತೂರಮ್ಮನಿಗೆ ಉಸಿರು ಬಂದಂತಾಗಿ ಅಲ್ಲಿ ತನ್ನೆರಡು ಮಕ್ಕಳ ಮುಂದೆ ಉಸಿರಾಗಿ ಕುಳಿತಳು. ಆಗ ಅವಳಲ್ಲಿ ಆನಂದವು ಉತ್ತುಂಗ ಶಿಖರಕ್ಕೇರಿತು.

---

*ನಾಗಬೆತ್ತ – ನಾಗರ ಹಾವಿನ ತಲೆಯಾಕಾರದ ಹಿಡಿಯುಳ್ಳ ಬಿದಿರಿನ ಬೆತ್ತ.

*ಮರುಜವಳಿಕಡ್ಡಿ – ದಾಸಯ್ಯ ಬಳಸುವ ಒಂದು ರೀತಿಯ ಬೆತ್ತ.

ಮಗು ಹುಟ್ಟುವದಕ್ಕೂ ಮೂರು ದಿನ ಮುಂಚಿತವಾಗಿ ಸಕ್ಕರೆ ತುಂಬಿದ ಬ್ಯಾಗಿನ ಜೊತೆ ಸೈಕಲನಲ್ಲಿ ಬಂದಿದ್ದ ಕಿಟ್ಟಯ್ಯನಿಗೆ ಗಂಡು ಮಗುವಾದ ಸಂಭ್ರಮವು ತುಂಬಿ ತುಳುಕಾಡುತ್ತಿತ್ತು. ಈ ಸಂಭ್ರಮದಲ್ಲಿ ಸೈಕಲನ್ನು ಉಜ್ಜಿ ಅದನ್ನು ಥಳಥಳ ಹೊಳೆಯುವಂತೆ ಮಾಡಿ, ನಂತರ ಮುಂದೇನು ಮಾಡಲು ಮನಸ್ಸು ಬಾರದಾಯಿತು. ಆಗ ಕಿಟ್ಟಯ್ಯ ತೊಲೆ ಮೇಲಕ್ಕೆ ಏರಿಸಿ ಇಟ್ಟಿದ್ದಂತ ಆ ತುಂಬಿದ ಸಕ್ಕರೆ ಬ್ಯಾಗನ್ನು ನೆಗೆದು ಹಿಡಿದು ತಟ್ಟಿ ನೆಲಕ್ಕೆ ಇಳಿಸಿದವನು ಮಾಡುತ್ತಲಿದ್ದ ದಡದಡ ಶಬ್ದದ ಅರ್ಥವು ತೇಲಿಬಂದು ಕೆಂಪಿಯು ಕಿವಿಗೆ ಪಿಸುಗುಟ್ಟಿತು. ಆ ಒಣಗಿದ ಗಂಟಲು, ಅಂಗಳು, ನಾಲಗೆ, ತುಟಿಗಳಿಗೆ ಉಗುಳು ಸವರಿಕೊಂಡು ಕೆಂಪಿಯು, ತನ್ನ ಮುಂದೆ ಮಗುವಾಗಿ ಕುಳಿತಿರುವ ತನ್ನ ತಾಯಿಗೆ " ಅವ್ವ.... ಆ ಮೂದೇವಿ ಬ್ಯಾಗಿನ ತುಂಬಾ ಇರೋ ಸಕ್ಕರನಿಗ ಒಂದರಳ್ಳಾ ಬುಡೆಂ ಹಂಚ್ಬುಟ್ಟು ಬತ್ತದ, ಒಂದು ಬೊಗಸನಾರು ಎತ್ತಿಟಗ" (" ಅಮ್ಮ... ಆ ಬ್ಯಾಗಿನ ತುಂಬ ಇರುವ ಸಕ್ಕರೆಯನ್ನು ಅವರು ಒಂದು ಹರಳು ಉಳಿಯದಂತೆ ಹಂಚಿ ಬರುತ್ತಾರೆ. ನೀನು ಒಂದು ಬೊಗಸೆಯಷ್ಟಾದರೂ ತೆಗೆದಿಡು") ಎಂದಳು. ಈ ಮಾತು ತೂರಮ್ಮನಿಗೆ ಬೆಚ್ಚಿಸಿ ಎಚ್ಚರವನ್ನುಂಟು ಮಾಡಿದಾಗ " ನೀ ತೆಪಗ ಮಲಕವ್ವ" (" ನೀನು ಸುಮ್ಮನೆ ಮಲಗಿಕೊ") ಎಂದಳು.

ಕೆಂಪಿಯು ಸುಮ್ಮನಾದಳು. ಆಗ ತೂರಮ್ಮನಿಗೆ ಅಂಟಿಕೊಂಡೇ ಕುಳಿತ್ತಿದ್ದಂತ ಆ ಜಂತೆ, ಅದು ಸುಮ್ಮನಿರದೆ ಮಾತು ತೆಗೆಯಿತು :

" ಇನ್ನಾಕ ಮುದಿಕ್ಕ... ನಿನ ಕೆಲ್ಸ ಅಂತ್ಯಲ್ಲಾ. ಈಗಾಲ್ರುವಿ ನನ ಬುಟ್ಟೆಯಾ?"

(" ಇನ್ನೇನು ಅಜ್ಜ... ನಿನ್ನ ಕೆಲಸ ಆಯಿತಲ್ಲ. ಈಗಲಾದರೂ ನನ್ನನ್ನ ಬಿಡುತ್ತೀಯಾ?")

"ಯಾನವ್ವೀ? ನೀನು ಬೋ ದೊಡ್ಡನಿ ಅಂತ ಸುಮಾನ್ಕ ನಿನ
ಕಟ್ಕೊಂಡಿದ್ದಿನಾ ನಾನು....?

(" ಏನೇ? ನೀನು ತುಂಬಾ ದೊಡ್ಡಮನುಷ್ಯಳೆಂದು ನಾನು ಜುಟಿಗೆ ನಿನ್ನನ್ನ
ಕಟ್ಟಿಕೊಂಡಿದ್ದೀನಾ....?")

" ಅದೂಕ್ಕವ ಯಾಕ ಈಪಾಟ ಜಬರದಸ್ತು ಮಾಡೀಯ ತಕ....."

(" ಅದಕ್ಕೇಕೆ ಇಷ್ಟೊಂದು ಜಬರದಸ್ತು ಮಾಡುತ್ತೀಯ ತಗೊ...")

" ಮತ್ತೆ ಒಗಬು ಅದೂ... ಬುಡಸಿ ಹೇಳಾಕ?"

(" ಮತ್ತೆ ಅದು ಒಗಟೇ ಬಿಡಿಸಿ ಹೇಳುವುದಕ್ಕೆ?")

ಕೇಳೂ ಅಂತೋಕೀ ಪೆಡ್ಡಮುದಿಕೀ ಕೇಳೂ.... ಆ ಇದಿಯಮ್ಮ ನಿಂಗ ಪಿನೀತಗಾರಳಗಿಲ್ಲ? ಅವಳ್ಯಾಕ ನಿಂಗ ಅನ್ಯಾಯ ಬಗದಾಳು? ಇದೇನಿದ್ರೂ ಇದಿಯಮ್ಮ ಹುಟ್ಟಿದ ರಾತ್ರಿ

ಹಣಬರ ಬರುಂಬುಟ್ಟು ಹೋದ ಮ್ಯಾಲ, ಇದೆಲ್ಲೋ ಅವ್ವ ಮಗಳು ಅವ್ವಲ್ಲಾ ಆ ರಾಂಗಸೂಳಿ, ಬೆಡಗಬೇತಾರಿ ಇದಿದೇವಿ ಅಂಬೋಳು··· ಅವ್ವ ಯಾನಾರು ಹಣಬರವ ತಿದ್ದಿ ಹೆಚ್ಚಾಕಮ್ಮಿ ಮಾಡೋಳ್ತರಾಗಿ ಕಾಣ್ತದಲ್ಲಾ···" (" ಕೇಳು ಅಂತೊ ಪೆದ್ದ ಅಜ್ಜ··· ಆ ವಿಧಿಯಮ್ಮ ನಿನಗೆ ಸ್ನೇಹಿತಳಾಗಲ್ಲವೆ? ಅವಳೇಕೆ ನಿನಗೆ ಅನ್ಯಾಯ ಬಗೆದಾಳು? ಇದೇನಿದ್ದರು ವಿಧಿಯಮ್ಮ ಹುಟ್ಟಿದ ರಾತ್ರಿಗೇ ಹಣೆಬರಹ ಬರೆದುಬಿಟ್ಟು ಹೋದ ಮೇಲೆ ಅವಳ ಮಗಳು ಇದ್ದಾಳಲ್ಲ ಆ ಕೆಟ್ಟ ಹೆಂಗಸು, ಬೆಡಗಿ, ಧನಾಳಗಿತ್ತಿ, ವಿಧಿದೇವಿ ಅನ್ನುವವಳು··· ಅವಳು ಏನಾದರೂ ಹಣೆಬರಹವನ್ನು ತಿದ್ದಿ ಹೆಚ್ಚುಕಡಿಮೆ ಮಾಡುವ ರೀತಿ ಕಾಣುತ್ತಿದೆಯಲ್ಲ······") ಎಂದಿತು.

ತೂರಮ್ಮನಿಗೆ ಕಾಣಿಸಿತು : ಆಹಾ! ಇದು ಇದಿದೇವಿ ಕೆಲ್ಸವಿರಬೇಕು. ಮಂತ್ರಿಸಿದ ದಾರ ಮನೆಯ ಸುತ್ತ ಇದ್ದು ಕಾಯ್ತಾಗ, ಹಳೆಕೆರ ಮಂತ್ರಿಸಿದ ಲಿಂಬೆಹಣ್ಣಿನ ಬಾಗಿಲ್ಲಿ ಜುಟ್ಟ ತಡೆವಾಗ, ಇನ್ನು ಒಳಗ ಈ ತೂರಮ್ಮ ಇರ್ತಾಗ··· ಆದಾವ ಗಾಳಿಗರಾವ್ಗ ತಾನೀಯ ಒಳಕ ಇಣುಕಿ ನೋಡೋ ಗೋರಂಜ ಇದ್ದಾಂದು. ಅಹಾ ಇದೇನಿದ್ರೂ ಆ ಇದಿದೇವಿ ಕೆಲ್ಸವಿಂತು. ಆ ಜಿಂಗುರಾರ ಮೂರಾದೇವೀ··· ನನ ಮಗಳು ಕೆಂಬಿ ಥರ ಮಿಷ್ಕಿರ ಗಾತಿ ತಾನೀಯ ಅಪ್ಪಾಳನೂ? ಅವ್ವನ ಮಾತ ಕೇಳೀಳಾ?··· ಇರ್ಲಿ ಇರ್ಲೀ ಈ ತೂರಮ್ಮನ ಮುಂದ ಆದಾಯವ ನೆತ್ತಕನ, ಮದಿಂಲ್ಗ ಅದಕೂ? (ಆಹಾ ಇದು ವಿಧಿದೇವಿ ಕೆಲಸವೇ. ಮಂತ್ರಿಸಿದ ದಾರ ಮನೆಯ ಸುತ್ತ ಇದ್ದು ಕಾಯುವಾಗ, ಹಳೆ ಚಪ್ಪಲಿ, ಮಂತ್ರಿಸಿದ ನಿಂಬೆಹಣ್ಣು ಬಾಗಿಲಲ್ಲಿ ಜುಟ್ಟುಕಟ್ಟಿ ತಗುಲುವಾಗ, ಅಲ್ಲದೆ ಈ ತೂರಮ್ಮ ಒಳಗೆ ಇರುವಾಗ··· ಯಾವ ದೆವ್ವ ಪಿಶಾಚಿಗೆ ತಾನೇ ಒಳಗೆ ಇಣುಕಿ ನೋಡುವಷ್ಟು ಗುಂಡಿಗೆ ಇದೆ. ಇದೇನಿದ್ದರೂ ಆ ವಿಧಿದೇವಿ ಕೆಲಸವೇ ಸರಿ. ನನ್ನ ಮಗಳು ಕೆಂಬಿ ರೀತಿ ಅವಳು ಕೂಡ ತೊಂದರೆಕೊಡುವವಳೇ···· ಅವಳು ಅಮ್ಮನ ಮಾತು ಕೇಳುತ್ತಾಳೆ?···· ಇರಲಿ ಈ ತೂರಮ್ಮನ ಮುಂದೆ ಅವಳು ಯಾವ ಲೆಕ್ಕ? ಅದಕ್ಕೂ ಔಷಧಿ ಇಲ್ಲವೆ?) ಎಂದು ಕೊಳ್ಳುತ್ತ, ಒಳಗೆ ಬಂದ ತೂರಮ್ಮನು, ಮಾನವರಲ್ಲದವರು ಒಳಗಣ್ಣಿಗೆ ಕಾಣುವ ಅಂಜನವನ್ನು ಕಣ್ಣುರೆಪ್ಪೆಗೆ ಹಚ್ಚಿ, ದೃಷ್ಟಿಯುಟ್ಟು ಪ್ರಾಣ ಕಾಯುವಾಗ ಆ ರಾತ್ರಿಯಲ್ಲಿ ಅದೇನೇನು ಮಾಡಬೇಕು ಆ ಕೆಲಸಕಾರ್ಯವನ್ನು ನಿಶ್ಚಯಿಸಲು ತನ್ನ ಪಕ್ಕದಲ್ಲಿ ಸಪ್ಪಗೆ ಕುಳಿತಿದ್ದ ಚಿಂತೆಗೆವಳಿಸಿ, ತಾನು ಮಗುವಿನ ಮೇಲೆ ಕಣ್ಣಿಟ್ಟು ಕುಳಿತಳು.

ದಿಲಾವರನಾದ ಕಿಟ್ಟಯ್ಯನು ಸೈಕಲ್ಲನ್ನು ಪಿಂಬಿಸುತ್ತ, ಬೀದಿಯ ತುದಿ ತಲುಪಿ, ಬೀದಿಯೊಳಗೆ ಕಾಲಿಟ್ಟಾಗ ಮೊದಲಿಗೆ ಸಿಗುವ ಗುಡಿಸಲ ಮುಂದೆ ರೈಟ ಎಬೌಟ್ಟರ್ನಾದನು ಆಗಲು, ಅವ ಕಚ್ಚಿಕಡಿಯುವ ಇರುವೆಯೋ ಅಥವಾ ಏನಾದರು ಮಕ್ಕಳೋ ಎಂಬುದನ್ನು ಬಿಚ್ಚಿಬಿಡಿಸಲಾರದಂತ ಆ ಸಮೂಹವು ಆ ಸೈಕಲ್ಲಿಗೂ, ಆ ಕಿಟ್ಟಯ್ಯನಿಗೂ, ಆ ಸಕ್ಕರೆಗೂ ಘೇರಾವ ನಡೆಸಿದರು. ಈ ಕಿಟ್ಟಯ್ಯನು ತನ್ನ ಎರಡೂ ಬೆರಳ ಮಡಚಿ, ಉಳಿಕೆ ಮೂರು ಬೆರಳನ್ನು ಬಾಕ್ಸಿಗೆ ಸಿಕ್ಕಿಸಿ ಅಲ್ಲಿಂದ ಸ್ಟೈಲಾಗಿ ಸಕ್ಕರೆ ತೆಗೆದರೆ ಸಾಕು, ಆ ಸಕ್ಕರೆ ಬೆರಳಿಗೆ ಮುತ್ತುತ್ತಿದ್ದ ಕೇವಲ ನಲವತ್ತಾಗುವ ಆ ಮಕ್ಕಳು ನೂರಕ್ಕೂ ಮಿಗಿಲಾಗಿ ಕೈಚಾಚುತ್ತ ಪವಾಡ ಮಾಡುತ್ತಿದ್ದರು. ಯಾವುದಾದರೂ ಒಂದು ಕೈಗೆ ಕಣ್ತಪ್ಪಿ ಬಿಡುವುದರೊಳಗೆ ಸಕ್ಕರೆಯನ್ನು ರವಾನಿಸಿದರೆ ಮಾತ್ರ ಈ ಕಿಟ್ಟಯ್ಯನ ಆ ಮೂರು ಸಕ್ಕರೆಯ ಬೆರಳಾಗಲೀ, ಜಾಣಾಕ್ಷವಾಗಿ ಮಡಚಿದ್ದ ಉಳಿಕೆ ಎರಡು ಬೆರಳಾಗಲೀ ಅಥವಾ ಜಾಣಾಕ್ಷತೆಯಿಂದ ಹೂಡನೇ, ಬೇವಿನ ಬೀಜಗಳನ್ನು ಅಳೆದು ಸುರಿದುಕೊಳ್ಳುತ್ತಿದ್ದ ಅವನ ಹಸ್ತವಾಗಲೀ ಬಚಾವಾಗುತ್ತಿರಲಿಲ್ಲ. ಒಂದು ಕ್ಷಣ ತಡವಾದಲ್ಲಿ ಅವನ ಹಸ್ತಕ್ಕೆ ಹತ್ತಾರು ಕೈಗಳು ಜಂಪ ಮಾಡುತ್ತ ಹೊಡೆತ ಕೊಡುತ್ತ, ದೋಚಿಕೊಳ್ಳುತ್ತಿದ್ದರು.

ಇದು ಅಲ್ಲೊಬ್ಬ ಡುಲಾವ್ರಿಗೆ ಜಂಪ ಮಾಡಿಯೂ ಗುರಿಮುಟ್ಟಲು ಆಗದು ಎಂಬ ಸತ್ಯವನ್ನು ಅರಿವಾಗಿಸಿತು. ಆಗ ಆ ಪರಿಪಾಂಗವು ಆಗಾಗ ಸಂಭವಿಸುವ ಅಂಥ ಒಂದು ಜಂಪ ಜರುಗಿದಾಗ, ಗಾಳಿ ಬೀಸುವ ದಿಕ್ಕು ಹಾಗು ಈ ಜಂಪ ಮಾಡಿದವನ ಬಲ, ಅವೆರಡನ್ನು ಆ ಕ್ಷಣದಲ್ಲಿ ಅಂದಾಜಿಸಿಕೊಂಡು ಸಕ್ಕರೆಯು ಚೆಲ್ಲುತ್ತ ಬೀಳುವ ಸಾಧ್ಯತೆಯಿರುವ ಆ ನಿರ್ಧಿತ ಸ್ಥಳದಲ್ಲಿ, ತನ್ನ ಬಾಯಿಯನ್ನು ಶಕ್ತಿಮೀರಿ ಅಗಲಿಸಿ ಕನಿಷ್ಠವೆಂದರೆ ಐದಾರು ಸಕ್ಕರೆ ಹರಳುಗಳಾದರೂ ಸ್ವಯಂ ಅವೇ ಬಂದು ಅವನ ತೆರೆದ ಬಾಯಿಗೆ ಬೀಳುವಂತ ವಿಧಾನವನ್ನು ವಸ್ತುಸ್ಥಿತಿಯು ಅಲ್ಲೇ ಕಲಿಸಿ ರಕ್ತಗತ ಮಾಡುತ್ತಿತ್ತು. ಇದರಿಂದೆಲ್ಲ ಶ್ರೀ ಕಿಟ್ಟಯ್ಯನ ಕೈಗಳು ಕಟ್ಟಲ್ಪಟ್ಟು ಅವನ ಚಲನವಲನ ನಿಲ್ಲಲ್ಪಟ್ಟಿದ್ದವು. ಸಕ್ಕರೆಗಾಗಿ ಹೊಸ ಗುಂಪಾಗಿ ಧಾಳಿ ನಡೆಸಿದ ಅಜ್ಜಿಯರ, ಎಳವರ ಕೈಗಳು ಕಿಟ್ಟಯ್ಯನ ಮುಖಕ್ಕೆ ತಿವಿಯುತ್ತಿರಲು, ಸಾಲದೆಂಬಂತೆ ನಾಚಿಕೊಂಡು ಹೊರಗೆ ಬಾರದ ಹೆಂಗಸರು, ಗರ್ಭಿಣಿಯರು, ಬಾಣಂತಿಯರು ತಮ್ಮ ತಮ್ಮ ಪ್ರತಿನಿಧಿಗಳನ್ನು ಕಳುಹಿಸುತ್ತಿದ್ದರು. ಆಗ ಕಿಟ್ಟಯ್ಯನ ಚತುರ ಬುದ್ಧಿಗೂ ಮಂಕು ಹಿಡಿದು ಜಾಣಾಕ್ಷತೆಯಲ್ಲಿ ಆಳಿಯುವ ಅವನ ಕೈಗಳಿಗೂ ಚಾಲನೆ ನಿಂತು ರಾತ್ರಿ ಆಯಿತು.

ರಾತ್ರಿಯಾಗಿ ಈ ನರಲೋಕದ ವ್ಯಾಪಾರ ವ್ಯವಹಾರ ಮುಗಿದು ಅದೂ ಕೂಡ ಮಲಗುವಂತಾಯಿತು. ಆಗ ತುಳಾರಮ್ಮನ ಶರೀರದಲ್ಲಿದ್ದಂಥ ನರನಾಡಿಗಳೆಲ್ಲವೂ ಬಾಯಿಬಿಟ್ಟು ಕೊಂಡು, ಕಣ್ಣುರೆಪ್ಪೆಯು ಮಿಟುಕಿಸದೆ ಎಚ್ಚರವಾಗಿದ್ದು ಏನಾದರೂ ವಾಸನೆ, ಶಬ್ದ, ಸುಳಿವು ಕಂಡುಬರುತ್ತದೆಯೆ ಎನ್ನುತ್ತ ಕಾಯುತ್ತ ಕುಳಿತಿದ್ದವು. ಅಳಿಯ ಒಪ್ಪಿಸಿದ್ದ ತಿಂಗಳಿಗಾಗುವಷ್ಟು ಎಲೆ, ಅಡಿಕೆ, ಹೊಗೆಸೊಪ್ಪು, ಕಡ್ಡಿಪುಡಿಗಳ ಸಂಪತ್ತು ತುಳಾರಮ್ಮನ ಮುಂದೆ ಇದ್ದವು. ತುಳಾರಮ್ಮನು ಕಂಕುಳಲ್ಲಿ ಮರಿಜವಳಿಕಡ್ಡಿ, ಕೈಯಲ್ಲಿ ನಾಗಬೆತ್ತ ಹಿಡಿದು ಬಾಣಂತಿ ಹಾಗು ಮಗುವಿದ್ದ ಕೋಣೆಯ ಹೊಸ್ತಿಲು ಇದ್ದಷ್ಟು ಅಗಲಕ್ಕೆ ಕಾಲುಗಳನ್ನು ಚಾಚಿ ಹೊಸ್ತಿಲಿಗೆ ಅಂಟಿಸಿ ಕುಳಿತಿದ್ದಳು. ಏನಾದರೂ ಒಳಗೆ ಬಂದರೆ ಅದರ ಸುಳಿವು ತುಳಾರಮ್ಮನಿಗೆ ಗೊತ್ತಾಗಲೇ ಬೇಕು ಎನ್ನುತ್ತಿರುವಾಗ, ಆ ಹರಳೆಣ್ಣೆ ದೀಪದ ಬೆಳಕಿನಲ್ಲಿ ತುಳಾರಮ್ಮನ ಮಗಳು ಹಾಗು ಮೊಮ್ಮಗನು ನಿದ್ರಿಸುತ್ತಿದ್ದರು. ಹೊಳೆಯುತ್ತಿರುವ ನಾಗಬೆತ್ತವು ತಾನೇ ಸೂರ್ಯದೇವ ನಂತಾಗುತ್ತಿದ್ದರೆ ತುಳಾರಮ್ಮನ ಕಿವಿಯ ಮೇಲೆ ನೇತಾಡುವ ಚಿನ್ನದ ನೀರಾಕಿಸಿದ ಕೊಳವೆ ಮೇಟಿಯು ಆ ಬೆಳಕಿನಲ್ಲಿ ದರ್ಬಾರ ನಡೆಸುತ್ತಿತ್ತು.

ಅಂದು ಸ್ನಾನ ಮಡಿ ಮಾಡಿಕೊಂಡು ಹೊಳೆಯುವ ಕಡಗಗಳು, ಆ ಕಡಗದ ಕೈಗಳು, ಎಲೆ, ಅಡಿಕೆ, ಸುಣ್ಣ, ಹೊಗೆಸೊಪ್ಪಿನೊಡನೆ ಗಾಡಾಡುತ್ತ ಆಡುವ ಆ ಕಡಗಗಳ ಬೆಳಕು ಕೂಡ ಸೇರಿಕೊಂಡಂಥಹ ತುಳಾರಮ್ಮನಿಗೆ ಬಾಡಕಟ್ಟನಂತಿದ್ದ ಬಳಿಗೂದಲ ರೂಪಕ್ಕೆ ಸ್ವಲ್ಪ ಜಡೆ ಮಾಡಿ ತಲೆಗೊಂದು ಕಿರೀಟವನ್ನು ಇಟ್ಟಂತಿತ್ತು. ಅವಳು ರಾತ್ರಿ ಸಮಯದಲ್ಲಿ ಮಕ್ಕಳನ್ನು ಕಾಯುವ ತಾಯಿದೇವತೆಯಂತೆ ಕಾಣುತ್ತಿದ್ದಳು. ಅವಳಿಗೆ ಘೋರಾಂಧಕಾರದ ಕಾಲ ಸಾಮ್ರಾಜ್ಯದ ಪಿಸುಧ್ವನಿ, ಅದರಿಂದಾಕೆಗೆ ನಾಯಿಗಳ ಗೋಳಿಡುವಿಕೆ. ಅದು ತುಳಾರಮ್ಮನ ಕಣ್ಣುಮುಂದೆ ನಾಯಿ ರೂಪವಾಗಿ ನಿಂತು ಆಕಾಶಕ್ಕೆ ಕತ್ತನ್ನು ಚಾಚಿ ನೋಡುತ್ತ, ಬಾಯಿ ತೆರೆದು ಊಳಿಡುವಾಗ, ಆಕಾಶಮಾರ್ಗದಿಂದ ನರಮನುಷ್ಯರಲ್ಲದವರು ಭೂಮಿಗೆ ಇಳಿದು ಸಂಚಾರ ಕೈಗೊಂಡಂತೆ. ಇನ್ನೇನು ಇನ್ನರ್ಧ ಕ್ಷಣ, ಆ ಕಣ ಮುಗಿದಂತಾದರೆ ಮುಂಜಾನೆ ಕೋಳಿ ಕೂಗಿ ಬೆಳಕಾಗಿ ಪಶುಪಕ್ಷಿ, ಪ್ರಾಣಿ, ನರಮನುಷ್ಯರು ಓಡಾಡುವಂತಾಗುವ ಕಾಲ. ಆ ಸಮಯದಲ್ಲಿ ಏಕೋ ಒಂದು ಸಾರಿ ಕಣ್ಣು ಮುಚ್ಚಿ ತೂಕಡಿಸಿ, ಬೆಚ್ಚಿದಂತಾಗಿ ತುಳಾರಮ್ಮ ತನ್ನ ಸರ್ವ ಕಣ್ಣುಗಳನ್ನು ತೆರೆದಳು. ಆ ಕಣ್ಣು ಮುಚ್ಚಿದ್ದ ಅರೆಕ್ಷಣದಲ್ಲಿ ಅವಳು ಚಾಚಿದ್ದ ಕಾಲನ್ನು ಏನೋ ದಾಟಿ ಹೋದಂತಾಯಿತು.

ಅದು ತೂರಮ್ಮನ ಯಾವ ದೃಷ್ಟಿಗೂ ಕಂಡುಬಾರದಿರಲು, ಆಗ ತೂರಮ್ಮ ತನ್ನ ಕಪ್ಪು ಹಲ್ಲುಗಳನ್ನು ಕಡಿದು ಶಬ್ದ ಮಾಡುತ್ತಿದ್ದಳು. ಹಾಲು ಕುಡಿಯುವ ಮಗುವಿನ ಕೈಬೆರಳನ್ನು ಕಡಿದು ತಿನ್ನಲು ಬಂದಿದ್ದ ಇಲಿಮರಿಯಿಂದಾಗಿ ಎಚ್ಚರವಾದ ಕೆಂಪಿಗೆ ತನ್ನ ಅಮ್ಮನ ಆ ರೂಪವನ್ನು ಕಂಡು:

" ಅವ್ವೆ ಇನ್ನಾರು ಸುಮ್ನ ಮಲಿಕ್ಯ...."

(" ಅಮ್ಮ ಇನ್ನಾದರೂ ಸುಮ್ಮನೇ ಮಲಗಿಕೊ....")

" ಅದ್ಯಾಕನಕನಿ ಹೋದಂಗಾಯ್ತಕನ ತಾಯೀ. ನಿಂಗಾದ್ರೂ ಯಾನಾರೂ ಕಂಡ್ತಾ...?"

("ಅದೇನೋ ಹೋದರೀತಿಯಾಯಿತು, ನಿನಗೇನಾದರೂ ಕಾಣಿಸಿತೆ...?")

" ಅಂಯ್ ಕಂಡಿಕನ, ನಿನ ಕಾಲ ದಾಟ್ಯಂಡು ಓಡಂ ಇಲಿಸುಂಡ್ಲ. ಈಗ ಸುಮ್ನ ಮಲಕ್ಯ.."

("ನೋಡಿದೆ, ನಿನ್ನ ಕಾಲನ್ನು ದಾಟಿಕೊಂಡು ಓಡಿದ ಇಲಿಮರಿಯನ್ನು, ಈಗ ಸುಮ್ಮನೆ ಮಲಗಮ್ಮ.....")

" ಹಾ ಆಗಾರ ಇಲಿ ಸುಂಡಂ ರೂಪಂರಿ ಆ ಮುಂಡ ಬಂದಿದ್ಲಕನೀ...."

("ಹೌದಾ, ಹಾಗಾದರೆ ಇಲಿಮರಿಯ ರೂಪದಲ್ಲಿ ಆ ಪೀಡೆ ಬಂದಿತ್ತೆ?....")

ಎಂಬುದು ತೂರಮ್ಮನಿಗೆ ಹಿಡಿದುಕೊಂಡು ಅದು ಬಿಡದು. ಮುಂಜಾನೆ ಕೋಳಿಕೂಗಿ ಪಶುಪಕ್ಷಿ, ನರರ ಸಂಚಾರ ಉಂಟಾಗಿಯೂ ತೂರಮ್ಮನ ದೇಹಕ್ಕಿಂತಲೂ ದೊಡ್ಡದಾಗಿ ಅವಳ ಚಿಂತೆ ಬೆಳೆದು, ಆ ಚಿಂತೆಯು ಬೆನ್ನು ಬಗ್ಗಿಸಿಕೊಂಡು ಹೊಡೆದು, ಕಂಕುಳಲ್ಲಿ ಮರುಜವಳಿಕಡಿ, ಬಲಗೈಯಲ್ಲಿ ನಾಗಬೆತ್ತ ಹಿಡಿದಂತ ತೂರಮ್ಮ ತನ್ನ ಮನೆಯ ಸುತ್ತಲು ಸುತ್ತುತ್ತ, ಉಗಿದ ಎಲೆ, ಅಡಿಕೆ, ಸುಣ್ಣದ ಆ ಕೆಂಪಿನ ಎಂಜಲು ಕೆಂಪುನೀರಿನಂತೆ ಕಾಣುತ್ತಿತ್ತು.

ಸುತ್ತಲೂ ಪ್ರೀತಿ ಅರಳುತ್ತ, ದಲಿತರ ಬೀದಿಯಲ್ಲಿ ಕ್ಷಣಕೊಮ್ಮೆ ದಲಿತ ಸಂಘದವರು ನಾಳಿನ ಜೀವದಿಸೋದನಾ ಸೇವೆಗಾಗಿ ಮಾರಿಗುಡಿಗೆ ಬರುತ್ತಿದ್ದರು. ಮಾರಿಗುಡಿಯ ನೆಲೆ, ಸಂಪೂರ್ಣ ಮುಂಡವನ್ನು ಅಲಂಕರಿಸಿ ರುಂಡ ಮಾಕ್ರ ಸೇರಿಲೆ ಎತ್ತಿ, ಆಡಿಸುವಂತ ಕುರಿಯೊಂದ್ಯನ

ಮೇಲೆ ಬಿಂದಿ ಕಂಬಳಿ, ಅದರ ಮೇಲೆ ಕೆಳಗೆಲ್ಲ ತುಂಬು ಬೀಗಾರಿಕೆಗಳು ಮತ್ತು, ಬೂದಿಯು ಕಾಲಾನುಕ್ರಮದ ವ್ಯಸವಾಗಿ ಶೇಖರಿಸಲ್ಪಟ್ಟ ಅದನ್ನು ಅಲುಗಾಡಿಸದ ಕುರಿಯಯ್ಯನು, ಬಿಳಿಗೂದಲುಮಯವಾದ ರುಂಡವನ್ನು ಎತ್ತತ್ತ ಬರುವರ ದಿಕ್ಕಿಗೆ ಕಣ್ಣುಬಿಟ್ಟು ನೋಡುತ್ತಿದ್ದನು.

ಪ್ರಥಮವಾಗಿ ಕೋಲಾಟದ ಗುಂಪು ಬಂದಿದ್ದು ಅವರು ಹಾಡುವ ಹಾಡಿಗೂ, ಕುಣಿಯುವ ಕುಣಿತಕ್ಕೂ, ಅದರ ಭಾವಕ್ಕೂ ಕೋಲಾಟದ ಕಲಿಸುವನೇ ಆದ ವೆಂಕಟೇಶ ಎಂಬುವವನು ದು:ಖದ ಸಮುದ್ರವೇ ಇವನ ರೂಪ ತಾಳಿಕೊಂಡಂತೆ ಪದವನ್ನು ಉಸಿರು ಎಳೆದುಕೊಂಡು ಕಿರುಚಿದ ಅಂದರೆ ನಿಂತವರು ಓಡುತ್ತಿದ್ದರು. ಆ ಕಿರುಚಾಟಕ್ಕೂ ತನಗೂ ಸಂಬಂಧವಿಲ್ಲ ಎನ್ನುವಂತೆ ಕೆ.ರಾಮ ಎಂಬುವವನು ಧರಿಸಿದ್ದ ಷರ್ಟನ್ನು ತಾತ್ಸಾರದಿಂದ ಬಿಚ್ಚಿ, ಮಾರಿಗುಡಿಯಲ್ಲಿದ್ದ ಬದಿಯಕೋಲಿಗೆ ನೇತಾಕಿ, ಪ್ಯಾಂಟಿನಲ್ಲೇ ಚಕ್ಕಳಮಕ್ಕಳ ಹಾಕಿ, ತನ್ನೆರಡು ಕೈಯನ್ನೂ ಕೆನ್ನೆಗಳಿಗೆ ಕೊಟ್ಟು ಮುನಿಸಿಕೊಂಡವನಂತೆ ಕುಳಿತಿದ್ದನು.

ಈ ಕೆ.ರಾಮನಿಗೆ ಸ್ವಲ್ಪ ಅವಧೂತನ ಬಟ್ಟೆ ತೊಡಿಸಿ, ಆ ಗೋಣಿಚೀಲದ ಬಾಗಿಗೆ ಸೈಕಲ್ಲನ್ನು ಹಿಡಿಸಿ ನಿಲ್ಲಿಸಿಬಿಟ್ಟರೆ ಅವಧೂತನಿಗೆ ಅಣ್ಣನೋ ತಮ್ಮನೋ ಎನ್ನುವ ರೀತಿಯು ಅದು ಬೇಡ ಅಂದರೆ ಅವನು ಹೇಗೂ ಬರಿಮೈನಲ್ಲಿ ಇದ್ದರಿಂದ ಮೈಗೆಲ್ಲ ಸಿಕ್ಕಿದ ಕಡೆ ವಿಭೂತಿ ಬಳಿದು, ಕುತ್ತಿಗೆಗೆ ರುದ್ರಾಕ್ಷಿ ಸರವನ್ನು ತೊಡಿಸಿ, ಕೈಗೆ ತ್ರಿಶೂಲ ಹಿಡಿಸಿ, ಅವನ ತಲೆಯನ್ನು ಬೋಳಿಸಿ, ಕಾವಿಬಟ್ಟೆ ಉಡಿಸಿ ಆಮೇಲೆ ಅವನನ್ನು ಎತ್ತಿಕೊಂಡು ಬಂದು ಹುಲಿವಾಹನದ ಮೇಲೆ ಕೂರಿಸಿಬಿಟ್ಟರೆ, ಆ ಮಲೆಮಹದೇಶ್ವರಸ್ವಾಮಿಯೇ ಧರೆಗಿಳಿದು ಬಂದಿದ್ದಾನೇನೋ ಎನ್ನುವಂತಿತ್ತು.

ಆ ಸಿ.ಎಂ.ನದ ಒಂದು ಸೈಬರಿಯಾಗಿ ಈ ಧರ್ಮಾಕಾರಿಯಾಗಿದ್ದ ಕೋಲಾಟದ ಗುಂಪಿಗೆ ಉಳಿದ ಕಲಿಯುವರು ನಿಧಾನವಾಗಿ ಬಂದು ಸೇರುತ್ತಿದ್ದರು. ದಾನದಾನಕ್ಕಿಂತ ದೊಡ್ಡದಾದ ನಿಧಾನದಲ್ಲಿ ತಮ್ಮನ್ನು ಸಿಂಗರಿಸಿಕೊಂಡಿದ್ದ ಹಾಸನದ ಕಲಿಯು ಶಾಂಗಪ್ಪನವರು ಮಾರಿಗುಡಿಗೆ ಬಂದಾಗ ಅಲ್ಲೊಂದು ದೊಡ್ಡ ತಂಬಟ್ಟನಹುಂಡೆ ಕೂರಿಸಿದ ರೀತಿಯಾಯಿತು. ಅವರ ಪಕ್ಕದಲ್ಲೇ ಕೋಟೆಯ ಹುಲಿ ಚೆಟ್ಟಿಯಕ್ಕ ಕುಳಿತುಕೊಂಡಾಗ ಸುಭಾವನೆ ಹುಟ್ಟುತ್ತಿರಲು, ಅವರ ಅಕ್ಕಪಕ್ಕ ಮಾಗುಬಸವಣ್ಣನ ರೀತಿಯು ರಾಕಪ್ಪ, ಹಸುವಿನಂಥ ಗಂಗಪ್ಪ ಕುಳಿತಿದ್ದರು.

ಆ ನೂರಾರು ಕತ್ತಿವರಸೆಯಾಡಿದಂತೆ ಕನ್ನೆಯಲ್ಲಿ ಬಿಗುಮಾನದ ಸಂಘದ ಮುಖಂಡರಾದ ಕೃಷ್ಣಪ್ಪನವರು ಮೈಸೂರಿನಲ್ಲಿ ರಾತ್ರಿ ಬೀಡುಬಿಟ್ಟುದು ಬೆಳಗ್ಗೆ ಎದ್ದು ಸ್ನಾನ ಮಾಡಿಕೊಂಡು ಬರುತ್ತಿದ್ದಂತೆ, ಅವರ ಎಡಗಡೆಗೆ ಬಿಳಿಪಂಚೆ ಹಾಕಿಕೊಂಡು ಕಾವಿಬಣ್ಣದ ಜುಬ್ಬದಲ್ಲಿ ಕಣ್ಣನ್ನು ಅರಳಿಸಿಕೊಂಡು ದೇವಯ್ಯ ಎಂಬುವವರು, ಬಲಗಡೆಗೆ ಕಪ್ಪಗಿ ದುಂಡಗೆ ಇದ್ದ ಯಾರೂ ಡಾಕ್ಟರಂತೆ, ಔಷಧಿ, ಗುಳಿಗೆಗಳ ಚೀಲವನ್ನು ಹಿಡಿದು ನಗುತ್ತ, ಅವರ ಹೆಸರು ಬಿಂದ ನಾಲಗೆ ಹೊರಳದು, ದಲಿತರಲ್ಲಿ ದಾನ ಒಕ್ಕಲು, ಈಗೇನೊ ಕಮ್ಯುನಿಷ್ಟಂತೆ, ಅವರುಗಳು ಬೀದಿಗೆ ಕಾಲಿಟ್ಟಾಗ ಅರ್ಧಧೈರ್ಯ ಬಂದಿತು.

ಸಮಯ ಕಳೆದಂತೆ ಮಾರಿಗುಡಿಯ ಹೆಜ್ಜೇನು ಗೂಡಿನಂತಾಗಿ ದೀಪದ ಬತ್ತಿಯನ್ನು ಎತ್ತರಿಸಿದರೂ ಒಬ್ಬರ ಮುಖ ಒಬ್ಬರಿಗೆ ಕಾಣದಂತಾಯಿತು. ಇಲ್ಲಿಗೆ ಮೂರು ದಿನ ಮುಂಚಿತವಾಗಿ ಬಂದಿದ್ದರೂ ನಾಗರಾಜು ಸಭೆ ಮರೆತು ಯಾರದೋ ಮನೆಯಲ್ಲಿ ಟೀ ಕುಡಿಯುತ್ತ ಕುಳಿತವನಿಗೆ, ಪೂರ್ವಿಕರು ಮಾಡಿಬಿಟ್ಟಿದ್ದ ಪುಣ್ಯದ ಫಲದಿಂದಾಗಿ ನೆನಪಿಗೆ ಬಂದು "ಇದೇನ್ರೀ ನನಗ ನೆನಪು ಮಾಡಬಾರದ?" ("ಇದೇನ್ರಿ ನನಗೆ ನೆನಪು ಮಾಡಬಾರದೆ?") ಎಂದು ಟೀ ಕೊಟ್ಟವರಿಗೆ ಬೈಯ್ದು, ವೇಗವಾಗಿ ಮಾರಿಗುಡಿಗೆ ಬಂದರೆ, ತಮ್ಮ ದೊಡ್ಡ ತಲೆಯನ್ನು ಇಡಲು ಜಾಗವೇ ಸಾಲದಾಯಿತು.

ಆಗಲೆ ಅದೆಷ್ಟೋ ಜನ ಮಾತನಾಡಿ ಮುಗಿದಿತ್ತು. ಈಗ ದೇವಯ್ಯ ಎಂಬುವರು ತೂಕಡಿಕೆಯನ್ನು ಜಯಿಸಿ ಹಸನ್ಮುಖವಾಗಿ ನಿಂತು ನೆನ್ನೆತಾನೆ ಅಂತರಜಾತಿಯ ವಿವಾಹ ಮಾಡಿಸುವಾಗ ಹೇಳಿದ್ದ ಮಾತುಗಳು ಏನೆಂದರೆ — 'ಗಂಡ ಹೆಂಡ್ತಿಯರಾಗಿ ಏನ್ಬೇಕಾರೂ ಎಷ್ಟ್ ಬೇಕಾರೂ ಜಗಳವಾಡಿರಿ. ಆದರೆ ಇಂತಿಂಥ ಜಾತಿ ನೀನೂ ಅಂತಂತ ಹೇಳ್ತ ಮಾತ್ರ ಜಗಳ ಮಾಡಬೇಡಿರಿ ಅಂತ ನಾನಾದರೂ ನಿಮ್ಮಲ್ಲಿ ವಿನಂತಿಸುತ್ತೇನೆ' — (—'ಗಂಡ ಹೆಂಡತಿಯರಾಗಿ ಏನು ಬೇಕಾದರೂ, ಎಷ್ಟು ಬೇಕಾದರೂ ಜಗಳವಾಡಿರಿ. ಆದರೆ ಇಂತಿಂಥ ಜಾತಿ ನೀನು ಎಂದು ಹೇಳುತ್ತ ಮಾತ್ರ ಜಗಳಮಾಡಬೇಡಿರಿ ಎಂದು ನಾನು ನಿಮ್ಮಲ್ಲಿ ವಿನಂತಿಸಿಕೊಳ್ಳುತ್ತೇನೆ' —) ಎಂಬುದನ್ನು ಇಲ್ಲಿ ಹೇಳಿ, ಅನಿರೋಕ್ಷೆ ಇದನ್ನು ಇಲ್ಲೇಕೆ ಹೇಳಿದೆ ಎಂದು ತುಸು ಕಕ್ಕಾಬಿಕ್ಕಿಯಾದರೂ ಕೂಡ, ಮುಂದೆ ಮಾತಿನ ಮೋಡಿಹಾಕಲು ಕಣ್ಣುಗಳನ್ನು ಅರಳಿಸಿಕೊಂಡಿದ್ದರು.

ಆಗ ಏನಾಯಿತೆಂದರೆ, ಮಧ್ಯರಾತ್ರಿ ಕಳೆದಿದ್ದರೂ ಕೂಡ ದಲಿತರ ಮಾರಿಗುಡಿ ಜೋತಮ್ಮ ತಮ್ಮ ಸಭೆಗೆ ಇನ್ನೂ ಬಾರದಿರಲು, ಬೇಜಾರಾಗಿ ನಾಯಕರ ಜೋತಮ್ಮ ದಲಿತರ ಮಾರಿಗುಡಿಗೆ ಬಂದು, ಆ ತುಂಬಿದ ಸಭೆಯನ್ನು ಕಂಡು ಅವಳಿಗೆ ಆಶ್ಚರ್ಯವಾಯಿತು. ಆಗ ಉಸಿರು ಹಿಡಿದು ಮೆಲ್ಲಗೆ ಬಂದು ಈ ಜೋತಮ್ಮನಿಗೆ 'ಅಕ್ಕೈ' ('ಅಕ್ಕ') ಎಂದಳು. ಅದಕ್ಕೆ ಮಾರಿಗುಡಿ ಜೋತಮ್ಮ:

"ನಾ ಸಾನೇ ಯಾನಾನ್ನ ಮಾಡ್ಲವ್ವ? ಇವ್ರು ಈ ಥರವಾಗಿ ಗುಡುಗ ಸಿಡ್ಲ ರಾಕ್ಸರ ಥರಾವ್ಗಿ ಕೂತಿರಾವ್ಗ...." ("ನಾನು ಏನುಸಾನೆ ಮಾಡಲಮ್ಮ? ಇವರು ಸಿಡಿಲು, ಗುಡುಗು, ರಾಕ್ಷಸರಂತೆ ಕುಳಿತಿರುವಾಗ...")

"ಅಕ್ಕೈ ಅದಿರ್‍ಲಿಕನ, ಇಲ್ಲ ಕುಂತಿರೋ ಹೈಕಳು ಯಾನೋನ್ನೇ ಓದಿ ಬರಂ ಕೆರಾಂಕದವರು ತಾನೀಂಯ? ನಾನು ಯಾರಾರುಂ ಮುಂಯಿಂದ ಸಾವಿರಾರ ವರ್ಸದ ತಲತಲಾಂತರದ ನನ್ನ ನುಡಿಸಿ ವಸಿ ಬಿಟುಕುವಮುಳ್ಳ ಅಡಿನ್ಲ?"

("ಅಕ್ಕ ಅದಿರಲಿ, ಇಲ್ಲಿ ಕುಳಿತಿರುವ ಮಕ್ಕಳು ಏನೊನ್ನ ಓದಿ ಬರೆದು ಸಾಧನೆ ಮಾಡಿದವರು ತಾನೆ? ನಾನು ಯಾರಿಗಾದರೂ ಮೈದುಂಬಿ ಸಾವಿರಾರು ವರ್ಷದ ತಲತಲಾಂತರ ಸತಾಯಿಂಶ ನುಡಿಸಿ ಸ್ವಲ್ಪ ಕಿರುಬೆರಳಲ್ಲ ಆಡಿಸಲೆ?")

"ಅವ್ವಾವ್ವ ನೀನೀಗ ಬೆಡಗುದುರಕವ್ವ..."

("ಅಮ್ಮಮ್ಮ ನೀನೀಗ ಬೆಡಗಿಕಾಣಮ್ಮ...") ಎಂದು ದಲಿತರ ಜೋತಮ್ಮ ನಾಯಕರ ಜೋತಮ್ಮನ ಕೆನ್ನೆಗೆ ತಿವಿಯುವುದರೊಳಗೆ ನಾಯಕರ ಜೋತಮ್ಮ ನಗುತ್ತ ಕುರಿಯುಂಯ್ಯನಿಗೆ ಮೈದುಂಬಿಕೊಂಡಳು.

ಆವಾಗ ಆ ಸುಂಡು ಬೀಡಿಗಳ ಮೇಲೆ ಮಲಗಿದ್ದಂಥ ಕುರಿಯುಂಯ್ಯನು ತನ್ನ ಬಿಳಿ ಗಡ್ಡಮೀಸೆಯನ್ನು ರಾರಾಜಿಸುತ್ತ, ಸೊಟ್ಟವಾಗಿದ್ದ ಕೈಯನ್ನು ಎತ್ತಿ, ಸ್ವಲ್ಪಲಾಗಿ ಆಡಿಸುತ್ತ— "ನಿಲ್ಸು ಕೂಸೂ ನಿನ ಮಾತ, ಎಲ್ಲದಂದೂ ಜಾತಿ?" (ನಿಲ್ಲಿಸು ಮಗು ನಿನ್ನ ಮಾತನ್ನು, ಎಲ್ಲಿದೆ ಜಾತಿ?") ಎನ್ನಲು ಎಲ್ಲರಿಗೂ ದಿಗ್ಭ್ರಮೆ ತುಂಬಿಕೊಂಡು ಹೋಲ್ಲಾಡುತ್ತಿತ್ತು. ಕಪ್ಪು ಬಣ್ಣದ ದುಂಡಗಿರುವ ಡಾಕ್ಟರ್ 'ಇದೂ ಸಿ.ಐ.ಎ. ಏಜೆಂಟರ್' ಎಂದುಕೊಳ್ಳುತ್ತ

ಕುರಿಯಯ್ಯನನ್ನು ನೋಡಲು, ಆ ಕುರಿಯಯ್ಯನು 'ಆಕಾಶದಷ್ಟು ಎತ್ತರದ ಶಾಕ್ಯರ ಜನ್ಮಕ್ಕೆ ತನ್ನದೊಂದು ಬೆಳಕಾದಲು ನಮೂನ' ಎಂಬಂತೆ ನೋಡಿ ಕಿರುನಗೆ ನಕ್ಕು:

"ನೋಡ್ರಪ್ಪ ಕೂಸಗಳ···· ಕೇಳ್ರೀ, ನಾನು ದಿಕ್ಕುದೆಸ ಇಲ್ಲಂವ ಬದಿಂದೋ
ಅನಾದ್ರೀ···· ಹೀರೀಕ· ಅಂಥಾ ನಾನೇ ಜಾತ್ಯ ಕಂಡಿಲ್ಲ ಅಂತೀನಿ·
ನಂಗ ಆ ಜಾತ್ಯ ಅರ್ತ್ರಮಾನ ಮಾಡ್ರಿ ನೀವ ಮುಂದ್ಕ ಮಾತಾಡಿ····"

(" ನೋಡಿ ಮಕ್ಕಳೆ···· ಕೇಳಿ, ನಾನು ದಿಕ್ಕುದೆಸೆ ಇಲ್ಲದೆ ಬದಿಂರುವ
ಅನಾಥ···· ಹಿರಿಯ· ನನ್ನಂಥವನೇ ಜಾತಿಯನ್ನು ಕಾಣಲಿಲ್ಲ· ಹೀಗಾಗಿ
ನನಗೆ ಆ ಜಾತಿಯ ಅರ್ಥವನ್ನು ಮಾಡಿಸಿ ನೀವು ಮುಂದಕ್ಕೆ ಮಾತನಾಡಿ····")

ಎಂದು ಹೇಳಿ ಒಬ್ಬೊಬ್ಬರನ್ನಾಗಿ ನೋಡತೊಡಗಿದನು·

ಹುಸಿನಗೆ ಬಿಡದ ಲಾಯರ್ ನೋಡುತ್ತಿರಲು, ಅಲೆಪ್ರಭಾವನೆಂಬಲ್ಲದಂ ಕೃಷ್ಣಪ್ಪನವರು ಕಷ್ಟದಲ್ಲಿ ಎಚ್ಚರಗೊಂಡವರಾಗಿ ಸಭೆಗೆ ಗಾಳಿಯನ್ನು ಬೀಸಿಕೊಳ್ಳುತ್ತ ಏನೆಂದರೆಂದರೆ:

" ನೋಡಿ ತಾತಯ್ಯ ನೀವ ಕಷ್ಟ ಉಂಡು ಬದುಕಿಬಾಳಿದಂಥವರು· ನಿಮ ಬಗ್ಗೆ ಇರೋ ಕಥೀನ ಓದಿದೀನಿ· ಅಂಥ ನೀವಾ ಇಂಥ ಮಾತುಗಳ ಆಡಬಾರದು· ಹೊಲಮಾದುಗ ಅಂದ್ರ ಬೇರೆಯವರ ರಕ್ತ ಕುದಿಯೋದು ನಿಚ್ಚಳವಾಗಿ ಕಾಣ್ತದಲ್ಲಾ··· ಇದಕ್ಕ ಕಾರಣ ಏನು? ಇದಕ್ಕ····"

("ನೋಡಿ ತಾತ, ನೀವು ಕಷ್ಟವನ್ನು ಅನುಭವಿಸಿ ಜೀವಿಸಿದಂತವರು· ನಿಮ್ಮ ಬಗ್ಗೆ ಇರುವ ಕಥೆಯನ್ನು ಓದಿದ್ದೇನೆ· ನಿಮ್ಮಂಥವರು ಇಂಥ ಮಾತುಗಳನ್ನಾಡಬಾರದು· ದಲಿತರು, ಮಾದಿಗರು ಅಂದರೆ ಬೇರೆಯವರ ರಕ್ತ ಕುದಿಯುವುದು ಸ್ಪಷ್ಟವಾಗಿ ಕಾಣುತ್ತದಲ್ಲ··· ಇದಕ್ಕೆ ಏನು ಕಾರಣ?·····")

ಕುರಿಯಯ್ಯ ಮಾರಿಗುಡಿಯೇ ಹಾರಿಹೋಗುವಂತೆ ನಗಾಡಿದನು·

" ಐ ಅದಾ ಕೂಸು? ತಾಳೂ···· ಗಿಂಬ್ಯದಲ್ಲ ನನ ಮಾತು ತಿಳ್ಕ· ನೋಡು
ಮೊಗ, ಯಾರಾರು ಈಗ ಬಂದು, ನನ ಹುಟ್ಟಿಯ ಗೊತ್ತಿಗಂಡು ಕೊಂಟೋದ್ರ
ಹೇಳೂ ಹೆಂಗಾಗಬೇಕು ನಂಗ?"

(" ಓ ಅದಾ ಮಗು? ತಾಳು···· ನನ್ನ ಮಾತು ಹೋಂಗಿ ರೀತಿದಲ್ಲ ತಿಳಿದಿಕೊ·
ನೋಡು ಮಗು, ಈಗ ಯಾರಾದರೂ ಬಂದು ನನ್ನ ಹೆಂಡತಿಯನ್ನು ಹೊತ್ತು
ಕೊಂಡು ಹೋದರೆ, ನನಗೆ ಹೇಗಾಗಬೇಕು ಹೇಳು?")

ಅದು ಎಲ್ಲಾರಿಗೂ ಆಗುವುದು ಅದೂ···· ಅದ್ಯಾಕ ಕೇಳ್ತೀನು ಇವ ಅದ ಈಗಾ····
ಅದಾ ರಕ್ತಾವ ಕುದೀತಾ·
(ಅದು ಎಲ್ಲರಿಗೂ ಆಗುವಂತದ್ದು···· ಅದನ್ನೇಕೆ ಇವನು ಈಗ ಕೇಳುತ್ತಾನೆ···· ಅದೂ ರಕ್ತ ಕುದಿಯುತ್ತ··)

" ಅದ ತಾನಿಯಪ್ಪ ಆಗದು? ಯಾನ? ರಗ್ತ ಕುದೀತಾದ· ಬ್ಯಾರೆ ಜ್ಯಾತಿಯವರಿಗೂ ಆಗದುವಿ ಅದೇ ಕಯ್ಯ· ನಮಗೊಂದು ನ್ಯಾಯಾ··· ತಾಳೂ, ಅವರ್ಗೊಂದು ನ್ಯಾಯ ಅಂತಿದಂದಯ್ಯ ನ್ಯಾಯ? ಯಾನಾರೂ ನಂ ಜಾತಿ ಬಡ್ಡೆತ್ತವಾಳು ನಿಯತ್ತಗಾರ್ರು ಅಂದ್ಕಂಡಿದೀರಯ್ಯ ಯಾನಾರುವಿ? ನಂಬೇರಿ ಜೋಕೇ····
···· ಗೊತ್ತಯ್ಯಾ ನಿಮಾಗ? ಸಾವಿರಾರು ವರುಷಮಾನ ಹಿಂದ್ಲ ನಡೆನುಡಿ ಗೊತ್ತಾ ನಿಮಾಗ? ಗೊತ್ತಾ? ಆಗ ನಂ ಜಾತಿ ಬಡ್ಡೆತ್ತವ ಮಾಡ್ತಿದ್ದ ಕೆಲ್ಸ ಯಾನ ಅಂತ ಗೊತ್ತಯ್ಯಾ···?"

("ಅದು ತಾನೆ ಆಗುವುದು? ಏನು? ರಕ್ತ ಕುದಿಯುತ್ತದೆ· ಬೇರೆ ಜಾತಿಯವರಿಗೂ ಆಗುವುದು ಅದೇ ತಾನೆ· ನಮಗೊಂದು ನ್ಯಾಯ···· ಅವರಿಗೊಂದು ನ್ಯಾಯ ಇದೆಯಾ? ಏನಾದರೂ ನಮ್ಮ ಜಾತಿಯವರು ನಿಯತ್ತಿನವರು ಎಂದುಕೊಂಡಿದ್ದೀರ? ನಂಬೇರಿ! ಜೋಕೆ···
···· ಸಾವಿರಾರು ವರುಷಮಾನಗಳ ಹಿಂದಿನ ನಡೆನುಡಿ ನಿಮಗೇನಾದರು ಗೊತ್ತೆ? ಆಗ ನಮ್ಮ ಜಾತಿಯ ನೀಚರು ಮಾಡುತ್ತಿದ್ದ ಕೆಲಸ ಏನು ಎಂದು···· ?")

ಈ ಮಾತಿಗೆ ಮಾರಿಗುಡಿ ಮೈಯೆಲ್ಲ ಕಿವಿಯಾಗಿ ಆಲಿಸುತ್ತಿತ್ತು:
" ಗೊತ್ತಯ್ಯ? ಕೇಳಿ···· ನಂ ಜಾತಿ ಬಡ್ಡೆತ್ತವ ಕಾಯ್ಯಂಡಿದ್ದು ತಂ ಕಣ್ಣಂಗ ಬೇಕಬೇಕಾದ ಉತ್ತಮ ಜಾತ್ಯವರ ಹೆಣ್ರ ಹೊತ್ಗಂಡು ನಡುಂಬರೋರು· ಎಲ್ಲಗ್ಯ? ಬೆಟ್ಟದ ಕಿಬ್ರಗ· ಅಂಯ್ಯಾ? ವಸಿ ದಿನಗಂಟ ಅಲ್ಲ ಇರಾರು· ಅಂಯ್ಯಾ? ಅಮ್ಯಾಕ ಕೇಳಿ ಆ ಬಡ್ಡೆತ್ತವ ತಿರ್ಗ ತಂ ಊರ್ಗಯ ಬರೋವ· ಯಾನೇ ಆಗ್ಲಿ ಆಗ ಉತ್ತಮಜಾತಿ

ಜನ ಒಳ್ಳೆವರಾಗಿದ್ರಂತ್ಯೆ. ತಾಳ್ಕೆತ್ತ ಇದ್ರು. ಅದ್ಕೆಯ ಅವ್ರಗ ಉತ್ತಮ ಜಾತಿ ಅಂತ ಹೆಸ್ರು ಬಂದು ನಿಂತಿರೋದು. ಸುಮ್ಗ ಬಂದದ ಅಂದ್ಕೊಂಡಿದ್ಕಿರ? ಕೇಳಿ, ಆ ಉತ್ತಮ ಜಾಕ್ತವರು ಕಿಬ್ರಯಿಂದ ಬಂದವರ್ಗ ಏನ ಅಂತಿದ್ರು ಅಂದ್ರ : '..... ನೋಡ್ರಯ್ಯ ಆದ್ದು ತಿರುಗ ಬರಲ್ಲ, ಯಾನ ಅಯ್ತು, ಯಾನ ಹೋಯ್ತು. ನೀವ್ಗೊಳು ಕಟ್ಕಟ್ಳ ಮುರ್ರು ಮಾಡ್ದ ತಪ್ಪಗ ಈಗ ನೀವ್ಗೊಳು ಊರಾಚ್ಗ ಇದ್ಕಂಡು, ನಾವ ಹೇಳ್ದ ಕೆಲ್ಸವ ಮಾಡ್ಕೊಂಡು... ಹೆಂಗೂ ಇದ್ಕೊಳ್ಳಿ...' ಅಂತ ಅನ್ನವರು. ನಂ ಜಾತಿ ಬಡ್ತೆತ್ತವ್ಕ ಬೇಕಾಗಿದ್ದು ಅದೇಯ. ಆ ಉತ್ತಮರು ಕಾಲಲ್ಲ ತೋರ್ಸಿದ್ದ ಇವ್ರ ಕೈಲಿ ಮಾಡ್ಕೊಳರು. ಇರಾರು....." ("ಗೊತ್ತೆ? ಕೇಳಿ... ನಮ್ಮ ಜಾತಿಯವರು ಕಾದಿದ್ದ ನಮ್ಮ ಕಣ್ಣಿಗೆ ಬೇಕಾದ ಉತ್ತಮ ಜಾತಿಯ ಹೆಂಡತಿಯರನ್ನು ಕದ್ದು ಹೊತ್ತುಕೊಂಡು ಹೊರಟು ಹೋಗುತ್ತಿದ್ದರು. ಎಲ್ಲಿಗೆ? ಬೆಟ್ಟದ ಇಳಿಜಾರಿಗೆ, ಆಯಿತೆ? ಸ್ವಲ್ಪ ದಿನದವರೆಗೆ ಅಲ್ಲೇ ಇರುತ್ತಿದ್ದರು. ನಂತರ ವಾಪಸ ತಮ್ಮ ಊರಿಗೆ ಬರುತ್ತಿದ್ದರು ಏನೇ ಆಗಲಿ ಆಗ ಉತ್ತಮಜಾತಿ ಜನ ಒಳ್ಳೆಯವರಾಗಿದ್ದರು. ತಾಳಿಕೊಳ್ಳುತ್ತಿದ್ದರು. ಆದ್ದರಿಂದಲೇ ಅವರಿಗೆ ಉತ್ತಮ ಜಾತಿ ಎಂದು ಹೆಸರು ಬಂದಿರುವುದು. ಸುಮ್ಮನೆ ಬಂದಿದೆ ಎಂದುಕೊಂಡಿದ್ದೀರ? ಕೇಳಿ, ಆ ಉತ್ತಮ ಜಾತಿಯವರು ಬೆಟ್ಟದ ಇಳಿಜಾರಿನಿಂದ ಬಂದವರಿಗೆ ಏನು ಹೇಳುತ್ತಿದ್ದರು ಅಂದರೆ:
'...... ನೋಡಿ ಆಗಿಹೋದದ್ದು ವಾಪಸ ಬರುವುದಿಲ್ಲ. ಏನೋ ನಡೆದು ಹೋಯಿತು. ನೀವು ನೀತಿನಿಯಮಗಳನ್ನು ಮೀರಿ ಮಾಡಿದ ತಪ್ಪಿಗೆ, ಈಗ ನೀವುಗಳು ಊರಿಂದ ಹೊರಗೆ ಇದ್ದುಕೊಂಡು, ನಾವು ಹೇಳಿದ ಕೆಲಸವನ್ನು ಮಾಡಿಕೊಂಡು.... ಹೇಗೋ ಇದ್ದುಕೊಳ್ಳಿ.... ' ಎಂದು ಹೇಳುತ್ತಿದ್ದರು. ನಮ್ಮ ಜಾತಿಯವರಿಗೆ ಬೇಕಾಗಿದ್ದು ಅದೇ. ಆ ಉತ್ತಮ ಜಾತಿಯವರು ಕಾಲಿನಲ್ಲಿ ತೋರಿಸಿದ್ದನ್ನು ಇವರು ಕೈನಲ್ಲಿ ಮಾಡಿಕೊಂಡು ಇರುತ್ತಿದ್ದರು....")

ಕುರಿಯಯ್ಯನ ಈ ನುಡಿಯು ಮೋಡಿಯಾಗಿ ಒಡೆದು ಮುರಿದು, ಆ ಮೋಡಿಯು ಬೆಳಕಾಯಿತು: " ಈಗ ಅಂಥಾ ಒಳ್ಳೆಕಾಲ ಕುಡಾಸೂ? ಈ ಕಾಲ ಕೆಟ್ಟಕಾಲ ತಿಳ್ಕೆ. ಈಗ ನಂ ನೋಡಾಂಗ ಏನಾಯ್ತದ? ಯಾರಗೆ? ಆ ಉತ್ತಮ

ಜಾತ್ಯವರ್ಗ — ಕೇಳ್ರಿ, ಅವರ ಒಳಗ ಆಗುವುದರ ವರ್ತಮಾನದ ಅರಿವು ಅವ್ರಿಗಿಂಯ ಆಗಿವಾಗ್ತ ಇರಲ್ಲ. ಆದ್ರೂವ ಅವರ ರಗ್ತಕ? ರಗ್ತಕ ತಲತಲಾಂತರದ ನೆಪ್ಪಿರ್ತದ.... ತಿಳ್ಕೊಳ್ಳಿ. ಅವರು ಸುಮ್ನಿದ್ರೂ, ಅವರ ರಗ್ತ ಸುಮ್ನಿದ್ದುಂದಾ?.... ಹೆಂಗ ತಾನೀಂಯಾ.... ಸುಮ್ನಿರಕ ಆದುಂ? ಅದರ ತಪ್ಪಾ ಆದ್ರಾ? ನಂ ಜಾತ್ಯವರ ಕಂಡೇಟ್ಗಿಂಯ ಉತ್ತಮ ಕುಲಂವರ ರಗ್ತ ಏನಂದ್ಕೊತ್ತದ: 'ಓಹೋ! ಈಗ ಕಾಣೋ ಈ ಹೊಲಮಾದುಗಾದಿ ಪೂರ್ವಿಕನು, ನಮ್ಮ ಉತ್ತಮ ಕುಲಂ ಮೂಲಾದಿಗೆ ಸೇರಂ ಹೆಡ್ತಿ ಹೊತ್ಗಂಡು ಹೋಗಿದಂವನ ಆ ವಂಶದ ಕುಡಿ ಈ ಹೊಲಮಾದುಗಾದಿ....' ಅಂತ ಅಂದ್ಕೊತ್ತದ. ಯಾನ? ಈಗಲು ಉತ್ತಮನ ರಗ್ತ. ಈಗಲ ಈ ಉತ್ತಮನ ರಕ್ತಗ ಆ ಅದೆಲ್ಲಾ ಪಿಕ್ಚರ್ ಬುಟ್ಟಂಗ ಕಾಣುಸ್ತದಕಂಯ್ಕ. ಆ ನೆಪ್ಪಗ ಉತ್ತಮರ ರಕ್ತ ಕುದಿತಾದ. ನಮ್ಗಾದ್ರೂವಿ ಹಂಗೆ ತಾನಿಂಯಪ್ಪ ಆಗದು? ಅವ್ರೆ.... ಈ ಥರಾಗಿ ಇರಾಗ ಕಾರಣ ಕೇಳ್ತಿಂಯಲ್ಲಪ್ಪಾ ಕೂಸೂ....."

(" ಈಗ ಅಂಥ ಒಳ್ಳೆಯ ಕಾಲವೇ, ಮಗು? ಈಗಿನ ಕಾಲ ಕೆಟ್ಟದು ತಿಳಿದುಕೋ. ಈಗ ನಮ್ಮನ್ನು ನೋಡಿದಾಗ ಏನನಿಸುತ್ತದೆ ಆ ಉತ್ತಮ ಜಾತಿಯವರಿಗೆ — ಕೇಳಿ, ಅವರ ಒಳಗೆ ನಡೆಯುವ ವರ್ತಮಾನದ ಅರಿವು ಅವರಿಗೆ ತಿಳಿಯುತ್ತಿರುವುದಿಲ್ಲ. ಆದರು ಅವರ ರಕ್ತಕ್ಕೆ? ರಕ್ತಕ್ಕೆ ತಲತಲಾಂತರದ ನೆನಪಿರುತ್ತದೆ.... ತಿಳಿದುಕೊಳ್ಳಿ. ಅವರು ಸುಮ್ಮನಿದ್ದರು ಅವರ ರಕ್ತ ಸುಮ್ಮನಿರುತ್ತದೆಯೆ?.... ಹೇಗೆ ತಾನೆ... ಸುಮ್ಮನಿರುವುದಕ್ಕೆ ಸಾಧ್ಯ? ಅದು ಅದರ ತಪ್ಪೆ? ನಮ್ಮ ಜಾತಿಯವರನ್ನು ಕಂಡ ತಕ್ಷಣ ಉತ್ತಮ ಜಾತಿಯವರ ರಕ್ತ ಏನಂದುಕೊಳ್ಳುತ್ತದೆಂದರೆ:

'ಓಹೋ! ಈಗ ಕಾಣುವ ಈ ದಲಿತ, ಮಾದಿಗರ ಪೂರ್ವಿಕರು ನಮ್ಮ ಉತ್ತಮ ಜಾತಿಯ ಮೂಲಪುರುಷರ ಹೆಂಡತಿಯರನ್ನು ಕದ್ದು ಹೊತ್ತುಕೊಂಡು ಹೋಗಿದ್ದಂವರ ಆ ವಂಶದ ಕುಡಿ ಈ ದಲಿತ, ಮಾದಿಗರು......' ಎಂದು ತಿಳಿದುಕೊಳ್ಳುತ್ತದೆ ಈಗಿನ ಉತ್ತಮ ಜಾತಿಯವರ ರಕ್ತ. ಈ ರಕ್ತಕ್ಕೆ ಅದೆಲ್ಲಾ ಪಿಕ್ಚರ್ ಬಿಟ್ಟಂತೆ ಕಾಣಿಸುತ್ತದೆ. ಆ ನೆನಪಿನಿಂದಾಗಿ ಉತ್ತಮರ ರಕ್ತ ಕುದಿಯುತ್ತದೆ. ನಮಗಾದರೂ ಹಾಗೆ ತಾನೆ ಆಗುವುದು? ಈ ರೀತಿ ಇರುವಾಗ ಕಾರಣ ಕೇಳುತ್ತೀಯಲ್ಲ ಮಗು....")

ಸಂಘದ ಮುಖಂಡ ಕೃಷ್ಣಪ್ಪ ಇತ್ಯಾದಿ ಮಕ್ಕಳು ತಾಯಿಯ ಎದೆ ಹಾಲಿಗಾಗಿ ಅಮ್ಮ ಅಮ್ಮ ಎಂದು ಅಳುತ್ತಿರುವಂತೆ ತೊದಲುತ್ತಿರಲು, ರಾತ್ರಿ ಪೂರ್ತಿ ಇದೇ ರೀತಿಯಾಗಿ

ಭೀತಿ ಉಂಟಾಗಿರಲು, ದೃಢಮನಸ್ಸಿನ ದೊಡ್ಡಣ್ಣ ಎಂಬುವವನು ಎದ್ದು ನಡೆದು ಕುರಿಯಯ್ಯನ ಕಾಲುಗಳಿಗೆ ಹಣೆಮುಟ್ಟಿಸಿ ನಮಸ್ಕರಿಸಿ, ನಿಂತು ಕೈ ಜೋಡಿಸಿ ಪ್ರಾರ್ಥಿಸುತ್ತ "ತಾತಯ್ಯ ನೋಡ್ರೀ, ಇಂಥ ಮಾತ್ಗಳ ಆ ದ್ಯಾವನೂರ ಮಾದೇವಪ್ನೋರು ಬಂದಾಗ ಅವ್ರ ಜೊತಲ ಆಡೀ ಚಂದಾಗಿರ್ತದ" ("ತಾತ, ಇಂಥ ಮಾತುಗಳನ್ನು ದೇವನೂರು ಮಹಾದೇವನವರು ಬಂದಾಗ ಅವರ ಜೊತೆಯಲ್ಲಿ ಹೇಳಿ ಚೆನ್ನಾಗಿರುತ್ತದೆ") ಎಂದನು. ಅದಕ್ಕೆ ಕುರಿಯಯ್ಯ "ಯಾರ? ಒಬ್ಬೊರಿ ಮೂಲ ಹಿಡ್ಕಂಡು ಬೀಡಿ ಸೇದ್ತ್ಯ ಕೂತ್ಗಳ್ತದಲ್ಲ ಆ ಮೂದೇವಗ?! ಏ ತಗಾ! ಅದಿನ್ನಾ ಹಾಲ್ಕುನ್ನುಕನ" ("ಯಾರು? ಒಂದು ಕಡೆ ಮೂಲೆ ಹಿಡಿದುಕೊಂಡು ಬೀಡಿ ಸೇದುತ್ತ ಕುಳಿತುಕೊಳ್ಳುತ್ತಾನಲ್ಲ ಆ ಸೋಮಾರಿಗ? ಅವನಿನ್ನೂ ಹಸುಳೆ") ಎಂದು, ಹೇಳಿಸಿಬಿಟ್ಟು ನಾಯಕರ ಜೋತಮ್ಮ ಕುರಿಯಯ್ಯನ ಮೈಬಿಟ್ಟು ನರಳುತ್ತ, ಇಳಿದು, ಕಿಲಕಿಲನೆ ನಗುತ್ತ ದಳಕರ ಜೋತಮ್ಮನ ಪಕ್ಕಕ್ಕೆ ಬಂದು ನಿಂತುಕೊಂಡಳು.

ಅಗ ಅಮಾಸನು ಬಿಲ್ಲುಬಾಣವನ್ನು ಹಿಡಿದವನಂತೆ ನೆಗೆದು "ಯಾನಯ್ಯ? ಯಾನ ನೀನು ನಂ ಮಾದೇವ್ನಾನ್ಗ ಅನ್ನದು?" ("ಏನು ತಾತ? ನಮ್ಮ ಮಹಾದೇವನಿಗೆ ಅನ್ನುವುದು") ಎಂದು ದಬಾಯಿಸುತ್ತ, ಹೊಡೆಯುವವನಂತೆ ಕೈ ಎತ್ತಿದನು. ಆ ಎತ್ತಿದ ಕೈಯನ್ನು ಗಾರೆಸಿದ್ದ ಮಾವ ಹಿಡಿದು ತಿರುಗುತ್ತ "ಓಹೋ ವಸಿ ಸುಮ್ಕಿರು ಜಗದೇಕ ವೀರೋ" ("ಓಹೋ ಸ್ವಲ್ಪ ಸುಮ್ಮನಿರು, ಜಗದೇಕ ವೀರ") ಎಂದು ಅಮಾಸನ ಮುಖವನ್ನು ಚಿವುಟಿದನು. ಈ ಕಡೆ ಕುರಿಯಯ್ಯ ಹೆದರುತ್ತ "ನಾನೇನ ಅಂದ್ನಪ್ಪಾ ಮಾದೇವಪ್ಪನ್ಗ! ಒಂದ ಬೀಡಿ ಕೊಡ್ರಪ್ಪ ಅಂದ್ರ ಆ ಪುಣ್ಯಾತ್ಮ ಒಂದು ಕಟ್ಟನ್ನು 'ತಕ್ಕ ತಾತ' ಅಂತ ಬಾವ್ಕದಲ ಕೊಡ್ತಾನ. ಅಮ್ಯಾಕ ನನ್ಕಾಡಾ ಈಸ್ಗತ್ನ ಅನ್ನು. ಅಮ್ಯಾಕ ಅವ್ರ ಅಪ್ಪನ್ಗ ಪೋಲಿಸ್ ದಾಕ್ರಿಗ ಸೇರ್ಸಿದವರು ಯಾರೂ ಅಂತ ಅಂದ್ಕಂಡಿದೀರೀ...." ("ನಾನೇನು ಮಹಾದೇವಪ್ಪನ ಬಗ್ಗೆ ಹೇಳಿದೆ! ಒಂದು ಬೀಡಿ ಕೊಡಿ ಅಂದರೆ ಆ ಪುಣ್ಯಾತ್ಮ ಒಂದು ಕಟ್ಟನ್ನೇ 'ತೆಗೆದುಕೋ ತಾತ' ಎಂದು ಹಿಗ್ಗಿನಿಯಂತೆ ಕೊಡುತ್ತಾನೆ. ಅವನು ಕೂಡ ನನ್ನತ್ತಿರ ಆಗಾಗ ತೆಗೆದುಕೊಳ್ಳುತ್ತಾನೆ. ಅವರ ಅಪ್ಪನಿಗೆ ಪೋಲಿಸ ಕೆಲಸಕ್ಕೆ ಸೇರಿಸಿದವರು ಯಾರು ಎಂದು ತಿಳಿದುಕೊಂಡಿದೀರ....") ಎಂದನು.

ಸಮಯ ಮಧ್ಯರಾತ್ರಿ ಕಳೆದುಹೋಗಿದ್ದರೂ ಇನ್ನೂ ಮುಗಿಯದೆ ತೂಕಡಿಸುವ ಸಭೆಯು ತಲಾ ಮೂರು ಬಾಟಲ ಹಾಕಿಕೊಂಡ ರೀತಿ ತಲೆಯನ್ನು ಓಲಾಡಿಸುತ್ತಿರಲು ಅಲ್ಲಿ ಯಾರು ಮಾತನಾಡುತ್ತಾರೆ? ಲಾಯರ ಸಾಹೇಬರು "ಏನ ಬುಟ್ರೂಂಟ್ರಾ ಶಿಸ್ತನ್ನ ಮಾತ್ರ ಯಾರೂ ಬುಟ್ಗೊಡಬಾರದು ಸ್ವಾಮಿ" ("ಏನು ಬಿಟ್ಟುಕೊಟ್ಟರು ಶಿಸ್ತನ್ನು ಮಾತ್ರ ಯಾರು ಬಿಟ್ಟುಗೊಡಬಾರದು ಸ್ವಾಮಿ") ಎಂದರು. ಲಾಯರ ಕಿವಿಯಲ್ಲಿ ಪಿಸುಗುಟ್ಟ ಆಸೇಲೆ ಓ ರಾಜಣ್ಣ ಜೋರಾಗಿ" ದಾರಿ ಉದ್ದಕ್ಕೂ ಊಟದ ವ್ಯವಸ್ಥೆ ಮಾಡಲಾಗಿದೆ" ಎಂದರು. ಅವರ ಮಾತು ಮುಗಿಯುವುದರೊಳಗಾಗಿ ಆ 'ಊಟ' ಎಂಬ ಎರಡಕ್ಷರವನ್ನು ತಕ್ಷಣ ತನ್ನ ಹೊಟ್ಟೆಗೆ ಹಾಕಿಕೊಂಡು ಕಾಯುತ್ತಿದ್ದ ಪಕಾಳಯ್ಯನು ಎದ್ದುನಿಂತು ಹೊದ್ದಿದ್ದ ಕಂಬಳಿಯನ್ನು ಜಗಿಹಿಡಿದು "ಸನ್ನಾವಿ ಬರ್ಕೊಳ್ಳಿ ಸೋಮ್ಯ" ("ನನ್ನ ಹೆಸರನ್ನು ಬರೆದುಕೊಳ್ಳಿ ಸ್ವಾಮಿ") ಎಂದನು. ಅವನ ದಿಕ್ಕಿಗೆ ಎಲ್ಲರು ತಿರುಗುವ ರೀತಿಯಾಗಿ.... ಆಗ ಗಾರೆಸಿದ್ದಣ್ಣನ ಧ್ವನಿ ಮೊಳಗಿಸುತ್ತ "ಇಲ್ಲಿಗಂಟಾ ಎಲ್ಲದ್ರಪ್ಪಾ.... ಇವ್ನ ಮನ ಹಾಳಾಗ! ಇವ ಯಾನಾದ್ರಾವಿ ನಂ ಮೆರುವಣಿಗ್ಗ ಬಂದುಬುಟ್ರಾ.... ಆ ಮೆರುವಣಿಗ್ಗ ಯಾನಾದ್ರೂ ಸುಂಟ್ರಗಾಳಿ ಬಂದ್ರೂ ಅದು ಪಕಾಳಯ್ಯನ ದುಪ್ಪಟ್ಯ ಹಾರ್ಸ್ಗಂಡು ಹೊಂಟೋಗಿ ಅತ್ತಗ, ಇತ್ತಗ ಇವ ಹುಟ್ಟದ ನಿರ್ವಾಣದಲ್ಲ ನಿಂತ್ಗಂಡು ಆ ನಮ್ಗ ಕಾಣುಸ್ತ... ಎಲ್ರೂವಿ ಆ ಮೆರುವಣಿಗನಿಯ ಬುಟ್ಬುಟ್ಟು ದೌಡ ಓಡೀಬೇಕೂ ಆ ಥರವಾಗಿ ಆಗುಬುಟ್ಟದು ಎಲ್ರಾರುವಿ...." (ಇಲ್ಲಿವರೆಗೆ ಎಲ್ಲಿದ್ದನಪ್ಪ... ಇವನ ಮನೆ ಹಾಳಾಗ! ಇವನೇನಾದರೂ ನಮ್ಮ ಮೆರವಣಿಗೆಗೆ ಬಂದುಬಿಟ್ಟ.... ಆ ಮೆರವಣಿಗೆಗೆ ಏನಾದರು ಸುಂಟರಗಾಳಿ ಬಂದು, ಅದು ಪಕಾಳಯ್ಯನ ಕಂಬಳಿಯನ್ನು ಹಾರಿಸಿಕೊಂಡು ಹೋಗಿ, ಈ ಕಡೆಗೆ ಇವನು ಬೆತ್ತಲೆಯಲ್ಲಿ ನಿಂತುಕೊಂಡು ಅದನ್ನ ನಮಗೆ ಕಾಣಿಸುತ್ತ... ಎಲ್ಲರು ಆ ಮೆರವಣಿಗೆಯನ್ನು ಬಿಟ್ಟು ದೌಡ ಹೊಡಿಬೇಕು. ಆ ರೀತಿಯಾಗಿ ಎಲ್ಲಾದರೂ ಆಗಿಬಿಟ್ಟರೆ....") ಎಂದನು. ಅದಕ್ಕೆ ಪಕಾಳಯ್ಯ "ಐ ಐ ಯಾನುಡ ಗಾರೆಸಿದ್ದ ನೀ ಆಡ ಮಾತು ಐ ಐ" ("ಏನೋ ಗಾರೆಸಿದ್ದ ನೀನು ಆಡುವ ಮಾತು") ಎಂದಾಗ ಎಲ್ಲರೂ ನಗುತ್ತಿದ್ದು, ನಿದ್ದೆಯು ನಗುತ್ತಲೇ ಬಂದು ಅವರನ್ನು ಆವರಿಸಿತು.

ಸೂರ್ಯ ಉದಯಿಸುವ ಮೊದಲು, ರಾತ್ರಿ ಸಂಘದವರು ಹಾಡಿದ ಪದಗಳು ರಾಗಿಕಲ್ಲಿನ ರಾಗವಾಗಿ ಬಂದು ಮುಖ್ಯರಾದ ಕೃಷ್ಣಪ್ಪನವರನ್ನು ಎಬ್ಬಿಸಿತು. ಆಗ ಎದ್ದು ನೋಡುತ್ತಾರೆ: ಎಲ್ಲಾ ಸೇನಾನಿಗಳು ಮಹಾಭಾರತದ ಯುದ್ಧ ಮಾಡುವಾಗ ಯಾರೋ ಪೋಟೋವನ್ನು ತೆಗೆದು ಮಾರಿಗುಡಿಯಲ್ಲಿ ಹಾಕಿದ ರೀತಿ ಒಬ್ಬನ ಕತ್ತಿನ ಮೇಲೆ ಒಬ್ಬನ ಕಾಲು, ಇನ್ನೊಬ್ಬನ ಹೊಟ್ಟೆಮೇಲೆ ಇನ್ನಿಬ್ಬರ ಕತ್ತು, ಹಾಗೂ ಕಾಲುಗಳು, ಈ ಪ್ರಕಾರವಾಗಿ ಎಲ್ಲರೂ ಮಲಗಿದ್ದರು. ಗೂನಜಾಗವಾದ್ದರಿಂದ ನಿದ್ದೆಬಾರದ ಡಾಕ್ಟರು ಬಂದು ಗುದ್ದುತ್ತಿದ್ದ ಗೊರಕೆ ಶಬ್ದಕ್ಕೆ ಬೆಚ್ಚುತ್ತಾ ತಮ್ಮ ಕಣ್ಣನ್ನು ಬಿಟ್ಟುಕೊಂಡಿರುವಾಗ ಕೃಷ್ಣಪ್ಪನವರು ಎಲ್ಲರಿಗೂ 'ಏಳ್ರೀ' 'ಏಳ್ರೀ' ಅಂದರು. ಆದರೂ ಯಾರೂ ಏಳದಿರಲು ಆಗ ಆ ಚಳಿಯಲ್ಲಿಯೇ ಒಂದು ನಿಮಿಷದ ತಣ್ಣೀರು ಸ್ನಾನ ಮಾಡಿಕೊಂಡು ಬಂದರು. ಎಲ್ಲರೂ ಇನ್ನೂ ಹಾಗೆ ಮಲಗಿರಲು, ಆಗ ಮಾಡಲೇನೂ ತೋಚದೆ ಕೃಷ್ಣಪ್ಪನವರು ಡಾಕ್ಟರಿಗೆ ಜಾಗಿಂಗ್‌ಗೆ ಎಬ್ಬಿಸಿದರು.

ಎದ್ದವರು ಬೀದಿಯಲ್ಲಿ ಸರಿಯಾಗಿ ನಡೆದು ಊರ ಹೊರಗೆ ಬಂದಾಗ ಇಬ್ಬರು ಒಬ್ಬರನ್ನೊಬ್ಬರು ನೋಡಿಕೊಂಡರು. ಆಮೇಲೆ ಕಣ್ಣುಗಳಲ್ಲಿ ಮಾತನಾಡಿಕೊಂಡರು. ಅನಂತರ ಧಾಂಧೂಂ ಎಂದು ಹೆಜ್ಜೆ ಇಡುತ್ತ, ದಸಪುಸ ಎಂದು ಉಸಿರನ್ನು ಮೂಗಿನಲ್ಲಿ ಬಿಡುತ್ತ ಆ ಜಾಗಿಂಗ ಅನ್ನು ತಮ್ಮದೇ ಶೈಲಿಯಲ್ಲಿ ಮಾಡುತ್ತಿದ್ದರು.

ಅದು ಊರ ಹೆಂಗಸರೆಲ್ಲ ಒಟ್ಟಾಗಿ ಹೊರಗೆ ಬಂದು ಒಬ್ಬರ ಮುಖ ಒಬ್ಬರಿಗೆ ಕಾಣುವ ಸಮಯ. ಆ ಕುಳಿತ ಹೆಂಗಸರ ಸಾಲಿಗೆ ಈ ಚೆಂದದ ಜಾಗಿಂಗು ಕಂಡುಬಂದು, ಇದೇನು ದೇವರೇ ಊರಿಗೆ ಇಷ್ಟು ದಪ್ಪದ್ದು ಸುತ್ತುತ್ತಿರುವುದು ಎಂದು ಅವರು ನಡುಗಿಹೋಗಿ ತಮ್ಮ ಸೆರಗಿನಲ್ಲಿ ತಮ್ಮ ಮುಖ ಮುಚ್ಚಿಕೊಂಡು ತಕ್ಷಣ ನಿಂತುಕೊಂಡರು. ನಿಂತುಕೊಂಡ ಕೆಲವರಿಗೆ ಭಯವುಂಟಾಗಿ ಅಲ್ಲೇ ಆ ಕಡೆ ಕುಳಿತುಕೊಳ್ಳುವ ರೀತಿಯಾಯಿತು.

ಈ ಕಡೆಗೆ ಇದು ಯಾವುದನ್ನೂ ಗಮನಿಸದ ಈ ಇಬ್ಬರು ನೇರವಾಗಿ ಜಾಗಿಂಗ ಮಾಡುತ್ತಿರಲು, ಕವಿಗಳಾಗಿದ್ದರೆ ಸ್ವಲ್ಪ ಆ ಕಡೆ ಈ ಕಡೆ ನೋಡುತ್ತಿದ್ದರೇನೋ. ಇರಲಿ,

ಈ ಒಂದು ಪಿಂಡದಲ್ಲಿ ಜಾಗಿಂಗ ಮಾಡಿದವರು ಮಾರಿಗುಡಿಗೆ ಬಂದಾಗ ಅವರು ನಡೆಸಿದಂಥ ಉಸಿರಾಟದ ಬಗೆಯೂ ಒಂದಿಬ್ಬರನ್ನು ಬಿಟ್ಟು ಎಲ್ಲರನ್ನು ಎಬ್ಬಿಸಿಬಿಟ್ಟಿತು.

ಆಗ ಎದ್ದವರೆಲ್ಲಾ ಒಬ್ಬೊಬ್ಬರಾಗಿ ಮೆರವಣಿಗೆಗೆ ನಿಲ್ಲತೊಡಗಿದಾಗ ಅಲ್ಲೇ ಪಕಾಳಯ್ಯನು ತನ್ನ ಕಂಬಳಿ ಬಿಗಿಹಿಡಿದು ಮುಂದೆ ನಿಂತಿದ್ದನು. ಇನ್ನು ಮೆರವಣಿಗೆ ಹೊರಡಬೇಕು, ಆಗ ತನ್ನ ಹುಬ್ಬುಗಳ ನಡುವೆ ಸ್ಥಳಮಾಡಿ ಕುಂಕುಮವನ್ನು ಧರಿಸಿದ್ದ ಗಾರೆಸಿದ್ದಮಾವನು ಅಂಬೇಡ್ಕರ ಫೋಟೋಗೆ ನಮಸ್ಕರಿಸಿ, ತಕ್ಷಣ ತನ್ನ ಜುಬ್ಬದ ಮರೆಯಲ್ಲಿರಿಸಿಕೊಂಡಿದ್ದ ತೆಂಗಿನಕಾಯಿ ತೆಗೆದು 'ಏಳು ಮಲೇ ಎಪ್ಪತ್ತೇಳು ಮಲೇ ನಮ ಎತ್ತಪ್ಪಸೋಮಿ ಮಾದಪ್ಪಗ ಉಘೇ ಅನ್ನಿ.....' ('ಏಳು ಮಲೆ ಎಪ್ಪತ್ತೇಳು ಮಲೆ ನಮ್ಮ ಮಾದಪ್ಪನಿಗೆ ಉಘೇ ಅನ್ನಿ.....') ಎಂದು ಹೊಡೆದು ಚೂರು ಮಾಡಿದನು. ಹುಡುಗರು ಮಕ್ಕಳು ಕಾಯಿಚೂರಿಗೆ ತುಂಡಕೊಂಡು ಉಘೇ ಎನ್ನುತ್ತಿದ್ದರು. ಆಗ ಸಂಘದ ಮುಖ್ಯರ ಬೆಚ್ಚಿಬಿದ್ದು ಎದ್ದರು. ಈ ಕಡೆಗೆ ಮುಂದಗಾಮಿ ಗೋವಿಂದು ಹೊಡೆದಾಗ ಹಾರಿ ಬಂದ ಕಾಯಿಚೂರನ್ನು ತಿನ್ನುತ್ತ, ವಿ|| ಕೇಬಿಯು ಇರುವಾಗ ಅಲ್ಲಿಗೆ ನಾಗರಾಜು ಬಂದು "ಇದ್ಯಾಕ್ರಿ ಹಿಂಗೆಲ್ಲಾ ಮಾಡುದ್ರಿ?" ("ಇದೇಕೆ ಹೀಗೆಲ್ಲ ಮಾಡಿದಿರಿ?") ಎಂದರು. ಅದಕ್ಕೆ ಗಾರೆಸಿದ್ದಮಾವ "ಒಳ್ಳೆದಾಯ್ತದಕನ ನಡೀರಿ ಸೋಮಿ, ಇದ್ಯಾವ ಕಾಯ್ತೊಡದಾಟ ಅಂದ್ಕಂಡಿದೀರಿ. ತಲಲೆ ಸಾವ್ರ ಬಡ್ಡಾಕ್ತಿನಿ ಬೇಕಾರ" ("ಒಳ್ಳೆಯದಾಗುತ್ತದೆ ನಡೆಯಿರಿ ಸ್ವಾಮಿ, ಇದು ಯಾವ ಕಾಯಿಯ ಹೊಡೆದಾಟ ಎಂದು ಕೊಂಡಿದೀರಿ. ತಲೆಯಲ್ಲೇ ಬೇಕಾದರೆ ಸಾವಿರಕಾಯಿ ಹೊಡೆದಾಕುತ್ತೇನೆ") ಎಂದನು.

ಸಂಘದ ಮುಖಂಡರು ತಮ್ಮ ತಮ್ಮ ಮುಖವನ್ನು ಬಿಗಿದುಕೊಂಡಿದ್ದರು. ಗಾರೆಸಿದ್ದಮಾವನಿಗೆ ಇದರ ವರ್ತಮಾನ ಸಿಗದೆ ಮೆರವಣಿಗೆಯಲ್ಲಿ ಸ್ವಲ್ಪ ಸೇದಲು ತಂದಿದ್ದ ಫಾರಿನ್ ಷೊ ಸಿಗರೇಟಿನಲ್ಲಿ ಹೊಗೆ ಬಿಡತೊಡಗಲು, ಕೃಷ್ಣಪ್ಪನವರು "ಯಾರೂ ಬೀಡಿಸಿಗರೇಟು ವಗೈರೆ ಸೇದಕೂಡದು" ಅಂದರು. ಇದೊಳ್ಳೆ ಕತೆಯಾಯಿತು ಎಂದುಕೊಂಡು ಗಾರೆಸಿದ್ದಮಾವ ಮೆರವಣಿಗೆಯ ಹಿಂದಕ್ಕೆ ಬಂದು ಸಿಗರೇಟಿನ ಹೊಗೆ ಎಬ್ಬಿಸುತ್ತ ಬರುತ್ತಿರುವಾಗ, ಆ ಡಾಕ್ಟರು ಅಲ್ಲಿಂದಲೇ ಬೀಡಿಯನ್ನು ಬಾಯಿಯಲ್ಲಿ ಕಚ್ಚಿಕೊಂಡು ಬಂದು "ಪಸಿ ಬೆಂಕಿಕೊಡ್ರೀ" ("ಸ್ವಲ್ಪ ಬೆಂಕಿಕೊಡ್ರೀ") ಎಂದು ಅಬ್ಬರಿಸಿದರು. ಬೆಚ್ಚಿದ ಗಾರೆಸಿದ್ದಮಾವ "ಸೋಮಿ ಸೋಮಿ! ಇದ್ಯಾಕ ಸೋಮಿ ನೀವ ಮಾಡ ಕೆಲ್ಸ? ಅಪ್ಪಪ್ಪಾ ನಂ ಜಾತಿಮಾನ್ಕ ಊರೊಳಗ

ಅತ್ತಾಗ ತಗಂಬುತ್ತಿದೀರಲ್ಲಪ್ಪ!" (ಸ್ವಾಮಿ ಸ್ವಾಮಿ! ಇದೇನು ನೀವು ಮಾಡುವ ಕೆಲಸ? ನಮ್ಮ ಜಾತಿ ಮಾನವನ್ನು ಊರಿನೊಳಗೆ ತೆಗೆದು ಬಿಡುತ್ತಿದೀರಲ್ಲ!") ಎಂದು ಡಾಕ್ಟರ ಬಾಯಿಯಲ್ಲಿದ್ದ ಬೀಡಿಯನ್ನು ಕಿತ್ತೆಸೆದು ಅವರ ಬಾಯಿಗೆ ಸಿಗರೇಟು ಇಡಲು, ಆಗ ಇವರಿಬ್ಬರು ಆ ಮೆರವಣಿಗೆಗೆ ಹಿಂದಿನ ಗೋಡೆಗಳಂತಾಗಿ ಹೊಗೆಬಿಡುತ್ತ ಬರುತ್ತಿದ್ದರು. ಒಂದು ಸ್ವಲ್ಪ ಸಮಯವಾದರೂ ಸುಮ್ಮನಿರದ ಗಾರೆಸಿದ್ದಮಾವ ಮಾತಿಗೆ ಶುರು ಮಾಡಿದನು.

" ಆ ಬದ್ರಾವತಿ ದಿಕ್ಲ ಕಿನ್ನಪ್ಪರು ಸಾಮುಂಗೀಮು ಮಾಡಿರಕನಿ....?" ಡಾಕ್ಟರು ನಕ್ಕರು. " ನಂಗುವಿ ಸಾಮೂಗೀಮೂ ಅಂದ್ರ ಪ್ರಾಣಕನ್ನಿಸೋಮಿ. ದಸರ್ಕ ಕುನ್ತಾಗ ಬಂದಿದಿಂ, ಅಲ್ಲೆನಾರ ನನ್ನ ನೋಡಗೀಡಿದೀರ್ಯಕನೀ....?" (" ನನಗು ಕನಸುಂಟು ಅಂದರೆ ಪ್ರಾಣ ಸಾರ್. ದಸರಕ್ಕೆ ಬಂದಿದೆ, ಅಲ್ಲಿನಾದರೂ ನನ್ನನ್ನು ನೋಡಿದೀರಾ...?")

ಡಾಕ್ಟರರ ಮೈಯಿಯಿಡಿ ನಕ್ಕಿತು.

" ನಾ ಮಾಡದು ಗಾರೆಕೆಲ್ಸಕನ್ನಿ ಸೋಮಿ. ಈ ಕರ್ಣ ಹಿಡ್ಕಂಡು ನಾನಾವಿ ಆ ನಿಮ್ಮ ಸಕಲೇಶಪುರ, ಇರಾಜಪೇಟಾ, ಆ ಮಡಕೇರಿ... ಆ ಮಡ್ಕೇರಿ ಅಂತಿದ್ಲಂಯ ನೆಪ್ಪಗ ಬಂತು ನೋಡ್ರೀ.... ಹೀಗಿಂಯ ಒಂದಿನ ಅಲ್ಲ ಬಸ್ಸಾಂಡ್ನಲ್ಲ ಮಲಗಿದ್ದಿ ನಾನು. ಇನ್ನೂವಿ ಬೆಳುಕರಿದಿರಲಿಲ್ಲ... ಇದ್ರಾ, ಅದ್ಯಾಕನ! ಅದ್ಯಾಕನಾ ಸೋಮಿ ಅಲ್ಲ ಯೆಮ್ಮಕ! ಮೂರ್ಮಕ್ಕಳ ಹೆತ್ತವರಂಥವ್ರಿಂಯೂ ಮೂರು ಬೆಟ್ಟಿನ ಅಗುಲಕ ಚಡ್ಡಿ ಇಕ್ಕಂಡೂ... ಯೆಮ್ಮಕ ಚಡ್ಡಿ ಇಕ್ಕಂಡವಕನ್ನಿ ಸೋಮಿ! ಅದೂವಿ ಮೂರ್ಬೆಟ್ಟಿನ ಅಗಲ್ಕ.... ಅಯ್ಯಯ್ಯಪ್ಪಾ..... ಆ ಯೆಮ್ಮಕ ಅಪಾಟ್ಗ ಓಡೋ ಆ ಥರಕಾ ನಾನೇ ಬೆವ್ತೋಗೀ.... ಕವಕನ ನಂಗ, ಅಯ್ಯೋ... ನಾ ನಿದ್ದಂದಾಂಗ ಯೋಚನೆಯೋ ಸ್ತ್ರೀಮಲೆಯೊಳ ದೇಸದೊಳಗ ನನಮ್ಯಾಲ ಗ್ಯಾನೇನ ಬಿದ್ದ ತವಕನ ತನ ರಾಜ್ಯಕ್ ಎತ್ಗ ಬಂದು ಇಳುಕಬುಟ್ಟದಂಳಕನೀ.... ಅನುಸ್ತ್ರದು...." (" ನಾನು ಮಾಡುವುದು ಗಾರೆಕೆಲಸ ಸಾರ್. ಈ ಕರಣಿ ಹಿಡಿದು ನಾನು ಕೂಡ ಸಕಲೇಶಪುರ, ವೀರಾಜಪೇಟೆ, ಮಡಿಕೇರಿ... ಆ ಮಡಿಕೇರಿ ಎಂದಾಗ ನೆನಪಿಗೆ ಬಂದಿತು ನೋಡಿ... ಹೀಗೆ ಒಂದು ದಿನ ಅಲ್ಲಿ ಬಸ ಸ್ಟ್ಯಾಂಡಿನಲ್ಲಿ ಮಲಗಿದ್ದೆ. ಇನ್ನು ಬೆಳಕಾಗಿ ರಲಿಲ್ಲ... ಅದೇನು ಸಾರ್ ಅಲ್ಲಿ ಹೆಂಗಸರು! ಮೂರು ಮಕ್ಕಳ ಹೆತ್ತಂಥವರೆ ಮೂರು ಇಂಚಿನ ಚಡ್ಡಿ ಹಾಕಿಕೊಂಡು... ಹೆಂಗಸರು ಚಡ್ಡಿ ಹಾಕಿಕೊಂಡು ಸಾರ್! ಅದು ಮೂರು ಇಂಚಿನ

ಆಗಲಕ್ಕೆ.... ಅಯ್ಯಯಪ್ಪ... ಆ ಹೆಂಗಸರು ರಭಸವಾಗಿ ಓಡುವ ಆ ರೀತಿಗೆ ನಾನೇ ಬೆವರಕೊಂಡಗಿ.... ತಕ್ಷಣ ನನಗೆ ಅಂತ್ಯಾ.... ನಾನು ನಿದೆಯಲ್ಲದಾಂಗ ಯಾವಳೋ ಮಲಯಾಳಿ ಹೆಂಗಸು ನನ್ನ ಮೇಲೆ ಆಸೆಯಾಗಿ ತಕ್ಷಣ ತನ್ನ ರಾಜ್ಯಕ್ಕೆ ಎತ್ತಿಕೊಂಡು ಬಂದಿರುವವೇಳೆಯೋ ಎನ್ನಿಸಿತ್ತು....")

ಡಾಕ್ಟರ್ ಮೈಯಿಡಿ ಪುನಃ ಕುಲುಕಾಡುತ್ತ ನಕ್ಕಿತು.

" ಅದ್ಯಾನ ಸೋಮಿ ರಾತ್ರ ನಿಂ ಮಾತ್ನ ತಲಬುಡ ಒಂದೂದಿ ನಂಗಿಯ ತಿಳಿನಿಲ್ಲಾ!"
(" ಅದೇನು ಸಾರ ರಾತ್ರಿ ನಿಮ್ಮ ಮಾತಿನ ತಲೆಬುಡ ಒಂದು ಕೂಡ ನನಗೆ ಅರ್ಥವಾಗಲಿಲ್ಲ! ")

ಡಾಕ್ಟರು ಗಂಭೀರವಾಗಿ ಮಾತನಾಡಿದರು.

" ನಾನು ಹೇಳ್ತಾ ಇದ್ದುದು ಏನಪ್ಪ ಅಂದ್ರೆ.... contradictionnu" ಅಂದಂಥ ಡಾಕ್ಟರಿಗೆ ಆ 'nnu' ಉಚ್ಚಾರ ಮಾಡುವಾಗ ಹೊರಳದೆ ನಾಲಗೆ ತುದಿ ಕತ್ತರಿಸಿ ರಕ್ತ ಜಿನುಗುತ್ತ, ನರಳುತ್ತಿದ್ದರು. ಈ ಕಡೆ ಗಾರೆಸಿದ್ದಮಾವ ಮೈಮೇಲಿನ ಜುಬ್ಬವನ್ನು ಕುಲುಕಿಸುತ್ತ " ಐ ಅದಾ? ಗೊತ್ತಾಕನ ಬುಡೀ... ಯಾನೋ ಬ್ಯಾರೆ ಇರ್ಬೇಕೇನ ಅಂದ್ಕಂಡಿದೀ ನಾನು...." (" ಓ ಅದೇ? ಗೊತ್ತಿದೆ ಬಿಡಿ... ನಾನು ಏನೋ ಬೇರೆ ಇರಬೇಕು ಅಂದುಕೊಂಡಿದ್ದೆ...") ಎಂದನು. ತುದಿ ನಾಲಗೆಯಲ್ಲಿ ರಕ್ತ ಹರಿಯುತ್ತಿದ್ದರಿಂದ ಡಾಕ್ಟರ್ ನಗಲಾರದೆ ಸುಮ್ಮನಿದ್ದರು.

ಮೆರವಣಿಗೆ ನಡೆದುಕೊಂಡು ಹೋಗುತ್ತಿದ್ದಂತೆ ಎರಡು ಸಾಲುಗಳ ಮಧ್ಯದಲ್ಲಿ ಅಮಾಸನು ದೇವರದಂತೋಯಿಂದ ಗೋಣಿಚೀಲ ರಹಿತ ಬಾಗಿಗೆ ಸೈಕಲ್ ಬಿಡುತ್ತ, ಸಾಲನ್ನು ಸರಿಪಡಿಸುತ್ತ ಬರುತ್ತಿದ್ದನು. ತಾರಮ್ಮನ ಮನೆಯ ಮುಂದೆ ಬಾಣಂತಿ ಕೆಂಪಿಯು ಮಂಡಿಮೇಲಕ್ಕೆ ಸೀರೆಯನ್ನು ಎತ್ತಿಕೊಂಡು, ನವಿಲು ಲೇಸಿನ ಲಂಗವನ್ನು ಮೊಣಕಾಲು ಕಾಣುವ ರೀತಿ ಕೆಳಗೆ ಬಿಟ್ಟುಕೊಂಡು, ಕಾಲ್ಬೆರಳಿಗೆ ಬಹಳ ಸುಂದರವಾದ ಕಾಲುಂಗರ ಹಾಕಿಕೊಂಡು, ಪಾತ್ರೆಗಳನ್ನು ಬೆಳಗುತ್ತಿದ್ದಳು. ಅವಳ ಅರಿಶಿಣದ ಮೈ ನೋಡಿ ಕೆಲವರ ಮನಸ್ಸು ಚಂಚಲಗೊಂಡಿತು. ಉದಾಹರಣೆ – ವರದ ಕೇವಲ ಕೆಮ್ಮುತ್ತ, ಸಿಂಗು ತುಟಿ ಮುಚ್ಚಿಕೊಂಡು ಮೂಗಿನಲ್ಲೇ ಬುಸು ಗುಡುತ್ತ, ಹೆಬ್ಲಿಂಗುವಿಗೆ ಅಧ್ಯಾತ್ಮವನ್ನು ದರ್ಶನ ಮಾಡಿದಂತಾಗಿ ನಿಂತುಬಿಡಲು, ದೊಡ್ಡಹೊಂನಿಗೆ ಪರಿಸ್ಥಿತಿಯು ಅರಿವಾಗಿ ಹೆಬ್ಲಿಂಗುವಿಗೆ ತಿವಿದು " ಸಾರಾ... ಈಗ ಗಳಿಗಾ ಸರಿಯಾಗಿಲ್ಲ.

ದೊಡ್ಡದೊಡ್ಡವ್ರೆಲ್ಲ ಬಂದಿರೋ ಟೇಮು ಇದು. ಈಗೊಸಿ ಅನ್ಸರ್ಕೊಂಡು ಬನ್ನೀ" (" ಸಾರ್... ಈಗ ಸಮಯ ಸರಿಯಾಗಿಲ್ಲ. ಇದು ದೊಡ್ಡದೊಡ್ಡವರೆಲ್ಲ ಬಂದಿರುವ ಟೈಮು, ಸ್ವಲ್ಪ ಈಗ ಅನುಸರಿಸಿಕೊಂಡು ಬನ್ನಿ") ಎನ್ನುತ್ತ, ಬಾಯಿ ತುಂಬ ಜೇನುತುಪ್ಪ ಸುರಿಸುತ್ತ, ಹೇಳಿದನು. ಹೆಬ್ಲಂಗು ಮುಂದೆ ನಡೆಯಲು, ಮೆರವಣಿಗೆ ಚಲಿಸಿ ಚೆನ್ನನ ಮನೆ ಮುಂದಕ್ಕೆ ಬಂದಿತು.

ಯಾವಾಗಲೂ ಕುಳಿತುಕೊಳ್ಳುವ ಸ್ಥಳದಲ್ಲಿ ಚೆನ್ನನ ಅಪ್ಪ ಕುಳಿತು, ಹೊಸ್ತಿಲಗೆ ಅಂಟಿಕೊಂಡಂತೆ ಚೆನ್ನನ ಅಮ್ಮ ನಿಂತು, ತಮ್ಮ ಮಗನ ರೂಪವನ್ನು ಕಾಣುವ ಆತುರದಲ್ಲಿದ್ದರು. ಮೆರವಣಿಗೆಯಲ್ಲಿ ಗಾರೆಸಿದ್ದಮಾವನನ್ನು ನೋಡಿದಾಗ ಚೆನ್ನನ ಅಪ್ಪ —" ಅಡೇ ಗಾರೆಸಿದ್ದ! ಇತ್ತಗ ನೋಡ್ದೆ ಹೋಯ್ತನಲ್ಲಪ್ಪಾ ನೋಡಿಯಾ ಅವ...." (ಲೋ ಲೋ ಗಾರೆಸಿದ್ದ! ಈ ಕಡೆ ನೋಡದೆ ಹೋಗುತ್ತಾನಲ್ಲ ಅವನು...") ಎಂದಾಗ ಬಂದಂಥ ಗಾರೆಸಿದ್ದಮಾವನನ್ನು ಎಳೆದು ಕೂರಿಸಿಕೊಂಡು ಅವನ ತಲೆ ಸವರುತ್ತ," ಇನ್ನಾವಿ ನಿನ ತಲಿರಿ ಕೂದ್ಲವಕಂಯ್ಯ. ಮಾತ್ನ ಪರಕಾರ ಬೇಡಿ ಮಡ್ಗುಬುಟ್ಟು ಮುಂದ್ಕ ನಡೆಯಯ್ಯ" (" ಇನ್ನು ಕೂಡ ನಿನ್ನ ತಲೆಯಲ್ಲಿ ಕೂದಲಿವೆ, ಮಾತಿನ ಪ್ರಕಾರ ಬೀಡಿಕೊಟ್ಟು ಮುಂದಕ್ಕೆ ನಡೆ") ಎಂದನು. ಗಾರೆಸಿದ್ದಮಾವ ನಗುತ್ತ," ಎಲ್ರಾವಿ ದನಕುರಿ ಮೇಯ್ಸುಸುದ್ರ ನೀನು ನರಮನುಸರ್ನ ಮೇಯುಸ್ಸಯ್ಯಕಪ್ಪಾ" (" ಎಲ್ಲರು ದನಕುರಿ ಮೇಯಿಸಿದರೆ ನೀನು ನರಮನುಷ್ಯರನ್ನ ಮೇಯಿಸುತ್ತೀಯ") ಎಂದು ನಾಲ್ಕಾರು ಬೀಡಿ ಒಂದು ಸಿಗರೇಟನ್ನು ಮುಂದಿಟ್ಟನು. ಆಗ ಚೆನ್ನನ ಅಪ್ಪ —" ಈ ಟೇಮಿಲ್ಲ ನಂ ಚೆನ್ನ ಇಲ್ಲ ಇದಿಂದ್ರ...." (" ಈ ಸಮಯದಲ್ಲಿ ನಮ್ಮ ಚೆನ್ನ ಇಲ್ಲದಿದ್ದರೆ...") ಎಂದಾಗ ಗಾರೆಸಿದ್ದಮಾವ " ಐ ಅದ್ರ ಖದರ್ರೇ ಬ್ಯಾರೆ ಥರವಾಗಿರ್ತಿತ್ತುಕನಾ" (" ಅದರ ಮಜಾನೆ ಬೇರೆ ರೀತಿಯಾಗಿ ರುತ್ತಿತ್ತು") ಎನ್ನುತ್ತ, ಎದ್ದು ಮೆರವಣಿಗೆ ಸೇರಿಕೊಂಡನು.

ಈ ಕಡೆ ಚೆನ್ನನ ಅಪ್ಪನ ಕಣ್ಣುಗಳಲ್ಲಿ ಮಗನ ರೂಪವೇ ತುಂಬಿತುಳುಕಾಡುತ್ತ, ಮುಂದಿದ್ದ ಬೀಡಿಗಳು ಹೊಗೆಯಾಡಿದವು. ಆಗ ತಲೆಯಲ್ಲಿ ಹುಳ ಹರಿದಾಡಿದಂತಾಗಿ ಬೀಡಿಬೇಡಲು ಲಿಂಗಾಯಿತರ ಅಂಗಡಿ ಮುಂದಕ್ಕೆ ಚೆನ್ನನ ಅಪ್ಪ ಬಂದು ನಿಂತಾಗ, ಅಲ್ಲಿ ನಿಂತಿದ್ದ ಹಾಗು ಕುಳಿತಿದ್ದ ಲಿಂಗಾಯಿತರ ಜನರು 'ಬನ್ನಿ ಬುದ್ಧಿ' 'ಬನ್ನಿ ಸ್ವಾಮಿ' ಎನ್ನುತ್ತ, ತಲೆಗೊಂದು ಮಾತು ಎಸೆಯುತ್ತ, ನಗಾಡತೊಡಗಿದರು. ಚೆನ್ನನ ಅಪ್ಪ ಬೆಚ್ಚಿ " ಇದ್ಯಾಕ ಧಣಿಗಳ ಈ ಥರವಾದ

ಮಾತುಗಳೂ....” (“ ಇದೇಕೆ ಧಣಿಗಳೆ ಈ ರೀತಿಯಾದ ಮಾತುಗಳು....”)
ಎಂದಾಗ “ ಇನ್ನೇನು ಮಾಡುವುದು ಸ್ವಾಮಿ, ನಿಮ್ಮ ಜಾತಿಯವರೆಲ್ಲ ನಾಳೆಯಿಂದಲೆ ಜೀತ ಬಿಡುತ್ತಾರಂತಲ್ಲ....” ಎಂದು ಒಬ್ಬ ಹೇಳಿ ನಿಲ್ಲಿಸಿದರೆ ಇನ್ನೊಬ್ಬ, “ ಜೀತ ಬಿಟ್ಟ ಮೇಲೆ ದಲಿತರನ್ನು ಮಾತನಾಡಿಸುವುದಕ್ಕೆ ಆಗುತ್ತದೆಯೆ! ಏನಾದರೂ ನೋಡುವುದಕ್ಕೆ ಆಗುತ್ತದೆಯೆ! ಆಗ ದಲಿತರು ತುಪ್ಪದ ಅನ್ನವನ್ನೇ ಊಟಮಾಡುವುದು....” ಎಂದನು.

ಈ ಮಾತಿಗೆ ಬಿದ್ದು ಬಿದ್ದು ಚೆನ್ನನ ಅಪ್ಪ ನಗುತ್ತ, ಆ ನಗುತ್ತ, ಆ ನಗುವಿಗೆ ಯಾರು ಮುಂದಕ್ಕೆ ಮಾತನಾಡುವುದಕ್ಕೆ ಆಗದಂತೆ ನಗಾಡತೊಡಗಿದನು. ಅವರು ಬಾಯಿ ತೆಗೆದರು ಅವನು ನಗುವನ್ನು ನಿಲ್ಲಿಸದೆ ಇದ್ದರಿಂದ, ಅಲ್ಲಿ ಕುಳಿತಿದ್ದ ಮೆಡ್ಲುಗಣ್ಣನ ಹೆಳವನು ಒದರಾಡುತ್ತ ಓರೆಯಾಗಿ ನಿಂತುಕೊಂಡು “ ನಿಲ್ಲಿಸು ನಿನ್ನ ನಗುವನ್ನು, ಈಗಲಾದರು ತಿಳಿದಿಕೊ.... ಇಲ್ಲಿಂದ ಓಟು ತೆಗೆದುಕೊಂಡು ಗೆದ್ದು ಹೋಗುತ್ತಾರಲ್ಲ ನಿಮ್ಮ ಜಾತಿಯವರು, ಅವರನ್ನು ಆ ಇಂದಿರಾಗಾಂಧಿಯೆ ಜೀತಕ್ಕೆ ಇಟ್ಟುಕೊಂಡಿದ್ದಾಳಂತೆ! ಅವಳೆ ಆ ರೀತಿ ಇರಬೇಕಾದರೆ ಇನ್ನು ನಿಮ್ಮನ್ನು ಜೀತ ಬಿಟ್ಟುಬಿಡಿ ಎನ್ನುತ್ತಾಳೆಯೆ? ಇಲ್ಲಿ ನಾಲ್ಕು ಹುಡುಗರು ಕೂಗಿಕೊಂಡರೆ ಅದು ದಿಲ್ಲಿಗೆ ಕೇಳಿಸುವ ಮಾತೆ?” ಎಂದನು. ಆಗಲು ಚೆನ್ನನ ಅಪ್ಪ ನಗುತ್ತಲೇ!:

“ ಬುದ್ಧಿ, ಇದು ಯಾವ ಥರ್ದಾಪ್ಪ ಅಂದ್ರೆ, ಗುಳ್ಳನರಿ ಲಿಂಗ ಕಟ್ಟಸ್ಗಂಡ ಥರಾ... ಕೇಳಿ, ಒಂದ್ಸಲ ಸರ್ರೂರೆಲ್ಲ ಲಿಂಗಧಾರ್ಣ ಮಾಡ್ಸಕಳ್ತಾ ಇರ್ತಾಗ, ಅದ್ನೇಗ ಗುಳ್ಳನರಿ ನೋಡ್ಕಬುಡ್ತಂತೆ. ಆ ನೋಡ್ದ ಗುಳ್ಳನರಿ ನೋಡ್ಕಂಡು ಸುಮ್ನೆಲ್ಲೂ ಇತ್ತ? ತಾನೂ, ನಾನುವಿ ವಸಿ ಲಿಂಗ ಕಟ್ಟುಸ್ಕಳವ ಅಂದ್ಕಂಡ್ ಬಂದು “ ನಂಗೂವಿ ಲಿಂಗಕಟ್ಟಿ ಸೋಮಿ” ಅಂತ ಕೇಳ್ತಂತೆ. ಆ ಲಿಂಗ ಕಟ್ಟವರು ಅದ್ರ ಮಾತನಿಗ ಕೇಳ್ಸಕಂಡು ಗುಲ್ಲಂತ ನೆಗಾಡ್ತ “ ನೀನು ಬಾಡುಬಳ್ಳನೆಲ್ಲಗಿಲ್ಲ ತಿಂನ್ನೊ. ನಿಂಗ ಬ್ಯಾಡ” ಅಂದ್ರಂತೆ. ಅದ್ಕೂ ಸುಮ್ನಾಯ್ತ ಅದೂ? ಸುಮ್ನೆಗುಳಿಲ್ಲ “ ಅದೆಲ್ಲಾ ತಿಂಬದ ಬುಟ್ಬುಡ್ತನಿಕನ, ಕಟ್ಟೇ ಲಿಂಗಾ” ಅಂತ ಆಣೆ ಬಾಸ ಮಾಡಿ ಗೋಗರ್ಕಂಡು ಲಿಂಗಧಾರ್ಣೆ ಮಾಡ್ಸಕಳ್ತದಂತೆ ಕೊನಗೂ....

..... ಮಾರ್ಕಲ ಇದೆಲಾ ನೋಡ್ತಾ, ಇರೋ ಆ ದೇವ್ರಂದ್ರಾಯ್ತು ಅವ್ನೇನೂ ಸುಮ್ನಿದ್ದಾನೆ? ಸುಮ್ನಿರ್ತಾನ್ದ ಏನಾಯ್ತ? ‘ ನೋಡ್ಡಾ, ಇದರ ದುಡ ಪರೀಕ್ಷೆ’ ಅಂದ್ಕಂಡು ಮಳೆ

ಬರ್ಸಿದನಂತ ಮಳೆ. ಆ ಮಳಾಗ ನಳ್ಳಿಗಳು ಎದ್ದೂಂ ಪಟಪಟಾನ ಓಡಾಡ ಥರವಾಗಿ ಓಡಾಡ್ತ ಇದ ಕಣ್ಣಾರ ನೋಡ್ಕಂಡೂ ಲಿಂಗ ಕಟ್ಸಿಗಂಡಿದ್ರೂ ಈ ಗುಳ್ಳನರಿ ಎಷ್ಟುಕಾಲ ಅಂತ ತಡ್ಕಂಡಿದ್ದುಂದೂ? ಆಗ ಆ ಗುಳ್ಳನರಿ ಏನ್ಮಾಡ್ತು? ಕೇಳಿ.... ತನ್ನ ಕುತ್ತಿಗೇಲ ಕಟ್ಟಿದ್ದಂ ಲಿಂಗ್ದ ತೆಗ್ದುಂ ಕಳ್ಳ ಬೇಲಿಗ ನೂಕ್ತಾಕಬುಟ್ಟ.... ಆ ಓಡಾಡೂ ನಳ್ಳಿಗಳ ಓಡಾಡ್ಸಕಂಡೂ ಅವುಗಳ ಮೊಕ್ಕಲ ದಬ್ಬಾಕಂಡು ಬದ್ದ್ಕಂಡೂ ಸಿಕಸಿಕ್ಕಿದ್ದಂ ತನರಬತರ್ನ ಹಿಡ್ಕಂಡೂ ಸಂಪತ್ತಾಗಿ ತಿಂತಾ ಇತ್ತಂತ. ಆಗ ಇದು....."

(" ಸ್ವಾಮಿ! ಇದು ಯಾವ ರೀತಿ ಅಂದರೆ, ಗುಳ್ಳೇನರಿ ಲಿಂಗಕಟ್ಟಿಸಿಕೊಂಡ ರೀತಿ... ಕೇಳಿ, ಒಂದು ಸಾರಿ ಶಿವಶರಣರೆಲ್ಲ ಲಿಂಗದಾರಣೆ ಮಾಡಿಸಿಕೊಳ್ಳುತ್ತ ಇರುವಾಗ, ಅದನ್ನ ಒಂದು ಗುಳ್ಳೇನರಿ ನೋಡುಕಂಡು ಬಟ್ಟಿತಂತೆ. ಆ ನೋಡಿದ ಗುಳ್ಳೇನರಿ ಸುಮ್ಮನಾದರೂ ಇತ್ತೆ? ತಾಳು ನಾನು ಕೂಡ ಲಿಂಗ ಕಟ್ಟಿಸಿಕೊಳ್ಳೋಣ ಎಂದುಕೊಂಡು ಬಂದು " ನನಗೂ ಲಿಂಗ ಕಟ್ಟಿ ಸ್ವಾಮಿ!" ಎಂದು ಕೇಳಿತಂತೆ. ಆ ಲಿಂಗ ಕಟ್ಟುವವರು ಅದರ ಮಾತನ್ನು ಕೇಳಿಸಿಕೊಂಡು ಗೊಳ್ಳೆಂದು ನಗುತ್ತ " ನೀನು ಮಾಂಸ, ಏಡಿ, ಇತ್ಯಾದಿಗಳನ್ನು ತಿನ್ನುವವನು, ನಿನಗೆ ಬೇಡ ಎಂದರಂತೆ. ಅದಕ್ಕಾದರೂ ಸುಮ್ಮನಾಯಿತೇ ಅದು? ಸುಮ್ಮನಿರಲಾರದೆ " ಅದನ್ನೆಲ್ಲ ತಿನ್ನುವುದನ್ನು ಬಿಡುತ್ತೇನೆ, ಲಿಂಗ ಕಟ್ಟಿಕೊಡಿ" ಎಂದು ಆಣೆ, ಭಾಷೆ ಮಾಡಿ ಗೋಗರೆದುಕೊಂಡು ಕೊನೆಗೆ ಲಿಂಗಧಾರಣೆಯನ್ನು ಮಾಡಿಸಿಕೊಂಡಿತಂತೆ.....

..... ಮೇಲೆ ಇದನ್ನೆಲ್ಲ ನೋಡುತ್ತ ಇದಂತ ಆ ದೇವೇಂದ್ರ, ಅವನಾದರೂ ಸುಮ್ಮನಿದ್ದಾನೆ? ಇದರ ಮನಸ್ಸನ್ನು ಪರೀಕ್ಷಿಸಿ ನೋಡೋಣ ಎಂದು ಮಳೆ ಸುರಿಸಿದನಂತೆ. ಆ ಮಳೆಗೆ ಏಡಿಗಳು ಎದ್ದು ಗುಂಪು ಗುಂಪಾಗಿ ಓಡಾಡುವ ರೀತಿಯನ್ನು ಕಣ್ಣಾರೆ ನೋಡಿಕೊಂಡು, ಲಿಂಗಕಟ್ಟಿಸಿ ಕೊಂಡಿರುವ ಗುಳ್ಳನರಿ ಎಷ್ಟುಕಾಲ ತಡೆದುಕೊಂಡಿರಲು ಸಾಧ್ಯ? ಆಗ ಗುಳ್ಳನರಿ ಏನು ಮಾಡಿತೆಂದರೆ? ಕೇಳಿ.... ತನ್ನ ಕುತ್ತಿಗೆಯಲ್ಲಿ ಕಟ್ಟಿದ್ದ ಲಿಂಗವನ್ನು ತೆಗೆದು ಕಳ್ಳಿಬೇಲಿಗೆ ನೇತಾಕಿ.... ಅಲ್ಲಿ ಓಡಾಡುವ ಏಡಿಗಳನ್ನು ಓಡಾಡಿಸಿಕೊಂಡು, ಅವುಗಳ ಮೇಲೆಬಿದ್ದು ಸಿಕ್ಕಿದ್ದನ್ನು ಆತುರಾತುರದಲ್ಲಿ ಹಿಡಿದುಕೊಂಡು ಸಂತೃಪ್ತಿಯಾಗಿ ತಿನ್ನುತ್ತಿತ್ತಂತೆ. ಆ ರೀತಿ ಇದು....") ಎಂದನು.

ಆಗ, ಆನೇ ಬಂದು ಮುಂದಕ್ಕೆ ಬಿದ್ದ ಬೀಗಗಳನ್ನು ಆಯ್ದುಕೊಂಡು ಚೆನ್ನನ ಅಪ್ಪ ತನ್ನ ಸ್ಥಳಕ್ಕೆ ಬಂದು ಕುಳಿತನು.

ದಲಿತ ಸಂಘದ ಹೋರಾಟದೊಡನೆ ಸೇರಿದ ಅಮಾನನಿಗೆ ತಿಂಗಳ ಕೆಲಸದಲ್ಲೂ ಮೂರು ದಿನ ಖೋತಾ ಆಗುತ್ತ, ದುಡ್ಡುಕಾಸು ಓಡಾಡುವುದೂ ನಿಲುಗಡೆಯಾಗಿ ಅಮಾನನ ಆರ್ಥಿಕ ಸ್ಥಿತಿಯು ಹಳ ಹಿಡಿಯುತ್ತ, ಬೇಗನೂ ಪರದಾಡಬೇಕಾದ ಪರಿಸ್ಥಿತಿಗೆ ತಲುಪಿದನು. ಬರಬೇಕಾಗಿದ್ದ ಹಳೆ ಬಾಕಿಯ ಮುಸಲ್ಮಾನ ಆ ಊರು ಈ ಊರು ತಿರುಗುತ್ತ, ಆ ಕೈಗೆ ಸಿಗದ ಮುಸಲ್ಮಾನನ ಪತ್ತೆಗಾಗಿ ಅಮಾನ ನಂಜನಗೂಡಿನ ಲೋಕ ಸುತ್ತಿ, ಸುತ್ತಿ, ಸುಣ್ಣವಾದ. ಅಂತೂ ಒಂದು ದಿನ ಕಣ್ಣಿಗೆ ಬಿದ್ದಾಗ ಓಡೋಡುತ್ತ ಬಂದ ಮುಸಲ್ಮಾನ ಅಮಾನನ ಎರಡು ತೋಳನ್ನು ಬಿಗಿಹಿಡಿದು ಅಳ್ಳಾಡಿಸುತ್ತ :

“ ಅರೆರೆ ಅಮ್ಮಾನ..... ಎಲ್ಲಿ ಹೋಗಿದ್ದೆ. ನಿನ್ನ ಮೂತಿ ಯಾಕೆ ಈಗೀಗ ಕಾಣುತ್ತಿಲ್ಲ. ಬೇರೆಯವರಿಗೆ ಚಾಕರಿ ಮಾಡುತ್ತ ನಮಾಕ ಹರಾಮಗಿರಿ ಮಾಡುತ್ತಿದ್ದೀಯೆ ಏನು? ನಮ್ಮಂಗೆ ಗೊತ್ತಾಗಲ್ಲ ಎಂದುಕೊಂಡಿದ್ದೀಯೆ ಏನು? ಈಗ ಅಡ್ವಾನ್ಸ ದುಡ್ಡು ವಾಪಸ ಕೊಟ್ಟು ಮುಂದಕ್ಕೆ ಇನ್ನೇಫ ಇಡು.... ಎಂದು ದಬಾಯಿಸುತ್ತ” ಅಮಾನನಿಗೆ ಬಾಯಿಬಿಡಲು ಅವಕಾಶ ಕೊಡದ ಮುಸಲ್ಮಾನ :

“ ಥತ್ ತೇರಿ ನಿನಗೆ ಹೇಳುವುದ ಮರೆತಿದ್ದೆ ನೋಡು. ನಾನು ಬೊಂಬಾಯಿಗೆ ಹೋಗಿದ್ದೆ ನಿನಗೆ ಗೊತ್ತಿಲ್ಲಾ! ಅಲ್ಲಿ ನಿಮ್ಮದು ಚೋಕ್ರ ಚಿನ್ನನಿಗೆ ನೋಡಿದೆ. ಏನು ಅಂದುಕೊಂಡಿದ್ದೀಯೋ ಈಗ ನಿಮ್ಮದು ಚಿನ್ನನ ಅಲ್ಲ! ಇಡೀ ಬೊಂಬಾಯಿ ಮೇಲೆ ಅವನು ಏ ಒನ ದಿಲದಾರ್, ಅವನೇ ಅವನು....” ಅಮಾನನಿಗೆ ಸಾಲದೆಂದು, ಮುಂದಕ್ಕೆ ಹೇಳಲು ಶುರುಮಾಡಿದ ಮುಸಲ್ಮಾನ:

“ ತಿಳಿದಿಕೊ..... ಈ ನೆಲದ ಮೇಲೆ ಅವನು ಕಾಲು ಇಡುವುದಿಲ್ಲ. ಕಾರಿನಲ್ಲೇ ಅವನು ಓಡಾಡುವುದೆಲ್ಲ. ನಾನು ರಸ್ತೆಯಲ್ಲಿ ನಿಂತಿದ್ದವನು ‘ ಅರೇಭಯ್ಯಾ ಚಿನ್ನಾ! ಎಂದೆ, ಅಷ್ಟರೊಳಗೆ ಕಾರು ಒಂದು ಮೈಲ ದೂರ ಹೊರಟೋಗಿ ಬಿಡುವುದೆ!”
ಸಾಲದೆಂದು ಮುಂದಕ್ಕೆ ಉಸಿರು ಬಿಡುತ್ತ ಮುಂದುವರೆಸಿದ ಮುಸಲ್ಮಾನ :

“ ಕಾರು ನಿಂತಿದ್ದರೆ ನಿನ್ನ ವಿಚಾರನೂ ಮಾತನಾಡುತ್ತಿದ್ದೆ ತಿಳಿದಿಕೊ ಅದಕ್ಕೇನು ದುಡ್ಡು ಕೊಡಬೇಕಿತ್ತೇ? ಎಷ್ಟು ಆದರೂ ಚಿನ್ನ ನಮ್ಮದು ಕಡೆ ಚೋಕ್ರ ತಾನೆ? ಅರೆಭಯ್ಯಾ ಎನ್ನುವಷ್ಟಕ್ಕೆ ಆ ಬೆಂಚಕಾರು ಒಂದು ಮೈಲ ಹೊರಟೋಯಿತಲ್ಲಾ! ನೀನಾಗಿದ್ದರೂ ಏನು ಮಾಡುತ್ತಿದ್ದೆ? ಎಂದು ಮುಂದುವರೆಸುತ್ತ, ಏದುಸಿರು ಬಿಡುತ್ತ, ಮುಸಲ್ಮಾನ:

" ಬೊಂಬಾಯಿಯಲಿ ಚೆನ್ನ ಏನಾಗಿದಾನೆ ಗೊತ್ತೇನ್ಲೆ. ತ್ರಿ ಇಸ್ಟಾರ್ ಹೋಟೆಲಿನ ಮೇನೇಜರು ಗೊತ್ತೆ? ಅವನದುರಿಗೆ ನಿಮ್ಮೂರ ಸಾಹುಕಾರ ಯಾವ ಲೆಕ್ಕ....." ಎಂದನು.

ಬಾಕಿ ಮಾತಿರಲಿ, ಅಮಾಸನಿಗೆ ಅಮಾಸನೇ ಮಗನು, ಅದು ಊರಿಗೆ ಹರಿಯುತ್ತ, ಆ ಸಂಜೆ ಸಾರಾಯಿ ಅಂಗಡಿಗೂ ಬಂದಿತು. ಗಾರೆಸಿದ್ದಮಾವನು ನಿಶೆ ಏರಿ ಕುಳಿತು ವಾರದ ಸಂಬಳದ ಹತ್ತತ್ತು ರೂಪಾಯಿಯನ್ನು ಒಂದಾದ ಮೇಲೊಂದು ಎಸೆಯುತ್ತ, ಆ ಸುತ್ತಲಿನವರಿಗೂ ಏರಿಸುತ್ತ, ಚಾಪೀಸು, ಬೋಟಿ, ಕೈಮದ ಉಂಡೆಗಳಿಗೆ ಸಾರಾಯಿಯನ್ನು ಬೆರೆಸಿ ತೇಲಿಸುತ್ತಿದ್ದರೆ, ಆ ದೇಹಗಳು ಮೈಮರೆತು ಉರುಳಾಡುತ್ತ, ಅವರದೇ ಪ್ರಪಂಚದಲ್ಲಿರುವಾಗ ಇನ್ನೇನು ಉಳಿದಿದೆ ಅಲ್ಲ? ಗಾರೆಸಿದ್ದಮಾವ ಮುಖದಿಂದಲೆ ಬೆವರನ್ನು ಒಂದು ಬೊಗಸೆಯಷ್ಟು ಬಳಿದು ತೆಗೆದು ಏನೇಳಿದ:

" ಅಯ್ ಕೇಳಿ ಬಡ್ಡೆತ್ತವೇ.... ನಂ ಚನ್ನ ಈಗ ಆ ತ್ರಿ ಇಸ್ಟಾರ್ ಹೊಟ್ಲ ಬುಟ್ಲುಟ್ಲಂತಕನ. ಚನ್ನರ್ ಅಂತ ತಾನಿಯಪ್ಪ ಅವ ಹೆಸ್ರ ಚೇಂಜ್ ಮಾಡ್ಕಂಡಿದಾಂದು? ಅದ್ಕೆ ಆ ಬೊಂಬಾಯ್ ದೊರ, ಚನ್ನರ್ ಅಂದ್ರ ಓಹೋ ತಂ ಜಾತಿಯವ್ನೆ ಇರ್ಬೇಕು ಅಂದ್ಕಬುಟ್ಟ ಅಮ್ಯಾಕಲ ನಂ ಚನ್ನನ ಚಂದ್ಕಯ ನೋಡ್ಬುಟ್ಟು ' ಈ ಚಣದಿಂದ್ಲೆ ನಮ್ಮ ತಾವ್ ಕೆಲ್ಸಕ ಬಂದ್ಬುಡಯ್ಯ ' ಅಂದ್ನಂತ....." (" ಕೇಳಿ ಮುಟ್ಟಾಳರೇ... ನಮ್ಮ ಚೆನ್ನ ಈಗ ಆ ತ್ರಿಸ್ಟಾರ್ ಹೋಟೆಲ್ ಬಟ್ಲರ್‌ನಂತೆ. ಚೆನ್ನರ್ ಎಂದು ತಾನೇ ಅವನು ಹೆಸರು ಬದಲಾಯಿಸಿಕೊಂಡಿದ್ದುಂಟು? ಅದಕ್ಕೇ ಆ ಬೊಂಬಾಯಿಯ ಶ್ರೀಮಂತ, ಚೆನ್ನರ್ ಅಂದರೆ ಓಹೋ ತಮ್ಮ ಜಾತಿಯವನೇ ಇರಬೇಕು ಎಂದುಕೊಂಡುಬಿಟ್ಟ ಅಲ್ಲದೆ ನಮ್ಮ ಚೆನ್ನನ ಅಂದಕ್ಕೆ ಮನಸೋತು ' ಈ ಕ್ಷಣದಿಂದಲೇ ನಮ್ಮ ಹತ್ತಿರ ಕೆಲಸಕ್ಕೆ ಬಂದುಬಿಡು ಎಂದನಂತೆ...")

ಅಲ್ಲ ಎನ್ನುವವರು ಅಲ್ಲಿ ಯಾರು ತಾನೆ ಇದ್ದರು. ದೇಹದ ಅರಿವೇ ಇಲ್ಲದ ಆ ಜೀವಗಳು ಕೇಳುವ ಕಿವಿಯಾದವು :

" ಕೆಲ್ಸ ಅಂದ್ರ ನಂ ಥರಂ ಕೆಲ್ಸ ಅಂದ್ಕಂಡ್ರೇನಾ ಎಡ್ಡ ಬಡ್ಡೆತ್ತವ! ಎಷ್ಟೇ ಅದ್ರೂ ಹಳ್ಳಿಗಮಾರಗಳು ನೀವ್... ಒಂದು ಊರನ್ನು ನೋಡಿದೀರಾ? ಹೋಗ್ಲಿ ಒಂದು ಕೇರಿನಾರೂ

ನೋಡಿದೀರಾ? ನಂ ಚೆನ್ನಿ ಇರಾ ಕೆಲ್ಸ ಎಂಥದು ಅಂತಾ ಗೊತ್ತಾಯ್ತಾ ನಿಮ್ಗ?” (“ ಕೆಲಸ ಅಂದರೆ ನಮ್ಮ ರೀತಿ ಕೆಲಸ ಎಂದುಕೊಂಡಿದೀರ! ಎಷ್ಟೋ ಅದರು ನೀವು ಹಳ್ಳಿ ಗಮಾರಗಳು.... ಒಂದು ಊರನ್ನಾದರೂ ನೋಡಿದೀರ? ಹೋಗಲಿ ಒಂದು ಬೀದಿಯನ್ನಾದರೂ ನೋಡಿದೀರಾ? ನಮ್ಮ ಚೆನ್ನಿ ಇರುವ ಕೆಲಸ ಎಂಥದೆಂದು ಸ್ವಲ್ಪವಾದರು ಗೊತ್ತೆ ನಿಮಗೆ?”)

ಯಾರಿಗೆ ತಾನೆ ಗೊತ್ತು?

“ ಆ ಬೊಂಬಾಯಿದೋರ ಅವ್ನಿಲ್ಲಾ, ಅವ ವಾರಕ್ಕ ಒಂದ್ಸಲ ಮಾತ್ರ ದರ್ಬಾರ ನಡ್ಸದು. ಆ ದರ್ಬಾರ ನಡೆಯೋ ಟೇಮ್ಗ ನಂ ಚೆನ್ನಿ ಸಿಂಗಾರ ಮಾಡ್ಕಂಡು..... ಆ ದರ್ಬಾರ್ಗ ಗತ್ತಾಗಿ ನಡ್ಕಬಂದು ಎಲ್ಲರಿಗಿಂತ ಮುಂದೆ ಕುತ್ಗಳುವಂಥಾ ಕೆಲ್ಸ. ಆಮ್ಯಾಕ ಕೇಳಿ.... ಆ ದರ್ಬಾರ ನಡೆಯಾಗ ಕೆಮ್ಮಾಗಿಮ್ಮ ಬರಬಾರದಂಗ ಕಂಯ್ಯೋ ಕೇಳ್ಕಳ್ಳಿ! ಅದ್ಬೇರೆ ಕತವಾದ್ದು ಆಮ್ಯಾಕ....” (“ ಆ ಬೊಂಬಾಯಿಯ ಶ್ರೀಮಂತ ಇದ್ದಾನಲ್ಲ, ಅವನು ವಾರಕ್ಕೆ ಒಂದು ಸಾರಿ ಮಾತ್ರ ದರ್ಬಾರ ನಡೆಸುವುದು. ಆ ದರ್ಬಾರ ನಡೆಯುವ ಸಮಯಕ್ಕೆ ನಮ್ಮ ‘ಚೆನ್ನಿ’ ಚೆನ್ನಾಗಿ ಡ್ರೆಸ್ ಮಾಡಿಕೊಂಡು... ಆ ದರ್ಬಾರಿಗೆ ಗತ್ತಾಗಿ ನಡೆದುಕೊಂಡು ಬಂದು ಎಲ್ಲರಿಗಿಂತ ಮುಂದೆ ಕುಳಿತುಕೊಳ್ಳುವಂತ ಕೆಲಸ. ಆಮೇಲೆ ಕೇಳಿ... ಆ ದರ್ಬಾರ ನಡೆಯುವಾಗ ಕೆಮ್ಮಬಾರದಂತೆ ಕೇಳ್ಕೊಳ್ಳಿ ಆಮೇಲೆ ಅದೇ ಬೇರೆ ಸಮಸ್ಯೆಯಾದ್ದು....”)

ಅಲಿಸುತಲಬಂದ ಆ ಜೀವಗಳು :

“ ನಮ್ಮಂಥವರು ಯಾರಾರು ಹೋದ್ರ ಕೆಮ್ಮುಬುಟ್ರ ಪ್ರಾಣ ತಗ್ಸಕಂಡು ತಿರ್ಗ ಹಿಂದ್ಕ ಬರಾ ಮಾತೇ ಇಲ್ಲ ತಿಳ್ಕಳ್ಳಿ.... ಅಂಥ ಕಡುಂದೋರ ಅವ್ನು. ಆಯ್ತಾ? ಆಮ್ಯಾಕ ಯಾನಪ್ಪ ಅಂದ್ರ... ಆ ದರ್ಬಾರ ಮುಗ್ದಾಂಗ ನಂ ಚೆನ್ನಿ ಗತ್ತಾಗಿ ಎದುರು ಧಿಕಾವಾಗಿ ನಡೀತಾ ನಗ್ತ ನಗ್ತ ಬರೋಂಥಾ ಕೆಲ್ಸ...” (“ ನಮ್ಮಂಥವರು ಯಾರಾದರೂ ಹೋದರೆ ಕೆಮ್ಮಿ ಪ್ರಾಣ ತೆಗೆಸಿಕೊಂಡು ತಿರುಗಿ ವಾಪಸ ಬರುವ ಮಾತೇ ಇಲ್ಲ ತಿಳಿದುಕೊಳ್ಳಿ .... ಅವನು ಅಂತಹ ಕೋಪಿಷ್ಟ ಶ್ರೀಮಂತ. ಗೊತ್ತಾಯಿತೆ? ಆಮೇಲೆ ಏನೆಂದರೆ... ಆ ದರ್ಬಾರ ಮುಗಿದಾಗ ನಮ್ಮ ಚೆನ್ನಿ ಬಹಳ ಗತ್ತಾಗಿ ಎದುರು ಸ್ಟೈಲಾಗಿ ನಡೆಯುತ್ತ, ನಗುತ್ತ ಬರುವಂಥ ಕೆಲಸ.....”)

ಆ ಜೀವಾಳು ನಗೆ ತುಂಬಕೊಂಡವು:

" ತಿಳಕಿಲ್ಲ ಹಳ್ಳಿಗಮಾರ ಬಡ್ಡೆತ್ತಾ... ಒಂದ ದೇಸನಾರು ನೋಡೆಂ ಇರೋ ಬಡ್ಡೆತ್ತಾ ಈಗ್ಲಾರೂ ತಿಳಕಿಲ್ಲ, ಆ ದರ್ಬಾರಗ ಎಂತೆಂಥವು ಬತ್ತಾರ ಗೊತ್ತೈತಾ ನಿಮಗ? ದೇಸ ದೇಸಂ ರಾಜರೆಲ್ಲ ಬತ್ತಾರ. ಅಲ್ಲಿಗ ಹೋಗುವದ ಒಂದ ದೊಡ್ಡಸ್ತಿಕಕನಾ. ಅಷ್ಟೆಕ ಕೇಳಿ... ಆ ನೂರನೂರ್ರ ರೂಪಾಂಯ ನೋಟಗಳ ಒಲಗ ಹಾಕಿ ಉಪ್ಪ ತಾನಿಂಯಪ್ಪ ಆ ಇಂದ್ರಗಾಂದಿ ಅನ್ನೌಳು ಟೀ ಕಾಂಯ್ಸಗಂಡು ಕುಡಿಂಯೋದು? ಅಂಥವಳೂ ಮುಖಕ್ಕ ಬಣ್ಣ ಬಳಕೊಂಡೂ ಕಣ್ಣಿಗ ಥಳಾರನ್ನೋ ಸೀರ ಉಟಗೊಂಡೂ ಸಿಂಗಾರದಲ ಏನೇ ಕೆಲ್ಸ ಇದ್ರೂ ಬಿಟ್ಟ್ ಆಗ ಎಲ್ಲಾ ಬಿಟ್ಟು ಆ ದರ್ಬಾರಗ ಮಾತ್ರ ತಪ್ಪಸ್ಕೊಳ್ದೆ ಬಂದು ಒಟ್ಟೊಂದಿರಿ ಮೂಲ್ಯಾಗ ಕೂತಗೊಂಡಳಂತ. ಕೇಳಿ ಅವಳ್ನ ಯಾರೂ ಅಲ್ಲ ನೀ ಯಾರ? ನೀ ಯಾವೂರ? ಅನ್ನೌರು ಇಲ್ಲಂತ. ಅಲ್ಲಿಗ ತಿಳಕಿಲ್ಲ.... ಇನ್ನೆಂಗಿದ್ದಾಂದು ಅಂತ! ಇನ್ನೆಂಗಿರಬೌದು?" ("ತಿಳಿದುಕೊಳ್ಳಿ ಹಳ್ಳಿಗಮಾರಗಳೆ.... ಒಂದು ದೇಶವನ್ನಾದರೂ ನೋಡದೇ ಇರುವ ದಡ್ಡ ಜನಗಳೇ, ಈಗಲಾದರೂ ತಿಳಿದುಕೊಳ್ಳಿ. ಆ ದರ್ಬಾರಿಗೆ ಎಂತೆಂಥವರು ಬರುತ್ತಾರೆ ಗೊತ್ತೇನು? ದೇಶವಿದೇಶದ ಶ್ರೀಮಂತರೆಲ್ಲಾ ಬರುತ್ತಾರೆ. ಅಲ್ಲಿಗೆ ಹೋಗುವುದೇ ಒಂದು ದೊಡ್ಡಸ್ತಿಕೆ. ಅಷ್ಟೇಕೆ ಕೇಳಿ.... ನೂರು ರೂಪಾಯಿಗಳ ನೋಟುಗಳನ್ನು ಒಲೆಗೆ ಹಾಕಿ ಟೀ ಕಾಯಿಸಿ ಕುಡಿಯುವುದು ಆ ಇಂದಿರಾಗಾಂಧಿ ಎನ್ನುವವಳು ತಾನೆ? ಅಂಥವಳು ಮುಖಕ್ಕೆ ಲೇಪ ಮಾಡಿಕೊಂಡು, ಕಣ್ಣಿಗೆ ಹೊಳೆಯುವ ಸೀರೆ ಉಟ್ಟು ಶೃಂಗರಿಸಿಕೊಂಡು, ಏನೇ ಕೆಲಸ ಇದ್ದರೂ ಕೂಡ ಬಿಟ್ಟು, ಆ ದರ್ಬಾರಿಗೆ ಮಾತ್ರ ತಪ್ಪಿಸಿಕೊಳ್ಳದೇ ಬಂದು, ಒಂದು ಕಡೆ ಮೂಲೆಯಲ್ಲಿ ಕುಳಿತುಕೊಳ್ಳುತ್ತಾಳಂತೆ. ಅವಳನ್ನೇ ಕೂಡ ಅಲ್ಲಿ ನೀನು ಯಾರು? ಯಾವ ಊರು? ಎಂದು ಆತ್ಮೀಯತೆಯಿಂದ ಮಾತನಾಡಿಸುವವರೆ ಇಲ್ಲವಂತೆ. ಅಲ್ಲಿಗೆ ತಿಳಿದುಕೊಳ್ಳಿ... ಇನ್ನೇಗಿದೆ ಎಂದು! ಹೇಗಿರಬಹುದು?")

ಗಾರೆ ಸಿದ್ದಮ್ಮನ ಈ ದರ್ಬಾರು ನಡೆದು, ಆ ದರ್ಬಾರಿನ ಸುದ್ದಿಗಳು ತೂರಾಡುತ ನಡೆದು, ಆ ಊರ ಸಂಕ್ರಾಂತಿ ಹಬ್ಬದ ಸಿನಿಮಾ ಹಾಡಿನ ಶಬ್ದಕ್ಕಿಂತ ಮಿಗಿಲಾಗಿತ್ತು. ಆ ಸುದ್ದಿಗಳು ಹರಿದಿದ್ದ ಬೀದಿಯಲ್ಲಿ ಮಕ್ಕಳು ಕುಣಿದು ಕುಪ್ಪಳಿಸಿ, ಆ ನಡೆಗೆ ತಕ್ಕಂಥ ಕುಣಿದಾಟ ಹರಿಯುತ್ತ, ಅದು ಕುಸುಮಳು ಇದ್ದಲ್ಲಿಗೂ ಬಂದಿತು. ಅಲ್ಲಿ ಹಗಲುರಾತ್ರಿಯು

ಪರಿಜ್ಞಾನವಿಲ್ಲದ ಅವಳ ಮಗು ಕಣ್ಣರಳಿಸಿಕೊಂಡು ಕೇಕೆಹಾಕುತ್ತ, ಕೈಕಾಲು ಮೇಲೆ ಕೆಳಗೆ ಆಡಿಸುತ್ತ, ಉಪಾಡುತ್ತಿದ್ದರೆ, ಅದರಮ್ಮ ತನ್ನ ಮೇಲೆ ಧ್ಯಾನವಿಲ್ಲದೆ ನೋಡಿದನ್ನ ನೋಡುತ್ತ, ಕುಳಿತಿದ್ದಳು. ಅವಳ ಹಣೆತುಂಬ ಇದ್ದ ಹಸಿಬೆವರು ಆಗಾಗ ಒಡೆದು ಮುಖದಿಂದ ಕೆಳಗಿಳಿಯುತ್ತ, ಆ ತೇವಕ್ಕೆ ಅವಳ ಕೂದಲು ಮುಖಕ್ಕೆಲ್ಲ ಅಂಟಿಕೊಂಡು ಅಲುಗಾಡದಂತಿತ್ತು. ಮಗು ಉಪಾಡುವ ಅದ್ಭುತವನ್ನು ನೋಡುತ್ತ, ಕುಸುಮಳ ತಮ್ಮನಾದ ಹನ್ನೆರಡು ವರ್ಷದ ಪ್ರಸಾದನು ಕುಳಿತಿದ್ದನು. ದೇವಮಾನವರಂತೆ ರೆಪ್ಪೆಯ ಮಿಟುಕಿಸದ ಆ ಬೆರಗು ಕಣ್ಣುಗಳ ಒಳಕ್ಕೆ.... ಅಕ್ಕ ಕುಸುಮಳ ಕಣ್ಣುಗಳ ನೀರು ಹರಿಯುತ್ತಿತ್ತು. ಹೀಗೆ ಹರಿಯುತ್ತಿದ್ದಂತೆ ಪ್ರಸಾದನ ಕಣ್ಣುಗಳಲ್ಲಿ ಬೆರಗು ಹೆಪ್ಪುಗಟ್ಟುತ್ತಿತ್ತು. ಅದು ಹೆಪ್ಪುಗಟ್ಟುತ್ತಿದ್ದಂತೆ 'ಆ ದೂರದಿಂದ ಬಂದಂಥ ಸುಂದರಾಂಗ ಜಾಣ...... ನಾ ಕಾಣೆ!' ಹಾಡು ಹಾಡುತ್ತ, ಈ ಅಳುವ ಅಕ್ಕನನ್ನು ನಗಿಸುವುದಕ್ಕೆ ಪ್ರಸಾದ ಆ ಹಾಡಿಗೆ ತಕ್ಕಂತೆ ಕುಣಿಯುತ್ತಿದ್ದಾಗ, ಕುಸುಮಳ ಭಾರವಾದ ಹೃದಯವನ್ನು ಯಾರೋ ತೆಗೆದು ಎತ್ತಿ, ತಕ್ಷಣ ಕೆಳಕ್ಕೆ ಇಟ್ಟಂತಾಯಿತು.....

ಆಗ ಕುಸುಮಳ ಕಣ್ಣುಗಳಲ್ಲಿ ನೀರು ನಿಂತು, ಆ ಕೆನ್ನೆಯಲ್ಲಿ ಹರಿಯುತ್ತಿದ್ದ ಕಣ್ಣೀರು ಕೆನ್ನೆಯಲ್ಲೇ ಹಿಂಗಿತು: ಅರೆಗಣ್ಣು ಮಾಡಿದ ಕುಸುಮಳು ಓಲಾಡುತ್ತ, ಅವಳ ಉದಂದ ಕೂದಲು ತಲೆಸುತ್ತ, ಓಲಾಡುತ್ತ, ಊರು ಸುತ್ತುವ ಮಾಂತ್ರಿಕರು ಓಡೋಡಿ ಬಂದರು ಎಂಟು ಜನ. ಅವರು ನಾಗಬೆತ್ತದಲ್ಲಿ ಹೊಡೆದಾಗ ಮುರಿಯುತಲ್ಲ ಆ ನಾಗಬೆತ್ತ. ಅವರು ಹಸಿ ಬಾಣಂತಿ ಕೂದಲನ್ನು ಮುಷ್ಟಿಯಲ್ಲಿ ಹಿಡಿಯಲು ಆ ಹಿಡಿ ಮುಷ್ಟಿಗೆ ಎಂಟು ಹಿಡಿ ಕೂದಲು ಕಿತ್ತುಬಂದು, ಆ ಗಾಳಿಮಾತಿನ ಅರ್ಥವು ಅವರಿಗೆ ಸಿಕ್ಕದೇ, ಮುಂದಕ್ಕೆ ಕೊಳ್ಳೇಗಾಲದ ಮಾಂತ್ರಿಕರು ಓಡೋಡಿ ಬಂದರು ಎಂಟು ಜನ. ಅವರು ನಾಗಬೆತ್ತದಲ್ಲಿ ಹೊಡೆದಾಗ ಮುರಿಯುತಲ್ಲ ಆ ನಾಗಬೆತ್ತ. ಅವರು ಹಸಿಬಾಣಂತಿ ಕೂದಲನ್ನು ಮುಷ್ಟಿಯಲ್ಲಿ ಹಿಡಿಯಲು, ಆ ಹಿಡಿ ಮುಷ್ಟಿಗೆ ಹದಿನಾರು ಹಿಡಿ ಕೂದಲು ಆಗ ಕಿತ್ತುಬಂದ, ಆ ಗಾಳಿಮಾತಿನ ಅರ್ಥವು ಅವರಿಗು ಸಿಕ್ಕದೆ ಮುಂದಕ್ಕೆ ಮಲಯಾಳದ ಮಾಂತ್ರಿಕರು ಓಡೋಡಿ ಬಂದರು ಎಂಟು ಜನ. ಅವರು ನಾಗಬೆತ್ತದಲ್ಲಿ ಹೊಡೆದಾಗ ಮುರಿಯುತಲ್ಲ. ಆ ನಾಗಬೆತ್ತ. ಅವರು ಕೂಡ ಹಸಿ ಬಾಣಂತಿ ಕೂದಲನ್ನು ಮುಷ್ಟಿಯಲ್ಲಿ ಹಿಡಿಯಲು, ಆ ಹಿಡಿ ಮುಷ್ಟಿಗೆ ಮುವತ್ತೆರಡು ಹಿಡಿ ಕೂದಲು ಆಗ ಕಿತ್ತುಬಂದು, ಆ ಗಾಳಿಮಾತಿನ ಅರ್ಥವು ಅವರಿಗು ಸಿಕ್ಕದೆ ಮುಂದಕ್ಕೆ ದೇಶವಿದೇಶದ ಮಾಂತ್ರಿಕರು ಓಡೋಡಿ ಬಂದರು ಎಂಟು ಜನ. ಬಂದವರಿಗೆ

ಕೂದಲು ಇಲ್ಲದ ಕುಸುಮಳ ತಲೆಯನ್ನು ಕಂಡು ಕೈಕಟ್ಟಿತು. ಆ ಓದಿಲ್ಲದ ಕುಸುಮಳು 'I want to be in my house' ಎನ್ನುತ್ತಾಳಲ್ಲೊ.

ಸಂಕ್ರಾಂತಿ ಹಬ್ಬದ ಸುಣ್ಣಬಣ್ಣವನ್ನು ಕಾಣದ ಬಾಗಿಲಿಗೆ ಅಂಟಿಕೊಂಡು ಚೆನ್ನನ ಅಮ್ಮ ಗಂಡನನ್ನು ನೋಡುತ್ತಿದ್ದಂತೆ, ಅವಳ ಗಂಡನು ಮಾಮೂಲು ಕುಳಿತುಕೊಳ್ಳುವ ಸ್ಥಳದಲ್ಲಿ ಕುಳಿತಿದ್ದನು. ಬೇಸರವಾಗಿ ಚೆನ್ನನ ಅಮ್ಮ " ಯಾನ?" (" ಏನ್ರೀ?") ಎಂದಳು. ಏನು ಎಂಬಂತೆ ಚೆನ್ನನ ಅಪ್ಪ ನೋಡಿದನು. ಚೆನ್ನನ ಅಮ್ಮ " ಬನ್ನಿ ವಸ್ಕ" (" ಬನ್ನಿ ಸ್ವಲ್ಪ") ಅಂದಳು. ಚೆನ್ನನ ಅಪ್ಪ ಕುಳಿತಲ್ಲಿಂದ ಏಳದೆ " ಅದ್ಯಾಕ ಅಲ್ಲಿಂದ್ಲೆ ಹೇಳುದ್ರ ಕೇಳ್ಸಲ್ಲ ನಂಗ" (ಅದೇಕೆ ಅಲ್ಲಿಂದಲೆ ಹೇಳಿದರೆ ಕೇಳಿಸುವುದಿಲ್ಲವೆ ನನಗೆ?") ಎಂದನು. ಅದಕ್ಕೆ ಚೆನ್ನನ ಅಮ್ಮ " ಅದಿಯಾ, ಎಲ್ರು ಅಂತಾರಲ್ಲಾ.... ನಾವೂ ಒಂಜಿನ ಹೋಗಿ ವಸಿ ನೋಡ್ಕಂಡಾರೂ ಬರಾವ....." (" ಅದೇನೋ ಎಲ್ಲರು ಹೇಳುತ್ತಾರಲ್ಲ.... ನಾವು ಒಂದು ದಿನ ಹೋಗಿ ಸ್ವಲ್ಪ ನೋಡಿಕೊಂಡಾದರೂ ಬರೋಣ....") ಎಂದಳು. ಅದಕ್ಕೆ ಚೆನ್ನನ ಅಪ್ಪ ಕೆಮ್ಮಲ್ಲಿ ನಗಾಡುತ್ತ ಮಾತನಾಡಿದನು.

" ಅಯ್ಯೋ ಪೆದ್ದೀ... ಬೊಂಬಾಯಿ ಅಂದ್ರ ಯಾನಂದ್ಕಂಡಿದೀಯ ನೀನು? ಸುಮ್ನೆ ಕುಂತನ ಇವ ಯಾನೂ ಇಚಾರ್ಸಲ್ಲ ಅಂದ್ಕಬುಟ್ಯ? ತಿಳ್ಕ... ಆ ಬೊಂಬಾಯ್ನ ಅದ್ಗ ಇರೋದೆಲ್ಲಾ ಬರೇ ನೀರಂತಕನ. ಈ ನೆಲ ಅನ್ನೋ ಪದವ ಮೂರ್ಕಾಸ್ನ ಆಗಲಕೂ ಇಲ್ವಂತಕನ. ಅಲ್ಲಿಗ ಹೋದವರು.... ಯಾನಾರೂ ತಪ್ಸ್ಕಂಡ್ರಂತು ಹರಿಹರಬ್ರಮ್ಮನಗೂ ಮುಟ್ಕ ಹಿಂದ್ಕ ಅವರ ಊರ್ಗ ತಲ್ಪಕ ಆಗಂಥಾ ಊರದ್ ಅದೂ ! ಇನ್ನು ನಮ್ಮಂಥವರ್ಗ ಅದೂದ? ಅಯ್ಯೋ ಅದ್ರ ಕಥೆ ನಾ ಏನೇಳ್ಲಿ ತಕಾ...." (" ಅಯ್ಯೋ ಪೆದ್ದಿ!.... ಬೊಂಬಾಯಿ ಅಂದರೆ ನೀನು ಏನೆಂದುಕೊಂಡಿದೀಯ? ಇವನು ಏನನ್ನು ವಿಚಾರಿಸದೆ ಸುಮ್ಮನೆ ಕುಳಿತಿದ್ದಾನೆ ಎಂದುಕೊಂಡಿದೀಯ? ತಿಳಿದುಕೊ.... ಆ ಬೊಂಬಾಯಿ ಅಡಿ ಇರುವುದೆಲ್ಲ ಬರೇ ನೀರಂತೆ. ನೆಲ ಎನ್ನುವ ಪದವ ಐದು ಪೈಸೆಯ ಅಗಲದಷ್ಟು ಇಲ್ಲವಂತೆ. ಅಲ್ಲಿಗೆ ಹೋದವರು... ಏನಾದರೂ ತಪ್ಪಿಸಿಕೊಂಡರೆ ಹರಿಹರಬ್ರಹ್ಮನಿಗೂ ಕೂಡ ಹಿಂದಕ್ಕೆ ಅವರ ಊರನ್ನು ತಲುಪುವುದಕ್ಕೆ ಆಗದಂತ ಊರಂತೆ ಅದು ! ಇನ್ನು ನಮ್ಮಂಥವರಿಗೆ ಸಾಧ್ಯವೇ? ಅದರ ಕಥೆಯನ್ನು ಏನಂತ ಹೇಳಲಿ?....")

" ಅದಿಂಯಾ ಆ ದೊರ ದರ್ಬಾರ್ನ ಗೇಟ್ನತ್ತಲ ಒಂದು ವಾರಗಂಟ ಕಾಂಯ್ಕಂಡಿರದು. ಹೆಂಗುವಿ ಚಾಕ್ರಿ ಮಾಡಕ ಅಲ್ಲಗ ಬತ್ತಾನಲ್ಲ ಹೆಂಗೂವಿ....." ("ಅದೇ ಆ ಶ್ರೀಮಂತ ದರ್ಬಾರ ನಡೆಸುವ ಗೇಟ ಹತ್ತಿರ ಒಂದು ವಾರದ ತನಕ ಕಾದಿರುವುದು. ಹೇಗು ನಮ್ಮ ಚಿನ್ನ ಕೆಲಸ ಮಾಡುವುದಕ್ಕೆ ಅಲ್ಲಗೆ ಬರುತ್ತಾನಲ್ಲ....")

"ಅವತ್ಕಂತೋಕ್ಲೆ ಪೆದ್ದ.... ಹೋಗಾಕ ಒಂದು ಪಕ್ಷ ನಿಚ್ಚಂಯ್ಸ್ಕಂಡ್ರೆ ಅಂತಾನೇ ಅಂದ್ಕ. ಅಲ್ಲಿಗೇನಾರ ನಡ್ಕಂಡು ಹೋಗತರನಾರಾ ಇದಾಂದ? ರೈಲಗಿಂಯು ಹೋಗಾಕ ಮೂರ್ದಿನಾ ಬರಾಕ ಮೂರ್ದಿನ ತಕ್ಕಂದದಂತಲ್ಲಾ! ಅಮ್ಯಾಕಲ ಒಂದ ತಲಗ ನೂರ ರೂಪಾಂಯ ದಿದಂದಂತಲ್ಲಾ! ಎಷ್ಟು ಬೇಕಾದಾಂ.... ಅದ ನೀನೇ ಲೆಕ್ಕ ಹಾಕ್ಕ...." (ಅಂತೋಕ ದಣಿ!.... ಹೋಗುವುದಕ್ಕೆ ಒಂದು ಪಕ್ಷ ನಿಶ್ಚಯಿಸಿಕೊಂಡೆವು ಎಂದಿಕೊ. ಅಲ್ಲಿಗೇನಾದರೂ ನಡೆದುಕೊಂಡು ಹೋಗುವ ರೀತಿನಾದರೂ ಇದೆಯೆ? ರೈಲ ಹೋಗುವುದಕ್ಕೆ ಮೂರು ದಿನ, ಬರುವುದಕ್ಕೆ ಮೂರು ದಿನ ತೆಗೆದುಕೊಳ್ಳುತ್ತದಂತೆ! ಆಮೇಲೆ ಒಬ್ಬರಿಗೆ ನೂರು ರೂಪಾಯಿ ಛಾರ್ಜಂತೆ! ನಮಗೆ ಎಷ್ಟು ಬೇಕಾಗಬಹುದು... ಅದನ್ನು ನೀನೇ ಲೆಕ್ಕ ಹಾಕಿಕೊ....")

"ಅದಿಂಯಾ ಇನ್ನೊಂದು ಗಂಡ್ನಾ ಜೀತ್ಕ ಇರುಸ್ಬುಡಾವ. ಹೊಲ್ಲ ಭೋಗ್ಯಕ್ಕ ಹಾಕ ಬುಡಾವ....." (ಅದೇ ನಮ್ಮ ಇನ್ನೊಂದು ಹುಡುಗನನ್ನು ಜೀತಕ್ಕೆ ಇರಿಸಿಬಿಡೋಣ. ಹೊಲವನ್ನು ಭೋಗ್ಯಕ್ಕೆ ಹಾಕಿಬಿಡೋಣ....")

"ಅಂತೋಕ್ಲೆ ಪೆದಬಡ್ಡೀ... ಅಷ್ಟದ್ರಾ ಸಾಕಾಂಯ್ತದ ಅಂದ್ಕಬುಟ್ಕ ಆಂಯ್ತು. ನಿನ ಮಾತ್ನ ಪರಕಾರವಾಗಿ ಕಾಸಿದ್ದವರ ಕಾಲ್ಕಟ್ಗಂಡು ಸಾಲ್ದೊ ಸೋಲ್ದೊ ಮಾಡ್ಕಂಡಾ ಅವನ್ನ ನೋಡದಂ ಅಂತ್ಲೇನೇ ಇಟ್ಗ. ನಂ ನೋಡೆಂಟ್ಗ ಆ ಕಡಂ ದೊರ, ಒಹೊ ಈ ಜನ್ನ ಹೊಲಾರವ್ನ ಅಂತ ತಿಳ್ಕಂಡು ನಂ ಕೂಸಿನ ತಲ ಕಡಂ ಆ ಗಾರಾಚೆಗಲ್ಲಾ ಇದಾದು ಬರೀ ನೀರಂತಲ್ಲಾ.... ಅಲ್ಲಗ ಎಸೀಸಬುಟ್ರ ನೀನೂವಿ ನಾನೂವಿ ಅಲ್ಲ ಏನ ತಾನೇ ಮಾಡಾಗಿದಂವ?"

(" ಅಂತೋಕ ಪೆದಂಮ್ಮ... ಅಷ್ಟದರೆ ಸಾಕಾಗುತ್ತದೆ ಎಂದುಕೊಂಡಿದ್ದೀಂಯು. ಆಯಿತು. ನಿನ್ನ ಮಾತಿನ ಪ್ರಕಾರವಾಗಿ ಹಣವಿದಂವರ ಕಾಲು ಹಿಡಿದು ಸಾಲ ಮಾಡಿಕೊಂಡು ಅವನನ್ನು ನೋಡಿದೆವು ಎಂದೇ ತಿಳಿದಿಕೊ. ನಮ್ಮನ್ನು ನೋಡಿದ ತಕ್ಷಣ ಆ ಕೊಂಪಿಷ್ಟು

ಶ್ರೀಮಂತ ಈ ಚೆನ್ನ ದಲಿತರವನು ಎಂದು ತಿಳಿದುಕೊಂಡು ನಮ್ಮ ಮಗನ ತಲೆಕಡಿದು ಆ ಊರ ಹೊರಗೆ ಇರುವುದು ಬರೀ ನೀರಂತಲ್ಲ... ಅಲ್ಲಿಗೆ ಬಿಸಾಕಿಸಿಬಿಟ್ಟರೆ, ನೀನು ನಾನು ಅಲ್ಲ ಏನು ತಾನೆ ಮಾಡಲು ಸಾಧ್ಯ?")

" ಅವ್ವ, ನಾವ ಆ ದೂರ ಕಂಡೇಬಿಟ್ಟಿಯ ಅಡಬಡ್ದಾ... ' ನೀವ ಚಾಕ್ರಿಗ ತಕ್ಕೊಂಡಿರೂ ಚನ್ನರಸಪ್ನೋರ ಹಟ್ಟೀ ಜೀತಗಾರ್ರು, ಸೋಮಿ ನಾವ.... ಸುಮ್ಕಂಯ ಇತ್ತಾಗ ಬಂದ್ವಿ ಅಲೀ....' ಅನ್ನವ. ಅಮ್ಯಾಕೂ ಯಾನಾರೂ ಕೇಳಾದ್ರ.... 'ಈ ಚನ್ನರಸಪ್ನೋರ್ದುಂ ಊರ್ನಾಗ್ಲಿ ದೊಡ್ಡ ವಹಿವಾಟಂಯ ಅಲೀ. ಅವರ್ದೊಂದು ಅಂಗಡಿ ಊರಾಗ್ಲದ ನೋಡ್ರೀ.... ಅದ ಈ ಏಡು ನೇತ್ರಗಳಿಂದಲೂ ನೋಡಕ ಆಗಲ್ಲ ಅಲೀ, ಅದೂ ಮೂರಾಳು ಉದ್ದಾಂ ಅಗಲಾ! ಅಲ್ಲೀ ಜೋಳಕ್ಕಂತ ರಾಗಿಕ್ಕಂತ ಅಕ್ಕಿಕ್ಕಂತ ಆ ಉಪ್ಪಿಟ್ಟಿನ ರವ್ಯಕಂತ ಅಂತಾ ಕಣ್ಣಿಗ ಬೇಕಬೇಕಾದುದಂ ಕೇಳಿ ಆ ಬೆಲ್ಲ ಟೀಸೊಪ್ಪು ಕಾಫಿಪುಡೀ ಮೂಟೆ ಮೂಟೆ ಬಿದಂವ ಅಲೀ ಅವ್ವಾ! ಒಂದಾ ಎರಡಾ...' ಅನ್ನವ ಆದೇ ನಾವ ತಿರ್ಗ ಊರ್ಗ ಬರ್ವಾಗ, ಚೆನ್ನ ಸುಮ್ನ ಅನ್ಪುದೂರ ಬಂದವ್ನ ಥರ ಮಾಡಿ, ಬೆರಳ ಸಂದೀಲಿ ಸಿಕ್ಕಿಸಿಕಂಡಿದ್ದುಂ ' ಅವ್ವ ತಕ್ಕಾ... ನೂರ ರೂಪಾಯಿನ್ಗ' ಅಂತ ಕೊಡಲಾರ್ನ....?" ("ಅಂಯ್ಯೋ, ನಾವ ಆ ಶ್ರೀಮಂತ ಕಂಡ ತಕ್ಷಣ ಕಾಂಗೆದದುಂ... ನೀವ ಕೆಲಸಕ್ಕೆ ಇಟ್ಟುಕೊಂಡಿರುವ ಚೆನ್ನರಸಪ್ಪನವರ ಮನೆ ಕೆಲಸದಾಳುಗಳು ಸ್ವಾಮಿ ನಾವ.... ಸುಮ್ಮನೆ ಈ ಕಡೆ ಬಂದಿದೆಂವ ಎನ್ನೋಣ. ಆ ಮೇಲು ಏನಾದರು ಕೇಳಿದರೆ...' ಈ ಚೆನ್ನರಸಪ್ಪನವರದು ಊರಿನಲ್ಲು ಕೂಡ ದೊಡ್ಡ ವಹಿವಾಟು. ಅವರದೊಂದು ಅಂಗಡಿ ಊರಲ್ಲದೆ... ಅದನ್ನು ಈ ಎರಡು ಕಣ್ಣುಗಳಿಂದಲು ನೋಡುವುದಕ್ಕೆ ಸಾಲದು. ಅಷ್ಟು ದೊಡ್ಡದು. ಅಲ್ಲ ಜೋಳ, ರಾಗಿ, ಅಕ್ಕಿ, ಉಪ್ಪಿಟ್ಟಿನ ರವೆ ಎಂದು ಕಣ್ಣಿಗೆ ಬೇಕಾದುಂ ಇವೆ. ಕೇಳಿ, ಬೆಲ್ಲ, ಟೀ ಸೊಪ್ಪು, ಕಾಫಿಪುಡಿ ಮೂಟೆಗಟ್ಟಲೆ ಬಿದಿಂವೆ. ಅಬ್ಬಾ! ಒಂದೇ ಎರಡೇ... ಎನ್ನೋಣ. ನಾವ ವಾಪಸ ಊರಿಗೆ ಬರುವಾಗ, ಚೆನ್ನ ಸುಮ್ಮನೆ ಅಷ್ಟು ದೂರ ಬಂದವನಂತೆ ಮಾಡಿ, ಬೆರಳು ಮಧ್ಯದಲ್ಲಿ ಸಿಕ್ಕಿಸಿಕೊಂಡಿದ್ದುಂ 'ಅಮ್ಮ ತೆಗೆದುಕೋ... ನೂರು ರೂಪಾಯಿಯನ್ನು' ಎಂದು ಕೊಡಲಾರನೇ...?")

"ಅಯ್ಯಯ್ಯೋ ಪೆದ್ದೀ ಕೇಳೂ.... ನಿನ ಮಾತ ಕಟ್ಗಂಡೂ ಯಾನೋ ಮಾಡಕ ಅಂತ ಹೋಗಿ ಇನ್ನೇನೋ ಆದಾದು ಸುಮ್ಕರೂ. ನಮ್ಮ ಆ ಕಿರಿಯಾ ಒಂದು

ಸುದಂ ಇದ್ರೆ ಒಂದಲ್ಲಾ ಒಂಜಿನ ಅವ್ನೇ ಬರ್ತಾನಕನಾ. ಸಾಸ್ತ್ರ ಹೇಳೌವ್ನ ರೂಪಂಲಿ ಬರ್ಬೌದೂ··· ದಾಸಯ್ಯನ ರೂಪಂಲಿ ಬರ್ಬೌದು··· ಮಾಟ ಮಂತ್ರದವ್ನ ರೂಪಂಲಿ ಬರ್ಬೌದೂ····”

(“ಅಯ್ಯೋ ರಗಳೆ ಬಿಡು ಕೇಳು··· ನಿನ್ನ ಮಾತು ಕೇಳಿಕೊಂಡು ಏನೋ ಮಾಡುವುದಕ್ಕೆ ಹೋಗಿ, ಮತ್ತೇನೋ ಆಗಿಬಿಟ್ಟರೆ ಸುಮ್ಮನೇ ಇರು. ನಮ್ಮ ಆ ಮನಸ್ಸು ಒಂದು ಶುದ್ಧವಿದ್ದರೆ ಒಂದಲ್ಲ ಒಂದು ದಿನ ಅವನೇ ಬರುತ್ತಾನೆ. ಶಾಸ್ತ್ರ ಹೇಳುವವನ ರೂಪದಲ್ಲಿ ಬರಬಹುದು···· ದಾಸಯ್ಯನ ರೂಪದಲ್ಲಿ ಬರಬಹುದು···· ಮಾಟಮಂತ್ರದವನ ರೂಪದಲ್ಲಿ ಬರಬಹುದು····”)

“ಯಾವ ರೂಪಂಲಾದ್ರೂ ಆಗ್ಲಿಕನಾ··· ಯಾವಾತ್ತ್ರೂ··· ಒಂಜಿನಾದ್ರೂ···· ಬಂದನಾ···?” (“ಯಾವ ರೂಪದಲ್ಲಾದರೂ ಆಗಲಿ···· ಎಂದಾದರೂ···· ಒಂದು ದಿನ ಬರುತ್ತಾನೆ··· ?”)

“ಬರ್ದೆ? ಸಂಬಂಜ ಅನ್ನೋದು ದೊಡ್ಡುಕನಾ····!”
(“ಬರದೆ? ಸಂಬಂಧ ಎನ್ನುವುದು ದೊಡ್ಡದು ಕಣೆ·····!”)

—

ಉಪಸಂಹಾರ

ಈ ರಾತ್ರಿಗಳು ಬಂದವು. ಆ ರಾತ್ರಿಗಳು ಹೋದವು. ಈ ಹಗಲುಗಳು ಬಂದವು. ಆ ಹಗಲುಗಳು ಹೋದವು. ಅವು ಹೋಗುತ್ತ, ಬರುತ್ತ, ಇದ್ದವು.

ಸೊಪ್ಪು, ತರಕಾರಿ, ಮಾರಿ ಜೀವನ ಮಾಡುವಂಥ ನಾಯಕರ ವಯಸ್ಸಾದ ಮುದುಕಿ ಅವಳ ಹೆಸರು ಸಿಂಗಾರಮ್ಮ. ಆ ಚೆನ್ನಕುಸುಮರು ಸೇರುವ ಸ್ಥಳದಲ್ಲಿ ಈಗ ಎದ್ದೇಳಲಾರದೆ ಕುಳಿತಿದ್ದಾಳೆ. ಸಿಂಗಾರಮ್ಮನ ಕಣ್ಣುಮುಂದೆ ನಡೆದುದು ಅವಳ ಕಣ್ಣಿನ ಮುಂದೆಯೇ ಇದೆ. ಅಲ್ಲಿ ಚೆನ್ನನ ಉಸಿರನ್ನು ಅವನ ದೇಹದಿಂದಲೇ ತೆಗೆದರಲ್ಲ. ಆ ರಾತ್ರಿ ತೆಗೆದ ಬಾಗಿಲು ಆ ತೆಗೆದಂತೆಯೇ ಇದೆ. ಮಂಡಿಯ ಮೇಲೆ ನರದ ಕೈ ಇಳಿಬಿಟ್ಟ ಆ ಸಿಂಗಾರಮ್ಮ, ನರದಿಂದ ಮಾಡಿದ ಅವಳ ದೇಹವು ನರವಾಗಿಯೇ ಒಡೆದು ಮೂರಾಗಿದೆ. ಆ ನಿಟ್ಟುಸಿರು ಬಿಡುವ ಸಿಂಗಾರಮ್ಮ ಸುತ್ತಲೂ ನೋಡಲು ಆ ಭೂಮಿಯ ಮೇಲೆ ಕಾಣಿಸಿದ್ದೇನು? ರಕ್ತದ ಒಂದು ಹನಿ. ಆ ಬೆಡಗಿಯರು ಇಟ್ಟುಕೊಳ್ಳುವ ಒಂದು ಚಿಕ್ಕದಾದ ಹಣೆಬಟ್ಟು.... ಆಗ ಅವಳು ತೆಗೆದುದು ಸೊಂಟದಲ್ಲಿನ ಸುಣ್ಣದ ಡಬ್ಬಿ, ಅದರಿಂದ ಈ ಎಡಗೈ ಹೆಬ್ಬೆಟ್ಟಿಗೆ ಸುಣ್ಣವನ್ನು ಹಚ್ಚಿಕೊಂಡ ಆ ಸಿಂಗಾರಮ್ಮ, ಆ ಹಣೆಬಟ್ಟನಷ್ಟು ರಕ್ತದ ಹನಿಯನ್ನು ಕಾಣದ ರೀತಿ ಮಾಡಿದಳಲ್ಲ. ಕೊನೆಗೆ ಅದು ಕಣ್ಣುಬಿಟ್ಟ ಕಡೆಗೆಲ್ಲ ಕಂಡುಬಂದಿತಲ್ಲ. ಈಗ ಇವಳನ್ನು ಆ ಗುರುತಿಲ್ಲದ ಪಟ್ಟಣಕ್ಕೆ ತಂದುಬಿಟ್ಟರಲ್ಲ. ಅಲ್ಲೂ ಕೂಡ ಕಂಡುಬಂದಿತಲ್ಲ ಈ ರಕ್ತದ ಹಣೆಬಟ್ಟು. ಇವಳನ್ನೀಗ ಆ ದೇವೇಂದ್ರನ ಪಟ್ಟಣಕ್ಕೆ ತಂದುಬಿಟ್ಟರಲ್ಲ.

ಅಧ್ಯಾಯ – ೩

ವಾದಾನುವಾದ :
ಈ ಅಧ್ಯಯನ ಕಂಡ ಕಾಣ್ಕೆಗಳು

ಅಧ್ಯಾಯ – ೩

ವಾದಾನುವಾದ :
ಈ ಅಧ್ಯಯನ ಕಂಡ ಕಾಣ್ಕೆಗಳು

ಅಧ್ಯಾಯ – 3

ಪಾದಾನುವಾದ : ಈ ಅಧ್ಯಯನ ಕಂಡ ಕಾಣ್ಕೆಗಳು

ಈ ಭಾಗ 'ಕುಸುಮಬಾಲೆ'ಯ ಶಿಷ್ಟ ಕನ್ನಡಕ್ಕೆ ಮಾಡಲಾದ ಪ್ರಭೇದಾಂತರೀಕರಣದಿಂದ ಉಂಟಾಗುವ ಪರಿಣಾಮಗಳನ್ನು ಚರ್ಚಿಸುತ್ತದೆ. ಹಿಂದಿನ ಭಾಗದಲ್ಲಿ ತೆರೆದಿಟ್ಟ ಭಾಷಿಕ ವ್ಯತ್ಯಾಸಗಳ ಪ್ರಭಾವದ ಸ್ವರೂಪವನ್ನು ವಿಶದೀಕರಿಸುತ್ತದೆ.

ಈ ತರಹದ ಚರ್ಚೆ ಪ್ರಾಸಂಗಿಕವಾಗಿಯಾದರೂ (ಸಾಹಿತ್ಯಿಕ) ಭಾಷೆಯ ಪ್ರಾಯಿಕ ಸ್ವರೂಪದ ಜಿಜ್ಞಾಸೆಯೂ ಹೌದು.

3.1 'ಕುಸುಮಬಾಲೆ'ಯ ಬಗ್ಗೆ ಬಂದಿರುವ ಹೆಚ್ಚಿನ ವಿಮರ್ಶೆಗಳು ಭಾಷೆಯನ್ನೇ ಮುಖ್ಯವಾಗಿಟ್ಟುಕೊಂಡಿವೆ. 'ಕುಸುಮಬಾಲೆ'ಯಲ್ಲಿ ವಸ್ತುವಿಗಿಂತ ಭಾಷೆಯೇ ಮುಖ್ಯ. ಭಾಷೆಯೇ ಹೆಚ್ಚುಗಾರಿಕೆ ಅನ್ನುವ ಮಾತಲ್ಲಿ ಹುರುಳಿಲ್ಲ. ಭಾಷೆ ಒಂದು ಮಟ್ಟದಲ್ಲಿ ಕೇವಲ ಗಣಿತೀಯ ವಸ್ತು (Mathematical object) ಆದರೂ, ಅದರ ಒಟ್ಟಂದದಲ್ಲಿ ಅದು ಅಭಾಷಿಕ, ಭಾಷೇತರ ಜಗತ್ತಿನ (nonlinguistic world) ಬಗ್ಗೆ ಮಾತನಾಡುವ, ಅದನ್ನು ಅಭಿವ್ಯಕ್ತಿಸುವ ಸಾಧನ. ಅಂದರೆ ಅರ್ಥ ಪ್ರಾಥಮಿಕ, ಅರ್ಥ ಸ್ಟಾರ್ಟಿಂಗ ಪಾಯಿಂಟ್. ಅರ್ಥ/ವಸ್ತು ಇಲ್ಲದೆ ಭಾಷೆ ಇಲ್ಲ. ಈ ಅರ್ಥಕ್ಕೆ ಒಂದು ಮೂರ್ತ ರೂಪಕೊಟ್ಟರೆ ಮಾತ್ರ ಈ ಅರ್ಥವನ್ನು ಹೊರಗೆಡಹಲು ಸಾಧ್ಯ. ಅಂದರೆ ರೂಪ ಇಲ್ಲದೆ ಭಾಷೆ ಅನ್ನೋದಿಲ್ಲ. ಭಾಷೆ ಅರ್ಥ–ರೂಪಗಳ, ಆಶಯ–ರಚನೆಗಳ ಒಂದು ಅವಿನಾಭಾವ ಸಂಯೋಗ. ಒಂದಿಲ್ಲದೆ ಇನ್ನೊಂದಿಲ್ಲ. ಅತ್ಯಂತ ಕಾವ್ಯಾತ್ಮಕವಾದ ನೇರಕಾವ್ಯದಲ್ಲಿ ಈ ಮೂರ್ತರೂಪವೇ ಮುಖ್ಯ, ಅದು ಹೊರಗೆಡಹುವ ಭಾಷೇತರ/ಅಭಾಷಿಕ(nonlinguistic) ಜಗತ್ತಲ್ಲ ಅನ್ನುವ ಮಾತಲ್ಲಿ ತಿರುಳಿಲ್ಲ. ಭಾಷಿಕ ಸೌಂದರ್ಯ ಅಭಾಷಿಕ ವಿಚಾರಗಳಿಂದ ಪ್ರಚೋದಿಸಲ್ಪಟ್ಟಂಥಾದ್ದು, ಹುಟ್ಟುಹಾಕಲ್ಪಟ್ಟಂಥಾದ್ದು.

ವಸ್ತುವಿನ ಗಾಢತೆ ಅಥವಾ ಅರ್ಥಸೌಂದರ್ಯ ಇಲ್ಲದೆ ಆಕೃತಿಕ ಅಥವಾ ಶಿಲ್ಪ ಸೌಂದರ್ಯ ಇರಲು ಸಾಧ್ಯ. ಇರ್ವಿಂಗ ಪಾಲೆಸನ 'ದ ಸೆಲೆಸ್ಟಿಯಲ ಬೆಡ್'(The celestial bed)

ಈ ಮಾತಿಗೆ ಒಳ್ಳೆ ಉದಾಹರಣೆ. ಈ ಕೃತಿಯ ಕೇಂದ್ರ ವಸ್ತು, ಲೈಂಗಿಕತೆ, pure and Simple. ಭಾಷೆ ಮತ್ತು ಕಲಾತ್ಮಕತೆಯ ದೃಷ್ಟಿಯಿಂದ ಇದೊಂದು ಒಳ್ಳೆ ಕೃತಿನೇ. ಆದರೆ ಗಾಢವಾದ ವಸ್ತು ಅಲ್ಲದ್ದರಿಂದ ಇದು ಶ್ರೇಷ್ಠ ಕೃತಿ ಆಗುವುದಿಲ್ಲ. Sociology of literature ನ ಭಾಗವಾಗುತ್ತದೆ, literary canon ದಲ್ಲ.

ನನಗಾಗಿದೆ ಇಚ್ಛೆ
ಹುಯ್ಯಬೇಕು ಅಂತ ಉಚ್ಚೆ!

(ಅನಾಮಧೇಯ)

ಮತ್ತು,

I' ve measured it from side to side
It is four feet long and two feet wide!(words worth)

ತಾತ್ವಿಕ ಗಾಢತೆಯಿಲ್ಲದ ಆಕೃತಿಕ ಸೌಂದರ್ಯಕ್ಕೆ ಪಠ್ಯ(text)ದ ಕೆಳಗಿನ ಮಖ್ಯದ ಉದಾಹರಣೆಗಳು.

3.2. ಬರಿ ಭಾಷೆಯೋಸ್ಕರ ಓದಿಸಿಕೊಳ್ಳುವ ಕೃತಿಗಳ ಶ್ರೇಷ್ಠತೆ ಬಗ್ಗೆ ನಮಗೆ ಗಂಭೀರವಾದ ಶಂಕೆಗಳಿವೆ. (ಉದಾ: ವಿಕ್ರಮ ಸೇಠರ The Golden Gate). ಕೃತಿಕಾರ ಏನನ್ನು ಹೇಳಲು ಮತ್ತು ಯಾವ ತರಹದ ಜೀವನವನ್ನು ಓದುಗರೆದುರು ಬಿಚ್ಚಲು ಪ್ರಯತ್ನಿಸುತ್ತಾ-ನೆಂಬುದು ಮುಖ್ಯ. ಆಯಾ ಭಾಷೆಯ ವೈಚಾರಿಕ ಜಗತ್ತಿಗೆ, ಸಂವೇದನಾ ಜಗತ್ತಿಗೆ, ಆಯಾ ಭಾಷಾ ಜನಾಂಗದ ಅಭಾಷಿಕ ಪ್ರಜ್ಞೆಗೆ ಕೃತಿಯ ಕೊಡುಗೆ ಏನು, ಲೇಖಕ ಓದುಗನನ್ನು ಯಾವ ತರಹದ ಹೊಸ ಅಭಾಷಿಕ ಜಗತ್ತಿಗೆ ಕೊಂಡೊಯ್ಯುತ್ತಾನೆ ಎಂಬುದು ಮುಖ್ಯ. ಇದರ ಮುಂದೆ ಪ್ರಜ್ಞಾಪೂರ್ವಕ ಭಾಷಿಕ ಸಾವಿನ್ಯ ಸ್ಥಳೀಯ (Local) ಮತ್ತು ಸಾಪೇಕ್ಷವಾಗಿ ಗೌಣ. ಅರುಂಧತಿ ರಾಯ್‌ರ 'The god of small things' ದ ಒಂದು ಸಂಭಾಷೆ ಸ್ಥೂಲವಾಗಿ ಹೀಗಿದೆ.

" Stop it", said X
Y stop ited ,

ಕಾಲಸೂಚಕ -ಅದ ಬರೀ ಕ್ರಿಯಾಪದಕ್ಕಲ್ಲದೆ, ಇಡೀ ಕ್ರಿಯಾಪದಪುಂಜಕ್ಕೆ ಸೇರಿಸಿರುವುದು ಇಲ್ಲಿಯ ನವೀನತೆ. ಇದೇನೂ ಗುರುತರವಾದ ವಿಷಯ ಅಥವಾ ಸಾಧನೆ ಅಲ್ಲ. ಇಂಥ ನವೀನತೆಗಳು ಕೃತಿಗೆ ಕೊಡುವ ಕೊಡುಗೆ ದೇವರೇ ಬಲ್ಲ!

3.3. 'ಕುಸುಮಬಾಲೆ' 'ಗದ್ಯಾತ್ಮಕ ಸಂಗೀತ' ಎನ್ನುವ ಮಾತಿದೆ. ಇದು ಹೇಳ-ಬೇಕಾದುದನ್ನು ಕಲಾತ್ಮಕವಾಗಿ ಭಾಷಿಕವಾಗಿ ಅಂದವಾಗಿ ಹೇಳಿದೆ ಎನ್ನುವ ಅರ್ಥದಲ್ಲಿ ನಿಜ. ವಸ್ತುವಿಗಿಂತ ಆಕೃತಿ ಮುಖ್ಯ ಎನ್ನುವ ಅರ್ಥದಲ್ಲಲ್ಲ. ಸಂಗೀತದಲ್ಲಿ ರೂಪನೇ ಮುಖ್ಯ, ವಸ್ತು ಗೌಣ.

3.4. 'ಕುಸುಮಬಾಲೆ'ಯ ವಸ್ತು ದಲಿತ ಜೀವನ ಚಿತ್ರಣ, ಒಂದು ಹಳ್ಳಿಯ ವ್ಯವಸ್ಥೆ, ಜೀವನ ವಿಧಾನ, ಗ್ರಾಮ ಭಾರತದಲ್ಲಿ ತುಂಬಿ ತುಳುಕುತ್ತಿರುವ ಅಜ್ಞಾನ, ಅಂಧಕಾರ, ಮೌಢ್ಯ, ಅನ್ಯಾಯ, ಮೋಸ, ವಂಚನೆ, ದುರ್ಬಲ ವರ್ಗದವರ ಮೇಲೆ ಕರುಣಾರಹಿತ ಶೋಷಣೆ, ನೀತಿ ಮೀರಿದ ಮನಸ್ಥಿತಿ, ಶೋಷಿತರ ಅಸಹಾಯಸ್ಥಿತಿ, ಈ ಎಲ್ಲದರ ನಡುವೆಯೂ ಏನೂ ಆಗದವರ ಹಾಗೆ ನಡೆದುಕೊಳ್ಳುವ, ಸಮ್ಯ, ಸಾಮ್ಯಪ್ರಜ್ಞೆ, ಜೀವನಶ್ರದ್ಧೆ, ಜೀವನೋತ್ಸಾಹ ಕಳೆದುಕೊಳ್ಳದ ಹಣೆಬರಹ, ಯಥಾಸ್ಥಿತಿವಾದವನ್ನು ನಂಬದಂತಿರುವ ಜನರ ಜೀವನದೃಷ್ಟಿ. ಇದೆಲ್ಲವನ್ನೂ ಕನ್ನಡದ ಯಾವುದೇ ಪ್ರಭೇದದಲ್ಲಾಗಲೀ (ಅಥವಾ ಜಗತ್ತಿನ ಯಾವುದೇ ಭಾಷೆಯಲ್ಲಾಗಲಿ) ಹೇಳಲು ಸಾಧ್ಯ. ಈ ವಸ್ತು ಶಿಷ್ಟಕನ್ನಡದಲ್ಲೂ ಯಥಾವತ್ತಾಗಿ ಮೂಡಿಬಂದಿದೆ. ಇದು ನಿಜ ಆದರೆ ರೂಪ ಅಥವಾ ಆಕೃತಿನೇ ವಸ್ತು ಎನ್ನೋದು ಮಾತ್ರ ನಿಜ ಅಲ್ಲ. ಇದು ಅರ್ಥರೂಪಗಳ ಸಂಬಂಧ ಅವೈಚಾರಿಕ (arbitrary) ಎಂಬ ಭಾಷೆಯ ಬಗೆಗಿನ ವೈಜ್ಞಾನಿಕ ಸತ್ಯಕ್ಕೆ ಅನುಗುಣ.

'ಕುಸುಮಬಾಲೆ'ಯ ಒಂದು ಪ್ಯಾರವನ್ನು ತೆಗೆದುಕೊಳ್ಳೋಣ:

ಈ ನಿಜವ ಹಿಡುಂ, ನಿದಂವ ತುರಾಕಡಿಸೋ ಕಾಲವ ಅರಿತವನಾದ ಅಮಾಸನು, ಆ ವ್ಯಾಳದಂ ಅಗತ್ಯವಾದೆಡೆ ಜಾಮಾತ್ರದ ಭೇಟಿ ನೀಡಿ ಸೂರ್ಗ ಸಿಕ್ಕಿಸೊ ಮುಟ್ಟಿನ ಸ್ಯಾಲಗಳ ಮಾಂಯಮಾಡ್ತ, ಸಾಕಸ್ತು ಸ್ಯಾಲಭಾಗ್ಯ ಪಡುಂ ನೇಮನಿಷ್ಠಗ ಹೆಸರಾದ ಮ್ಯಾಗಲಕೇರಿ

ಯಿಮ್ಮಗಳಿಗೆ ಇದು ಯಾತರ ಕೆಲ್ಸ ಅಂಬುದ ಅರಿವಾಗಿಸದೆ ದಿಕ್ಕೆಡಿಸಿದನು. (ಕುಸುಮಬಾಲೆ, ಪು. 38).

ಇದರ ಶಿಷ್ಟಭಾಷೆಯ ರೂಪಾಂತರ ಹೀಗಿದೆ:

ಈ ನಿಜವನ್ನು ಹಿಡಿದು, ನಿದ್ರೆಯು ಬಂದು ತೂಕಡಿಸುವ ಕಾಲವನ್ನು ಅರಿತವನಾದ ಅಮಾಸನು, ಆ ವೇಳೆಯಲ್ಲಿ ಅಗತ್ಯವಾದೆಡೆ ಕ್ಷಣಮಾತ್ರದ ಭೇಟಿನೀಡಿ, ಮೇಲ್ಛಾವಣಿಯ ತಳದಿಂದ ಕೆಳಗೆ ಸಿಕ್ಕಿಸುವ ಮುಳ್ಳಿನ ಸೀರೆಗಳನ್ನು ಮಾಯಮಾಡುತ್ತಾ, ಸಾಕಷ್ಟು ಸೀರೆಭಾಗ್ಯ ಪಡೆದು ನಿಯಮನಿಷ್ಠೆಗೆ ಹೆಸರಾದ ಮೇಲ್ಜಾತಿ ಬೀದಿಯ ಹೆಂಗಸರಿಗೆ ಇದು ಯಾವುದರ ಕೆಲಸ ಎಂಬುದರ ಅರಿವಾಗಿಸದೆ ದಿಕ್ಕೆಡಿಸಿದನು.

ಇಲ್ಲಿ ವಸ್ತು ಅಥವಾ ಅರ್ಥ ಸ್ಪಷ್ಟ. ಈ ಅರ್ಥವನ್ನು ಶಿಷ್ಟ ಕನ್ನಡವೂ ಹಿಡಿದಿಡು-ವುದರಲ್ಲಿ ಸಮರ್ಥವಾಗಿದೆ ಅನ್ನೋದರಲ್ಲಿ ಎರಡು ಮಾತಿಲ್ಲ.

ವಾಕ್ಯ ರಚನೆಯಲ್ಲಿ ಭೇದ ಇಲ್ಲ. ಕೆಲವು ಪದಗಳಲ್ಲಿ ಮಾತ್ರ ಭೇದ. ಈ ಭೇದಗಳು, ಈ ವ್ಯತ್ಯಾಸಗಳು ವಸ್ತುವಿನಲ್ಲಿ ವ್ಯತ್ಯಾಸ ತಂದಿಲ್ಲ. ಈ ರೂಪಾತ್ಮಕ ವ್ಯತ್ಯಾಸ ಒಂದು ತರಹದ parametric/variable ಭೇದ. ಇಲ್ಲಿನ parameter/variable ಸಾಮಾಜಿಕ ವರ್ಗ ಅಥವಾ ಜಾತಿ. ಅಂದರೆ ಈ ರೂಪಾತ್ಮಕ ವ್ಯತ್ಯಾಸಗಳು ಸಾಮಾಜಿಕ ಪ್ರಭೇದದ ಕ್ರಿಯೆ. parameter/variable ಭೌಗೋಳಿಕ ಪ್ರಭೇದ ಇರಬಹುದು. ಧಾರವಾಡದ ಭಾಷೆಯಲ್ಲಿ ಇದೇ ವಾಕ್ಯ ಈ ಕೆಳಗಿನಂತೆ ಆಗುತ್ತದೆ:

ಈ ನಿಜನ ಹಿಡದ$_s$ ನಿದ್ದಿ ಬಂದ ತೂಕಡಿಸೋ ವೇಳ್ಯಾ ತಿಳ್ಕೊಂಡ$_s$ ಅಮಾಸ ಆ ವೇಳ್ಯಾಕ$_s$ ಬೇಕಾದ$_s$ ಕಡಿ ಭೆಟ್ಟಿ ನೀಡಿ, ಮೇಲ ಸೂರಿನ ಕೆಳಗ ಸಿಗಸೋ ಮುಳ್ಳಿನ ಸೀರಿಭಾಗ್ಯ ಪಡಕೊಂಡ$_s$ ನಿಯಮ ನಿಷ್ಠೆಗ ಹೆಸರಾದ$_s$ ಮೇಲ್ಜಾತಿ ಓಣಿ ಹೆಂಗಸ್ರಿಗ$_s$ ಇದು ಯಾರದ$_s$ ಕಿತಾಪತಿ ಅನ್ನೋದನ ತಿಳಿಗೊಡದ$_s$ ಕಂಗೆಡಿಸಿದ$_s$.

(s > ə ಎಂಬ ಸ್ವರವನ್ನು ಸಂಕೇತಿಸುತ್ತದೆ)

ವನ್ನು ಅದೇ. ಅರ್ಥ ಅದೇ. parametric ಭೇದ ಅಷ್ಟೇ. ಎರಡನೇ ಅಧ್ಯಾಯದಲ್ಲಿ ಪಟ್ಟಿಮಾಡಿದ ಭಾಷಿಕ ವ್ಯತ್ಯಾಸಗಳು ಈ ತರಹದ parameter/variable ನಿಂದ ಹುಟ್ಟಿ-ಹಾಕಲ್ಪಟ್ಟಂಥವು. ದಲಿತ ಕನ್ನಡದ ಮತ್ತು ಧಾರವಾಡ ಕನ್ನಡದ ನಡುವೆ ಇರುವ ಭಾಷಿಕ ವ್ಯತ್ಯಾಸಗಳು ವಸ್ತುವನ್ನು ಹಿಡಿದಿಡುವಲ್ಲಿ ಯಾವ ನಕಾರಾತ್ಮಕ ಪಾತ್ರವನ್ನೂ ವಹಿಸುವುದಿಲ್ಲ. ಏಕೆಂದರೆ ಕನ್ನಡದ ಯಾವುದೇ ಒಂದು ಪದ ಅಥವಾ ಪದಪುಂಜಕ್ಕೆ ಅಥವಾ ವಾಕ್ಯಕ್ಕೆ ಸಮಾನವಾಗಿ ಅದೇ ಅರ್ಥಕೊಡುವ ಪದಕ್ಕೆ ಪದ, ಪದಪುಂಜಕ್ಕೆ ಪದಪುಂಜ, ವಾಕ್ಯಕ್ಕೆ ವಾಕ್ಯವನ್ನು ಮತ್ತೊಂದು ಪ್ರಭೇದದಿಂದ ಸಮಾನವಾಗಿ ಇಟ್ಟಾಗ ವಸ್ತು ಬದಲಾಗಲು ಸಾಧ್ಯವಿಲ್ಲ. ಇದಕ್ಕೆ ಮೂಲ ಕೃತಿ ಕುಸುಮಬಾಲೆಯಿಂದಲೇ ಉದಾಹರಣೆ ತೆಗೆದುಕೊಂಡು ಶಿಷ್ಟಕನ್ನಡದ ಜೊತೆ ನೋಡೋಣ.

ಪದ ಮಟ್ಟದಲ್ಲಿ,

ದೇ.ಕೃ.ಕ	ಶಿ.ಕ.
ಯಮ್ಮ	ಹೆಂಗಸರು
ಕೂಸು	ಮಗು
ಬಿಮ್ಮ	ಬಾರೇ

ಮೂಲಕೃತಿಯ ಪದ 'ಯಮ್ಮ' ಎಂಬುದು ಸ್ತ್ರೀಲಿಂಗವನ್ನು ಸೂಚಿಸುವ ಒಂದು ಬಹುವಚನ ಪದ. ಇದಕ್ಕೆ ಸಮನಾರ್ಥಹೊಂದಿದ ಶಿಷ್ಟ ಕನ್ನಡದ 'ಹೆಂಗಸರು' ಪದ ಬಂದಿದೆ.

ಹಾಗೆಯೇ 'ಕೂಸು' ಎಂಬುದು ನಿತ್ಯನಪುಂಸಕಲಿಂಗ. ಇದನ್ನು ಹೆಣ್ಣುಮಗುವಿಗೂ ಗಂಡುಮಗುವಿಗೂ ಬಳಸಲಾಗುತ್ತದೆ. ಇದಕ್ಕೆ ಸಮಾನ ಅರ್ಥ ಕೊಡುವ ಶಿಷ್ಟ ಕನ್ನಡದ 'ಮಗು' ಪದ ಬಂದಿದೆ.

ಈ ಮೇಲಿನ ದೇವನೂರು ಕೃತಿಗಳ ಕನ್ನಡ ಹಾಗೂ ಶಿಷ್ಟಕನ್ನಡದ ಪದಗಳ ಅರ್ಥ ಹಾಗೂ ವಸ್ತು ಒಂದೇ ಆಗಿದೆ.

ಪದಪುಂಜ ಮಟ್ಟದಲ್ಲಿ

ದೇ.ಕೃ.ಕ.		ಶಿ.ಕ.
ಕುತ್ತಿಗೇಲಿ ಕಟ್ಟಿದ್ದ ಲಿಂಗ	—	ಕುತ್ತಿಗೆಯಲ್ಲಿ ಕಟ್ಟಿದ್ದ ಲಿಂಗವನ್ನು
ತಿಂತಾ ಇತ್ತಂತ	—	ತಿನ್ನುತ್ತಾ ಇತ್ತಂತೆ

ದೇವನೂರರ ಕೃತಿಯ ಕನ್ನಡದ ಪದಪುಂಜದಲ್ಲಿ 'ಕುತ್ತಿಗೆ' ಎಂಬುದು ನಾಮಪದ, 'ಲಿ' ಎಂಬುದು ಸಪ್ತಮಿ ವಿಭಕ್ತಿ ಪ್ರತ್ಯಯ. ಲಿಂಗ ಎಂಬುದರಲ್ಲಿ 'ಲಿಂಗ' ಎಂಬುದು ನಾಮಪದ. '(ವ) ಅ' ಎಂಬುದು ದ್ವಿತೀಯ ವಿಭಕ್ತಿ ಪ್ರತ್ಯಯವಾಗಿ ಬಂದಿದೆ.

ಇದೇ ರೀತಿ ಶಿಷ್ಟ ಕನ್ನಡದ ಪದಪುಂಜದಲ್ಲಿ ಕುತ್ತಿಗೆ ಎಂಬುದು ನಾಮಪದ. 'ಅಲ್ಲಿ' ಎಂಬುದು ಸಪ್ತಮಿ ವಿಭಕ್ತಿ ಪ್ರತ್ಯಯ, ಲಿಂಗವನ್ನು ಎಂಬುದರಲ್ಲಿ 'ಲಿಂಗ' ಎಂಬುದು ನಾಮಪದ, 'ಅನ್ನು' ಎಂಬುದು ದ್ವಿತೀಯ ವಿಭಕ್ತಿ ಪ್ರತ್ಯಯವಾಗಿದೆ.

ಈ ಮೇಲಿನ ಎರಡು ಪದಪುಂಜಗಳಲ್ಲಿ ವಿಭಕ್ತಿ ಪ್ರತ್ಯಯಗಳ ರೂಪ ಬೇರೆಯಾಗಿದೆ. ವಿನಃ ಅವು ಪ್ರತಿಬಿಂಬಿಸುವ ಅರ್ಥ ಹಾಗೂ ವಸ್ತು ಒಂದೇ ಆಗಿದೆ.

ವಾಕ್ಯಮಟ್ಟದಲ್ಲಿ

(1) ಯಾನ್ರುದ ನಿಮ್ಗ ಬೇಕಾಗಿರ ವರವ (ದೇ.ಕೃ.ಕ)
ಏನೋ ನಿಮಗೆ ಬೇಕಾಗಿರುವ ವರ (ಶಿ.ಕ.)

(2) ನಿಮ್ ಹೆಡ್ತೀರು ಮುಂಡಾಕ್ಯಗ (ದೇ.ಕೃ.ಕ)
ನಿಮ್ಮ ಹೆಂಡ್ತೀರು ವಿಧವೆರಾಗ (ಶಿ.ಕ.)

'ಯಾನ್ರುದ ನಿಮ್ಗ ಬೇಕಾಗಿರ ವರವ' ಎಂಬುದರ ಅರ್ಥ ಮತ್ತು ವಸ್ತು ಹಾಗೂ 'ಏನೋ ನಿಮಗೆ ಬೇಕಾಗಿರುವ ವರ' ಎಂಬುದರ ಅರ್ಥ ಮತ್ತು ವಸ್ತು ಒಂದೇ ಆಗಿದೆ. ಆದರೆ 'ಯಾನ್ರುದ=ಏನೋ' ಎಂಬುವುಗಳ ನಡುವೆ ರೂಪ ವ್ಯತ್ಯಾಸವಾಗಿದೆ ವಿನಃ ಅರ್ಥ ಒಂದೇ.

ಹಾಗೆಯೇ 'ನಿಮ್ಗ ಬೇಕಾಗಿರ ವರವ = ನಿಮಗೆ ಬೇಕಾಗಿರುವ ವರ' ಎಂಬುವುಗಳ ನಡುವೆ ಧ್ವನಿ ವ್ಯತ್ಯಾಸವಾಗಿದೆ ವಿನಃ ಅರ್ಥ ಮತ್ತು ವಸ್ತು ಒಂದೇಯಾಗಿದೆ.

ಈ ತರಹದ ಭೇದದಿಂದ flavour, tone ಓಜಸ್ಸು, ಧ್ವನ್ಯಾರ್ಥ ಬೇರೆಯಾಗಬಹುದು. ಆದರೆ ಮೂಲತಃ ವಸ್ತು ಅದೇ. ಅರ್ಥ ಅದೇ, ತಾತ್ವಿಕತೆ ಅದೇ.

ಮೇಲಿನ ಉದಾಹರಣೆ ಪ್ರಕಾರದ್ದು. ಇದು ಇಡೀ ಪಠ್ಯ (text)ಗೂ ಅನ್ವಯಿಸುತ್ತದೆ. ಪಠ್ಯದಲ್ಲಿ ಇದೆಲ್ಲವುಗಳ ಅಂದರೆ flavour, tone ಓಜಸ್ಸು, ಧ್ವನಿತಾರ್ಥಗಳ ಮಿಶ್ರಣದಿಂದ ಕೃತಿಯ ಆಂತರಿಕ ರೆಬರಿಕೆ ಬೇರೆ ಅನ್ನಿಸಬಹುದು.

3.5. 'ಕುಸುಮಬಾಲೆ' ಕಾವ್ಯಾತ್ಮಕ, ಆ ಕಾವ್ಯಾತ್ಮಕತೆನ ಬೇರೆ ಕನ್ನಡದ ಪ್ರಭೇದಗಳಲ್ಲಿ ಹಿಡಿಯೋದು ಕಷ್ಟಸಾಧ್ಯ ಅನ್ನೋದೇ ಮಾತಿದೆ. ಪ್ರತಿ ಭಾಷೆಯೂ, ಪ್ರತಿ ಕನ್ನಡದ ಪ್ರಭೇದದಲ್ಲೂ ಕಾವ್ಯಾತ್ಮಕವಾಗಿ ಬರೆಯೋಕೆ ಸಾಧ್ಯ.

3.6. ಈ ಕೆಳಗಿನ ಮೂಲಕೃತಿ 'ಕುಸುಮಬಾಲೆ' ಕನ್ನಡವನ್ನು ನೋಡಿ:

ಕುಸುಮಾಳ ತಂದಿ ಸೋಮಪ್ಪರು ಹಟ್ಟಿ ಮುಂದಲು ನಿಂತ ನಿಲುವ ಬಿಯಸುಗೆ ಬಾಗಲು ಕಾಲೆಂಸೆಯಲ್ಲಿ ತಲೆ ಇಟ್ಟು ತೂಕಡಿಸುತಿದ್ದ ಆಳುಮಗಗ ಬೆಚ್ಚಿಬಿದ್ದಂತಾಗಿ ಎಳಲು, ಒಂದು ಆನ ನುಗೂಗ್ವಷ್ಟಿದ್ದ ಆ ದಾರಂದವು ಆ ಊರಾಗಿದ್ದ ಊರು ಒಂದ್ಸಲ ಆಕಳಿಸಿದಷ್ಟು ಸಬುದ ಮಾಡ್ತ ತಕ್ಕಂಡಿತು. ಆಗಲೀಗ ಹಟ್ಟೀಯ ಒಳಗಿದ್ದೂ ಇದ್ದೂ ಬೇಜಾರು ತುಂಬ್ಕಂಡಿದ್ದ ಕತ್ತಲು, ಬಾಗಲು ತಗೆಯುವುದನ್ನೆ ಕಾಯುತ್ತಿದ್ದು ಹೊರಬಂದುದೆ ಉಸುರು ಬುಡಲು, ಹಾಗೆಯೇ ಹಟ್ಟೀ ಹೊರಗಿದ್ದ ಕತ್ತಲುಾಗ ತಾನೂ ಒಂದ್ಸಲ ಹಟ್ಟೀಯ ಒಳಚಂದ್ನ ನೋಡುವ ಅನ್ವಿ ಅದೋ ಒಳಬಂತು (ಪು. 4).

ಇದರ ಶಿಷ್ಟ — ಕನ್ನಡೀಕರಣ ಹೀಗಿದೆ:

ಕುಸುಮಳ ತಂದೆ ಸೋಮಪ್ಪನವರು ಮನೆ ಮುಂದುಗಡೆ ನಿಂತ ನಿಲುವಿನಬಿಲುಸಿಗೆ ಬಾಗಿಲ ಬಳಿಯಲ್ಲಿ ತಲೆ ಇಟ್ಟು ತೂಕಡಿಸುತ್ತಲಿದ್ದ ಕೆಲಸದಾಳಿಗೆ ಬೆಚ್ಚಿದಂತಾಗಿ ಎದೆಯೇಳಲು, ಒಂದು ಆನೆ ನುಗ್ಗುವಷ್ಟಿದ್ದ ಆ ಬಾಗಿಲು ಇಡೀ ಊರೇ ಒಂದು ಸಾರಿ ಆಕಳಿಸಿದಷ್ಟು ಶಬ್ದ ಮಾಡುತ್ತ ತೆರೆದುಕೊಂಡಿತು. ಆಗ ಮನೆಯ ಒಳಗೆ ಇದ್ದ ಇದ್ದ ಬೇಜಾರು ತುಂಬಿಕೊಂಡಿದ್ದ ಕತ್ತಲು, ಬಾಗಿಲು ತೆಗೆಯುವುದನ್ನೇ ಕಾಯುತ್ತಿದ್ದು ಹೊರಬಂದು ಉಸಿರು ಬಿಡಲು, ಹಾಗೆಯೇ ಮನೆಯ ಹೊರಗಿದ್ದ ಕತ್ತಲಿಗೆ ತಾನು ಒಂದು ಸಾರಿ ಮನೆಯ ಒಳಗಿನ ಅಂದವನ್ನು ನೋಡಬೇಕೆನಿಸಿ, ಅದು ಒಳಗೆ ಬಂದಿತು.

ಶಿಷ್ಟ ಕನ್ನಡದ ಗದ್ಯದಲ್ಲಿ ಕಾವ್ಯಾತ್ಮಕತೆ, ರಸ(ವತ್ತತೆ), ಸತ್ವ, ಇಲ್ಲ ಅನ್ನೋದನ್ನ ಯಾರೂ ಹೇಳಲಾರರು. ನಾವು ಎರಡನೇ ಅಧ್ಯಾಯದಲ್ಲಿ ಪಟ್ಟಿಮಾಡಿದಂಥಾ ವ್ಯತ್ಯಾಸಗಳು ತೀವ್ರತೆ, ಘನತೆ, ಗಾಂಭೀರ್ಯ, ಗಟ್ಟಿತನ, ಕಾವ್ಯಾತ್ಮಕತೆ, ರಸವತ್ತತೆ, ಸತ್ವಯುತತೆ ಮುಂತಾದ ಗುಣವಿಶೇಷಗಳನ್ನು ಅಳಿಸಿಹಾಕಲಾರವು ಎಂದು ನಾವು ನಿರೀಕ್ಷಿಸಬಹುದು. ಅವಕ್ಕೆ ಆ ಸಾಮರ್ಥ್ಯ ಇಲ್ಲ.

ಆದರೂ, ವಿರೋಧಾಭಾಸ ಅಂದರೆ, ಎರಡೂ ಒಂದೇ ಅಲ್ಲ. ಕುಸುಮಬಾಲೆಯ ಶಿಷ್ಟೀಕರಣ ಅಥವಾ ಶಿಷ್ಟ-ಕನ್ನಡೀಕರಣ ಸಪ್ಪೆ, ಜಾಳು ಜಾಳು, ತೀರ ಸಾಮಾನ್ಯ(ordinary) ಸತ್ವಹೀನ, ಅಡುಗೂಲಜ್ಜಿ ಹೇಳಿದ ಕತೆಯ ಸಂಗ್ರಹ(?) ಎಂದು ಅನ್ನಿಸಬಹುದು. ಲವಲವಿಕೆ ದೃಷ್ಟಿಯಿಂದ, flavour ದೃಷ್ಟಿಯಿಂದ, ಪರಿಣಾತ್ಮಕ ಪ್ರಭಾವದ ಗಾಢತೆಯ ದೃಷ್ಟಿಯಿಂದ ಜಾನಪದೀಯ ಸತ್ವದ ಮಣ್ಣಿನ ವಾಸನೆಯ ದೃಷ್ಟಿಯಿಂದ, ಗ್ರಾಮೀಣ ಸೊಗಡಿನ ದೃಷ್ಟಿಯಿಂದ ಸಮಾನ (equivalent) ಅಂತ ಅನ್ನಿಸುವುದಿಲ್ಲ.

ಇದಕ್ಕೆ ಕಾರಣ ಈ ಕೆಳಗಿನಂತಿದೆ:

ಒಂದು ಪ್ರಬಲವಾದ ಕಾರಣ ಆಯಾಯ ಜನರ ಚಿತ್ರಣ ಆಯಾಯ ಭಾಷೆ ಆದರೆ ಸ್ವಾಭಾವಿಕ ಮತ್ತು ಅಥೆಂಟಿಕ ಅನ್ನಿಸುವುದು. ಬೇರೆ ಭಾಷೆ/ಭಾಷಾ ಪ್ರಭೇದ ಆದರೆ ಕೃತಕ, ಅವಾಸ್ತವ, ಅಸಹಜ, ಭ್ರಾಮಕ ಅನ್ನಿಸಬಹುದು, ಅನ್ನಿಸುತ್ತದೆ. ಆದರೆ ಮೂಲತಃ, ಸತ್ವತಃ ವಸ್ತು/ಅರ್ಥ ಒಂದೇ. ಮೂಲಕೃತಿ 'ಕುಸುಮಬಾಲೆ' ಮತ್ತು ಅದರ ಶಿಷ್ಟೀಕೃತ ಭಾಷಿಕ ರೂಪಗಳ ಎರಡು ಮೂಕ ಚಲನಚಿತ್ರ ಮಾಡಿದರೆ, ಚಲನಚಿತ್ರಗಳು ತತ್ಸಮಾನ (identical) ಆಗುವವು. ಅಂದರೆ ಈ ಎರಡೂ ರೂಪಗಳ ವಸ್ತು ಒಂದೇ, ಕಥಾನಕ ಒಂದೇ. ಕೆಲವು ಓದುಗರು ಇದನ್ನೇ ಪ್ರತಿಧ್ವನಿಸುತ್ತಾರೆ. "ಅಡುಗನ್ನಡದಲ್ಲಿರುವ ಯಾವುದೇ ಕೃತಿಯನ್ನು ಶಿಷ್ಟ ಕನ್ನಡಕ್ಕೆ ಬದಲಾಯಿಸಿದಾಗ ಅದರ ವಸ್ತು ಬದಲಾಗುವುದಿಲ್ಲ" (ನೋಡಿ: ಅನುಬಂಧ -2).

" ಈ ಸರಳ ಕನ್ನಡೀಕರಣವು(ಶಿಷ್ಟ ಕನ್ನಡೀಕರಣವು) (ಮೂಲ) ಕೃತಿಯ ಸತ್ವ, ಶಕ್ತಿಗಳನ್ನು ತೋರುವ ಕೈಮರವಾಗಿ ಕೆಲಸ ಮಾಡುವ ಶಕ್ತಿಯನ್ನು ಹೊಂದಿದೆ ಎಂದು ಅಂಜಿಕೆಯಿಲ್ಲದೆ ಹೇಳಬಹುದು" (ನೋಡಿ: ಅನುಬಂಧ -2).

3.7. ಒಂದು ಬದುಕಿನ ಒಳಗನ್ನು ಯಾವುದೇ ಒಂದು ನಿರ್ದಿಷ್ಟ ಭಾಷೆಯೇ/ಭಾಷಾಪ್ರಭೇದವೇ ಅಭಿವ್ಯಕ್ತಿಸಲು/ಸಂವಹಿಸಲು ಸಾಧ್ಯ ಎಂಬ ಮಾತು ಮೊದಮೊದಲಿಗೆ ನಂಬಲರ್ಹ (plausible). ಉತ್ತರ ಕನ್ನಡದ ಹವ್ಯಕ ಬ್ರಾಹ್ಮಣರ ಬದುಕಿನ ತುಣುಕಿನ ಚಿತ್ರಣ ಬೀದರ ಕನ್ನಡದಲ್ಲಿ ಅಥವಾ ಮಂಡ್ಯ ಹರಿಜನರ ಕನ್ನಡದಲ್ಲಿ ಮಾಡಿದರೆ ಬಹಳ odd ಅನ್ನಿಸಬಹುದು. ಧಾರವಾಡಿಗ 'ಚೊಲೋ' ಅಂದರೆ ಒಪ್ಪುತ್ತದೆ; 'ಚೆನ್ನಾಗಿ' ಅಂದರಲ್ಲ. 'ಮನಿ' ಅಂದರೆ ಒಪ್ಪುತ್ತದೆ 'ಮನೆ' ಅಂದರಲ್ಲ. 'ಕುಂದರ್ರಿ' ಅಂದರೆ ಒಪ್ಪುತ್ತದೆ 'ಕುತ್ಕೊಳ್ಳಿ' ಅಂದರಲ್ಲ. ಈ ವ್ಯತ್ಯಾಸಗಳು ಒಂದೇ ಮೂಲದ (ವಸ್ತುವಿನ) ಮೇಲೆ ಆದಂಥ ಮೇಲ್ಮೈ ಭೇದಗಳು.

3.8. ಸಾಹಿತ್ಯಕ ಪಠ್ಯದ ಗುಣವಿಶೇಷಗಳಾದ ತೀವ್ರತೆ, ಘನತೆ, ಗಾಂಭೀರ್ಯ, ಗಟ್ಟಿತನ, ಕಾವ್ಯಾತ್ಮಕತೆ, ರಸವತ್ತತೆ, ಸತ್ವಯುತತೆ ವಸ್ತು-ನಿಷ್ಠ ಅಲ್ಲ; ಭಾಷಾ-ನಿಷ್ಠ, ಪ್ರಭೇದ-ನಿಷ್ಠ. ಅಂದರೆ ಪ್ರತಿ ಕನ್ನಡ ಉಪಭಾಷೆ/ಪ್ರಭೇದದಲ್ಲೂ ತನ್ನದೇ ಆದ ತೀವ್ರತೆ, ಘನತೆ, ಗಾಂಭೀರ್ಯ, ಕಾವ್ಯಾತ್ಮಕತೆ.... ಸಾಧ್ಯವಿದ್ದರೂ, ಅಂತರ ಪ್ರಭೇದಾತ್ಮಕ ತುಲನೆಯಲ್ಲಿ ಭಾಷಿಕವಾಗಿ ಸಮಾನವಾದ ಅಭಿವ್ಯಕ್ತಿಗಳು ಮೌಲ್ಯಾತ್ಮಕವಾಗಿ ಒಂದೇ ಆಗಿರಬಹುದು ಅಥವಾ ಆಗಿಲ್ಲದೇ ಇರಬಹುದು. ಇದೊಂದು ಸ್ವಯಂ ವಿರೋಧೋಕ್ತಿ (paradox). ಈ ಮೌಲ್ಯಾತ್ಮಕ ವ್ಯತ್ಯಾಸಗಳು ಒಂದೇ ಭಾಷೆಯ ಪ್ರಭೇದಗಳಲ್ಲಾದರೆ ಶಬ್ದಕೋಶ ಅಂದರೆ ಪದಗಳಲ್ಲಿ ಹುದುಗಿರುತ್ತವೆ, ವಾಕ್ಯ ರಚನೆಯಲ್ಲಲ್ಲ.

3.9. ಒಬ್ಬ ಪ್ರತಿಕ್ರಿಯೆಗಾರ "ಗ್ರಾಮೀಣ ಭಾಷೆಯಿಂದ ಶಿಷ್ಟಭಾಷೆಗೆ ಬದಲಾಯಿಸುವುದರಿಂದ ಭಾಷೆಯ ಗಟ್ಟಿತನ, ಮೂಲದ ಸೊಗಡು ಇಲ್ಲವಾಗುತ್ತದೆ ಹಾಗೂ ಮೂಲದ ವಸ್ತು ಇಲ್ಲಿ ಕಾಣಲು ಸಾಧ್ಯವಾಗುವುದಿಲ್ಲ" ಎಂದಿದ್ದಾರೆ. ಭಾಷೆಯ ಗಟ್ಟಿತನ ಹಾಗೂ ಮೂಲದ ಸೊಗಡು ಇಲ್ಲವಾಗುತ್ತದೆ ಎಂಬ ಹೇಳಿಕೆಯನ್ನು ಒಪ್ಪಿಕೊಳ್ಳಬಹುದು. ಆದರೆ "ಮೂಲದ ವಸ್ತು ಇಲ್ಲಿ ಕಾಣಲು ಸಾಧ್ಯವಾಗುವುದಿಲ್ಲ" ಎಂಬ ಹೇಳಿಕೆ ಅರ್ಥವಿಲ್ಲದ್ದು ಎಂದೇ ಹೇಳಬಹುದು. ಏಕೆಂದರೆ ಕೆಲವೊಮ್ಮೆ ಭಾಷೆಯ ಗಟ್ಟಿತನವನ್ನು ಉಳಿಸಿಕೊಳ್ಳಲು ಸಾಧ್ಯವಾಗುವುದಿಲ್ಲ. ಉದಾಹರಣೆಗೆ ಸೂರ್ಯಮುಳುಗಿ ಬೆಳಕು ಮರೆಯಾದಾಗ "ಕತ್ತಲೆಯಾಯಿತು" ಎಂದು ಗ್ರಾಮ್ಯ ಹಾಗೂ ಶಿಷ್ಟಕನ್ನಡಗಳಲ್ಲಿ ಕರೆಯಲಾಗುತ್ತದೆ. ಸಂಜೆ ಏಳು ಗಂಟೆಯ ನಂತರ ಗಾಢ ಕತ್ತಲೆಯಾಗಿರು-

ಪದವನ್ನು ನೋಡಿ ಶಿಷ್ಟಕನ್ನಡದಲ್ಲಿ 'ತುಂಬಾ ಕತ್ತಲೆ' ಎಂದರೆ ಗ್ರಾಮ್ಯ ಕನ್ನಡದಲ್ಲಿ 'ಗವ್ಗತ್ತಲು' ಎನ್ನುತ್ತಾರೆ. ಕೆಲವೊಮ್ಮೆ ಇದೇ ಕತ್ತಲೆಯನ್ನು 'ಗವ್' ಎನ್ನುತ್ತದೆ ಎಂದು ಕೂಡ ಗ್ರಾಮ್ಯಕನ್ನಡದಲ್ಲಿ ಹೇಳಲಾಗುತ್ತದೆ. ಇಲ್ಲಿ 'ಗವ್' ಎಂದರೆ 'ಬಹಳ ಕತ್ತಲೆ' ಎಂಬುದು ಒಂದು ಅರ್ಥ, ಕತ್ತಲೆಯಿಂದ ಭಯವಾಗುತ್ತದೆ ಎಂಬುದು ಮತ್ತೊಂದು ಅರ್ಥ. ಉದಾಹರಣೆಗೆ ಈ ಕೆಳಗಿನ ವಾಕ್ಯಗಳನ್ನು ನೋಡಿ:

ಮೊದಲನೆ ಅರ್ಥಕ್ಕೆ ಈ ಕೆಳಗಿನ ವಾಕ್ಯ ಗಮನಿಸಿ:

ತಾಯಿ (ತನ್ನ ಮಗುವಿಗೆ) : ಕೂಸು ಈಡ ಗವ್ ಅನ್ನುತ್ತ
ಮನೆ ಒಳಕ ಬಾ (ಗ್ರಾ.ಕ.)

ಮಗು ಹೊರಗೆ ಬಹಳ ಕತ್ತಲೆ
ಮನೆ ಒಳಗೆ ಬಾ (ಶಿ.ಕ.)

ಎರಡನೆ ಅರ್ಥಕ್ಕೆ ಈ ಕೆಳಗಿನ ವಾಕ್ಯ ಗಮನಿಸಿ:

ಹುಡುಗ(ಅಪ್ಪನಿಗೆ) : ಅಪ್ಪ ಈಡ ಗವ್ ಅನ್ನುತ ನಾನು
ಅಂಗಡಿಗ ಹೋಗಲ್ಲ (ಗ್ರಾ.ಕ)

ಅಪ್ಪ ಹೊರಗೆ ಕತ್ತಲೆ ಭಯವಾಗುತ್ತೆ
ನಾನು ಅಂಗಡಿಗೆ ಹೋಗಲ್ಲ (ಶಿ.ಕ).

ಹಳ್ಳಿಯಂತಲ್ಲಿ 'ಗವ್' ಎನ್ನುವ ಪದವನ್ನು ನಿರ್ದಿಷ್ಟವಾಗಿ ಕತ್ತಲೆಗೆ ಹಾಗು ಕತ್ತಲೆಯಿಂದ ಭಯವಾಗುವುದಕ್ಕೆ ಮಾತ್ರ ಬಳಸಲಾಗುತ್ತದೆ. ಆದರೆ 'ಗವ್' ಎಂಬುದಕ್ಕೆ ಶಿಷ್ಟ ಕನ್ನಡದಲ್ಲಿ ಸಂವಾದಿಯಾಗಿ ಈ ಎರಡು ಅರ್ಥವುಳ್ಳ ಒಂದೇ ಪದ ಸಿಗುವುದಿಲ್ಲ. ಬದಲಾಗಿ 'ಬಹಳ ಕತ್ತಲೆ' ಎಂದೂ, 'ಕತ್ತಲೆಯಿಂದ ಭಯವಾಗುತ್ತೆ' ಎಂದೂ ಸಂದರ್ಭಕ್ಕೆ ತಕ್ಕಂತೆ ವಿವರಿಸಿಕೊಳ್ಳಬೇಕಾಗುತ್ತದೆ. ಇಲ್ಲಿ ಅರ್ಥ ಒಂದೇ ಆದರೂ ಮೂಲ ಪದದ ಗಟ್ಟಿತನ ಶಿಷ್ಟ ಕನ್ನಡದಲ್ಲಿ ಸಿಗುವುದಿಲ್ಲ. ಇದರಿಂದಾಗಿ ಗ್ರಾಮ್ಯಕನ್ನಡದಿಂದ ಶಿಷ್ಟ ಕನ್ನಡಕ್ಕೆ ಪರಿವರ್ತಿಸಿದಾಗ ಇಂತಹ ಕಡೆ ಜಾಳು ಜಾಳು ಎನಿಸುತ್ತದೆ. ಅಲ್ಲದೇ ಮೂಲ ಪದದ ಸೊಗಡೇ ಬೇರೆ, ಶಿಷ್ಟ ಕನ್ನಡದ ಸೊಗಡೇ ಬೇರೆ. ಹೀಗಾಗಿ ಮೂಲಕೃತಿಯ ಪರಿಣಾಮವನ್ನು ಇದು ಬೀರುವುದಿಲ್ಲ.

ಆದರೆ ಮೂಲದ ವಸ್ತುವನ್ನು ಇಲ್ಲಿ ಕಾಣಲು ಸಾಧ್ಯವಿಲ್ಲ ಎನ್ನುವ ಮಾತು ಸರಿಯಲ್ಲ. ಏಕೆಂದರೆ ಮೂಲದ ವಸ್ತು ಕುರಿತು ಶಿಷ್ಟ ಕನ್ನಡದಲ್ಲಿ ಒಂದೇ ಪದದಲ್ಲಿ ಹೇಳಲು ಪದಗಳು ಲಭ್ಯವಿಲ್ಲದಿದ್ದಾಗ ಪರ್ಯಾಯ ಮಾರ್ಗದಿಂದ ಅಂದರೆ ಪದಪುಂಜ ಅಥವಾ ವಾಕ್ಯದ ಮೂಲಕ ಹೇಳಲು ಸಾಧ್ಯ. ಇದಕ್ಕೆ ಮೇಲೆ ಹೇಳಲಾದ 'ಗಪ್ಪು' ಪದದ ಅರ್ಥಗಳೇ ಸಾಕ್ಷಿ.

3.10. ಕೆಳಗೆ ತೋರಿಸಲಾಗಿರುವ 'ಕುಸುಮಬಾಲೆ'ಯಲ್ಲಿನ ಕುರಿಯಯ್ಯನ ಸಂಭಾಷಣೆಯನ್ನು ಕುರಿತು ಇನ್ನೊಬ್ಬ ಪ್ರತಿಕ್ರಿಯೆಗಾರ ಒಂದು ಅರ್ಥಪೂರ್ಣ ಮಾತನಾಡುತ್ತಾರೆ. "....ಕುರಿಯಯ್ಯನ ಮೈಮೇಲೆ ಸಾಯ್ಯರ ಜೋತಮ್ಮ ಮೈದುಂಬಿ ಬಂದು ಆಡುವ ಮಾತನ್ನು ಗಮನಿಸಬೇಕು. ಇಂತಹ ಸಂದರ್ಭ ಚಿತ್ರಣಗಳು ಮೂಲಕೃತಿಯ ಸಂಕೀರ್ಣ ಗದ್ಯಭಾಷೆಯಲ್ಲಿ ಹಲವು ಓದಿನ ಮೂಲಕ ಸ್ಪಷ್ಟವಾಗಿ ಗ್ರಹಿಸಿಕೊಳ್ಳಬೇಕು ಎಂಬ ಹಂಬಲವನ್ನು ನೀಡುವುದರ ಜೊತೆಗೆ ಇಂತಹ ಕಟುಮಾತುಗಳ ಚಿತ್ರಣ ಲೇಖಕ ತರುತ್ತಿರುವುದರ ಹಿನ್ನೆಲೆ, ಉದ್ದೇಶ ಏನಿರಬಹುದು ಎಂಬ ಚರ್ಚೆಗೆ ಗ್ರಾಸವಾಗಿರುತ್ತದೆ. ಆದರೆ ನಿಮ್ಮ ಸರಳೀಕೃತ ಭಾಷೆಯಲ್ಲಿ ಈ ಅಂಶಗಳು ಸ್ಪಷ್ಟಗೊಂಡಾಗ ಅದನ್ನು ಬಹಳ ಸರಳವಾಗಿ ಅರ್ಥೈಸಿಕೊಳ್ಳುವ ಓದುಗ ಇಂತಹ ಭಾಗಗಳ ಸೂಕ್ಷ್ಮ ಗ್ರಹಿಕೆಯ ಆಳವನ್ನು ಮೂಲಕೃತಿಯನ್ನು ಒಟ್ಟಿಗೆ ಗ್ರಹಿಸಿಕೊಳ್ಳದೇ ಮೇಲ್ನೋಟದ ಒಂದೇ ಓದಿನ ಆಧಾರದ ಮೇಲೆ ವಿಮರ್ಶೆಮಾಡುವ ಅಜಾಗರೂಕತೆಯ ಕೆಲಸ ಆಗಬಹುದೇನೊ ಎಂಬುದು, ಇದು ಮೂಲಕೃತಿಕಾರನ ಒಟ್ಟು ಆಶಯಕ್ಕೆ ಧಕ್ಕೆ ಉಂಟುಮಾಡುವ ಸಾಧ್ಯತೆ ಇರುತ್ತದೆ...ಕುರಿಯಯ್ಯನ ಮೂಲಕ ಆಡುತ್ತಿರುವ ಈ ಮಾತುಗಳು ಕೃತಿಕಾರನ ಕಲ್ಪನಾಂಶದಿಂದ ರೂಪುಗೊಂಡಿದ್ದು...." ಇಂತಹ ಭಾಗಗಳ ಮತ್ತು ಕೆಲವು ಮಾತುಗಳ ಸೂಕ್ಷ್ಮಗ್ರಹಿಕೆಯ ಆಳವನ್ನು ಮೂಲಕೃತಿಯ ಸಂದರ್ಭದಲ್ಲಿ ಹಿಡಿದಿಡುವ ಕೆಲಸ ನವಿರಾದ್ದೇ ಹೊರತು ಅಸಾಧ್ಯ ಅಲ್ಲ. ಅಲ್ಲದೆ, ಬೇರೆ ಭಾಷಾ ಪ್ರಭೇದದಲ್ಲಿ ಅಥವಾ ಬೇರೆ ಭಾಷೆಯಲ್ಲಿ ಒಂದು ಭಾಗದ ಹಿಗ್ಗುವ ಅರ್ಥವ್ಯಾಪ್ತಿಯ ಅಥವಾ ಧ್ವನಿಯ ಅಭಿವ್ಯಕ್ತಿ ಮೂಲಕೃತಿಯಲ್ಲಿ ಒಂದು ನಿರ್ದಿಷ್ಟ ಭಾಷಾ ಶಿಲ್ಪದಲ್ಲಿ ಆಗಿರುತ್ತದೆ. ಇದೇ ಧ್ವನಿಯನ್ನು ಅರ್ಥಸೂಕ್ಷ್ಮತೆಯನ್ನು ವ್ಯಂಜಿಸುವ ಬಗೆಗೆ ಭಾಷಾಶಿಲ್ಪ ಬದಲಾಗಿರಬಹುದು. ಆದರೆ ಮೂಲಕೃತಿಯಲ್ಲಿ ಒಂದು

ಪದದಲ್ಲಿ ಅಥವಾ ಒಂದೇ ನುಡಿಗಟ್ಟಿನಲ್ಲಿ ಹೇಳಲಾದ ಅರ್ಥ ಸಂಕೀರ್ಣ ಟಾರ್ಗೆಟ್ ಪ್ರಭೇದದಲ್ಲಿ ಭಾಷಿಕವಾಗಿ ಬೇರೆ ತರಹ ಆಗಿರಬಹುದು. ಉದಾ: ಒಂದು ಪದಗುಂಪು, ಪದಗಟ್ಟು ಅಥವಾ ವಾಕ್ಯ ಅಥವಾ ವಾಕ್ಯಗಟ್ಟಿನಲ್ಲಾಗಿರಬಹುದು. ಮೇಲೆ ಹೇಳಿದ 'ಗವ್ರೊ' ಇದಕ್ಕೂ ಉದಾಹರಣೆ. 'ಕುಸುಮಬಾಲೆ' ಮೂಲಕೃತಿಯ ಒಂದು ಪಾಠ್ಯ ನೋಡಿ:

"ನಿಲ್ಲು ಕೂನೂ ನಿನ ಮಾತ. ಎಲ್ಲದಂದೂ ಜಾತಿ?" ....

"ನೋಡ್ರಪ್ಪ ಕುಸನಗಳ... ಕೇಳಿ, ನಾನು ದಿಕ್ಕ್ಯದೆನ ಇಲಂವ ಬಿದಿಂಯೋ ಅನಾದ್ರೀ... ಹಿರೀಕ.

ಅಂಥಾ ನಾನೇ ಜಾತ್ಯ ಕಂಡಿಲ್ಲ ಅಂತೀನಿ. ನಂಗ ಆ ಜಾತ್ಯ ಅಭಿಮಾನ ಮಾತ್ರ ನೀವ ಮುಂದ್ಯ ಮಾತಾಡಿ....." ಅಂತಂದು ಒಬ್ಬೊಬ್ಬರನ್ನಾಗಿ ನೋಡತೊಡಗಿದನು.

ಆ ಹುಸಿನಗುವ ಬುಡಕಟ್ಟವರಾಗಿ ಲಾಂಯುರು ನೋಡುತಿರಲೂ ಅರೆಮನಾಗ್ರುರಿದಂ ಕಿನ್ನಪ್ಪರು ಕಷ್ಟದಿಂದ ಎಚ್ಚರಗೊಂಡವರಾಗಿ ಸೆಟುಕ ಗಾಳ್ಯ ಬೀಸ್ಯಳಾತ್ರ ಗಾಳ್ಯ ಏನಂದರು:

"ನೋಡ್ರಿ ತಾತಂಯ್ಯ ನೀವ ಕಷ್ಟ ಉಂಡು ಬದುಕಿಬಾಳಿದಂಥವರು. ನಿಮ್ಮ ಬಗ್ಗೆ ಇರೋ ಕಥೀನ ಓದಿದೀನಿ. ಅಂಥ ನೀವಾ ಇಂಥ ಮಾತುಗಳ ಆಡಬಾರದು ಹೊಲಮಾದಿಗ ಅಂದ್ರ ಬೇರೆಯವರ ರಕ್ತ ಕುದಿಂತೋದು ನಿಚ್ಚಳವಾಗಿ ಕಾಣ್ತದಲ್ಲಾ... ಇದಕ್ಕೆ ಕಾರಣ ಏನು? ಇದಕ್ಕೆ..."

ಕುರಿಯಯ್ಯ ಮಾರಿಗುಡೀನೆ ಬೆಳಗೋ ಥರವಾಗಿ ಒಂದ್ಸಲ ನೆಗಾಡಿಬುಟ್ಟನು.

" ಏ ಅದಾ ಕೂಸೂ? ತಾಳೂ... ಗಿಲೀಬ್ಯದಲ್ಲ ನನ ಮಾತು ತಿಳ್ಯ. ನೋಡು ಮೊಗ, ಯಾರಾರು ಈಗ ಬಂದು ನನ ಹೆತ್ಯು ಹೊತ್ಗಂಡು ಹೊಂಟೋದ್ರ ಹೇಳು ಹೆಂಗಾಗಬೇಕು ನಂಗ?"

ಅದು ಎಲ್ಲಾರಿಗೂ ಆಗುವುದು ಅದೂ... ಅದ್ಯಾಕ ಕೇಳೀನು ಇವ ಅದ ಈಗಾ... ಅದಾ ರಕ್ತಾವ ಕುದೀತಾ.

" ಅದ ಯಾನಿಯಪ್ಪ ಆಗದು? ಯಾನ? ರಕ್ತ ಕುದೀತಾದ. ಬ್ಯಾರೆ ಜಾತಿಯವರಿಗೂ ಆಗದುವಿ ಅದೆ ಕಯ್ಯ. ನಮಗೊಂದು ನ್ಯಾಯಾ... ತಾಳೂ, ಅವರೊಗಂದು ನ್ಯಾಯ

ಅಂತಿದಂದಯ್ಕ ನಾಕ್ಯ? ಯಾನಾರೂ ನಂ ಜಾತಿ ಬಡ್ತ್ವಗಳು ನಿಯತ್ತ್ಗಾರ್ರು ಅಂದ್ಕಂಡಿದೀರಯ್ಕ ಯಾನಾರುವ್? ನಂಬೀರಿ ಬೋಕೇ.... ಗೊತ್ರಯ್ಕ ನಿಮ್ಗ? ನಾವಿರಾರು ವುತುಮಾನಗಳ ಹಿಂದ್ಲ ನಡೆನುಡಿ ಗೊತ್ತಾ ನಿಮ್ಗ? ಗೊತ್ತಾ? ಆ ನಂ ಜಾತಿ ಬಡ್ತ್ವ ಮಾಡ್ತಿದಂ ಕೇವಿ ಯಾನ ಅಂತ ಗೊತ್ರಯ್ಕ... ?"

ಈ ಮೋಣಿಗ ಮಾರಿಗುಡಿ ಮಂಯ್ಕ ಕಿವಿಯಾಗಿ ಅಲಸುತ:

"ಗೊತ್ರಯ್ಕ? ಕೇಳಿ... ನಂ ಜಾತಿ ಬಡ್ತ್ವ ಕಾಯ್ಕಂಡಿದ್ದುಂ ತಂ ಕಣ್ಣಂಗ ಬೇಕಬೇಕಾದ ಉತ್ತ್ಮ ಜಾತ್ಕವರ ಸೆಡ್ತೀರ ಹೊತ್ತಗಂಡು ನಡುಂಬುಹೋರು. ಎಲ್ಲ್ಗಕ? ಬೆಟ್ಟದ ಕಿಬ್ರಗ. ಅಂಯಾತ್? ವಸಿ ದಿನಗಗುಲ ಅಲ್ಲಿ ಇಸಾರು. ಅಂಯಾತ್? ಆಮ್ಯಾಕ ಕೇಳೀ ಆ ಬಡ್ತ್ವ ತಿರ್ಗಾ ತಂ ಊರ್ಗಂಯ ಬರೋವ. ಯಾನೇ ಆಗ್ಲಿ ಆಗ ಉತ್ತ್ಮ ಜಾತಿ ಜನ ಒಳ್ಳವರಾಗಿದ್ರು ಕಂಯ್ಕ. ತಾಳ್ಕತ್ತ ಇದ್ದಂರು. ಅದ್ಕಂಯ ಅವ್ರಗ ಉತ್ತ್ಮ ಜಾತಿ ಅಂತ ಹೆಸ್ರು ಬಂದು ನಿಂತಿರೋದು. ಸುಮ್ಗ ಬಂದದ ಅಂದ್ಕಂಡಿದ್ಕರ? ಕೇಳಿ, ಆ ಉತ್ತ್ಮ ಜಾತ್ಕವರು ಬೆಟ್ಟದ ಕಿಬ್ರಯಿಂದ ಬಂದವರ್ಗ ಏನ ಅಂತಿದ್ರು ಅಂದ್ರ: '.... ನೋಡ್ರಯ್ಕ ಅದುಂ ತಿರುಗ ಬರಲ್ಲ. ಯಾನ ಅಂಯ್ತ. ಯಾನ ಹೋಯ್ತ. ನೀವ್ಗಳು ಕಷ್ಟಕಷ್ಟಳ ಮುರುಂ ಮಾಡಂ ತಪ್ಪಗ ಈಗ ನೀವ್ಗಳು ಊರಾಚಗ ಇದ್ದಂಕಂಡು, ನಾವ ಹೇಳಂ ಕೆಲ್ಸವ ಮಾಡ್ಕಂಡು.... ಹೆಂಗೂ ಇದ್ದಂಕ್ಳೀ..." ಅಂತ ಅನ್ಕವರು, ನಂ ಜಾತಿ ಬಡ್ತ್ವಕ ಬೇಕಾಗಿದ್ದಾಂ ಅದೀಂಯ. ಆ ಉತ್ತ್ಮರು ಕಾಲರ್ಲಿ ತೋರ್ರ್ವದಂ ಇವ್ರು ಕೈರಿ ಮಾಡ್ಕಳರು. ಇರಾರು... "

"ಈಗ ಅಂಥಾ ಒಳ್ಳಕಾಲವ ಕೂಸೂ? ಈ ಕಾಲ ಕೆಟಕಾಲ ತಿಳ್ಕ. ಈಗ ನಂ ನೋಡ್ದಾಂಗ ಏನಾಯ್ತದ? ಯಾರಗ್ಕ? ಆ ಉತ್ತ್ಮ ಜಾತ್ಕವರ್ಗ — ಕೇಳೀ, ಅವರ ಒಳಗ ಆಗುವುದರ ಅವ್ಮಾನದ ಅರಿವ ಅವ್ರಗಂಯ ಅರಿವಾಗ್ತ ಇರಲ್ಲ. ಅದ್ಯಾವ ಅವರ ರಗ್ತಕ? ರಗ್ತಕ ತಲತಲಾಂತರದ ನೆಪ್ಪಿರ್ತದ... ತಿಳ್ಕೀಳೀ. ಅವರು ಸುಮ್ಕದ್ರೂ ಅವರ ರಗ್ತ ಸುಮ್ಕದುಂದಾ?.....' ಹೆಂಗ ತಾನೀಯಾ.. ಸುಮ್ಕಿರ್ಕ ಅದುಂ? ಅದರ ತೆಪ್ಪ ಅದ್ಯಾ? ನಂ ಜಾತ್ಕವರ ಕಂಡೇಟ್ಗಂಯ ಉತ್ತ್ಮ ಕುಲಂವರ ರಗ್ತ ಏನಂದ್ಕತ್ತದ:

'ಓಹೋ! ಈಗ ಕಾಣೋ ಈ ಹೊಲಮಾದುಗಾದಿ ಪೂರ್ವಿಕನು, ನಮ್ಮ ಉತ್ತಮ ಕುಲಂ ಮೂಲಾದಿಗೆ ನೀರಂ ಹೆತ್ತು ಹೊತ್ಗಂಡು ಹೋಗಿದಂವನ ಆ ವಂಶದ ಕುಡಿ ಈ ಹೊಲಮಾದುಗಾದಿ....' ಅಂತ ಅಂದ್ಕತ್ತದ. ಯಾನ? ಈಗಲ ಉತ್ತಮನ ರಕ್ತ. ಈಗಲ ಈ ಉತ್ತಮನ ರಕ್ತಗ ಆ ಅದೆಲ್ಲಾ ಪಿಚ್ಚರ ಬುಟ್ಟಂಗ ಕಾಣುಸ್ತದಕಂಯ್ಯ ಆ ನೆಪ್ಪಗ ಉತ್ತಮರ ರಕ್ತ ಕುದಿತಾದ. ನಮಾಗದ್ದುರ್ದಿ ಹಂಗೆ ತಾನಿಯಪ್ಪ ಆಗದು? ಅವೆ... ಈ ಥರಾಗಿ ಇರಾಗ ಕಾರಣ ಕೇಳ್ತಿಯಲ್ಲಪ್ಪ ಕೂಸೂ...."

ಇದರ ಶಿಷ್ಟಭಾಷೆಯುಕನ್ನಡೀಕರಣ ಹೀಗಿದೆ:

" ನಿನ್ನ ಮಾತನ್ನು ನಿಲ್ಲಿಸು ಮಗು. ಎಲ್ಲಿದೆ ಜಾತಿ?"

" ನೋಡಿ ಮಕ್ಕಳೇ... ಕೇಳಿ, ನಾನು ದಿಕ್ಕುದೆಸೆ ಇಲ್ಲದೆ ಬದುಕುವ ಅನಾಥ... ಹಿರಿಯ. ನನ್ನಂಥವನೇ ಜಾತಿಯನ್ನು ಕಾಣಲಿಲ್ಲ. ಹೀಗಾಗಿ ನನಗೆ ಆ ಜಾತಿಯ ಅರ್ಥವನ್ನು ಮಾಡಿಸಿ ನೀವು ಮುಂದಕ್ಕೆ ಸಾಗನಾಡಿ..." ಎಂದು ಹೇಳಿ ಒಬ್ಬೊಬ್ಬರನ್ನಾಗಿ ನೋಡತೊಡಗಿದನು.

ಹುಸಿನಗೆ ಬೀರದ ಲಾಂಯರ ನೋಡುತ್ತಿರಲು, ಅರೆಪ್ರಜ್ಞಾವಸ್ಥೆಯಲ್ಲಿದ್ದಂ ಕೃಷ್ಣಪ್ಪನವರು ಕಷ್ಟದಲ್ಲಿ ಎಚ್ಚರಗೊಂಡವರಾಗಿ ನೆಮ್ಮಗೆ ಗಾಳಿಯನ್ನು ಬೀಸಿಕೊಳ್ಳುತ್ತ ಏನೆಂದರೆಂದರೆ:

"ನೋಡಿ ತಾತ, ನೀವು ಕಷ್ಟವನ್ನು ಅನುಭವಿಸಿ ಜೀವಿಸಿದಂತವರು. ನಿಮ್ಮ ಬಗ್ಗೆ ಇರುವ ಕಥೆಯನ್ನು ಓದಿದ್ದೇನೆ. ನಿಮ್ಮಂಥವರು ಇಂಥ ಮಾತುಗಳನ್ನಾಡಬಾರದು. ದರ್ಶಲು, ಮಾದಿಗರು ಆದರೆ ಬೇರೆಯವರ ರಕ್ತ ಕುದಿಯುವುದು ಸ್ಪಷ್ಟವಾಗಿ ಕಾಣುತ್ತದಲ್ಲ... ಇದಕ್ಕೆ ಕಾರಣ ಏನು?...."

ಕುರಿಯಯ್ಯ ಮಾರಿಗುಡಿಯೇ ಹಾರಿಹೋಗುವಂತೆ ನಗಾಡಿದನು.

" ಓ ಅದಾ ಮಗು? ತಾಳು... ನನ್ನ ಮಾತು ಹೋಗಿ ರೀತಿಯಲ್ಲ. ನೋಡು ಮಗು, ಈಗ ಯಾರಾದರೂ ಬಂದು ನನ್ನ ಹೆಂಡತಿಯನ್ನು ಹೊತ್ತುಕೊಂಡು ಹೋದರೆ ನನಗೆ ಹೇಗಾಗಬೇಕು ಹೇಳು"

ಅದು ಎಲ್ಲರಿಗೂ ಆಗುವಂತದ್ದೇ... ಅದನ್ನೇಕೆ ಇವನು ಈಗ ಕೇಳುತ್ತಾನೆ... ಅದೂ ರಕ್ತ ಕುದಿಯುತ್ತ.

“ರಕ್ತ ಕುದಿಯುತ್ತದೆ”

“ಬೇರೆ ಜಾತಿಯವರಿಗೂ ಆಗುವುದು ಅದೇ ತಾನೆ. ನಮಗೊಂದು ನ್ಯಾಯ... ಅವರಿಗೊಂದು ನ್ಯಾಯ ಇದೆಯಾ? ಏನಾದರೂ ನಮ್ಮ ಜಾತಿಯವರು ನಿಯತ್ತಿನವರು ಎಂದುಕೊಂಡಿದ್ದೀರ? ನಂಬೀರಿ, ಜೋಕೆ...

.... ಸಾವಿರಾರು ಶತಮಾನಗಳ ಹಿಂದಿನ ನಡೆನುಡಿ ನಿಮಗೇನಾದರು ಗೊತ್ತೆ? ಆ ನಮ್ಮ ಜಾತಿಯವರು ಮಾಡುತ್ತಿದ್ದ ಕೆಲಸ ಏನು ಎಂದು...?

ಈ ಮಾತಿಗೆ ಮಾರಿಗುಡಿ ಮೈಯೆಲ್ಲ ಕಿವಿಯಾಗಿ ಆಲಿಸುತ್ತಿತ್ತು:

“ಗೊತ್ತೆ? ಕೇಳಿ... ನಮ್ಮ ಜಾತಿಯವರು ಕಾದಿದ್ದು ತಮ್ಮ ಕಣ್ಣಿಗೆ ಬೇಕಾದ ಉತ್ತಮ ಜಾತಿಯವರ ಹೆಂಡತಿಯರನ್ನು ಕದ್ದು ಹೊತ್ತುಕೊಂಡು ಓಡಿಹೋಗುತ್ತಿದ್ದರು. ಎಲ್ಲಿಗೆ? ಬೆಟ್ಟದ ಇಳಿಜಾರಿಗೆ. ಆಯಿತೆ? ಸ್ವಲ್ಪ ದಿನದವರೆಗೆ ಅಲ್ಲೇ ಇರುತ್ತಿದ್ದರು. ನಂತರ ವಾಪಸ ತಮ್ಮ ಊರಿಗೆ ಬರುತ್ತಿದ್ದರು. ಏನೇ ಆಗಲಿ ಆಗ ಉತ್ತಮಜಾತಿ ಜನ ಒಳ್ಳೆಯವರಾಗಿದ್ದರು. ತಾಳಿಕೊಳ್ಳುತ್ತಿದ್ದರು. ಅದರಿಂದಲೇ ಅವರಿಗೆ ಉತ್ತಮ ಜಾತಿ ಎಂದು ಹೆಸರು ಬಂದಿರುವುದು. ಸುಮ್ಮನೆ ಬಂದಿದೆ ಎಂದುಕೊಂಡಿದ್ದೀರ? ಕೇಳಿ, ಆ ಉತ್ತಮ ಜಾತಿಯವರು ಬೆಟ್ಟದ ಇಳಿಜಾರಿನಿಂದ ಬಂದವರಿಗೆ ಏನು ಹೇಳುತ್ತಿದ್ದರು ಅಂದರೆ:

... ನೋಡಿ ಆಗಿಹೋದದ್ದು ವಾಪಸ ಬರುವುದಿಲ್ಲ. ಏನೋ ನಡೆದು ಹೋಯಿತು. ನೀವು ನೀತಿನಿಯಮಗಳನ್ನು ಮೀರಿ ಮಾಡಿದ ತಪ್ಪಿಗೆ, ಈಗ ನೀವುಗಳು ಊರಿಂದ ಹೊರಗೆ ಇದ್ದುಕೊಂಡು, ನಾವು ಹೇಳಿದ ಕೆಲಸವನ್ನು ಮಾಡಿಕೊಂಡು... ಹೇಗೋ ಇದ್ದುಕೊಳ್ಳಿ... ಎಂದು ಹೇಳುತ್ತಿದ್ದರು. ನಮ್ಮ ಜಾತಿಯವರಿಗೆ ಬೇಕಾಗಿದ್ದು ಅದೇ. ಆ ಉತ್ತಮ ಜಾತಿಯವರು ಕಾಲನಲ್ಲಿ ತೋರಿಸಿದ್ದನ್ನು ಇವರು ಕೈನಲ್ಲಿ ಮಾಡಿಕೊಂಡು ಇರುತ್ತಿದ್ದರು...”

“ಈಗ ಅಂಥ ಒಳ್ಳೆಯ ಕಾಲವೇ ಮಗು? ಈಗಿನ ಕಾಲ ಕೆಟ್ಟದು ತಿಳಿದುಕೋ. ಈಗ ನಮ್ಮನ್ನು ನೋಡಿದಾಗ ಏನನಿಸುತ್ತದೆ ಆ ಉತ್ತಮ ಜಾತಿಯವರಿಗೆ – ಕೇಳಿ, ಅವರ

ಒಳಗೆ ನಡೆಯುವ ವರ್ತಮಾನದ ಅರಿವು ಅವರಿಗೆ ತಿಳಿಯುತ್ತಿರುವುದಿಲ್ಲ. ಆದರೂ ಅವರ ರಕ್ತಕ್ಕೆ? ರಕ್ತಕ್ಕೆ ತಲತಲಾಂತರದ ನೆನಪಿರುತ್ತದೆ... ತಿಳಿದುಕೊಳ್ಳಿ. ಅವರು ಸುಮ್ಮನಿದ್ದರೂ ಅವರ ರಕ್ತ ಸುಮ್ಮನಿರುತ್ತದೆಯೆ?....

... ಹೇಗೆ ತಾನೆ ಸುಮ್ಮನಿರುವುದಕ್ಕೆ ಸಾಧ್ಯ? ಅದು ಅದರ ತಪ್ಪೆ? ನಮ್ಮ ಜಾತಿಯವರನ್ನು ಕಂಡ ತಕ್ಷಣ ಉತ್ತಮ ಜಾತಿಯವರ ರಕ್ತ ಏನೆಂದುಕೊಳ್ಳುತ್ತದೆಂದರೆ 'ಓಹೋ! ಈಗ ಕಾಣುವ ಈ ದಲಿತ ಮಾದಿಗರ ಪೂರ್ವಿಕರು ನಮ್ಮ ಉತ್ತಮ ಜಾತಿಯ ಮೂಲಪುರುಷರ ಹೆಂಡತಿಯರನ್ನು ಕದ್ದು ಹೊತ್ತುಕೊಂಡು ಹೋಗಿದ್ದವರ ಆ ವಂಶದ ಕುಡಿ ಈ ದಲಿತ, ಮಾದಿಗರು...' ಎಂದು ತಿಳಿದುಕೊಳ್ಳುತ್ತದೆ. ಈಗಿನ ಉತ್ತಮ ಜಾತಿಯವರ ರಕ್ತ. ಈ ರಕ್ತಕ್ಕೆ ಅದೆಲ್ಲವೂ ಪಿಕ್ಚರ ಬಿಟ್ಟಂತೆ ಕಾಣಿಸುತ್ತದೆ. ಆ ನೆನಪಿನಿಂದಾಗಿ ಉತ್ತಮರ ರಕ್ತ ಕುದಿಯುತ್ತದೆ. ನಮಗಾದರೂ ಹಾಗೆ ತಾನೆ ಆಗುವುದು? ಈ ರೀತಿ ಇರುವಾಗ ಕಾರಣ ಕೇಳುತ್ತೀಯಲ್ಲ ಮಗು...."

ಮೂಲ ಕೃತಿಯಲ್ಲಿ ಜಾತಿವೈಷಮ್ಯ ಬೆಳೆಯುವುದಕ್ಕೆ ಕಾರಣವಾದ ಅಂಶಗಳನ್ನು ಸುಲಭವಾಗಿ ಹಿಡಿದಿಡಲಾಗಿದೆ. ಇದೇ ರೀತಿ ಶಿಷ್ಟ ಕನ್ನಡದಲ್ಲೂ ಹಿಡಿದಿಡುವ ಕೆಲಸ ನಡೆದಿದೆ. ಹೊರತು ಅಸಾಧ್ಯ ಅಲ್ಲ. ಇದಕ್ಕೆ ಮೇಲಿನ ಶಿಷ್ಟ ಕನ್ನಡೀಕರಣ ರೂಪದಲ್ಲಿ ಸೂಕ್ಷ್ಮಗ್ರಹಿಕೆ ವ್ಯಕ್ತವಾಗಿರುವುದೇ ಸಾಕ್ಷಿ.

3.11 ಮೇಲಿನ ಉದಾಹರಣೆಗಳನ್ನು ನೋಡಿದಾಗ ಶಿಷ್ಟಕನ್ನಡ ಮತ್ತು ದೇವನೂರರ ಕೃತಿಗಳ ಕನ್ನಡಗಳಲ್ಲಿ ಕೇವಲ ಧ್ವನಿ ಮತ್ತು ರೂಪ ವ್ಯತ್ಯಾಸಗಳು ಕಾಣಿಸಿಕೊಂಡಿವೆಯೇ ವಿನ: ಅರ್ಥ ಮತ್ತು ವಸ್ತು ಒಂದೇ ಆಗಿವೆ. ಇವುಗಳ ಈ ವ್ಯತ್ಯಾಸಕ್ಕೆ ಕಾರಣಗಳೆಂದರೆ ದೇವನೂರರ ಕೃತಿಗಳ ಕನ್ನಡದಲ್ಲಿ ಧ್ವನಿಗಳು ಲೋಪಗೊಂಡಿವೆ. ಹೀಗಾಗಿ ಧ್ವನಿ ವ್ಯತ್ಯಾಸ ಕಾಣಿಸಿಕೊಂಡಿದೆ.

3.12 ರೂಪವ್ಯತ್ಯಾಸವಾಗಲು ಕಾರಣ ಸಾಮಾಜಿಕ ಪ್ರಭೇದವಾಗಿದೆ. ಅಂದರೆ ದೇವನೂರರ ಕೃತಿಗಳ ಕನ್ನಡವು ದಲಿತಭಾಷೆಯಾಗಿದ್ದು ಗ್ರಾಮೀಣ ಪ್ರದೇಶದ್ದಾಗಿದೆ. ಶಿಷ್ಟಕನ್ನಡವು 'ಮೇಲ್ವರ್ಗ'ದವರ ಹಾಗೂ ನಗರಪ್ರದೇಶದ ಭಾಷೆಯಾಗಿದೆ. ಈ ಎರಡು ಭಾಷೆಗಳ ನಡುವೆ ಸಾಮಾಜಿಕ ವರ್ಗದ ಅಂತರವಿದೆ. ಹೀಗಾಗಿ ಬಳಸುವ ಪದಗಳಲ್ಲಿ ಅರ್ಥ ಮತ್ತು ವಸ್ತು ಒಂದೇ ಆಗಿದ್ದರೂ ರೂಪ ವ್ಯತ್ಯಾಸವಾಗಲು ಕಾರಣವಾಗಿದೆ ಅಷ್ಟೆ. ಇದರಿಂದ ತಿಳಿಯುವುದೇನೆಂದರೆ ಮೂಲಕೃತಿಯಿಂದ ಶಿಷ್ಟಕನ್ನಡಕ್ಕೆ ಬದಲಾಯಿಸಿದರೂ ಕೂಡ ವಸ್ತು ಬದಲಾಗುವುದಿಲ್ಲ ಎಂಬುದು.

3·13 ಸಾಮಾನ್ಯವಾಗಿ ಎಲ್ಲಾ ಪ್ರತಿಕ್ರಿಯೆಗಾರರು ಕೂಡ ಮೂಲಕೃತಿ ಬೀರುವ ಪರಿಣಾಮ ಶಿಷ್ಟಕನ್ನಡಕ್ಕೆ ಪರಿವರ್ತಿಸಿದಾಗ ಬೀರುವುದಿಲ್ಲ ಎನ್ನುತ್ತಾರೆ. ಇದು ಕೂಡ ನಿಜವೇ. ಏಕೆಂದರೆ ಮೂಲಕೃತಿಯ ಭಾಷೆ ದಲಿತ ಭಾಷೆ. ಇದು ದಲಿತರಿಂದ ಹಾಗೂ ಗ್ರಾಮೀಣ ಪ್ರದೇಶದ ದಲಿತರ ಪರಿಸರದಲ್ಲಿ ಬೆಳೆದಂತ ಭಾಷೆ. ಹೀಗಾಗಿ ಗ್ರಾಮೀಣ ಪ್ರದೇಶದ ಸೊಗಡನ್ನು, ಗ್ರಾಮೀಣ ಸಮಾಜದ ದಲಿತರ ಸಂಸ್ಕೃತಿಯನ್ನು, ಅವರ ಜೀವನ ವಿಧಾನವನ್ನ, ಅಲ್ಲಿನ ಪರಿಸರ, ಪರಿಸ್ಥಿತಿಗಳನ್ನು ಇದು ಅಭಿವ್ಯಕ್ತಿಸುವಲ್ಲಿ ಉಂಟಾಗುವ ಪರಿಣಾಮ ಶಿಷ್ಟಕನ್ನಡದಲ್ಲಿ ಉಂಟಾಗುವುದಿಲ್ಲ. ಏಕೆಂದರೆ ಶಿಷ್ಟ ಕನ್ನಡದ ಭಾಷೆ ದಲಿತರ ಭಾಷೆಯೂ ಅಲ್ಲ. ಗ್ರಾಮೀಣ ಪ್ರದೇಶದ ಭಾಷೆಯೂ ಅಲ್ಲ. ಇದು ನಗರ ಪ್ರದೇಶದ ವಿದ್ಯಾವಂತರ ಭಾಷೆ. ಇದರಿಂದಾಗಿ ಮೂಲಕೃತಿಯಿಂದ ಶಿಷ್ಟಭಾಷೆಗೆ ಪರಿವರ್ತಿಸಿದಾಗ ಅರ್ಥ ಮತ್ತು ವಸ್ತು ಒಂದೇ ಆದರೂ ಕೂಡ ಮೂಲಕೃತಿಯಲ್ಲಿನ ಪರಿಣಾಮ (effect) ಬೀರಲು ಸಾಧ್ಯವಾಗುವುದಿಲ್ಲ. ಈ ಹಿಂದೆ ಹೇಳಿದಂತೆ ಯಾವುದೇ ಒಂದು ಜನಾಂಗದ ಚಿತ್ರಣವನ್ನು ಕನ್ನಡದ ಯಾವುದೇ ಪ್ರಭೇದದಲ್ಲಾಗಲಿ (ಅಥವಾ ಜಗತ್ತಿನ ಯಾವುದೇ ಭಾಷೆಯಲ್ಲಾಗಲೀ) ಹೇಳಬಹುದು ಅಷ್ಟೆ ವಿನಃ ಮೂಲಕೃತಿಯಲ್ಲಿನ ಪರಿಣಾಮ ಸಾಧ್ಯವಿಲ್ಲ. ಆದ್ದರಿಂದ ಆಯಾಯ ಜನರ ಚಿತ್ರಣ ಆಯಾಯ ಭಾಷೆಲೇ ಆದರೆ ಸ್ವಾಭಾವಿಕ ಮತ್ತು ಅಥೆಂಟಿಕ ಹಾಗೂ ಮೂಲದ ಪರಿಣಾಮ ವ್ಯಕ್ತವಾಗಲು ಸಾಧ್ಯ.

3·14 " ಈ ಕೃತಿಯಲ್ಲಿನ ಕಥೆಗಿಂತ ಬಹಳ ಗಟ್ಟಿಯಾಗಿರುವ ಅಂಶ ಅದರ ಭಾಷೆ ಮತ್ತು ಅದರ ನಿರೂಪಣಾಶೈಲಿ" ಎಂದು ಪ್ರತಿಕ್ರಿಯೆಗಾರರೊಬ್ಬರು ಹೇಳುತ್ತಾರೆ (ಅನುಬಂಧ – 2 ಪುಟ – 301) ಇಲ್ಲಿ ಕಥೆಗಿಂತ ಬಹಳ ಗಟ್ಟಿಯಾಗಿರುವ ಅಂಶ ಅದರ ಭಾಷೆ ಅನ್ನುವುದು ಹುರುಳಿಲ್ಲದ ಮಾತು. ಆದರೆ 'ಅದರ ನಿರೂಪಣಾ ಶೈಲಿ' ಎನ್ನುವುದನ್ನು ಒಪ್ಪಿಕೊಳ್ಳಬಹುದು. ಏಕೆಂದರೆ ಇದೇ ಭಾಷೆಯನ್ನು ಮತ್ತೊಬ್ಬ ದಲಿತ ಸಾಹಿತಿ ಬಳಸಿಕೊಂಡು ಕಾದಂಬರಿ ಬರೆದರು ಕೂಡ, ಈ ಕಾದಂಬರಿಯ ರೀತಿ ಭಾಷೆಯನ್ನು ನಿರೂಪಿಸಲು ಕಷ್ಟಸಾಧ್ಯ. ಏಕೆಂದರೆ ಎಷ್ಟೋ ಜನ ಸಾಹಿತಿಗಳು ಈಗಾಗಲೇ ದೇವನೂರರ ನಿರೂಪಣಾಶೈಲಿಯನ್ನು ಅನುಕರಿಸಲು ಹೋಗಿ ಎಡವಿದ್ದಾರೆ. ಆದ್ದರಿಂದ

ಇಲ್ಲಿ ಭಾಷೆಗಿಂತ ಅದರ ನಿರೂಪಣಾ ಶೈಲಿ ಪ್ರಮುಖವಾದುದು ಎಂಬ ಮಾತು ಸತ್ಯ. ಇದರಿಂದಾಗಿಯೇ ಕನ್ನಡದ ಪ್ರಸಿದ್ಧ ಸಾಹಿತಿ ಚದುರಂಗರವರು "ಹೊಯ್ಸಳ ಶಿಲ್ಪಿಗಳು ಕಲ್ಲನ್ನು ಮೇಣ ಎನ್ನುವ ಹಾಗೆ ಉಪಯೋಗಿಸಿದಂತೆ 'ಕುಸುಮಬಾಲೆ'ಯಲ್ಲಿ ಭಾಷೆಯು ಮೈದಾಳಿದೆ" ಎಂದು ಹೇಳಿರುವುದು.

3.15 "ಗ್ರಾಮೀಣ ಜನರು ದೊಡ್ಡ ದೊಡ್ಡ ನಗರಗಳ ಬಗೆಗೆ ಕಟ್ಟಿಕೊಂಡಿರುವ ಕಲ್ಪನೆಯನ್ನು ಗ್ರಾಮೀಣ ಭಾಷೆಯಲ್ಲೇ ಅಭಿವ್ಯಕ್ತಿಸಬೇಕೇ ಹೊರತು ನಗರ ಪ್ರದೇಶದ ಭಾಷೆಯಲ್ಲಿ ಹಿಡಿದಿಡಲು ಕಷ್ಟವಾಗುತ್ತದೆ" ಎಂದು ಒಬ್ಬ ಪ್ರತಿಕ್ರಿಯೆಗಾರ ಹೇಳುತ್ತಾರೆ (ನೋಡಿ: ಅನುಬಂಧ –2) ಇವರ ಹೇಳಿಕೆ ಗ್ರಾಮೀಣ ಜನರ ಕಲ್ಪನೆಗಳನ್ನು ಸುಲಭವಾಗಿ ಶಿಷ್ಟಕನ್ನಡದಲ್ಲೂ ಹಿಡಿದಿಡಲು ಸಾಧ್ಯ. ಆದರೆ ಗ್ರಾಮ್ಯಭಾಷೆಯಲ್ಲೇ ಅಭಿವ್ಯಕ್ತಿಸುವುದರಿಂದ ಹೆಚ್ಚು ಪರಿಣಾಮಕಾರಿಯಾಗಿರುತ್ತದೆಂದು ಹೇಳಬಹುದು. ಅಲ್ಲದೆ ಗ್ರಾಮ್ಯ ಕನ್ನಡ ಪದಗಳು ಶಿಷ್ಟಕನ್ನಡ ಪದಗಳಿಗಿಂತ ಭಾಷಿಕವಾಗಿ ನಾವು ಎರಡನೆ ಅಧ್ಯಾಯದಲ್ಲಿ ತೋರಿಸಿರುವ ವ್ಯತ್ಯಾಸಗಳಂತೆ ಬೇರೆಯಾಗುವುದರಿಂದ ಪರಿಣಾಮ ಬೇರೆಯಾಗುತ್ತದೆ. ಶಿಷ್ಟ ಕನ್ನಡದ ಪರಿಣಾಮವು ಬೇರೆಯಾಗುತ್ತದೆ.

ಉದಾ: ಕುಸುಮಬಾಲೆಯ ಒಂದು ವಾಕ್ಯವನ್ನು ನೋಡಿ:

"ಅಯ್ಯೋ ಪೆದ್ದೀ... ಬೊಂಬಾಯಿ ಅಂದ್ರೆ ಯಾನಂದ್ಕೊಂಡಿದೀಯ ನೀನು? ಸುಮ್ನೆ ಕೂತನ ಇವ ಯಾನೂ ಇಚಾರ್ಸಲ್ಲ ಅಂದ್ಕಬುಟ್ಯ? ತಿಳ್ಕ... ಆ ಬೊಂಬಾಯ್ನ ಅದ್ಗ ಇರೋದೆಲ್ಲಾ ಬರೇ ನೀರಂತಕನ. ಈ ನೆಲ ಅನ್ನೋ ಪದವ ಮಾರ್ತ್ಯೆನ್ನ ಅಗಲಕಾ ಇಲ್ವಂತಕನ. ಅಲ್ಲಿಗ ಹೋದವರು... ಯಾನಾರಾ ತಪ್ಪಸ್ಕಂಡ್ರಾತು ಹರಿಹರಬ್ರಮ್ಮನಗೂ ಮುಕ್ಷ ಹಿಂದ್ಕ ಅವರ ಊರ್ಗ ತಲ್ಪಕ್ ಆಗಂಥಾ ಊರಂತ ಅದೂ! ಇನ್ನು ನಮ್ಮಂಥವರ್ಗ ಆದಾದ? ಅಯ್ಯೋ ಅದ್ರ ಕಥ್ ನಾ ಏನೇಳ್ಲಿ ತಕಾ..."

"ಅದಿಂಯಾ ಆ ದೊರ ದರ್ಬಾರ್ನ ಗೇಟ್ನತಪ ಒಂದು ವಾರ್ಗಂಟ ಕಾಯ್ಕಂಡಿದ್ದು. ಹೆಂಗುವಿ ಜಾತ್ರಿ ಮಾಡಕ ಅಲ್ಲಿಗ ಬರ್ತಾನಲ್ಲ ಹೆಂಗಾವಿ..."

"ಅಂಥಾಕ್ಕಿಂತೂ ಪೆದ್ದೀ··· ಹೋಗಾಕ ಒಂದು ಪಕ್ಷ ನಿಶ್ಚಯಸ್ಕಂಡ್ರ ಅಂತಾನೇ ಅಂದ್ರ· ಅಲ್ಲಿಗೇನಾರ ನಡ್ಕಂಡು ಹೋಗಾವರನಾರೂ ಇದ್ದಾರಂದ? ರೈಲಿಗಿಂತು ಹೋಗಾಕ ಮುಂಗಡ್ಜನ ಬರಾಕ ಮುಂದ್ಜನ ತಕ್ಕಂಡದಂತಲ್ಲಾ! ಅವುಕ್ಕಿಲ ಒಂದ ಸಲ ನೂರ ರೂಪಾಯಿ ಬಡಂದಂತಲ್ಲಾ! ಎಷ್ಟು ಬೇಕಾದ್ರೂ· ಅದ ನೀನೇ ಲೆಕ್ಕಹಾಕ···"

"ಅದಿಂತೂ ಇನೊಂದು ಗಂಡೂಕ ಜೀತಕ್ಕ ಇರುಸಬುಡಾವು· ಹೊಲ ಭೋಗ್ಯಕ್ಕ ಹಾಕಬುಡಾವು···"

"ಅಂತೂಕ ಪೆದಬುದ್ದೀ··· ಅಷ್ಟಾದ್ರೂ ಸಾಕಂತ್ರ ಅಂದ್ಕಬುಟ್ಟಿ· ಅಂಥಾದ್ರ· ನಿನ ಮಾತ್ಕ ಪರಕಾರವಾಗಿ ಕಾಸಿದಂವರ ಕಾಲ್ಕಟ್ಗಂಡು ಸಾಲ ಸೋಲ ಮಾಡ್ಕಂಡೂ ಅವನ್ಕ ನೋಡ್ಕಂ ಅಂತ್ಲೇನೇ ಇಟ್ಗ· ನಂ ನೋಡೆಂಟೇ ಆ ಕಡ್ಕಂ ದೂರ, ಓಹೋ ಈ ಜೆನ್ಕ ಹೋಲಾರವ್ಕ ಅಂತ ತಿಳ್ಕಂಡು ನಂ ಕೂಸಿನ ತಲ ಕಡ್ಕಂ ಆ ಊರಾದೆಗಲ್ಲಾ ಇರಾದು ಬರೀ ನೀರಂತಲ್ಲಾ··· ಅಲ್ಲಿಗ ಏಸೀಸಬುಟ್ರ ನೀನೂವಿ ನಾನೂವಿ ಅಲ್ಲಿ ಏನ ತಾನೇ ಮಾಡಾಗಿದಂವ?"

"ಅವ್ವಿ, ನಾವು ಆ ದೂರ ಕಂಡೇಟಿಗಿಂತು ಅಡ್ಡಾದ್ರೂ··· 'ನೀವು ಡಾಕ್ಟ್ರಗ ತಕ್ಕಂಡಿರೂ ಧನ್ವಂತರಿ ಸಪ್ಪೊರ್ ಹಟ್ಟೀ ಜೀತಗಾರ್ರು ನೋಡಿ ನಾವು··· ಸುವ್ವಿಂತು ಇಟ್ಟಗ ಬಂದಿದ್ದ ಅಕ್ಕೀ···' ಅನ್ನವು· ಅಮ್ಮಾಕ್ಕೂ ಗ್ಯಾನಾದ್ರೂ ಕೇಳಲಾದ್ರ··· 'ಈ ಧನ್ವಂತರಿ ಸಪ್ಪೊರ್ ಊರಲ್ಲಿವಿ ದೊಡ್ಡ ಪಟವಾಟಿಂತು ಅಕ್ಕೀ· ಅವರೊಂದು ಅಂಗಡಿ ಊರಾಲ್ಲದ ನೋಡಿ··· ಅದ ಈ ಏಡು ನೇತ್ರಗಳಿಂದಲೂ ನೋಡಕ ಆಗಲ್ಲ ಅಕ್ಕೀ, ಅದೂ ಮಾರಾಳ ಉದ್ದಂ ಅಗಲ! ಅಲ್ಲೀ ಜೋಳಕ್ಕಿಂತ ರಾಗಿಕಿಂತ ಅಕ್ಕಿಂತ ಆ ಉಪ್ಪಿಟ್ಟ ರವಕ್ಕಂತ ಅಂಥಾ ಕಣ್ಣಿಗ ಬೇಕಬೇಕಾದ್ರೂ ಕೇಳೀ ಆ ಬೆಲ್ಲ ಬೀಸೊಪ್ಪು ಕಾಫಿಪುಡೀ ಮೂಟಿಮೂಟಿ ಬಿದಂವ ಅಕ್ಕೀ ಅವ್ವಾ! ಒಂದಾ ಎರಡಾ···' ಅನ್ನವು· ಅದೇ ನಾವು ತಿರಗ ಊರಗ ಬರಾಂಗ, ಧನ್ವ ಸುಪ್ಪೊ ಅಷ್ಟುದೂರ ಬಂದವ್ಕ ಥರ ಮಾಡಿ, ಬೆರಳ ಸಂದೀಲಿ ಸಿಕ್ಕಿಸಿಕಂಡಿದ್ದ 'ಅವ್ವಿ ತಕಾ··· ನೂರ ರೂಪಾಯಿಗ' ಅಂತ ಕೊಡಲಾರ···?"

"ಅಯ್ಯಯ್ಯೋ ಪೆದಬುದ್ಧೀ ಕೇಳು... ನಿನ ಮಾತ ಕಟ್ಗಂಡು ಯಾನೋ ಮಾಡಕ ಅಂತ ಹೋಗೀ ಇನ್ನೇನೋ ಆದೂದು ಸುಮ್ಕಿರಾ. ನಮ್ಮ ಆ ಕ್ರಿಯಾ ಒಂದು ಸುದಂ ಇದ್ರಂ ಒಂದಲ್ಲಾ ಒಂಜಿನ ಅವ್ನೇ ಬತ್ತಾನಕನಾ. ಸಾಸ್ತ್ರ ಹೇಳೌವ್ನ ರೂಪಂಲಿ ಬರಬೌದೂ... ದಾನಯ್ಯನ ರೂಪಂಲಿ ಬರಬೌದು... ಮಾಟ ಮಂತ್ರದವ್ನ ರೂಪಂಲಿ ಬರಬೌದೂ..."

"ಯಾವ ರೂಪಂಲಾಲ್ರೂ ಅಗ್ಲಿಕನಾ... ಯಾವತ್ತಾರೂ... ಒಂಜಿನಾರೂ.... ಬಂದನಾ...?"

" ಬದ್ಧೀ? ಸಂಬಂಜ ಅನ್ನೋದು ದೊಡ್ಡದು ಕನಾ...!"
ಇದರ ಶಿಷ್ಟ ಕನ್ನಡೀಕರಣ ಈ ರೀತಿ ಇದೆ:

"ಅಯ್ಯೋ ಪೆದ್ದೀ... ನೀನು ಬೊಂಬಾಯಿ ಅಂದರೆ ಏನಂದುಕೊಂಡಿದ್ದೀಯ? ಸುಮ್ಮನೆ ಕುಳಿತಿದ್ದಾನೆ. ಇವನು ಏನನ್ನು ವಿಚಾರಿಸಿಲ್ಲ ಅಂದುಕೊಂಡುಬಿಟ್ಟಿದ್ದೀಯ? ತಿಳಿದಿಕೊ... ಆ ಬೊಂಬಾಯಿಯಂತು ಅಚೆಗೆ ಇರೋದೆಲ್ಲಾ ಬರೇ ನೀರಂತೆ. ಈ ನೆಲ ಅನ್ನೋ ಪದ ಮೂರು ಪೈಸೆಯ ಅಗಲದಷ್ಟು ಇಲ್ವಂತೆ. ಅಲ್ಲಿಗೆ ಹೋದವರು.... ಏನಾದರೂ ತಪ್ಪಿಸಿಕೊಂಡರಂತು ಹರಿಹರಬ್ರಹ್ಮನಿಗು ಕೂಡ ಹಿಂದಕ್ಕೆ ಅವರ ಊರಿಗೆ ತಲುಪುವುದಕ್ಕೆ ಆಗದಂಥ ಊರಂತೆ ಅದು! ಇನ್ನು ನಮ್ಮಂಥವರಿಗೆ ಆದೀತೆ? ಅಯ್ಯೋ ಅದರ ಕಥೆಯನ್ನ ನಾನು ಏನೇಳ್ಲಿ ತಗೊ..."

"ಅದೇ ಆ ಶ್ರೀಮಂತನ ದರ್ಬಾರಿನ ಗೇಟ ಹತ್ತಿರ ಒಂದು ವಾರದಕನಕ ಕಾಯಂ ಕೊಂಡಿರುವುದು. ಹೇಗೂ ಕೆಲಸ ಮಾಡುವುದಕ್ಕೆ ಅಲ್ಲಿಗೆ ಬರುತ್ತಾನಲ್ಲ..."

"ಅಯ್ಯಯ್ಯೋ ಪೆದಮ್ಮ... ಹೋಗುವುದಕ್ಕೆ ಒಂದು ಪಕ್ಷ ನಿಶ್ಚಯಿಸಿಕೊಂಡವ ಅಂತಾನೆ ತಿಳಿಕೋ. ಅಲ್ಲಿಗೇನಾದರು ನಡೆದುಕೊಂಡು ಹೋಗೋರೀತಿನಾದರು ಇದೂಂದೆ? ರೈಲೆ ಹೋಗುವುದಕ್ಕೆ ಮೂರು ದಿನ, ಬರುವುದಕ್ಕೆ ಮೂರು ದಿನ ತೆಗೆದುಕೊಳ್ಳುತ್ತದಂತಲ್ಲಾ! ಆಮೇಲೆ ಒಬ್ಬರಿಗೆ ನೂರು ರೂಪಾಯಿ ಬಿದ್ದಂತಲ್ಲಾ! ಎಷ್ಟು ಬೇಕಾದೀತು. ಅದನ್ನ ನೀನೆ ಲೆಕ್ಕ ಹಾಕಿಕೊ..."

"ಅದೇನೆ ಇನ್ನೊಂದು ಹುಡುಗನನ್ನು ಜೀತಕ್ಕೆ ಇರಿಸಿಬಿಡೋಣ. ಹೊಲವನ್ನು ಭೋಗ್ಯಕ್ಕೆ ಹಾಕಿಬಿಡೋಣ...."

"ಅಂತೂ ಪೆದಮ್ಮ... ಅಷ್ಟಾದರು ಸಾಕಾಗುತ್ತದೆ ಎಂದುಕೊಂಡುಬಿಟ್ಟೆಯಾ. ಅಯ್ಯೊ. ನಿನ್ನ ಮಾತಿನ ಪ್ರಕಾರವಾಗಿ ಹಣವಿದ್ದವರ ಕಾಲ್ಕಟ್ಟಿಕೊಂಡು ಸಾಲ ಮಾಡಿಕೊಂಡು
ಅವನನ್ನು ನೋಡಿದೆವು ಅಂತಾನೆ ತಿಳಿಯೊ. ನಮ್ಮನ್ನ ನೋಡಿದ ತಕ್ಷಣ ಆ ಕೋಪಿಷ್ಠ ಶ್ರೀಮಂತ ಓಗೋ ಈ ಜೆನ್ನ ದರಿದ್ರರನು ಅಂತ ತಿಳಿದುಕೊಂಡು ನಮ್ಮ ಮಗನ ತಲೆ ಕಡಿದು ಆ ಊರಾಚೆಗೆಲ್ಲ ಇರುವುದು ಬರೀ ನೀರಂತಲ್ಲಾ... ಅಲ್ಲಿಗೆ ಬಿಸಾಕಿಸಿಬಿಟ್ಟರೆ ನೀನೂನು ನಾನೂನು ಅಲ್ಲ ಏನು ತಾನೇ ಮಾಡುವಾಗಿದೆಯೆವು?"

"ಅಂತೂ, ನಾವು ಆ ಶ್ರೀಮಂತ ಕಂಡ ತಕ್ಷಣ ಅಡ್ಡಬಿದ್ದು ನಮಸ್ಕರಿಸಿ 'ನೀವು ಕೆಲಸಕ್ಕೆ ತೆಗೆದುಕೊಂಡಿರುವ ಚೆನ್ನಿರಸಪ್ಪನವರ ಮನೆ ಕೆಲಸದಾಳುಗಳು ಸ್ವಾಮಿ ನಾವು... ಸುಮ್ಮನೆ ಈ ಕಡೆ ಬಂದಿದ್ದೇವು...' ಎನ್ನೋಣ. ಆಮೇಲೂ ಏನಾದರು ಕೇಳಿದರೆ... ಚೆನ್ನಿರಸಪ್ಪನವರದು ಊರಲ್ಲಿ ಕೂಡ ದೊಡ್ಡ ವಹಿವಾಟು. ಅವರದೊಂದು ಅಂಗಡಿ ಊರಲ್ಲಿದೆ ನೋಡಿ... ಅದನ್ನ ಈ ಎರಡು ನೇತ್ರಗಳಿಂದಲೂ ನೋಡುವುದಕ್ಕೆ ಆಗಲ್ಲ, ಅದೂ ಮೂರಾಳು ಉದ್ದ ಅಗಲ! ಅಲ್ಲಿ ಜೋಳವಂತೆ, ರಾಗಿಯಂತೆ, ಅಕ್ಕಿಯಂತೆ, ಆ ಉಪ್ಪಿಟ್ಟಿನ ರವೆಯಂತೆ ಅಂತಾ ಕಣ್ಣಿಗೆ ಬೇಕಾಬೇಕಾದ್ದೂ ಕೇಳೀ ಆ ಬೆಲ್ಲ, ಟೀಸೊಪ್ಪು, ಕಾಫಿಪುಡಿ ಮೂಟೆಮೂಟೆ ಬಿದ್ದಿವೆ, ಅಬ್ಬಬ್ಬಾ! ಒಂದೆ ಎರಡೆ...' ಎನ್ನೋಣ. ಅದೇ ನಾವು ವಾಪಸ ಊರಿಗೆ ಬರುವಾಗ, ಜೆನ್ನ ಸುಮ್ಮನೆ ಅಷ್ಟುದೂರ ಬಂದವನ ರೀತಿ ಮಾಡಿ, ಬೆರಳಿನ ಸಂದಿಯಲ್ಲಿ ಸಿಕ್ಕಿಸಿಕೊಂಡಿದ್ದ 'ಅಮ್ಮಾ, ತಗೊ... ನೂರು ರೂಪಾಯಿಯನ್ನ ಅಂತ ಕೊಡಲಾರನೇ...?"

" ಅಯ್ಯಂತೂ ಪೆದಮ್ಮ ಕೇಳು... ನಿನ್ನ ಮಾತನ್ನು ಕಟ್ಟಿಕೊಂಡು ಏನೊ ಮಾಡುವುದಕ್ಕೆ ಅಂತ ಹೋಗಿ ಇನ್ನೇನೊ ಆದೂದು ಸುಮ್ಮನಿರು. ನಮ್ಮ ಆ ಕೆಲಸ ಒಂದು ಶುದ್ಧ ಇದ್ದರೆ ಒಂದಲ್ಲ ಒಂದು ದಿನ ಅವನೆ ಬರುತ್ತಾನೆ. ಶಾಸ್ತ್ರ ಹೇಳುವವನ ರೂಪದಲ್ಲಿ ಬರಬಹುದು... ದಾಸಯ್ಯನ ರೂಪದಲ್ಲಿ ಬರಬಹುದು... ಮಾಟ ಮಂತ್ರದವನ ರೂಪದಲ್ಲಿ ಬರಬಹುದು...."

" ಯಾವ ರೂಪದಲ್ಲಾದರು ಆಗಲಿ... ಯಾವತ್ತಾದರೂ... ಒಂದು ದಿನವಾದರು... ಬರುತ್ತಾನಾ...?"

" ಬರದೆ? ಸಂಬಂಧ ಅನ್ನುವುದು ದೊಡ್ಡದು ಕಣೆ...!"

ಮೇಲೆ ತೋರಿಸಲಾಗಿರುವ 'ಕುಸುಮಬಾಲೆ' ಕಾದಂಬರಿಯ ಚೆನ್ನನ ತಂದೆತಾಯಿಗಳ ಶಿಷ್ಟಕನ್ನಡದ ಸಂಭಾಷಣೆಯನ್ನು ನೋಡಿದಾಗ ಗ್ರಾಮೀಣ ಜನರ ಕಲ್ಪನೆಯ ಚಿತ್ರಣಗಳನ್ನು ಶಿಷ್ಟಕನ್ನಡದಲ್ಲೂ ಕೂಡ ಅರ್ಥ ಮತ್ತು ವಸ್ತುವಿನ ದೃಷ್ಟಿಯಿಂದ ಹಿಡಿದಿಡಲು ಸಾಧ್ಯ ಎಂಬುದನ್ನು ಯಾರೂ ತಳ್ಳಿಹಾಕಲಾರರು. ಈ ಕೆಳಗಿನ ಮೂಲಕೃತಿಯ ಪದ, ಪದಪುಂಜ, ವಾಕ್ಯಗಳಾದ:—

ಮೂರ್ಕಾಸ್ನ ಆಗಲಕುಲ ಇಲ್ಲಂತಕನ,
ಆ ದೊರ ದರ್ಬಾರ್ನ ಗೇಟ್ನತಪ,
ಹೆಂಗುವಿ ಚಾಕ್ರಿ ಮಾಡಕ ಅಲ್ಲಿಗ ಬತ್ತಾನಲ್ಲ,
ಅದಿಯಾ ಇನ್ನೊಂದು ಗಂಡೂನ ಜೀತ್ಕ ಇರುಸಬುಡಾವ,
ಅಯ್ಯಯೋಕ್ಕ ಪೆಚ್ಚ,
ನುಮಿನ್ಯ ಇತ್ತಗ ಬಂದಿದ್ದ ಅಲೇ... ಅನ್ನವ,
ಆಣೈ,
ಒಂಜಿನ,

ಇವುಗಳು ಗ್ರಾಮೀಣ ಪ್ರದೇಶವನ್ನು, ಗ್ರಾಮೀಣ ಜನರನ್ನ, ಅವರ ಜೀವನ ಮಟ್ಟವನ್ನ, ನೇರವಾಗಿ ಅಭಿವ್ಯಕ್ತಿಸುತ್ತ, ಗ್ರಾಮ್ಯದ ಸೊಗಡನ್ನ ಬೀರಿದರೆ,

ಇವುಗಳ ಶಿಷ್ಟಕನ್ನಡೀಕರಣ ರೂಪಗಳಾದ:

ಮೂರು ಪೈಸೆ ಆಗಲಕೂ ಇಲ್ಲಂತೆ,
ಆ ಶ್ರೀಮಂತನ ದರ್ಬಾರಿನ ಗೇಟ ಹತ್ತಿರ,
ಹೇಗು ಕೆಲಸ ಮಾಡುವುದಕ್ಕೆ ಅಲ್ಲಿಗೆ ಬರುತ್ತಾನಲ್ಲ,
ಅದೇನೆ ಇನ್ನೊಂದು ಹುಡುಗನನ್ನು ಜೀತಕ್ಕೆ ಇರಿಸಿಬಿಡೋಣ,

ಅಯ್ಯೋಯ್ಯೋ ಪೆದ್ದೀ,

ಸುಮ್ಮನೆ ಈ ಕಡೆ ಬಂದಿದೆಂವ··· ಎನ್ನೋಲೀ,

ಅಮ್ಮಾ,

ಒಂದು ದಿನ,

ಇವುಗಳು ನಗರಪ್ರದೇಶದ ಸೊಗಡನ್ನು ಬೀರುತ್ತವೆ. ಇದರಿಂದ ಮೂಲಕೃತಿಯ ಸಂವೇದನೆಯನ್ನು ಇಲ್ಲಿ ಕಾಣಲು ಸಾಧ್ಯವಾಗುವುದಿಲ್ಲ.

" ಹೆಂಗುವಿ ಚಾಕ್ರಿ ಮಾಡಕ ಅಲ್ಲಿಗ ಬತ್ತಾನಲ ಹೆಂಗೂವಿ " ಎಂಬುದರಲ್ಲಿ ವ್ಯಕ್ತವಾಗುವ ಆಶಾಭಾವನೆ,

" ಹೇಗು ಕೆಲಸ ಮಾಡುವುದಕ್ಕೆ ಅಲ್ಲಿಗೆ ಬರುತ್ತಾನಲ್ಲ " ಎಂಬುದರಲ್ಲಿ ವ್ಯಕ್ತವಾಗುವುದಿಲ್ಲ. ಇವು ಅರ್ಥದ ದೃಷ್ಟಿಯಿಂದ, ವಸ್ತುವಿನ ದೃಷ್ಟಿಯಿಂದ ಎರಡು ಒಂದೇ. ಆದರೆ ಗ್ರಾಮೀಣ ಸೊಗಡಿನ ದೃಷ್ಟಿಯಿಂದ, ಅದು ಬೀರುವ ಪರಿಣಾಮದ ದೃಷ್ಟಿಯಿಂದ ಮಾತ್ರ ಬೇರೆ ಅನ್ನಿಸುತ್ತದೆ.

ಒಟ್ಟಾರೆ ಮೂಲಕೃತಿಯಿಂದ ಶಿಷ್ಟಭಾಷೆಗೆ ಪರಿವರ್ತಿಸಿದಾಗ ವಸ್ತು ಮತ್ತು ಅರ್ಥ ಬದಲಾಗುವುದಿಲ್ಲ. ಕೇವಲ ಭಾಷೆ ಅಥವಾ ಪ್ರಭೇದ ಹಾಗು ಎರಡನೆ ಅಧ್ಯಾಯದಲ್ಲಿ ಪಟ್ಟಿಮಾಡಿ ತೋರಿಸಲಾಗಿರುವ ಭಾಷಿಕ ವ್ಯತ್ಯಾಸಗಳು ಮಾತ್ರ ಬದಲಾಗುತ್ತವೆ. ಈ ಭಾಷಿಕ ವ್ಯತ್ಯಾಸಗಳಿಂದಾಗಿ ಉದಾ: ಮೂಲಕೃತಿಯಲ್ಲಿ ಪುರುಷರನ್ನು ಸಂಬೋಧಿಸಿ ಕರೆಯುವ ಪದವಾದ 'ಯಾನ್ರ' ಶಿಷ್ಟಕನ್ನಡದಲ್ಲಿ 'ಏನ್ರಲೋ' ಎಂದಾಗುತ್ತದೆ. 'ಯಾನ್ರ' ಎಂಬುದು ಗ್ರಾಮೀಣ ಪ್ರದೇಶದ ಭಾಷೆಯಾದರೆ 'ಏನ್ರಲೊ' ಎಂಬುದು ನಗರಪ್ರದೇಶದಲ್ಲಿನ ಭಾಷೆಯಾಗಿದೆ.

3.16. ಸಂಗ್ರಹಿಸಿ ಹೇಳುವುದಾದರೆ ವಸ್ತು, ತಾತ್ವಿಕತೆ ಪ್ರಭೇದಾಂತರೀಕರಣದಿಂದ ಬದಲಾಗುವುದಿಲ್ಲ. ವಸ್ತು (Theme), ತಾತ್ವಿಕತೆ ಮತ್ತು Cognitive meaning ವಸ್ತು–ನಿಷ್ಠ.(ಸಾಹಿತ್ಯಿಕ)

ಗುಣಗಳಾದ ಧ್ವನಿ, ರಸವತ್ತತೆ, ಸತ್ವಯುತತೆ, ಕಾವ್ಯಮಯತೆ, ತೀವ್ರತೆ, ಗಟ್ಟಿತನ, ಸೂಚ್ಯತೆ ಮುಂತಾದವು ಭಾಷೆ-ನಿಷ್ಠ ಅಥವಾ ಪ್ರಭೇದ-ನಿಷ್ಠ. ಇದರಿಂದಾಗಿ "ಕುಸುಮಬಾಲೆ"ಯ ಶಿಷ್ಟ ಕನ್ನಡದ ರೂಪ ಕಥನಾತ್ಮಕವಾಗಿ ಒಂದೇ ಆದರೂ, ಮೂಲಕೃತಿಯ ವಸ್ತುವನ್ನ ಸಮರ್ಥವಾಗಿ ಹಿಡಿದಿಟ್ಟರೂ ಅಂತರಪ್ರಭೇದಾತ್ಮಕ ತೋರ್ಕೆಯಲ್ಲಿ ಏನನ್ನೋ ಕಳೆದುಕೊಂಡ ಹಾಗೆ. ಒಂದು ಮಜಲಿನಲ್ಲಿ ಎರಡೂ ಒಂದೇ, ಇನ್ನೊಂದರಲ್ಲಿ ಬೇರೆ ಬೇರೆ. ಎರಡೂ ಒಂದೇ ಎಂಬ ಮಜಲಿನಲ್ಲಿ ಅರ್ಥ-ರೂಪಗಳ ಸಂಬಂಧ ಬೇರ್ಪಡಿಸಲಾಗುವಂಥ ಸಂಬಂಧ. ಬೇರೆ ಬೇರೆ ಅನ್ನುವ ಮಜಲಿನಲ್ಲಿ ಅರ್ಥರೂಪಗಳ ಸಂಬಂಧ ಬೇರ್ಪಡಿಸಲಾಗದ್ದು, ಅವಿನಾಭಾವ, ಸಾವಯವ.

ವಸ್ತು-ನಿಷ್ಠ denotative ಅರ್ಥ ಮತ್ತು ಪ್ರಭೇದ ನಿಷ್ಠ ಪಾಠಿಕ ಗುಣವಿಶೇಷಗಳ ಅಂತರಪ್ರಕ್ರಿಯೆಯೇ ಕೃತಿಗೆ ಭಾಷೆಯ ಕೊಡುಗೆ.

ಉಪಸಂಹಾರ

ಕನ್ನಡ ಭಾಷಾವೈಜ್ಞಾನಿಕ – ಕಾವ್ಯಮೀಮಾಂಸೆಯಲ್ಲಿ (Linguistic-poetics) ಆಳವಾದ ಒಳನೋಟಗಳನ್ನೊಳಗೊಂಡ ಅಧ್ಯಯನಗಳು ಇಲ್ಲವೆನ್ನಲಾಗದಿದ್ದರೂ ವಿರಳ ಎಂಬುದು ಗಮನಾರ್ಹ. ಸಾಂಖ್ಯಿಕ ಶೈಲಿಶಾಸ್ತ್ರೀಯ ಅಧ್ಯಯನಗಳ ಇತಿಮಿತಿಗಳು ಅಪಾರ. ನಾಮಪದಗಳ ಪ್ರಯೋಗ ಹೆಚ್ಚಾದರೆ ನಾಮಪದೀಯ ಶೈಲಿ ಎಂದೂ, ಕ್ರಿಯಾಪದಗಳ ಪ್ರಯೋಗ ಕೃತಿಯಲ್ಲಿ ಬೇರೆ ವ್ಯಾಕರಣೀಯ ವರ್ಗಗಳ ಪ್ರಯೋಗಕ್ಕಿಂತ ಜಾಸ್ತಿ. ಆದರೆ ಅದನ್ನು ಕ್ರಿಯಾಪದೀಯ ಶೈಲಿ ಎಂದೂ ಅಥವಾ ನಾಮವಿಶೇಷಣ – ಭೂಯಿಷ್ಠ ಕೃತಿ ನಾಮ ವಿಶೇಷಣೀಯ ಶೈಲಿ ಒಳಗೊಂಡಿದೆಯೆಂದೂ ಹೇಳಿದರೆ ಹೆಚ್ಚೇನು ಹೇಳಿದಂತಾಗುವುದಿಲ್ಲ. ಈ ವ್ಯಾಕರಣೀಯ–ವರ್ಗೀಯ ಶೈಲಿಗೂ ಸಂವೇದನೆಗೂ ಸಂಬಂಧ ಕಲ್ಪಿಸಲು ಹೋಗಿ ಕೆಲವರು ಎಡವಿದ್ದಾರೆ. ಇನ್ನು ಕೆಲವರು ಸಾಹಿತ್ಯಿಕ ಕೃತಿಗಳ ವ್ಯಾಕರಣ ಬರೆಯಲು ಹೋಗಿ ಅರ್ಥವಿಲ್ಲದ ಸಂಶೋಧನೆ ಮಾಡಿದ್ದಾರೆ. ವಚನಗಳ ವ್ಯಾಕರಣ ಆ ಕಾಲದ ಕನ್ನಡ ವ್ಯಾಕರಣಕ್ಕಿಂತ ಭಿನ್ನವಾಗಿರಲು ಸಾಧ್ಯವೇ ಇಲ್ಲ. 'ಧರ್ಮಾಮೃತ'ದ ವ್ಯಾಕರಣ ಅಥವಾ ಯಾವುದೇ ಭಾಷಿಕ ಅಂಶ ಆ ಕಾಲದ ಕನ್ನಡಕ್ಕಿಂತ ಒಟ್ಟಂದದಲ್ಲಿ ಅಥವಾ ತಿರುಳಿನಲ್ಲಿ ಭಿನ್ನವಾಗಿರಲು ಸಾಧ್ಯವಿಲ್ಲ. ಆದರೂ ಈ ಕಸರತ್ತುಗಳು ನಡೆದಿವೆ. ಅದಕ್ಕಾಗಿ ಕನ್ನಡ ಭಾಷಾವೈಜ್ಞಾನಿಕ ಕಾವ್ಯಮೀಮಾಂಸಾತ್ಮಕ ಕ್ಷೇತ್ರದ ಸಮೀಕ್ಷೆ ಮಾಡಿ 20ನೇ ಶತಮಾನದ ಬಿಜಾಪುರ ಕನ್ನಡಕ್ಕೂ ಇದೇ ಶತಮಾನದ ಗ್ರಾಮಾಯಣ ಕಾದಂಬರಿಯ ಬಿಜಾಪುರ ಕನ್ನಡಕ್ಕೂ ಹೋಲಿಕೆ ಕೊಟ್ಟು, ಈ ಕ್ಷೇತ್ರದಲ್ಲಿ ಆಳವಾದ ಒಳನೋಟಗಳಿಲ್ಲದ ಅಧ್ಯಯನಗಳೇ ಜಾಸ್ತಿ ಎಂಬುದನ್ನು ಉದಾಹರಣೆಸಹಿತ ತೋರಿಸುತ್ತ ಇಂತಹ ಅಧ್ಯಯನಗಳು ಅರ್ಥವಿಲ್ಲದ್ದು ಎಂದು ಹೇಳಲಾಗಿದೆ.

ಹಾಗಾದರೆ ಒಂದು ಕೃತಿಯ ಮೂಲ ತಾತ್ವಿಕ ಘನತೆಗೆ ಆ ಕೃತಿಯ ಭಾಷೆಯ ಕೊಡುಗೆ ಏನು ಅಂತ ಕೇಳಬಹುದು. ಇದಕ್ಕಾಗಿ ಕನ್ನಡ ಸಾಹಿತ್ಯ ಲೋಕದಲ್ಲಿ ಬೆರಳೆಣಿಕೆಯಷ್ಟು ಕೃತಿಗಳನ್ನ ತಮ್ಮದೇ ಆದ ನಿರೂಪಣಾ ಶೈಲಿಯ ಮೂಲಕ ಬರೆದು ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಹಾಗೂ ಪ್ರಸಿದ್ಧಿಯನ್ನು ಗಳಿಸಿದ ದೇವನೂರು ಮಹಾದೇವರ ಕೃತಿಗಳನ್ನು ತೆಗೆದುಕೊಂಡು ನೋಡಲಾಗಿದೆ.

ವಸ್ತು ಮತ್ತು ಆಕೃತಿ ಭಾಷೆಯ ಮೂಲಭೂತ ವೈರುಧ್ಯ. ಶಾಸ್ತ್ರೀಯವಾಗಿ ನೋಡಿದರೆ ವಸ್ತು ಮತ್ತು ಆಕೃತಿಗಳ ನಡುವಣ ಸಂಬಂಧ ಅನೈಸರ್ಗಿಕ(arbitrary). ಆದರೆ ಭಾಷಿಕನಿಗೆ ಅದು ಸ್ವಾಭಾವಿಕ, ಪ್ರಕೃತಿ–ಸಹಜವಾದುದು. ಈ ಸ್ವಾಭಾವಿಕ ಸಂಬಂಧ ಸಾಹಿತ್ಯಿಕ ಕೃತಿಯ ಭಾಷೆಗೂ ಅನ್ವಯಿಸುತ್ತದೆ. ಅಲ್ಲದೆ ಇನ್ನೂ ಹೆಚ್ಚಿನ ಅರ್ಥದಲ್ಲಿ ಅದು ನಿಜ. ಒಂದು ಟಿಪಿಕಲ್ ಸಾಹಿತ್ಯಿಕ ಹೇಳಿಕೆಯ ಆಕೃತಿ / ಆಕಾರ ಅದರ ವಸ್ತುವನ್ನು ನಿರ್ಧರಿಸುತ್ತದೆ. ದೇವನೂರರ ಕೃತಿಗಳಲ್ಲಿ ಕಂಡುಬರುವ ವಸ್ತುವನ್ನು ಅವರ ಸಾಹಿತ್ಯದ ಮೂಲಕ ಗುರ್ತಿಸಿ 'ಜೀವನದರ್ಶನ, ಪ್ರತಿಭಟನೆ ಮತ್ತು ಯಥಾಸ್ಥಿತಿ, ವಸ್ತುಸ್ಥಿತಿಯ ಸ್ವೀಕಾರ, ನೀತಿಮೀರಿದ ಜೀವನ ಗ್ರಹಿಕೆ ಹಾಗೂ ದಲಿತ ಜೀವನ ಚಿತ್ರಣ ಹೇಗೆ ಕಂಡುಬರುತ್ತದೆಂದು ನೋಡಲಾಯಿತು.

ಇವುಗಳ (ಕೃತಿಗಳ) ಭಾಷಿಕ ಆಕಾರ ಹೇಗಿದೆ ಎಂಬುದಕ್ಕೆ ನಿರೂಪಕನ ಭಾಷೆಯ ಧ್ವನಿಮುಖ್ಯದ ವ್ಯತ್ಯಾಸಗಳು, ಧ್ವನಿಮಾ ಮುಖ್ಯದ ವ್ಯತ್ಯಾಸಗಳು, ಆಕೃತಿಮಾ ಮುಖ್ಯದ ವ್ಯತ್ಯಾಸಗಳು, ಕೂಡುಪದ(ಸಮಾಸ)ಗಳಲ್ಲಿ ವ್ಯತ್ಯಾಸಗಳು, ವಾಕ್ಯರಚನಿಕ ವ್ಯತ್ಯಾಸಗಳು, ಶಬ್ದಕೋಶೀಯ ವ್ಯತ್ಯಾಸಗಳು, ಪದಗಳಲ್ಲಿ ಧ್ವನಿಬದಲಾವಣೆಗಳು, ದ್ವಿರುಕ್ತಿ ಪ್ರಯೋಗದಲ್ಲಿ ವ್ಯತ್ಯಾಸಗಳು, ಸಂಯುಕ್ತ ಅಕ್ಷರಗಳ ಸರಳೀಕರಣ, ಆಕೃತಿಧ್ವನಿಮಾತ್ಮಕ ವ್ಯತ್ಯಾಸಗಳು ಮತ್ತು ನುಡಿಗಟ್ಟುಗಳಲ್ಲಿ ವ್ಯತ್ಯಾಸಗಳನ್ನು ಶಿಷ್ಟಭಾಷೆಯೊಡನೆ ಹೋಲಿಕೆಮಾಡಿ ನೋಡಲಾಯಿತು. ಇವುಗಳು ಕತೆಗಳ ಮೂಲಭೂತ 'ತೀವ್ರತೆ' ಹಾಗೂ 'ಘನತೆ' ಯಾವ ರೀತಿಯ ಸಂಬಂಧ ಪಡೆದಿವೆ ಎಂಬುದಕ್ಕೆ ನಮೂನೆ ಕತೆಯಾಗಿ ಮೂಲಕೃತಿಯ ಕುಸುಮಬಾಲೆ ಕಾದಂಬರಿ ತೆಗೆದುಕೊಂಡು ಅದನ್ನು ಶಿಷ್ಟಕನ್ನಡೀಕರಣಗೊಳಿಸಿ ಕೆಲವು ಓದುಗರಿಗೆ ನೀಡಲಾಯಿತು. ಅವರಲ್ಲಿ ಹೆಚ್ಚು ಜನರು ಮೂಲಕೃತಿ 'ಕುಸುಮಬಾಲೆ'ಯಲ್ಲಿ ಭಾಷೆನೇ ಮುಖ್ಯ) ಅದನ್ನು ಶಿಷ್ಟ ಕನ್ನಡೀಕರಣಗೊಳಿಸಿರುವುದರಿಂದ ಭಾಷೆ ಜಾಳು ಜಾಳು ಎನಿಸುತ್ತದೆ ಎಂದು ತಮ್ಮ ಪ್ರತಿಕ್ರಿಯೆ ತಿಳಿಸಿದರು. ಮತ್ತೀ ಕೆಲವರು ಮೂಲಕೃತಿಯನ್ನು ಶಿಷ್ಟಕನ್ನಡೀಕರಣ–ಗೊಳಿಸಿರುವುದರಿಂದ ಮೂಲಕೃತಿಯ ವಸ್ತು ಇಲ್ಲಿ ಕಾಣುವುದಿಲ್ಲವೆಂದೂ, ಕೆಲವರು ಶಿಷ್ಟ ಕನ್ನಡೀಕರಣಗೊಳಿಸುವುದರಿಂದ ವಸ್ತು ಬದಲಾಗುವುದಿಲ್ಲವೆಂದೂ ಆದರೆ ಮೂಲದ ಸಂವೇದನೆ ಶಿಷ್ಟ ಕನ್ನಡೀಕರಣದಲ್ಲಿ ಇಲ್ಲ ಎಂದು ತಿಳಿಸಿದರು.

ಎಲ್ಲರ ಹೇಳಿಕೆಗಳನ್ನು ಆಳವಾಗಿ ವಿಶ್ಲೇಷಿಸಿ ನೋಡಿ ಮೂಲಕೃತಿ ಹಾಗೂ ಶಿಷ್ಟ ಕನ್ನಡೀಕರಣದ ಕೃತಿಗಳನ್ನು ಆಳವಾದ ನೋಟಗಳಲ್ಲಿ ನೋಡಿದಾಗ ತಿಳಿದುಬಂದುದು ಮೂಲ ಕೃತಿಯ ವಸ್ತು, ಮತ್ತು, ಅರ್ಥವನ್ನು ಕನ್ನಡದ ಯಾವುದೇ ಪ್ರಭೇದ (ಪ್ರಪಂಚದ ಯಾವುದೇ ಭಾಷೆ)ದಲ್ಲಾಗಲಿ ಹೇಳಲು ಸಾಧ್ಯವೆಂದು, ಇದರಿಂದ ಮೂಲಕೃತಿಯ ವಸ್ತು ಬದಲಾಗುವುದಿಲ್ಲ-ವೆಂದು, ಕೆಲವೊಮ್ಮೆ ಮೂಲಕೃತಿಯ ವಸ್ತುವನ್ನು ಬೇರೆ ಪ್ರಭೇದದಲ್ಲಿ ಒಂದು ಪದದಲ್ಲಿ ಹೇಳಲು ಸಾಧ್ಯವಿಲ್ಲದಿದ್ದಾಗ ಪರ್ಯಾಯವಾಗಿ ಪದಪುಂಜ, ಅಥವಾ ವಾಕ್ಯದ ಮೂಲಕ ಹೇಳಲು ಸಾಧ್ಯವೆಂದು ಕಂಡುಬಂದಿತು. ಆದರೆ ಮೂಲಕೃತಿಯನ್ನು ಶಿಷ್ಟ ಕನ್ನಡೀಕರಣ-ಗೊಳಿಸುವುದರಿಂದ ಭಾಷಿಕವಾಗಿ (ನಾವು ಎರಡನೇ ಅಧ್ಯಾಯದಲ್ಲಿ ತೋರಿಸಿರುವ ವ್ಯತ್ಯಾಸಗಳಂತೆ) ಬದಲಾವಣೆ ಕಂಡುಬರುವುದರಿಂದ ಮೂಲಕೃತಿಯ ಪರಿಣಾಮ ಶಿಷ್ಟಕನ್ನಡದಲ್ಲಿ ಆಗುವುದಿಲ್ಲವೆಂದು ತಿಳಿಯಿತು. ಇದಕ್ಕೆ ಕಾರಣ ಕೆಳಗೆ ಹೇಳಿದಂತೆ ಎಂದು ಕಂಡುಕೊಳ್ಳಲಾಯಿತು.

ಒಂದು ಪ್ರಬಲವಾದ ಕಾರಣ ಆಯಾಯಾ ಜನರ ಚಿತ್ರಣ ಆಯಾಯ ಭಾಷೆಲೇ ಆದರೆ ಸ್ವಾಭಾವಿಕ ಮತ್ತು ಅಥೆಂಟಿಕ್ ಅನ್ನಿಸುವುದು.

ಸಾಹಿತ್ಯಿಕ ಪಠ್ಯದ ಗುಣವಿಶೇಷಗಳಾದ ತೀವ್ರತೆ, ಘನತೆ, ಗಾಂಭೀರ್ಯ, ಗಟ್ಟಿತನ, ಕಾವ್ಯಾತ್ಮಕತೆ, ರಸವತ್ತತೆ, ಸತ್ವಯುತತೆ ವಸ್ತು-ನಿಷ್ಠ ಅಲ್ಲ. ಅವು ಭಾಷಾ-ನಿಷ್ಠ, ಪ್ರಭೇದ ನಿಷ್ಠ ಗುಣಗಳು. ಈ ಭಾಷೆ/ಪ್ರಭೇದ-ನಿಷ್ಠ ಪಾಠ್ಯಕ ಗುಣಗಳ ಅಂತರಪ್ರಕ್ರಿಯೆಯಿಂದ ಒಂದು ಪಠ್ಯದ ಆಂತರಿಕ ರಚನೆ ನಿರ್ಮಾಣಗೊಳ್ಳುತ್ತದೆ.

ಈ ಗುಣವಿಶೇಷಗಳ ಭಾಷಿಕ correlates ಏನು ಎನ್ನುವುದು ಅನುಸಂಧಾನಕ್ಕೆ ಗ್ರಾಸ. ವಸ್ತುನಿಷ್ಠ ಗುಣವಾದ ವಾಚ್ಯಾರ್ಥ(denotative/cognitive) ಮತ್ತು ಪ್ರಭೇದನಿಷ್ಠ ಗುಣವಿಶೇಷಗಳ ಅಂತರಪ್ರಕ್ರಿಯೆಯೇ ಕೃತಿಗೆ, ಕೃತಿಯ ಮೂಲ ತಾತ್ವಿಕ ಘನತೆಗೆ ಭಾಷೆಯ ಕೊಡುಗೆ.

ಅನುಬಂಧ – 1

ಸೂಚಕರ (Informants) ಪಟ್ಟಿ

ಬಿಜಾಪುರ ಕನ್ನಡದ ಬಗ್ಗೆ ಸಾಮಗ್ರಿ ಸಂಗ್ರಹಿಸಲು ಕ್ಷೇತ್ರಕಾರ್ಯ ಕೈಗೊಂಡಾಗ ಬೇಕಾದ ಮಾಹಿತಿಗಳನ್ನು ಒದಗಿಸಿಕೊಟ್ಟವರ ಪಟ್ಟಿ.

1) ಸುರೇಶ್ ಬಿ. ಹುಕಳಿ
ಬಂಜಾಲ ಭಾವಿ(ಅಂಚೆ ಮತ್ತು ಹಳ್ಳಿ)
ಸಿಂದಗಿ ತಾಲೂಕು
ಬಿಜಾಪುರ ಜಿಲ್ಲೆ

2) ಶರಣಬಸವ
ಬಿಜಾಪುರ (ಜಿಲ್ಲೆ)

3) ಭೀಮಣ್ಣ, ಆರ್.
ಬಿಜಾಪುರ (ಜಿಲ್ಲೆ)

<u>ಅನುಬಂಧ – 2</u>

'ಕುಸುಮಬಾಲೆ' ಶಿಷ್ಟೀಕೃತ ರೂಪಕ್ಕೆ ಪ್ರತಿಕ್ರಿಯೆಗಾರರು ಹಾಗು ಅವರ ಪ್ರತಿಕ್ರಿಯೆಗಳು:

1) ಪ್ರತಿಕ್ರಿಯೆಗಾರ: ಅಬ್ದುಲ್ ಕರೀಮ್ (ಗಣಕವಿಜ್ಞಾನ ವಿಭಾಗ)
ಮೈಸೂರು – 6 ಇವರ ಪ್ರತಿಕ್ರಿಯೆ:–

'ಕುಸುಮಬಾಲೆ' ಕೃತಿ ಅಪ್ಪಟ ನಂಜನಗೂಡು/ಚಾಮರಾಜನಗರದ ಗ್ರಾಮಭಾಷೆಯಲ್ಲಿರುವ ಕೃತಿ. ಈ ಕೃತಿಯ ಪಾತ್ರಗಳ ಸಂಭಾಷಣೆಯಷ್ಟೇ ಅಲ್ಲದೆ ಸನ್ನಿವೇಶಗಳ, ಇತರೆ ವಿವರಣೆಗಳು ಸಹ ಚಾಮರಾಜನಗರದ ಗ್ರಾಮ್ಯ ಭಾಷೆಯ ಕಾವ್ಯದ ಶೈಲಿಯಲ್ಲಿ ಮೂಡಿಬಂದಿದೆ. ಮೂಲಕೃತಿಯ ಹೆಚ್ಚುಗಾರಿಕೆ ಮುಖ್ಯವಾದ ಆಕರ್ಷಣೆ, ಗಟ್ಟಿಯಾದ ಅಂಶವೆ ಅದರಲ್ಲಿ ಉಪಯೋಗಿಸಿರುವ ಭಾಷೆ. ಈ ಕೃತಿಯಲ್ಲಿ ಕಥೆಗಿಂತ ಬಹಳ ಗಟ್ಟಿಯಾಗಿರುವ ಅಂಶ ಅದರ ಭಾಷೆ ಮತ್ತು ಅದರ ನಿರೂಪಣಾ ಶೈಲಿ. ಸಾಮಾನ್ಯ ಓದುಗನಿಗೆ ಅದರಲ್ಲೂ ಚಾಮರಾಜನಗರ ಅಥವಾ ಗ್ರಾಮ್ಯಭಾಷೆಯ ಸೋಂಕಿಲ್ಲದ ಸಾಮಾನ್ಯ ಓದುಗನಿಗೆ ಮೂಲ 'ಕುಸುಮಬಾಲೆ' ಸ್ವಲ್ಪ ಕಷ್ಟವೇ ಸರಿ. ಬಹುಶ: ಸಾಮಾನ್ಯ ಓದುಗನಿಗೆ ಗ್ರಾಮ್ಯಭಾಷೆಯ ಈ ಕೃತಿ ಸುಲಭವಾಗಲಿ ಎನ್ನುವ ದೃಷ್ಟಿಯಿಂದಲೇನೊ ಶ್ರೀಯುತ ಎ.ಎನ್.ಮಹದೇವರವರು ಮೂಲಕೃತಿಯನ್ನು ಶಿಷ್ಟಭಾಷೆಯಲ್ಲಿ ರಚಿಸುವ ಪ್ರಯತ್ನ ಮಾಡಿದ್ದಾರೆ. ಈ ಶಿಷ್ಟಭಾಷೆಯ ಕೃತಿಯನ್ನು ಓದಿದಾಗ ಕಂಡುಬಂದ ಅಂಶಗಳು:–

- ಶಿಷ್ಟಭಾಷೆಯ ಕೃತಿ ಮೂಲಭಾಷೆಯ ಕೃತಿಯಲ್ಲಿ ಬರುವ ಕಷ್ಟಾರ್ಥದ ಗ್ರಾಮ್ಯ ಭಾಷೆಯ ಪದಗಳಿಗೆ ಬದಲಿ ಪದಗಳನ್ನು (substitute word) ಬಳಸಿದ್ದಾರೆ. ಬಿಟ್ಟರೆ ವಾಕ್ಯರಚನೆ ಮೂಲಕೃತಿಯಲ್ಲಿ ಬರುವಂತೆಯೆ ಇದೆ.
- ಬಹಳ ಬದಲಾವಣೆ ಏನು ಇಲ್ಲದಿರುವುದು ಕೃತಿಯನ್ನು ಓದಿಸಿಕೊಂಡು ಹೋಗುತ್ತದೆ.

ಶಿಷ್ಟಭಾಷೆಯ ಕೃತಿ ಹೆಸರು ಹೇಳುವಂತೆ ಸಂಪೂರ್ಣ ಶಿಷ್ಟಭಾಷೆಯಲ್ಲಿ ರಚಿತವಾಗಲು ವಿಫಲವಾಗಿದೆ.

ಉದಾ:— ಒಂದು ಕಡೆ ಚೆನ್ನನ ಅಪ್ಪನ ಸಂಭಾಷಣೆಯನ್ನು ಶಿಷ್ಟಕೃತಿಯಲ್ಲಿ ಈ ರೀತಿ ರಚಿಸಿದ್ದಾರೆ " ಓಹೋ... ನಮ್ಮ ತಾರಮ್ಮನ ಅಳಿಮಯ್ಯನವರಲ್ಲವೆ ! ನಮಗೂ ನಿಮಗೂ ಹತ್ತಿರದ ಸಂಬಂಧಕನ ಒಂದು ಬೀಡಿ ಎಸೆದುಬಿಟ್ಟು ಹೋಗಪ್ಪ".

ಈ ವಾಕ್ಯ ಪೂರ್ಣ ಶಿಷ್ಟವೂ ಅಲ್ಲ ಅಥವಾ ಗ್ರಾಮ್ಯವೂ ಅಲ್ಲವಾಗಿದೆ.

ಶಿಷ್ಟಭಾಷೆಯಲ್ಲಾದರೆ ಹೀಗಾಗಬೇಕಿತ್ತು.

" ಓಹೋ.... ನಮ್ಮ ತಾರಮ್ಮನ ಅಳಿಯನವರಲ್ವ. ನಮಗೂ... ನಿಮಗೂ ಹತ್ತಿರದ ಸಂಬಂಧಕಣಯ್ಯ ಒಂದು ಬೀಡಿ ಎಸೆದುಬಿಟ್ಟು ಹೋಗು/ಹೋಗಿ"

ಅಳಿಮಯ್ಯ ಮತ್ತು ಸಂಬಂಧಕನ ಎಂಬುವ ಗ್ರಾಮ್ಯ ಪದಗಳಾಗಿ, ಎಸೆದುಬಿಟ್ಟು ಹೋಗಪ್ಪ ಎಂಬುದು ಶಿಷ್ಟವಾಗಿದೆ.

ಇಂತಹ ಹಲವಾರು ಉದಾಹರಣೆಗಳು ಕೃತಿಯ ಉದ್ದಕ್ಕೂ ಕಾಣುತ್ತ ಹೋಗುತ್ತವೆ.

ಶಿಷ್ಟಕೃತಿ ರಚನಾಕಾರರಿಗೆ ಗ್ರಾಮ್ಯ ಭಾಷೆಯ ಮತ್ತು ಮೂಲ ಕೃತಿ ಭಾಷಾ ಪ್ರಭಾವದಿಂದ ಹೊರಬರಲು ಸಾಧ್ಯವಾಗಿಲ್ಲ. ಆದುದರಿಂದ ಮೂಲ ಗ್ರಾಮ್ಯಭಾಷೆ ಹಾಗೂ ವಾಕ್ಯಗಳನ್ನು ಯಥಾವತ್ ಹಾಗೆ ಉಳಿಸಿಕೊಂಡಿದ್ದಾರೆ.

- ಬಹಳಷ್ಟು ಬದಲಾವಣೆಗಳಿಲ್ಲದಿರುವುದರಿಂದ ಮೂಲಕೃತಿಗಿಂತ ತೀರ ಭಿನ್ನವಾಗಿಯೇನು ಇಲ್ಲ. ಆದುದರಿಂದ ಇದು ಮೂಲಕೃತಿಯಂತೆ ಈ ಕೃತಿಯು ಓದುಗನನ್ನು ತನ್ನ ಜೊತೆಗೆ ಕರೆದೊಯ್ಯುತ್ತದೆ.

ಆದರೆ ಗ್ರಾಮಭಾಷೆಯ ಸೊಗಡಿನ ಈ ಕೃತಿಯನ್ನು ಶಿಷ್ಟಭಾಷೆಗೆ ಪರಿವರ್ತಿಸುವುದು ಕಷ್ಟವೇ ಸರಿ. ಹಾಗೆ ಪರಿವರ್ತಿಸುವ ಈ ಪ್ರಯತ್ನದಲ್ಲಿ ಎಷ್ಟೋ ಕಡೆ ಕೃತಕವೆನಿಸಿದೆ.

- ಹೌದು! ಗ್ರಾಮ್ಯಭಾಷೆಯ ಈ ಕೃತಿಯನ್ನು ಶಿಷ್ಟಕೃತಿಯನ್ನಾಗಿಸುವುದು ಬಹುಶಃ ಕೃತಕವೆನಿಸಬಹುದು. ಇಲ್ಲವಾದರೆ ಒಂದು ಸಾರಾಂಶದ ರೂಪದಲ್ಲಿ ಬರೆಯಬಹುದು. ಏಕೆಂದರೆ ಈ ಮೂಲಕೃತಿಯ ಜೀವಾಳವೇ ಅದರಲ್ಲಿ ಬಳಸಲ್ಪಟ್ಟಿರುವ ಗ್ರಾಮ್ಯಭಾಷೆ.

2) ಪ್ರತಿಕ್ರಿಯೆಗಾರ: ಎಂ.ಶ್ರೀನಿವಾಸಮೂರ್ತಿ ಎಂ.ಎ., ಬಿ.ಪಿ.ಇ.,
ಮೈಸೂರು – ಇವರ ಪ್ರತಿಕ್ರಿಯೆ:-

"ಕುಸುಮಬಾಲೆ ಸರಳಾನುವಾದ ಒಂದು ಅನಿಸಿಕೆ"

ದೇವನೂರು ಮಹಾದೇವರವರ ಶ್ರೇಷ್ಠಕೃತಿಯಾದ 'ಕುಸುಮಬಾಲೆ'ಯ ಸರಳ ಕನ್ನಡದಲ್ಲಿ ನಿರೂಪಿಸಿರುವ ವಿಧಾನ ಕೃತಿಯ ಒಟ್ಟು ಅರ್ಥೈಸಿಕೊಳ್ಳುವ ದೃಷ್ಟಿಗೆ ಅತ್ಯಂತ ಪೂರಕವಾದುದು. ನಿತ್ಯಪರಿವರ್ತನಾಶೀಲವಾದ ಭಾಷೆ ನಿಂತ ನೀರಾಗದೇ ಹರಿಯುತ್ತ ಇರುವುದೇ ಅದರ ಜೀವಂತಿಕೆಯ ಸಂಕೇತ. ಒಬ್ಬ ಕವಿ ಲೇಖಕ ತನ್ನ ಪರಿಸರ, ಸಂಸ್ಕೃತಿಗಳ ಹಿನ್ನೆಲೆಯಲ್ಲಿ ರೂಪುಗೊಂಡು ತನ್ನ ಕೃತಿಗಳನ್ನು ಸಮಾಜಕ್ಕೆ ನೀಡಿದಾಗ ಒಂದು ನಾಡಿನ, ದೇಶದ ಸಂಸ್ಕೃತಿಗೆ ತನ್ನ ಸೃಜನಶೀಲ ಸಾಹಿತ್ಯವನ್ನು ನೀಡಿ ಶ್ರೀಮಂತಿಕೆಗೊಳಿಸಿದಂತಾಗುತ್ತದೆ. ಇಂತಹ ಶ್ರೇಷ್ಠ ಮೌಲಿಕ ಕೃತಿಗಳು ಭೌಗೋಳಿಕ ಹಾಗೂ ಸಾಮಾಜಿಕ ಕಾರಣಗಳಿಂದ ಅರ್ಥವಾಗದೇ ಹೋದಾಗ ಆ ಕೃತಿಯ ಸತ್ವ ಶ್ರೇಷ್ಠತೆ ಒಂದೇ ನಾಡಿನ ಅನೇಕರಿಗೆ ತಲುಪುವುದು ಸಾಧ್ಯವಾಗದೇ ಹೋಗುವ ಸಾಧ್ಯತೆಗಳನ್ನು ಅಲ್ಲಗಳೆಯುವಂತಿಲ್ಲ.

ಈ ಹಿನ್ನೆಲೆಯಲ್ಲಿ ಶ್ರೀಯುತರು ಮೈಸೂರು ಜಿಲ್ಲೆಯ ನಂಜನಗೂಡು ಸುತ್ತಮುತ್ತಲ ಗ್ರಾಮ್ಯ ಆಡುನುಡಿಯಿಂದ 'ಕುಸುಮಬಾಲೆ'ಯಂತಹ ಕೃತಿಯನ್ನು ಬರೆದಿದ್ದಾರೆ. ಈ ಸರಳಗನ್ನಡದ ಕೃತಿಯನ್ನು ಓದುವಾಗ ನಮಗೆ ಮೂಲಕೃತಿಯ ಕಥಾನಕ ರೀತಿಯು ಸರಳವಾಗಿ ಅರ್ಥವಾಗುವುದರಿಂದ ಆಸಕ್ತಿಯಿಂದ ಓದಿಸಿಕೊಂಡು ಹೋಗುತ್ತದೆ. ಈ ಮೊದಲು ಮೂಲ 'ಕುಸುಮಬಾಲೆ' ಕೃತಿಯ ಬಿಗಿಯಾದ ಭಾಷೆಯ ಕಾರಣದಿಂದ ಓದಲಾಗದಿದ್ದವರು ಅಥವಾ ಅದರ ಓದುವಿಕೆ ಸಂಕೀರ್ಣವೆನಿಸುತ್ತದೆ ಎಂದು ಭಾವಿಸುವ ಹೈಸ್ಕೂಲ ಮಟ್ಟದ ವಿದ್ಯಾರ್ಥಿಗಳು ಇಂತಹ ಸರಳ ಕನ್ನಡ ಕೃತಿಯನ್ನು ಓದಿದಾಗ ಈ ಕೃತಿಯ ಒಟ್ಟು ನಿರೂಪಣೆ, ಅರ್ಥಸೌಂದರ್ಯ – ಇಷ್ಟು ಸರಳವಾಗಿದೆಯೇ, ನಾವೇಕೆ ಈ ಮೊದಲೆ ಈ ಮೂಲಕೃತಿಯನ್ನು ಅರ್ಥಮಾಡಿಕೊಳ್ಳುವಲ್ಲಿ ಸೋತುಹೋದೆವು ಎಂದು ನಾಚಿಕೆಪಟ್ಟುಕೊಂಡರೆ ಆಶ್ಚರ್ಯವಿಲ್ಲ. ನಿಜಕ್ಕೂ ಇಂದು ಓದುವ ಅಭಿರುಚಿ ಸ್ವಲ್ಪಮಟ್ಟಿಗೆ ಕ್ಷೀಣವಾಗುತ್ತಿದೆ ಎಂದು ಒಪ್ಪಿಕೊಳ್ಳುವುದರ ಜೊತೆಗೆ ಸೆಟಲೈಟ್ ಚಾನಲಗಳು ಇಂದಿನ ಜನಾಂಗದ ಮೇಲೆ ತೀವ್ರ ಆಕ್ರಮಣ ಮಾಡುತ್ತಿದೆ. ಈ ಟಿ.ವಿ.ಚಾನಲಗಳು ಮೇಘಾ ಧಾರವಾಹಿ, ಕಿರುಚಿತ್ರಗಳಿಗೆ ಬಳಸಿಕೊಳ್ಳುವ

ಶ್ರೇಷ್ಠತಮ ಕಥೆ, ಕಾದಂಬರಿಗಳು ಅತ್ಯಂತ ಪ್ರತಿಭಾನ್ವಿತ ಲೇಖಕರಿಂದ, ಕೃತಿಕಾರರಿಂದ ಹೊರಬಂದಿದ್ದರೂ ಜನಸಾಮಾನ್ಯರೆಲ್ಲರಿಗೂ ಅರ್ಥವಾಗಲಿ ಎಂಬ ಉದ್ದೇಶದಿಂದಲೇ ಕ್ಲಿಷ್ಟ ಸಂಭಾಷಣೆಗಳನ್ನು ಸರಳೀಕೃತಗೊಳಿಸಿ ಕಥಾಸಂವಿಧಾನದ ರೂಪುಗೊಡಿಸಿ ಸಹ್ಯ ಅನೇಕ ಭಾಗಗಳನ್ನು ನಿರ್ದೇಶವಾಗೊಳಿಸಿದಹುತ್ತದೆ.

ಆದರೆ ಶ್ರೀಯುತರು ಈ ಸರಳ ಕನ್ನಡಾನುವಾದದ 'ಕುಸುಮಬಾಲೆ' ಒಂದು ಉತ್ತಮವಾಗಿ ಸರಳೀಕರಿಸಲು ಹಂಬಲಿಸಪಟ್ಟಿರುವ ಶ್ರಮವನ್ನು ನಮ್ಮ ಕಣ್ಮುಂದೆ ದಾಖಲಿಸುತ್ತದೆ. ಮೂಲ ಲೇಖಕನ ಕೃತಿಯ ಓಜಸ್ಸಿಗೆ ಸ್ವಲ್ಪವೂ ಊನ ಉಂಟಾಗದಂತೆ ಎಚ್ಚರಿಕೆಯಿಂದ ಕೆಲಸ ಮಾಡಿರುವ ರೀತಿ ಆಶ್ಚರ್ಯವನ್ನುಂಟುಮಾಡುತ್ತದೆ. ಕಾಟಾಚಾರಕ್ಕೆ ಮಾಡಬೇಕೆಂಬ ಯಾವ ಭಾವನೆಯೂ ಇಲ್ಲದೆ ಕೃತಿಯನ್ನು ಸಮಗ್ರವಾಗಿ ಓದಿ ಅರ್ಥೈಸಿಕೊಂಡು ಯಾವ ರೀತಿ ಸರಳೀಕರಣದ ಮೂಲಕ ಬಿಂಬಿಸಿದರೆ ಜನರ ಮೇಲೆ ಈ ಕೃತಿಯು ಪರಿಣಾಮ ಆಗಬಹುದು ಎಂಬ ಶ್ರಮದ ಮೂಲಕ ಪ್ರತಿಯೊಂದು ಅಧ್ಯಾಯವನ್ನು ಮೂಲಕೃತಿಯಂತೆ ಸಹಜವಾಗಿ ಬಿಡಿಸಿಟ್ಟು ಆಡುಭಾಷೆಯಲ್ಲಿ ಬರುವ ಬೈಗುಳಪಟ್ಟಿಗಳು ಹಳ್ಳಿಯ ಸಹಜವಾದ ಮಾತಿನ ಕ್ಲಿಷ್ಟತೆಯನ್ನು ಬಿಡಿಸಿಟ್ಟಿದ್ದಾರೆ. ಕೆಲವು ಕಠಿಣತಮ ಪದಗಳ ಅರ್ಥಗಳನ್ನು ಕೆಳಭಾಗದಲ್ಲಿ ತೋರಿಸಿದ್ದು ಓದುವವರಿಗೆ ಸುಲಿದುಕೊಟ್ಟ ಬಾಳೆಯಹಣ್ಣನ್ನು ತಿನ್ನುವುದಷ್ಟೆ ಬಾಕಿ ಎಂಬಂತೆ ಮಾಡಿಕೊಟ್ಟಿದ್ದಾರೆ.

'ಕುಸುಮಬಾಲೆ'ಯ ಕಥಾಪ್ರಪಂಚ ಬಹಳ ವಿಶಾಲವಾದುದು. ಕುಸುಮ, ಚನ್ನ, ಸೋಮಪ್ಪರು, ಯಾಡ, ಅಕ್ಕಮಾದೇವಮ್ಮ, ಬಸಪ್ಪಸೋಮ, ಜೋತಮ್ಮದಿರು, ಕಾಳಮಾವ, ಗಾರಸಿದ್ದಮಾವ, ಈರಿ, ಕಿಟ್ಟಯ್ಯ, ಕುರಿಯಯ್ಯ, ಅಮಾಸ, ದಲಿತ ಸಂಘರ್ಷ ಸಮಿತಿ ಇವುಗಳ ಒಟ್ಟು ಬಂಧದಲಿ ಹೊಸ ಅರ್ಥವೈಚಿತ್ರ್ಯಗಳು ಗ್ರಾಮೀಣ ಪರಿಸರದಲ್ಲಿನ ಅಜ್ಞಾನ, ಅಂಧಕಾರ, ವ್ಯಭಿಚಾರ, ಮೋಸ, ವಂಚನೆ ಇಂತಹ ಅಂಶಗಳು ಮೂಲಕಥಾ ಸೆಲೆಯ ಅದ್ಭುತ ಅವರ್ಣನೀಯ ಆನಂದವನ್ನು ನೀಡಿ ಸಹೃದಯರ ಮನಸೂರೆಗೊಳ್ಳುತ್ತವೆ. ಇದನ್ನು ಸರಳೀಕೃತ ಕನ್ನಡದಲ್ಲಿ ಓದಿದಾಗ ಪ್ರತಿಯೊಂದು ಪಾತ್ರದ ಹೆಸರು, ಅವುಗಳ ವೈಶಿಷ್ಟ್ಯ, ಕೃತಿಯಲ್ಲಿ ಅವುಗಳ ಸ್ಥಾನಮಾನ, ನೋವು, ನಲಿವಿನ ಚಿತ್ರಣಗಳು ತೆರೆದ ಪುಸ್ತಕದಂತೆ ಸ್ಪಷ್ಟವಾಗಿ ಗೋಚರಿಸುತ್ತವೆ. ಇಂತಹ ಸರಳ ಕನ್ನಡದ ಆಸ್ವಾದನೆಯೆ ಇಂಥ ಆನಂದ ನೀಡುವುದಾದರೆ

ಮೂಲಕೃತಿಯನ್ನು ಈಗಿನ ಹೊಸ, ಅರ್ಥೈಸಿಕೊಳ್ಳುವಿಕೆಯ ಮೂಲಕ ಏಕೆ ಪ್ರಯತ್ನಿಸಬಾರದೆಂದು ಓದುವ ಸಹೃದಯನಿಗೆ ಕೃತಿಯನ್ನು ಓದುತ್ತ ಹೋದಂತೆ ನಿಜವಾದ ರಸಾನುಭವವಾಗುತ್ತದೆ ಎಂಬುದು ಸ್ಪಷ್ಟ ಅಂಶವಾಗಿದೆ. ಒಂದು ದಲಿತ ಜನಾಂಗದ ಬದುಕಿನ ಚಿತ್ರಣವನ್ನು ಮಣ್ಣಿನ ವಾಸನೆಯಲ್ಲಿ ಕಡೆದಿಟ್ಟಿರುವ ಕೃತಿಗಾರ ಇದನ್ನು ಸರಳವಾದ ಭಾಷೆಯಲ್ಲಿ ಬರೆದರೆ ಆದರೆ ಈ ಕೃತಿಯು ಜಾಳು ಜಾಳಾದ ಸತ್ವಹೀನ ಕೃತಿಯೇ ಆಗಿಬಿಡುವ ಅಪಾಯ ಇದ್ದೇ ಇದೆ. ಪರಿಸರದ ಭಾಷೆ, ನೋವು, ಸಂಕಟಗಳು ಹೊರಹೊಮ್ಮುವ ಚಿತ್ರಣವನ್ನು ಸಹಜ ಮಾತುಗಾರಿಕೆಯ ಗ್ರಾಮ್ಯ ಪದಗಳು ತೆರೆದುಕೊಡುವಂತೆ ಲೇಖಕನ Supisticated Language ತಂದು ಕೊಡಲಾರದು. ಇಂತಹ ಕೆಲಸಗಳನ್ನು ಒಂದು ಕೃತಿಯ ದಟ್ಟರಸಾನುಭವವನ್ನು ಪಡೆದು ಆ ಕಥಾ ಸಂಕೀರ್ಣತೆಯ ಪರಿಚಯವನ್ನು ಅಮೂಲಾಗ್ರವಾಗಿ ಅರಿತಂತಹ ಬರಹಗಾರರು ತೆರೆದಿಟ್ಟಾಗಲೇ ಓದುಗನಾದವನಿಗೆ ತನ್ನ ಕೈಗೆ ನಿಲುಕಲಾರದ ಭಾಷಾ ಸಂಕೀರ್ಣತೆಯಿಂದ ಆ ಕೃತಿಯನ್ನು ಓದುವ ಪ್ರಯತ್ನಕ್ಕೆ ಕೈ ಹಾಕದವರು ಕುತೂಹಲಕ್ಕಾದರೂ ಓದುತ್ತ ಹೋಗಿ ಕೃತಿಯ ಆಶಯ ಅರ್ಥಮಾಡಿಕೊಳ್ಳುತ್ತಾರೆ ಎಂದು ಅನಿಸುತ್ತದೆ.

ಇಲ್ಲಿ ಇನ್ನೊಂದು ಅಂಶವನ್ನು ಸ್ಪಷ್ಟಪಡಿಸುವುದು ಅಗತ್ಯವೆಂಬುದು ನನ್ನ ಭಾವನೆ. ಈಗ ಒಂದು ಭಾಷೆಯಿಂದ ಮತ್ತೊಂದು ಭಾಷೆಗೆ ಕೃತಿಯನ್ನು ಅನುವಾದ ಮಾಡುವಾಗಿನ ಸಂದರ್ಭಕ್ಕೆ, ಅದೇ ಒಂದು ನಾಡಿನ ಪ್ರಾದೇಶಿಕ ಭಾಷೆಯ ಉಪಭಾಷಾಮಟ್ಟದಿಂದ ಎಲ್ಲರಿಗೂ ಅನ್ವಯವಾಗುವ ಗ್ರಾಂಥಿಕ ಭಾಷೆಯ ಮೂಲಕ ರೂಪಧಾರಣೆ ಹೊಂದುವುದಕ್ಕೆ ಹಲವಾರು ತೊಂದರೆಗಳನ್ನು ಅನುಭವಿಸಬೇಕಾಗಬಹುದು. ತನಗೆ ಅರಿವಿಲ್ಲದ ಮತ್ತೊಂದು ಪ್ರಾದೇಶಿಕ ಭಾಷೆಯ ಕಥೆ, ಕಾದಂಬರಿಗಳನ್ನು ಕನ್ನಡ ಅನುವಾದದ ಮೂಲಕ ಓದಿದ ಓದುಗಾರ ಮತ್ತೆ ಮೂಲ ಕೃತಿಯನ್ನು ಓದಲು ಭಾಷೆಯ ತೊಡಕಿನಿಂದ ಮತ್ತೆ ಕೈಹಾಕಲಾರ. ಆದರೆ ಮೂಲಕೃತಿಯ ಭಾಷೆಗೊತ್ತಿರುವ ವಿಮರ್ಶಕನು ಆ ಕೃತಿಯ ಭಾಷಾಂತರ ಪ್ರೌಢಿಮೆ ಅಥವಾ ದೋಷಕುರಿತು ಪ್ರಸ್ತಾಪಿಸಿದಾಗ ಮಾತ್ರ ಆ ಕೃತಿಯ ಬಗ್ಗೆ ಒಂದು ಅಭಿಪ್ರಾಯವನ್ನು ರೂಢಿಸಿಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ. ಆದರೆ ಒಂದೇ ರಾಜ್ಯದಲ್ಲಿ ಬಹಳ ಸಂಖ್ಯೆಯ ಜನರು ಆಡುಭಾಷೆಯಾಗಿ ಬಳಸುವ ಉಪಭಾಷೆಯನ್ನು ಗ್ರಾಂಥಿಕ ಭಾಷೆಯ ಸರಳಕನ್ನಡೀಕರಣದಿಂದ ಓದಿಕೊಂಡನಂತರ ಮತ್ತೆ ಮೂಲಕೃತಿ ಓದುವ ಶಕ್ತಿ ಆ ಸಾಮಾನ್ಯ ಓದುಗನಿಗೆ ಬಂದಿರುತ್ತದೆ. ಆ ಹಿನ್ನೆಲೆಯಲ್ಲಿ ತನ್ನ

ಬೌದ್ಧಿಕ ಜ್ಞಾನಕ್ಕೆ ಅನುಗುಣವಾಗಿ ಮೂಲಕಥಾ ಕೃತಿಯನ್ನು ಸರಳೀಕರಿಸಿದವರು ಎಲ್ಲಿ ಹೇಗೆ ಯಶಸ್ವಿಯಾಗಿದ್ದಾರೆ, ಎಲ್ಲಿ ಸೋತಿದ್ದಾರೆ ಎಂಬುದನ್ನು ಮಗದೊಮ್ಮೆ ಮೂಲ ಕೃತಿ ಓದಿ ಅರ್ಥೈಸಿಕೊಂಡಾಗ ವಿಮರ್ಶೆ ಮಾಡಿ ಹೇಳುವ ಶಕ್ತಿ ಇರುತ್ತದೆ.

ಒಂದು ಶ್ರೇಷ್ಠಕೃತಿಯನ್ನು ಓದಿ ಅರಗಿಸಿಕೊಂಡು ರಸಾನುಭವ ಹೊಂದುತ್ತೇನೆ ಎಂದುಕೊಳ್ಳುವ ಸಹೃದಯನು ಆ ಕೃತಿಯ ಆಸ್ವಾದನೆಗೆ ತೆಗೆದುಕೊಳ್ಳುವ ರಿಸ್ಕ್ ಆ ಕೃತಿ ಬರೆದ ಲೇಖಕನಿಗೆ ನೀಡುವ ಒಂದು ಗೌರವ. ತನ್ನ ಭಾಷಾ ದೌರ್ಬಲ್ಯ ಇದೆ ಎಂದು ಒಪ್ಪಿಕೊಳ್ಳುವ ಸಹೃದಯ ಅರ್ಥಮಾಡಿಕೊಳ್ಳುವ ಸಲುವಾಗಿ ಶಬ್ದಕೋಶ, ವಿಮರ್ಶಕೃತಿಗಳನ್ನು ನೋಡಿ ಕೊಂಡು ಇತರರ ಮೂಲಕ ಚರ್ಚೆಮಾಡಿ ತಿಳಿದುಕೊಳ್ಳಬೇಕಾಗುತ್ತದೆ. ಆದರೆ ಅಂತಹ ತೊಂದರೆಯು ಸಾಮಾನ್ಯ ಓದುಗನಿಗೆ ಮತ್ತು ಭಾಷಾ ತೊಡಕಿನ ಓದುಗನಿಗೆ ಆಗದೆ ಸರಳವಾಗಿ ಕೃತಿ ಅರ್ಥೈಸಿಕೊಳ್ಳಲಿ ಎಂದು ಬರೆದಿರುವ 'ಕುಸುಮಬಾಲೆಯ' ಸರಳ ಕನ್ನಡ ತನ್ನ ಮಟ್ಟಿನ ಕರ್ತವ್ಯ ನಿರ್ವಹಿಸುವಲ್ಲಿ ಹೆಚ್ಚು ಕಡೆ ಸಫಲತೆಗಳಿಸಿದ್ದಾಗ್ಯೂ ಕೆಲವೆಡೆ ತೀರಾ ಸಾಮಾನ್ಯವಾಗಿ ಮೂಡಿಬಂದಿರುವುದನ್ನು ಕಾಣಬಹುದು.

'ಕುಸುಮಬಾಲೆ'ಯ ಭಾಷೆ 'ಗದ್ಯಾತ್ಮಕ ಸಂಗೀತ' ಎಂದು ಜಿ.ಎಚ್. ನಾಯಕ ರವರು ಅಭಿಪ್ರಾಯಿಸಿದ್ದಾರೆ. ಆ ಹಿನ್ನಲೆಯಲ್ಲಿ ಈ ಸರಳೀಕರಣದ ಪುಸ್ತಕವನ್ನು ಪರಸ್ಪರ ಹೋಲಿಸಿದಾಗಿನ ನನ್ನ ಅಭಿಪ್ರಾಯ ಈ ರೀತಿ ಹೇಳಬಹುದೇನೋ. ಕಥಾ ಆರಂಭಕ್ಕೂ ಮೊದಲು ಅಲ್ಲಮ ಪ್ರಭುವಿನ 'ಎತ್ತಣ ಮಾಮರ ಎತ್ತಣ ಕೋಗಿಲೆ' ವಚನವನ್ನು ಕೃತಿಯಲ್ಲಿ ರುವಂತೆಯೇ ಬಳಸಿಕೊಂಡಿರುವ ಲೇಖಕರ ಅಭಿಪ್ರಾಯ ಅದರ ಅಭಿವ್ಯಕ್ತಿ ವೈಶಿಷ್ಟ್ಯ ಮತ್ತು ಜನಪ್ರಿಯತೆ ಈಗಾಗಲೆ ಎಲ್ಲರ ಗಮನ ಈ ವಚನದ ಮೇಲಿರುವುದೇ ಆಗಿದೆ ಎನಿಸುತ್ತದೆ. ಇದೇ ಮಾತನ್ನು ಒಟ್ಟು ಕುಸುಮಬಾಲೆಯ ಸನ್ನಿವೇಶಗಳ ಕೆಲವು ಭಾಗಗಳಲ್ಲಿ ದೇವನೂರು ಮಹಾದೇವ ಬಳಸಿರುವ ಕಾವ್ಯಾತ್ಮಕ ಶೈಲಿಯ ಪದ್ಯಗರ್ಭಿತ ಗದ್ಯವನ್ನು ಸರಳೀಕರಿಸುವಾಗ ಆ ಗದ್ಯಕಾವ್ಯದ ಸತ್ವ ಸೊರಗಿದಂತೇನೋ ಎಂಬ ಭಾವನೆ ಮೂಡುತ್ತದೆ. ಕೃತಿಯ ಒಟ್ಟು ಓದಲ್ಲಿ ಓದುಗನಿಗೆ ಸ್ವಲ್ಪವಾದರೂ ತಲೆ ಓಡಿಸುವ ಕೆಲಸ ನೀಡೋಣ ಎಂದಾದರು ಲೇಖಕರು ಅಂತಹ ಕೆಲವೇ ಪದ್ಯಗರ್ಭಿತ ಕಾವ್ಯ ಹಾಗೂ ಚಮತ್ಕಾರ ಗದ್ಯವಾಗಿ ಮೂಡಿಬಂದಿರುವ ಮೊದಲಿಗೆ ಆರಂಭವಾಗುವ... ಹೀಗೆ ಎಂದು ಬಂದಿರುವ ಒಟ್ಟು 'ಕುಸುಮಬಾಲೆ' ಕೃತಿಯ ಸಾರಾಸಂಗ್ರಹ

ವನ್ನು ಉಳಿಸಿಕೊಳ್ಳಬಹುದೇನೋ. ಇನ್ನು ಕೃತಿಯ ಉಪಸಂಹಾರದಲ್ಲಿ ಆರಂಭಿಕ ಸಾಲುಗಳ ಮುಕ್ಕಾಲು ಭಾಗವನ್ನು 'ಅ' ಅಕ್ಷರದಿಂದಲೂ ಕಾಲು ಭಾಗವನ್ನು 'ಈ' ಅಕ್ಷರದಿಂದಲೂ ಬರೆದು ಕೃತಿಯ ವೈಶಿಷ್ಟ್ಯತೆಯಲ್ಲಿ ಒಂದು ಎಂಬಂತೆ ದೇವನೂರು ಮಹಾದೇವರವರು ಬಳಸಿದ್ದಾರೆ. ಇಂತಹವುಗಳನ್ನು ಕೃತಿಯ ಸತ್ವದ ದೃಷ್ಟಿಯಿಂದ ಅದೇ ರೂಪದಲ್ಲಿ ಉಳಿಸಿ ಅದರ ಒಟ್ಟು ವ್ಯಾಖ್ಯಾನವನ್ನು ಸರಳವಾಗಿ ನಿರೂಪಿಸುವ ಮಾತನ್ನು ಸಹಜವಾಗಿ ಹೇಳುವ ಪ್ರಯತ್ನಕ್ಕೆ ಆಸ್ಪದವಿದೆಯೇ ಎಂದು ಪರಿಶೀಲಿಸಬಹುದೇನೋ ಎನಿಸುತ್ತದೆ.

ಇದೇ ಮಾತನ್ನು ಮೂಲಕೃತಿಯ ಕೆಲವು ಭಾಗಗಳಲ್ಲಿ ಬರುವ ಗದ್ಯಕಾವ್ಯ ಶೈಲಿಯ ಕವನಕ್ಕೂ ಅನ್ವಯಿಸಿ ಹೇಳಬಯಸುತ್ತೇನೆ. ಉದಾಹರಣೆಗೆ ಪುಟ–19ರಲ್ಲಿ ಬರುವ ಯೌವನ ಪಲ್ಲ··· ಪುಟ – 47 ರ ಅದರ ಕಣ್ಣುಗಳು··· ಪುಟ –57 ರ, ಪುಟ–52 ರ 'ಈ ಜೀವ ಆ ಜೀವಕ ನೋ' ಪುಟ–73ರ ಆಗ ಕುಸುಮಾಳ····· ಎಂಬಂತಹ ಕೆಲವಾದರೂ ಗದ್ಯಕಾವ್ಯ ಶೈಲಿಯ ಸತ್ವವನ್ನು ಅಂತೆಯೇ ಉಳಿಸಿಕೊಂಡು ಬೇರೆ ರೀತಿಯಿಂದ ಅದರ ಸರಳೀಕರಣ ನೀಡಲು ಸಾಧ್ಯವೇ ಎಂದು ಆಲೋಚಿಸಿನೋಡಬಹುದು. ಈ ಮಾತನ್ನು ಹೇಳಲು ಕಾರಣವೆಂದರೆ ಸರಳ ಶೈಲಿಯಲ್ಲಿ ಶಿಷ್ಟ ಕನ್ನಡವನ್ನು ಹೇಳಬೇಕೆಂಬ ನಿಮ್ಮ ಮನೋಭಿಲಾಷೆಯಲ್ಲಿ ಕೆಲವು ರಸವತ್ತಾದ ಭಾಗಗಳನ್ನು ರಸಹೀನವಾಗಿಸಿದ್ದೀರಿ ಎಂಬ ಕೊರಗು ಇಂತಹ ಕೆಲವು ಭಾಗಗಳನ್ನು ನಾನು ಮೂಲಕೃತಿ ಒಟ್ಟಿಗೆ ಹೋಲಿಸಿದಾಗ ಅನ್ನಿಸಿದೆ. ಈಗೆಯೇ ಕೆಲವು ಗದ್ಯಶೈಲಿಯ ಮಾತುಗಳ ಸಂದರ್ಭಕ್ಕೆ ಅನ್ವಯಿಸಿ ಸೂಕ್ಷ್ಮವಾಗಿ ಹೇಳಬಹುದಾದರೆ ಗಾರೆಸಿದ್ದಮಾವ ಎಳನೀರು ಕದಿಯುವ ಪ್ರಸಂಗದಲ್ಲಿ ಲಜ್ಜಾಹೀನನಾಗಿ ಆತ ಬಳಸುವ ಭಾಷೆಯ ಬಗ್ಗೆಯೂ ಹೇಳಬಹುದು. ಆತ ಆಡುನುಡಿಯ ಮೂಲಕ ತನ್ನ ಕಳ್ಳತನವನ್ನು ಸಮರ್ಥಿಸಿಕೊಳ್ಳುವಾಗ ಆತನ ಆಡುನುಡಿಯ ಸ್ವಾರಸ್ಯತೆಗೆ ಹತ್ತಿರವಾದ ಸರಳೀಕರಣ ಪ್ರಯೋಗಕ್ಕೆ ಹೆಚ್ಚು ಆಸ್ವಾದನಾ ಶಕ್ತಿ ಉಂಟಾಗುತ್ತದೆ ಎನಿಸಿತು.

ಈ ಸಂದಿಗ್ಧತೆ ಒಟ್ಟು ಸರಳೀಕರಣದ ಸಂದರ್ಭದಲ್ಲಿ ನಿಮಗುಂಟಾಗಿರಬಹುದು ಎಂದು ಕೃತಿಯ ಒಟ್ಟು ನೋಟದಲ್ಲಿ ಗ್ರಹಿಸಲು ಸಾಧ್ಯವಿದೆ. ಕೆಲವು ಅತಿ ಸಂಕೀರ್ಣವಾದ ಪದಗಳನ್ನು ನೀವು ಕಠಿಣ ಪದಗಳ ಅರ್ಥ ನೀಡಿ ಅದರ ಅರ್ಥವನ್ನು ತೆರೆದಿಡುತ್ತ ಹೋಗಿದ್ದೀರಿ. ಜೊತೆಗೆ ಕೆಲವು ಆಚರಣೆ, ಸಂಪ್ರದಾಯದ ಪದಗಳನ್ನು ನಿರೂಪಣ ಶೈಲಿಯಲ್ಲಿ ಅರ್ಥೈಸಿದ್ದೀರಿ. ಇದು ಕೃತಿಯನ್ನು ಓದುಗ ಅರ್ಥಮಾಡಿಕೊಳ್ಳುವಲ್ಲಿ ಬಹಳ ಸಹಾಯಕವಾಗಿರುವುದು ಕೃತಿಯ ವೈಶಿಷ್ಟ್ಯ. ಏಕೆಂದರೆ ಆಧುನಿಕ ಕನ್ನಡವು ಅನ್ಯಭಾಷಾಸಂಸರ್ಗಗಳು ನೈಸರ್ಗಿಕ ಅಡೆತಡೆಗಳ ಭೇದ ಹಾಗೂ ಸಾಮಾಜಿಕ ಭೇದಗಳಿಂದಾಗಿ

(1) ಮೈಸೂರು ಕನ್ನಡ

(2) ಧಾರವಾಡ ಕನ್ನಡ

(3) ಗುಲ್ಬರ್ಗಾ ಕನ್ನಡ

(4) ಮಂಗಳೂರು ಕನ್ನಡ

ಎಂದು ವಿಭಾಗಿಸಿಕೊಳ್ಳಲಾಗಿದೆ. ಇವೆಲ್ಲದರ ಜೊತೆಗೆ ಇತರ ವಿಭಾಗವೂ ಇದ್ದು ಅದರಲ್ಲಿ

(1) ಮೇಲುವರ್ಗದ ಕನ್ನಡ

(2) ಕೆಳವರ್ಗದ ಕನ್ನಡ

ಎಂದು ಅವರವರ ಪರಿಸರಕ್ಕೆ ತಕ್ಕಂತೆ ಮಾತನಾಡುವ ರೀತಿ ನೀತಿಗಳ ಹಿನ್ನೆಲೆಯಲ್ಲಿ ದಲಿತರ ಬದುಕನ್ನು ಒಂದು ಸಾಮಾನ್ಯ ಹಳ್ಳಿಯೊಂದರ ಮೂಲಕ ನಿರೂಪಿಸುತ್ತಿರುವ ಕಾದಂಬರಿಕಾರನು ಕೆಳವರ್ಗದ ಜನರ ಬದುಕನ್ನು ಅದೇ ಪರಿಸರ ಮತ್ತು ಸಹಜತೆಯನ್ನು ಮೇಳೈಸಿ ಒಡಮೂಡಿಸಿದ್ದಾರೆ. ಆ ಹಿನ್ನೆಲೆಯಲ್ಲಿಯೇ ವಿಮರ್ಶಕರಾದ ಜಿ.ಎಚ್. ನಾಯಕರವರು ದೇವನೂರು ಮಹಾದೇವರವರ ಗದ್ಯ ಸಂಗೀತದಂತೆ ಕೇಳುತ್ತದೆ ಎಂದು ಅಭಿಪ್ರಾಯ ವ್ಯಕ್ತಪಡಿಸಿರುವುದು. ಒಟ್ಟಿನಲ್ಲಿ ನಿಮ್ಮ ಸರಳ ಕನ್ನಡದ ರೀತಿಯು ಒಟ್ಟು ಕೃತಿಯನ್ನು ಅರ್ಥೈಸಿಕೊಂಡು ಹೋಗಲು ಎಲ್ಲಿಯೂ ಅಡಚಣೆ ನೀಡದೆ ಸರಾಗವಾಗಿದೆ. ಆದರೆ ಕಾವ್ಯಸತ್ವವನ್ನು ರಸಾನುಭವ ಮಾಡಿಕೊಂಡು ಆಸ್ವಾದಿಸಬೇಕೆಂಬ ಸಂದರ್ಭದಲ್ಲಿ ಪರಿಣಾತ್ಮಕ ಪ್ರಭಾವದ ಗಾಢತೆಯನ್ನು ತಂದುಕೊಡುತ್ತಿದೆ ಎಂದು ಧೈರ್ಯವಾಗಿ ಹೇಳುವುದು ಸಾಧ್ಯವಾಗುವುದಿಲ್ಲ. ಸರಳಾನುವಾದದ ಸಂದರ್ಭದಲ್ಲಿ ನಿಮಗೂ ಕೂಡ ಒಂದು ಮಿತಿ ಇದ್ದೇ ಇದೆ ಎಂಬ ಕಾರಣದಿಂದಲೇ ಈ ಮಾತನ್ನು ಸ್ಪಷ್ಟಪಡಿಸುತ್ತಿದ್ದೇನೆ. ಕ್ಲಿಷ್ಟತೆಯ ಭಾಷೆಯಿಂದ ಒಟ್ಟು ಕಾದಂಬರಿಯ ಸಾರಾ ಚಿತ್ರಣವನ್ನು ಮನದಲ್ಲಿ ರೂಪಿಸಿಕೊಳ್ಳಲು ಹೋಗುವ ಓದುಗನಿಗೆ ಇಂತಹ ಸರಳೀಕೃತ ಭಾಷೆಯ ಕೃತಿಗಳು ಮಾರ್ಗದರ್ಶಕವಾಗಬಲ್ಲವು. ನಾವು ಇದನ್ನು ಮೈಸೂರು ಪ್ರಾಂತ್ಯದಲ್ಲಿ ನಿಂತು ಹೇಳುವಾಗ ಸ್ವಲ್ಪ ಪ್ರಯತ್ನದ ಓದಿನ ಮೂಲಕ ಮೂಲಕೃತಿಯಲ್ಲಿ ಕಥಾ ಸ್ವ ಅಡಗಿಸಿಕೊಳ್ಳುವುದು ಸಾಧ್ಯವಿದೆ ಎನಿಸುತ್ತದೆಯಾದರೂ ಮಂಗಳೂರು, ಧಾರವಾಡದ ಭಾಷಾ ಚೌಕಟ್ಟಿನ ಜನರಿಗೆ ಭಾಷೆಯ ತೊಡಕು ಸ್ಪಷ್ಟವಾಗಿ ಎದುರಾಗುವುದನ್ನು ನನ್ನ ಸ್ನೇಹಿತರ ಮೂಲಕ ಕೇಳಿದ್ದೇನೆ. ಹಾಗಾಗಿ ಈ ಸರಳಕನ್ನಡೀಕರಣವು ಒಂದು ಶ್ರೇಷ್ಠ ಕೃತಿಯ ಸತ್ವ, ಶಕ್ತಿಗಳನ್ನು ತೋರುವ ಕೈಮರವಾಗಿ ಕೆಲಸ ಮಾಡುವ ಶಕ್ತಿಯನ್ನು ಹೊಂದಿದೆ ಎಂದು ಅಂಜಿಕೆಯಿಲ್ಲದೆ ಹೇಳಬಹುದು.

ದೇವನೂರರ ಈ ಕೃತಿಯು ಕನ್ನಡ ವ್ಯಾಕರಣದ ತತ್ವದ ಮೇಲೆ ಆಧಾರವಾಗದೆ ಜನರ ಆಡುನುಡಿಯನ್ನು ಸಮಗ್ರವಾಗಿ ಬಳಸಿಕೊಂಡು ನಿರೂಪಿಸುವ ಜಾನಪದೀಯ ಸತ್ವದ ಮಣ್ಣಿನ ವಾಸನೆಗೆ ಹತ್ತಿರವಾದ ಶೈಲಿ. ಒಂದು ಹಳ್ಳಿಯ ವ್ಯವಸ್ಥೆ, ಪರಿಸರ, ಜೀವನ ವಿಧಾನ, ಆಚರಣೆ, ಸಂಪ್ರದಾಯ, ಮೂಢನಂಬಿಕೆ, ಜಾಗೃತಿ, ಕೂಲಿ ಇದನ್ನೆಲ್ಲಾ ಪ್ರಾಂತ್ಯಭೇದ ಭಾಷೆಯ ಜನರೇ ಅರ್ಥಮಾಡಿಕೊಳ್ಳುವುದು ಮೂಲಕೃತಿಯ ಒಂದು ಓದಿನ ಮೂಲಕ ಸಾಧ್ಯ ಎಂದು ಹೇಳುವುದು ಕಷ್ಟದ ಮಾತು. ಏಕೆಂದರೆ ಇಲ್ಲಿನ ಭಾಷೆ, ವ್ಯಾಕರಣಾಂಶ, ನಾಮಪದಗಳ ಸ್ವರೂಪ, ಪ್ರತ್ಯಯಗಳ ಪ್ರಯೋಗ ಹಾಗೂ ವಿಶೇಷಣ ಮುಂತಾದ ಅಂಶಗಳನ್ನು ಸೂಕ್ಷ್ಮವಾಗಿ ಬಿಡಿಸಿ ನೋಡಿದಾಗ ಇಂತಹ ಭಾವನೆ ಮೂಡುತ್ತದೆ.

ಇಂತಹ ಸಂದರ್ಭದಲ್ಲಿ ಸರಳಗನ್ನಡದಲ್ಲಿ ಮೂಡಿಸುವಾಗಲೂ ಮೇಲಿನ ವ್ಯಾಕರಣ ಅಂಶಗಳ ಮೂಲಕ ಮೂಲಕೃತಿಯ ಆಶಯದ ಉಳಿವಿಕೆಗಾಗಿ ಪ್ರಯತ್ನಿಸುತ್ತೇನೆ ಎಂದು ನೀವು ಪರಿಣಾಮಕಾರಿಯಾಗಿ ಹೇಳುವುದು ಒಂದು ಕೃತಿಯ ಸಂಕೀರ್ಣತೆಯಿಂದಾಗಿ ಹೇಳುವುದು ಕಷ್ಟಸಾಧ್ಯ ಮಾತು ಎಂದೇ ಹೇಳಬೇಕಾಗುತ್ತದೆ. ಇಂದಿನ ಸಂಸ್ಕೃತೀಕರಣ, ಆಧುನಿಕರಣದ ಹಿನ್ನೆಲೆಯಲ್ಲಿ ಭಾಷೆಯ ಮೇಲೆ ಉಂಟಾಗುತ್ತಿರುವ ಒತ್ತಡದ ಹಿನ್ನೆಲೆಯಲ್ಲಿ ಬೆಳೆಯುತ್ತಿರುವ ಭಾಷೆ ತನ್ನ ಇಕ್ಕೆಲಗಳನ್ನೆಲ್ಲ ಹಿಗ್ಗಿಸಿಕೊಂಡು ಭೋರ್ಗರೆದು ನುಗ್ಗುವ ಸಂದರ್ಭದಲ್ಲಿ ಸರಳತೆಯ ಭಾಷೆಯ ಮೂಲಕವಾದರೂ ಜನಸಾಮಾನ್ಯರಿಗೆ ಈ ಉತ್ತಮ ಕೃತಿಯನ್ನು ಅರ್ಥೈಸಿಕೊಡುವ ಕೆಲಸ ಮಾಡುತ್ತೇನೆ ಎಂದು ಕೃತಿಕಾರರು ತಮ್ಮ ಶ್ರಮವನ್ನು ಈ ಸರಳಕನ್ನಡ 'ಕುಸುಮಬಾಲೆ' ಯನ್ನು ಕೈಗಿಡಲು ಪ್ರಯತ್ನಿಸಿರುವುದು ಪ್ರಾಮಾಣಿಕಪ್ರಯತ್ನವೇ ಸರಿ. ಇದರಲ್ಲಿ ಕೆಲವು ಲೋಪಗಳು ಕಾಣಿಸಿಕೊಳ್ಳಬಹುದಾದರೂ ಪ್ರಯತ್ನಗಳ ಮೂಲಕ ತಿದ್ದಿಕೊಳ್ಳುವ ಸಾಧ್ಯತೆ ಹೆಚ್ಚಾಗಿಯೇ ಇರುತ್ತದೆ ಎಂಬುದು ಸಮಾಧಾನದ ಅಂಶ.

ಇಂತಹ ಗ್ರಾಮೀಣ ಸೊಗಡಿನ ಕೃತಿಗಳು ಸಾವಿರಾರು ಸಂಖ್ಯೆಯಲ್ಲಿ ಹೊರಬರುವುದಿಲ್ಲ. ಆಗಾಗ ಬಹು ಸಮರ್ಥ ಲೇಖಕನ ಮೂಲಕ ಸೃಜನಶೀಲ ಕಲಾ ಪ್ರಪಂಚದಲ್ಲಿ ನಿರ್ಮಾಣಗೊಳ್ಳುವ ಕೃತಿಯನ್ನು ಹೆಚ್ಚು ಜನರಿಗೆ ತಲುಪುವಂತೆ ಹಾಗೂ ಆ ಕೃತಿಯ ಹೊಸ ಆಲೋಚನೆ, ಚರ್ಚೆಗೆ ಅವಕಾಶ ಮಾಡಿಕೊಡಲು ನಿಮ್ಮ ಈ ಕೃತಿಯು ಕಾರಣವಾಗಬಹುದೇನೊ ಎಂಬ ಆಶಯವೂ ಇದೆ. ಇನ್ನು ನಿಮ್ಮ ಸರಳಾನುವಾದದಲ್ಲಿಯ ಪುಟ 63 ರಲ್ಲಿ ಬರುವ ಕುರಿಯಯ್ಯನ

ಮೈಮೇಲೆ ನಾಯ್ಯರ ಜೋಗಮ್ಮ ಮೈದುಂಬಿ ಬಂದು ಆಡುವ ಮಾತನ್ನು ಗಮನಿಸಬೇಕು. ಇಂತಹ ಸಂದರ್ಭ ಚಿತ್ರಣಗಳು ಮೂಲಕೃತಿಯ ಸಂಕೀರ್ಣ ಗದ್ಯಭಾಷೆಯಲ್ಲಿ ಹಲವು ಓದಿನ ಮೂಲಕ ಸ್ಪಷ್ಟವಾಗಿ ಗ್ರಹಿಸಿಕೊಳ್ಳಬೇಕು ಎಂಬ ಹಂಬಲವನ್ನು ನೀಡುವುದರ ಜೊತೆಗೆ ಇಂತಹ ಕಟು ಮಾತುಗಳ ಚಿತ್ರಣ ಲೇಖಕ ತರುತ್ತಿರುವುದರ ಹಿನ್ನೆಲೆ ಉದ್ದೇಶ ಏನಿರಬಹುದು ಎಂಬ ಚರ್ಚೆಗೆ ಗ್ರಾಸವಾಗುತ್ತದೆ. ಆದರೆ ನಿಮ್ಮ ಸರಳೀಕೃತ ಭಾಷೆಯಲ್ಲಿ ಈ ಅಂಶಗಳು ಸ್ಪಷ್ಟಗೊಂಡಾಗ ಅದನ್ನು ಬಹಳ ಸರಳವಾಗಿ ಅರ್ಥೈಸಿಕೊಳ್ಳುವ ಓದುಗ ಇಂತಹ ಭಾಗಗಳ ಸೂಕ್ಷ್ಮಗ್ರಹಿಕೆಯ ಆಳವನ್ನು ಮೂಲಕೃತಿಯ ಒಟ್ಟಿಗೆ ಗ್ರಹಿಸಿಕೊಳ್ಳದೇ ಮೇಲ್ನೋಟದ ಒಂದೇ ಓದಿನ ಆಧಾರದ ಮೇಲೆ ವಿಮರ್ಶೆ ಮಾಡುವ ಅಜಾಗರೂಕತೆಯ ಕೆಲಸ ಆಗಬಹುದೇನೊ ಎಂಬುದು ಇದು ಮೂಲಕೃತಿಕಾರನ ಒಟ್ಟು ಆಶಯಕ್ಕೆ ಧಕ್ಕೆ ಉಂಟುಮಾಡುವ ಸಾಧ್ಯತೆ ಇರುತ್ತದೆ. ಏಕೆಂದರೆ ಒಂದು ಗ್ರಾಮೀಣ ಪರಿಸರದ ಹಿನ್ನೆಲೆ ಪ್ರಾಪಂಚಿಕ ಪ್ರಜ್ಞೆ ಇಲ್ಲದೇ ಯಾವುದೊ ಒಂದು ಮೈದುಂಬಿದ ಶಕ್ತಿಯ ಕುರಿಯುಯ್ಯನ ಮೂಲಕ ಆಡುತ್ತಿರುವ ಈ ಮಾತುಗಳು ಕೃತಿಕಾರನ ಕಲ್ಪನಾಂಶದಿಂದ ರೂಪುಗೊಂಡುದುದು ಎಂದು, ಮೂಲಸೆಲೆಯ ಅರ್ಥೈಸಿಕೊಳ್ಳುವಿಕೆ ಇಲ್ಲದವರ ಮನೋಭಾವನೆ ಆಗಿಬಿಡಬಹುದು ಎಂದು, ಈ ಮಾತನ್ನು ಹೇಳುತ್ತಿದ್ದೇನೆ.

ಕಡೆಯದಾಗಿ ಈ ಸರಳೀಕೃತ ಕನ್ನಡದ ಒಟ್ಟು ಬರಹ ಮೂಲ ಕೃತಿಯ ಆಶಯವನ್ನು ಎಲ್ಲಿಯೂ ಊನ ಮಾಡಿಲ್ಲ. ಸತ್ವದ ದೃಷ್ಟಿಯಿಂದಲೂ ಕೂಡ ಮೂಲಕೃತಿಯ ಗಟ್ಟಿಯಾದ ಪದಗಳನ್ನು ಸರಳ ಮಾಡಲೇಬೇಕೆಂಬ ಹಠಹಿಡಿದು ಮುನ್ನುಗ್ಗದೆ ಸಹಜವಾಗಿ ಕಷ್ಟ ಎನಿಸಿದ ಪದಗಳನ್ನು ಸೂಕ್ಷ್ಮವಾಗಿ ಗ್ರಹಿಸಿ ಅದಕ್ಕೆ ಪರ್ಯಾಯವಾದ ಸಾಮಾನ್ಯ ಜನರು ಬಳಸುವ ಸರಳ ಮಾತುಗಳನ್ನು ಅರ್ಥ ಪ್ರಕ್ರಿಯೆಗೆ ಬಳಸಿಕೊಂಡು ಮೂಲ ಪದಗಳನ್ನು ದಿಕ್ಕು ತಪ್ಪಿಸುವ ಅರ್ಥಕೊಡದಂತೆ ಕಾಪಾಡಿಕೊಳ್ಳುವಲ್ಲಿ ಯಶಸ್ವಿಯಾಗಿದೆ. ಇಂತಹ ಪ್ರಯತ್ನಗಳು ಇಂತಹದೇ ರೀತಿಯಲ್ಲಿ ಭಾಷೆಯ ತೊಡಕು ಉಂಟಾಗುವ ಸೃಜನಶೀಲ ನಾಟಕ, ಕಥೆ, ಕಾದಂಬರಿಗಳ ವಿಷಯದಲ್ಲಿ ಇಂತಹ ಪ್ರಯತ್ನಗಳು ಪ್ರಾಮಾಣಿಕ ಪ್ರಯತ್ನದಿಂದ ಮತ್ತು ಕೃತಿಕಾರನ ಒಟ್ಟು ಆಶಯದ ಅರಿವಾಗುವಂತೆ ಮಾಡಿದಾಗ ಕೃತಿಯ ಸತ್ವ ರಾಜ್ಯಾದ್ಯಂತ ಎಲ್ಲ ವರ್ಗದ ಓದುಗರನ್ನು ತಲುಪಿ ಕಬ್ಬಿಣದ ಕಡಲೆಯಂತಹ ಭಾಷೆಗಳು ಸತ್ವಪೂರ್ಣ ಅರ್ಥದಿಂದ ಪ್ರಾಂತ್ಯಭೇದ ಜನರೆಲ್ಲರಿಗೂ ತಲುಪಿ ಶ್ರೇಷ್ಠಕೃತಿಕಾರನ ಕೃತಿಗಳ ಬಗ್ಗೆ ಪೂರ್ಣ ತಿಳುವಳಿಕೆಯಿಂದ ಮಾತನಾಡುವ ಸಶಕ್ತ ಓದುಗ, ಆಲೋಚನಾ ಪ್ರಜ್ಞೆಯ ಜನಾಂಗ ರೂಪಿಸಲು ಸಾಧ್ಯ.

3) ಪ್ರತಿಕ್ರಿಯೆಗಾರ: ಸಿ.ಸಿ. ವೆಂಕಟೇಶ, ಸಂಶೋಧಕ (ಕನ್ನಡ)
ಮೈಸೂರು-6 ಇವರ ಪ್ರತಿಕ್ರಿಯೆ:-

ದಲಿತ ಸಾಹಿತ್ಯ ಸಂದರ್ಭದಲ್ಲಿ ದೇವನೂರು ಮಹಾದೇವ ಅವರ ಹೆಸರು ಒಂದು ಮೈಲಿಗಲ್ಲು, ಅವರ 'ಕುಸುಮಬಾಲೆ' ಕಾದಂಬರಿ ಆ ಕಾಲಘಟ್ಟದ ವಿಶಿಷ್ಟವಾದ ಸಾಹಿತ್ಯಕೃತಿ. ಅಲ್ಲಿಯ ಭಾಷೆ, ಶೈಲಿ, ತಂತ್ರ ವಿಮರ್ಶಕರನ್ನು ಬೆರಗುಗೊಳಿಸಿದೆ. ಅಂತೆಯೇ ಮೆಚ್ಚುಗೆಯನ್ನು ಪಡೆದಿದೆ. ಇಂತಹ ಒಂದು ಸಾಹಿತ್ಯಕೃತಿಯನ್ನು ಅನುಸರಿಸಲು ಹೋಗಿ ಕೈಸುಟ್ಟು ಕೊಂಡವರು ಹಲವರಾದರೆ, ಕಬ್ಬಿಣದ ಕಡಲೆಯಂಥ ಭಾಷೆ ಎಂದು ಮೂಗು ಮುರಿದವರೂ ಅನೇಕರಿದ್ದಾರೆ. ಇಂಥ ಒಂದು ಮಹತ್ಕೃತಿಯನ್ನು ಶಿಷ್ಟಭಾಷೆಗೆ ಅನುವಾದಿಸಲು ಮುಂದಾದ ಶ್ರೀ ಎ.ಎಸ್.ಮಹದೇವ ಅವರು ಧನ್ಯರು.

ದೇವನೂರು ಮಹಾದೇವ ಅವರ ಕುಸುಮಬಾಲೆ ಕಾದಂಬರಿಯನ್ನು ಶಿಷ್ಟಭಾಷೆಗೆ ಅನುವಾದ ಮಾಡಿರುವ ಸಂದರ್ಭದಲ್ಲಿ ಹಲವಾರು ಲೋಪದೋಷಗಳಿವೆ. ಅವುಗಳನ್ನು ಈ ಕೆಳಗೆ ಗುರುತಿಸಲಾಗಿದೆ.

1. ಮೂಲಕೃತಿಯಲ್ಲಿ ಗ್ರಾಮ್ಯ ಜೀವನದ ಜೀವಂತ ಮೌಲ್ಯಗಳು ಭಾಷೆಯ ಅಭಿವ್ಯಕ್ತಿಯಿಂದ ಓದುಗರ ಮನಸ್ಸನ್ನು ಮುದಗೊಳಿಸುತ್ತದೆ. ಆದರೆ ಶಿಷ್ಟಭಾಷೆಗೆ ಅನುವಾದಗೊಂಡಿರುವುದರಲ್ಲಿ ಓದಿಸಿಕೊಂಡು ಹೋಗುತ್ತದೆಯೇ ಹೊರತು ಅಲ್ಲಿನ ಜೀವಂತ ಮೌಲ್ಯಗಳು ಇವರು ಬಳಸಿರುವ ಭಾಷೆಯಲ್ಲಿ ಅಭಿವ್ಯಕ್ತಿಯಾಗುವುದಿಲ್ಲ.

2. ಗ್ರಾಮೀಣ ಭಾಷೆಯಿಂದ ಶಿಷ್ಟಭಾಷೆಗೆ ಬದಲಾಯಿಸಿರುವುದರಿಂದ ಭಾಷೆಯ ಗಟ್ಟಿತನ ಮೂಲದ ಸೊಗಡು ಇಲ್ಲವಾಗುತ್ತದೆ. ಗ್ರಾಮ್ಯ ಜೀವನದ ಗಾಢವಾದ ಅನುಭವ ಮತ್ತು ಅಲ್ಲಿಯ ಬದುಕಿನ ನೇರವಾದ ಚಿತ್ರಣ, ಶಿಷ್ಟಭಾಷೆಯಲ್ಲಿ ಇದ್ದರೂ ಇಲ್ಲದ ಅಸಹಜವಾದ, ಜಾಳು ಜಾಳಾದ ಭಾಷೆ ಬಳಕೆಯಾಗಿದೆ. ಆದ್ದರಿಂದ ಮೂಲದ ವಸ್ತು ಇಲ್ಲಿ ಕಾಣಲು ಸಾಧ್ಯವಾಗುವುದಿಲ್ಲ.

3. ಮೂಲಕೃತಿಯ ಭಾಷೆಯನ್ನು ಶಿಷ್ಟಗೊಳಿಸಲು ಕೆಲವು ಪದಗಳಿಗೆ ಸಂವಾದಿಯಾಗಿ ಅನರ್ಥ ಪದಗಳನ್ನು ಬಳಸಲಾಗಿದೆ.

ಉದಾ:—

ಹೊಲಗೇರಿ(ಮೂಲಕೃತಿ)	ಹರಿಜನಕೇರಿ (ಶಿಷ್ಟಭಾಷೆ)
ಅಂಬಲಿ	ಗಂಜಿ
ಪಾಲು	ಪೀಸ್

ಇನ್ನೂ ಮುಂತಾದ ಹತ್ತು — ಹಲವು ಪದಗಳನ್ನು ಗುರುತಿಸಬಹುದು.

4. ಮೂಲಕೃತಿಯ ಪಾತ್ರಗಳಲ್ಲಿ ನಡೆಯುವ ಸಂಭಾಷಣೆಯನ್ನು ಶಿಷ್ಟಭಾಷೆಯ ಸಂದರ್ಭದಲ್ಲಿ ಯಥಾವತ್ತಾಗಿ ಬಳಸಲಾಗಿದೆ.

   ಉದಾ:— ಗಾರಸಿದಂ ಮತ್ತು ಊರಗೌಡರ ಸಂಭಾಷಣೆ (ಪಂಚಾಯ್ತಿಕಟ್ಟೆ)

5. ಮೂಲಕೃತಿ ಗದ್ಯ ಮತ್ತು ಕಾವ್ಯ ಓದುವ ಅನುಭವ ನೀಡಿದರೆ, ಇವರ ಶಿಷ್ಟಭಾಷೆಯದು ಅಸ್ಪಷ್ಟಗದ್ಯಕೃತಿಯಾಗಿದೆ.

6. ಅನುವಾದ ಮಾಡುವಾಗ ಅಥವಾ ಶಿಷ್ಟಭಾಷೆಗೆ ಬರೆಯುವಾಗ ವಾಕ್ಯದ ಪೂರ್ವಪದ ಉತ್ತರಾರ್ಧ ಪದವಾಗುವ ಅಥವಾ ಉತ್ತರಪದ ಪೂರ್ವಾರ್ಧ ಪದವಾಗುವ ಸಾಧ್ಯತೆಗಳು ಇರುತ್ತವೆ, ಅಂತಹ ಕಡೆಯಲ್ಲು ಮೂಲಕೃತಿಯಲ್ಲಿ ಇರುವಂತೆಯೇ ಅನುವಾದಿಸಲು ಹೋಗಿ ವಾಕ್ಯ ಅಸ್ಪಷ್ಟವಾಗಿರುವುದನ್ನು ಕಾಣಬಹುದು.

   ಉದಾ:— (ಮೂಲಕೃತಿ)

   ಹುಟ್ಟಿದರೆ ಮೇಟಿಯು ಇಂಥಿಂಥ ಹೆಸರಿಡು.
   (ಅನುವಾದ)
   ಹುಟ್ಟಿದರೆ ಗಂಡು ಇಂಥಿಂಥ ಹೆಸರಿಡು.
   (ಮೂಲಕೃತಿ)
   ಹುಟ್ಟಿದರೆ ಪಾಲೆಯು ಇಂಥಿಂಥ ಹೆಸರಿಡು.
   (ಅನುವಾದ)
   ಹುಟ್ಟಿದರೆ ಹೆಣ್ಣು ಇಂಥಿಂಥ ಹೆಸರಿಡು,

7. ಮೂಲಕೃತಿಯಲ್ಲಿ ಪೂರ್ಣವಿರಾಮ ಹಾಕುವ ಕಡೆಯಲ್ಲೆಲ್ಲ ವಾಕ್ಯದ ಮುಕ್ತಾಯವಾಗಿದೆ. ಹಾಗೂ ಮುಂದುವರೆದರೆ ಅದು ಕಾವ್ಯದ ಹಿನ್ನೆಲೆಯಲ್ಲಿ ಮುಂದಿನ ಸಾಲಿನಲ್ಲಿ ಆರಂಭವಾಗುತ್ತದೆ. ಆದರೆ ಇಲ್ಲಿ ವಾಕ್ಯದ ಮುಕ್ತಾಯವಿಲ್ಲದಿದ್ದರೂ ಅಥವಾ ವಾಕ್ಯದ ಅರ್ಥಪೂರ್ಣವಾಗದಿದ್ದರೂ ಪೂರ್ಣವಿರಾಮ ನೀಡಲಾಗಿದೆ.

8. ಗ್ರಾಮೀಣ ಜನರು ದೊಡ್ಡ ದೊಡ್ಡ ನಗರಗಳ ಬಗೆಗೆ ಕಟ್ಟಿಕೊಂಡಿರುವ ಕಲ್ಪನೆಯನ್ನು ಗ್ರಾಮೀಣ ಭಾಷೆಯಲ್ಲಿ ಅಭಿವ್ಯಕ್ತಿಸಬೇಕೆ ಹೊರತು ನಗರ ಪ್ರದೇಶದ ಭಾಷೆಯಲ್ಲಿ ಹಿಡಿದಿಡಲು ಕಷ್ಟವಾಗುತ್ತದೆ.

ಉದಾ:– ಚೆನ್ನನನ್ನು ಕುರಿತು ತಂದೆ – ತಾಯಿಯರ ಸಂಭಾಷಣೆ

9. ಅನುವಾದದಲ್ಲಿನ ಭಾಷೆ ಅಡುಗೂಲಜ್ಜಿ ಕಥೆ ಹೇಳಿದಕೆ ಅದನ್ನು ಸಂಗ್ರಹಿಸಿದಂತಿದೆ.

10. ಒಟ್ಟಾರೆ 'ಕುಸುಮಬಾಲೆ' ಕಾದಂಬರಿಯನ್ನು ಶಿಷ್ಟಭಾಷೆಗೆ ಅನುವಾದಿಸುವಲ್ಲಿ ಭಾಷೆಯ ಹಿಡಿತವನ್ನು ಸಂಪೂರ್ಣವಾಗಿ ಬಿಟ್ಟಿರುವುದು, ವಸ್ತುವಿನ ಬಗೆಗೆ ಆದ್ಯತೆ ನೀಡದಿರುವುದು ಮತ್ತು ಕೆಲವು ವಾಕ್ಯಗಳು ಧ್ವನಿಸುವ ಅನುಭವದ ಗಾಢತೆ (ಕುರಿಯಯ್ಯ ಮತ್ತು ದಲಿತ ಸಂಘರ್ಷ ಸಮಿತಿಯವರ ಸಂಭಾಷಣೆ) ಯನ್ನು ವ್ಯಕ್ತಪಡಿಸುವಲ್ಲಿ ಖಂಡಿತ ಸಾಧ್ಯವಾಗಿಲ್ಲ.

---

4. ಪ್ರತಿಕ್ರಿಯೆಗಾರ:– ನರೇಂದ್ರಕುಮಾರ್, ಸಂಶೋಧಕ (ಕನ್ನಡ)
ಮೈಸೂರು–6 ಇವರ ಪ್ರತಿಕ್ರಿಯೆ:

'ಕುಸುಮಬಾಲೆ' ಭಾಷಾ ಹಿನ್ನೆಲೆಯಲ್ಲಿ

ಸಾಹಿತ್ಯದ ಯಾವುದೇ ಪ್ರಕಾರವಾಗಿರಲಿ ಅದರಲ್ಲಿ ಮುಖ್ಯವಾಗಿ ಪದಗಳ ಸಂಯೋಜನೆ, ವಾಕ್ಯರಚನೆ, ಭಾಷಾ ಬಳಕೆಯು ಇದ್ದೇ ಇರುತ್ತದೆ. ಆ ಮೂಲಕವೇ ತನ್ನ ಒಳಗನ್ನು ಸಂವಹನಗೊಳಿಸಲು ಯತ್ನಿಸುತ್ತದೆ. ಆಧುನಿಕ ಯುಗದಲ್ಲಿ ಹೆಚ್ಚಾಗಿ ಕಥೆ ಹಾಗೂ ಕಾದಂಬರಿಗಳು ಓದುಗರಿಗೆ ಆಸಕ್ತಿಯನ್ನು ಕೆರಳಿಸಿದವು. ಕ್ರಮೇಣ ಅವಸ್ಥಾಂತರಗಳಿಂದ ಆಕಾಶದ ಕೆಳಗಿನ ಎಲ್ಲಾ ನಿಜ ಸಂಗತಿಗಳು ಬಯಲಾಗಬೇಕು. ಅವು ಸಾಹಿತ್ಯದಲ್ಲಿ ಮರುಹುಟ್ಟು ಪಡೆಯಬೇಕೆಂಬ ಕಾರಣದಿಂದ ಕನ್ನಡ ಸಾಹಿತ್ಯದಲ್ಲೂ ಆ ಬದಲಾವಣೆಗಳಾದವು. ಪ್ರಾದೇಶಿಕ ಕೃತಿಗಳು ಭಾಷಾವೈವಿಧ್ಯತೆಯಿಂದ ಸಂಸ್ಕೃತಿಯ ಮೂಲ ಸತ್ವವನ್ನು ಹಿಡಿಯತೊಡಗಿದವು. ಈ ಹಿನ್ನೆಲೆಯಲ್ಲಿ 'ಕುಸುಮಬಾಲೆ' ಕೃತಿ ಕೂಡ ಗಮನಾರ್ಹ.

'ಕುಸುಮಬಾಲೆ' ಯು ಗ್ರಾಮ್ಯ ಕನ್ನಡ ಬದಲಾವಣೆಯಿಂದ ಕೃತಿಯ ಮೂಲ ಸತ್ವ ಕಳೆದುಹೋಗುತ್ತದೆ. ಓದಿದಾಗ ಕೃತಿ ಅನುಭವದ ಗಟ್ಟಿತನವನ್ನು ಕಟ್ಟಿಕೊಡದೆ ಕಲ್ಪನೆಯನ್ನು ತಿಳಿಸಿದಂತೆ ಅವಾಸ್ತವ ಬದುಕನ್ನು ಚಿತ್ರಿಸಿದಂತೆ ಕಂಡು ಬರುತ್ತದೆ. ಆಯಾ ಪ್ರಾದೇಶಿಕ ಭಾಷೆಯು ಅವರ ಅಂದರೆ ಅಲ್ಲಿಯ ಜನರ ಜೀವನ ಕ್ರಮವನ್ನು ತಿಳಿಸುವಾಗ

ಅದು ನೈಜತೆಯ ಹಾಗು ಸಾಹಿತಿಯೂ ಕೂಡ ಭಾಷೆಯನ್ನು ಸಮರ್ಥವಾಗಿ ದುಡಿಸಿ ಕೊಳ್ಳುವ ಮೂಲಕ ಕೃತಿಯಲ್ಲಿ ಅನುಭವದ ಗಾಢತೆ ಹಾಗೂ ಗ್ರಾಮ್ಯ ಬದುಕಿನ ನಿಜ ಸಂಸ್ಕೃತಿಯನ್ನು ಹಿಡಿದಿಡಲು ಸಾಧ್ಯ. 'ಕುಸುಮಬಾಲೆ' ಕಾದಂಬರಿಯ ಬಗ್ಗೆ ಬಂದ ಹೆಚ್ಚಿನ ವಿಮರ್ಶೆಗಳಲ್ಲಿ ಭಾಷೆಯನ್ನೆ ಮುಖ್ಯವಾಗಿಟ್ಟುಕೊಂಡಿರುವುದು ಗಮನಾರ್ಹ. ಎಲ್ಲಾ ಕೃತಿಗೂ ಕೂಡ ಭಾಷೆಯನ್ನ ಬಳಸಿದರೂ ಕೂಡ ಇಲ್ಲಿನ ಭಾಷಾ ಬಳಕೆ ತೀರಾ ವಿಭಿನ್ನ. ಕಥಾ ನಿರೂಪಣೆ, ವರ್ಣನೆ, ಕಥನ ಹೀಗೆ ಎಲ್ಲವನ್ನು ಇಲ್ಲಿ ಗ್ರಾಮೀಣ ಭಾಷೆಯ ಪರಿಕ್ರಮಿಸಿದೆ. ಆ ಮೂಲಕ ಈ ಹಿಂದೆ ಆಗಿಲ್ಲದ ಭಾಷಾ ಪ್ರಯೋಗ ಇಲ್ಲಿ ನಡೆದಿರುವುದರಲ್ಲಿ ಆಶ್ಚರ್ಯವಿಲ್ಲ. ಸಾಹಿತ್ಯಕ್ಕೆ ಅಪರಿಚಿತ ಜಗತ್ತಿನ ಎಲ್ಲಾ ಪ್ರಕ್ರಿಯೆಗಳನ್ನು ತೆರೆದು ತೋರಿಸುವ ಸಂದರ್ಭಕ್ಕೆ ಆ ವರ್ಗದ ಭಾಷಾ ಬಳಕೆಯ ಕ್ರಮವನ್ನು ಇಲ್ಲಿ ಅನುಸರಿಸಿದಾರೆ. ಮತ್ತೆ ಆ ಭಾಷೆಯ ಮೂಲಕ ಓದುಗ - ಅನಕ್ತನೊಬ್ಬ ಬೆಳೆಯಬೇಕಾದಂತೂ ಬಹುಶ: ಇದು ತಿಳಿಸುತ್ತದೆ.

ಸಾಹಿತ್ಯದ ಬದಲಾವಣೆಗೆ ದಲಿತ - ಬಂಡಾಯ ಚಳವಳಿಯ ನಂತರ ಆಯಾ ವರ್ಗದ, ಶೋಷಿತರ, ಜಾನಪದರ ಬದುಕನ್ನು ಅವರ ಭಾಷೆಯ ಮೂಲಕವೇ ಕಟ್ಟಿಕೊಡಬೇಕೆಂಬ ಕಾಳಜಿ ಆಯಾ ಪ್ರಾದೇಶಿಕ ಭಾಷಾ ಬಳಕೆಯ ಅನಿವಾರ್ಯದ ಜೊತೆಗೆ ಅವಶ್ಯಕತೆಯನ್ನು ಉಂಟು ಮಾಡಿತು. ಪ್ರಾದೇಶಿಕ ಭಾಷೆಯನ್ನು ಬಳಸುವಾಗ ಸಹಜವಾಗೇ ಆ ಭಾಷೆಯ, ಸಂಸ್ಕೃತಿಯ ಜನರ ಪರಿಚಯವಿಲ್ಲದ ಓದುಗರಲ್ಲಿ ಕೃತಿ ಅರ್ಥಗ್ರಹಿಸುವಲ್ಲಿ ತೊಡಕನ್ನು ತಂದಿತು. ಇದು ಸಾಹಿತ್ಯ ಕೃತಿಯ ದೌರ್ಬಲ್ಯ ಅಥವಾ ಸೋಲೆಂದು ಹೇಳುವುದು ತಪ್ಪಾಗುತ್ತದೆ. ಯಾಕೆಂದರೆ ಸಾಹಿತ್ಯ ಓದುಗ ತನ್ನ ಓದಿನ ವಿಸ್ತಾರವನ್ನು ಹೆಚ್ಚಿಸಿಕೊಳ್ಳಬೇಕಾದುದು ಇಂದು ಅಗತ್ಯ. ಒಂದು ಜನಾಂಗದ ಸಂಸ್ಕೃತಿಯನ್ನು ಅರಿಯಲು ಆತನಿಗೆ ಎಲ್ಲಾ ಭಾಷೆಯ ಪರಿಚಯ ಅತ್ಯಗತ್ಯ. ಇಲ್ಲವೆಂದರೆ ಕೃತಿಯ ಒಳಧ್ವನಿಯನ್ನು ಗುರುತಿಸುವುದು ಸಾಧ್ಯವಾಗದೆ ಕೃತಿ ಅರ್ಥವಾಗಿಲ್ಲ ಎನ್ನುವ ಮಾತು ಮೂಡಿಬರುತ್ತದೆ. ಅದು ಭಾಷೆಯ ಅರಿವಿಲ್ಲದ ಓದುಗನ ಹಿನ್ನಡೆಯನ್ನ ತಿಳಿಸುತ್ತದೆ.

ಹಳ್ಳಿಯ ಅದರಲ್ಲೂ ನಂಜನಗೂಡು ಕಡೆಯ ಭಾಷೆ ಹಾಗು ದಲಿತ ಜನರ ಬದುಕಿ ನೊಟ್ಟಿಗೆ ಬೆರೆತ ಓದುಗನೊಬ್ಬನಿಗೆ ಈ ಕೃತಿ ಓದಿದಾಗ ಆಗುವ ಅನುಭವ ಅದು ವಾಸ್ತವ ಬದುಕನ್ನು ಪ್ರತಿಬಿಂಬಿಸುತ್ತದೆ. ಕೃತಿ ಕಟ್ಟಿಕೊಡುವ ಭಾಷೆಯ ವಿಕ್ರಮ ಕಾದಂಬರಿಯಲ್ಲಿ

ಬರುವ ಬಸಪ್ಪಸ್ವಾಮಿ, ಮಧ್ಯಜಾತಿಯರು ಹಾಗೂ ದಲಿತ ಮುಖಂಡರು ಕೆಲವರು ಬಳಸುವ ಭಾಷೆಗೂ, ಶೀನಾ ಹಿಂದುಳಿದ ಕೆಳವರ್ಗ ಬಳಸುವ ಭಾಷಾವ್ಯತ್ಯಾಸವನ್ನು ಕೃತಿಯೊಳಗೆ ಕಾಣ ಬಹುದು. ಭಾಷೆಗಳು ಜಾತಿಯನ್ನು, ಜಾತಿಯನ್ನು ಭಾಷೆಯ ಮೂಲಕ ದಸ್ಯ ಹಾಗೂ ಮಧ್ಯಜಾತಿಯರ ನಡುವೆ ನಡೆಯುವ ಸಂಭಾಷಣೆಯಲ್ಲಿ ಗುರುತಿಸಬಹುದು. ಇಂತಹದನ್ನು ಅನುವಾದದಲ್ಲಿ ತರಲು ಅಸಾಧ್ಯ. ಇಬ್ಬರ ಭಾಷೆ ಅವರ ಪರಿಸರ, ಬೆಳೆದ ವಾತಾವರಣದಿಂದಲೆ ಬಂದುದು. ಇದನ್ನು ಅನುವಾದಿಸಿದಾಗ ಭಿನ್ನತೆ ಇಲ್ಲವಾಗಿ ಅರ್ಥಕಳೆದುಕೊಳ್ಳುತ್ತದೆ.

ಕೃತಿಯಲ್ಲಿ ಬಳಕೆಗೊಂಡಿರುವ ಕೆಲವು ಶಬ್ದ ಹಾಗೂ ವಾಕ್ಯಗಳೇ ಗ್ರಾಂಥಿಕ ಭಾಷೆಗೆ ಬಂದಾಗ ಪುಟಗಟ್ಟಲೆ ವಿವರಣೆ ಕೇಳುವಂತಿವೆ. ಉದಾಹರಣೆಗೆ 'ಕಲ್ಲೂ ನೀರು ಕರಗುತ್ತಿತ್ತು', 'ಗವನತ್ತಲು', 'ಸಪ್ಪು ಸಮರಾತ್ರಿ'.... ಪದಗಳು ರಾತ್ರಿಯ ಸೂಚಕಗಳಾಗಿದ್ದೂ ಕೂಡ ಬೇರೆ ಬೇರೆ ಸಂದರ್ಭಕ್ಕೆ ಬಳಸುವ ಮೂಲಕ ಅರ್ಥವ್ಯಾಪ್ತಿಯನ್ನು ಹೆಚ್ಚಿಸಿಕೊಂಡು ಬೇರೆಯೇ ಆದ ಅರ್ಥಗಳನ್ನು ಪಡೆದುಕೊಳ್ಳುತ್ತವೆ. ಹೀಗೆ ಇಂತಹ ಎಷ್ಟೋ ಪದಗಳನ್ನು ಕಾದಂಬರಿಯ ಉದ್ದಕ್ಕೂ ತನ್ನದೇಯಾದ ವಿಶೇಷ ಭಾವನ್ನು ಸೂರಣಿಸುತ್ತದೆ. ಹಾಗೇ ಕೃತಿಯ ಒಳಗೆ ಬರುವ 'ಹಾಗೇನಾಯ್ತು, ಅಂದ್ರೆ....' 'ಶಿವಶಿವಾ ಆ ಸಂತೆ....' 'ಹೀಗಾಗುತ್ತಿರಲು...' ಇಂತ ಪದಗಳು ಓದುಗನಿಗೆ ಕುತೂಹಲ ಕೆರಳಿಸಿ ಕಾದಂಬರಿಯು ಮುಂದುವರಿಯಲು ಬೇಕಾದ ಒತ್ತನ್ನುಕೊಡುತ್ತದೆ. ಇವು ಜಾನಪದ ಕಾವ್ಯದ ಭಾಷಾಸೊಗಡನ್ನು ಒಳಗೊಂಡು ಓದಿದಾಗ ಕಾವ್ಯವನ್ನು ಓದಿದ ಅನುಭವವನ್ನು ಕೊಡುತ್ತದೆ.

'ಕುಸುಮಬಾಲೆ' ಯ ಗದ್ಯನಕ್ಕೆ ಮೂಲಕಾರಣ ಭಾಷೆ ಎಂಬುದನ್ನು ಅಲ್ಲಗಳೆಯುವಂತಿಲ್ಲ. ಆ ಭಾಷೆಯನ್ನು ಬದಲಾಯಿಸಿ ಅಲ್ಲಿನ ಪಾತ್ರಗಳನ್ನೇ ಹಾಗೂ ಆ ಕಥೆಯನ್ನೇ ಹೇಳಹೊರಟರೆ ಕಾದಂಬರಿಯ ಒಳಗು ಅಸಹಜ ಹಾಗೂ ಭ್ರಾಮಕ ಜಗತ್ತಾಗಿ ಮಾತ್ರ ಕಂಡು ಬರುತ್ತದೆ, ಅಂತಹ ಸಂದರ್ಭಕ್ಕೆ ಕಾದಂಬರಿಕಾರ ತನ್ನ ಕೃತಿಯಲ್ಲಿ ಹೇಳಹೊರಡುವ ಉದ್ದೇಶ, ಆಶಯ ಇವೆಲ್ಲವೂ ಬದಲಾಗುತ್ತವೆ. ಹೀಗಾದಾಗ ವಸ್ತು ಕೂಡ ಬದಲಾವಣೆಗೊಳ್ಳುವುದರಲ್ಲಿ ಅನುಮಾನವಿಲ್ಲ. ಆಗ ಸತ್ವವಿಲ್ಲದ ಸರಳಕೃತಿಯಾಗುತ್ತದೆ. ಮೂಲದ ತಿರುಳನ್ನು ಕಳೆದು ಕೊಂಡು ಸಪ್ಪೆಯಾಗುತ್ತದೆ.

ಈ ಕೃತಿಯ ಒಳಗೆ ಸಿಗುವ ಇನ್ನೊಂದು ಮುಖ್ಯ ಭಾಷಾಭಿನ್ನತೆಯೆಂದರೆ ಕೃತಿಯನ್ನು ಶಿಷ್ಟಭಾಷೆಗೆ ಅನುವಾದಿಸಲು ಕೂಡ ಅಸಾಧ್ಯ. ಕೆಲವು ಪದ ವಾಕ್ಯಗಳ ಅರ್ಥಗಾಂಭೀರ್ಯತೆಯನ್ನು

ಧ್ವನಿಯನ್ನು ಶಿಷ್ಟಪದ ಹಿಡಿದಿಡಲು ಸಾಧ್ಯವಿಲ್ಲ. ಒಟ್ಟಾರೆ ಮೂಲಕೃತಿ ಧ್ವನಿಸುವ ಗಾಢತೆ ಅನುವಾದದಲ್ಲಿ ಸಿಗುವುದು ಖಂಡಿತ ಅಸಾಧ್ಯ.

5. ಪ್ರತಿಕ್ರಿಯೆಗಾರ: ಡಾ. ಕಾಳೇಗೌಡ, ಭಾರತೀಯ ಭಾಷಾಸಂಸ್ಥೆ,
ಮೈಸೂರು, ಇವರ ಪ್ರತಿಕ್ರಿಯೆ:

1. ಶಿಷ್ಟ ಕನ್ನಡಕ್ಕೆ ಬದಲಾಯಿಸಿದಾಗ ವಸ್ತು ಬದಲಾಯಿತೆ? (ವಸ್ತು — content)

ಆಡುಗನ್ನಡದಲ್ಲಿರುವ ಯಾವುದೇ ಕೃತಿಯನ್ನು ಶಿಷ್ಟ ಕನ್ನಡಕ್ಕೆ ಬದಲಾಯಿಸಿದಾಗ ಅದರ ವಸ್ತು ಬದಲಾಗುವುದಿಲ್ಲ. ವಸ್ತು, ವಸ್ತು ಮೊದಲಿದ್ದಂತೆಯೇ ಉಳಿಯುತ್ತದೆ.

2. ವಸ್ತು ಬದಲಾಗದಿದ್ದರೆ ಬದಲಾಗಿರುವುದು ಏನು?

ಪರಿಣಾಮ. ಅಂದರೆ ಯಾವುದೇ ವಸ್ತುವನ್ನು ಅಥವಾ ವಸ್ತುವಿನ ಬಗ್ಗೆ ಹೇಳಲು ಬಳಸಿರುವ ಭಾಷೆ ಓದುಗನ/ಕೇಳುಗನ ಮೇಲೆ ಪರಿಣಾಮ ಬೀರುತ್ತದೆ. ಆಡುಭಾಷೆಯಲ್ಲಿ ಒಂದು ಹಳ್ಳಿಗನ ಪಾತ್ರ ಮಾತನಾಡಿದರೆ ಅದು ಸಹಜವಾಗಿ ಪರಿಣಾಮಕಾರಿಯಾಗಿರುತ್ತದೆ. ಓದುಗನ ಮನಸ್ಸಿನಾಳಕ್ಕೆ ಹೋಗಿ ತಟ್ಟುತ್ತದೆ. ಅದೇ ಪಾತ್ರದ ಅದೇ ಮಾತಿಗೆ ಶಿಷ್ಟಕನ್ನಡ ಬಳಸಿದರೆ ಅದು ಸಪ್ಪೆಯಾಗಿ, ಕೃತಕವಾಗಿ, ಜಾಳು ಜಾಳಾಗಿರುತ್ತದೆ. ಅದು ಬೀರಬೇಕಾಗಿದ್ದ ಪರಿಣಾಮವನ್ನು ಬೀರಲು ಸೋಲುತ್ತದೆ.

3. ಮೂಲಕೃತಿಯಲ್ಲಿ ಬೀರುವ ಸಂವೇದನೆ ಶಿಷ್ಟಕನ್ನಡಕ್ಕೆ ಪರಿವರ್ತಿಸಿದಾಗಲೂ ಬೀರುವುದೇ?

ಇಲ್ಲ, ಬೀರುವುದಿಲ್ಲ. ಉದಾಹರಣೆಗೆ:—

ಮೂಲಕೃತಿ— 1) ಕಲ್ಲೂ ನೀರೂ ಕರಗುತ್ತಿತ್ತೂ ....
ಶಿಷ್ಟಭಾಷೆ — ಮಧ್ಯರಾತ್ರಿಯ ಸಮಯ....
ಮೂಲಕೃತಿ — 2) " ಯಾವೂರ ತಾಯಿ ನಿಂದು?"
ಶಿಷ್ಟಭಾಷೆ — ನಿನ್ನದು ಯಾವ ಊರಮ್ಮ?

ಉದಾಹರಣೆಯಲ್ಲಿ ಬರುವ " ಕಲ್ಲೂ ನೀರೂ ಕರಗುತ್ತಿತ್ತೂ" ಎಂಬಲ್ಲಿ ನಂಬಿಕೆ, ಸಂಸ್ಕೃತಿ, ಕಥೆ ಮತ್ತು ಸಮಯ ಎಲ್ಲ ಒಂದಾದ ಮೇಲೆ ಒಂದರಂತೆ ಓದುಗನ ಮನಸ್ಸಿನಲ್ಲಿ ರೆಕ್ಕೆ ಕೆದರಿ ಕೊಂಡಂತೆ, ಅರ್ಥ ವಿಶಾಲತೆಯನ್ನು ತೋರುತ್ತದೆ.

ಆದರೆ 'ಮಧ್ಯರಾತ್ರಿಯ ಸಮಯ' ಎಂಬಲ್ಲಿ ಕೇವಲ ಕಾಲವನ್ನು ತಿಳಿಸುವ ಒಂದು ಹೇಳಿಕೆಯಾಗುತ್ತದೆ ಇನ್ನೇನನ್ನು ಹೇಳಿದಂತೆ ಅನ್ನಿಸುವುದಿಲ್ಲ.

ಎರಡನೆ ಉದಾಹರಣೆಯಲ್ಲಿ ಬರುವ "ಯಾವೂರ ತಾಯಿ ನಿಂದು?" ಎಂಬಲ್ಲಿ ಕಾವ್ಯಮಯತೆ ಎದ್ದು ಕಾಣುತ್ತದೆ. 'ತಾಯಿ' ಎಂಬ ಪದ ಆತ್ಮದೊಳಗಿಂದ ಬಂದ ಆತ್ಮೀಯತೆಯನ್ನೂ ಪ್ರೀತಿಯನ್ನು ಸೂಚಿಸುತ್ತದೆ. ಆದರೆ 'ನಿನ್ನದು ಯಾವ ಊರಮ್ಮ?' ಎಂಬುದು ಕೇವಲ ಮಾಹಿತಿ ಪಡೆಯುವ ಪ್ರಶ್ನೆಯಂತೆ ಕಾಣುತ್ತದೆ. ಆದುದರಿಂದ ಸೂಕ್ತ ಸಂದರ್ಭದಲ್ಲಿ ಪಾತ್ರಗಳಿಗೆ ತಕ್ಕಂತೆ, ಭಾವನೆಯನ್ನು ಆಧರಿಸಿ ಸೂಕ್ತ ಭಾಷೆ ಬಳಸಿದರೆ ಹೆಚ್ಚು ಪರಿಣಾಮಕಾರಿಯಾಗಿರುತ್ತದೆ. ಇದರಿಂದ ಸತ್ವಪೂರ್ಣವಾಗುತ್ತದೆ.

6) ಪ್ರತಿಕ್ರಿಯೆಗಾರ: – ಬಿ.ಎಂ. ರಂಗರಾಜು, ರಾಷ್ಟ್ರೀಯ ಮಾದರಿ
ಸಮೀಕ್ಷಾ ಸಂಸ್ಥೆ, ಮೈಸೂರು
ಇವರ ಪ್ರತಿಕ್ರಿಯೆ :

ಶಿಷ್ಟಭಾಷೆಯ ಇಡೀ ಕಾದಂಬರಿಯನ್ನು ಓದಿದಾಗ ಅಷ್ಟಾಗಿ ವಸ್ತು ಬದಲಾದಂತೆ ಕಾಣುವುದಿಲ್ಲ. ಕೆಲವು ಸಾಲುಗಳಲ್ಲಿ ವಸ್ತು ಬದಲಾದಂತೆ ಕಂಡರೂ ಅದು ಭಾಷಾ ಭಿನ್ನತೆಯಷ್ಟೆ. ಕಾದಂಬರಿಯ ವಸ್ತು ಆ ಭಾಗದ ಭಾಷೆಯ ಜೀವಾಳವೇ ಆಗಿರುವುದರಿಂದ ಮೇಲ್ನೋಟಕ್ಕೆ ವಸ್ತು ಬದಲಾದಂತೆ ಕಂಡರೂ ಇಡೀ ಕಾದಂಬರಿಯು ಶಿಷ್ಟಭಾಷೆಯಲ್ಲಿ ಬದಲಾಗಿದೆ ಎನ್ನಲಾಗದು. 'ಕಲ್ಲೂ ನೀರು ಕರಗುತ್ತಿತ್ತು' ಎಂಬ ಮೂಲ ಕೃತಿಯ ಸಾಲು ಶಿಷ್ಟಭಾಷೆಯಲ್ಲಿ 'ಮಧ್ಯರಾತ್ರಿ ಸಮಯ' ಇಲ್ಲಿ ಅಲಂಕಾರಿಕ ಭಾಷೆಯ ಬದಲಿಗೆ ಅರ್ಥವನ್ನು ಕಂಡುಕೊಳ್ಳಲಾಗಿದೆ. ಒಂದು ದೃಷ್ಟಿಕೋನದಲ್ಲಿ ಈ ಅಲಂಕಾರಿಕ ವಾಕ್ಯವು ಮೂಲ ಕಾದಂಬರಿಯ ಭಾಷಾ ಮೆರುಗು ಹೆಚ್ಚಿಸಿದೆ. ಶಿಷ್ಟ ಭಾಷೆಯಲ್ಲಿ ಸಾಮಾನ್ಯವೆಂಬಂತೆ ಕಾಣುತ್ತದೆ. ಕಾದಂಬರಿಯ ವಸ್ತು ಬದಲಾಗದಿದ್ದರೂ ಈ ಭಾಷಾ ಮೆರಗನ್ನು ಕಳೆದುಕೊಂಡು ಕೇವಲ ಅರ್ಥವನ್ನಷ್ಟೆ ಶಿಷ್ಟಭಾಷೆಯಲ್ಲಿ ಉಳಿಸಿಕೊಂಡಿದೆ ಹಾಗೂ

'ದಿನನಿತ್ಯ' ಎಂಬ ಪದವನ್ನು ಸೇರಿಸಲಾಗಿದ್ದು ಸಂಸ್ಕೃತದ ಕ್ರಿಯಾ ಎಂಬುದು ಶಿಷ್ಟ ಕನ್ನಡದಲ್ಲಿ ಕೆಲಸಕಾರ್ಯ ಎಂಬ ಜೋಡು ನುಡಿಯಾಗಿದೆ.

'ನಿನ್ನದು ಯಾವ ಊರಮ್ಮ' ಎಂಬ ಯಾವ ಊರ ತಾಯಿ ನಿಂದು? ಇಲ್ಲೂ ಅನೇಕ ಭಾಷಿಕ ಬದಲಾವಣೆಯನ್ನು ಕಾಣಬಹುದು. ಸ್ಥಾನಪಲ್ಲಟ ಹೆಚ್ಚಾಗಿ ಕಾಣಬಹುದು. ನಿಂದು – ನಿನ್ನದು, ಯಾವೂರ – ಯಾವ ಊರಮ್ಮ, ಮೂಲದ ತಾಯಿ ಪದವು 'ಊರು' ಎಂಬ ನಾಮಪದ ಅಮ್ಮ ಎಂಬ ಪದ ಸೇರಿ ಭಾಷೆ ಭಿನ್ನತೆಯಾಗಿದೆ.

'ಕುಸುಮಬಾಲೆ' ಕಾದಂಬರಿಯಲ್ಲಿ ವಸ್ತುವಿಗಿಂತ ಭಾಷೆಯೇ ಪ್ರಧಾನವಾಗಿದೆ ಎಂದರೆ ತಪ್ಪಾಗಲಾರದು, ಇದೇ ಕಾದಂಬರಿ ಹೆಚ್ಚಾಗಿ ಧ್ವನಿಬದಲಾವಣೆಗಳ ಪಟ್ಟಿದೆ.

ಅವ್ವಯ್ಯಾ? ಅವಳೇನಾ, ನಾ ಯಾನ ಹೇಳಲವ್ವ ತಾಯಿ – ನಾನು ಏನು ಹೇಳಲಮ್ಮ ತಾಯಿ, ಯಾನ = ಏನು, ಅಕ್ಕಿ – ಅಕ್ಕ, ಕುಸುಮುಬಿ, ಚನ್ನನೂವಿ, ತಲೆ –ತಲ್ವ, ಈ ಪದಗಳಲ್ಲಿ ಒಂದು ರೀತಿಯ ಸಂವೇದನೆಯನ್ನು ಭಾಷೆ ಧ್ವನಿ ರೂಪದಲ್ಲಿ ನಾವು ಮೂಲ ಕಾದಂಬರಿಯಲ್ಲಿ ಕಾಣಬಹುದು. ಆದರೆ ಶಿಷ್ಟ ಭಾಷೆಯಲ್ಲಿ ಕಾಣಲಾಗುವುದಿಲ್ಲ.

ಅವ್ವಾ ಅವ್ವಾ ಆದ್ಯಾಕಕನಿ ಈ ಕೆಲ್ಸ. ಬ್ಯಾಸರಿಕ ಅಂದನು
ಅಮ್ಮ ಅಮ್ಮ ಅದೇಕೋ (ಕಾಣೆ) ಈ ಕೆಲಸ ಬೇಸರ ನನಗೆ.

ಇಲ್ಲಿ ಮೂಲದಲ್ಲಿರುವ ಸಂವೇದನೆ ಶಿಷ್ಟಭಾಷೆಯಲ್ಲಿ ಕಂಡುಕೊಳ್ಳಲಾಗುವುದಿಲ್ಲ. ನಾನು ಕನ್ನಿ ಭಾವಯ್ಯನೋರೆ = ನಾನು ಭಾವ, ಇಲ್ಲಿ ಸಂವೇದನೆ ಸಂಪೂರ್ಣ ಕಾಣೆಯಾಗಿದ್ದು ಭಾಷಾ ವ್ಯತ್ಯಾಸವಾಗಿದೆ ಹೊರತು ವಸ್ತು ಬದಲಾಗಿಲ್ಲ. ಆದ್ದರಿಂದ ಈ ಕಾದಂಬರಿಗೆ ಭಾಷೆಯೇ ಜೀವಾಳವಾಗಿದೆ ಎಂದರೆ ತಪ್ಪಾಗಲಾರದು.

'ಅಡ್ಕೆ ಯಾಡ ನಿಮ್ಮವ್ವನ ಕೊಟ್ಟಯ್ಯಡ' 'ಮತ್ತೆ ವಾಪಸ್ಸು ಕೊಡುವುದಾದರೆ ಕೊಡ್ತೀನಿ', ಮೂಲದಿಂದ ಶಿಷ್ಟಭಾಷೆ ತರುವಾಗ ಸಂವೇದನೆಯನ್ನು ಕಳೆದುಕೊಂಡಿದೆ.

(ಮೂಲಕೃತಿ) – ಏನಯ್ಯಾ ಜನ: ಹೇಗೆ ನಡೆಯುತ್ತಾ ಇದೆ ಕೆಲಸಕಾರ್ಯ ಕ್ಷೇಮವೋ?
(ಶಿಷ್ಟಕೃತಿ) – ಏನು ಜನ್ನ ಹೇಗೆ ನಡೆಯುತ್ತಿದೆ ಕೆಲಸಕಾರ್ಯ.

ಇಲ್ಲಿ ಮೂಲದಲ್ಲಿ ಎಂದಾಗಲಿ ಅಥವಾ ಔಪಚಾರಿಕ ಮಾತಾಗಲಿ ಸಂವೇದನೆ ಭಾಷಾ ಬದಲಿಕೆಯಿಂದಾಗಿ ಕಾಣೆಯಾಗಿದೆ.

ಮೂಲಕೃತಿಯಲ್ಲಿ – ಕೂಸ್ಯಾನ ಆರೋಗ್ಯವಾಗಿ ಚಂದಗಾಣಾಗಿ ಆಡ್ಯಂದದ
ಶಿಷ್ಟಭಾಷೆಯಲ್ಲಿ – ಮಗುವೇನೋ ಆರೋಗ್ಯವಾಗಿ ಆಟವಾಡಿಕೊಂಡಿದೆ.

ಶಿಷ್ಟಭಾಷೆಯಲ್ಲಿ ' ಚಂದಗಾಣಾಗಿ ' ಎಂಬ ಪದ ಬಿಟ್ಟು ಹೋಗಿದ್ದು ಚಂದವಾಗಿ ಅಥವಾ ' ಆನಂದವಾಗಿ ' ಸೇರಿದಂತೆ ಮೂಲಕ್ಕೆ ನಿಷ್ಠೆಯಾಗಿ ಉಳಿದುಕೊಳ್ಳುತ್ತಿತ್ತು. ಹಾಗು ಮೂಲದಲ್ಲಿ ಕಾಣುವ ಸಂವೇದನೆಯನ್ನು ಕಾಪಾಡಬಹುದಾಗಿತ್ತು. ಶಿಷ್ಟಭಾಷೆಯಲ್ಲಿ ಕಂಡು ಬರುವ ಸಂವೇದನೆಯನ್ನು ಬೇರಾಗಿ ಶಿಷ್ಟಭಾಷೆಗೆ ಬದಲಾಯಿಸಿದಾಗಲು ಕಾಣೆಯಾಗಿದೆ.

ನಂಜನಗೂಡು ಭಾಗದ ಭಾಷೆಯಲ್ಲಿ ಅನೇಕ ಹೊಸಪದಗಳು ಹುಟ್ಟಿಕೊಂಡಿವೆ.
ದಾರಂದ – ಬಾಗಿಲು, ಆಳುಮಗ – ಕೆಲಸದಾಳು, ಜೋಗ – ಅಂಗಿ, ರಾಯಮ್ಮ – ಹೆಂಗಸು, ತೀರಾರಾರು – ನಾಯಕರು, ಓಜಪ್ಪ – ಬಡಗಿ, ಕಾಟಪೋಟಿ – ಪೈಪೋಟಿ, ಹೆದ್ದೊಕ್ಕಲು – ಅಭಿವೃದ್ಧಿ, ಸೊಳ್ಳು – ಎಣ್ಣೆದೀಪ, ಹೀಗೆ ಅನೇಕ ಹೊಸ ನಮೂನೆಯ ಪದಗಳನ್ನು ನಾವು ಮೂಲ ಭಾಷೆಯಲ್ಲಿ ಕಾಣಬಹುದು.

ಮೂಲ ಭಾಷೆ ಮತ್ತು ಶಿಷ್ಟಭಾಷೆಯಲ್ಲಿ ಅನೇಕ ರೂಪ ವ್ಯತ್ಯಾಸ, ಪ್ರಾದೇಶಿಕ ವ್ಯತ್ಯಾಸ ಕಾಣಬಹುದು. ಮೈಸೂರು ಕನ್ನಡದಲ್ಲಿ ' ಅಮ್ಮ ' ಶಬ್ದ ತಾಯಿ ಎಂದರ್ಥದಲ್ಲಿದ್ದರೆ ಧಾರವಾಡ ಕನ್ನಡದಲ್ಲಿ ' ವಿಧವೆ ' ಎಂದಿದೆ.

ಚಾರಿತ್ರಿಕ ವ್ಯತ್ಯಾಸವನ್ನು ನಾವು ಕಾಣಬಹುದು. ಉದಾ:– ಇದೇ ಕಾದಂಬರಿಯಲ್ಲಿ ಕಾಣುವ ' ಕೂಸೂ ' ಪದವು ಹೆಣ್ಣು, ಮಗು ಎಂದಾಗಿದ್ದು ಈ ' ಕೂಸು ' ಎಂಬುದನ್ನು ಸ್ತ್ರೀಲಿಂಗ, ಪುಲ್ಲಿಂಗ ಎರಡು ಲಿಂಗಗಳಲ್ಲಿ ಬಳಕೆಯಾಗಿರುವುದನ್ನು ನಾವು ಕಾಣಬಹುದು.

ಕಾದಂಬರಿಯ ಮೂಲಭಾಷೆಯಲ್ಲಿ ಅವಧಾರಣೆಯನ್ನು ಕಾಣಬಹುದು. ಒಂದು ಶಬ್ದದಲ್ಲಿ ಇಲ್ಲದೇ ಇರುವ ಹೊಸ ಅಕ್ಷರವನ್ನೂ, ಒತ್ತಕ್ಷರವನ್ನೂ, ದೀರ್ಘವನ್ನೂ ಕೂಡಿಸಿ ಮಾತನಾಡುತ್ತಾನೆ. ಹಾಗಾಗಿ ಧ್ವನಿಮಾ ವ್ಯತ್ಯಾಸಗಳನ್ನು ಕಾಣಬಹುದು.

ಉದಾ: – ಚಂದ – ಚಂದಗಾಣಾಗಿ

ಅಕ್ಷರಪಲ್ಲಟವನ್ನು ಮೂಲಭಾಷೆಯಲ್ಲಿ ಕಾಣಬಹುದು. ವೇಗವಾದ ಉಚ್ಚಾರಣೆಯಿಂದ ತಪ್ಪು ಗ್ರಹಿಕೆಯಿಂದ ಅಥವಾ ಧ್ವನ್ಯಾಂಗಗಳ ಕಾರಣದಿಂದಾಗಿ ಅಕ್ಷರಪಲ್ಲಟಗೊಳ್ಳುತ್ತದೆ.
ಉದಾ:– ಈಕಡೆ – ಇತ್ತಗ, ಅರ್ಗುಮಾನ – ವರ್ತಮಾನ, ಕಿನ್ನಪ್ಪ – ಕೃಷ್ಣಪ್ಪ, ಕಾಗದ – ಕಾದ್ಗ.

ತಪ್ಪುಸಹಚರ್ಯ — ಭಾಷಾಬಳಕೆಯ ಸಂದರ್ಭದಲ್ಲಿ ದೇಶಿಶಬ್ದವಿರಬಹುದು ಅಥವಾ ಅನ್ಯ ದೇಶಿ ಇರಬಹುದು. ಅಸ್ಪಷ್ಟ ಕೇಳುವಿಕೆಯಿಂದ ಅಥವಾ ಅದೇ ಅರ್ಥದ ಶಬ್ದದ ಸಹಚರ್ಯಯಿಂದಲೂ, ಶಬ್ದದಲ್ಲಿ ಧ್ವನಿವ್ಯತ್ಯಾಸವಾಗುವುದುಂಟು.

ಉದಾ:— ವಂಜಿನ — ಒಂದುದಿನ, ಪೋಟ— ಪೋಟೊ, ವ್ಯಾಳೆ—ವೇಳೆ, ಸುಕ್ರವಾರ —ಶುಕ್ರವಾರ, ಮೂಟ್ಕ—ಮೂಟ, ಜಾ—ಕ್ಷಾ, ಗ್ಯಾನ—ಜ್ಞಾನ, ಮುಕ್ಷ—ಮುಖ, ಕಟ—ಸ್ಟಡ್ಡು, ಶಬುದ—ಶಬ್ದ, ಶರಿ—ಸರಿ, ಮಾರಾಜ್ರು—ಮಹಾರಾಜ, ಈಳ್ಯ—ಬಿಳ್ಯ, ಮಿತವ್ಯಯಮಾನಕ್ಕೆಯನ್ನು ಕಾದಂಬರಿಯಲ್ಲಿ ಕಾಣಬಹುದು. ಸುಲಭವಾಗಿ ಉಚ್ಚರಿಸುವುದರ ಜೊತೆಗೆ ಮಿತವಾಗಿಯು ಉಚ್ಚರಿಸಬಯಸಿ ಉದ್ದನೆಯ ಶಬ್ದಗಳನ್ನು ಅತ್ಯಂತ ಮೊಟಕುಗೊಳಿಸಿ ಮಾತನಾಡುವುದು ರೂಢಿ.

ಉದಾ:— ಗೌಡಗಳು— ಗೌಡ್ರು, ಯಮ್ಮ—ಹೆಂಗಸು.

ಮೂಲಭಾಷೆಯ ಅನೇಕ ಪದಗಳು ಶಿಷ್ಟಭಾಷೆಯಲ್ಲಿ ಕಾಣೆಯಾಗಿದೆ.

ಉದಾ:— ಜಂದಗಾಣಾಗಿ, ಅಯ್ಯಾ, ಬಡಿತ್ತ್ವಾ, ಅದ್ಯಾಕ (ಕನ) ಕಾಣೆ

ಇನ್ನೂ ಉಳುಕಾ ಕರಿಕೊಟ್ಟುವಿ... ಈ ವಾಕ್ಯವು ಶಿಷ್ಟ ಭಾಷೆಯಲ್ಲಿ ಇಲ್ಲ. ಹಾಗೆಯೆ ಮೂಲಭಾಷೆಯಲ್ಲಿ ಇಲ್ಲದ ಅನೇಕ ಪದ, ವಾಕ್ಯಗಳು ಶಿಷ್ಟಭಾಷೆಯಲ್ಲಿ ಸೇರಿಸಲಾಗಿದೆ.

ಉದಾ: ಪಟಪಟನೆ, ವಚ್ಚನ — ಹೊಸ, ಮಾದರ ಜೋತ, ಬೊಸುಗುಕ.

ಇನ್ನೂ ಕೆಲವು ಪದಗಳು ತಪ್ಪಾಗಿ ಅರ್ಥವನ್ನು ಕಳೆದುಕೊಂಡಿವೆ.

'ದೊರೆ' ಎಂಬುದು ಒಂದು ಕಾಲದಲ್ಲಿ 'ರಾಜ' ಎಂದರ್ಥ. ಅದೀಗ ಶ್ರೀಮಂತ ಎಂದು ವ್ಯತ್ಯಾಸಗೊಂಡು ಹೀನಾರ್ಥ ಪ್ರಾಪ್ತಿಯಾಗಿದೆ. ಜಗ — ನೆಗೆ

ಕುಸುಮಬಾಲೆ ಕಾದಂಬರಿಯು ವಿಭಿನ್ನ ಭಾಷಾ ಭನ್ನೆ, ಅನೇಕ ನಮೂನೆಯ ಪದಸಂಪತ್ತು, ಹಾಗೂ ಕಾದಂಬರಿಯ ವಸ್ತುವನ್ನು ಆಯ್ದುಕೊಂಡ ಪ್ರದೇಶದ ಸಾಮಾಜಿಕ ಜೀವನವನ್ನು, ಒಂದು ಸಮುದಾಯದ ವಿಶಿಷ್ಟತೆಯನ್ನು ಬಹಳ ವಿಶಿಷ್ಟ ಕೊಡುಗೆಯಾಗಿ ನೀಡಿ ಕನ್ನಡ ಸಾಹಿತ್ಯದಲ್ಲಿ ಬೆಳೆದು ನಿಂತ ಅತ್ಯುತ್ತಮ ಭಾಷಾ ಕಥಾವಸ್ತುವಾಗಿದೆ.

— o —

ಗ್ರಂಥಸೂಚಿ

I . ಸಹಾಯಕ ಗ್ರಂಥಗಳು

ಲೇಖಕರು	ಪ್ರಕಟವಾದ ವರ್ಷ	ಗ್ರಂಥಗಳು ಮತ್ತು ಪ್ರಕಾಶಕರು
1. ಅನಂತಮೂರ್ತಿ, ಯು.ಆರ್.	1990	ಪೂರ್ವಾಪರ ಅಕ್ಷರ ಪ್ರಕಾಶನ ಹೆಗ್ಗೋಡು(ಸಾಗರ) ಕರ್ನಾಟಕ – 577 417
2. ಅರವಿಂದ ಮಾಲಗತ್ತಿ (ಸಂ)	1991	ನಾಲ್ಕು ದಲಿತೀಯ ಕಾದಂಬರಿಗಳು (ಲೇಖನಗಳ ಸಂಕಲನ) ಕನ್ನಡ ಸಂಘ, ಕ್ರೈಸ್ತ ಕಾಲೇಜ ಬೆಂಗಳೂರು.
3. ಕಲಬುರ್ಗಿ, ಎಂ.ಎಂ.	1992	ಕನ್ನಡ ಸಂಶೋಧನಾಶಾಸ್ತ್ರ ಸೌಜನ್ಯ ಪ್ರಕಾಶನ ಧಾರವಾಡ.
4. ಕುಲ್ಲಿ, ಜೆ.ಎಸ್.	1971	ವರ್ಣನಾತ್ಮಕ ಭಾಷಾವಿಜ್ಞಾನ ಕ್ವಾಲಿಟಿ ಪ್ರೆಸ್, ಧಾರವಾಡ.
5. ಕುಶಾಲಪ್ಪಗೌಡ	1986	ಕನ್ನಡ ಭಾಷೆ ಮತ್ತು ವ್ಯಾಕರಣಗಳು ಒಂದು ಅಧ್ಯಯನ. ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾ ನಿಲಯ, ಮೈಸೂರು.
6. ಕೆಂಪೇಗೌಡ.ಕೆ.	1987	ಭಾಷೆ ಮತ್ತು ಭಾಷಾವಿಜ್ಞಾನ, ಭಾರತೀ ಪ್ರಕಾಶನ, ಸರಸ್ವತಿಪುರಂ, ಮೈಸೂರು – 9.
7. ಕೆಂಪೇಗೌಡ. ಕೆ.	1993	ಸಾಮಾನ್ಯ ಭಾಷಾವಿಜ್ಞಾನ, ಭಾರತೀ ಪ್ರಕಾಶನ ಮೈಸೂರು –9.

8. ಕೆಂಪೇಗೌಡ. ಕೆ.	1994	ಕನ್ನಡ ಭಾಷಾ ಚರಿತ್ರೆ, ಭಾರತೀ ಪ್ರಕಾಶನ, ಮೈಸೂರು -9.
9. ಕೋದಂಡರಾಮ. ಎನ್.ಕೆ.	1996	ಕನ್ನಡ ಕಥಾ ಸಾಹಿತ್ಯದಲ್ಲಿ ಸಾಂಸ್ಕೃತಿಕ ಸಂಘರ್ಷ, ಗಾಯತ್ರಿ ಸ್ಮಾರಕ ಗ್ರಂಥಮಾಲೆ, ಮೈಸೂರು.
10. ಗಣಪತಿ	1983	" ಕನ್ನಡ ವ್ಯಾಕರಣ " ಆರ್.ಎಂ. ಪ್ರಕಾಶನ, ಜಯನಗರ ಮೈಸೂರು.
11. ಚಿದಾನಂದಮೂರ್ತಿ. ಎಂ.	1984	" ಸಂಶೋಧನೆ " ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು-18
12. ಜವರಯ್ಯ.ಮ.ನ.	1994	" ಪರಂಪರೆ ಮತ್ತು ದಲಿತ ಬಂಡಾಯ ಸಾಹಿತ್ಯ" ಸಿದ್ಧಾರ್ಥ ಗ್ರಂಥಮಾಲೆ ಮೈಸೂರು -23.
13. ಜವರೇಗೌಡ.ದೇ.	1978	" ಗದ್ಯಶೈಲಿ " ಡಿ.ವಿ.ಕೆ. ಮೂರ್ತಿ, ಕೃಷ್ಣಮೂರ್ತಿಪುರಂ, ಮೈಸೂರು-4.
14. ದೇವನೂರು ಮಹಾದೇವ	1990	ಕುಸುಮಬಾಲೆ ಸಂಗಾತಿ ಪ್ರಕಾಶನ ಬೆಂಗಳೂರು.
14. ದೇವನೂರು ಮಹಾದೇವ	1995	ದ್ಯಾವನೂರು ಮತ್ತು ಒಡಲಾಳ ನವ್ಯಾಲೆ ಪ್ರಕಾಶನ ಮೈಸೂರು-23.
16. ಧಾರವಾಡಕರ.ರಾ.ಯ.	1974	'ಕನ್ನಡಭಾಷಾಶಾಸ್ತ್ರ' ಗೀತಾ ಬುಕ್ ಹೌಸ್ ಮೈಸೂರು.

17.	ನರಸಿಂಹಾಚಾರ್.ಡಿ. ಎಲ್.(ಸಂ)	1989	ಶಬ್ದಮಣಿದರ್ಪಣಂ ಡಿ.ವಿ.ಕೆ.ಮೂರ್ತಿ, ಕೃಷ್ಣಮೂರ್ತಿಪುರಂ ಮೈಸೂರು – 4.
18.	ನಾಗರಾಜಯ್ಯ ಹಂ.ಪ.(ಸಂ)	1983	ಚಾಮರಸ ವಿಚಾರ ಸಂಕಿರಣ ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು – 19.
19.	ನಾಯಕ.ಜಿ.ಎಚ್.	1980	ಅನಿವಾರ್ಯ ಅಕ್ಷರ ಪ್ರಕಾಶನ, ಸಾಗರ ಕರ್ನಾಟಕ – 577 401
20.	ನಾರಾಯಣ.ಕೆ.ವಿ ಕಾಳೇಗೌಡ ನಾಗವಾರ (ಸಂಪಾದಕರು)	1986	ವಿಚಾರ ಸಾಹಿತ್ಯ –2 ಪ್ರಸಾರಾಂಗ, ಬೆಂಗಳೂರು.ವಿ.ವಿ. ಬೆಂಗಳೂರು.
21.	ನಿಸಾರ್ ಅಹಮದ್.ಕೆ.ಎಸ್. (ಸಂ)	1986	ದಶವಾರ್ಷಿಕ ವಿಮರ್ಶೆಗಳು 1974–83 ಕರ್ನಾಟಕ ಸಾಹಿತ್ಯ ಅಕಾಡೆಮಿ ಬೆಂಗಳೂರು.
22.	ಪ್ರಧಾನ ಗುರುದತ್ತ (ಸಂ)	1987	ಶ್ರೀಮುಖ 734 ಇ ಅಂಡ್ ಎಫ್ ಬ್ಲಾಕ್ ಮೈಸೂರು–23
23.	ಬಿಳಿಗಿರಿ. ಎಚ್.ಎಸ್.	1970	ವರ್ಣನಾತ್ಮಕ ವ್ಯಾಕರಣದ ಮೂಲ ತತ್ವಗಳು. ಬೆಂಗಳೂರು ವಿಶ್ವವಿದ್ಯಾನಿಲಯ, ಬೆಂಗಳೂರು.
24.	ಮಾಸ್ತಿ ವೆಂಕಟೇಶ ಅಯ್ಯಂಗಾರ್	1960	'ನಮ್ಮ ನುಡಿ' ಜೀವನ ಕಾರ್ಯಾಲಯ ಬೆಂಗಳೂರು.
25.	ರಂಗಣ್ಣ. ಎಸ್.ವಿ.	1971	ಶೈಲಿ (ಭಾಗ 1–2–3) ಮೈಸೂರು ಕಾವ್ಯಾಲಯ ಮೈಸೂರು.

26. ರಾಜಪ್ಪ ದಳವಾಯಿ (ಸಂ)	1996	'ಕನ್ನಡ ಸಾಹಿತ್ಯ ಕೋಶ' ದಳವಾಯಿ ಎಜುಕೇಶನಲ ಟ್ರಸ್ಟ್ ಸೋಶಿಯೋ ಕಲ್ಚರ (ರಿ) ಮೈಸೂರು -23.
27. ರಾವ ಬಹದ್ದೂರ	1981	'ಗ್ರಾಮಾಯಣ" ಉಷಾ ಸಾಹಿತ್ಯ ಮಾಲೆ ಮೈಸೂರು.
28. ಲಂಕೇಶ್.ಪಿ. (ಸಂ)	1992	"ದೇವನೂರ ಮಹಾದೇವ ಅವರ" ಕೃತಿಗಳು ಪತ್ರಿಕೆ ಪ್ರಕಾಶನ ಬೆಂಗಳೂರು – 4.
29. ವಿಲ್ಯಂ ಮಾಡ್ತ	1975	"ಕನ್ನಡ ಭಾಷೆಯ ರೂಪರೇಷೆಗಳು" ಕರ್ನಾಟಕ ವಿಶ್ವವಿದ್ಯಾನಿಲಯ ಧಾರವಾಡ.
30. ವಿಲ್ಯಂ ಮಾಡ್ತ	1977	"ಕನ್ನಡ ಭಾಷೆ" ಕನ್ನಡ ಅಧ್ಯಯನ ಪೀಠ ಕರ್ನಾಟಕ ವಿಶ್ವವಿದ್ಯಾನಿಲಯ ಧಾರವಾಡ.
31. ಶ್ರೀಕಂಠಯ್ಯ. ತೀ.ನಂ.	1973	ಭಾರತೀಯ ಕಾವ್ಯಮೀಮಾಂಸೆ ಪ್ರಸಾರಾಂಗ, ಮೈಸೂರು ವಿ.ವಿ. ಮೈಸೂರು.
32. ಶ್ರೀಕಂಠಯ್ಯ.ತೀ.ನಂ.	1992	ಕನ್ನಡ ಮಾಧ್ಯಮ ವ್ಯಾಕರಣ ಗೀತಾ ಬುಕ್ ಹೌಸ ಮೈಸೂರು.
33. Hockett .C.F.	1959	' A course in Modern Linguistics' The Macmillan company Newyork
34. Kittel.F.	1903	A Grammar of the Kannada in English (Ancient Medievel and Modern) Mangalore Basal Mission Book and Tract Depository

35. Leonard Bloomfield 1963 'Language '
Motilal Banarsidass
Delhi-6 .

36. Tirumala.M.S . 1979 Language and science
Geetha Book House
Mysore-1.

37. Upadhyaya . U.P. 1976 Comparative Study of
Kannada Dialects
University of Mysore ,
Mysore .

II . ನಿಯತ ಕಾಲಿಕೆಗಳು.

1. ಅನಂತಮೂರ್ತಿ.ಯು.ಆರ್. (ಸಂ) 1987 ರುಜುವಾತು
ಸಂಚಿಕೆ – 26.

2. ಚಂದ್ರಕಾ.ಪಿ. (ಸಂ) 1999 –2000 ಉತ್ತರ ಚಿಪ್ಪಿಗೂ ಸಿಗದ
ನವಿಲುಗಳು.
(ಸಂ.17. 18. 19)

3. ಚಂದ್ರಶೇಖರ ಪಾಟೀಲ (ಸಂ) 1980 ಸಂಕ್ರಮಣ /103–104
ಸಂ – 16, ಸಂಚಿಕೆ –3.4.

4. ಚಂದ್ರಶೇಖರ ಪಾಟೀಲ 1980 ಸಂಕ್ರಮಣ /106 – 107
ಸಂ –16, ಸಂಚಿಕೆ –6 –7.

5. ಚಂದ್ರಶೇಖರ ಪಾಟೀಲ 1988 ಸಂಕ್ರಮಣ /186
ಸಂ –23, ಸಂಚಿಕೆ – 2.

III. ಲೇಖನ.

1. ಮಂಜುಳಾ. ಹೆಚ್.ಪಿ. 1997 ಕನ್ನಡ ಸಾಹಿತ್ಯಕ್ಕೆ ದೇವನೂರ ಮಹಾದೇವ ಅವರ ಕೊಡುಗೆ, ಪ್ರಸಾರ ಆಕಾಶವಾಣಿ ಮೈಸೂರು.

IV. ಪಿ.ಎಚ್.ಡಿ. ಪ್ರಬಂಧಗಳು.

1. KaleGowda 1993 Dharmamritam: A Linguistic study (unpublished) University of Mysore Mysore-6 .

2 . Mallikarjunaswamy 1990 "Descriptive study of Adikarnataka dialect of Kannada "- spoken in Mandya District . (Unpublished) Mysore University Mysore .

3 . Ramakrishna.R. 1986 'Srị Ramayana Darsanam: A Linguistic study (Unpublished) Mysore University Mysore .

4 . Ramachandra.C.S. 1984 "Linguistic analysis of the kirtanas of Haridasas in Kannada" (Unpublished) University of Mysore Mysore.

5. RamachandraRao. B . 1972 " A Descriptive Grammer of Pampa, Bharatha" (Unpublished) Prasaranga - University of Mysore , Mysore.

6 . Suvarnadevi 1999 " Gramayana - A Linguistic study" (Unpublished) University of Mysore , Mysore.

V . <u>ನಿಘಂಟುಗಳು</u>

1· ಕವಲಿ· ಜಿ·ಎ· 1957 " ಕಸ್ತೂರಿ ಕೋಶ " ರಾಮಾಶ್ರಯ ಬುಕ್ ಡಿಪೋ ಧಾರವಾಡ

2· ಕ್ಯಾತನಹಳ್ಳಿ ರಾಮಣ್ಣ 1987 " ಜನಪದ ನಿಘಂಟು " ಅಬ್ಬಗೂಸ್ತ್ರಗೆ, ಕ್ಯಾತನಹಳ್ಳಿ ಪಾಂಡವಪುರ ತಾಲ್ಲೂಕು ಮಂಡ್ಯಜಿಲ್ಲೆ·

3· ನಾಯಕ· ಹಾ· ಮಾ· (ಸಂ) 1979 ' ಕನ್ನಡ ವಿಷಯ ವಿಶ್ವಕೋಶ ' ಕನ್ನಡ ಅಧ್ಯಯನ ಸಂಸ್ಥೆ ಮೈಸೂರು ವಿಶ್ವವಿದ್ಯಾನಿಲಯ ಮೈಸೂರು·

4· ನಾಯಕ·ಹಾ·ಮಾ·(ಪ್ರ·ಸಂ) 1994 ' ಕನ್ನಡ ರತ್ನಕೋಶ ' ಕನ್ನಡ ಅಭಿವೃದ್ಧಿ ಪ್ರಾಧಿಕಾರ ಬೆಂಗಳೂರು·

5· ಶಿವರಾಮ ಕಾರಂತ 1990 ' ಸಿರಿಗನ್ನಡ ಅರ್ಥಕೋಶ ' ಎಸ್·ಬಿ·ಎಸ್· ಪ್ರಕಾಶನ, ಬೆಂಗಳೂರು·